

# ಭಾಷಣ ಬದುಕು

ಡಾ. ಎಮ್ಮೆಸ್ಸೆಂ. ಅಬ್ದುಲ್ ರಶೀದ್ ಸಖಾಫಿ ಝೈನಿ ಕಾಮಿಲ್

ಪ್ರಸಿದ್ಧ ವಾಗ್ಮಿ ಅಬ್ದುಲ್ ರಶೀದ್ ಝೈನಿ ಅವರು ತಮ್ಮ ಜೀವನದ ಅನುಭವಗಳನ್ನು ಪೋಣಿಸಿ ಬರೆದ ಲೇಖನಗಳ ಸಮಾಹಾರವಿದು. ಕನ್ನಡ ಭಾಷಣ ಕ್ಷೇತ್ರಕ್ಕೆ ವಿಶಿಷ್ಟ ಶೈಲಿ ಹಾಗೂ ವಿಭಿನ್ನ ಆಯಾಮ ನೀಡಿದ ಇವರು ತಮ್ಮ ಭಾಷಣವನ್ನೇ ಮುಖ್ಯ ವಸ್ತುವಾಗಿಟ್ಟು ಇಲ್ಲಿ ಬರೆದಿದ್ದಾರೆ

PUBLISHED BY:
MASNAWI GLOBAL ACADEMY (R) MANGALORE




**ಎಮ್ಮೆಸ್ಸೆಂ ಝೈನಿ ಕಾಮಿಲ್**

---

ಭಾಷಣಗಾರನಾಗಬೇಕೆಂಬ ಹಂಬಲ ಬಹಳ ಸಣ್ಣ ಪ್ರಾಯದಲ್ಲೇ ನನ್ನಲ್ಲಿ ಸುಪ್ತ ವಾಗಿತ್ತು. ಅದನ್ನು ಪ್ರಚೋದಿಸಿ ಹೊರ ತರಲು ನನ್ನ ತಂದೆಯೇ ಪರೋಕ್ಷ ಕಾರಣ ವೆನ್ನಬಹುದು. ಓರ್ವ ಭಾಷಣಗಾರನಿಗೆ ಸಿಗುವ ಆದರಾಥಿತ್ಯಗಳು, ಸ್ನೇಹಾಭಿಮಾನ ಗಳು, ಚಿಕ್ಕಂದಿನಲ್ಲೇ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದ್ದವು. ಆ ಕಾಲದಲ್ಲಿ ಹೆಸರಾಂತ ವಾಗ್ಮಿಯಾಗಿದ್ದ ತಂದೆಯ ಜತೆಗೆ ಕೆಲವು ವಅಳ್ ಸಮಾರಂಭಗಳಿಗೆ ಚಿಕ್ಕ ಪ್ರಾಯದಲ್ಲೇ ನಾನು ಹೋಗುತ್ತಿದ್ದೆ. ಅಂದಿನ ಉರೂಸ್ ಕಾರ್ಯಕ್ರಮ, ಮತ ಪ್ರವಚನ ಸಮಾ ರಂಭಗಳಲ್ಲಿ ಅವರ ಹೆಸರು ಮುದ್ರಿತವಾಗಿ ರದ ನೋಟೀಸ್‌ಗಳು ಬಹಳ ವಿರಳವಾಗಿ ದ್ದವು. ಅಲ್ಲದೆ ಅವರ ಹೆಸರಿನಲ್ಲಿ ನನಗೂ ಒಂದು ಪಾಲಿತ್ತು. ಮೊದಲ ಗಂಡು ಮಗು ವಾಗಿದ್ದರಿಂದ ತಂದೆ ನನ್ನ ಹೆಸರನ್ನು ಜತೆಗೆ ಸೇರಿಸಿ ಅಬೂರಶೀದ್ ಎಂ.ಎಸ್. ಮೂಸ ಮುಸ್ಲಿಯಾರ್ ಎಂದೇ ಖ್ಯಾತರಾಗಿದ್ದರು. ಹೀಗೆ ತಂದೆಯ ಜತೆ ಹೋದಾಗ ಅಲ್ಲಿ ಸಿಗುತ್ತಿದ್ದ ಗಂಭೀರ ಔತಣ, ವಅಳಿನ ಉಸ್ತಾ ದರ ಮಗ ಎಂಬ ಗೌರವ, ಕಾರು ಯಾತ್ರೆಯ ಆನಂದ, ಕೆಲವೊಮ್ಮೆ ವೇದಿಕೆಯ ಮೇಲೇರಿ ಮೂಲೆಯಲ್ಲಿ ಕುಳಿತು ಕೊಂಡಾಗಿನ ರೋಮಾಂ ಚನ ಇವೆಲ್ಲವೂ ಹತ್ತು ವಯಸ್ಸಿನ ಆಸುಪಾಸಿ ನಲ್ಲಿದ್ದ ನನ್ನ ಮನಸ್ಸಿನ ಮೇಲೆ ಭಾಷಣ ಬದುಕಿನ ಆಕರ್ಷಣೆಯನ್ನು ಕೆತ್ತಿ ಬಿಟ್ಟಿದ್ದವು.

ತಂದೆಯ ಜತೆ ವಅಳಿಗೆ ಹೋಗಿ ಬಂದ ಮರುದಿನ ಮನೆಯಲ್ಲಿ ಪುಟ್ಟ ಮಕ್ಕಳನ್ನು ಸೇರಿಸಿ, ಅವರು ತಪ್ಪಿಸಿಕೊಂಡಾಗ ಮನೆಯ ಸಮೀಪದ ಪುಟ್ಟ ಪೊದೆಗಳ ಮುಂದೆ ಧುಮ್ಮಿಕ್ಕುವ ತೊರೆಯ ಮುಂದೆ ಕಮ್ಯೂ್ಯ ನಿಸ್ಟ್ ಬಲ್ಲೆಗಳ ಮುಂದೆ ನನ್ನ ಗಂಭೀರ ಭಾಷಣ ನಡೆಯುತ್ತಿದ್ದವು. ಭಾಷಣ ಕ್ಷೇತ್ರಕ್ಕೆ ನನ್ನ ಮೊದಲ ಅನೌಪಚಾರಿಕ ಎಂಟ್ರಿ ನಡೆದದ್ದು ಹಾಗೆ.

ಅನಂತರ ಕಕ್ಕಿಂಜೆ ಮಸೀದಿಗೆ ಖತೀಬ್ ಹಾಗೂ ಸದರ್ ಆಗಿ ಬಂದ ಕೊಡಗಿನ ಅಬ್ದುಲ್ಲಾ ಮುಸ್ಲಿಯಾರ್ ವಿದ್ಯಾರ್ಥಿಗಳ ಪ್ರತಿಭಾ ಪೋಷಣೆಗೆ ವಿಶೇಷ ಮುತುವರ್ಜಿ ವಹಿಸಿದರು. ಭಾಷಣ ತರಬೇತಿಗಾಗಿ 'ಸಾಹಿತ್ಯ ಸಮಾಜ'ವೆಂಬ ವೇದಿಕೆಯನ್ನು ಸೃಷ್ಟಿಮಾಡಿ ಕೊಟ್ಟರು. ವಾರಕೊಮ್ಮೆ ಮದ್ರಸದ ಮಕ್ಕಳ ಮುಂದೆ ಭಾಷಣ ಬಿಗಿದು ಬೀಗಲು ಇದರಿಂದ ಅವಕಾಶ ಒದಗಿಬಂತು. ಅದೇ ವರ್ಷ ರಬೀ ಉಲ್ ಅವ್ವಲ್‌ನ ಮೀಲಾದ್ ಕಾರ್ಯಕ್ರಮ ದಲ್ಲಿ ಭಾಷಣ ಮತ್ತು ಕಥಾ ಪ್ರಸಂಗದಲ್ಲಿ ನನಗೆ ಪ್ರಥಮ ಸ್ಥಾನ ಬಂದಾಗ ಭರವಸೆ ಇಮ್ಮಡಿಯಾಯಿತು. ಆದರೆ ಅವಕಾಶಕ್ಕಾಗಿ ಮುಂದಿನ ರಬೀಉಲ್ ಅವ್ವಲ್‌ವರೆಗೆ ಕಾಯದೆ ವಿಧಿಯಿರಲಿಲ್ಲ. ಅಬ್ದುಲ್ಲಾ ಉಸ್ತಾ ದರ ನಿರ್ಗಮನದೊಂದಿಗೆ ಸಾಹಿತ್ಯ ಸಮಾಜ ವೂ ಮೊಟಕು ಗೊಂಡಿತು. ಆಗ ಹೊಳೆದದ್ದು ನೆರೆ ಹೊರೆಯ ಪುಟಾಣಿ ಮಕ್ಕಳನ್ನು ಸೇರಿಸಿ ಒಂದು ಮಕ್ಕಳ ಸಂಘ ಕಟ್ಟುವ ಯೋಚನೆ. ಪರಿಣಾಮವಾಗಿ'ಮುಸ್ಲಿಂ ಚಿಲ್ಡ್ರನ್ಸ್ ಫೆಡರೇಶನ್' (ಎಂ.ಸಿ.ಎಫ್) ಅಸ್ತಿತ್ವಕ್ಕೆ ತರಲಾಯಿತು. ಶಾಲೆಯ ರಜಾದಿನಗಳಲ್ಲಿ ಗಂಭೀರ ಭಾಷಣ, ವಾರಕ್ಕೊಮ್ಮೆ 'ಸತ್ಯವಾಣಿ' ಹೆಸರಿನ ಕೈಬರಹ ಪತ್ರಿಕೆ ಎಂ.ಸಿ.ಎಫ್ ನ ವತಿಯಿಂದ ಏರ್ಪಾಡು ಮಾಡಲಾಯಿತು. ಈಗ ಕುಂಬ್ರ ಮರ್ಕಝ್‌ನಲ್ಲಿ ಮ್ಯಾನೇಜರ್ ಆಗಿರುವ ಅಶ್‌ರಫ್ ಸಖಾಫಿ ಎಂ. ಸಿ. ಎಫ್.ನ ಕಾರ್ಯದರ್ಶಿ. ರಮಳಾನಿನ ಹಗಲು ರಾತ್ರಿಗಳಲ್ಲಿ ನಮ್ಮ ಮಸೀದಿಯಲ್ಲಿ ಉರ್ದಿ ಹೇಳುತ್ತಿದ್ದ ಮುತಅಲ್ಲಿಮರಲ್ಲಿ ನನಗಿಂತ ಕಡಿಮೆ ಪ್ರಾಯದ ಮಕ್ಕಳೂ ಇದ್ದರು. ಇದನ್ನು ಕಂಡಾಗ ಮುಂದಿನ ರಮಳಾನ್‌ನಲ್ಲಿ ನಾನೂ ಯಾಕೆ ಉರ್ದಿಗೆ ಹೋಗಬಾರದು ಎಂದು ಯೋಚಿಸಿದೆ. ಆದರೆ, ಉಜಿರೆ ಹೈಸ್ಕೂಲ್‌ನಲ್ಲಿ 9ನೇ ತರಗತಿಯಲ್ಲಿ ಓದುತ್ತಿದ್ದ ನನ್ನಲ್ಲಿ ಭಾಷಣದ ಸಿದ್ಧತೆಯಾಗಲೀ ಮುತಅಲ್ಲಿಂ ಎಂದು ತೋರಿಸಿ ಕೊಳ್ಳಲು ಯೋಗ್ಯವಾದ ವಸ್ತ್ರವಾಗಲೀ ಇರಲಿಲ್ಲ.

ಆಗ ನನ್ನ ತಂದೆ ಮೂಡಿಗೆರೆಯಲ್ಲಿ ಮುದರ್ರಿಸ್ ಆಗಿದ್ದರು. 'ಖಬ್‌ರ್' ಬಗ್ಗೆ ಯಾರೋ ಬರೆದು ಕೊಟ್ಟ ಭಾಷಣವನ್ನು ಬಾಯಿಪಾಠ ಮಾಡಿ ತಕ್ಕಮಟ್ಟಿಗೆ ಮುತಅಲ್ಲಿಂ ದಿರಿಸುಗಳನ್ನು ಏರ್ಪಾಟು ಮಾಡಿ ಮೂಡಿಗೆರೆ ಸಮೀಪದ ಮಸೀದಿಗಳಲ್ಲಿ ತರಾವೀಹ್ ನಂತರ 'ಉರ್ದಿ' ಪ್ರಾರಂಭಿಸಲು ನಿರ್ಧರಿಸ ಲಾಯಿತು. ಆದರೆ ಮಸೀದಿಗಳಿಗೆ ತೆರಳಿ ಉಸ್ತಾದ್‌ಗಳನ್ನು ಕಂಡು ಬಿಡುವು ನೋಡಿ ಬುಕ್ ಮಾಡಲು ಇನ್ನಿಲ್ಲದ ಹಿಂಜರಿಕೆ. ಆಗ ನೆರವಿಗೆ ಬಂದವರು ಮೂಡಿಗೆರೆಯಲ್ಲಿ ಮರದ ಕೆಲಸ ಮಾಡುತ್ತಿದ್ದ ಬಂಟ್ವಾಳ, ಮೂಲರಪಟ್ಟಣದ ಹಸನ್ ಎಂಬವರು. ತನ್ನ ನಿತ್ಯದ ದುಡಿಮೆ ಮುಗಿಸಿ ಅವರು ಸಂಜೆ ಹೊತ್ತಿಗೆ ನನ್ನನ್ನು ಬೇರೆ ಬೇರೆ ಮಸೀದಿಗೆ ಕರೆದೊಯ್ಯುತ್ತಿದ್ದರು. ಅಂತೂ ಉಸ್ತಾದ್ ಗಳನ್ನು ಮೊದಲೇ ಸಂಪರ್ಕಿಸಿ ಬುಕ್ ಮಾಡಿಸಿ ಇಡುತ್ತಿದ್ದರು. ಉರ್ದಿ ಮುಗಿದು ಪ್ರತಿಫಲ ಎಣಿಸಿಕೊಟ್ಟು ರಾತ್ರಿಯೇ ಸುರಕ್ಷಿತವಾಗಿ ಮೂಡಿಗೆರೆ ಮಸೀದಿಗೆ ತಲುಪಿಸುತ್ತಿದ್ದರು. ಹಾಗೆ ಅಸಲಿಗೆ ಮುತಅಲ್ಲಿಂ ಅಲ್ಲದಿದ್ದ, ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದ ನನಗೆ ಆ ರಮಳಾನ್‌ನಲ್ಲಿ ಹಸನಾಕ, ಸಂಪೂರ್ಣ ಸಾಥ್ ನೀಡಿದರು. ಮದ್ರಸದ ಸಾಹಿತ್ಯ ಸಮಾಜ, ಮೀಲಾದುನ್ನಬಿ ವೇದಿಕೆಗಳು ಮತ್ತು ಕಕ್ಕಿಂಜೆ ಯ ಎಂ.ಸಿ.ಎಫ್‌ನ ಹೊರತು ಬಹುಜನರ ಮುಂದೆ ನಿಂತು ಮೊದಲ ಬಾರಿ ಭಾಷಣ ಮಾಡಿದ್ದು ಮೂಡಿಗೆರೆ ಸಮೀಪದ ಬಿಳಗುಳ ಮಸೀದಿಯಲ್ಲಿ. ಅದು 1987ರ ಒಂದು ರಮ ಳಾನ್ ರಾತ್ರಿ. ಕೈ ಕಾಲು ನಡುಗುತ್ತಿದ್ದವು, ಕೈಕಟ್ಟಿ ಗೋಡೆಗೆ ಗಟ್ಟಿಯಾಗಿ ಒರಗಿ ನಿಂತು. ಜನರ

ಮುಖ ನೋಡದೆ ನಡೆಸುತ್ತಿದ್ದ ಅಂದಿನ ಭಾಷಣಗಳು ಹತ್ತು ನಿಮಿಷ ದಾಟುತ್ತಿರಲಿಲ್ಲ.

ಮುಂದಿನ ಶವ್ವಾಲ್‌ನಲ್ಲಿ ಅಧಿಕೃತ ಮುತಅಲ್ಲಿಮಾಗಿ ಹೊರ ಊರಿನ ದರ್ಸ್‌ಗೆ ಸೇರಲು ನಿರ್ಧರಿಸಲಾಯಿತು. ಅಂದು ನನ್ನ ಬಾವ ಸಯ್ಯಿದ್ ಇಬ್‌ರಾಹೀಂ ಪೂಕುಂಞಿ ತಂಙಳ್ (ಕಲ್ಲಕಟ್ಟೆ) ಬೆಳ್ತಂಗಡಿ ಸಮೀಪದ ಪ್ರಸಿದ್ಧ ಗುರುವಾಯನಕೆರೆ ಮಸೀದಿಯಲ್ಲಿ ಮುದರ್ರಿಸ್ ಆಗಿದ್ದರು. ನನ್ನ ಪ್ರಥಮ ದರ್ಸ್ ಅಲ್ಲೇ ಆಗಲೆಂದು ನಿರ್ಧರಿಸಿ ತಂದೆ ಅಲ್ಲಿಗೆ ಸೇರ್ಪಡೆಗೊಳಿಸಿದರು. ಅಂದು 1987 ಜೂನ್ 15 ಸೋಮವಾರ.

ಮದ್ರಸದಲ್ಲಿ ಮೊಟಕಾಗಿದ್ದ ಸಾಹಿತ್ಯ ಸಮಾಜ ಮತ್ತೆ ಅಲ್ಲಿ ನೆರವಿಗೆ ಬಂತು. ಮಲಯಾಳಂ ಪುಸ್ತಕಗಳಿಂದ ಚರಿತ್ರೆಗಳನ್ನು ಬಾಯಿಪಾಠ ಮಾಡಿ ಪ್ರತಿವಾರ ಸಮಾಜ ದಲ್ಲಿ ನನ್ನ ಭಾಷಣವೋ ಭಾಷಣ.

ಭಾಷಣದ ಪ್ರಮುಖ ಅಂಗ ದೇಹ ಚಲನೆ ಮತ್ತು ಅಂಗ್ಯಭಾಷೆ. ನಿಶ್ಚಲವಾಗಿ ನಿಂತು ನಡೆಸುವ ಭಾಷಣಗಳು ಎಷ್ಟೇ ಪ್ರೌಢವಾ ಗಿದ್ದರೂ ನಿಸ್ತೇಜ. ಆದರೆ ಭಾಷಣದ ಮಧ್ಯೆ ಕೈಯೆತ್ತಲೂ ನನ್ನಿಂದ ಆಗುತ್ತಿರಲಿಲ್ಲ. ನಾಲಗೆ ಮತ್ತು ಕಂಠ ಜೋರಾಗಿದ್ದರೂ, ದೇಹ ನಿಶ್ಚಲ. ಗೋಡೆ ಅಥವಾ ಭಾಷಣ ಪೀಠದ ಅವಲಂಬ ಕಡ್ಡಾಯ.

ಮುಂದಿನ ರಮಳಾನ್ ಉರ್ದಿಗೆ ತೆರಳು ವಾಗ ಇದು ನನ್ನ ಪ್ರಧಾನ ಅಜೆಂಡವಾಗಿತ್ತು. ಒಂದು ತರಾವೀಹ್‌ನ ಬಳಿಕ ಧೈರ್ಯತಂದು ಕೊಂಡು ಕೈ ತಲೆಗಳನ್ನು ಅಲ್ಲಾಡಿಸಿ ನಾಲಗೆಯೊಂದಿಗೆ ದೇಹ ಚಲನೆಯನ್ನು ಸರಿದೂಗಿಸಿ ಕೊಂಡು 'ಪೂರ್ಣ ಪ್ರಮಾಣದ' ಭಾಷಣ ಮಾಡಿದಾಗ ಅರ್ಧ ಪ್ರಪಂಚವನ್ನೇ ಜಯಿಸಿದ ಅನುಭವ. ಇದಕ್ಕೆ ವೇದಿಕೆಯಾದ ಚಿಕ್ಕಮಗಳೂರು ನಗರ ವ್ಯಾಪ್ತಿಯ ವಿಜಯ ಪುರ (ತೊಂಡೇರಿ) ನನ್ನ ಪಾಲಿಗೂ ವಿಜಯ ಪುರವಾಯಿತು.

ಆ ವರ್ಷ ವೇದಿಕೆಗಳನ್ನು ಅಂಜಿಕೆಯಿ ಲ್ಲದೆ ಸಂಭಾಳಿಸಬಹುದು ಎಂಬ ಆತ್ಮ ವಿಶ್ವಾಸದೊಂದಿಗೆ ಮರಳಿದ ನನಗೆ ರಮಳಾನ್ ಉರ್ದಿಯ ಮೇಲೆ ಆಸಕ್ತಿ ಕಡಿಮೆ ಯಾಗಿ ವೇದಿಕೆಗಳ ಹಂಬಲ ಅಂಕುರಿಸಿತು. ಮೈಕಿನ ಮುಂದೆ ನಿಂತು ಗಂಭೀರ ಭಾಷಣ ಮಾಡಲು ಮನಸ್ಸು ಹಪಹಪಿಸಿತು. ಆದರೆ ಖತರುನ್ನದಾ ಓದಿ ಮುಗಿಸಿರದ ಈ ಬಡ ಪಾಯಿ ಮುತಅಲ್ಲಿಮನ ಭಾಷಣ ಯಾರಿಗೆ ಬೇಕು? ಅದು ತಿರುಕನ ಕನಸಿನ ಹಾಗೆ ಗಿರಕಿ ಹೊಡೆದದ್ದು ಮಾತ್ರ ಬಾಕಿ...

# 2

## ವಿಷಯ ಸಂಗ್ರಹದ ತಂತ್ರಗಾರಿಕೆ

ಭಾಷಣವೆಂದರೆ ನಿಗದಿತ ವಿಷಯವನ್ನು ಚಂದವಾಗಿ ಶ್ರೋತೃಗಳಿಗೆ ಮನವರಿಕೆ ಮಾಡಿ ಸುವುದಾಗಿದೆ. ಜನರ ಮಧ್ಯೆ ಕೂತು ಅಬ್ಬರದ ಮಾತುಗಳನ್ನಾಡುವ, ಮುಖಾಮುಖಿಗಳಲ್ಲಿ ಎದುರಿಗೆ ಕುಳಿತವನ ಮೇಲೆ ಅಗಾಧ ಪ್ರಭಾವ ಬೀರಬಲ್ಲ ವ್ಯಕ್ತಿಗೆ ಅದೇ ಶ್ರೋತೃಗಳನ್ನು ದ್ದೇಶಿಸಿ 'ಭಾಷಣ' ಮಾಡಿ ಅಂದರೆ ಅಸಾಧ್ಯ ವಾದೀತು. ಮಾತುಕತೆಗೂ ಭಾಷಣಕ್ಕೂ ಇರುವ ವ್ಯತ್ಯಾಸ ಅದುವೇ. "ಖಂಡಿತಾ ಪ್ರಭಾಷಣಗಳಲ್ಲಿ ಸಮ್ಮೋಹಕ ಶಕ್ತಿಯಿದೆ" ಎಂದು ಪ್ರವಾದಿ ಶ್ರೇಷ್ಠ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. ಮಾತು ಗಾರಿಕೆ ಮರುಳುಗಾರಿಕೆ ಆಗಬೇಕಾದರೆ ಅದಕ್ಕೆ ಅನೇಕ ಒಗ್ಗರಣೆಗಳ ಅಗತ್ಯವಿದೆ. ವಸ್ತು (Matter), ಭಾಷೆ, ಶೈಲಿ, ಕಲಾತ್ಮಕತೆ, ಶಬ್ದ, ಧೈರ್ಯ, ಆಂಗಿಕ ವಿನ್ಯಾಸ ಮುಂತಾದವು ಮಾತಿಗೆ ರುಚಿ ಸೇರಿಸುವ ಪ್ರಮುಖ ಅಂಶಗಳು.

ಸಂವಹನದಲ್ಲಿ (Communication) ನಮ್ಮ ಭಾಷೆಗೆ 7 ಮತ್ತು ಕಂಠ ಸ್ವರಕ್ಕೆ 33 ಅಂಕ ಗಳನ್ನು ನೀಡಿ ರುವ ತಜ್ಞರು, ಆಂಗಿಕ ವಿನ್ಯಾಸ (Body Language)ಕ್ಕೆ 60ಅಂಕ ನೀಡಿದ್ದಾರೆ. ಭಾಷಣಗಾರನ ದೇಹದ ಗಾತ್ರ, ಮುಖ ಸೌಂದರ್ಯ, ಧರಿಸಿದ ದಿರಿಸು, ಒಪ್ಪ ಓರಣ, ಅಚ್ಚುಕಟ್ಟುತನ ಎಲ್ಲವೂ ಕೇಳುಗರ (Audiance) ಮೇಲೆ ದಟ್ಟ ಪರಿಣಾಮ ಬೀರುತ್ತದೆ.

ಆಂಗಿಕ ವಿನ್ಯಾಸ ಪರೀಕ್ಷೆಯಲ್ಲಿ 'ವಿಜಯ' ಗಳಿಸಿದ ನನ್ನನ್ನು ಮತ್ತೆ ಕಾಡಿದ್ದು ವಿಷಯ ದಾರಿದ್ರ್ಯ. ಗೆಳೆಯರು ಬರೆದು ಕೊಟ್ಟ 'ಖಬ್‌ರ್' ಮತ್ತು 'ರಮಳಾನಿನ ಮಹತ್ವ' ಅದಾಗಲೇ ಮಹತ್ವ ಕಳೆದು ಕೊಂಡಿದ್ದು, ವಿಷಯ ಸಂಗ್ರಹದ ತಂತ್ರಗಾರಿಕೆ ತಿಳಿಯದೆ ಸುಸ್ತಾಗಿತ್ತು. ಆಗ ನೆರವಿಗೆ ಬಂದವನು ಇನ್ನೊಬ್ಬ ಹಸೈನಾರ್. ಆಗ ಗುರುವಾಯನಕೆರೆ ಯನ್ನು ಬಿಟ್ಟು ಉಸ್ತಾದ್ ಕಲ್ಲಕಟ್ಟೆ ತಂಙಳ್ ಕುಂದಾಪುರ ಕೋಡಿಯಲ್ಲಿ ದರ್ಸ್ ವಹಿಸಿ ಕೊಂಡಿದ್ದರು. 1988 ಜೂನ್ 5 ಭಾನುವಾರ (ಶವ್ವಾಲ್ 21) ರಾತ್ರಿ 7.35ಕ್ಕೆ ಅಲ್ಲಿ ನಮ್ಮ ದರ್ಸ್ ಶುಭಾರಂಭಗೊಂಡಿತ್ತು. ನನ್ನ ದರ್ಸ್ ಜೀವನದ ಎರಡನೆಯ ವರ್ಷ ವದು. ಆ ವರ್ಷ ಅಲ್ಲಿ ದರ್ಸ್‌ಗೆ ಸೇರಿದವರ ಪೈಕಿ ಹಸೈನಾರ್ ಒಬ್ಬನಾಗಿದ್ದ. ಮೂಲತಃ ಕೇರಳದ ತ್ರಿಶೂರ್ ಜಿಲ್ಲೆಯ ಕಾರಿಕುಳಂ ನಿವಾಸಿಯಾದ ಆತ ಸ್ವಲ್ಪ ಕಾಲದಿಂದ ನಮ್ಮೂರು ಕಕ್ಕಿಂಜೆಯಲ್ಲಿ ತಾಯಿ ಮತ್ತು ಓರ್ವ ಸಹೋದರಿಯೊಂದಿಗೆ ವಾಸವಾಗಿದ್ದ. ಮದ್ರಸದಲ್ಲಿ ಶುರುವಾದ ನಮ್ಮ ಗೆಳೆತನ ಆತನನ್ನು ಕೋಡಿ ದರ್ಸ್‌ಗೆ ಕರೆತರಲು ನೆರವಾಗಿತ್ತು. ಹಸೈನಾರ್ ಬಹುಮುಖ ಪ್ರತಿಭೆಯಾಗಿದ್ದ. ಆಕರ್ಷಕ ವಾಕ್ಚಾತುರ್ಯ, ಸ್ಫುಟವಾದ ಉಚ್ಚಾರಣೆ, ಇಂಪಾದ ಗಾಯನ ಆತನ ವಿಶೇಷತೆಯಾಗಿತ್ತು. ಸ್ವತಃ ಕವನ ರಚಿಸಿ ಸುಂದರವಾಗಿ ಹಾಡುತ್ತಿದ್ದ. ಮಲಯಾಳಂ ಇಸ್ಲಾಮೀ ಪುಸ್ತಕಗಳ ಅನೇಕ ಹಾಳೆಗಳನ್ನು ಹಾಗೆಯೇ ಕಂಠಪಾಟ ಮಾಡಿ ಅದ್ಭುತವಾಗಿ ಭಾಷಣ ಮಾಡುತ್ತಿದ್ದ. ಸಂಜೆ ಹೊತ್ತುಗಳಲ್ಲಿ ಕೋಡಿಯ ಕಡಲ ತಡಿಯಲ್ಲಿ ಉದ್ದನೆ ನಡೆಯುತ್ತಾ ತಾನು ರಚಿಸಿದ ಹಾಡುಗಳನ್ನು ಜೋರಾಗಿ ಹಾಡುತ್ತಾ, ಬಾಯಿಪಾಠ ಮಾಡಿದ್ದನ್ನು ಭಾಷಣದ ಶೈಲಿಯಲ್ಲಿ ಹೇಳುತ್ತಾ ಆತ ಸಾಗುತ್ತಿದ್ದರೆ ನಾನು ಅವನ ಏಕವ್ಯಕ್ತಿ ಸಭೆಯಾಗಿ ಹಿಂಬಾಲಿಸುತ್ತಿದ್ದೆ.

ದರ್ಸ್‌ನಲ್ಲಿ ತಂರೀನುಲ್ ಕಲಾಂ ಸಾಹಿತ್ಯ ಸಮಾಜ ಸಕ್ರಿಯವಾಗಿದ್ದು ಪ್ರತಿವಾರ ಕಡಲ ತಡಿಯ ಪ್ರದರ್ಶನ ಮದ್ರಸಾ ಹಾಲ್‌ನಲ್ಲಿ ನಡೆಯುತ್ತಿತ್ತು. ಹಸೈನಾರ್‌ನ ಮೋಹಕ ಮಾತು, ಮಾದಕ ಹಾಡು ಕೇಳಲು ಊರಿನ ಕೆಲವು ಮಕ್ಕಳೂ ಬಂದು ಸೇರುತ್ತಿದ್ದರು. ಇದೆಲ್ಲವೂ ಮಲಯಾಳಂ ಭಾಷೆಯ ಮೇಲೆ

ವಿಶೇಷ ವ್ಯಾಮೋಹ ಬೆಳೆಸಿಕೊಳ್ಳಲು ನನಗೆ ಪ್ರೇರಣೆಯಾಯಿತು.

ಶಾಲೆಯಲ್ಲಿ ನಾಲ್ಕನೇ ತರಗತಿ ಇದ್ದಾಗಲೇ ತಂದೆ ನನಗೂ ಅಕ್ಕನಿಗೂ ಮಲಯಾಳಂ ಕಲಿಸಿದ್ದರು. ಅವರಿಗೆ ಬರು ತ್ತಿದ್ದ ಹಲವು ಮಲಯಾಳೀ ನಿಯತ ಕಾಲಿಕ ಗಳನ್ನು ಓದಿಸುತ್ತಿದ್ದರು. ಮಲಯಾಳಂ ಅಕ್ಷರ ಜ್ಞಾನವಿದ್ದರೂ ಅಂದು ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ತಂದೆಯ ಪರವಾಗಿ ಯಾವಾಗಲಾದರೂ ಇನ್‌ಲ್ಯಾಂಡ್ ಲೆಟರ್ ಬರೆಯಲು ಮಾತ್ರ ಅದು ಉಪಕರಿಸುತ್ತಿತ್ತು. ಹಾಗೆ ಅವಜ್ಞೆಗೆ ಒಳಗಾಗಿದ್ದ ನನ್ನ ಮಲ ಯಾಳಂ ಹಸೈನಾರ್‌ನ ಸಹವಾಸದಿಂದ ಜಾಗೃತ ಗೊಂಡಿತ್ತು. ಕನ್ನಡದಲ್ಲಿ ಸುನ್ನೀ ಪತ್ರಿಕೆಗಳು ಇಲ್ಲದಿದ್ದ ಆ ಕಾಲದಲ್ಲಿ ನಾವು ಧಾರ್ಮಿಕವಾಚನಕ್ಕೆ ಮಲಯಾಳಂ ಪತ್ರಿಕೆ ತರಿಸಲು ನಿರ್ಧರಿಸಿದೆವು. ಸುನ್ನೀ ವಾಯ್ಸ್ ಮತ್ತು ಅಲ್‌ಮುಬಾರಕ್ ಪತ್ರಿಕೆಗಳಿಗೆ ಚಂದಾ ಹಣ ಕಳಿಸಿದ್ದೂ ಆಯಿತು.

ಪತ್ರಿಕೆಗಳ ಜತೆ ಅದರಲ್ಲಿ ಜಾಹೀರಾತು ಕೊಟ್ಟಿರುವ ಅನೇಕ ಮಲಯಾಳೀ ಇಸ್ಲಾಮೀ ಪುಸ್ತಕಗಳನ್ನೂ ನಾವು ತರಿಸಲು ಹಣ ಮನಿಯಾರ್ಡರ್ ಮಾಡ ತೊಡಗಿದೆವು. ಸಮೀಪದ ಕೋಟೇಶ್ವರದಲ್ಲಿ ಮುಹಮ್ಮದಿಯ ಕ್ಯಾಶ್ಯೂ ಫ್ಯಾಕ್ಟರಿ ಮಾಲಕ ಮುಹಮ್ಮದಾಕನ ಮನೆಯಲ್ಲಿ ನನಗೆ ಪ್ರತಿ ದಿನ ಟ್ಯೂಶನ್ ಇದ್ದು, ತಿಂಗಳು ಮುಗಿಯುವುದರೊಳಗೆ ಇನ್ನೂರು ರೂಪಾಯಿ ವೇತನ ಸಿಗುತ್ತಿತ್ತು. ಇದರಿಂದಾಗಿ ಪುಸ್ತಕ ತರಿಸಲು ಆರ್ಥಿಕ ಅಡಚಣೆ ಇರಲಿಲ್ಲ.

ಪತ್ರಿಕೆ ಮತ್ತು ಪುಸ್ತಕ ಓದಲು ನಿಯ ಮಿತವಾಗಿ ಸಮಯವನ್ನು ಮೀಸಲಿಡುತ್ತಿದ್ದ ಹಸೈನಾರ್, ಅದರಲ್ಲಿನ ಪ್ರಧಾನ ವಿಷಯ ಗಳನ್ನು ಒಂದು ಪುಸ್ತಕದಲ್ಲಿ ಬರೆದಿಡುತ್ತಿದ್ದ. ಕೆಂಪು ಶಾಯಿಯ ಪೆನ್ನಿನಲ್ಲಿ ಒಂದು ಪುಟ್ಟ ತಲೆ ಬರಹ ಕೊಟ್ಟು ಅದರ ಕೆಳಗೆ ಸಂಕ್ಷಿಪ್ತ ವಾಗಿ ವಿಷಯ ಬರೆದು ಅದರ ಮೂಲ ಪತ್ರಿಕೆ / ಪುಸ್ತಕದ ಹೆಸರು, ಪುಟ ನಂಬ್ರ ನಾಜೂಕಾಗಿ ನಮೂದಿಸುತ್ತಿದ್ದ. ಆಗಲೇ ಆತನ ಬಳಿ ಇಂತಹ ನಾಲ್ಕಾರು ಡೈರಿಗಳು ಇದ್ದವು. ಕಡಲ ಕಿನಾರೆಯ ಮತ್ತು ಸಾಹಿತ್ಯ ಸಮಾಜದ ಭಾಷಣಕ್ಕೆ ತೆರಳುವ ಮುನ್ನ ಆತ ತನ್ನ ಡೈರಿಗಳನ್ನು ಚೆನ್ನಾಗಿ ಅಧ್ಯಯನ ಮಾಡಿ ಬರುತ್ತಿದ್ದ. ವಿಷಯ ದಾರಿದ್ರ್ಯದಿಂದ ಬಳಲಿದ್ದ ನನಗೆ ವಿಷಯ ಸಂಗ್ರಹದ ಈ ತಂತ್ರಗಾರಿಕೆ ಅತೀವ ಸಂತಸ ಕೊಟ್ಟಿತ್ತು. ತಡಮಾಡದೆ ಅದನ್ನು ಅನುಕರಿಸತೊಡಗಿದೆ. ಕುಂದಾಪುರ ದಿಂದ ತಂದ ಮುನ್ನೂರು ಪುಟದ ದಪ್ಪದ ನೋಟ್ ಬುಕ್ ನನ್ನ ಪ್ರಥಮ ವಿಷಯ ಸಂಗ್ರಹದ 'ಡೈರಿ'ಯಾಗಲು ಸಿದ್ಧವಾಗಿ ನಿಂತಿತು. ಈ 'ವಿಷಯ ಸಂಗ್ರಹ'ಕ್ಕೆ ಪ್ರೀತಿ ಯಿಂದ 'ಡೈರಿ ಬರಹ' ಎಂದು ಹೆಸರಿಟ್ಟು ಇವತ್ತಿಗೂ ಮುಂದುವರಿಸುತ್ತಿದ್ದೇನೆ. ಈ ಪೈಕಿ ಕೆಲವು ಡೈರಿಗಳು ಆಪ್ತರ ಕೋರಿಕೆಯ ಮೇರೆಗೆ ಅವರಿಗೆ "ನೋಡಿಕೊಡಲು" ಕೊಟ್ಟಿದ್ದು, ಮರಳಿ ಬಾರದ ಲೋಕಕ್ಕೆ ಹೋಗಿ ದ್ದರೆ, ಉಳಿದವು ಗತಕಾಲದ ಇತಿಹಾಸ ಹೇಳುತ್ತಾ ನನ್ನ ಸಂಗ್ರಹದಲ್ಲಿದ್ದು ಭಾಷಣ ಬದುಕಿಗೆ ನೆರವಾಗುತ್ತಿದೆ.

ವಿಷಯ ಸಂಗ್ರಹಕ್ಕೆ ಅಲ್ಲದೆ ದಿನಚರಿ ದಾಖಲಿಸಲು ನಾನು ಮೊದಲು ಡೈರಿ ಬರಹ ಶುರುಮಾಡಿದ್ದು 1988ರಿಂದಲೇ. 1988ರ ನೀಲಿ ಪ್ಲಾಸ್ಟಿಕ್ ಹೊದಿಕೆಯ ಪುಟ್ಟ ಶಾರದಾ ಡೈರಿ ಅಲ್ಪಸ್ವಲ್ಪ ಇಲಿಯ ದಾಳಿಗೆ ಒಳಗಾಗಿ ದ್ದರೂ ಅಮೂಲ್ಯ ದಾಖಲೆಯಾಗಿ ನಾನು ಕಾಪಾಡಿಕೊಂಡು ಬಂದಿದ್ದೇನೆ. ಅದರ ಮೊದಲ ಪುಟದಲ್ಲಿ "ಇವತ್ತು 550 ರೂಪಾಯಿಗೆ ತಂದೆ ಮನೆಗೆ ಒಂದು ಹಸು ಮತ್ತು ಕರುವನ್ನು ಖರೀದಿಸಿ ತಂದರು" ಎಂದು ಬರೆದಿದ್ದರೆ, ಜನವರಿ 6 ಬುಧವಾರದ ಪುಟ ದಲ್ಲಿ "ಹಸು-ಕರುವನ್ನು ಹಿಂದಿರುಗಿಸಲಾಯಿತು" ಎಂದು ಕಾಣುತ್ತದೆ. ವಾರದೊಳಗಿನ ಈ ಕೊಳ್ಳು-ಕೊಡು ವ್ಯವಹಾರಕ್ಕೆ ಕಾರಣ ಮಾತ್ರ ಯಾವ ಪುಟದಲ್ಲೂ ನಮೂದಾಗಿಲ್ಲ. ಆದರೆ ಅದರ ಕೊನೆಯ 'Memorandum' ಎಂದು ಬರೆದ ಹಾಳೆಯಲ್ಲಿನ ಉಲ್ಲೇಖ ಸ್ವಾರಸ್ಯಕರ ವಾಗಿ ಹೀಗಿದೆ; "ಈ ಡೈರಿಯನ್ನು 6.12.1987 ಭಾನುವಾರ ಸಂಜೆ ಎಟ್ಟಿಕ್ಕುಳಂನಲ್ಲಿ ಕೋಯಮ್ಮ ತಂಙಳ್‌ರ ಮದುವೆಗೆ ಹೋಗಿ ಮರಳಿ ಬರುವಾಗ ಕುಂಬಳೆ ರಹ್ಮಾನಿಯ್ಯಃ ಬುಕ್ ಸ್ಟಾಲ್‌ನಿಂದ 4 ರೂಪಾಯಿ ಕೊಟ್ಟು ಖರೀದಿಸಲಾಯಿತು."

ಉಳ್ಳಾಲ ಸಯ್ಯಿದ್ ಮದನಿ ಕಾಲೇಜಿ ನಲ್ಲಿ ಕಲಿಯುವಾಗ ನನ್ನ ಬಾವ ಕಲ್ಲಕಟ್ಟ ಪೂಕುಂಞಿ ತಂಙಳ್‌ಗೆ ಕೂರತ್ ತಂಙಳ್ ಪರಮಾಪ್ತರಾಗಿದ್ದರು. ಅವರ ಮದುವೆಗೆ ಗುರುವಾಯನಕೆರೆ ದರ್ಸ್‌ನಿಂದ ಬಾವ ಹೋಗುವಾಗ ನನ್ನನ್ನು ಕರೆದೊಯ್ದಿದ್ದರು. ಜತೆಗೆ ನನ್ನ ತಂದೆ ಮರ್‌ಹೂಂ ಮೂಸ ಮುಸ್ಲಿಯಾರ್ ಮತ್ತು ಗುರುವಾಯನಕೆರೆ ದರ್ಗಾ ಅಧ್ಯಕ್ಷರಾಗಿದ್ದ ಬೆಳ್ತಂಗಡಿಯ ಹುಲಿ ಮರ್‌ಹೂಂ ಇದ್ದಿಯಾಕನವರೂ ಇದ್ದರು. ಇದು ನನ್ನ ಪ್ರಥಮ ಕೇರಳ ಯಾತ್ರೆ. ಇದರೊಂದಿಗೆ, "ಬೆಳೆಯಬೇಕಾದರೆ ಕೇರಳಕ್ಕೇ ತೆರಳಬೇಕು" ಎಂಬ ಅಗೋಚರ ನಿರ್ಧಾರ ವೊಂದು ನನ್ನ ಒಳಮನಸ್ಸಿನಲ್ಲಿ ಜೀವ ಪಡೆ ಯುತ್ತಿತ್ತು. ಮುಂದೆ ಹಸೈನಾರ್‌ನ ಸಾಂಗತ್ಯದಲ್ಲಿ ಈ ನಿರ್ಧಾರ ಹೆಚ್ಚು ಗಟ್ಟಿಯಾಯಿತು. ನನ್ನ ಭಾಷಣ ಬದುಕಿನ ಅನೇಕ ಮಹತ್ತರ ತಿರುವುಗಳಿಗೆ ಕೇರಳ ಮತ್ತು ಮಲಯಾಳಂ ನೀಡಿದ ಬಲ, ಬೆಂಬಲ ಮತ್ತು ಅವಕಾಶಗಳು ಅನಿರ್ವಚನೀಯ, ಅವಿಸ್ಮರಣೀಯ. ಹಾಗೆ ಕುಂದಾಪುರ- ಕೋಡಿ ದರ್ಸ್‌ನ ಒಂದು ವರ್ಷದ ಜೀವನವು ಭಾಷಣ ಬದುಕಿನ ಮೂಲಭೂತ ದ್ರವ್ಯಗಳ ಸಂಗ್ರಹ ಮತ್ತು ಸಿದ್ಧತೆಗೆ ಅತ್ಯುತ್ತಮ ಭೂಮಿಕೆಯನ್ನು ಒದಗಿಸಿ ಕೊಟ್ಟಿತ್ತು.

# 3

## ಶುಕ್ರವಾರದ 'ಉರ್ದಿ'ಯ ಹಿಂದೆ...

ಭಾಷಣ ಬದುಕಿನ ಮೂಲಭೂತ ಸಿದ್ಧತೆಗಳು ಸಾಮಾನ್ಯ ರೀತಿಯಲ್ಲಿ ವಶವಾದ ಬಳಿಕ ಮೈಕಿನ ಮುಂದೆ ನಿಂತು ಸ್ಪೀಚ್ ಕೊಡಬೇಕೆನ್ನುವ ಹಪಹಪಿ ಹೆಚ್ಚಾಗತೊಡಗಿತು. ಮದ್ರಸದಲ್ಲಿ ಕಲಿಯುತ್ತಿದ್ದಾಗ ವರ್ಷಕ್ಕೊಮ್ಮೆಯಾದರೂ ಮೀಲಾದುನ್ನಬಿ ವೇದಿಕೆಯಲ್ಲಿ ಮೈಕ್‌ನ ಮುಂದೆ ನಿಲ್ಲುವ ಅವಕಾಶ ದೊರಕುತ್ತಿತ್ತು. ಆದರೆ ದರ್ಸ್ ಜೀವನದ ಮೊದಲ ಎರಡು ವರ್ಷ ಇದು ಸಾಧ್ಯವಾಗಿಲ್ಲ. 1989ರ ಶಅಬಾನ್ ತಿಂಗಳಲ್ಲಿ ಉಸ್ತಾದ್ ಕುಂದಾಪು ಕೋಡಿಯಿಂದ ವಿದಾಯ ಕೋರಿದರು. ಮುಂದೆ ಅವರು ದರ್ಸ್ ವಹಿಸಿಕೊಂಡದ್ದು ಕಕ್ಕಿಂಜೆಯಲ್ಲಿ. ಆದರೆ ಸ್ವಂತ ಊರಿನಲ್ಲಿ ದರ್ಸ್ ಶಿಕ್ಷಣ ಪಡೆದರೆ

ಕಲಿಕೆಯಲ್ಲಿ ಉದ್ದೇಶಿತ ಪ್ರಗತಿ ಕಾಣಲು ಸಾಧ್ಯವಿಲ್ಲ ಎಂದು ಯೋಚಿಸಿದ ತಂದೆ ಉಸ್ತಾದರ ಅನುಮತಿಯನ್ನು ಪಡೆದು ದೂರದ ದರ್ಸ್‌ಗೆ ಸೇರಿಸಲು ಮುಂದಾದರು. ಅದಾಗಲೇ ಕೇರಳದ ಸೆಳೆತಕ್ಕೆ ಒಳಗಾಗಿದ್ದ ನನಗೆ ಕನಿಷ್ಠ ಕಾಸರಗೋಡ್‌ನಿಂದ ಈಚೆ ದರ್ಸ್ ಆಯ್ಕೆ ಮಾಡುವ ಆಸಕ್ತಿ ಇರಲಿಲ್ಲ. ಆಗ ಕಾಸರಗೋಡ್ ಜಿಲ್ಲೆಯ ದರ್ಸ್‌ಗಳಲ್ಲಿ ಪೂಚಕ್ಕಾಡ್‌ನಲ್ಲಿ ಶೈಖುನಾ ಅಲಿಕುಂಞಿ ಉಸ್ತಾದ್ ನೆಲ್ಲಿಕುನ್ನ್‌ನಲ್ಲಿ ಸಯ್ಯಿದುನಾ ತಾಹಿರುಲ್ ಅಹ್‌ದಲ್ ತಂಙಳ್ ಹಾಗೂ ಬೇಕಲದಲ್ಲಿ ಮೌಲಾನಾ ಬೇಕಲ್ ಉಸ್ತಾದರ ದರ್ಸ್ ಬಹಳ ಪ್ರಸಿದ್ಧವಾಗಹಿದ್ದವು. ಈ ಮೂರರಲ್ಲಿ ಒಂದನ್ನು ಆಯ್ಕೆ ಮಾಡುವಂತೆ ತಂದೆ ಸೂಚಿಸಿದರು. ಹೀಗೆ ಆಯ್ಕೆಯ ತೊಳಲಾಟದಲ್ಲಿ ಇದ್ದಂತೆ ಶೈಖುನಾ ಅಲೀಕುಂಞಿ ಉಸ್ತಾದ್ ಪೂಚಕ್ಕಾಡ್ ತೊರೆದು ಉಪ್ಪಿನಂಗಡಿಯಲ್ಲಿ ಮುದರ್ರಿಸ್ ಆಗಿ ನೇಮಕಗೊಂಡಿರು. ವಿವಿಧ ಕಿತಾಬ್‌ಗಳನ್ನು ಓದುವ ನಲವತ್ತು ಮುತಅಲ್ಲಿಮರ ಪ್ರೌಢವಾದ ದರ್ಸ್, ಸಾವಿರಾರು ಶಿಷ್ಯಂದಿರಿಗೆ ದೀನೀ ಇಲ್ಮನ್ನು ಧಾರೆಯೆರೆದು ಕೊಟ್ಟ ಅನುಗ್ರಹೀತ ಗುರುವಿನ ನೇತೃತ್ವ, ವೇಷ ವಿಧಾನಗಳಲ್ಲೂ, ಹಾವ ಭಾವಗಳಲ್ಲೂ ಅತೀವ ಶಿಸ್ತನ್ನು ಮೈಗೂಡಿಸಿ ಕೊಂಡಿದ್ದ ಶುಭ್ರ ವಸ್ತ್ರಧಾರಿಗಳಾದ ಮುತಅಲ್ಲಿಮರ ದಂಡು, ಹೀಗೆ ಅತ್ಯಾಕರ್ಷಕವಾಗಿತ್ತು. ಉಪ್ಪಿನಂಗಡಿ ಕೇಂದ್ರ ಜುಮಾ ಮಸೀದಿಯಲ್ಲಿನ ದರ್ಸ್. ಉಸ್ತಾದ್ ಕಲ್ಲಕಟ್ಟೆ ತಂಙಳ್ ನನ್ನನ್ನು ಅಲೀಕುಂಞಿ ಉಸ್ತಾದರ ಕೈಗೆ ವಹಿಸಿಕೊಟ್ಟು ಬಂದರು. ಅದರೊಂದಿಗೆ ನನ್ನ ದರ್ಸ್ ಜೀವನದ ಮೂರನೇ ವರ್ಷವು ವಿಭಿನ್ನ ಸನ್ನಿವೇಶದೊಂದಿಗೆ ಪ್ರಾರಂಭಗೊಂಡಿತು.

ದರ್ಸ್‌ರ್ದಿನ ಸಬಖ್‌ಗಳಂತೆ ಸಾಪ್ತಾಹಿಕ ಸಾಹಿತ್ಯ ಸಮಾಜದ ಭಾಷಣ ತರಬೇತು ವೇದಿಕೆಗೂ ಅಲೀಕುಂಞಿ ಉಸ್ತಾದ್ ಪ್ರಾಮುಖ್ಯತೆ ನೀಡುತ್ತಿದ್ದರು. ತಹ್‌ದೀಬುತ್ತಲಬಾ ಹೆಸರಿನ ಸಮಾಜಕ್ಕೆ ಕೊಯಿಲಾಂಡಿ ಸಯ್ಯಿದ್ ತ್ವಾಹಾ ಬಾಫಖಿ ತಂಙಳ್ ಅಧ್ಯಕ್ಷರಾಗಿದ್ದರು. ಪ್ರತಿವಾರ ಇಶಾ ನಮಾಜಿನ ಬಳಿಕ ದರ್ಸ್‌ಹಾಲ್‌ನಲ್ಲಿ ಶಿಸ್ತುಬದ್ಧವಾಗಿ ಸಾಹಿತ್ಯ ಸಮಾಜ ನಡೆಯುತ್ತಿದ್ದರೆ ಶೈಖುನಾ ಅದರ ಸಮೀಪದಲ್ಲೇ ದ್ಸಿಕ್ರ್ ಹೇಳುತ್ತಾ ಶತಪಥ ಹಾಕುತ್ತಿದ್ದರು. ಸಾಹಿತ್ಯ ಸಮಾಜಕ್ಕೆ ಚಕ್ಕರ್ ಹೊಡೆಯುವುದಾಗಲೀ, ಸಭಾಧ್ಯಕ್ಷರು ಹೆಸರು ಕರೆದಾಗ ಭಾಷಣ ಮಾಡದೆ ತಪ್ಪಿಸಿಕೊಳ್ಳುವುದಾಗಲೀ ಉಸ್ತಾದರ ನಿರಂತರ ಸಾನಿಧ್ಯದಲ್ಲಿ ಅಸಾಧ್ಯವಾಗಿತ್ತು. ಈ ಕಾರಣಕ್ಕಾಗಿ ವಿದ್ಯಾರ್ಥಿಗಳು ಸಮಾಜಕ್ಕೆ ಬರುವಾಗ ಸಾಕಷ್ಟು ಸಿದ್ಧರಾಗಿಯೇ ಬಂದು ನಿಗದಿತ ವೇಳೆ ಭಾಷಣ ಮಾಡಿ ಹಿಂದಿರುಗುತ್ತಿದ್ದರು. ಭಾಷಣದ ಮೇಲಿನ ನನ್ನ ಮೋಹಕ್ಕೆ ನೀರೆರೆದು ಪೋಷಿಸಲು ಉಪ್ಪಿನಂಗಡಿ ದರ್ಸ್‌ನ ಅಚ್ಚುಕಟ್ಟಾದ 'ತಹ್‌ದೀಬುತ್ತಲಬಾ' ಸಾಹಿತ್ಯ ಸಮಾಜ ಹೆಚ್ಚಿನ ನೆರವು ನೀಡಿದೆ.

ಈ ಮಧ್ಯೆ ಸಮಾಜದ ವತಿಯಿಂದ ದರ್ಸ್‌ನ ಮುತಅಲ್ಲಿಮರಿಂದಲೇ ಮೂರು ದಿನಗಳ ಧಾರ್ಮಿಕ ಉಪನ್ಯಾಸ ಏರ್ಪಡಿಸಲಾಗಿತ್ತು. ಪ್ರತಿದಿನ ಇಬ್ಬರಂತೆ 3 ದಿನ ಆರು ಹಿರಿಯ ಮುತಅಲ್ಲಿಮರನ್ನು 'ವಅಳ್' ಹೇಳಲು ನಿಗದಿಪಡಿಸಲಾಗಿತ್ತು. ಅಂದು ಆ ಪಟ್ಟಿಯಲ್ಲಾಗಲೀ, ಸಾಹಿತ್ಯ ಸಮಾಜದ ಪದಾಧಿಕಾರಿಗಳ ಸಾಲಿನಲ್ಲಾಗಲೀ ನಾನು ಇದ್ದಿರಲಿಲ್ಲ. ಕಾರ್ಯಕ್ರಮ ನಿರ್ವಹಣೆಗೆ ರುಚಿಸಿದ ಸ್ವಾಗತ ಸಮಿತಿಯಲ್ಲಿ ಜತೆ ಕಾರ್ಯದರ್ಶಿಯ ಹುದ್ದೆ ಮಾತ್ರ ನನಗೆ ಒಲಿದು ಬಂತು. ಉಪನ್ಯಾಸ ದಿನಗಳ ಒಂದು ದಿನದ ಕಾರ್ಯಕ್ರಮ ಮುಗಿದು ಧನ್ಯವಾದ ಹೇಳುವ ಅವಕಾಶವನ್ನು ಪ್ರಧಾನ ಕಾರ್ಯದರ್ಶಿಯಾಗಿದ್ದ ಎಸ್.ಎ.ಉಸ್ಮಾನ್ ಮುಸ್ಲಿಯಾರ್ ಸವಣಾಲು ನನಗೆ ನೀಡಿದ್ದು ಮಹತ್ತರವಾದ ಒಂದು ತಿರುವಿಗೆ ಕಾರಣವಾಯಿತು. ಆ ದಿನ ಮೈಕ್‌ನ ಮುಂದೆ ನಿಂತು ನಾನು ಅರುಹಿದ 'ಧನ್ಯವಾದ' ಕೆಲವೇ ನಿಮಿಷಗಳಿಗೆ ಸೀಮಿತವಾದರೂ ನನ್ನ ಭವಿಷ್ಯಕ್ಕೆ ಅದೊಂದು ಮುನ್ನಡಿಯಾಯಿತು. ಕಾರ್ಯಕ್ರಮ ಮುಗಿದು ಪ್ರತಿಯೊಬ್ಬ ಮುತಅಲ್ಲಿಮನೂ ನನ್ನನ್ನು ಅಭಿನಂದಿಸಿದ್ದೇ ಅಭಿನಂದಿಸಿದ್ದು. ಭಾಷಣ ಬದುಕಿನಲ್ಲಿ ನಿನಗೆ ಭವಿಷ್ಯವಿದೆ ಎಂಬರ್ಥದಲ್ಲಿ ಕೆಲವರು ನಿನಗೆ ಕಬ್ಬಿಣ (ಮೈಕ್) ಚೆನ್ನಾಗಿ ಹಿಡಿಯುತ್ತದೆ. ಎಂದು ಹೇಳಿದ್ದು ನೆನಪಿದೆ. ಆಗ ನಾನು ಉಪ್ಪಿನಂಗಡಿ ಹಳೆ ಬಸ್ ನಿಲ್ದಾಣ ಸಮೀಪ 'ಅಪ್ಸರಾ' ಹೆಸರಿನ ಬೆಡ್ ಅಂಗಡಿ ನಡೆಸುತ್ತಿದ್ದ, ನನ್ನ ತಾಯಿಯ ಮಾವ ಸಯ್ಯಿದ್ ಉಮೈರ್ ಹಾದಿ ತಂಙಳ್‌ರ ಮನೆಗೆ ಊಟಕ್ಕೆ ಹೋಗುತ್ತಿದ್ದೆ. ತನ್ನ ಮೊಮ್ಮಗನ ಈ ಸಾಧನೆಯ ಬಗ್ಗೆ ಹೆಮ್ಮೆ ಪಟ್ಟ ತಂಙಳ್ ನಮ್ಮ ಕುಟುಂಬದವರಿಗೆಲ್ಲಾ ನನ್ನ 'ಭಯಂಕರ ಭಾಷಣ'ದ ಬಗ್ಗೆ ವಿವರಿಸಿಯಾಗಿತ್ತು. ಕೇಳಿದವರೆಲ್ಲ ನನ್ನನ್ನು ಅಭಿನಂದಿಸಿದರು. ಇದು ನನ್ನಲ್ಲುಂಟು ಮಾಡಿದ ಪ್ರೇರಣೆ ಗಾಢವಾಗಿತ್ತು. ತತ್ವಜ್ಞಾನಿಯೊಬ್ಬರು ಹೇಳಿದಂತೆ Man is action. There is no action without motivation' ಮೋಟಿವೇಶನ್ (ಅಂತರ್ ಪ್ರೇರಣೆ)ನನ್ನೊಳಗಿನ ಭಾಷಣಗಾರರನ್ನು ಬಡಿದೆಬ್ಬಿಸತೊಡಗಿತು. ಆದರೆ ಸಮಸ್ಯೆ ಅಲ್ಲಿಯೂ ಮುಂದುವರಿದಿತ್ತು. ಭಾಷಣಕ್ಕೆ ವೇದಿಕೆ ಒದಗಿಸುವವರು ಯಾರು?

ಉಪ್ಪಿನಂಗಡಿ ದರ್ಸ್‌ನಲ್ಲಿ ನಲವತ್ತು ವಿದ್ಯಾರ್ಥಿಗಳು ಇದ್ದುದರಿಂದ 'ಸಮಾಜದಲ್ಲಿ ಹಲವು ಬ್ಯಾಚ್‌ಗಳು ಇದ್ದವು. ಪ್ರತಿವಾರವೂ ಎಲ್ಲರಿಗೂ ಭಾಷಣಕ್ಕೆ ಅವಕಾಶ ಸಿಗುತ್ತಿರಲಿಲ್ಲ. ಇದರಿಂದಾಗಿ ಪರ್ಯಾಯದ ಹುಡುಕಾಟ ಅಗತ್ಯವೆನಿಸಿತು. ಆಗ ತೋಚಿದ್ದೇ ಶುಕ್ರವಾರದ ಉರ್ದಿ. ಸ್ಥಳೀಯ ಖತೀಬ್, ಮುಅಝ್ಝಿನ್‌ಗಳನ್ನು ಕಂಡು ಶುಕ್ರವಾರ ಜುಮಾ ನಂತರ ಭಾಷಣ (ಉರ್ದಿ) ಮಾಡಲು ಅವಕಾಶ ಕೊಡುವಂತೆ ಅಂಗಲಾಚಬೇಕು. ಅದೇ ವಾರ ಸಿಗಬೇಕೆಂದಿಲ್ಲ. ಕೆಲವೊಮ್ಮೆ ನಾಲ್ಕುವಾರ ಕಳೆದು ಬನ್ನಿ ಎಂಬ ಬೆದರಿಕೆಯೂ ಕೆಲವು ಉಸ್ತಾದ್‌ಗಳಿಂದ ಬರುತ್ತದೆ. ಜುಮಾಕ್ಕೆ ಬಂದ ಮುಕ್ಕಾಲು ಭಾಗ ಜನರು ಹೋದ ಮೇಲೆ ಮಸೀದಿಯ ವರಾಂಡದಲ್ಲಿ ನಿಂತುಕೊಂಡು 'ವಅಳ್' ಶುರು ಮಾಡಬೇಕು. ಕೆಲವೊಮ್ಮೆ ಯಾರಾದರೂ ಮನೆಗೆ ಆಹ್ವಾನಿಸಿ ಮಧ್ಯಾಹ್ನದ ಊಟ ಕೊಟ್ಟಾರು, ಇಲ್ಲದಿದ್ರೆ ಬರೆ ನೀರೇ ಗತಿ. ಅವಕಾಶ ಸಿಕ್ಕರೆ ಇಪ್ಪತ್ತೋ ಮೂವತ್ತೋ ರೂಪಾಯಿ ಸಿಗಬಹುದು. ಇಲ್ಲದಿದ್ರೆ ಬೆಳಗ್ಗೆ ಗೆಳೆಯರಿಂದ ಸಾಲ ಪಡೆದುಕೊಂಡು ಹೋದ ಹಣಕ್ಕೆ ಈ ಯಾತ್ರಾ ವೆಚ್ಚವೂ ಸೇರಿ ಇಮ್ಮಡಿ ಸಾಲ. ಹೀಗೆ ಶುಕ್ರವಾರ ಉರ್ದಿಯ ಬಗ್ಗೆ ವಿಚಾರಿಸಿದಾಗ ಸಹಪಾಠಿ ಮುಹಮ್ಮದ್ ಕುದ್ರಡ್ಕ ಭಯಾನಕ ಕಥೆಗಳನ್ನು ಹೇಳಿದ್ದ. ಆದರೂ ಧೈರ್ಯ ತುಂಬಿದ್ದ. ಶುಕ್ರವಾರಗಳ ತನ್ನ ಗಳಿಕೆಯ ವಿವರಣೆ ನೀಡಿ ಆಸೆಯನ್ನೂ ಹುಟ್ಟಿಸಿದ್ದ.

ಒಂದು ಶುಕ್ರವಾರ ಬೆಳಿಗ್ಗೆ ಉಪ್ಪಿನಂಗಡಿ ಸಹಮುದರ್ರಿಸರೂ ಖತೀಬರೂ ಆಗಿದ್ದ. ಕೊರಿಂಗಿಲ ಮೂಸಲ್ ಮದನಿ ಉಸ್ತಾದರ ಆಶೀರ್ವಾದ ಪಡೆದು ಮನಸ್ಸು ಗಟ್ಟಿ ಮಾಡಿ ಉರ್ದಿಗೆ ಹೊರಡಲು ಅನುವಾದೆ. ಸಮೀಪದ ಕುಪ್ಪೆಟ್ಟಿಯಲ್ಲಿ ಆಗ ಖತೀಬ್ ಆಗಿದ್ದ ಗುರುವಾಯನಕೆರೆ ಬಳಿಯ ಯಅಕೂಬ್ ಮುಸ್ಲಿಯಾರ್ ನನ್ನ ತಂದೆಯ ಶಿಷ್ಯ ಎಂದು ತಿಳಿದಿದ್ದರಿಂದ ಅಲ್ಲಿ ಹೋಗಿ ಪರಿಚಯ ಮಾಡಿಕೊಂಡು ಅವಕಾಶ ಕೇಳಿದರೆ ಹೆಚ್ಚಿನ ಕಷ್ಟವಾಗಲಾರದೆಂಬ

ಶುಭ ನಿರೀಕ್ಷೆಯಲ್ಲಿ ಅಲ್ಲಿಗೆ ತಲುಪಿದರೆ ಅಲ್ಲಿ ಒಬ್ಬ ಹಿರಿಯ ಉಸ್ತಾದ್ ಅದಾಗಲೇ ಬುಕ್ ಮಾಡಿ ಅಲ್‌ಕಹ್‌ಫ್ ಓದುತ್ತಾ ಕುಳಿತಿದ್ದರು. ಆದರೆ ನನ್ನ ಗುರುತು ಸಿಕ್ಕಿದ ಮೇಲೆ ಯಅಕೂಬ್ ಉಸ್ತಾದ್ ನನ್ನನ್ನು ಉತ್ತಮ ರೀತಿಯಲ್ಲಿ ಉಸ್ತಾದ್ ನನ್ನನ್ನು ಉತ್ತಮ ರೀತಿಯಲ್ಲಿ ಉಪಚರಿಸಿ ಸ್ವಂತ ಕೈಯಿಂದಲೇ ಅರವತ್ತು ರೂಪಾಯಿ ನೀಡಿ ಮುಂದಿನ ಶುಕ್ರವಾರ ಬಂದು ಉರ್ದಿ ಹೇಳುವಂತೆ ಔದಾರ್ಯ ತೋರಿದರು. ಆ ದಿನ ಕುಪ್ಪೆಟ್ಟಿ ನೀಡಿದ ಖುಷಿಗೆ ಪಾರವೇ ಇರಲಿಲ್ಲ. ಯಾಕೆಂದರೆ ಅಂದು ಸಾಯಂಕಾಲ ದರ್ಸ್‌ನ ಮುತಅಲ್ಲಿಮರೆಲ್ಲ ಸೇರಿ ಒಂದು ಯಾತ್ರೆಗೆ ಯೋಜನೆ ಹಾಕಿದ್ದೆವು. ವಿಟ್ಲ ಸಮೀಪದ ಕಂಬಳಬೆಟ್ಟುವಿನ ಸಾದಾ ನಗರದಲ್ಲಿ ಅಂದು ರಾತ್ರಿ ಬೃಹತ್ ಸುನ್ನೀ ಸಮ್ಮೇಳನ ಇತ್ತು. ಸುನ್ನೀ ಚಳುವಳಿಯ ಅಗ್ರೇಸರ ನಾಯಕರೆಲ್ಲರೂ  ಅಲ್ಲಿ ಬರುವವರಿದ್ದರು. ಜೀವನದಲ್ಲಿ ಪ್ರಥಮ ಬಾರಿ ಲಭಿಸುವ ಆ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲು ಜೀಪಿಗೆ ಕೊಡುವ ಹಣಕ್ಕಾಗಿ ನಾನು ಪರದಾಡುತ್ತಿದ್ದಾಗಲೇ ಅಂದು ಮಧ್ಯಾಹ್ನ ಕುಪ್ಪೆಟ್ಟಿಯಲ್ಲಿ ನನ್ನ ನಿರೀಕ್ಷೆಗೂ ಮೀರಿದ 60 ರೂಪಾಯಿ ಸಿಕ್ಕಿತ್ತು.

ಹಾಗೆ, 1990 ಜನವರಿ 12 ಶುಕ್ರವಾರ ಮಗ್‌ರಿಬ್‌ನ ಬಳಿಕ ಕಂಬಳಬೆಟ್ಟುವಿನ ಸುನ್ನೀ ಮಹಾ ಸಂಗಮದಲ್ಲಿ ಜೀವನದಲ್ಲಿ ಮೊದಲ ಬಾರಿಗೆ ಶೈಖುನಾ ಎ.ಪಿ.ಉಸ್ತಾದ್, ಸಯ್ಯಿದ್ ಅವೇಲತ್ತ್ ತಂಙಳ್, ಸಯ್ಯಿದ್ ಬಾಫಖೀ ತಂಙಳ್, ಸಯ್ಯಿದ್ ತಾಹಿರುಲ್ ಅಹ್‌ದಲ್ ತಂಙಳ್, ಪೇರೋಡ್ ಉಸ್ತಾದ್ ಮುಂತಾದ ಅತಿರಥ ಮಹಾರಥರನ್ನೆಲ್ಲ ನೋಡಲು ಅವರ ಭಾಷಣ ಕೇಳಲು ಅನುಗ್ರಹವಾಯಿತು.

ಕುಪ್ಪೆಟ್ಟಿಯ ಬಳಿಕ ಶುಕ್ರವಾರದ ಕುರ್ದಿಯ ತಲಾಷು ಹಲವು ಬಾರಿ ನಿರಾಶೆ ತಂದದ್ದೂ ಇದೆ. 1990 ಜನವರಿ 26 ಶುಕ್ರವಾರದ ನನ್ನ ಡೈರಿ ಪುಟದಲ್ಲಿ ಹೀಗೆ ಬರೆದಿದೆ. ಈ ದಿನ ತುರ್ಕಳಿಕೆ ಮತ್ತು ಕಕ್ಕೆಪದವುಗೆ ಕುರ್ದಿಗೆ ಹೋದ ನಾನು ಅವಕಾಶವೂ ಹಣವೂ ಇಲ್ಲದೆ ನಿರಾಶನಾಗಿ ಮರಳಿದೆ."

ಈ ಮಧ್ಯೆ ದರ್ಸ್ ಬೇರೆ ಬೇರೆಯಾದ್ದರಿಂದ ಹಸೈನಾರ್ ಮತ್ತು ನಾನು ತುಸು ದೂರವಾದೆವು. ಆತ ಕಲ್ಲಕಟ್ಟ ತಂಙಳ್ ತಜೆ ಕಕ್ಕಿಂಜೆ ದರ್ಸ್‌ನಲ್ಲೇ ಉಳಿದ. ವಾರಕ್ಕೊಮ್ಮೆ ಮಾತ್ರ ನಾವು ಭೇಟಿಯಾಗಿ ಭಾಷಣ ಬದುಕಿನ ಭವಿಷ್ಯದ ಬಗ್ಗೆ ಚರ್ಚಿಸುತ್ತಿದ್ದೆವು. ನಮ್ಮ ಒಡನಾಟದ ನಿರಂತರತೆಗೆ ನಾವೊಂದು ದ್ವಿ ಸದಸ್ಯ ಸಂಘ ರಚಿಸಿ 'ಲಜ್‌ನತುಲ್ ಹಿಬ್ಬಾಅ' ಎಂದು ಹೆಸರನ್ನಿಟ್ಟು ಅದರ ಜೀವಂತಿಕೆಗೆ 'ಅಲ್‌ಫಿದಾ' ಎಂಬ ಹೆಸರಿನಲ್ಲಿ ಮಲಯಾಳಂ ಹಸ್ತಲಿಪಿ ಮಾಸ ಪತ್ರಿಕೆಗೆ ಯೋಜನೆ ಹಾಕಿದೆವು. 1990 ಜನವರಿ 16 ಮಂಗಳವಾರದಂದು ಸಿದ್ಧಗೊಂಡ ಅದರ ಪ್ರಮಥ ಸಂಚಿಕೆಯನ್ನು ಬಿಡುಗಡೆಗೊಳಿಸಿದ ನನ್ನ ತಂದೆ 'ಅಲ್‌ಫಿದಾ'ಗೆ ಬದಲಾಗಿ 'ಅಲ್‌ಹುದಾ' ಎಂದು ಹೆಸರಿಡುವಂತೆ ಹಿತನುಡಿದರು. ಆದರೆ ಆ ನಂತರ ಯಾವ ಹೆಸರಲ್ಲೂ ಆ ಪತ್ರಿಕೆ ಹೊರ ಬಂದದ್ದು ನನಗೆ ನೆನಪಿಲ್ಲ. 1990 ಮಾರ್ಚ್ 2, 1410 ಶಅಬಾನ್ 4 ಶುಕ್ರವಾರ ಉಪ್ಪಿನಂಗಿಡಯಲ್ಲಿ ಅಲೀಕುಂಞಿ ಉಸ್ತಾದರು ದರ್ಸ್ ರಜೆ ಕೊಟ್ಟದ್ದೂ ಅಲ್ಲದೆ ಯಾತ್ರೆಯ ಅನನುಕೂಲತೆ ಮತ್ತಿತರ ಆರೋಗ್ಯ ಕಾರಣಗಳಿಂದ ಶೈಖುನಾ ಉಪ್ಪಿನಂಗಡಿಯಿಂದ ರಾಜೀನಾಮೆ ನೀಡಿ ಮುಂದಿನ ವರ್ಷ ಕಾಞಂಗಾಡ್ ಸಮೀಪದ ಬಲ್ಲಾಕಡಪ್ಪುರಂನಲ್ಲಿ ದರ್ಸ್ ವಹಿಸಿಕೊಂಡರು. ನನ್ನ ಕೇರಳದ ಸೆಳೆತ ಸಾಕಾರಗೊಂಡ ವರ್ಷವದು, ಮೂರು ವರ್ಷಗಳ ಕರ್ನಾಟಕದ ದರ್ಸ್‌ಗಳ ನಂತರತ ದರ್ಸ್ ಜೀವನಕ್ಕೆ ಕೇರಳಕ್ಕೆ ಸ್ಥಳಾಂತರಗೊಂಡಿತ್ತು. ಸಂತಸಕ್ಕೆ ಸೀಮೆಯಿಲ್ಲದ ದಿನಗಳವು. ಉಪ್ಪಿನಂಗಡಿಗಿಂತ ಹೆಚ್ಚು ಮುತಅಲ್ಲಿಮರು, ಸುಸಜ್ಜಿತವಾದ ಮಸ್ಜಿದ್, ದರ್ಸ್ ಹಾಲ್, ಪರಿಸರ... ಎಲ್ಲವೂ ಬೆಳವಣಿಗೆಗೆ ಪೂರಕವಾಗಿದ್ದವು. ಆದರೆ ಯಾಕೋ, ಆ ವರ್ಷ ದರ್ಸ್‌ನಲ್ಲಿ ಸಾಹಿತ್ಯ ಸಮಾಜ ಪ್ರಾರಂಭಿಸಲು ಶೈಖುನಾ ಅಲೀ ಕುಂಞಿ ಉಸ್ತಾದ್ ಮುಂದಾಗಲೇ ಇಲ್ಲ. ಆದ್ದರಿಂದ ಅಲ್ಲಿ ವರ್ಷ ಪೂರ್ತಿ ಶುಕ್ರವಾರ ಉರ್ದಿಯ ಹಿಂದೆಯೇ ಬೀಳಬೇಕಾಯಿತು. 1990ಮೇ 9 ಬುಧವಾರ ಬಲ್ಲಾ ಕಡಪುರಂನಲ್ಲಿ ನಮ್ಮ ದರ್ಸ್‌ನ್ನು ಸ್ಥಳೀಯ ಖಾಝಿಯಾಗಿದ್ದ ಮರ್‌ಹೂಂ ಪಿ.ಎ. ಅಬ್ದುಲ್ಲ ಉಸ್ತಾದ್ ಉದ್ಘಾಟಿಸಿದ್ದರು. ದರ್ಸ್‌ನಲ್ಲಿ ಭಾಷಣ ತರಬೇತಿಗೆ ವೇದಿಕೆಯಿಲ್ಲದಿದ್ದರೂ ಕಾಞಂಗಾಡ್ ಪರಿಸರದಲ್ಲಿ ಆಗಾಗ ವಿವಿಧ ವಿಷಯಗಳ ಸಭೆ, ಸಮ್ಮೇಳನ, ನಡೆಯುತ್ತಿದ್ದು, ವಿವಿಧ ವರ್ಗದ ಜನರ ಭಾಷಣಗಳನ್ನು ಆಲಿಸಿ ಅವರ ಶೈಲಿ, ಭಾಷೆ ಮತ್ತು ಪ್ರಯೋಗಗಳನ್ನು ಅಧ್ಯಯನ ಮಾಡಲು ಸಾಧ್ಯವಾಗಿತ್ತು. ಆ ಬಾರಿಯ ಮೀಲಾದುನ್ನಬಿ ಕಾರ್ಯಕ್ರಮದ ಪ್ರಯುಕ್ತ ಕಾಞಂಗಾಡ್ ನಗರದಲ್ಲಿ ನಡೆದ ಸಮ್ಮೇಳನದಲ್ಲಿ ಖ್ಯಾತ ವಾಗ್ಮಿ ವಯಲಿತ್ತರ ಮುಹಮ್ಮದ್ ಕುಂಞಿ ಮುಸ್ಲಿಯಾರ್‌ರ ಭಾಷಣ ಅಗಾಧ ಪ್ರಭಾವ ಬೀರಿತ್ತು. ಸಾಮಾನ್ಯ ಉಲಮಾಗಳ 'ವಅಳ್'ಗಿಂತ ಭಿನ್ನವಾದ ಶೈಲಿ, ನಿರೂಪಣೆಯ ಭಂಗಿ ಇತರ ಭಾಷೆಗಳ ಉಲ್ಲೇಖಗಳು, ಮನಮುಟ್ಟುವ ಉದಾಹರಣೆಗಳು ವಯಲಿತ್ತರ ವಅಳಿನ ವಿಶೇಷತೆಗಳಾಗಿದ್ದವು. ಆ ವರೆಗೆ ಹೇಳಿ ಕಲಿತಿದ್ದಕ್ಕಿಂತ ಭಿನ್ನವಾಗಿ ಬಲ್ಲಾ ಕಡಪುರಂ ಜೀವನ ಕೇಳಿ ಕಲಿಯಲು ವಿಪುಲವಾದ ಅವಕಾಶ ಒದಗಿಸಿಕೊಟ್ಟಿತ್ತು.

# 4

## ಆತ್ಮ ಸಂಘರ್ಷದಿಂದ ಮುಕ್ತಿ ಹುಡುಕುತ್ತಾ, ಒಂದು ಆಧ್ಯಾತ್ಮ ಪ್ರಯಾಣ

ಸಾರ್ವಜನಿಕ ಭಾಷಣದ ಯಶಸ್ಸಿಗೆ ಅತ್ಯಂತ ಮುಖ್ಯವಾದದ್ದು ಧೈರ್ಯ. ಭಾಷಣದ ಸಿದ್ಧತೆಯಿಂದ ತೊಡಗಿ ಭಾಷಣ ವೇದಿಕೆಯಿಂದ ಇಳಿಯುವವರೆಗೂ ಮನಸ್ಸು ಬಲವಾಗಿರಬೇಕು. ಸಭಾ ಕಂಪನ (Stagefear) ಎಂಬುದು ಭಾಷಣದ ಅತಿ ದೊಡ್ಡ ಶತ್ರು. ಉದ್ದೇಶಿತ ವಿಚಾರಗಳನ್ನು ಉದ್ದೇಶಿತ ರೀತಿಯಲ್ಲಿ ಹೇಳಿ ಮುಗಿಸ ಬೇಕಾದರೆ ಮನಸ್ಸು ಕಂಪನ ಮುಕ್ತವಾಗಿ ರಬೇಕು. ಕೇವಲ ಮನಃ ಶಕ್ತಿ ಒಂದೇ ಅಲ್ಲದೆ ಅತಿಯಾದ ಉತ್ಸಾಹ, ಸ್ಫೂರ್ತಿ ಯೂ ಜತೆಗಿರಬೇಕು. ಇಲ್ಲದೆ ಹೋದರೆ ವಿಷಯಗಳು ಮನಸ್ಸಿನಿಂದ ಇಳಿದು ಬರಲು ಕೇಳುವುದೇ ಇಲ್ಲ. ಇದರಿಂದ ಭಾಷಣದ ಮೇಲಿನ ಆಸಕ್ತಿ ಕಳೆದು ಹೋಗಿ, ವಿಷಯ ವೂ ಶೈಲಿಯೂ ಸಿಗದೆ ವೇದಿಕೆ ಮೇಲೆ ನಿಂತು ಗಿರಕಿ ಹೊಡೆಯಬೇಕಾಗಿ ಬರುವು ದರಲ್ಲಿ ಅನುಮಾನ ಬೇಡ. ಇಂತಹ ಅನುಭವಗಳು ಅನೇಕ ಭಾಷಣಗಾರರ ಭವಿಷ್ಯವನ್ನೇ ಅಳಿಸಿ ಹಾಕಿದೆ.

ಭಾಷಣ ಕಲೆಯು ಒಂದು ವಿಶಿಷ್ಟ ಕಲೆ ಎನ್ನಬಹುದು. ವೇದಿಕೆಯ ಮೇಲೇರಿ ನಿಂತು ಬೃಹತ್ ಜನಸ್ತೋಮವನ್ನುದ್ದೇಶಿಸಿ ಮಾತನಾಡಲು ಅಲ್ಲಾಹನ ವಿಶೇಷ ಅನುಗ್ರಹ ಇರಲೇ ಬೇಕು. ಕೆಲವರಾದರೂ ಭಾವಿಸಿದಂತೆ ವೇದಿಕೆ ಮತ್ತು ಮೈಕ್ ಕಂಡಲ್ಲೆಲ್ಲಾ ಒಬ್ಬ ವಾಗ್ಮಿಗೆ ಭಾಷಣ ಕೊಡಲು ಸಾಧ್ಯವಾಗಬೇಕೆಂದಿಲ್ಲ. ಅದಕ್ಕೆ ಅದರದೇ ಆದ ಮಾನಸಿಕ ಸಿದ್ಧತೆ ಮತ್ತು ಸ್ಫೂರ್ತಿಬೇಕು. ವೇದಿಕೆಯ ಎತ್ತರ, ಮೈಕ್ ಮತ್ತು ಭಾಷಣ ಪೀಠದ ಹೊಂದಾಣಿಕೆ, ವೇದಿಕೆ ಮತ್ತು ಸಭಿಕರ ನಡುವಿನ ಅಂತರ, ವೇದಿಕೆಯಲ್ಲಿ ಕೆಲವರ ಅಹಿತಕರ ಸಾನಿಧ್ಯ, ರಸ್ತೆ ಬದಿಯ ಸಭೆಗಳಲ್ಲಿ ನಡುನಡುವೆ ಉಂಟಾಗುವ ವಾಹನಗಳ ಗದ್ದಲ, ಕರ್ಕಶ ಹಾರ್ನ್, ಎಡೆಯಲ್ಲಿ ಮೈಕ್ ಕೈ ಕೊಡುವುದು, ಕರೆಂಟ್ ಹೋಗುವುದು, ಸಭೆಯಿಂದ ಜನರು ಎದ್ದು ಹೋಗುತ್ತಾ ಇರುವುದು, ಸಂಘಟಕರು ಮಧ್ಯೆ ಬೇರೆ ಬೇರೆ ಮಾಹಿತಿಯ ಚೀಟಿ ಕೊಡುವುದು ಇವೆಲ್ಲವೂ ಒಬ್ಬ ಭಾಷಣಗಾರನ ಏಕಾಗ್ರತೆಯನ್ನು ಸಂಪೂರ್ಣ ಕಸಿದು, ನಿಷ್ಕ್ರಿಯಗೊಳಿಸಿ ಬಿಡಬಲ್ಲುದು. ಹಿಂದಿನ ಕಾಲದ ವಾಗ್ಮಿಗಳು ತಮ್ಮನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲು ಬಂದಾಗಲೇ ತಮ್ಮ ಬೇಡಿಕೆಗಳ ಪಟ್ಟಿಯನ್ನು ಸಂಘಟಕರ ಮುಂದೆ ಇಡುತ್ತಿದ್ದರು. ಆಹಾರದ ಮೆನು, ವಾಸ್ತವ್ಯದ ನೆಲೆ, ಮೈಕ್‌ನ ನಿಬಂಧನೆ ಎಲ್ಲವೂ ಇದರಲ್ಲಿ ಸೇರಿತ್ತು. ಸಂಘಟ ಕರೂ, ವಾಗ್ಮಿಗಳೂ ಭಾರೀ ಕಡಿಮೆಯಿದ್ದ ಆ ಕಾಲದಲ್ಲಿ ಮುಸ್ಲಿಂ ಮತ ಪ್ರವಚನ ಕಾರ್ಯಕ್ರಮಗಳಲ್ಲಿ ಇದು ಬಹುಮಟ್ಟಿಗೆ ನಡೆಯುತ್ತಿತ್ತು. ಆದರೆ ಸಂಘಟಕರೂ, ಸಂಘ ಸಂಸ್ಥೆಗಳ ಹೆಚ್ಚಳವೂ, ಬೇಕಾದಷ್ಟು ವಾಗ್ಮಿಗಳ ಲಭ್ಯತೆಯೂ ಸಾಂಘಿಕ ಕಾರಣಗಳಿಂದ ಕೆಲವೊಂದು ಕಾರ್ಯಕ್ರಮಗಳಿಗೆ ಸಂಘಟನಾ ನಾಯಕರು ತೆರಳಿ ಮಾತನಾಡಲೇ ಬೇಕಾದ ಅನಿವಾರ್ಯತೆಯೂ ಇವತ್ತಿನ ಕಾಲದಲ್ಲಿ ಬಂದೊದಗಿದಾಗ ಭಾಷಣಕಾರರು ತಮ್ಮ ಬೇಡಿಕೆಗಳೊಂದಿಗೆ ತಾವೇ ರಾಜಿಯಾಗಬೇಕಾದ ಸ್ಥಿತಿ ಬಂದಿದೆ. ನಿರಂತರ ಭಾಷಣಗಳಿಗೆ ದೀರ್ಘ ಯಾತ್ರೆಗಳು, ಕಠಿನ ದೈಹಿಕ ಪರಿಶ್ರಮ, ಮಾನಸಿಕ ಒತ್ತಡ, ಹಾಗೂ ತಾಸುಗಟ್ಟಲೆ ಯಾತ್ರೆಗಳು ಮುಂದೆ ನಿಂತು ಏರು ಧ್ವನಿಯಲ್ಲಿ ನಿರರ್ಗಳವಾಗಿ ಮಾತನಾಡುವುದರಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮ ಕಿರಿದಲ್ಲ. ತಮ್ಮ ಆರೋಗ್ಯದ ಮೇಲೆ ಅಪಾರ ಕಾಳಜಿ ವಹಿಸದ ಭಾಷಣಗಾರರಿಗೆ ಹೆಚ್ಚು ಕಾಲ ಈ ಕ್ಷೇತ್ರದಲ್ಲಿ ಉಳಿಯುವುದಕ್ಕೂ ಸಾಧ್ಯವಿಲ್ಲ. ಸಂಘಟಕರು ಇದನ್ನು ಅರಿತು ತಮ್ಮ ಭಾಷಣಕಾರರನ್ನು ಸರಿಯಾಗಿ ನೋಡಿಕೊಳ್ಳಲು ಮುಂದಾಗಬೇಕು. ಕೆಲವು ಸಂಘಟಕರ ಆದರಾದಿತ್ಯಗಳು ಪ್ರಖ್ಯಾತ ವಾಗ್ಮಿಗಳ ಪಾಲಿಗೆ ಮಾತ್ರ ಸೀಮಿತ ವಾಗಿದ್ದು ಉಳಿದವರು ಬಂದು ಭಾಷಣ ಆರಂಭಿಸುವ ತನಕ ಮಾತ್ರ ಜತೆಗಿರುತ್ತಾರೆ. ಅವರು ತಮ್ಮ ಮಾತು ಮುಗಿಸಿದ ಮೇಲೆ ಒಂದು ಲೋಟ ನೀರಿಗೂ ಪರದಾಡಬೇ ಕಾಗುತ್ತದೆ. ವೇದಿಕೆಯಿಂದ ಇಳಿದು ಯಾವ ಕಡೆ ಹೋಗಬೇಕೆಂದು ದಾರಿ ತೋರಿಸಲೂ ಅಲ್ಲಿ ಅವರಿರುವುದಿಲ್ಲ. ಇದರಿಂದ ಪಾರಾಗಲು ಭಾಷಣಗಾರ ತನ್ನ ಬದುಕಿಗೆ ತಾನೇ ಕೆಲವು ಷರತ್ತುಗಳನ್ನು ವಿಧಿಸಿ ಕೊಳ್ಳುವುದು ಒಳಿತು.

ಭಾಷಣಗಳ ಬದುಕಿನಲ್ಲಿ ಸ್ವಯಂ ಕಳೆದು ಹೋಗದೆ ಭಾಷಣಗಾರರು ಹೊಸ ಹೊಸ ವಿಚಾರಗಳನ್ನು ಕಲಿಯುವ ಪ್ರಯತ್ನ ಮಾಡಬೇಕು. ಸಭಿಕರು ಯಾವತ್ತೂ ಒಂದೇ ವಿಷಯದ ಪ್ರವಚನ ಕೇಳಲು ಆಸಕ್ತಿ ತೋರುವುದಿಲ್ಲ. ವಿಷಯಗಳ ನಿರಂತರ ಪುನರಾವರ್ತನೆಯು ಭಾಷಣಗಾರನ ವ್ಯಕ್ತಿತ್ವವನ್ನೇ ಹಾಳು ಮಾಡಿ ಬಿಡುತ್ತದೆ. ಧಾರ್ಮಿಕ ಪ್ರವಚನಗಳು ಆಯಾ ಕಾಲಕ್ಕೆ ಹೊಂದಿಕೊಂಡ ವಿಷಯಗಳ ಚರ್ಚೆಗಳನ್ನೂ ಒಳಗೊಂಡು ಜನರಿಗೆ ಅರಿವು ಮೂಡಿಸುವ ಉದ್ದೇಶ ಹೊಂದಿದ್ದರೆ ಸಾರ್ವಜನಿಕ ಭಾಷಣಗಳು ಆಯಾ ಕಾಲದ ಪ್ರಮುಖ ವಿದ್ಯಮಾನಗಳ ಬಗ್ಗೆ ಜನಾಭಿಪ್ರಾಯ ರೂಪಿಸಲು ಸಹಕಾರಿಯಾಗಬೇಕು.

ಒಬ್ಬ ಪ್ರಬುದ್ಧ ವಾಗ್ಮಿ ನಿಯತಕಾಲಿಕ ಪತ್ರಿಕೆಗಳಂತೆ ಯಾವಾಗಲೂ Update ಆಗಿರಬೇಕು. ಕನಿಷ್ಠ ದಿನಕ್ಕೆ ಮೂರು ದಿನ ಪತ್ರಿಕೆಗಳು, ಪ್ರಚಲಿತ ವಾರ, ಮಾಸ ಪತ್ರಿಕೆಗಳು, ವಿಶೇಷವಾಗಿ ಪತ್ರಿಕೆಗಳ ಸಂಪಾದಕೀಯ ಓದಿರಬೇಕು. ಅದರ ಪ್ರಮುಖ ಮಾಹಿತಿಗಳನ್ನು ತನ್ನ ಭಾಷಣ ಡೈರಿಯಲ್ಲಿ ಬರೆದು ಸಂದರ್ಭೋಚಿತವಾಗಿ ಬಳಸಬೇಕು. ದಿನಪತ್ರಿಕೆಗಳ ಓದಿಗಾಗಿ ದಿನಕ್ಕೆ ಇಂತಿಷ್ಟು ಸಮಯ ಮೀಸಲಿಡು ವಂತೆ ಉಳಿದ ಪತ್ರಿಕೆಗಳು, ಪುಸ್ತಕಗಳ ಓದಿಗಾಗಿ ವಾರದಲ್ಲಿ ಅರ್ಧ ದಿನವಾದರೂ ಕಾದಿರಿಸಬೇಕಾಗುವುದು. ಇವುಗಳ ಕೊರತೆಯಲ್ಲಿ ಭಾಷಣಗಾರನ ಆತ್ಮವಿಶ್ವಾಸಕ್ಕೆ ಧಕ್ಕೆ ಬರುವುದು.

ಹೀಗೆ ಮನಸ್ಥೈರ್ಯ ಮತ್ತು ಆತ್ಮ ವಿಶ್ವಾಸವನ್ನು ಹೆಚ್ಚಿಸಲು ನಿರಂತರ ಕಲಿಕೆಯ ಜತೆಗೆ ಆಧ್ಯಾತ್ಮಿಕ ಬೆಂಬಲವೂ ಅತ್ಯಗತ್ಯವೆಂದು ನಾನು ನನ್ನ ಬದುಕಿನಿಂದ ಕಂಡು ಕೊಂಡಿದ್ದೇನೆ. ಶಾಲೆ ಮತ್ತು ಮದ್ರಸದ ಕಲಿಕೆಯಲ್ಲಿ ಮುಂದಿದ್ದರೂ ಜನರೊಂದಿಗಿನ ಒಡನಾಟ, ಮಾತುಕತೆ, ಸಾರ್ವಜನಿಕ ಸಂಪರ್ಕ ಚಿಕ್ಕಂದಿನಲ್ಲಿ ನನಗೆ ಸರಿ ಹೋಗುತ್ತಲೇ ಇರಲಿಲ್ಲ. ಒಂದಿಬ್ಬರು ಖಾಸಗಿ ಮಿತ್ರರನ್ನು ಬಿಟ್ಟರೆ ನನಗೆ ಹೆಚ್ಚಿನ ಸ್ನೇಹಿತರು ಇರಲಿಲ್ಲ. ನನ್ನದೇ ಆದ ವಲಯದಿಂದ ಹೊರ ಹೋದರೆ ನಾನೊಬ್ಬ ಅಂತರ್ಮುಖಿಯೂ ಅತೀವ ಹಿಂಜರಿಕೆಯ ಗುಣದವನೂ ಆಗಿದ್ದೆ. ನನ್ನೆಲ್ಲ ಬೆಳವಣಿಗೆಗೆ ಈ ಸ್ವಭಾವ ಅಡ್ಡಿಯಾಗಿತ್ತು. ಮದ್ರಸ, ದರ್ಸ್ ಸಾಹಿತ್ಯ ಸಮಾಜಗಳು ಮತ್ತು ಶುಕ್ರವಾರದ ಉರ್ದಿಗಳ ಮೇಲೆ ಈ ಗುಣ ಅಷ್ಟೊಂದು ಹೊಡೆತ ನೀಡಿಲ್ಲದಿದ್ದರೂ ಉಳಿದ ವೇಳೆಗಳಲ್ಲಿ ಒಂಟಿತನ ಕಾಡುತ್ತಿತ್ತು. ಮನಸ್ಸು ಭಾರವಾಗುತ್ತಿತ್ತು. ಈ ಅವಸ್ಥೆಯಿಂದ ಹೊರಬಾರದಿದ್ದರೆ ನನ್ನ ಭವಿಷ್ಯ ಬೆಳಗದು ಎಂದು ಮನಸ್ಸು ನಿರಂತರ ಎಚ್ಚರಿಸುತ್ತಿತ್ತು. ಆದರೆ ಇದಕ್ಕೆ ಪರಿಹಾರ ಏನೆಂದು ಯಾರಲ್ಲೂ ಕೇಳುವುದಕ್ಕೆ ಕೂಡಾ ಮನಸ್ಸು ಒಪ್ಪುತ್ತಿರಲಿಲ್ಲ. ಒಳಗೊಳಗೇ ಕೊರಗು, ಉದ್ವೇಗ, ನಿರಂತರ ಆತ್ಮ ಸಂಘರ್ಷದ ಪಂಜರದಲ್ಲಿ ನಾನು ಅಸಹಾಯಕನಾಗಿ ಬಿದ್ದು ಬಿಡುತ್ತಿದ್ದೆ. ಒಂದು ಹಂತದಲ್ಲಿ ನನಗೆ ಜತೆಯಾಗಿ ಇರುತ್ತಿದ್ದುದು ಪುಸ್ತಕಗಳು ಮಾತ್ರ. ತಂದೆಯ ಶೇಖರಣೆಯಲ್ಲಿದ್ದ ಹಳೆಯ ಕಾಲದ ಮಲಯಾಳಂ ಪತ್ರಿಕೆಗಳು ಮತ್ತು ಪುಸ್ತಕಗಳನ್ನು ಅವಲಂಬಿಸಿ ಒಂಟಿತನ ಮತ್ತು ಅಸಹಾಯಕತೆಯ ಕೂಪದಿಂದ ಹೊರಬರಲು ಹವಣಿಸುತ್ತಿದ್ದೆ.

ನಿಜ ಹೇಳಬೇಕೆಂದರೆ ನನ್ನ ಹೈಸ್ಕೂಲ್ ಜೀವನ ಮತ್ತು ಪಳ್ಳಿದರ್ಸ್‌ನ ಮೊದಲ ವರ್ಷಗಳು ಆತ್ಮ ಸಂಘರ್ಷದ ಪರಾಕಾಷ್ಠೆಯದ್ದಾಗಿದ್ದುವು. ಆದರೆ ಇದಕ್ಕೆ ಸರಿಯಾದ ಕಾರಣಗಳೂ ಇರಲಿಲ್ಲ. ನಾನು ಎತ್ತರಕ್ಕೆ ಬೆಳೆಯಬೇಕು, ನನ್ನ ಮನಃಸ್ಥಿತಿ ಇದಕ್ಕೆ ಅನುಮತಿಸುವುದಿಲ್ಲ ಎಂಬ ಆತಂಕ ನಿತ್ಯ ಕಾಡುತ್ತಿತ್ತು. ಇದರಿಂದ ಹೊರ ಬರಲು ಮನಸ್ಸಿನಲ್ಲೇ ದೃಢ ಪ್ರತಿಜ್ಞೆ ಮಾಡಿದೆ. ಇರುವ ಪರಿಸ್ಥಿತಿಯಿಂದ ಹೊರಬಾರದಿದ್ದರೆ ಬದುಕೇ ಕತ್ತಲುಮಯವಾಗಿ ಬಿಡಬಹುದಾದಷ್ಟು ನಾನು ಆ ದಿನಗಳಲ್ಲಿ ಖಿನ್ನನಾಗಿದ್ದೆ. 1990 ಡಿಸೆಂಬರ್ 23ರಿಂದ 31ರವರೆಗಿನ ದಿನಗಳನ್ನು ನನ್ನ ಡೈರಿಯ ಪುಟಗಳಲ್ಲಿ 'ಅತೀವ ದುಃಖಭರಿತ ದಿನಗಳು' ಎಂದು ನಮೂದಿಸಿಟ್ಟಿದ್ದೇನೆ. ನನ್ನ ಪ್ರಗತಿಗೆ ನನ್ನ ಪರಿಸ್ಥಿತಿ ಖಂಡಿತಾ ಪೂರಕವಾಗಿಲ್ಲ ಎಂಬ ಅನಗತ್ಯ ವಿಚಾರಗಳ ಘೋಷಯಾತ್ರೆ ಈ

ಅವಸ್ಥೆಗೆ ಕಾರಣವಾಗಿದ್ದಿರಬಹುದು. ಜತೆಗೆ ಮನೆಯ ಆರ್ಥಿಕ ಸ್ಥಿತಿಯೂ ಚೆನ್ನಾಗಿರಲಿಲ್ಲ. ದುರ್ಬಲವಾದ ಮನೆಯ ನವೀಕರಣ, ಹೆಣ್ಣು ಮಕ್ಕಳ ವಿವಾಹಗಳ ವಿಚಾರದಲ್ಲಿ ಅದಾಗಲೇ ಚಿಂತಿತರಾಗಿದ್ದ ತಂದೆ ಹಿರಿಯ ಮಗನಾದ ನನ್ನನ್ನು ವಿದೇಶಕ್ಕೆ ಕೆಲಸಕ್ಕೆ ಕಳುಹಿಸಿ ತನಗೆ ಆರ್ಥಿಕ ಬೆಂಬಲ ಒದಗಿಸಿಕೊಳ್ಳುವ ನಿರ್ಧಾರದಲ್ಲಿದ್ದರು. ಅದು ಅವರ ಮಟ್ಟಿಗೆ ಅನಿವಾರ್ಯವೂ ನ್ಯಾಯ ಸಮ್ಮತವೂ ಆದ ವಿಚಾರವಾಗಿತ್ತು.

ಕಲಿತು ಮುಸ್ಲಿಯಾರ್ ಆಗಿ ತಂದೆಯಂತೆ ವಾಗ್ಮಿಯೂ ಸಂಘಟನಾ ನಾಯಕನೂ ಆಗುವ ಕನಸು ಕಂಡಿದ್ದ ನನಗೆ ದರ್ಸ್ ಜೀವನ ಮೊಟಕುಗೊಳಿಸಿ ಗಲ್ಫ್ ಸೇರುವ ಇಚ್ಛೆ ಸುತರಾಂ ಇರಲಿಲ್ಲ. ಆದರೆ ತಂದೆಯ ಕನಸಿಗೆ ನೀರೆರಚಲು ಸಾಧ್ಯವೂ ಇರಲಿಲ್ಲ. 1990 ಡಿಸೆಂಬರ್ 25 ಮಂಗಳ ವಾರದ ನನ್ನ ರಿಸಾಲ ಡೈರಿಯಲ್ಲಿ 'ಇಂದು ಬೆಳಗ್ಗೆ ಕಠಿನ ಆರ್ಥಿಕ ಮುಗ್ಗಟ್ಟಿನಿಂದಾಗಿ ನಾನು ದರ್ಸ್ ನಿಲ್ಲಿಸಿ ಗಲ್ಫ್‌ಗೆ ಹೋಗುವ ಕುರಿತು ಯೋಚಿಸಲು ಶುರುಮಾಡಿದೆ' ಎಂದು ಬರೆದಿಟ್ಟಿದ್ದೆ. ಆದರೆ ಹಾಗಾಗದಿ ರಲಿ ಎಂಬ ಉದ್ದೇಶದಿಂದ ಇರಬೇಕು ಅದೇ ಪುಟದಲ್ಲಿ 'ಪ್ರತಿಯೊಂದು ವಸ್ತುವಿನ ಖಜಾನೆಯು ಅಲ್ಲಾಹು ಬಳಿಯಿದೆ' ಎಂಬ ಖುರ್‌ಆನ್ ವಚನವನ್ನು ಬರೆದಿದ್ದೆ. ಆಗ ನಾನು ಕಾಞಂಗಾಡ್-ಬಲ್ಲಾಕಡಪ್ಪುರಂ ನಲ್ಲಿ ಶೈಖುನಾ ಅಲೀಕುಂಞಿ ಉಸ್ತಾದರ ದರ್ಸ್‌ನಲ್ಲಿ ಕಲಿಯುತ್ತಿದ್ದೆ. ಆ ದಿನಗಳಲ್ಲಿ ಮನೋವಿಷಮದ ಜತೆ ಜ್ವರ ಹಾಗೂ ಕಣ್ಣು ನೋವಿನಿಂದಾಗಿ ಬದುಕಿನ ಕಡೆ ತೀವ್ರ ಜಿಗುಪ್ಸೆ ಉಂಟಾಗಿತ್ತು. 1990 ಸರಿದು 91ರ ಹೊಸವರ್ಷಕ್ಕೆ ಕಾಲಿಡುತ್ತಿದ್ದಂತೆ ಮನಸ್ಸು ಶಾಂತವಾಗತೊಡಗಿತು. ವರ್ಧಿತ ಹುಮ್ಮಸ್ಸಿನೊಂದಿಗೆ ಬದುಕನ್ನು ಹಳಿಗೆ ತರಲು ಹರಸಾಹಸ ಮಾಡಿದೆ. 91ಕ್ಕೆ ನೆಮ್ಮದಿಯಿಂದ ಮುಖ ಮಾಡುವಾಗಲೂ ಹೊಸ ವರ್ಷದ ಮೊದಲ ದಿನ ನನಗೆ ಸಯ್ಯಿದ್ ಸಾದಾತ್ ತಂಙಳ್‌ಗೆ ಕೊಡಲಿದ್ದ 5 ರೂಪಾಯಿ ಸೇರಿ ಒಟ್ಟು 44 ರೂಪಾಯಿ ಐವತ್ತು ಪೈಸೆ ಸಾಲವಿತ್ತು. ಅದೇ ಜನವರಿ 5 ಶನಿವಾರದ ಪುಟದಲ್ಲಿ ನಾನು ಈ ಸಾಲಗಳನ್ನೆಲ್ಲ ಸಂದಾಯ ಮಾಡಿ ಸಮಾಧಾನದ ನಿಟ್ಟುಸಿರು ಬಿಟ್ಟಿದ್ದೆ.

ಆತ್ಮ ಸಂಘರ್ಷದಿಂದ ಪಾರಾಗಲು ಆಧ್ಯಾತ್ಮಿಕ ವ್ಯಕ್ತಿಗಳ ಸಹಾಯ ಅನಿವಾರ್ಯವೆಂದು ಆ ಮೊದಲೇ ಕಂಡು ಕೊಂಡಿದ್ದರಿಂದ ಪ್ರಸಿದ್ಧ ಮಖ್‌ಬರಗಳ ಝಿಯಾರತ್ ಮತ್ತು ಬದುಕಿರುವ ಮಹಾತ್ಮರ ಸಂದರ್ಶನಕ್ಕೆ ಕಾರ್ಯಕ್ರಮ ಹಾಕಿಕೊಳ್ಳಲಾಗಿತ್ತು. ಉಪ್ಪಿನಂಗಡಿಯ ದರ್ಸ್ ಶಅ್‌ಬಾನ್‌ನಲ್ಲಿ ಮುಕ್ತಾಯ ವಾದಾಗ ಗೆಳೆಯ ಹಸೈನಾರ್ ಜತೆ ಮೊಟ್ಟ ಮೊದಲ ಕೇರಳ ಝಿಯಾರತ್ ಯಾತ್ರೆಗೆ ರೂಪುರೇಶೆ ಸಿದ್ಧಪಡಿಸಲಾಯಿತು. ಆಗ ಹಸೈನಾರ್ ದರ್ಸ್ ವಿದ್ಯಾಭ್ಯಾಸ ನಿಲ್ಲಿಸಿ ಕುಟುಂಬದ ಭಾರ ಹೆಗಲಿಗೇರಿಸಿಕೊಂಡು ಕಾಸರಗೋಡ್ ಜಿಲ್ಲೆಯ ಕುಂಬಳೆ ಸಮೀಪದ 'ಕೊಡಿಯಮ್ಮ' ಎಂಬಲ್ಲಿ ಮದ್ರಸಾಧ್ಯಪಕನಾಗಿ ಸೇರಿಕೊಂಡಿದ್ದ. 1990 ಮಾರ್ಚ್ 22, ಶಅ್‌ಬಾನ್ 24 (1410) ಗುರುವಾರ ಬೆಳಗ್ಗೆ, ನನ್ನ ತಂದೆ ಮುದರ್ರಿಸ್ ಆಗಿದ್ದ ಮೊಗ್ರಾಲ್ ಕಡಪ್ಪುರಂ ದೊಡ್ಡ ಜುಮಾ ಮಸೀದಿಯ ಮುಂಭಾಗದಲ್ಲಿ ಅಂತ್ಯ ವಿಶ್ರಮ ಪಡೆಯು ತ್ತಿರುವ ಸಯ್ಯಿದ್ ಅರಬಿ ಹಾಜಿ ತಂಙಳ್ ಮಖಾಂ ಝಿಯಾರತ್‌ನೊಂದಿಗೆ ಆರಂಭ ಗೊಂಡ ನಮ್ಮ ಆಧ್ಯಾತ್ಮಿಕ ಪ್ರಯಾಣ ಬೆಳಿಗ್ಗೆ 11.20ಕ್ಕೆ ಕುಂಬಳೆಯಿಂದ ರೈಲಿನ ಮೂಲಕ ಮುಂದುವರಿಯಿತು. ತೀರಾ ಲೋಕಲ್ ಆಗಿದ್ದ ಆ ರೈಲು ಬಂಡಿ ಹಳಿ ಯಲ್ಲಿ ಹಾದು ಹೋಗುವ ಒಂದೇ ಒಂದು ಸ್ಟೇಷನ್‌ನಲ್ಲೂ ನಿಲ್ಲಿಸದೆ ಬಿಡಲಿಲ್ಲ. ಅಪ ರಾಹ್ನ 2.40ಕ್ಕೆ ಅದು ಕಣ್ಣೂರು ತಲುಪುವ ವರೆಗಿನ ಎಲ್ಲ ಸ್ಟೇಷನ್‌ಗಳ ಹೆಸರನ್ನೂ ಆಗಾಗ ನಾನು ಬರೆದಿಡುತ್ತಿದ್ದೆ. ಅದು ನನ್ನ ಪ್ರಥಮ ರೈಲು ಯಾತ್ರೆಯ ರೋಮಾಂಚನ.

ಯಾತ್ರೆಯಲ್ಲಿ ನನಗುಂಟಾದ ವಿಶಿಷ್ಠ ಅನುಭವ ಶ್ರೇಷ್ಠ ಆಧ್ಯಾತ್ಮಿಕ ಗುರು ವಲಿಯ್ಯುಲ್ಲಾಹಿ ಕಕ್ಕಡಿಪ್ಪುರಂ ಅಬೂಬಕರ್ ಮುಸ್ಲಿಯಾರ್ ಅವರನ್ನು ಸಂದರ್ಶಿಸಲು ಅವಕಾಶ ಸಿಕ್ಕಿದ್ದು. ಆಗ ಸಾಕಷ್ಟು ವಯ ಸ್ಸಾಗಿದ್ದ ಅವರು ಶಾರೀರಿಕವಾಗಿ ದಣಿದಿ ದ್ದರು. 1990 ಮಾರ್ಚ್ 24 ಶನಿವಾರ ಬೆಳಿಗ್ಗೆ 11.30 ಗಂಟೆಗೆ ಅಲ್ಲಾಹನ ವಿಲಾ ಯತ್‌ನ ಪರಮ ಶಿಖರದಲ್ಲಿದ್ದ ಆ ಮಹಾ ತ್ಮರು ನನಗೆ ನಾರಿಯತ್ ಸ್ವಲಾತ್ ಮತ್ತು ಮಿತ್ರ ಹಸೈನಾರ್‌ಗೆ ಹದ್ದಾದ್‌ನ ಆಧ್ಯಾ ತ್ಮಾನುಮತಿ (ಇಜಾಝತ್) ದಯಪಾಲಿಸಿ ಅನುಗ್ರಹಿಸಿದರು. ಪುತ್ತನ್ ಪಳ್ಳಿ ಶೈಖ್, ವೆಳಿಯಂಗೋಡ್ ಉಮರ್ ಖಾಝಿ, ಪೊನ್ನಾನಿ ಮಖ್‌ದೂಂ, ಮಂಬುರಂ ಸೈದ ಲವಿ ತಂಙಳ್ ಮುಂತಾದ ಮಖ್‌ಬರಗಳಲ್ಲಿ ಝಿಯಾರತ್ ನಡೆಸಿ ನಾವು ಧನ್ಯರಾದೆವು.

ಮಧ್ಯೆ ಒಂದು ಕೆಟ್ಟ ಘಟನೆಯೂ ನಡೆಯಿತು. ಮಂಬುರಂ ಸಮೀಪದ 'ಚೆಮ್ಮಾಡ್'ನಲ್ಲಿ 'ಖುತುಬುಝ್ಝಮಾನ್ ನಗರ್' ಎಂಬ ಮೈದಾನದಲ್ಲಿ ಸಮ್ಮೇಳನ ವೊಂದು ನಡೆಯುತ್ತಿತ್ತು. ಸಾಮಾನ್ಯರೂ ಆಲಿಂ ವೇಷದಲ್ಲಿದ್ದವರೂ ಅಲ್ಲಿ ನೆರೆದಿ ದ್ದರು. ಕೌತುಕದಿಂದ ನಾವೂ ಹೋಗಿ ಸೇರಿ ಕೊಂಡೆವು. ನೋಡಿದರೆ ವೇದಿಕೆಯಲ್ಲಿದ್ದ ವರೆಲ್ಲ ದೆವ್ವ ಮೈ ಮೇಲೆ ಬಂದವರಂತೆ ಎ.ಪಿ. ಉಸ್ತಾದರನ್ನೂ ವಾಚಾಮಗೋಚರ ಬೈಯ್ಯುತ್ತಿದ್ದರು. 'ಕಾಂತಪುರಂ'ವಿರುದ್ಧದ ಪತ್ರಿಕೆಗಳೂ, ಕರಪತ್ರಗಳೂ ಭರ್ಜರಿಯಾಗಿ ವಿತರಣೆಯಾಗುತ್ತಿತ್ತು. ಸಮಸ್ತ ಇಬ್ಭಾಗ ವಾದ ಪ್ರಾರಂಭ ದಿನಗಳವು. ಭಿನ್ನ ಮತೀಯ ಎಸ್.ವೈ.ಎಸ್.ನ ಮಲಪ್ಪುರಂ ಜಿಲ್ಲಾ ಸಮ್ಮೇಳನವೆಂದು ಆಮೇಲೆ ಗೊತ್ತಾ ಯಿತು. 90 ಮಾರ್ಚ್ 25 ಭಾನುವಾರ ದಿನವಾಗಿತ್ತದು. ಅಲ್ಲಿಂದ ಅಪರಾಹ್ನ 1.15ಕ್ಕೆ ಕೋಝಿಕ್ಕೋಡ್‌ನಿಂದ ಹೊರಟು ಮಂಗಳಾ ಎಕ್ಸ್‌ಪ್ರೆಸ್‌ನಲ್ಲಿ 4.30ಕ್ಕೆ ಕಾಸರ ಗೋಡ್ ಬಂದಿಳಿದೆವು. ಬದುಕಿನಲ್ಲಿ ಆತ್ಮೋನ್ನತಿ ಸಾಧಿಸಬೇಕೆಂಬ ದೃಢ ಪ್ರತಿಜ್ಞೆಯೊಂದಿಗೆ.

# 5

## ಅನುಯೋಜ್ಯ ಭೂಮಿಕೆಯ ಹುಡುಕಾಟದಲ್ಲಿ...

1991ನೇ ವರ್ಷದ ಆಗಮನ ವಿಶ್ವಕ್ಕೆ ಯುದ್ಧಭೀತಿಯ ಕೊಡುಗೆಯೊಂದಿಗಾಗಿತ್ತು. ಜಗತ್ತಿನ ಪುಟ್ಟ ಸ್ವರ್ಗ ಕುವೈತ್‌ನ ಮೇಲೆ ಇರಾ ಖಿನ ಸರ್ವಾಧಿಪತಿ ಸದ್ದಾಮ್ ಹುಸೈನ್ ದಾಳಿ ಯಿಟ್ಟು ಕುವೈತನ್ನು ತನ್ನ ವಸಾಹತಾಗಿ ಇಟ್ಟು ಕೊಳ್ಳಲು ಬಯಸಿದ್ದ. ಕುವೈತಿನ ಆಡಳಿತ ದಿನ ಬೆಳಗಾಗುವುದರೊಳಗೆ ಸೌದಿ ಅರೇಬಿಯಾಕ್ಕೆ ಓಡಿ ಹೋಗಿ ಆಶ್ರಯ ಪಡೆಯಿತು. ಮುಂದೆ ಅಮೆ ರಿಕಾ ನೇತೃತ್ವದಲ್ಲಿ ಪ್ರಬಲ ರಾಷ್ಟ್ರಗಳೆಲ್ಲವೂ ಸದ್ದಾಮಿನ ವಿರುದ್ಧ ಪ್ರತಿದಾಳಿ

ನಡೆಸುವ, ಆ ಮೂಲಕ ಗಲ್ಫ್ ಯುದ್ಧ ಎನ್ನುವ ವಿಪತ್ತಿಗೆ ಜಗ ತ್ತನ್ನು ತಳ್ಳುವ ಭಯಾನಕ ಪರಿಸ್ಥಿತಿಗೆ ಈ ಅನ ಗತ್ಯ ಆಕ್ರಮಣದ ಮೂಲಕ ಸದ್ದಾಂ ಕಾರಣನಾದ. 1991 ಜನವರಿ 17 ಗುರುವಾರ ಬೆಳಗ್ಗಿನ ಜಾವ 3.20ಕ್ಕೆ ಇರಾಖ್ ರಾಜಧಾನಿ, ಇಸ್ಲಾಮಿನ ಸಾಂಸ್ಕೃ ತಿಕ ಕೇಂದ್ರವಾಗಿ ಸಹಸ್ರಮಾನಗಳಿಂದ ತಲೆ ಯೆತ್ತಿನಿಂತ ಬಗ್‌ದಾದ್‌ನ ಮೇಲೆ ಅಮೆರಿಕಾ ನೇತೃತ್ವದ ಬಹುರಾಷ್ಟ್ರ ಸೇನೆ ಭೀಕರ ಬಾಂಬ್ ಆಕ್ರಮಣ ನಡೆಸುವ ಮೂಲಕ ಪ್ರಾರಂಭವಾದ ಗಲ್ಫ್ ಯುದ್ಧ ಫೆಬ್ರವರಿ 28ರ ಬೆಳಿಗ್ಗೆ 10.30ಕ್ಕೆ ಮುಕ್ತಾಯಗೊಂಡಿತು ಎಂದು ನನ್ನ ಡೈರಿಯ ಪುಟಗಳಲ್ಲಿ ಬರೆಯಲಾಗಿದೆ. ಹೀಗೆ ಯುದ್ಧ ವಿವರಗಳನ್ನು ಪ್ರತಿಪುಟದಲ್ಲೂ ನಮೂದಿಸಿದ ನಾನು ಆ ಬಗ್ಗೆ ಅಷ್ಟೊಂದು ತಲೆಕೆಡಿಸದೆ ನನ್ನ ಆತ್ಮ ಸಂಘರ್ಷದ ಯುದ್ಧ ಗೆಲ್ಲುವ ಹೊಸ ತಂತ್ರ ಗಳ ತಲಾಶು ನಡೆಸುತ್ತಿದ್ದೆ. ಬದುಕಿರುವ ಮಹಾ ತ್ಮರನ್ನು ಸಂದರ್ಶಿಸಿ 'ಇಜಾಝುತ್' ಪಡೆದು, ದುಆ ಮಾಡಿಸಿ ಬದುಕು ಧನ್ಯಗೊಳಿಸುವ ಯಜ್ಞ ಮುಂದುವರಿಯುತ್ತಿದ್ದಂತೆ ಇಬ್ಬರು ಆಧ್ಯಾತ್ಮ ಚಕ್ರವರ್ತಿಗಳ ಸಂದರ್ಶನಕ್ಕೆ ಸೌಭಾಗ್ಯ ಒದಗಿ ಬಂತು.

ಕೋಝಿಕ್ಕೋಡ್ ಜಿಲ್ಲೆಯ 'ಕಾಪಾಡ್' ಎಂಬಲ್ಲಿನ ಖಾಝಿಯಾಗಿದ್ದ ಕುಂಞಿ ಹಸನ್ ಮುಸ್ಲಿಯಾರ್ ಸಾವಿರಾರು ಜನರ ಆಶಾಕೇಂದ್ರ ವಾಗಿದ್ದರು. ಶಾರೀರಿಕ, ಮಾನಸಿಕ ರೋಗಗಳಿಂದ ಬಳಲುವ, ಒಂದು ಹನಿ ಸಾಂತ್ವನಕ್ಕಾಗಿ ತುಡಿ ಯುವ ನೂರಾರು ಜನ ಪ್ರತಿದಿನ ಅವರನ್ನು ಸಂದ ರ್ಶಿಸಿ ಧನ್ಯರಾಗುತ್ತಿದ್ದರು. ಅವರ ಕುರಿತು ನನ್ನ ತಂದೆ ಮಾಹಿತಿ ನೀಡಿದ್ದರು. 'ಹವ್‌ಖಲತ್'ನ ಇಜಾಝುತ್ ನೀಡುವುದರಲ್ಲಿ ಪ್ರಖ್ಯಾತರಾಗಿದ್ದ ಅವರಿಂದ 99 ರೋಗಗಳ ಶಮನಕ್ಕೆ ಕಾರಣ ವೆಂದೂ ಸ್ವರ್ಗದ ನಿಧಿಯೆಂದೂ ಹದೀಸ್‌ಗಳಲ್ಲಿ ವರದಿಯಾದ "ಲಾ ಹೌಲ ವಲಾ ಖುವ್ವತ...ದ ಆಧ್ಯಾತ್ಮಾನುಮತಿ ಪಡೆಯಲು ಉಲಮಾಗಳೂ ಮುತಅಲ್ಲಿಮರೂ ವಿದೂರ ದಿಕ್ಕುಗಳಿಂದ ಆಗ ಮಿಸುತ್ತಿದ್ದರು. ಫೆಬ್ರವರಿ 21 ಗುರುವಾರ ಅಪ ರಾಹ್ನ 2.30ಕ್ಕೆ ಆ ಮಹಾ ಸನ್ನಿಧಿಯಲ್ಲಿ ಒಂದು ಪುಟ್ಟ ಬಿಂದುವಾಗಿ ಸೇರಲು ಅವಕಾಶವುಂಟಾ ಯಿತು. ಈ ಸಂದರ್ಶನ ಸಂದರ್ಭ ನನ್ನ ಭಾಷಣ ಬದುಕಿನಲ್ಲಿ ಹೊಸ ತಿರುವಿಗೆ ನಾಂದಿಯಾಯಿತು. ಅವರನ್ನು 2ನೇ ಬಾರಿ ಭೇಟಿಯಾದಾಗ ಭಾಷಣ ದಲ್ಲಿ ಅತೀವ ಆಸಕ್ತಿಯಿದೆಯೆಂದೂ ಆಶೀರ್ವದಿಸ ಬೇಕೆಂದೂ ಬೇಡಿಕೊಂಡಾಗ ಆ ಮಹಾತ್ಮರು ನನಗೆ ಭಾಷಣ ಮಾಡಲು 'ಇಜಾಝುತ್' ಕೊಟ್ಟರು. ಎಷ್ಟೇ ಬೃಹತ್ ಸಂಖ್ಯೆಯಲ್ಲಿ ಸಭೆ ಕರೆದಿದ್ದರೂ ಹೆದರದೆ ಮಾತನಾಡು ಎಂದು ಹರಸಿದ ಮಹಾತ್ಮರು ವಿಶೇಷ ದುಆ ನಡೆಸಿ ದ್ದರು. ಹಿಸಾಮುದ್ದೀನ್ ಅಬ್ದುಲ್ಲಾಹ್ ಕುಂಞಿ ಹಸನ್ ಮುಸ್ಲಿಯಾರ್ ಎಂಬ ಪೂರ್ಣ ನಾಮ ಹೊಂದಿದ್ದ ಅವರು ಸರಳತೆಯ ಪ್ರತೀಕವೂ ವಿನ ಯವಂತರೂ ಅಗಿದ್ದರು. ಕೆಲವು ಸಂದರ್ಭಗಳಲ್ಲಿ ಸಂದರ್ಶಕರಿಂದ ದುಆ ಮಾಡಿಸಿ ಅವರು 'ಆಮೀನ್' ಹೇಳುತ್ತಿದ್ದರು. ಬದುಕಿದ್ದಾಗ ನಾಲ್ಕೈದು ಬಾರಿ ಸಂದರ್ಶಿಸಲು ಅವಕಾಶವುಂಟಾಯಿತು. ಕಾಪಾಡ್ ಜುಮಾ ಮಸೀದಿಯ ಪೂರ್ವ ದಿಕ್ಕಿನಲ್ಲಿ ಅಂತ್ಯ ವಿಶ್ರಮ ಪಡೆಯುತ್ತಿರುವ ಶೈಖ್‌ರ ಮಖ್ ಬರ ಝಿಯಾರತ್‌ಗೆ ಈಗಲೂ ವಿದ್ವಾಂಸರೂ ಮುತ ಅಲ್ಲಿಮರೂ ಭಕ್ತಿಯಿಂದ ಆಗಮಿಸುತ್ತಿದ್ದಾರೆ.

ಕಾಪಾಡ್ ಖಾಝಿಯವರನ್ನು ಸಂದರ್ಶಿಸಿದ ಅದೇ ದಿನ ಸಾಯಂಕಾಲ 7.20ಕ್ಕೆ ಆಧ್ಯಾತ್ಮ ಪ್ರಪಂಚದ ಅಧಿನಾಯಕ ಖುತ್‌ಬುಲ್ ಆಲಂ ಶೈಖ್ ಮಡವೂರ್ ಸಿ.ಎಂ.ವಲಿಯ್ಯುಲ್ಲಾಹಿ ﷺ ಅವರನ್ನು ಸಂಪರ್ಕಿಸಲು ಅವಕಾಶಸಿಕ್ಕಿದ್ದು ಜೀವ ನದಲ್ಲಿ ಮರೆಯಲಾಗದ ಅನುಭವ. ಕೋಝಿ ಕೋಡ್-ಇಡಿಯಂಜಿರ ಮೂಪ್ಪನ್ ಎಂಬವರ ಮನೆಯಲ್ಲಿ ವಾಸವಿದ್ದ ಶೈಖರ ಸಂದರ್ಶನ ಆಗ ಅಷ್ಟು ಸುಲಭವಿರಲಿಲ್ಲ. ಸಂಜೆಯಿಂದ ಮಗ್ ರಿಬ್ ತನಕ ಕಾದು ನಿರಾಶರಾಗಿ ಹಿಂದುರುಗಿದ ನಾವು ಮಗ್‌ರಿಬ್ ನಮಾಜಿನ ಬಳಿಕ 'ಮರಳಿ ಯತ್ನವ ಮಾಡು" ಎಂಬ ತತ್ವದಡಿ ಮತ್ತೆ ಮೂಪನ್ ಮನೆಗೆ ಆಗಮಿಸಿದ್ದೆವು. ಕೆಲ ಹೊತ್ತಿ ನಲ್ಲೇ ಆ ಕದ ನಮಗಾಗಿ ತೆರೆಯಿತು. ಆನಂದ- ದಿಗ್ಭ್ರಮೆ ಜತೆಯಾಗಿ ಅನುಭವಿಸಿದ ಕ್ಷಣವದು. ಆ ಕಾರಣವಾಗಿ ನನ್ನನ್ನು ಕಾಡುತ್ತಿದ್ದ 'ಭಯ'ದ ಕುರಿತು ಶೈಖರೊಂದಿಗೆ ಹೇಳಿಕೊಂಡಿದ್ದೆ, ಕಣ್ಣು ಮುಚ್ಚಿ ಮಲಗಿದ್ದಲ್ಲಿಂದಲೇ ನನ್ನ ಮುಖವನ್ನು ಸಂಪೂರ್ಣವಾಗಿ ಸವರಿ 'ಪೇಡಿವೇಂಡ' (ಭಯ ಬೇಡ) ಅಂದಿದ್ದರು. ಆತ್ಮ ಸಂಘರ್ಷದ ಯುದ್ಧ ವನ್ನು ಜಯಿಸಲು ಅಮೇರಿಕಾ ಇರಾಖ್ ಮೇಲೆ ಹೂಡಿದ್ದ ಸಶಕ್ತವಾದ ಬಹುರಾಷ್ಟ್ರ ಸೇನೆಗಿಂತ ಬಲ ಶಾಲಿಯಾಗಿದೆ ಈ ಜೀವಂತ ಔಲಿಯಾಗಳ ಸಂದರ್ಶನ ಎಂಬುದು ವಾಸ್ತವ.

ಆಧ್ಯಾತ್ಮ ಮಾರ್ಗದರ್ಶನದ ಜತೆ ಬದುಕನ್ನು ಬೆಳಗಿಸಲು ಅನುಯೋಜ್ಯವಾದ ಭೂಮಿಕೆ ಸಿದ್ಧ ಪಡಿಸಿಕೊಳ್ಳುವುದು ಅಗತ್ಯ. ಶೈಖುನಾ ಅಲಿ ಕುಂಞಿ ಉಸ್ತಾದರ ದರ್ಸ್‌ನಲ್ಲಿ ಅವರ ನೇರ ಕ್ಲಾಸ್‌ಗಳ ನಿರೀಕ್ಷೆಯಲ್ಲಿ ಹೋಗಿದ್ದ ನನಗೆ ನಾನು ಕಿರಿಯ ತರಗತಿಯಲ್ಲಿದ್ದ ಕಾರಣ ಸಹಾ ಯಕ ಮುದರ್ರಿಸರು ಅಥವಾ ಹಿರಿಯ ಮುತ ಅಲ್ಲಿಮರಿಂದ ಕ್ಲಾಸ್ ತೆಗೆಸಿಕೊಳ್ಳಬೇಕಾದ ಅನಿ ವಾರ್ಯತೆ ಬಂತು. ಉಪ್ಪಿನಂಗಡಿಯಲ್ಲಿ ಇಸ್ಮಾ ಈಲ್ ವಹ್‌ಬಿ ಕುಂಬಳೆ, ಅನಂತರ ಮೂಸಲ್ ಮದನಿ ಕೊರಿಂಗಿಲ ಸಹಾಯಕ ಮುದರ್ರಿಸರಾಗಿ ದ್ದರೆ ಮುಂದಿನ ವರ್ಷ ಬಲ್ಲಾ ಕಡಪ್ಪುರಂನಲ್ಲಿ ವಳಕೈ ಮುಹಮ್ಮದ್ ಮದನಿ ಖತೀಬ್ ಹುದ್ದೆ ಯೊಂದಿಗೆ ಸಹಾಯಕ ಮುದರ್ರಿಸ್ ಆಗಿಯೂ ಕೆಲಸ ಮಾಡುತ್ತಿದ್ದರು. ಜತೆಗೆ ಬಲ್ಲಾ ಕಡ ಪ್ಪುರಂನಲ್ಲಿ ನಮ್ಮ ಕಿತಾಬ್‌ಗಳನ್ನು ಉಸ್ತಾದರ ಕ್ಲಾಸ್‌ಗಳ ನಂತರ ವಿವರಿಸಿ ಕೊಡುವುದಕ್ಕಾಗಿ ಅಲ್ಲಿನ ಹಿರಿಯ ವಿದ್ಯಾರ್ಥಿಗಳಾದ ಬಾಯಾರ್ ಅಬ್ದುರ್ರಹ್ಮಾನ್ (ಸಅದಿ)ಗೆ ಫತ್‌ಹುಲ್ ಮುಈನ್ ಮತ್ತು ಮಿತ್ತೂರು ಹಂಝ (ಮದನಿ) ಅವರಿಗೆ ಅಲ್‌ಫಿಯ್ಯಃದ ಜವಾಬ್ದಾರಿಯನ್ನು ಶೈಖುನಾ ಅಲಿಕುಂಞಿ ಉಸ್ತಾದ್ ವಹಿಸಿ ಕೊಟ್ಟಿದ್ದರು. ಆದರೆ ನೇರವಾಗಿ ಶೈಖುನಾ ರಿಂದಲೇ ಎಲ್ಲಾ ಸಬ್‌ಖ್‌ಗಳು ಸಿಗಬೇಕೆಂಬ ಹಂಬಲ ಈಡೇರಲೇ ಇಲ್ಲ. ಕೇವಲ ಒಂದೆರಡು ಕ್ಲಾಸ್‌ಗಳನ್ನಷ್ಟೇ ಅವರು ನಡೆಸಿಕೊಡುತ್ತಿದ್ದರು. ಉಸ್ತಾದರ ಕ್ಲಾಸ್‌ಗಳು ಪೂರ್ಣ ಪ್ರಮಾಣದಲ್ಲಿ ಸಿಗಬೇಕಾದರೆ ಎರಡು, ಮೂರು ವರ್ಷಗಳು ಕಳೆಯಬೇಕಾದೀತು ಎಂಬ ಯೋಚನೆಯಿಂದಾಗಿ ಅಷ್ಟರವರೆಗೆ ನನ್ನ ನೆಚ್ಚಿನ 'ಮಲಪ್ಪುರಂ' ಜಿಲ್ಲೆ ಯಲ್ಲಿ ಒಂದೆರಡು ವರ್ಷ ಕಲಿತು, ಅಲ್ಲಿನ ಭಾಷೆ, ಸಂಸ್ಕೃತಿಗಳನ್ನು ಪರಿಚಯಮಾಡಿಕೊಂಡು ಕೊನೆಯ ವರ್ಷಕ್ಕಾಗಿ ಉಸ್ತಾದರ ಬಳಿ ಮರಳಿ ಬರುವುದೆಂಬ ನಿರ್ಧಾರ ಮಾಡಲಾಯಿತು. ಇದಕ್ಕೆ ಉಸ್ತಾದರ ಸಂಪೂರ್ಣ ಅನುಮತಿಯೂ ಆಶೀರ್ವಾದವೂ ದೊರೆಯಿತು. ಹಾಗಾದರೆ ಆ ಒಂದೆರಡು ವರ್ಷಗಳನ್ನು ಕೇರಳದ ಪ್ರಗಲ್ಭ ಮುದರ್ರಿಸರ ನೇತೃತ್ವದ ಪ್ರಸಿದ್ಧ ದರ್ಸ್‌ನಲ್ಲೇ ಕಲಿಯಬೇಕೆಂದು ತಂದೆ ಸಲಹೆ ನೀಡಿದ್ದರು. ಅದಕ್ಕಾಗಿ ಅವರು ಸೂಚಿಸಿದ್ದು ಉಸ್ತಾದುಲ್ ಅಸಾತೀದ್ ಮರ್‌ಹೂಂ ಒ.ಕೆ.ಉಸ್ತಾದರ ದರ್ಸ್. ಕೇರಳ ಉಲಮಾಗಳ ಪರಮ ಗುರು ವರ್ಯರೂ, ಕೇರಳದ ದೀನೀ ವಿಜ್ಞಾನ ಪ್ರಚಾರದ ಹರಿಕಾರರಾಗಿದ್ದ ಪೊನ್ನಾನಿ ಶೈಖ್ ಝೈನುದ್ದೀನ್ ಮಖ್‌ದೂಂ ﷺ ಅವರೊಂದಿಗೆ ಕುಟುಂಬ ಸಂಬಂಧವನ್ನು ಹಂಚಿಕೊಂಡವರೂ ಆಗಿದ್ದ ಮರ್‌ಹೂಂ ಒ.ಕೆ.ಝೈನುದ್ದೀನ್ ಕುಟ್ಟಿ ಮುಸ್ಲಿ ಯಾರ್ ಆಗ ಮಲಪ್ಪುರಂ ಜಿಲ್ಲೆಯ ಒದಕ್ಕುಂಜಲ್ ಇಹ್ಯಾಉಸುನ್ನಃದಲ್ಲಿ ಮುದರ್ರಿಸ್ ಆಗಿದ್ದರೂ ಅದು ಈಗಿನಂತೆ ಪೂರ್ಣ ಪ್ರಮಾಣದ ಕಾಲೇಜು ಆಗಿ ಬೆಳೆದಿರಲಿಲ್ಲ. ಸನದ್

(ಅಹ್‌ಸನಿ) ಕೊಡುವ ಕಾರ್ಯವೂ ಚಾಲ್ತಿಯಲ್ಲಿರಲಿಲ್ಲ. ಅಲ್ಲಿ ಮುಂದೆ 'ಮಖ್‌ದೂಮಿ' ಹೆಸರಲ್ಲಿ ಪದವಿ ಪ್ರದಾನ ಮಾಡ ಲಾಗುವುದೆಂಬ ಶ್ರುತಿಯಿತ್ತು. ಆ ಮಹಾನ್ ಉಸ್ತಾದರು 'ಚಾಲಿಯಂ' ಎಂಬಲ್ಲಿ ಮುದರ್ರಿಸ್ ಆಗಿದ್ದಾಗ ನನ್ನ ತಂದೆ ಅಲ್ಲಿ ಮುತಅಲ್ಲಿಂ ಆಗಿ ದ್ದರು. ಇದೇ ಕಾರಣದಿಂದ ಅವರು ನನ್ನನ್ನೂ ಅಲ್ಲಿಗೆ ಕಳಿಸಲು ಉತ್ಸುಕರಾಗಿದ್ದರು. ಆದರೆ ಅಲ್ಲಿ ಸೇರುವ ಮೊದಲು ಅಲ್ಲಿನ ಎ.ಪಿ.ಉಸ್ತಾದರ ವಾತಾವರಣವನ್ನು ಅಧ್ಯಯನ ಮಾಡ ಬೇಕೆಂ ದಿದ್ದ ನನಗೆ ತಕ್ಕ ಅಲ್ಲಿ ಶೈಖುನಾ ಎ.ಪಿ.ಉಸ್ತಾದರ ಪುತ್ರ ಅಬ್ದುಲ್ ಹಕೀಂ (ಅಝ್‌ಹರಿ) ಕಲಿಯು ತ್ತಿರುವ ಮಾಹಿತಿ ಸಿಕ್ಕಿ ಅವರಿಗೆ ಪತ್ರ ಬರೆದು ಸ್ಥಿತಿಗತಿಗಳನ್ನು ಅರಿಯಲು ನಿರ್ಧರಿಸಿದೆ. ಈ ಬಗ್ಗೆ ಅವರಿಗೊಂದು ವಿವರವಾದ ಪತ್ರವೂ ಬರೆದೆ. ಆದರೆ ಅವರ ಉತ್ತರದ ಪ್ರಕಾರ 'ಇಹ್ಯಾ ಉಸ್ಸುನ್ನಃ' ಒದುಕ್ಕುಂಜಲ್' ನನ್ನ ಒಂದೆರಡು ವರ್ಷಗಳ ಬಜೆಟಿಗೆ ಹೊಂದಾಣಿಕೆಯಾಗುವ ಸ್ಥಿತಿಯಲ್ಲಿರಲಿಲ್ಲ. ಶೈಖುನಾ ಒ.ಕೆ.ಉಸ್ತಾದರ ಪೂರ್ಣ ಕ್ಲಾಸ್‌ಗಳಿಗಾಗಿ ಅಲ್ಲಿಯೂ ಕಾಯ ಬೇಕಾದ ಪರಿಸ್ಥಿತಿಯಿತ್ತು. ಇದನ್ನು ವಿವರಿಸಿದ ಎ.ಪಿ.ಅಬ್ದುಲ್ ಹಕೀಂ ನನಗೆ ಯೋಗ್ಯವೆನಿಸುವ ಒಂದು ದರ್ಸನ್ನು ಸೂಚಿಸಿದ್ದರು. ಕೋಝಿ ಕ್ಕೋಡ್ ಜಿಲ್ಲೆಯ 'ಪೂನೂರು' ಎಂಬ ಊರಿನ ದರ್ಸ್ ಅದು. ಅಲ್ಲಿ ಮುದರ್ರಿಸ್ ಆಗಿದ್ದುದು ಇತ್ತೀಚಿನ ಕಾಲದಲ್ಲಿ ಚರ್ಚೆಗೆ ಗ್ರಾಸವಾಗಿರುವ ಅದೇ ಅಬ್ದುಲ್ ಬಾರಿ ಬಾಖವಿ. 1991ರ ಆ ಕಾಲ ಸಮಸ್ತದೊಳಗೆ ಭಿನ್ನಮತ ಬುಗಿಲೆದ್ದ ಮೊದಲ ವರ್ಷಗಳಾಗಿದ್ದವು. 1989ರಲ್ಲಿ ಶೈಖುನಾ ತಾಜುಲ್ ಉಲಮಾ ಮತ್ತು ಕಾಂತ ಪುರಂ ಉಸ್ತಾದ್'ಸಮಸ್ತ'ವನ್ನು ನಿಸ್ವಾರ್ಥ ಉಲಮಾಗಳನ್ನು ಸೇರಿಸಿ ಪುನರಚಿಸಿದಾಗ, ಸೂಕ್ಷ್ಮಶಾಲಿಗಳಾದ ಅನೇಕ ವಿದ್ವಾಂಸರು ಯಾರ ಜತೆಯೂ ಗುರುತಿಸಿಕೊಳ್ಳದೆ ದೂರ ಉಳಿದಿದ್ದರು. ಆ ಪೈಕಿ ಒಬ್ಬರಾಗಿದ್ದ ಪ್ರಗಲ್ಭ ವಿದ್ವಾಂಸ ಮರ್‌ಹೂಂ ಅಂಡೋಣ ಅಬ್ದುಲ್ಲ ಮುಸ್ಲಿಯಾರ್‌ರವರ ಪುತ್ರರಾದ ಅಬ್ದುಲ್ ಬಾರಿ ಬಾಖವಿಗೆ ಆ ಮೊದಲೇ ಕಾಂತಪುರಂ ಉಸ್ತಾದ್ ತನ್ನ ದ್ವಿತೀಯ ಪುತ್ರಿ 'ಹಫ್‌ಸಾ'ರನ್ನು ವಿವಾಹ ಮಾಡಿ ಕೊಟ್ಟಿದ್ದರು. ಕೋಝಿಕ್ಕೋಡ್ ಜಿಲ್ಲೆಯ 'ಪರಪ್ಪನ್ ಪೊಯಿಲ್' ನಿವಾಸಿಯಾದ ಇವರು ಆಗ ಪೂನೂರು ಜುಮಾ ಮಸೀದಿಯಲ್ಲಿ ದರ್ಸ್ ನಿರ್ವಹಿಸುತ್ತಿದ್ದರು. ಹಕೀಂ ಉಸ್ತಾದ್ ರ ಸಲಹೆಯಂತೆ ಅವರಿಗೆ ಪತ್ರ ಬರೆದು ವಿಚಾರಿಸಿ ದಾಗ ಖುಷಿಯಿಂದ ಉತ್ತರಿಸಿ ತನ್ನನ್ನು ಭೇಟಿ ಯಾಗುವಂತೆ ಉತ್ತರ ಬಿಟ್ಟಿದ್ದರು.

1991ರ ಫೆಬ್ರವರಿ 15ರ ನನ್ನ ಡೈರಿ ಪುಟದಲ್ಲಿ 'ಈ ದಿನ ನನ್ನ ಮುಂದಿನ ದರ್ಸ್ ಆಗಿ ಪೂನೂರು ಅಬ್ದುಲ್ ಬಾರಿ ಬಾಖವಿಯನ್ನು ಅಂತಿಮ ಗೊಳಿಸಲಾಯಿತು. ಅವರ ಸಂದರ್ಶನಕ್ಕೆ ಫೆಬ್ರ ವರಿ 20ರಂದು ತೆರಳುವುದು" ಎಂಬ ನಿರ್ಧಾರ ವನ್ನು ಬರೆದಿಟ್ಟದ್ದೇನೆ. ಪೂರ್ವ ನಿರ್ಧಾರದಂತೆ ಫೆಬ್ರವರಿ 20 ಬುಧವಾರದಂದು 'ಪೂನೂರ್' ನತ್ತ ನಮ್ಮ ಪ್ರಯಾಣ ಬೆಳೆಯಿತು. ಕಾಸರ ಗೋಡ್ ಮಾಲಿಕುದ್ದೀನಾರ್ (ರ) ಮಖಾಂ ಝಿಯಾರತ್ ಮುಗಿಸಿ ಕೊಯಿಲಾಂಡಿಗೆ ರೈಲು ಹತ್ತಿ ಅಲ್ಲಿಂದ ಬಸ್‌ಮಾರ್ಗ ತಾಮರಶ್ಶೇರಿ ಹತ್ತಿರದ ಪೂನೂರ್ ತಲುಪಿದೆವು. ಬಾಖವಿ ಅವತ್ತು ಊರಿಗೆ ಹೋಗಿದ್ದರಿಂದ ಅವರ ಭೇಟಿ ನಡೆಯಲಿಲ್ಲ. ಅಲ್ಲೇ ಇದ್ದ ಮಸೀದಿಯ ಮುಅ ಝ್ಝಿನ್‌ನಂತೆ ತೋರುವ ಪ್ರಾಯದ ವ್ಯಕ್ತಿ ಯೊಬ್ಬರ ಮುಂದೆ ನಮ್ಮ ಉದ್ದೇಶವನ್ನು ವಿವರಿಸಿದಾಗ ಅವರು ಗದರಿದ್ದು ನೆನಪಿದೆ. "ನಾಫಿಆದ ಇಲ್ಮ್ ಕಲಿಯಲು ಇಲ್ಲೇ ಸಮೀಪ ಕಾಂತಪುರಂನಲ್ಲಿ ಅಝ್ಹರಿಯ್ಯಃ ಹಾಗೂ ಕಾರಂದೂರಿನಲ್ಲಿ ಮರ್ಕಝ್ ಕಾಲೇಜುಗಳಿವೆ. ಅಲ್ಲಿಗೆ ಹೋಗಿರಿ' ಎಂದು ಏರು ಧ್ವನಿಯಲ್ಲಿ ಸಲಹೆ ಕೊಟ್ಟಿದ್ದರು. ಆಮೇಲೆ ನಾವು ಆ ನಿರ್ಧಾರವನ್ನು ಕೈ ಬಿಟ್ಟು ಅಲ್ಲಿಂದ ಮರ್ಕಝ್‌ಗೆ ತೆರಳಿ ಶೈಖುಲ್ ಹದೀಸ್ ನೆಲ್ಲಿಕುತ್ತ್ ಉಸ್ತಾದರನ್ನು ಭೇಟಿಯಾದೆವು. ಈ ಎಲ್ಲಾ ಕಾರ್ಯಗಳಲ್ಲಿ ನನ್ನ ಜತೆಗೆ ಇನ್ನೊಬ್ಬ ಗೆಳೆಯನೂ ಇದ್ದ.

ಅಬ್ದುಲ್ ಬಾರಿ ಬಾಖವಿಯ ದರ್ಸನ್ನು ಕೈ ಬಿಡಲು ಅಂದು ಕೈಗೊಂಡ ನಿರ್ಧಾರಕ್ಕೆ ಇವತ್ತು ಸಂತೋಷವಾಗುತ್ತಿದೆ. 1989ರಲ್ಲಿ ಸಮಸ್ತ ದಿಂದ ತಾಜುಲ್ ಉಲಮಾರ ನಾಯಕತ್ವದಲ್ಲಿ ಹನ್ನೊಂದು ಮಂದಿ ಉಲಮಾಗಳು ಹೊರ ಬಂದಾಗ ಆ ಪೈಕಿ ಅಂಡೋಣ ಅಬ್ದುಲ್ಲ ಮುಸ್ಲಿ ಯಾರ್ ಒಬ್ಬರು. ಆದರೆ ಅಂಡೋಣ ಪರಿಸರದ ಕೆಲವು ಮೊಹಲ್ಲಾಗಳ ಖಾಝಿಯಾಗಿದ್ದ ಅಬ್ದುಲ್ಲ ಮುಸ್ಲಿಯಾರ್‌ಗೆ ತನ್ನ ಮೊಹಲ್ಲಾ ಗಳನ್ನು ಉಳಿಸಬೇಕಾದರೆ 'ಸ್ವತಂತ್ರ'ವಾಗಿ ನಿಲ್ಲ ಬೇಕಾಗಿತ್ತು. ಕ್ರಮೇಣ ಅವರು ಆ ದಾರಿಯಾಗಿ ಮುಂದುವರಿದರೂ ಕೆಲವರ ಒತ್ತಡಕ್ಕೆ ಮಣಿದು ಸಮಸ್ತದ ಕೋಝಿಕ್ಕೋಡ್ ಜಿಲ್ಲಾಧ್ಯಕ್ಷರಾದರು. ಅಬ್ದುಲ್ಲ ಮುಸ್ಲಿಯಾರ್‌ರ ಮರಣದ ನಂತರ ಅವರ ಮೊಹಲ್ಲಾಗಳ ಉತ್ತರಾಧಿಕಾರಿಯಾದ ಅಬ್ದುಲ್ ಬಾರಿ ಬಾಖವಿ ಕೂಡಾ ತನ್ನ ಮಾವ ಎ.ಪಿ.ಉಸ್ತಾದರ ಜತೆ ಗುರುತಿಸಿ ಕೊಳ್ಳದೆ ಸ್ವತಂತ್ರ ಮುಖವಾಡ ಹೊತ್ತು ಮುನ್ನಡೆದರು. ಇತ್ತೀಚಿನ ದಿನಗಳಲ್ಲಿ ಅವರನ್ನು ಕೆಲವು ವೇದಿಕೆಗಳಿಗೆ ಕೊಂಡೊಯ್ದು ಕಾಂತಪುರಂ ಉಸ್ತಾದರ ವಿರುದ್ಧ ಮಾತನಾಡಿಸಿದ ಮಂದಿ ನಿಜಕ್ಕೂ ಬಾಖವಿ ತತ್ವಾದರ್ಶಗಳಲ್ಲಿ ತಮ್ಮ ಜತೆಗೆ ಇದ್ದಾರಾ ಎಂಬುದನ್ನು ಖಚಿತಪಡಿಸಿಕೊಂಡಿಲ್ಲ. ತನ್ನ ಮೊದಲ ಪುತ್ರಿಯನ್ನು ಸಖಾಫಿಯೊಬ್ಬರಿಗೆ ಮದುವೆ ಮಾಡಿ ಕೊಟ್ಟಿರುವ ಅವರು ಮೇ ತಿಂಗಳಲ್ಲಿ ತನ್ನ ಇನ್ನೋರ್ವ ಪುತ್ರಿಯನ್ನೂ 'ಸಖಾಫಿ' ಪದವೀದರರಿಗೇ ಮದುವೆ ಮಾಡಿ ಕೊಡುತ್ತಿರುವುದು, ತಾನು ಪೂರ್ಣವಾಗಿ ಯಾರ ಕೈಗೊಂಬೆಯೂ ಆಗಿಲ್ಲ ಎಂಬುದಕ್ಕೆ ಸಾಕ್ಷಿ. ಊರು ಮತ್ತು ಪರಿಸರದಲ್ಲಿ ಅಷ್ಟೇನೂ ಜನ ಪ್ರಿಯತೆಯನ್ನೂ ಆದರಾಭಿಮಾನಗಳನ್ನು ಗಳಿಸಿ ಕೊಳ್ಳದಿರುವ ಬಾಖವಿ ಸಾಹೇಬರು ಯಾವುದೇ ತತ್ವಾದರ್ಶಗಳಿಗೆ ಬದ್ಧವಾಗದೆ ಬದುಕುವ ದಾರಿಗೇ ಹೆಚ್ಚು ಒತ್ತು ಕೊಡುತ್ತಿದ್ದಾರೆ ಎನ್ನು ವುದು ಸ್ಪಷ್ಟ. ಈಜಿಪ್ಟಿಯನ್ ತ್ವರೀಖತ್‌ನ ರಾಯಭಾರಿಯಾಗಿ ಸುನ್ನೀ ಸಮಾಜದಿಂದ ಬಹಿಷ್ಕಾರಕ್ಕೆ ಒಳಗಾಗಿ ಇದೀಗ ಮೂಲೆ ಗುಂಪಾಗಿರುವ ಕಕ್ಕಾಡ್ ಮುಹಮ್ಮದ್ ಫೈಝಿ ಯವರು ಈ ಬಾರಿ ಬಾಖವಿಯ ಸಹೋದರಿಯ ಪತಿಯಾಗಿರುವುದು ಇದಕ್ಕೆಲ್ಲ ಮತ್ತೊಂದು ನಿಮಿತ್ತ ವಾಗಿರಬಹುದಷ್ಟೆ.

ಪೂನೂರು ದರ್ಸನ್ನು ಕಾರ್ಯ ಸೂಚಿಯಿಂದ ಹೊರಗಿಟ್ಟು ಹೊಸತರ ಆಯ್ಕೆಗೆ ಕಾತರಿಸಿದ ನನಗೆ ಶೈಖುಲ್ ಹದೀಸ್ ನೆಲ್ಲಿಕುತ್ತ್ ಇಸ್ಮಾ ಈಲ್ ಮುಸ್ಲಿಯಾರ್ ತನ್ನ ಜತೆ ಸಹಾಯಕ  ಮುದರ್ರಿಸ್ ಆಗಿದ್ದ ಸೂಫಿ ಮುಸ್ಲಿಯಾರ್‌ರ ದರ್ಸ್‌ಗೆ ಸೇರಿಕೊಳ್ಳುವಂತೆ ಸಲಹೆ ನೀಡಿದರು.  ಮಲಪ್ಪುರಂ ಜಿಲ್ಲೆಯ ಇರುಂಬುಝಿ ಸ್ವದೇಶಿ ಸೂಫಿ ಮುಸ್ಲಿಯಾರ್ ಪೆರಿಂದಲ್ ಮಣ್ಣದಿಂದ ಮಣ್ಣಾರ್‌ಕಾಡ್ ರಸ್ತೆಯಲ್ಲಿರುವ ತಾಝು ಕ್ಕೋಡ್ ಎಂಬಲ್ಲಿ ಮುದರ್ರಿಸ್ ಆಗಿದ್ದರು.

ನೆಲ್ಲಿಕ್ಕುತ್ತ್ ಉಸ್ತಾದರ ಸಲಹೆಯಂತೆ ಸೂಫಿ ಮುಸ್ಲಿಯಾರ್‌ರ ಭೇಟಿಗೆ 1991 ಫೆಬ್ರವರಿ 22 ಶುಕ್ರವಾರ ಜುಮಾದ ಹೊತ್ತಿಗೆ ತಾಝಿಕ್ಕೋಡ್ ಜುಮಾ ಮಸೀದಿಗೆ ತಲುಪಿದೆ. ಉಳ್ಳಾಲ ಮದನಿ ಅರಬಿಕ್ ಕಾಲೇಜಿನ ಮುದರ್ರಿಸ್ ಶೈಖುನಾ ತಾಝುಕ್ಕೋಡ್ ಅಬ್ದುಲ್ಲ ಮುಸ್ಲಿಯಾರ್ ಆಗ ಅಲ್ಲಿನ ಜಮಾಅತ್ ಸಮಿತಿ ಅಧ್ಯಕ್ಷರಾಗಿದ್ದು ಪರಿಚಯ ಹೇಳಿಕೊಂಡಾಗ ಮಧ್ಯಾಹ್ನ ಊಟಕ್ಕೆ ಮನೆಗೆ ಕರೆದೊಯ್ದು ಆತಿಥ್ಯ ನೀಡಿದರು. ಸೂಫಿ ಮುಸ್ಲಿಯಾರ್ ಆದಿನ ಊರಲ್ಲಿ ಇದ್ದುದರಿಂದ ಜುಮಾ ನಂತರ ನಮ್ಮ ಪಯಣವು 'ಇರುಂ ಬುಝಿ'ಗೆ ಮುಂದುವರಿಯಿತು. ಬದುಕಿನ ಭಾಸುರ ಭವಿಷ್ಯವನ್ನು ಅರಸುತ್ತಾ...

# 6

## ಪ್ರಾಂಗಳದಲ್ಲಿ ಪ್ರಥಮ ಹೆಜ್ಜೆ ಗುರುತು

1991 ಫೆಬ್ರವರಿ 22 ಶುಕ್ರವಾರ ಪೆರಿಂದರ್ ಮಣ್ಣ ಸಮೀಪದ 'ತಾಝಿ ಕ್ಕೋಡ್' ನಲ್ಲಿ ಅಲ್ಲಿನ ಮುದರ್ರಿಸ್ ಆಗಿದ್ದ ಸೂಫಿ ಮುಸ್ಲಿಯಾರನ್ನು ಭೇಟಿಯಾಗಿ ಮರ್‌ಹೂಂ ನೆಲ್ಲಿಕುತ್ತ್ ಉಸ್ತಾದರ ಶಿಫಾರಸಿನ ಮೂಲಕ ಅವರ ದರ್ಸ್‌ನಲ್ಲಿ ಪ್ರವೇಶ ಗಿಟ್ಟಿಸುವುದು ನನ್ನ ಮತ್ತು ಜತೆಗಿದ್ದ ಮಿತ್ರನ ಕನಸಾಗಿತ್ತು. ಅವರು ಆ ದಿನ ದರ್ಸ್‌ನಲ್ಲಿ ಇಲ್ಲದಿದ್ದ ಕಾರಣ ಅಲ್ಲಿ ಜುಮಾ ಮುಗಿಸಿ ಅವರ ಊರಾದ 'ಇರುಂಬುಯಿ' ಎಂಬಲ್ಲಿಗೆ ಪ್ರಯಾಣ ಬೆಳೆಸಿದೆವು. ಪೆರಿಂದಲ್ ಮಣ್ಣದಿಂದ ಬಸ್ ಹತ್ತಿ ಆನಕ್ಕಯಂ ಎಂಬಲ್ಲಿ ಇಳಿದು ಇನ್ನೊಂದು ಬಸ್‌ನಲ್ಲಿ ಮಂಜೇರಿ ಸಮೀಪದ 'ಇರುಂಬುಝಿ' ಇಳಿದ ನೆನಪು. ಅಲ್ಲಲ್ಲಿ ವಿಚಾರಿಸಿ ಆ ದಿನ ಸಂಜೆ 5.40ಕ್ಕೆ ಸೂಫಿ ಮುಸ್ಲಿಯಾರ್ ಮನೆ ತಲುಪಿದೆವು. ಮಂಗಳೂರಿನಿಂದ ಇಬ್ಬರು ಮುತಅಲ್ಲಿಮರು ಇಷ್ಟು ದೂರ ಸಂಚರಿಸಿ ತನ್ನ ದರ್ಸ್ ಸೇರಲು ಉದ್ದೇಶಿಸಿ ಮನೆಗೆ ಬಂದಿರುವುದನ್ನು ತಿಳಿದು ಅವರಿಗೆ ವಿಚಿತ್ರ ವೂ ಕುತೂಹಲವೂ ಆಗಿತ್ತು. ಅಲ್ಲಿನ ಕಿತಾಬ್‌ಗಳು, ಪರಿಸರದ ಜತೆ ದರ್ಸ್‌ನಲ್ಲಿ 'ಸಾಹಿತ್ಯ ಸಮಾಜ' ಇದೆಯಾ ಎಂದು ಕೇಳಲು ಮರೆಯಲಿಲ್ಲ. ಮೂವತ್ತು ಮಂದಿ ವಿದ್ಯಾರ್ಥಿಯರಿರುವ ಎಲ್ಲ ಜ್ಞಾನ ಶಾಖೆ (ಫನ್ನ್)ಗಳನ್ನೊಳಗೊಂಡ, ಭಾಷಣ, ಬರಹ ಕಲೆಗೆ ವಿಶೇಷ ವೇದಿಕೆಯಿರುವ ಒಂದು ಉತ್ತಮ ದರ್ಸ್‌ನ ಮುದರ್ರಿಸ್ ಅವರೆಂದು ಮಾತುಕತೆಯ ವೇಳೆ ಅರ್ಥ ಮಾಡಿ ಕೊಂಡೆವು. ರಮಳಾನ್ ಮುಗಿದ ತಕ್ಷಣ ದರ್ಸ್ ಪ್ರಾರಂಭಿಸುವ ದಿನಾಂಕ ತಿಳಿಸಿ ಪತ್ರ ಬರೆಯುವುದಾಗಿ ಹೇಳಿ ಅವರು ನಮ್ಮನ್ನು ಬೀಳ್ಕೊಟ್ಟರು, ಪಠ್ಯ ಮತ್ತು ಪಠ್ಯೇತರ ವಿಷಯಗಳಲ್ಲಿ ಹೆಚ್ಚಿನ ಅನುಭವ ಮತ್ತು ಕೌಶಲ್ಯ ಸಿಗಬೇಕಾದರೆ ಎರಡು ವರ್ಷದ ಮಟ್ಟಿಗಾದರೂ ಮಲಪ್ಪುರಂ ಜಿಲ್ಲೆಯಲ್ಲಿ ಓದಬೇಕೆಂದು ನಂಬಿದ್ದ ನನಗೆ ಮುಂದಿನ ರಮಳಾನ್ ಬಳಿಕ ನಾನು ಸೇರಲಿರುವ ಮಲಪ್ಪುರಂ ಜಿಲ್ಲೆಯ ತುತ್ತ ತುದಿಯಲ್ಲಿರುವ (ಅಲ್ಲಿಂದ ಕೆಲವೇ ಕಿಲೋ ಮೀಟರ್ ಅಂತರದಲ್ಲಿ ಪಾಲಕ್ಕಾಡ್ ಜಿಲ್ಲೆಯ ಗಡಿಯಿತ್ತು) ತಾಝಿಕ್ಕೋಡ್ ಮಸೀದಿ ಮತ್ತು ದರ್ಸ್‌ನ್ನು ನೆನೆಯುವಾಗ ರೋಮಾಂಚನವಾಗುತ್ತಿತ್ತು. ದರ್ಸ್ ಕಿತಾಬ್‌ಗಳ ಜತೆ ಮಲಯಾಳಂ ಭಾಷೆಯ ಆಳ ಅಧ್ಯಯನ, ಭಾಷಣ ಕ್ಷೇತ್ರದಲ್ಲಿ ಕೇರಳದ ಅತ್ತಿಂದಿತ್ತ ಮಿಂಚುವುದು, ಸಂಘಟನಾ ನಾಯಕನಾಗುವುದು, ತೀವ್ರ ತಲೆ ನೋವಿನ ಕಾರಣ ಉಜಿರೆ ಶ್ರೀ ಧರ್ಮ ಸ್ಥಳ ಮಂಜುನಾಥೇಶ್ವರ ಪ್ರೌಢ ಶಾಲೆ ಯಲ್ಲಿ 9ನೇ ತರಗತಿಯಲ್ಲಿ ಮೊಟಕಾಗಿದ್ದ ಶಾಲಾ ವಿದ್ಯಾಭ್ಯಾಸವನ್ನು ದಡ ಸೇರಿಸು ವುದು, ಅಲ್ಲದೆ ಕೇರಳ ಸಹವಾಸದಿಂದ ಜೀವನ ಬೆಳಗುವುದು ಇತ್ಯಾದಿ ಅನೇಕ ಗುರಿಗಳು ನನ್ನ ಈ ಕೇರಳ ಯಾತ್ರೆಯ ಹಿಂದೆ ಇದ್ದುವು.

ಮುಂದಿನ ಶವ್ವಾಲ್‌ನಲ್ಲಿ ದೀರ್ಘ ದರ್ಸ್ ಯಾತ್ರೆಯ ಖರ್ಚು, ಇನ್ನಿತರ ಸಿದ್ಧತೆಗಳಿಗೆ ಬಹಳಷ್ಟು ಹಣದ ಅಗತ್ಯ ವಿತ್ತು. ಇದಕ್ಕಾಗಿ ತಂದೆಯನ್ನೇ ಅವಲಂಬಿ ಸುವಂತಿರಲಿಲ್ಲ. ಕುಂಬಳೆ ಸಮೀಪದ ಮೊಗ್ರಾಲ್ ದೊಡ್ಡ ಜುಮಾ ಮಸೀದಿ ಯಲ್ಲಿ ಮುದರ್ರಿಸ್ ಆಗಿದ್ದ ಅವರು ಆಗಲೇ ಅಕ್ಕನ ಮದುವೆ ನಡೆಸಿ ಅದರ ಬಾಧ್ಯತೆಯಿಂದ ಹೊರ ಬಂದಿರಲಿಲ್ಲ. ನನ್ನ ಮುಂದೆ ಇದ್ದದ್ದು ಒಂದೇ ಆಯ್ಕೆ. ಕೆಲವೇ ದಿನಗಳಲ್ಲಿ ಆಗಮಿಸಲಿದ್ದ ರಮಳಾನ್‌ನ್ನು ಬಳಸಿ ಪ್ರಾರಂಭಿಕ ಖರ್ಚುಗಳನ್ನು ಸಂಗ್ರಹಿ ಸುವುದು. ಅದರಂತೆ ಆ ವರ್ಷದ ಉರ್ದಿ ಯಾತ್ರೆ ರಮಳಾನ್ 9ರಂದು (1991 ಮಾರ್ಚ್ 26 ಮಂಗಳವಾರ) ಆರಂಭಿಸಿ, ಮೊದಲ ದಿನ ಚಿಕ್ಕಮಗಳೂರಿನ ಉಪ್ಪಳ್ಳಿಗೆ ತಲುಪಲಾಯಿತು. ಆ ಕಾಲದಲ್ಲಿ ನನ್ನಂತಹ ಮುತಅಲ್ಲಿಮರಿಗೆ ರಂಝಾನ್ ಉರ್ದಿಯ ಆಶಾ ಕೇಂದ್ರವಾಗಿತ್ತು ಉಪ್ಪಳ್ಳಿ. ಅಲ್ಲಿನ ಖತೀಬ್ ಆಗಿದ್ದ ಬಹು| ಕಳಂಜಿಬೈಲು ಸುಲೈಮಾನ್ ಹಾಜಿ ಉಸ್ತಾದ್‌ರ ಪ್ರೀತಿಯ ಒಡನಾಟ, ಮುತಅಲ್ಲಿಮರಿಗೆ ತೋರು ತ್ತಿದ್ದ ಗೌರವ, ಹಣ ಸಂಗ್ರಹಿಸಿ ಕೊಟ್ಟು ನೆರವಾಗುವುದರಲ್ಲಿ ಅತ್ಯಾಸಕ್ತಿ ಹಾಗೂ ಅದೇ ಮಸೀದಿಯಲ್ಲಿ ದಫ್ಫ್ ಉಸ್ತಾದ್ ಆಗಿ ಮತ್ತು ಇನ್ನಿತರ ಜವಾಬ್ದಾರಿ ನೋಡಿ ಕೊಳ್ಳುತ್ತಿದ್ದ, ಈಗ ಗೇರುಕಟ್ಟೆ ಮನ್‌ಶರ್ ನಲ್ಲಿರುವ ಹಾಜಿ ಅಬ್ದುಲ್ ಖಾದಿರ್ ಮುಸ್ಲಿಯಾರ್‌ರ ನಿಷ್ಕಳಂಕ ಸಹಕಾರ ನಮ್ಮನ್ನು ರಂಝಾನ್ ಬಂತೆಂದರೆ ಉಪ್ಪಳ್ಳಿಗೆ ಸೆಳೆಯುತ್ತಿದ್ದವು. ಆ ದಿನದ ಉರ್ದಿಯಲ್ಲಿ ನನಗೆ ಅಲ್ಲಿ 75ರೂ. ಸಿಕ್ಕಿರು ವುದಾಗಿ ಡೈರಿಯಲ್ಲಿ ಬರೆದಿಟ್ಟಿದ್ದೇನೆ. ರಮಳಾನ್ 28ವರೆಗಿನ ಆ ವರ್ಷದ ನನ್ನ ಒಟ್ಟು ಗಳಿಕೆ 999 ರೂ ಮತ್ತು ಐದು ಪೈಸೆಯಾಗಿದ್ದು ಕೇರಳ ಪ್ರವಾಸದ ಪ್ರಾರಂ ಭಿಕ ಖರ್ಚುಗಳಿಗೆ ಸಾಕಾಗುವಂತಿತ್ತು.

ಅಗತ್ಯ ಸಿದ್ಧತೆಗಳನ್ನು ಮಾಡಿ ಕೊಂಡು '91' ಎಪ್ರಿಲ್ 29 ಸೋಮವಾರ ಬೆಳಿಗ್ಗೆ 6ಗಂಟೆಗೆ ನಮ್ಮ ಬದುಕು ಅದ್ಭುತ ಭವಿಷ್ಯ ವನ್ನು ಅರಸುತ್ತಾ ತಾಝಿಕ್ಕೋಡ್‌ಗೆ ಪ್ರಯಾಣ ಬೆಳೆಸಿತು. ಮಂಗಳೂರಿನ ರೈಲಿ ನಲ್ಲಿ ಕುಟ್ಟಿಪ್ಪುರಂ ಇಳಿದು ವಳಾಂಚೇರಿ, ಪೆರಿಂದಲ್‌ಮಣ್ಣ ದಾರಿಯಾಗಿ ಮಸೀದಿ ತಲುಪುವಾಗ ಸಾಯಂಕಾಲ 6.20 ಆಗಿತ್ತು. ಆಗ ಹೌಳಿನ ಬಳಿ ವುಳೂ ಮಾಡುತ್ತಿದ್ದ ಸೂಫಿ ಉಸ್ತಾದ್ ನಮ್ಮ ಆಗಮನವನ್ನು ಅನಿರೀಕ್ಷಿತವೆಂಬಂತೆ ಬೆರಗುಗಣ್ಣುಗಳಿಂದ ನೋಡಿ ಸ್ವಾಗತಿಸಿದರು. ಅದೇ ಊರಿನ ಹಂಝ ಎಂಬವರು ಹಲವಾರು ವರ್ಷಗಳ ಹಿಂದೆ ನಮ್ಮ ಕಕ್ಕಿಂಜೆಯಲ್ಲಿ ಕೆಲಸ ಮಾಡು ತ್ತಿದ್ದು ನಮ್ಮೂರಿನ 'ನಫೀಸ' ಎಂಬವರನ್ನು ಮದುವೆಯಾಗಿ ತಾಯಿಕ್ಕೋಡ್‌ಗೆ ಕರೆ ತಂದು ಸಂಸಾರ ನಡೆಸುತ್ತಿದ್ದರು. ನಫೀಸಾ ನಮ್ಮ ತಾಯಿಯ ಹತ್ತಿರದ ಬಂಧುವಲ್ಲದೆ ನಾನು ಚಿಕ್ಕ ಮಗುವಾಗಿದ್ದಾಗ ನಮ್ಮ ಮನೆಗೆ ಬಂದು, ತಾಯಿಗೆ ನೆರವಾಗಿ ನನ್ನನ್ನು ನೋಡಿಕೊಂಡಿದ್ದರಂತೆ, ಈ ಅಪರಿಚಿತ ವಿದೂರ ಊರಿನಲ್ಲಿ ನನಗೆ ಹೀಗೊಂದು ಸಂಬಂಧದ ಮನೆಯಿದೆ ಎನ್ನುವುದು ಆಗ ನನ್ನ ಮನಸ್ಸಿಗೆ ಸ್ವಲ್ಪ ಬಲ ನೀಡುತ್ತಿತ್ತು. ತಾಝಿಕ್ಕೋಡ್‌ಗೆ ಹೋದ ಮರುದಿನ ಮಂಗಳವಾರ ಬೆಳಿಗ್ಗೆ ಉಸ್ತಾದ್ ನನಗೆ ಅಲ್‌ಫಿಯ್ಯಃ, ಮಿಶ್‌ಕಾತ್, ಫತ್‌ಹುಲ್ ಮುಈನ್ ಮುಂತಾದ ಕ್ಲಾಸ್‌ಗಳನ್ನು ತೆಗೆದು ಕೊಟ್ಟರು.

ಆ ಮಧ್ಯೆ ನಾನು ಸೂಕ್ತ ದರ್ಸ್‌ನ ಹುಡುಕಾಟದಲ್ಲಿ ಅಂದಿನ ಪ್ರಚಂಡ ಬರಹ ಗಾರರೂ ಚಿಂತಕರೂ ಆಗಿದ್ದ ಎಂ.ಪಿ. ಮುಸ್ತಫಲ್ ಫೈಝಿ ಅವರಿಗೂ ಒಂದು ಪತ್ರ ಬರೆದಿದ್ದೆ. ಉತ್ತರಿಸಿದ ಅವರು ತನ್ನ ನೇತೃತ್ವದಲ್ಲಿ ಮಲಪ್ಪುರಂ 'ಪುರಮಣ್ಣೂರು' ಎಂಬಲ್ಲಿರುವ 'ಅಲ್ ಮಜ್‌ಲಿಸು ಅದ್ದಅವತಿಸ್ಸುನ್ನಿಯ್ಯಃ

' ಎಂಬ ಸಂಸ್ಥೆಗೆ ಬರುವಂತೆ ಬರೆದ್ದಿದ್ದರು. ಆದರೆ ಅದಾಗಲೇ ತನ್ನ ಪತ್ರಿಕೆ 'ಅಲ್ ಮುಬಾರಕ್' ನಲ್ಲಿ ಎ.ಪಿ. ಉಸ್ತಾದರ ನಿಂದನೆಯನ್ನು ತೊಡಗಿದ್ದ ಅವರನ್ನು ಮನಸಾ ದ್ವೇಷಿಸಿ ಅವರ ಸಹವಾಸ ಕಡಿದೆ. ಚಿಂತೋದ್ದೀಪಕ ಬರಹಗಳಿಂದ ಸುನ್ನೀ ಕೇರಳದಲ್ಲಿ ಕ್ರಾಂತಿಯ ಅಲೆಯೆಬ್ಬಿಸಿದ್ದ 'ಅಲ್ ಮುಬಾರಕ್' ವಾರ ಪತ್ರಿಕೆ ಮತ್ತು ಅದರ ಸಂಪಾದಕ ಕುಶಾಗ್ರ ಬುದ್ಧಿಶಾಲಿ, ಪ್ರಕಾಂಡ ವಿದ್ವಾಂಸ ಎಂ.ಎ. ಮುಸ್ತಫಲ್ ಫೈಝಿಗೆ ಅವತ್ತು ಮಲಯಾಳಿ ವಲಯದಲ್ಲಿ ಲಕ್ಷಾಂತರ ಅಭಿಮಾನಿಗಳಿದ್ದರು. ವಿದ್ವಾಂಸ ವಲಯ 'ಮುಂದಿನ ಶಂಸುಲ್ ಉಲಮಾ' ಎಂದೇ ನಿರೀಕ್ಷಿಸಿದ್ದ ಅವರು ಮುಹ್ಯಿದ್ದೀನ್ ಮಾಲ ವ್ಯಾಖ್ಯಾನ ಸಮೇತ ಅನೇಕ ಪ್ರೌಢ ಗ್ರಂಥಗಳಿಂದ ನೂತನವಾದಿಗಳ ಸಿಂಹ ಸ್ವಪ್ನವಾಗಿದ್ದರು. ಆದರೆ ಅತಿ ಬುದ್ಧಿ ವಂತಿಕೆಯೇ ಮುಳುವಾದ ಫೈಝಿಯವರು ತನ್ನ ಪತ್ರಿಕೆಯಲ್ಲಿ ಗುರುವರ್ಯರ ಮೇಲೆಯೇ ದಾಳಿ ಆರಂಭಿಸಿ, ಹಿರಿಯ, ನಿಷ್ಕಳಂಕ ಪಂಡಿತವರ್ಯರುಗಳ ಅವಕೃಪೆಗೆ ಗುರಿಯಾಗಿ ಇವತ್ತು ಎಲ್ಲೂ ಸಲ್ಲದವರಾಗಿ ಎಲ್ಲೋ ದಿನಗಳೆಯುತ್ತಿದ್ದಾರೆ. ಅವರ ದರ್ಸ್ ಪ್ರಸ್ತಾಪ ತಿರಸ್ಕರಿಸಿದ್ದರೂ ಕುತೂಹಲಕ್ಕೆ ಅವರ ಸಂಸ್ಥೆಯನ್ನು ಸಂದರ್ಶಿಸಲು ಒಮ್ಮೆ ತಾಝುಕ್ಕೋಡ್ ನಿಂದ ತೆರಳಿದ್ದೆ. ಕೇರಳದ ಮುಂಚೂಣಿ ಸಂಸ್ಥೆಗಳ ಪೈಕಿ ಈಗ ಅದರ ಹೆಸರು ಇಲ್ಲ.

ನೂರಾರು ನಿರೀಕ್ಷೆಗಳನ್ನಿಟ್ಟುಕೊಂಡು ಕನಸಿನ ದರ್ಸ್‌ಗೆ ಹೋಗಿದ್ದ ನನಗೆ, ಅಲ್ಲಿನ ಉಸ್ತಾದ್ ಸಮರ್ಥರೂ ಸಾತ್ವಿಕರೂ ಆಗಿದ್ದರೂ ಯಾಕೋ ನಿರೀಕ್ಷೆಗಳು ಚಿಗುರ ಲಿಲ್ಲ. ಇಲ್ಲಿ ಮುಂದುವರಿಯುದರಿಂದ ದೊಡ್ಡ ಪ್ರಯೋಜನವೇನೂ ಆಗದೆಂದು ಮನಸು ಕೊರೆಯುತ್ತಿತ್ತು. ಪ್ರತಿ ಗಂಟೆಯೂ ಗೊಂದಲಕಾರಿಯಾಗಿದ್ದವು. ಭವಿಷ್ಯದ ಕಾರ್ಯಾಗಾರವು ಇನ್ನೊಂದು ಸಾಹಸ ಯಾತ್ರೆ ಅಗತ್ಯವೆಂದು ಅಂತರಾಳ ಎಚ್ಚರಿಸುತ್ತಿತ್ತು.

ಕೇರಳದ ಪ್ರಸಿದ್ಧ ದರ್ಸ್‌ಗಳಲ್ಲೊಂದಾದ ಶೈಖುನಾ ಪೊನ್ಮಳ ಉಸ್ತಾದರ ದರ್ಸ್ ನಲ್ಲಿ ಸೇರುವ ಬಗ್ಗೆ ಹಿಂದೆ ಅನೇಕ ಬಾರಿ ಯೋಚಿಸಿದ್ದೆ. ಮಲಪ್ಪುರಂ ಕಡೆಯಿಂದ ನಾಡಿಗೆ ರಂಝಾನಲ್ಲಿ ಉರ್ದಿಗೆ ಬರುತ್ತಿದ್ದ ಮುತಅಲ್ಲಿಮರಲ್ಲೆಲ್ಲ ಪೊನ್ಮಳ ಉಸ್ತಾದ್ ಈಗ ಎಲ್ಲಿ ಮುದರ್ರಿಸ್ ಅಂತ ವಿಚಾರಿಸು ತ್ತಲೇ ಇದ್ದೆ. ಆದರೆ ಸರಿಯಾದ ಮಾಹಿತಿ ಸಿಗುವಾಗ ಅವರು ತೃಶೂರ್ ಜಿಲ್ಲೆಯ 'ವಟ್ಟೇಕಾಡ್' ಎಂಬಲ್ಲಿದ್ದರು. ವಟ್ಟೇಕಾಡ್‌ಗೆ ಪತ್ರ ಬರೆದು ವಿಚಾರಿಸಿದಾಗ ಪೊನ್ಮಳ ಉಸ್ತಾದ್ ಉತ್ತರಿಸಿ ರಂಝಾನ್ ನಂತರ ಬರುವಂತೆ ಸಮ್ಮತಿ ನೀಡಿದ್ದರು. ಆದರೆ ವಿಧಿ ನನ್ನನ್ನು ಬೇರೆ ದಾರಿಯಾಗಿ ಕೊಂಡೊಯ್ದು ತಾಝುಕ್ಕೋಡ್ ತಲುಪಿಸಿ ದಾಗ ಶವ್ವಾಲ್ 22 ಕಳೆದಿತ್ತು. ಪ್ರಗಲ್ಭರ ದರ್ಸ್ ಎಲ್ಲ ತುಂಬಿ ತುಳುಕುವ ಸಮಯ. ದಾರಿ ಕಾಣದೆ ಕಂಗಾಲಾದ ದಿನಗಳು.

ಅದಾಗಿಯೂ 91 ಮೇ 9 ಗುರುವಾರ ಉಸ್ತಾದರೊಂದಿಗೆ ಮಲಪ್ಪುರಂ ಶುಹದಾ ಝಿಯಾರತ್‌ಗೆ ಹೋಗಲು ಅನುಮತಿ ಪಡೆದು ನಾನು ಮತ್ತು ಕನ್ನಡಿಗ ಮಿತ್ರ ಅಲ್ಲಿಂದ ಹೊರಟೆವು. ಅಲ್ಲಿ ಝಿಯಾರತ್ ನಡೆಸಿದ ಬಳಿಕ ಪ್ರಗಲ್ಭ ವಿದ್ವಾಂಸ ಕೋಡಂ ಬುಝ ಬಾವಾ ಮುಸ್ಲಿಯಾರರ 'ಫರೋಕ್ ಪೇಟ್ಟ'ದಲ್ಲಿರುವ ದರ್ಸ್‌ಗೆ ಸೇರಲು ಅಭಿಪ್ರಾಯ ಪಟ್ಟೆವು. ಪ್ರಸಿದ್ಧ ವಿದ್ವಾಂಸ ಪಿ.ಎಸ್. ಕೆ. ಮೊಯ್ದು ಬಾಖವಿ ಮಾಡವನ ಕೂಡಾ ಅಲ್ಲಿ ಮುದರ್ರಿಸ್ ಆಗಿದ್ದರು. ಮಧ್ಯಾಹ್ನ ನಂತರ ಬಾವಾ ಉಸ್ತಾದರನ್ನು ಭೇಟಿಯಾಗಿ ನಮ್ಮ ಮನದಾಳದ ಆಕಾಂಕ್ಷೆ ನಿರೀಕ್ಷೆಗಳನ್ನೆಲ್ಲಾ ಅವರ ಮುಂದಿಟ್ಟೆವು. ಒಂದಕ್ಷರವೂ ಮಾತನಾಡದೆ ನಮ್ಮ ಮಾತನ್ನು ಆಲಿಸುತ್ತಾ ನಮ್ಮನ್ನು ಪೂರ್ತಿ ಯಾಗಿ ದಿಟ್ಟಿಸುತ್ತಾ ಅವರು ನಮ್ಮ ಮಾತು ಮತ್ತು ಬಾಷೆಯನ್ನು ಅರ್ಥಮಾಡಿಕೊಂಡು ನಮ್ಮ ಉದ್ದೇಶ ಶುದ್ಧಿಯನ್ನು ಅರಿತಂತೆ ಕಂಡು ಬಂತು. ನಿಮ್ಮ ನಿರೀಕ್ಷೆಗಳ ಸಾಕ್ಷಾತ್ಕಾರಕ್ಕೆ ಪೊನ್ಮಳ ಅಬ್ದುಲ್ ಖಾದಿರ್ ಮುಸ್ಲಿಯಾರ್ ರವರ ದರ್ಸ್ ಅತ್ಯುತ್ತಮ. ಅಲ್ಲಿಗೆ ತೆರಳಿ ಎನ್ನುತ್ತಾ ಅಲ್ಲಿ ದಾರಿ ಹೇಳಿ ಕೊಡಲು ಒಬ್ಬ ಮುತಅಲ್ಲಿಮನ್ನು ಕರೆದು ಕೊಟ್ಟರು. ಪರಪ್ಪ ನಂಗಾಡಿ ಸಮೀಪದ ಮೋರ್ಯ ಎಂಬಲ್ಲಿನ ಹಸನ್ ಎಂಬ ವಿದ್ಯಾರ್ಥಿಯಾಗಿದ್ದ ಆತ.

ನಮ್ಮ ಉದ್ದೇಶವನ್ನು ಅರಿತ ಆತ, ತಮ್ಮ ಪರಿಚಯಸ್ಥ ಮುತಅಲ್ಲಿಮರು ಕಳೆದ ದಿವಸ ಪೊನ್ಮಳ ಉಸ್ತಾದ್‌ರ ದರ್ಸಿಗೆ ತೆರಳಿದ್ದು ಅಲ್ಲಿ ಸೀಟ್ ಸಿಗದೆ ಮರಳಿದ್ದಾರೆ; ಮಸೀದಿಯ ಸೌಕರ್ಯಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿಂದ ಉಸಿರುಗಟ್ಟುವ ಪರಿಸ್ಥಿತಿಯಿದೆ ಎನ್ನುತ್ತಾ ನಮ್ಮ ಪ್ರಯಾಣ ವನ್ನು ಮೊಟಕುಗೊಳಿಸಿದ. ಬದಲಾಗಿ ಆತ, ನಮಗೆ ಸಲಹೆ ನೀಡಿದ್ದು ಶೈಖುನಾ ತಿರೂ ರಂಗಾಡಿ ಬಾಪು ಮುಸ್ಲಿಯಾರ್‌ರ ದರ್ಸ್. ಸಮಸ್ತ ಮುಶಾವರದ ಸಹ ಕಾರ್ಯದರ್ಶಿ ಯಾಗಿದ್ದ ಬಾಪು ಮುಸ್ಲಿಯಾರ್ ತನ್ನ ಊರಾದ ತಿರೂರಂಗಾಡಿಯಲ್ಲಿ 'ನೂರುಲ್ ಹುದಾ ಅರಬಿಕ್ ಕಾಲೇಜ್' ಎಂಬ ಹೆಸರಿನ ಸಂಸ್ಥೆಯಲ್ಲಿ ಪ್ರಧಾನ ಮುದರ್ರಿಸ್ ಆಗಿ ದ್ದರು. ಹಿಂದೊಮ್ಮೆ ಪೇರೋಡ್ ಉಸ್ತಾದ ರಿಗೆ ಪತ್ರ ಬರೆದು ವಿಚಾರಿಸಿದಾಗ ಅವರು ಪೋಸ್ಟ್ ಕಾರ್ಡೊಂದರಲ್ಲಿ ಉತ್ತರ ಬರೆದು, ಇದೇ ಬಾಪು ಮುಸ್ಲಿಯಾರ್‌ರ ದರ್ಸಿಗೆ ಸೇರಿಕೊಳ್ಳುವಂತೆ ಸೂಚಿಸಿದ್ದು ನೆನಪಿಗೆ ಬಂತು. ಮತ್ತೆ ತಡಮಾಡದೆ ತಿರೂರಂಙಾಡಿಯ ದಾರಿ ಕೇಳಿದೆವು. ಹಸನ್ ಮೋರ್ಯನ ಸೂಚನೆಯಂತೆ ಆ ದಿನ ಸಂಜೆ ಇತಿಹಾಸ ಪ್ರಸಿದ್ಧವಾದ ಮಂಬುರಂ ಮಖಾಂನಲ್ಲಿ ಖುತ್‌ಬುಝ್ಝ ಮಾನ್ ಸಯ್ಯಿದ್ ಅಲವಿ ಮೌಲದ್ದವೀಲ ﷺರನ್ನು ಝಿಯಾರತ್ ಮಾಡಿ ಅಲ್ಲಿಂದ ಒಂದು ಕಿಲೋಮೀಟರ್ ಅಂತರದೊಳಗಿ ರುವ ತಿರೂರಂಗಾಡಿ ನೂರುಲ್ ಹುದಾ ಅರಬಿಕ್ ಕಾಲೇಜು ಸೇರಿದೆವು. 'ಮಲಬಾರ್‌ನ ಮಕ್ಕಾ' ಎಂಬ ಅಪರ ನಾಮದಲ್ಲಿ ಖ್ಯಾತಿವೆತ್ತ ತಿರೂರಂಗಾಡಿ, ಖುತುಬುಝ್ಝಮಾನ್ ಮಂಬುರಂ ತಂಙಳ್ ಸಮೇತ ಅಸಂಖ್ಯ ಔಲಿಯಾಗಳ ಸ್ಪರ್ಶದಿಂದ ಪುಳಕಗೊಂಡ ಪುಣ್ಯ ಭೂಮಿ, ಅಲ್ಲಿನ ದೊಡ್ಡ ಜುಮಾ ಮಸ್ಜಿದ್ ಪ್ರಾಚೀನ ಕಾಲದಿಂದಲೇ ದರ್ಸ್‌ನಿಂದ ಪ್ರಸಿದ್ಧ ಸ್ವಾತಂತ್ರ್ಯ ಸಮರ ಸೇನಾನಿಯಾಗಿದ್ದ ನೆಲ್ಲಿಕುತ್ತ್ ಆಲಿ ಮುಸ್ಲಿಯಾರ್ ಖಿಲಾ ಫತ್ ಚಳವಳಿಯ ನೇತೃತ್ವ ವಹಿಸಿ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗಿ ಇದೇ ಮಸೀದಿಯಿಂದ ಬಂಧಿಸಲ್ಪಟ್ಟು ಕೊಯಂ ಬತ್ತೂರು ಸೆರೆಮನೆಗೆ ಒಯ್ಯಲ್ಪಟ್ಟಿದ್ದರು. 1921ರ ಕಾಲಘಟ್ಟದಲ್ಲಿ ಆರು ತಿಂಗಳ ಕಾಲ ಈ ಪ್ರದೇಶದಿಂದ ಬ್ರಿಟಿಷರನ್ನು ತೊಲಗಿಸಿ 'ಖಿಲಾಫತ್' ಆಡಳಿತವನ್ನು ಜಾರಿಗೊಳಿಸಲಾಗಿತ್ತು. ಅಂತಹ ತಿರೂ ರಂಗಾಡಿಯ ಗತ ಇತಿಹಾಸಕ್ಕೆ ಕೈಗನ್ನಡಿ ಯೆಂಬಂತೆ 'ರಶೀದ್ ನಗರ್'ನಲ್ಲಿ ನೂರುಲ್ ಹುದಾ ಅರಬಿಕ್ ಕಾಲೇಜಿನ ಭವ್ಯ ಕಟ್ಟಡ ತಲೆಯೆತ್ತಿ ನಿಂತಿತ್ತು. ನನ್ನ ಭಾಷಣ ಬದುಕಿನ ಹೆದ್ದಾರಿಯಾದ ಈ ಸಂಸ್ಥೆಯ ಪ್ರಾಂಗಳದಲ್ಲಿ 1991 ಮೇ 9 ಗುರುವಾರ ಮಗ್‌ರಿಬ್ ವೇಳೆಗೆ ನನ್ನ ಪ್ರಥಮ ಹೆಜ್ಜೆ ಗುರುತು ಮೂಡಿಸಿತು.

# 7

## ಹಿಂದಕ್ಕೆ ಗುರುವಿದ್ದ... ಮುಂದಕ್ಕೆ ಗುರಿಯಿತ್ತು...

ಮಲಪ್ಪುರಂ ಜಿಲ್ಲೆಯ ತಿರೂರಂಗಾಡಿ ಪ್ರದೇಶವು ಬಹಳ ಹಿಂದಿನ ಕಾಲದಿಂದಲೇ ಆಧ್ಯಾತ್ಮಿಕ ಪುರುಷರ ಸಂಗಮ ಕೇಂದ್ರವಾ ಗಿತ್ತು. ಪರಿಸರದ ತಿರೂರಂಗಾಡಿ ವಲಿಯ ಪಳ್ಳಿ, ನಡುವಿಲ್ ಪಳ್ಳಿ, ಚೆಮ್ಮಾಡ್ ಜುಮಾ ಮಸ್ಜಿದ್ ಮತ್ತು ಕಕ್ಕಾಡ್ ಜುಮಾ ಮಸೀದಿ ಗಳು ಪ್ರಗಲ್ಭ ಮುದರ್‍ರಿಸರು ನೂರಾರು ಮುತಅಲ್ಲಿಮರನ್ನಿಟ್ಟು ದರ್ಸ್ ಹೇಳಿಕೊಟ್ಟ ಜ್ಞಾನ ಕೇಂದ್ರಗಳಾಗಿದ್ದವು. ವಲಿಯುಲ್ಲಾಹಿ ವಡಗರ ಮುಹಮ್ಮದ್ ಹಾಜಿ ತಂಙಳ್ ﷺ 'ನಾಫಿಆದ ಇಲ್ಮ್' (ಪ್ರಯೋಜನಪ್ರದ ಜ್ಞಾನ) ಸಿಗಬೇಕಾ ದರೆ ತಿರೂರಂಗಾಡಿ ಗೆ ಹೋಗಬೇಕೆಂದು ಹೇಳುತ್ತಿದ್ದುದಾಗಿ ಪ್ರಚಾರದಲ್ಲಿದೆ. ಈ ತಿರೂರಂಗಾಡಿ ಯ ಹೆಸರು ನಾನು ಮದ್ರಸಾ ಪ್ರಾಯದ ಪ್ರಾರಂಭದಲ್ಲೇ ಕೇಳ ತೊಡಗಿದ್ದೆ. ಒಂದನೇ ಜುಝ್‌ಅ್ (ಖುರ್ ಆನಿನ ಕೊನೆಯ ಕಾಂಡ) ಓದಲು ಮುಸ್ಹಫ್ ಕೈಗೆತ್ತಿಕೊಂಡಾಗ ಅದರ ಹೊದಿಕೆಯಲ್ಲಿ 'ಆಮಿರುಲ್ ಇಸ್ಲಾಂ ಲಿತೋಪವರ್ ಪ್ರಸ್ ತಿರೂರಂಗಾಡಿ' ಅಂತ ಮುದ್ರಣಾಲಯದ ಹೆಸರು ಅಚ್ಚೊತ್ತಿದ್ದನ್ನು ಕಂಡು ಈ ಊರಿಗೆ ತಿರು-ಊರು-ಅಂಗಡಿ (ಪವಿತ್ರ ಊರು) ಅಂತ ಹೆಸರು ಬಂದಿರುವುದೇ ಈ ಪವಿತ್ರ ಖುರ್ ಆನಿನ ಮುದ್ರಣಾಲಯ ಇರುವ ಕಾರಣದಿಂದ ಆಗಿರಬಹುದೆಂದು ಅನುಮಾನ ಪಟ್ಟಿದ್ದೆ. ಆ ಊರು, ಅಲ್ಲಿನ ಖುರ್‌ಆನ್ ಮುದ್ರಿಸುವ ಪ್ರೆಸ್ ಎಲ್ಲವನ್ನು ಕಣ್ಣಾರೆ ನೋಡಲು ಅಂದು ಪುಟ್ಟ ಮನಸ್ಸು ತವಕಿಸುತ್ತಿತ್ತು. ಆದರೆ ಈಗ ಅದೇ ಕನಸಿನ ಊರಿನ ಪ್ರಗಲ್ಭ ವಿದ್ಯಾಕೇಂದ್ರವೊಂದರ ತಿರು ಸನ್ನಿಧಿಯಲ್ಲಿ ತೀರಾ ಅನಿರೀಕ್ಷಿತವಾಗಿ ನಾನು ತಲುಪಿ ಬಿಟ್ಟಿದ್ದೆ. ನನ್ನ ಮುಂದೆ ಪ್ರೌಢಗಂಭೀರವಾಗಿ ನೂರುಲ್ ಹುದಾ ಅರಬಿಕ್ ಕಾಲೇಜು ಕದ ತೆರೆದು ನಿಂತಿತ್ತು. ಶತಮಾನದ ಇತಿಹಾಸ ವಿರುವ ತಿರೂರಂಗಾಡಿಯ ಪ್ರಸಿದ್ಧ ಹಿದಾಯ ತುಸ್ಸಿಬ್‌ಯಾನ್ ಕೇಂದ್ರ ಮದ್ರಸ ಮತ್ತು ವೀರ ಚರಿ ತ್ರೆಗಳ ಕೇಂದ್ರ ಬಿಂ ದುವಾದ ತಿರೂ ರಂಗಾಡಿ ವಲಿಯ ಪಳ್ಳಿಯ ಕೂಗಳತೆ ದೂರದಲ್ಲಿ ಈ ಸಂಸ್ಥೆಯಿತ್ತು. 'ಮಲಬಾರಿನ ಮಕ್ಕ' ಎಂದು ಪ್ರಸಿದ್ಧವಾಗಿದ್ದ ಇದೇ ಊರು ಮಲಬಾರಿನ (ಈಗಿನ ಉತ್ತರ ಕೇರಳದ ಕಾಸರೋಡು, ಕಣ್ಣೂರು, ಕೋಝಿಕ್ಕೋಡ್, ಮಲಪ್ಪುರಂ, ವಯನಾಡ್ ಮತ್ತು ಪಾಲಕ್ಕಾಡ್ ಜಿಲ್ಲೆಗಳನ್ನೊಳಗೊಂಡ ಪ್ರದೇಶ ವನ್ನು ಮಲಬಾರ್ ಎನ್ನಲಾಗುತ್ತದೆ. ಆದರೆ ಪ್ರಾಚೀನ ಮಲಬಾರ್‌ನ ವ್ಯಾಪ್ತಿ ಈಗಿನ ತ್ರಿಶೂರ್ ಜಿಲ್ಲೆಯಿಂದ ಉತ್ತರಕ್ಕೆ ಕರ್ನಾ ಟಕದ ಗೋಕರ್ಣ ಪ್ರದೇಶದವರೆಗೆ ಹರಡಿತ್ತು) ವಹ್ಹಾಬಿಗಳ ಕೇಂದ್ರ ಸ್ಥಾನವೂ ಆದದ್ದು ವಿಪರ್ಯಾಸ. ಮಲಬಾರ್ ಪ್ರದೇಶದಲ್ಲಿ ನೂತನವಾದದ ವಿಷಬೀಜ ಹರಡಿದ ಕಾತಿಬ್ ಮುಹಮ್ಮದ್ ಮೌಲವಿ (ಕೆ.ಎಂ. ಮೌಲವಿ)ಯ ಹುಟ್ಟೂರೂ ಕಾರ್ಯ ಕ್ಷೇತ್ರವೂ ಇದೇ ಆಗಿತ್ತು. ಈ ಪ್ರದೇಶದಲ್ಲಿ ವಹ್ಹಾಬಿಯ್ಯತ್‌ನ ವಂಚನೆಗಳ ವಿರುದ್ಧ ಜನಜಾಗೃತಿ ಮೂಡಿಸುತ್ತಾ ಬಿರುಗಾಳಿಯಂತೆ ಅಪ್ಪಳಿಸಿದ ಅಪ್ರತಿಮ ವಿದ್ವಾಂಸರೂ, ವಾಗ್ಮಿಯೂ ಸಂವಾದ ತಜ್ಞರೂ ಆಗಿದ್ದರು ಮರ್‌ಹೂಮ್ ರಶೀದುದ್ದೀನ್ ಮೂಸ ಮುಸ್ಲಿಯಾರ್. ಸದರಿ ನೂರುಲ್ ಹುದಾ ಅರಬಿಕ್ ಕಾಲೇಜು ನಿಂತಿರುವ ಪ್ರದೇಶಕ್ಕೆ ಈ ಮಹಾತ್ಮರ ಸ್ಮರಣಾರ್ಥ 'ರಶೀದ್ ನೂರ್' ಎಂದು ನಾಮಕರಣ ಮಾಡಲಾಗಿತ್ತು.

ಹಸನ್ ಮೋರ್ಯನ ಸಲಹೆಯಂತೆ ತಿರೂರಾಂಗಡಿ ತೆರಳಿದ ನಾವು ಸರಿಸುಮಾರು ಮಗ್‌ರಿಬ್ ವೇಳೆಗೆ ನೂರುಲ್ ಹುದಾ ಕ್ಯಾಂಪಸ್ ತಲುಪಿದೆವು. ಗುರುವಾರ ದಿವಸವಾಗಿದ್ದರಿಂದ ಹೆಚ್ಚಿನ ಮುತಅಲ್ಲಿ ಮರು ಊರಿಗೆ ಹೋಗಿದ್ದರು. ಅಲ್ಲಿದ್ದ ಕೆಲವರಿಗೆ ದೂರದ ಕರ್ನಾಟಕದಿಂದ ಪುಟ್ಟ ಮುತಅಲ್ಲಿಮರು ಜ್ಞಾನಾರ್ಜನೆಗಾಗಿ 'ಹಿಜ್‌ರಾ' ಬಂದಿರುವುದನ್ನು ನೋಡಿ ಆಶ್ಚ ರ್ಯವಾಗಿರಬೇಕು. ಆ ಪೈಕಿ ರಶೀದ್ ಗೂಡಲ್ಲೂರು, ಹಂಝ ಮಣ್ಣಾರ್‌ಕಾಡ್, ರಶೀದ್ ತೆನ್ನಲ ಎಂಬ ವಿದ್ಯಾರ್ಥಿಗಳು ನಮ್ಮ ನ್ನು ಅತೀವ ಪ್ರೀತಿಯಿಂದ ಬರಮಾಡಿ ಕೊಂಡದ್ದು ನೆನಪಿದೆ. ನಮಗೆ ದರ್ಸ್‌ನ ಸಮಗ್ರ ಮಾಹಿತಿ ನೀಡಿದ್ದು, ಪ್ರಗಲ್ಭ ಉಸ್ತಾದ್‌ಗಳ ಪರಿಚಯ ಮಾಡಿಕೊಟ್ಟದ್ದು, ಕ್ಯಾಂಟೀನ್‌ನಲ್ಲಿ ಊಟಕ್ಕೆ ಕರೆದೊಯ್ದು ಊಟದ ನಂತರ ನಮ್ಮ ಪ್ಲೇಟ್‌ಗಳನ್ನು ಅವರೇ ತೊಳೆದಿಟ್ಟದ್ದು ಎಲ್ಲವೂ ನೂರುಲ್ ಹುದಾದ ಮೇಲೆ ನಮಗೆ ಅಪಾರ ಸೆಳೆತವನ್ನು ಉಂಟುಮಾಡಿದ್ದವು. ಶುಕ್ರವಾರ ರಾತ್ರಿಯಾ ದ್ದರಿಂದ ಉಸ್ತಾದ್‌ಗಳು ಯಾರೂ ಅಲ್ಲಿರ ಲಿಲ್ಲ. ಮರುದಿನ ಹಿರಿಯ ಉಸ್ತಾದ್‌ರನ್ನು ಭೇಟಿಯಾಗಿ ದರ್ಸ್‌ಗೆ ಸೇರ್ಪಡೆಗೊಂಡು ಮುಂದುವರಿಯಲು ಮನಸಾ ನಿರ್ಧರಿಸಿದೆವು. ಕನಸುಗಳಿಗೆ ರೆಕ್ಕೆಪುಕ್ಕಗಳು ಮೂಡಿ ಅನಂತ ವಿಹಾಯಸ್ಸಿನಲ್ಲಿ ಸ್ವಚ್ಛಂದವಾಗಿ ವಿಹರಿಸಿದ ಧನ್ಯಾನುಭವ.

ಆ ಕಾಲದ ಪ್ರಸಿದ್ಧ ದರ್ಸ್‌ಗಳ ಸಾಲಿ ನಲ್ಲಿ ಒಂದಾಗಿತ್ತು ಚೆಮ್ಮಾಡ್ ದರ್ಸ್. ನನ್ನ ದರ್ಸ್ ಬದುಕಿನ ಆರಂಭಿಕ ವರ್ಷಗಳಲ್ಲಿ ಅನೇಕರೊಂದಿಗೆ ಕೇರಳದ ಪ್ರಮುಖ ದರ್ಸ್‌ನ ಬಗ್ಗೆ ವಿಚಾರಿಸುವಾಗ ಸಿಗುತ್ತಿದ್ದ ಉತ್ತರ ಚೆಮ್ಮಾಡ್ ಜುಮಾ ಮಸೀದಿಯಲ್ಲಿನ ದರ್ಸ್‌ನ ಕುರಿತಾಗಿತ್ತು. ಪೊನ್ಮಳ ಉಸ್ತಾದ್ ಚೆಮ್ಮಾಡ್ ಸುನ್ನೀ ಜುಮಾ ಮಸೀದಿಯಲ್ಲಿ ಪ್ರಾರಂಭಿಸಿದ ದರ್ಸ್ ಮತ್ತು ಆ ಮಸೀದಿ ಯ ನಿರ್ಮಾಣವೇ ಆಗಿಲ್ಲದ ಕಾಲದ ಕಥೆ ಯಿದು. ಆಗ ಚೆಮ್ಮಾಡ್ ಜುಮಾ ಮಸೀದಿ ಯಲ್ಲಿ ಮುದರ್‍ರಿಸ್ ಆಗಿದ್ದವರು ಚೆರುಶ್ಶೇರಿ ಝೈನುದ್ದೀನ್ ಮುಸ್ಲಿಯಾರ್, ಅನೇಕರ ಸಲಹೆಯಂತೆ ಅಲ್ಲಿಗೆ ಸೇರಲು ನಾನೊಮ್ಮೆ ತೆರಳಿದ್ದು ನೆನಪಿದೆ. ಮಧ್ಯಾಹ್ನದಿಂದ ಮಗ್‌ರಿಬ್ ತನಕ 'ಉಸ್ತಾದ್'ಗಾಗಿ ಕಾದರೂ ಅವರು ಊರಿನಿಂದ ಆಗಮಿಸದ ಕಾರಣ ಈ ದರ್ಸ್‌ಗೆ ಸೇರುವ ಅವಕಾಶ ನನಗೆ ದೊರೆ ಯಲಿಲ್ಲ. ಆ ದಿನ ಅವರು ದರ್ಸ್‌ನಲ್ಲಿ ಇಲ್ಲದೆ ಹೋದದ್ದು ನನ್ನ ಬದುಕಿನ ಮಹತ್ತರವಾದ ತಿರುವಿಗೆ ನಿಮಿತ್ತವಾಯಿತು. ಚೇಳಾರಿ ಸಮಸ್ತದ ಇಂದಿನ ಜನರಲ್ ಸೆಕ್ರಟರಿಯ ಶಿಷ್ಯತ್ವ ದೊರತಿದ್ದರೆ ಇವತ್ತು ನನ್ನ ಕಾರ್ಯಕ್ಷೇತ್ರ, ಭಾಷಣ ಬದುಕು ಯಾವ ದಾರಿಯಾಗಿ ಚಲಿಸುತ್ತಿತ್ತೋ ಊಹಿಸಲಾಗದು.

ಅಲ್ಲಾಹನ ಅನುಗ್ರಹದಿಂದ 1991 ಮೇ 10ರ ಶುಕ್ರವಾರ ಬೆಳಿಗ್ಗೆ 9.45ಕ್ಕೆ ತಿರೂ ರಂಗಾಡಿ ನೂರುಲ್ ಹುದಾ ಅರಬಿಕ್ ಕಾಲೇಜಿನ ಪ್ರಿನ್ಸಿಪಾಲ್ ಶೈಖುನಾ ತಿರೂರಂ ಗಾಡಿ ಬಾಪು ಮುಸ್ಲಿಯಾರ್ ಸನ್ನಿಧಿಯಲ್ಲಿ ನಾವು ವಿನಮ್ರವಾಗಿ ನಿಂತಿದ್ದೆವು. ಆಧ್ಯಾತ್ಮಿಕ ತೇಜಸ್ಸು ತುಂಬಿತುಳುಕುವ ಮುಖಭಾವ, ಹಾಸ್ಯ ಮಿಶ್ರಿತ ಮಾತುಕತೆ, ವಿನಯ ವಂತಿಕೆಯ ವ್ಯಕ್ತಿತ್ವ, ಗಂಭೀರ ನಡಿಗೆ ಒಂದೇ ನೋಟದಲ್ಲಿ ಬಾಪು ಉಸ್ತಾರನ್ನು ನಮ್ಮ ಮನಸ್ಸು ಶ್ರೇಷ್ಠ ಗುರುವರ್ಯರಾಗಿ

ಒಪ್ಪಿ ಬಿಟ್ಟಿತ್ತು. ಪುಣ್ಯ ಸ್ವಹಾಬಿಗಳ ವಂಶಪರಂ ಪರೆಯಲ್ಲಿ ಜನಿಸಿದ ಅವರು ತಾನೂರು ಶೈಖ್ ಪಳ್ಳಿ ಮಖಾಂನಲ್ಲಿ ಅಂತ್ಯ ವಿಶ್ರಾಂತಿ ಪಡೆಯುತ್ತಿರುವ ಶೈಖ್ ಅಬ್ದುರ್ರಹ್ಮಾನ್ ನಕ್ಷಬಂದೀ(قدس سره)ರವರ ಮೂರನೇ ತಲೆಮಾ ರಿನ ಪ್ರತಿನಿಧಿಯಾಗಿದ್ದರು. ಅದ್ಭುತ ಅರಬೀ ಕವಿಯಾದ ಅವರು ವಿಶಿಷ್ಠ ಅರಬೀ ಕಾವ್ಯ ವಿಲಾಸಕ್ಕೆ ಕೇರಳದಲ್ಲಿ ಚಿರಪರಿಚಿತರು. ನೂತನವಾದವನ್ನು ವಿರೋಧಿಸುವುದಕ್ಕಾ ಗಿಯೇ ಸ್ಥಾಪನೆಗೊಂಡ 'ಸಮಸ್ತ ಕೇರಳ ಜಂಇಯ್ಯತುಲ್ ಉಲಮಾ' ಎಂಬ ವಿದ್ವಾಂಸ ವೇದಿಕೆಯನ್ನು ಕೆಲವು ರಾಜಕೀಯ ಹಿತಾ ಸಕ್ತಿಯ ಪಂಡಿತರು ನೂತನವಾದಿಗಳೊಂದಿ ಗಿನ ವಿಶಾಲ ಐಕ್ಯತೆಗೆ ಸೇತುವೆಯಾಗಿ ಬಳಸಿದಾಗ ಅದರ ವಿರುದ್ಧ ಸಿಡಿದೆದ್ದ ತಾಜು ಲ್ ಉಲಮಾ ನೇತೃತ್ವದ ವಿದ್ವಾಂಸರು ಸಮಸ್ತವನ್ನು ಪುನಾರಚಿಸಲು ಕೇರಳದ ಐದು ಸಾವಿರ ಪ್ರಗಲ್ಭ ಉಲಮಾಗಳ ಸಮಾವೇಶ ನಡೆಸಿದ್ದು ಬಾಪು ಉಸ್ತಾದರ, ತಿರೂರಂಗಾ ಡಿಯ ಮೇಲಾತ್ತ್ ಹೌಸ್‌ನ ಸಮೀಪದ ವಿಶಾಲ ಮೈದಾನದಲ್ಲಾಗಿತ್ತು. 1989 ಮಾರ್ಚ್ 5 ಭಾನುವಾರದಂದು ನಡೆದ ಈ ಐತಿಹಾಸಿಕ ಸಮಾವೇಶದಲ್ಲಿ ತಾಜುಲ್ ಉಲಮಾರ ಅಧ್ಯಕ್ಷತೆಯಲ್ಲಿ ಕಾಂತಪುರಂ ಉಸ್ತಾದರ ಪ್ರಧಾನ ಕಾರ್ಯದರ್ಶಿತ್ವದಲ್ಲಿ ಸಮಸ್ತವನ್ನು ಕಾನೂನು ಬದ್ಧರಾಗಿ ಪುನಾರಚಿಸಿದಾಗ ಶೈಖುನಾ ಬಾಪು ಮುಸ್ಲಿಯಾರ್ ಸದ್ರಿ ಸಮಿತಿಯ ಹಿರಿಯ ಸಹ ಕಾರ್ಯದರ್ಶಿಯಾಗಿದ್ದರು. 1985ರಲ್ಲಿ ನಡೆದ ಸಮಸ್ತದ (ಅವಿಭಜಿತ) 60ನೇ ವಾರ್ಷಿಕದಲ್ಲಿ ಹಾಡಿದ ಆಕರ್ಷಕ ಅರಬಿ ಸ್ವಾಗತ ಹಾಡು ಬಾಪು ಉಸ್ತಾದರಿಂದ ರಚಿತವಾಗಿದ್ದು ವಿದ್ವತ್ ವಲಯದಲ್ಲಿ ಅಪಾರ ಮನ್ನಣೆ ಗಳಿಸಿತ್ತು. 80 ದಾಟಿದ ಶೈಖುನಾ ಅನಾರೋಗ್ಯ ಪೀಡಿತರಾಗಿ ಇವತ್ತಿಗೂ ತಿರೂರಂಗಾಡಿಯಲ್ಲಿ ವಿಶ್ರಾಂತ ಬದುಕು ಸಾಗಿಸುತ್ತಿದ್ದಾರೆ. ಅಲ್ಲಾಹು ಅವರಿಗೆ ದೀರ್ಘಾಯುಷ್ಯ, ಆರೋಗ್ಯ ಕರುಣಿಸಲಿ -ಆಮೀನ್.

ನಮ್ಮ ಜ್ಞಾನಾಸಕ್ತಿಯನ್ನು ಗುರುತಿಸಿದ ಉಸ್ತಾದರು ನಮ್ಮನ್ನು ದರ್ಸ್‌ಗೆ ಸೇರಿಸಿ ಕೊಂಡರು. ತಾಝುಕ್ಕೋಡ್ ದರ್ಸ್‌ನಲ್ಲಿ ಹತ್ತು ದಿನಗಳ ಹಿಂದೆ ಸೇರಿದ್ದು ಅವರ ಅನುಮತಿ ಪಡೆದು ಬರುವುದಾಗಿ ಹೇಳಿದಾಗ, 'ಇಲ್ಲಿಯೂ ಹತ್ತು ದಿವಸ ನಿಂತು ನೋಡಿ, ತೃಪ್ತಿಯಾದರೆ ಮುಂದುವರಿಯಿರಿ' ಎಂದು ಚಟಾಕಿ ಹಾರಿಸಿದ್ದರು.

ಬಯಸಿದ ಸೌಭಾಗ್ಯ ಒದಗಿ ಬಂದಾಗ ತಡಮಾಡದೆ ತಾಝುಕ್ಕೋಡ್ ತೆರಳಿ ಸೂಫಿ ಉಸ್ತಾದರ ಒಪ್ಪಿಗೆ ಪಡೆದು ತಿರೂರಂಗಾಡಿ ತಲುಪುವ ತವಕವಾಯಿತು. '91ಮೇ 11 ಶನಿವಾರ (ಶವ್ವಾಲ್ 25-1411) ಬೆಳಿಗ್ಗೆ 10.45ಕ್ಕೆ ಸೂಫಿ ಉಸ್ತಾದರಲ್ಲಿ ಮನಸ್ಸಿನ ಇಂಗಿತವನ್ನು ಅರುಹಿ ಒಪ್ಪಿಗೆ ಪಡೆದೆವು. 10.55ಕ್ಕೆ ಹೊರಟ ನಮ್ಮ ಪಯಣವು ಅಪರಾಹ್ನ 3.20ಕ್ಕೆ ತಿರೂರಂಗಾಡಿ ನೂರುಲ್ ಹುದಾದ ಹೆಬ್ಬಾಗಿಲಲ್ಲಿ ಬಂದು ನಿಂತಿತು. 80 ಮುತಅಲ್ಲಿಮರಿದ್ದ ಪ್ರಮುಖ ದರ್ಸಾಗಿ ತ್ತದು. ಅರಬಿಕ್ ಕಾಲೇಜು ಎಂಬ ಹೆಸರಿ ದ್ದರೂ ಪಳ್ಳಿದರ್ಸ್ ಮಾದರಿಯ ಪಠ್ಯ ಕ್ರಮಗಳಿದ್ದವು. ಸಮಯ ಬಂಧಿತ ಪರೀ ಕ್ಷೆಯೋ ಪದವಿಯೋ ಇರಲಿಲ್ಲ. ಪ್ರಗಲ್ಭ ಉಲಮಾಗಳಾದ ಉಸ್ತಾದ್‌ಗಳ ಮಾರ್ಗ ದರ್ಶನದಲ್ಲಿ ಯಾವುದೇ ಜ್ಞಾನ ಶಾಖೆಯಲ್ಲಿ ಆಳವಾದ ಅಧ್ಯಯನಕ್ಕೆ ಇಳಿಯುವ ಅವಕಾಶ ಅಲ್ಲಿತ್ತು. ಪಠ್ಯೇತರ ಚಟುವಟಿಕೆಗಳಿಗೆ ತುಂಬು ಪ್ರೋತ್ಸಾಹವೂ ಪೂರಕ ವಾತಾ ವರಣವೂ ಇತ್ತು. ಬಾಪು ಉಸ್ತಾದ್ ಅಲ್ಲದೆ ಪ್ರಮುಖ ಯುವ ವಿದ್ವಾಂಸ, ವಾಗ್ಮಿ ಗ್ರಂಥಕರ್ತರಾದ ಹಂಝುಕ್ಕೋಯ ಬಾಖವಿ ಮೂನ್ನಿಯೂರ್ ಹಾಗೂ ಅಬ್ದುಸ್ಸತ್ತಾರ್ ಕಾಮಿಲ್ ಸಖಾಫಿ ಮೂನ್ನಿಯೂರ್ ಸಹ ಮುದರ್‍ರಿಸರಾಗಿದ್ದರು. ಮರುದಿನ ನೂರುಲ್ ಹುದಾದಲ್ಲಿ ಮೊಟ್ಟ ಮೊದಲ ಬಾರಿಗೆ ಹಂಝುಕೋಯ ಉಸ್ತಾದ್ ಪ್ರಾರಂಭಿಸಿ ಕೊಟ್ಟ ಪವಿತ್ರ ಖುರ್‌ಆನಿನ ಸೂರತುಲ್ 'ಫತ್‌ಹ್' ಬದುಕಿನ ಇನ್ನೊಂದು ಮಜಲಿಗೆ ನೀಡಿದ 'ಶುಭಾರಂಭ'ವೂ, ಭವ್ಯ ಭವಿಷ್ಯ ಅರಸಿ ನಡೆಸಿದ ಸಾಹಸಯಾತ್ರೆಗೆ ಸಂದ 'ವಿಜಯ' ವೂ ಆಗಿತ್ತು. ಈ ಎಲ್ಲ ಶುಭಾರ್ಥಗಳನ್ನು 'ಫತ್‌ಹ್' ಎಂಬ ಶಬ್ಧ ಒಳಗೊಂಡಿದೆ. ಪ್ರಾರಂಭದಲ್ಲೇ ಸಿಕ್ಕಿದ ಶುಭ ಸೂಚನೆ.

ಮೇ 15 ಬುಧವಾರ ಇಶಾ ನಮಾಝ್ ನಂತರ ನೂರುಲ್ ಹುದಾದ ಪ್ರಥಮ ಸಾಹಿತ್ಯ ಸಮಾಜದಲ್ಲಿ ಪಾಲ್ಗೊಳ್ಳುವ ಅವಕಾಶ ನನ್ನದಾಯಿತು. 'ತಹ್‌ದೀಬುಲ್ ಬಯಾನ್ ಸ್ಟೂಡೆಂಟ್ಸ್ ಎಸೋಸಿಯೇಶನ್' ಎನ್ನುವ ವಿದ್ಯಾರ್ಥಿ ವೇದಿಕೆಯಲ್ಲಿ ಪ್ರಗಲ್ಭ ವಾಗ್ಮಿಗಳ ದಂಡೇ ಇತ್ತು. ಇವತ್ತಿನ ಮಲ ಪ್ಪುರಂ ಜಿಲ್ಲಾ SYS ಅಧ್ಯಕ್ಷರಾದ ಪಿ.ಕೆ.ಎಂ. ಸಖಾಫಿ ಇರಿಂಜಲ್ಲೂರು ಆಗ (1991) ಮಲಪ್ಪುರಂ ಜಿಲ್ಲಾ SSF ಅಧ್ಯಕ್ಷರಾಗಿದ್ದು ನೂರುಲ್ ಹುದಾ ವಿದ್ಯಾರ್ಥಿಯಾಗಿದ್ದರು. ತಿರೂರು ತಾಲೂಕು SSF ಅಧ್ಯಕ್ಷರಾಗಿದ್ದ ಜಲ್‌ಫರ್ ಸ್ವಾದಿಖ್ ಎಂಬವರೂ ಅಲ್ಲಿ ವಿದ್ಯಾರ್ಥಿಯಾಗಿದ್ದು ಎಲ್ಲರೂ ಅವರನ್ನು 'ತಾಲೂಕ್' ಎಂದೇ ಕರೆಯುತ್ತಿದ್ದರು.

ಇವರೆಲ್ಲರೂ ಸಾಹಿತ್ಯ ಸಮಾಜದ ಪ್ರಮುಖ ಆಕರ್ಷಣೆಯಾಗಿದ್ದರು. ಎಲ್ಲ ರೀತಿಯ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದ್ದ ಪ್ರಗಲ್ಭ ಮುತಅಲ್ಲಿಮರು ಅಲ್ಲಿದ್ದರು. ಬಾಪು ಮುಸ್ಲಿಯಾರ್ ಕ್ಲಾಸ್‌ಗಳ ಮಧ್ಯೆ ಇದನ್ನು ಉಲ್ಲೇಖಿಸಿ ಇದೊಂದು 'ಸರ್ವಕಲಾಶಾಲೆ' ಅನ್ನುತ್ತಾ ಕಣ್ಣು ಮಿಟುಕಿಸಿ ಹೆಮ್ಮೆಯಿಂದ ನಗುತ್ತಿದ್ದರು.

ಜ್ಞಾನ ಶಾಖೆಯ ಎಲ್ಲ ಮಜಲು ಗಳಲ್ಲಿಯೂ ಪ್ರಾಗಲ್ಭ್ಯ ಪಡೆದ ಬಾಪು ಉಸ್ತಾದ್, ಖಗೋಳಶಾಸ್ತ್ರ, ಹಿಸಾಬ್, ಭೂಮಿಶಾಸ್ತ್ರ ಎಲ್ಲದರಲ್ಲೂ ಪರಿಣಿತರು. ಅರಬಿ ಸಾಹಿತ್ಯದಲ್ಲಿ ಅದ್ಭುತ ಸಾಧಕರಾದ ಅವರು ನಿಮಿಷ (ಆಶು)ಕವಿಯಾಗಿದ್ದರು. ಅವರ ಅನೇಕ ಕಾವ್ಯಗಳು ಮುದ್ರಣಗೊಂಡು ಮಾರುಕಟ್ಟೆಯಲ್ಲಿದೆ. ಶೈಖುನಾ .ಎ.ಪಿ. ಉಸ್ತಾದ್, ಶೈಖುನಾ ಅಲೀಕುಂಞಿ ಉಸ್ತಾದ್ ಮುಂತಾದವರು ದರ್ಸ್‌ಗಳಲ್ಲಿ ಬಾಪು ಉಸ್ತಾದರ ಸತೀರ್ಥರು. ಇಷ್ಟೆಲ್ಲ ಮಹತ್ವಗಳನ್ನು ಮೈಗೂಡಿಸಿದ್ದರೂ ಬಾಪು ಉಸ್ತದ್ ಮಾತ್ರ ತೀವ್ರ ಅಂತರ್ಮುಖಿ. ಸಭೆ ಸಮಾರಂಭಗಳಲ್ಲಿ ಭಾಷಣ ಮಾಡುವುದು ಇರಲಿ, ಜೋರಾಗಿ ದುಆ ಮಾಡಲೂ ಅವರು ಹಿಂಜರಿಯುತ್ತಿದ್ದರು. ಕ್ಲಾಸ್‌ಗಳಲ್ಲಿ ನಿರಂತರ ಹಾಸ್ಯ ಚಟಾಕಿ ಸಿಡಿಸುವ ಉಸ್ತಾದ್ ತನ್ನ ಸ್ಥಿತಿ ಶಿಷ್ಯಂದಿರಿಗೆ ಬರಬಾರದು ಎಂಬ ದೃಷ್ಠಿಯಿಂದಿರಬೇಕು, ಸಾಹಿತ್ಯ ಸಮಾಜವನ್ನು ಮುತಅಲ್ಲಿಮರಿಗೆ ಕಡ್ಡಾಯಗೊಳಿಸಿದ್ದರು. ತನ್ನ ಸಬ್‌ಖ್(ಪಾಠ)ಗಳಂತೆ ಪ್ರತಿವಾರದ ಸಮಾಜಕ್ಕೂ ಮಹತ್ವ ನೀಡಬೇಕೆಂದು ಎಚ್ಚರಿಸುತ್ತಿದ್ದರು. ಆದ್ದರಿಂದಲೇ ಮುತಅ ಲ್ಲಿಮ್ ಸಾಹಿತ್ಯ ಸಮಾಜವನ್ನು ಕಳೆದು ಕೊಳ್ಳುತ್ತಿರಲಿಲ್ಲ. ತಹ್‌ದೀಬುಲ್ ಬಯಾನ್ ಅಕ್ಷರಶಃ ಪ್ರತಿವಾರದ ಸಾಹಿತ್ಯ ಜಾತ್ರೆ ಯಾಗಿತ್ತು.

ಈ ಪ್ರಗಲ್ಭ ಮಲಯಾಳಿ ಪ್ರತಿಭೆಗಳ ಮುಂದೆ ಮೊಟ್ಟಮೊದಲ ಬಾರಿಗೆ ಎದ್ದು ನಿಂತು ಮಾತನಾಡಲು ನನಗೆ ಅವಕಾಶ ಸಿಕ್ಕಿದ್ದು ಮೇ 22ರ ಬುಧವಾರ

ರಾತ್ರಿ. 'ಆಚಾರವುಂ ಅನುಷ್ಠಾನವುಂ' ಎಂಬುದಾಗಿತ್ತು ಅಂದಿನ ವಿಷಯ. ನನ್ನದು ಉದ್ಘಾಟನಾ ಭಾಷಣವಾಗಿತ್ತು ಕೂಡಾ. ಮಲಯಾಳಂ ಭಾಷಾ ಉಚ್ಛಾರಣೆಗಳ ದೋಷದ ಅಂಜಿಕೆಯೊಂದಿಗೆ ಹತ್ತು ನಿಮಿಷ ಭಾಷಣ ನಡೆಸಿದ ನೆನಪು. ಅದರ ಮುನ್ನಾದಿನ (ಮೇ 21, 991) ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ನಡೆದ ಹಿನ್ನಲೆಯಲ್ಲಿ ಅಂದು ಭಾರತ ಬಂದ್ ಆಗಿತ್ತು. ಮುತಅಲ್ಲಿಮರು ಎಲ್ಲಿಗೂ ಹೋಗಲು ಬಸ್ಸಿಲ್ಲದೆ ದರ್ಸ್‌ನಲ್ಲೇ ಉಳಿದಿದ್ದರಿಂದ ನನ್ನ ಪ್ರಥಮ ಸಭೆ ಗಂಭೀರ ವಾಗಿತ್ತೆನ್ನಬಹುದು. ಆದರೆ ಮಲಯಾಳಿ ಯಲ್ಲದ ನನ್ನ ಮಲಯಾಳಂ ಭಾಷಣದಲ್ಲಿ ನುಸುಳಿ ಬರುತ್ತಿದ್ದ ಕೆಲವು ಉಚ್ಚಾರ ದೋಷಗಳನ್ನು ಹೆಕ್ಕಿ ಸಹಪಾಠಿ ಸುಲೈಮಾನ್ ಪಯ್ಯನ್ನೂರು ಆಗಾಗ ಛೇಡಿಸುತ್ತಿದ್ದುದು ಮಾತ್ರ ಅಸಹ್ಯವಾಗುತ್ತಿತ್ತು.

ನೂರುಲ್ ಹುದಾದ ಈ ವಿದ್ಯಾರ್ಥಿ ಸಮಾಜ ನನ್ನ ಭಾಷಣ ಬದುಕಿಗೆ ಸಮರ್ಥ ಗುರು ಒಬ್ಬರನ್ನು ಒದಗಿಸಿ ಕೊಟ್ಟಿದ್ದು, ಅವರು ನನ್ನನ್ನು ತಿದ್ದಿ ತೀಡುತ್ತಿದ್ದುದು ಅಲ್ಲಾಹನ ವಿಶೇಷ ಅನುಗ್ರಹವಾಗಿತ್ತು. ಹಿಂದಕ್ಕೆ ಗುರುವಿದ್ದ, ಮುಂದಕ್ಕೆ ಗುರಿಯಿತ್ತು. ಧೈರ್ಯವಾಗಿ ಮುನ್ನುಗ್ಗಬೇಕಾದುದು ಮಾತ್ರ ನನ್ನ ಮುಂದಿರುವ ಸವಾಲಾಗಿತ್ತು.

# 8

## ಪ್ರಥಮ ಕಾರ್ಯಕ್ರಮವೇ ರದ್ದಾಯಿತು!!!

ತಿರೂರಂಗಾಡಿ ನೂರುಲ್ ಹುದಾ ಅರಬಿಕ್ ಕಾಲೇಜಿನ ಜೀವನ ಎಲ್ಲ ರೀತಿಯಿಂದಲೂ ಸ್ಪೂರ್ತಿದಾಯಕವಾಗಿತ್ತು. ಪ್ರಗಲ್ಭ ವಿದ್ವಾಂಸರಾದ ಮುದರ್ರಿಸರು ಯಾವುದೇ ವಿಶ್ರಮಾಪೇಕ್ಷೆಯಿಲ್ಲದೆ ನಿರಂತರ ದರ್ಸ್‌ಗ ಳಲ್ಲೇ ಮುಳುಗು ತ್ತಿದ್ದರು. ನನ್ನ ಕಿತಾ ಬ್‌ಗಳು ಅಲ್ಲಿದ್ದ ಮೂರೂ ಮುದ ರ್ರಿಸ್‌ಗಳ ಮಧ್ಯೆ ಹಂಚಿಕೆಯಾಗಿತ್ತು. ಪ್ರಿನ್ಸಿಪಾಲ್ ಆಗಿದ್ದ ಶೈಖುನಾ ತಿರೂರಂಗಾಡಿ ಬಾಪು ಮುಸ್ಲಿಯಾರ್, ಸಹಮುದರ್ರಿಸ್ ಆಗಿದ್ದ ಹಂಝ ಕೋಯ ಬಾಖವಿ ಮೂನ್ನಿ ಯೂರ್ ಹಾಗೂ ಅಲ್ಲಿ ಹಿರಿಯ ವಿದ್ಯಾರ್ಥಿ ಯೂ ಆಗಿದ್ದ ಇನ್ನೊಬ್ಬ ಸಹಾಯಕ ಮುದ ರ್ರಿಸ್ ಅಬ್ದುಸ್ಸತ್ತಾರ್ (ಕಾಮಿಲ್ ಸಖಾಫಿ) ಮೂನ್ನಿಯೂರ್, ಒಂದು ಕ್ಷಣವನ್ನು ವ್ಯರ್ಥಗೊಳಿಸಲು ಬಿಡದೆ ಸದಾ ಗ್ರಂಥ ಪಾರಾಯಣದಲ್ಲೂ, ಅಧ್ಯಾಪನದಲ್ಲಿಯೂ ಬ್ಯುಸಿಯಾಗಿದ್ದರು. ಒಟ್ಟಿನಲ್ಲಿ ಈ ಸ್ಥಿತಿ ತುಂಬ ಪ್ರೇರಣಾತ್ಮಕವಾಗಿತ್ತು. ವಾರಕ್ಕೊ ಮ್ಮೆ ಶುಕ್ರವಾರ ರಾತ್ರಿ ಸಮೀಪದ ಮಂಬುರಂ ಖುತ್‌ಬುಝ್ಝಮಾನ್ ತಂಙಳ್ ಅವರ ಮಖಾಂನಲ್ಲಿ ನಡೆಯುತ್ತಿದ್ದ ಸ್ವಲಾತ್, ಅಸರ್ ನಮಾಝಿನ ಬಳಿಕ ಸಮೀಪದಲ್ಲೇ ಇದ್ದ ನಡುವಿಲೆ ಪಳ್ಳಿ ಹಳ್‌ರಮೀ ತಂಙಳ್ ಮಖ್‌ಬರ, ನಡುವಿಲೆ ಪಳ್ಳಿ ಪ್ರದೇಶದ್ವಾರ ದಲ್ಲೇ ಎಡಭಾಗದ ಲ್ಲಿರುವ ಅಹ್‌ಮ ದುಬ್‌ನು ಮುಹ್ಯಿ ದ್ದೀನಿಲ್ ಕೋಡಂ ಜೇರಿಯ್ಯ ಸುಮ್ಮ ತಿರೂರಂಗಾದೀ ಎಂದು ಹೆಸರಿರುವ ಪ್ರಖ್ಯಾತ ಕರ್ಮ ಶಾಸ್ತ್ರ ವಿಷಾದರೂ ಆಗಿದ್ದ ಸೂಫೀವರ್ಯರ ಮಖ್‌ಬರಃ, ವಲಿಯ ಪಳ್ಳಿಯ ಹಿಂಭಾಗದಲ್ಲಿರುವ ಪ್ರಸಿದ್ಧ ಓಡಕ್ಕಲ್ (O.K) ಕುಟುಂಬದ ಪೂರ್ವಜರ ಮಖ್‌ಬರ, ಹಬ್‌ಶೀ ತಂಙಳ್ ಮಖ್‌ಬರ, ಚೆಮ್ಮಾಡ್ ನಗರದಲ್ಲಿರುವ ಚೇರೂರ್ ಶುಹದಾಗಳ ಮಖ್‌ಬರ ಮುಂತಾದ ಸ್ಥಳಗಳಲ್ಲಿ ನಡೆಸುತ್ತಿದ್ದ ಝಿಯಾರತ್‌ಗಳು, ಪರಿಸರ ಪ್ರದೇಶಗಳಲ್ಲಿ ಜೀವಿಸುತ್ತಿದ್ದ ಮಹಾ ವಿದ್ವಾಂಸರು ಮತ್ತು ಸೂಫೀವರ್ಯ ರುಗಳ ಸಂದರ್ಶನ, ವಾರದ ಬಿಡುವಿನ ದಿನಗಳಲ್ಲಿ ದೂರದ ಪ್ರಸಿದ್ಧ ಮಖಾಂಗಳಿಗೆ ಝಿಯಾರತ್ ಯಾತ್ರೆ ನಡೆಸುವುದು ಇವುಗಳಿಗೆಲ್ಲ ಯಥೇಚ್ಛ ಸೌಕರ್ಯವಿದ್ದ ತಿರೂರಂಗಾಡಿಯ ನಮ್ಮ ಕಾಲೇಜ್ ನನ್ನ ಕನಸಿಗೆ ಇಂಬು ಕೊಡುವಂತಿತ್ತು. ವರ್ಷ ಗಳಿಂದ ಹುಡುಕುತ್ತಿದ್ದ ನನ್ನ ಸ್ವಪ್ನ ಭೂಮಿ ಇದುವೇ ಎಂದು ನೆನೆದು ಮನಸ್ಸು ಪ್ರಫುಲ್ಲ ಗೊಳ್ಳುತ್ತಿತ್ತು. ಅಧ್ಯಯನದಲ್ಲಿ ಅತೀವ ಆಸಕ್ತಿಯಿದ್ದ ನನಗೆ ಉಸ್ತಾದ್ ಹಂಝ ಕೋಯ ಬಾಖವಿ ಒಂದು ಜವಾಬ್ದಾರಿಯುತ ಕೆಲಸ ವಹಿಸಿಕೊಟ್ಟಿದ್ದರು. ಅದಾಗಲೇ 'ಸುನ್ನತ್ ಜಮಾಅತ್ ಖುರ್‌ಆನಿಲ್' ಎಂಬ ಎಂಬ ಗ್ರಂಥ ಬರೆದಿರುವ ಉಸ್ತಾದ್, 'ಸುನ್ನತ್ ಜಮಾಅತ್ ಹದೀಸಿಲ್' ಎಂಬ ಇನ್ನೊಂದು ಪ್ರೌಢ ಗ್ರಂಥ ಬರೆಯುವ ಸಿದ್ಧತೆಯಲ್ಲಿದ್ದರು. ನೂತನವಾದಿಗಳು ಗೊಂದಲಗೊಳಿಸಿರುವ ವಿಷಯಗಳನ್ನು ಪ್ರಬಲ ಹದೀಸ್‌ಗಳಿಂದ ಸಮರ್ಥಿಸುವ, ನಾನಾ ವಿಷಯಗಳಿಗೆ ಸಂಬಂಧಪಟ್ಟ ಪ್ರಬಲ ಹದೀಸ್‌ಗಳನ್ನು ವಿದ್ಯಾರ್ಥಿಗಳಿಗೂ ವಿದ್ವಾಂಸ ರಿಗೂ ಸುಲಭದಲ್ಲಿ ತಲುಪಿಸುವ ಉದ್ದೇಶ ಅವರದ್ದಾಗಿತ್ತು. ಅದಕ್ಕಾಗಿ ಸ್ವಿಹಾಹು ಸ್ಸಿತ್ತ(ಬುಖಾರಿ, ಮುಸ್ಲಿಂ, ತಿರ್‌ಮುದ್ಸೀ, ಅಬೂದಾವೂದ್, ನಸಾಈ, ಇಬ್‌ನುಮಾಜಃ ಎಂಬ ಅತ್ಯಂತ ಪ್ರಬಲವಾದ 6 ಹದೀಸ್ ಗ್ರಂಥಗಳು) ಮತ್ತು ಮುಸ್ತದ್‌ರಕ್ ಎಂಬ ಗ್ರಂಥವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅದರಲ್ಲಿ ವಿಷಯಕ್ಕೆ ಹೊಂದುವ ಹದೀಸ್ ಗಳನ್ನು ಗುರುತಿಸಿ ಉಸ್ತಾದರಿಗೆ ನೀಡುವ ಹೊಣೆಗಾರಿಕೆ ನನಗೆ ವಹಿಸಲಾಗಿತ್ತು. ಸದ್ರಿ ಗ್ರಂಥದ ಮುನ್ನುಡಿಯಲ್ಲಿ ಉಸ್ತಾದರು ಈ ವಿಷಯ ಪ್ರಸ್ತಾವಿಸಿದ್ದನ್ನೂ ಕಾಣಬಹುದು. ಹೀಗೆ ಪಠ್ಯೇತರ ಕಾರ್ಯಗಳಲ್ಲೂ ಆಧ್ಯಾತ್ಮಿಕ ವಿಚಾರಗಳಲ್ಲೂ ನೂರುಲ್ ಹುದಾ ಉತ್ತಮ ವೇದಿಕೆ ಒದಗಿಸಿ ಕೊಟ್ಟಿತು. ಪ್ರತಿ ಭಾನುವಾರಾಸ್ತ ರಾತ್ರಿ ಶೈಖುನಾ ಬಾಪು ಉಸ್ತಾದರೇ ರಚಿಸಿರುವ ಆಕರ್ಷಕ ಬದ್‌ರ್ ಬೈತನ್ನು ವಿದ್ಯಾರ್ಥಿಗಳೆಲ್ಲರೂ ಒಟ್ಟು ಸೇರಿ ವಿಶಿಷ್ಟವಾಗಿ ಹಾಡುವುದು, ಕೊನೆಗೆ ತಬರ್ರುಕ್ ವಿತರಣೆ, ಅವಾಚ್ಯ ಅನುಭೂತಿ ಯನ್ನು ನೀಡುತ್ತಿದ್ದವು.

ಈ ಎಲ್ಲ ಅನುಭವಗಳ ಜತೆಗೆ ಕಾಲೇಜಿನ ತಹ್‌ದೀಬುಲ್ ಬಯಾನ್ ಸಾಹಿತ್ಯ ಸಮಾಜ ಅಕ್ಷರಶಃ ವಿದ್ಯಾರ್ಥಿಗಳ ಪ್ರಾಯೋಗಿಕ ತರಬೇತು ಕೇಂದ್ರವಾಗಿತ್ತು. ಮೊದಮೊದಲು ನನ್ನ ಮಲಯಾಳಂ ಭಾಷಣಗಳಲ್ಲಿ ಕೆಲವು ಸ್ಖಾಲಿತ್ಯಗಳು ಕಂಡು ಬಂದಿದ್ದರೂ ನನ್ನ ಭಾಷಣಕ್ಕೆ ಸಭಿಕರಿಂದ ಉತ್ತಮ ಪ್ರೋತ್ಸಾಹ ಗಳು ದೊರಕುತ್ತಿದ್ದವು. ಸಮಾಜದ ನೋಟೀಸ್ ಬೋರ್ಡ್‌ನಲ್ಲಿ ಭಾಷಣಗಾರ ಪಟ್ಟಿಯಲ್ಲಿ ನನ್ನ ಹೆಸರು 'ರಶೀದ್ ಮಂಗಲಾಪುರಂ' ಅಂತ ನಮೂದಾಗಿದ್ದರೆ ಹಲವು ಮಿತ್ರರು ವಿಶೇಷ ಮುತವರ್ಜಿ ವಹಿಸಿ ನನ್ನ ಭಾಷಣ ಆಲಿಸಲು ಉತ್ಸಾಹ ತೋರುತ್ತಿದ್ದರು. ಆಗ ನಮ್ಮ ದರ್ಸ್‌ನ ಹಿರಿಯ ವಿದ್ಯಾರ್ಥಿಯಾಗಿದ್ದ ಎಸ್ಸೆಸ್ಸೆಫ್ ಮಲಪ್ಪುರಂ ಜಿಲ್ಲಾಧ್ಯಕ್ಷರೂ ಆಗಿದ್ದ ಪಿ.ಕೆ.ಎಂ. ಇರಿಂಙಲ್ಲೂರು ಕೆಲವೊಮ್ಮೆ ನನ್ನ ಶೋತೃವಾಗಿ ಕುಳಿತು ಅನಂತರ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಮುಂದೆ ನನ್ನ ಭಾಷಣವಿರುವ ದಿನ ಅವರನ್ನು ನಾನು ಒತ್ತಾಯ ಪೂರ್ವಕ ಆಲಿಸಲು, ಮತ್ತೆ ತಿದ್ದಲು ನಿಯೋಜಿಸುತ್ತಿದ್ದೆ.

ಬಿಡುವು ಇದ್ದಾ ಗಲೆಲ್ಲಾ ಅವರು ಹೀಗೆ ನನಗೆ ನೆರವಾಗು ತ್ತಿದ್ದರು. ಪ್ರೋತ್ಸಾಹಿಸುತ್ತಿದ್ದರು.

1991 ಆಗಸ್ಟ್ 8 ಗುರುವಾರ ಪಿಕೆಎಂ ಇರಿಂಜಲ್ಲೂರು ನನಗೊಂದು ಪುಸ್ತಕ ನೀಡಿ ಸ್ಟಡೀ ಮಾಡುವಂತೆ ಸೂಚಿಸಿದರು. ಎನ್. ಕೃಷ್ಣನ್ ನಾಯರ್ ಎಂಬವರು ಬರೆದ 'ಪ್ರಸಂಗ ಕಲ ಒರು ಪಡನಂ' (ಭಾಷಣ ಕಲೆ: ಒಂದು ಅಧ್ಯಯನ) ಎಂಬ ಮಲಯಾಳದಲ್ಲಿ ರುವ ಪ್ರಸಿದ್ಧ ಭಾಷಣ ತರಬೇತು ಪುಸ್ತಕ ವಾಗಿತ್ತದು. ಭಾಷಣದ ವಿವಿಧ ಮಗ್ಗುಲು ಗಳನ್ನು ಆಕರ್ಷಕವಾಗಿ ಪ್ರತಿಪಾದಿಸಿದ ಈ ಪುಸ್ತಕದಲ್ಲಿ ಒಬ್ಬ ಉದಯೋನ್ಮುಖ ಭಾಷಣಗಾರನಿಗೆ ಅಗತ್ಯವಾದ ಎಲ್ಲ ಸಲಹೆ ಸೂಚನೆಗಳಿದ್ದವು. ರೂ. 32 ಕೊಟ್ಟು ಅದನ್ನು ಬುಕ್‌ಸ್ಟಾಲ್‌ನಿಂದ ಖರೀದಿಸಲು ಸಾಧ್ಯವಿಲ್ಲವೆಂದು ಮನಗಂಡು ಅದರ ಮುಖ್ಯ ವಿಷಯಗಳನ್ನೆಲ್ಲ ನನ್ನ ಡೈರಿಗೆ ನಕಲು ಮಾಡಿದೆ. ನನ್ನ ಅತ್ಯಾಸಕ್ತಿಯನ್ನು ಗಮನಿಸಿದ ಪಿ.ಕೆ.ಎಂ. ಆಗಮಿಸುತ್ತಿರುವ ರಬೀವುಲ್ ಅವ್ವಲ್ ಬಗ್ಗೆ ಪುಟ್ಟದೊಂದು ಭಾಷಣ ತಯಾರಿಸಿ ಇಡುವಂತೆಯೂ ತಾನು ಹೋ ಗುವ ವೇದಿಕೆಯಲ್ಲಿ ನನ್ನನ್ನು ಕರೆದೊಯ್ದು ಐದತ್ತು ನಿಮಿಷಗಳ ಅವಕಾಶ ಕೊಡುವುದಾ ಗಿಯೂ ಹೇಳಿದ್ದರು. ಆಗಲೇ ಕೇರಳದ ಪ್ರಖ್ಯಾತ ಯುವ ವಾಗ್ಮಿಗಳ ಪಟ್ಟಿಯಲ್ಲಿ ಪಿ.ಕೆ.ಎಂ. ಹೆಸರು ಗಳಿಸಿದ್ದರು. ಪಿ.ಕೆ.ಎಂ. ಜತೆ ಹಿಂಬಾಲಿಸಿ ಒಂದೆರಡು ವೇದಿಕೆಯೇರಿ ಆತ್ಮ ವಿಶ್ವಾಸ ಗಳಿಸುವ ಪ್ರಯತ್ನ ಮುಂದುವರಿಯುತ್ತಿದ್ದಂತೆ '1991 ಆಗಸ್ಟ್ 23 ಶುಕ್ರವಾರ ಸುಬ್‌ಹ್ ನಮಾಝಿನ ತಕ್ಷಣ, ಬದುಕಿನಲ್ಲಿ ಮೊಟ್ಟ ಮೊದಲ ಬಾರಿಗೆ ಅಧಿಕೃತವಾಗಿ ಭಾಷಣಕ್ಕೆ ನನಗೊಂದು ಆಹ್ವಾನ ಸಿಕ್ಕಿತು. ಕಾಲೇಜಿನಲ್ಲಿ ನನ್ನ ಹಿರಿಯ ವಿದ್ಯಾರ್ಥಿಯಾಗಿದ್ದ ಎನ್.ಪಿ. ಹುಸೈನ್ ಪಾಂಜ್ ಎಂಬವರು ಮಲಪ್ಪುರಂ ಸಮೀಪದ ಕೋಡೂರು ಹತ್ತಿರದ 'ಪುಳಿಯಾಟ್ಟುಕುಳಂ' ಎಂಬ ಪುಟ್ಟ ಊರಿನಲ್ಲಿ ರಬೀಉಲ್ ಅವ್ವಲ್ 12ರಂದು ಭಾಷಣ ಮಾಡಲು ಬರುವಂತೆ ಆಹ್ವಾನ ಕೊಟ್ಟಿದ್ದರು. ಅಂದು ಸಫರ್ 12 ಆಗಿತ್ತು. ಭಾಷಣಕ್ಕೆ ಇನ್ನೂ ಒಂದು ತಿಂಗಳಿದೆ. ವರ್ಷಗಳ ನಿರೀಕ್ಷೆ ಸಾಕಾರಗೊ ಳ್ಳುವ ಕ್ಷಣ. ಆದರೆ ಉಸ್ತಾದ್ ಶೈಖುನಾ ಬಾಪು ಮುಸ್ಲಿಯಾರ್ ಮತ್ತು ಮಾರ್ಗ ದರ್ಶಕ ಪಿ.ಕೆ.ಎಂ. ಇರಿಂಜಲ್ಲೂರು ಅವರೊಂ ದಿಗೆ ಸಮಾಲೋಚಿಸಿ ಆಶೀರ್ವಾದ ಪಡೆದು ಆಮಂತ್ರಣ ಸ್ವೀಕರಿಸಲು ನಿರ್ಧರಿಸಿದೆ. ಸಫರ್ 17ರಂದು ಬಾಪು ಉಸ್ತಾದರಲ್ಲಿ ಈ ಬಗ್ಗೆ ಹೇಳಿದಾಗ ಉಸ್ತಾದ್ ಖುಷಿಯಿಂದ ಒಪ್ಪಿಗೆ ನೀಡಿದರು. 'ಬಹಳ ಒಳ್ಳೆಯದು, ಹೋಗಿ ಭಾಷಣ ಮಾಡು, ನನಗೂ ನಿನ್ನ ಭಾಷಣ ಕೇಳಬೇಕು. ಇಲ್ಲಿಯೂ ಒಂದು ಕಾರ್ಯಕ್ರಮ ಮಾಡೋಣ' ಎಂದರು. ಪಿಕೆಎಂ, ಸಖಿತ್ ಖುಷಿಯಿಂದ ನನ್ನ ಚೊಚ್ಚಲ ಅಧಿಕೃತ ಭಾಷಣ ಕಾರ್ಯಕ್ಕೆ ಆಶೀರ್ವಾದ ನೀಡಿದರು. ಮೊದಲ ಸ್ಟೇಜನ್ನೂ ಅವಿಸ್ಮರಣೀಯಗೊಳಿಸಲು ನಾನು ಅಪಾರ ಸಿದ್ಧತೆ ಯಲ್ಲಿ ತೊಡಗಿದೆ. ನಂತರ ಸಫರ್ 22ರಂದು ಶೈಖುನಾ ಕುಂಡೂರ್ ಅಬ್ದುಲ್ ಖಾದಿರ್ ಮುಸ್ಲಿಯಾರ್ ಅವರು ನಡೆಸುತ್ತಿದ್ದ ಕುಂಡೂರಿನ 'ದಾರುತ್ತಅ್‌ಲೀಮಿಲ್ ಗೌಸಿಯ್ಯಃ' ಸಂಸ್ಥೆಯಲ್ಲಿ ಒಂದು ಮೌಲಿದ್ ಕಾರ್ಯಕ್ರಮಕ್ಕೆ ನಾವೆಲ್ಲ ತೆರಳಿದ್ದಾಗ 'ಪುಳಿಯಾಟ್ಟುಕುಳಂ' ಕಾರ್ಯಕ್ರಮದ ಅಧಿಕೃತ ಸಂಘಟಕ ಮಜೀದ್ ಮೌಲವಿ ಎಂಬ ವ್ಯಕ್ತಿ ಅಧಿಕೃತ ಆಮಂತ್ರಣ ನೀಡಿದರು. ವರಣೇ... ವರಣೇ.. ಅಂತ ಪುನರಾವರ್ತಿಸಿ ಆ ಕಾರ್ಯಕ್ರಮಕ್ಕೆ ನಾನೊಬ್ಬ ಅವಿಭಾಜ್ಯ ಅಂಗ ಎಂಬಂತಹ ಭಾವನೆ ನನ್ನ ಮನಸ್ಸಿನಲ್ಲಿ ಮೂಡಿಸಿದ್ದರು. ಅನಂತರ ನಾನು ನನ್ನ ಸಿದ್ಧತೆ ತೀವ್ರಗೊಳಿಸಿದೆ. ನೂರುಲ್ ಹುದಾ ಲೈಬ್ರರಿಯಲ್ಲಿದ್ದ ಹಲವು ನಬಿ ಚರಿತ್ರೆಗಳ 'ಸೀರಃ'ಗಳ ಖಾಯಂ ಪಾರಾಯಣಗಾರ ನಾನಾದೆ. ರಬೀಉಲ್ ಅವ್ವಲ್ 12ರಂದು ಸಂಜೆ ನಾನು ' ಕೊಟ್ಟಕ್ಕಲ್' ಪೇಟೆಗೆ ತಲುಪಬೇಕೆಂದೂ ಅನಂತರ ಅಲ್ಲಿಂದ ಕಾರ್ಯಕ್ರಮ ಸ್ಥಳಕ್ಕೆ ಹೋಗುವುದೆಂದೂ ಪುಳಿಯಾಟ್ಟುಕುಳಂ ಮಜೀದ್ ಮೌಲವಿ ನನಗೆ ಸೂಚಿಸಿ ಹೋಗಿದ್ದರು. ಈ ರಬೀಉಲ್ ಅವ್ವಲ್ ಹನ್ನೆರಡು ಯಾವಾಗ ಬರುವುದೋ ಎಂದು ಭಾಷಣದ ಮ್ಯಾಟರ್ ಸಿದ್ಧಪಡಿಸಿಟ್ಟು ಕಾಯವುದೊಂದೇ ನನ್ನ ಕಾಯಕವಾಯಿತು.

1991 ಸೆಪ್ಟಂಬರ್ 10 ಮಂಗಳವಾರ ನಿರೀಕ್ಷೆಯಂತೆ ಪುಣ್ಯ ರಬೀಉಲ್ ಅವ್ವಲ್‌ನ ಉದಯವಾಯಿತು. ಆ ದಿನ ನಮ್ಮ ಕಾಲೇಜಿ ನಲ್ಲಿ ವಿಜೃಂಭಣೆಯ ಮೌಲಿದ್ ಏರ್ಪಡಿಸಲಾಗಿತ್ತು. ಸಮೀಪದ ದರ್ಸ್ ಗಳಾದ ತಿರೂರಂಗಾಡಿ ವಲಿಯ ಪಳ್ಳಿ, ನಡುವಿಲೆ ಪಳ್ಳಿಗಳಿಂದ ಎಲ್ಲ ಮುತಅಲ್ಲಿಮರೂ, ಮುದರ್ರಿಸರೂ ಆಗಮಿಸಿದ್ದ ಪ್ರೌಢ ಗಂಭೀರ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಕೀರ್ತನೆ ವೇದಿಕೆ. ಇನ್ನು ಹನ್ನೆರಡನೇ ದಿನ ನನ್ನ ಭಾಷಣವೆಂದು ಪುಳಕಗೊಳ್ಳುತ್ತಲೇ ಇದ್ದಾಗ ಪೋಸ್ಟ್‌ನಲ್ಲಿ ನನಗೊಂದು ಪತ್ರ ಬಂತು. ಅದು ಪುಳಿಯಾಟ್ಟು ಕುಳಂದಿಂದ ಬಂದ ಪತ್ರ. ಅದರಲ್ಲಿ ಕಾರ್ಯಕ್ರಮದ ನೋಟೀಸ್ ಇದ್ದು ಅದರಲ್ಲಿ ನನ್ನ ಹೆಸರು ಹೇಗೆ ಮುದ್ರಿತವಾಗಿರಬಹುದೆಂದು ಅತೀವ ಕುತೂಹಲ ದಿಂದ ತೆರೆದು ನೋಡಿದೆ. ಆನಂದಕ್ಕೆ ಪಾರವೇ ಇಲ್ಲದ ಕ್ಷಣಗಳು...

ಪತ್ರ ತೆರೆದಾಗ ಅದರಲ್ಲಿದ ಸಾಲುಗಳು ಹೀಗಿತ್ತು.

'ಕಾರಣಾಂತರಗಳಿಂದ ಪುಳಿಯಾಟ್ಟುಕ್ಕುಳಂ ಮೀಲಾದ್ ಕಾರ್ಯಕ್ರಮ ರದ್ದಾಗಿದೆ. ಮುಂದಿನ ದಿನಾಂಕ ನಿಗದಿಯಾದಾಗ ನಿಮಗೆ ತಿಳಿಸುತ್ತೇವೆ'

ಪ್ರಥಮ ಚುಂಬನಂ ದಂತಭಗ್ನಂ ಎಂದಂತಾಗಿತ್ತು ನನ್ನ ಸ್ಥಿತಿ. ಮೊಟ್ಟ ಮೊದಲ ಕಾರ್ಯಕ್ರಮವೇ ರದ್ದಾಗಿತ್ತು. ಪುಳಿಯಾಟ್ಟುಕ್ಕುಳಂ ನೀಡಿದ ಶಾಕ್ ತುಂಬ ಹುಳಿಯಾಗಿತ್ತು...

# 9

## ಬದುಕಿನ ದಿಕ್ಕು ಬದಲಿಸಿತು ಭಾಷಣ

ಬದುಕಿನ ಮೊಟ್ಟ ಮೊದಲ ಬಹಿರಂಗ ಭಾಷಣಕ್ಕೆ ಸಿಕ್ಕಿದ ಆಹ್ವಾನ ರದ್ದುಗೊಂಡದ್ದರಿಂದ ಮನಸ್ಸು ತುಂಬ ಭಾರವಾಗತೊಡ ಗಿತ್ತು. ಪ್ರಥಮ ಕಾರ್ಯಕ್ರಮವೇ ಮೊಟಕು ಗೊಂಡಿರುವುದು ಈ ಕ್ಷೇತ್ರದಲ್ಲಿ ನನ್ನ ವೈಫ ಲ್ಯದ ಸೂಚನೆಯಿರಬಹುದೇ? ಎಂಬ ಅಂಥ ವಿಶ್ವಾಸದ ತುಣುಕೊಂದು

ಮನಸ್ಸಿನ ಯಾವು ದೋ ಹಂದರದಲ್ಲಿ ಮೊಳೆತು ಮಾಯವಾ ಗುತ್ತಿತ್ತು. ಸ್ನೇಹಿ ತರ ಮಧ್ಯೆ ಇದು ನನಗೊಂದು ಹಿನ್ನ ಡೆಯೂ ಆಗಿತ್ತು. ಆದರೆ ರಬೀಉಲ್ ಅವ್ವಲ್ ಹನ್ನೆರಡು ಬರಲು ಇನ್ನು ನಾಲ್ಕೇ ದಿನಗಳು ಉಳಿದಿರುವಾಗ ಅನೀರಿಕ್ಷಿ ತವಾಗಿ ನನಗೆ ಮೀಲಾದುನ್ನಬಿ ಭಾಷಣಕ್ಕೆ ಇನ್ನೊಂದು ಆಹ್ವಾನ ಬಂತು. ನಮ್ಮ ಬಾಪು ಉಸ್ತಾದರ ಹಳೆ ವಿದ್ಯಾರ್ಥಿಯೂ ಉಸ್ತಾದರ ಮಗಳ ಪತಿಯೂ ಆಗಿದ್ದ ಮಹ್‌ಮೂದ್ ಮಖ್‌ದೂಮಿ ತನ್ನ ಊರಾದ ಕಣ್ಣೂರು ಜಿಲ್ಲೆಯ ಕೊಟ್ಟಪ್ಪೊಯಿಲ್ ಎಂಬಲ್ಲಿ ಮಸೀದಿ ಆಡಳಿತ ಸಮಿತಿ ಮತ್ತು ಸ್ಥಳೀಯ ಎಸ್ಸೆಸ್ಸೆಫ್ ಶಾಖೆ ಜಂಟಿ ಯಾಗಿ ಆಯೋಜಿಸಿದ ಮೀಲಾದ್ ಸಮಾವೇಶಕ್ಕೆ ಮುಖ್ಯ ಭಾಷಣಗಾರನಾಗಿ ನನಗೆ ಆಹ್ವಾನ ನೀಡಿದರು. ವಿಷಯ ತಿಳಿದು ಉಸ್ತಾದರಿಗೂ ತುಂಬ ಖುಷಿಯಾಯ್ತು. ರಬೀಉಲ್ ಅವ್ವಲ್ ಹನ್ನೆರಡರ ದಿನ ಸಂಜೆ, ಕಣ್ಣೂರು ನಗರದಿಂದ ನೆಲ್ಲಿಕ್ಕಾಪಾಲಂ ಹೋಗುವ ಬಸ್‌ನಲ್ಲಿ ಪೆರು ಮಾಚೇರಿ-ಸ್ಕೂಲ್ ಪಡಿ ಎಂಬಲ್ಲಿ ಇಳಿದು ಕೊಟ್ಟ ಪ್ಪೊಯಿಲ್ ತಲುಪುವಂತೆ ಮಹ್‌ಮೂದ್ ಮಖ್‌ದೂಮಿ ತಿಳಿಸಿದ್ದರು. ಬಡಪಾಯಿ 'ಪುಳಿ ಯಾಟ್ಟುಕ್ಕುಳಂ' ಗಿಂತ ಭಿನ್ನವಾಗಿ ಅನೇಕ ಗಣ್ಯರೂ, ಬಾಪು ಉಸ್ತಾದರ ಸಂಬಂಧಿಗಳೂ ಇರುವ ಊರಿನಲ್ಲಿ ಭಾಷಣ ಮಾಡಲು ಇನ್ನಷ್ಟು ಸಿದ್ಧತೆ ಬೇಕು ಅನಿಸಿತು. ಉಳಿದ ಮೂರು ದಿನಗಳಲ್ಲಿ ಅದ ಕ್ಕಾಗಿ ಪ್ರಯತ್ನ ಪಟ್ಟೆ.

ಹಿಜರಿ 1412ರ ರಬೀಉಲ್ ಅವ್ವಲ್ 12, 1991 ಸೆಪ್ಟೆಂಬರ್ 21 ಶನಿವಾರವಾಗಿತ್ತು ತಿರೂ ರಂಗಾಡಿ ನೂರುಲ್ ಹುದಾ ಅರಬಿಕ್ ಕಾಲೇ ಜಿನ ವಿದ್ಯಾರ್ಥಿಗಳೆಲ್ಲರೂ ಪ್ರದೇಶದ ಮೀ ಲಾದ್ ಜಾಥಾದಲ್ಲಿ ಪಾಲ್ಗೊಂಡು ಬೆಳಿಗ್ಗೆ 10 ಗಂಟೆಗೆ ಮಂಬುರಂ ಮಖಾಂಗೆ ತಲುಪಿದ್ದೆವು. ಆದರೆ ಅಲ್ಲಿ ನಡೆಯುವ ಇತರಕಾರ್ಯಕ್ರಮ ದಲ್ಲಿ ಪಾಲ್ಗೊಳ್ಳದೆ ಸಂಜೆ ವೇಳೆ ಕಣ್ಣೂರು ತಲುಪಬೇಕಿದ್ದ ನಾನು ಆತುರದಿಂದ ಅಲ್ಲಿಂದ ಹೊರಟೆ. ಮಖ್‌ದೂಮ್ ಹೇಳಿದ ಹಾಗೆ ಸಂಜೆ ನಾಲ್ಕು ಗಂಟೆಗೆ ಪೆರುಮಾಚ್ಚೇರಿ ಇಳಿದು ಕೊಟ್ಟಪ್ಪೊಯಿಲ್ ತಲುಪಿದೆ. ಸ್ಥಳೀಯ ರಿಫಾಈ ಮಸ್ಜಿದ್ ಮತ್ತು ಶಾಖಾ ಎಸ್ಸೆಸ್ಸೆ ಫ್‌ನ ಬೃಹತ್ ಕಾರ್ಯಕ್ರಮಕ್ಕೆ ನುಸ್ರುತುಲ್ ಇಸ್ಲಾಂ ಮದ್ರಸದ ಪ್ರಾಂಗಣ ಸಿಂಗರಿಸಿ ಸಿದ್ಧ ವಾಗಿ ನಿಂತಿತ್ತು. ನಿರೀಕ್ಷೆಯಂತೆ ಮಗ್‌ರಿಬ್ ನಂತರ ಕಾರ್ಯಕ್ರಮ ಶುರುವಾಯಿತು. ಪ್ರಸಿದ್ಧ ವಿದ್ವಾಂಸರೂ ಶೈಖ್ ಝೈನುದ್ದೀನ್ ಮಖ್‌ದೂಂ رحمه الله ರ ಧನ್ಯ ಪರಂಪರೆಯಲ್ಲಿ ಜನಿಸಿದವರೂ ಆದ, ಪೊನ್ನಾನಿಯಿಂದ ಆಗ ಮಿಸಿದ್ದ ಕೋಯಕುಟ್ಟಿ ಮುಸ್ಲಿಯಾರ್ ಮಖ್‌ದೂಮೀ ಅಂದು ಸಭಾಧ್ಯಕ್ಷರಾಗಿ ದ್ದರು. ತನ್ನ ಪಿತಾಮಹ ಶೈಖ್ ಝೈನು ದ್ದೀನ್ ಮಖ್‌ದೂಂ رحمه الله, ವಿಶ್ವ ವಿಖ್ಯಾತ ಕರ್ಮ ಶಾಸ್ತ್ರ ಗ್ರಂಥ 'ಫತ್‌ಹುಲ್ ಮುಈನ್' ಬರೆದ ಅದೇ ಮನೆಯಲ್ಲಿ ತಾನು ವಾಸಿಸುತ್ತಿ ರುವುದಾಗಿ ಮಾತಿನ ಮಧ್ಯೆ ಅವರು ನನ್ನಲ್ಲಿ ಹೇಳಿದ್ದರು. ವೇದಿಕೆಯಲ್ಲಿ ನನಗಿಂತ ಮುಂಚೆ ಅಬ್ದುನ್ನಾಸಿರ್ ತೊಟ್ಟಿ ಎಂಬವರು ಭಾಷಣ ಮಾಡಿದ್ದರು. ಹಾಗೆ ತಿಂಗಳುಗಳ ಪ್ರಯತ್ನ ಹಾಗೂ ವರ್ಷಗಳ ಕಾತರದ ನಂತರ ನನ್ನ ಬದುಕಿನ ಮೊಟ್ಟ ಮೊದಲ ಸಾರ್ವಜನಿಕ ಭಾಷಣಕ್ಕೆ ಕೊಟ್ಟಪ್ಪೊಯಿಲ್ ವೇದಿಕೆ ಒದಗಿಸಿತು. ಅದಕ್ಕೆ ನನ್ನ ಆತ್ಮೀಯರೂ ಇದೀಗ ಬೆಂಗಳೂರು ಜಿಲ್ಲಾ ಸುನ್ನೀ ಜಂಇಯ್ಯತುಲ್ ಮುಅಲ್ಲಿ ಮೀನ್ ಅಧ್ಯಕ್ಷರೂ, ಬೆಂಗಳೂರಿನ ಪ್ರತಿಷ್ಠಿತ ಸಅದಿಯ್ಯಾ ಎಜುಕೇಶನ್ ಸೆಂಟರ್‌ನ ಮ್ಯಾನೇಜರರೂ ಆಗಿರುವ ತಿರೂರಂಗಾಡಿ ಮಹ್‌ಮೂದ್ ಮಖ್‌ದೂಮಿ ಕಾರಣ ಕರ್ತ ರಾದರು. ಆಯತ್, ಹದೀಸ್‌ಗಳಲ್ಲದೆ ಕೆಲವು ಚಿಂತಕರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಹೇಳಿದ ಇಂಗ್ಲೀಷ್ ಉಲ್ಲೇಖಗಳು, ಮಲಯಾಳಂ ಕವಿ ವಳ್ಳ ತ್ತೋಳ್ ನಾರಾಯಣ ಮೆನೋನ್ ಹೇಳಿದ ಮಲಯಾಳಂ ಕವನದ ತುಂಡು  ಮುಂತಾ ದವು ನನ್ನ ಆ ದಿನದ ಭಾಷಣದಲ್ಲಿ ಒಳಗೊಂಡಿ ದ್ದುವು. ಭಾಷಣ ಗಂಭೀರವಾಗಿತ್ತೆಂದು ಶ್ರೋತೃಗಳ ಕಮೆಂಟ್ಸ್ ಆತ್ಮವಿಶ್ವಾಸ ಹೆಚ್ಚಿಸಿತ್ತು. ಪ್ರತಿಫಲವಾಗಿ ನೂರು ರುಪಾ ಯಿಯೂ ಸಿಕ್ಕಿತ್ತು. ಮೊಟ್ಟ ಮೊದಲ ಭಾಷಣದ ಅವರ್ಣನೀಯ ಅನುಭೂತಿ ನೀಡಿದ ಆದಿನ ನನ್ನ ಪಾಲಿಗೆ ಮತ್ತೊಂದು ಕಾರಣಕ್ಕೆ ಮಹತ್ವ ದ್ದಾಗಿತ್ತು. 1972ರ ಅಂತಹುದೇ ಒಂದು ಸಪ್ಟೆಂಬರ್ 21 ಗುರುವಾರ ನನ್ನ ಜನನ ವಾಗಿತ್ತು. ಕೊಟ್ಟಪ್ಪೊಯಿಲ್ ಭಾಷಣದ ಅವ ಕಾಶ ನನ್ನ 19ನೇ ಹುಟ್ಟು ಹಬ್ಬದ ಉಡುಗೊ ರೆಯಂತಿತ್ತು.

ಮರುದಿನ ರಾತ್ರಿ 8 ಗಂಟೆಗೆ ಮೊಗ್ರಾಲ್‌ಗೆ ತಲುಪಿ ಅಲ್ಲಿನ ದೊಡ್ಡ ಜುಮಾ ಮಸೀದಿ ಯಲ್ಲಿ ಮುದರ್ರಿಸ್ ಆಗಿದ್ದ ನನ್ನ ತಂದೆಯಲ್ಲಿ ವಿಷಯ ತಿಳಿಸಿದಾಗ ಅವರಿಗೆ ಎಲ್ಲಿಲ್ಲದ ಸಂಭ್ರಮ. ತನ್ನಂತೆಯೇ ತನ್ನ ಮಗನೂ ಭಾಷಣಗಾರನಾಗುವ ಹಂತದಲ್ಲಿರುವುದು ಅವರಲ್ಲಿ ಹೊಸ ನಿರೀಕ್ಷೆ ಮೂಡಿಸಿತ್ತು. ತೀವ್ರ ಆರ್ಥಿಕ ಅಡಚಣೆಯಿಂದಾಗಿ ನನ್ನನ್ನು ದರ್ಸ್ ಬಿಡಿಸಿ ಗಲ್ಫ್‌ಗೆ ಕಳಿಸುವ ಉದ್ದೇಶದಲ್ಲಿದ್ದ ಅವರಿಗೆ ತನ್ನ ಅಪೇಕ್ಷೆಯಿಂದ ಹಿಂದೆ ಸರಿ ಯಲು ಮತ್ತು ನನ್ನ ದರ್ಸ್ ಕಲಿಕೆಯನ್ನು ಮುಂದು ವರಿಸಲು ಇದು ಪ್ರೇರಣೆ ನೀಡಿತ್ತು. ಒಟ್ಟಾರೆ ಯಾಗಿ ನನ್ನ ಮೊದಲ ಭಾಷಣ ನನ್ನ ಬದು ಕನ್ನೇ ಬದಲಾಯಿಸುವ ತಿರುವಾಯಿತು.

ಪರಿಣಾಮವಾಗಿ ಮುಂದಿನವಾರ, ಸೆಪ್ಟೆಂ ಬರ್ 27ರಂದು ಮುಲ್ಕಿ ಸಮೀಪದ ಲಿಂಗಪ್ಪ ಯ್ಯನ ಕಾಡು ಎಂಬಲ್ಲಿ ತಂದೆಯ ಭಾಷಣ ನಿಗದಿ ಯಾಗಿದ್ದು ತುಸು ಅನಾರೋಗ್ಯದ ಕಾರಣ ನನ್ನನ್ನು ಬದಲಿಗೆ ಕಳುಹಿಸಿದ್ದರು. ಅಲ್ಲಿ ಒಂದು ಗಂಟೆಯ ಕಾಲ ನಾನು ಭಾಷಣ ಮಾಡಿದ್ದು ಅದರೊಳಗೆ ತಂದೆ ಅಲ್ಲಿಗೆ ಆಗಮಿಸಿ ಕಾರ್ಯ ಕ್ರಮ ಮುಂದುವರಿಸಿದ್ದರು. ನನ್ನ ತಾಯಿಯ ಚಿಕ್ಕಪ್ಪನ ಮಗ ಝೈನುದ್ದೀನ್ ಮುಸ್ಲಿ ಯಾರ್ (ಆತ್ರಾಡಿ) ಆಗ ಲಿಂಗಪ್ಪಯ್ಯನ ಕಾಡಿನ ಧಾರ್ಮಿಕ ಉಸ್ತುವಾರಿ ನೋಡಿ ಕೊಳ್ಳುತ್ತಿದ್ದರು. ಆದಿನ ರಾತ್ರಿ ನಾನು ಮತ್ತು ತಂದೆ ಮುಲ್ಕಿ ಶಾಫಿಈ ಜುಮಾ ಮಸೀದಿ ಯಲ್ಲಿ ತಂಗಿದ್ದು ಅಲ್ಲಿ ಮುದರ್ರಿಸ್ ಆಗಿದ್ದ ಅಬ್ದುಲ್ ಖಾದಿರ್ ಅಲ್ ಖಾಸಿಮಿ (ಬಂಬ್ರಾಣ) ಉತ್ತಮ ಆತಿಥ್ಯ ನೀಡಿದ ನೆನಪು.

ಮುಂದಿನ ವಾರ ಅಕ್ಟೋಬರ್ 4ರಂದು ಮೊಗ್ರಾಲ್ ಕುನ್ನಿಲ್ ಮಸೀದಿಯ ಮೀಲಾದ್ ಸಮಾವೇಶದಲ್ಲಿ ಪುಟ್ಟ ಭಾಷಣ ಮಾಡಿದ್ದೆ. ಇದರೊಂದಿಗೆ ನನ್ನನ್ನು ಗಲ್ಫ್‌ಗೆ ಕಳಿಸುವ ಉದ್ದೇಶದಿಂದ ತಂದೆ ಸಂಪೂರ್ಣ ಹಿಂದೆ ಸರಿದರು. ಖ್ಯಾತವಾಗ್ಮಿಯಾಗಿ ತನ್ನ ಪರಂಪರೆ ಯನ್ನು ಮುಂದುವರಿಸಲು ತಂದೆ ಎಲ್ಲ ರೀತಿ ಯ ಬೆಂಬಲ ನೀಡಿ ಹರಸಿದರು.

ಇದಾದ ಮೇಲೆ ನಾನು ತಿರೂರಂಗಾಡಿ ತಲುಪಿದಾಗ ಕಾಲೇಜ್ ವಿದ್ಯಾರ್ಥಿಗಳೆಡೆ ಯಲ್ಲಿ ನನಗೆ ಪುಟ್ಟ ವಾಗ್ಮಿ ಎಂಬ ನೆಲೆಯಲ್ಲಿ ಸ್ವಲ್ಪ ಗೌರವ ಸಿಗತೊಡಗಿತು. ನನ್ನ ಹೆಸರಿ ರುವ ಸಾಹಿತ್ಯ ಸಮಾಜದಲ್ಲಿ ಎಂದಿಗಿಂತಲೂ ಹೆಚ್ಚು ಸಭಿಕರು ನೆರೆಯುತ್ತಿದ್ದರು. ಮಾರ್ಗ ದರ್ಶಿ  ಪಿ.ಕೆ.ಎಂ.(ಸಖಾಫಿ) ಇರಿಂಜಲ್ಲೂರು ತನ್ನ ತರಬೇತನ್ನು ಇನ್ನಷ್ಟು ಬಿಗಿಗೊಳಿಸಿದರು. ಸಹ ಪಾಠಿಗಳು ತಮ್ಮ ಊರುಗಳಲ್ಲಿ ಸಣ್ಣಪುಟ್ಟ ಕಾರ್ಯಕ್ರಮಗಳಿಗೆ ನನ್ನನ್ನು ಆಹ್ವಾನಿಸ

ತೊಡಗಿದರು.

1991 ನವೆಂಬರ್ 27 ಬುಧವಾರ ನನ್ನ ವಿದ್ಯಾರ್ಥಿ ಜೀವನದ ಮರೆಯಲಾಗದ ದಿನ. ಕೆಲದಿನಗಳ ಹಿಂದೆ ಸುನ್ನೀ ವೈರಿಗಳ ಕುತಂತ್ರಕ್ಕೆ ಬಲಿಯಾಗಿ ಶೈಖುನಾ ಕಾಂತಪುರಂ ಉಸ್ತಾದ್ ಸೌದಿ ಅರೇಬಿಯಾದ 'ರಿಯಾದ್'ನಲ್ಲಿ ಬಂಧಿಸಲ್ಪಟ್ಟಿದ್ದರು. ವಹಾಬಿಗಳ ಪ್ರತೀಕಾರ ಮನಸ್ಸು ಇದರ ಹಿಂದೆ ಕೆಲಸ ಮಾಡಿತ್ತು. ಎ.ಪಿ. ಉಸ್ತಾದರ ಬಂಧನ ಸುನ್ನೀ ವಲಯದಲ್ಲಿ ತೀವ್ರ ಆಘಾತವನ್ನುಂಟುಮಾಡಿತ್ತು. ಆದರ್ಶ ಗುರುವಿನ ವಿಮೋಚನೆಗಾಗಿ ನಾಡಿನಾ ದ್ಯಂತ ಪ್ರಾರ್ಥನೆಗಳು, ಹರಕೆಗಳು ನಿರಂತರ ನಡೆದವು. ನಮ್ಮ ಕಾಲೇಜು ವಿದ್ಯಾರ್ಥಿಗಳೆಲ್ಲ ಸೇರಿ ಪಿ.ಕೆ.ಎಂ. ಇರಿಙಲ್ಲೂರು ನೇತೃತ್ವದಲ್ಲಿ ತಿರೂರಂಙಾಡಿ ನಡುವಿಲೆ ಪಳ್ಳಿ ವಠಾರದಲ್ಲಿ ರುವ ಅರಬಿ ತಂಙಳ್ ಮಖಾಂನಲ್ಲಿ ಕೂಟ ಝಿಯಾರತ್ ನಡೆಸಿದ್ದೆವು. ಅಲ್ಲಾಹನ ಅಪಾರ ಅನುಗ್ರಹದಿಂದ ಶೈಖುನಾ ಕಾಂತಪುರಂ ಉಸ್ತಾದ್ ಈ ಭಯಾನಕ ಬಂಧನದಿಂದ ಬಿಡುಗಡೆಯಾಗಿ ಊರು ತಲುಪುವ ದಿನವಾ ಗಿತ್ತು. '91 ನವೆಂಬರ್ 27 ಬುಧವಾರ' ಮಹಾ ಗುರುವನ್ನು ಬರಮಾಡಿ ಕೊಳ್ಳಲು ಸುನ್ನೀ ಸಾಗರ ಕ್ಯಾಲಿಕಟ್ ಏರ್‌ಪೋರ್ಟ್ ಪರಿಸರದಲ್ಲಿ ತುಂಬಿತುಳುಕಿತ್ತು. ಆ ಮಹಾ ಜನ ಸಂದೋಹ ದಲ್ಲಿ ಒಂದು ಬಿಂದುವಾಗಲು ಕೆ.ಎಲ್.ಎಂ. 8544 ಜೀಪ್‌ನಲ್ಲಿ ಸ್ನೇಹಿತರ ಜತೆ ನಾನೂ ತೆರಳಿದ್ದೆ. ಪೂರ್ವಾಹ್ನ 11.30ಕ್ಕೆ ದಶಸಹ ಸ್ರಾರು ಜನರ ತಕ್‌ಬೀರ್ ಧ್ವನಿಗಳ ಮಧ್ಯೆ ಜನನಾಯಕ ಕಾಂತಪುರಂ ಉಸ್ತಾದ್ ಕರಿಪ್ಪೂರ್ ವಿಮಾನ ನಿಲ್ದಾಣದಲ್ಲಿ ಬಂದಿಳಿದರು.

ಖ್ಯಾತ ಲೇಖಕ ಮರ್‌ಹೂಂ ಅಬ್ದುರ್ರ ಝಾಖ್ ಕೊಟ್ಟಿ ಆ ದಿನದ ಸಿರಾಜ್ ದಿನ ಪತ್ರಿಕೆಯಲ್ಲಿ ಎ.ಪಿ. ಉಸ್ತಾದರನ್ನುದ್ದೇಶಿಸಿ 'ಸ್ವಾಗದಂ ಧೀರ ಸಾರಥೇ' ಎಂಬ ರೋಮಾಂಚ ನಕಾರಿ ಲೇಖನ ಬರೆದಿದ್ದರು. 'ಸಿರಾಜ್'ನ ಆ ಪುಟವನ್ನು ಎತ್ತಿ ಹಿಡಿದು ನಾವೆಲ್ಲ ಉಸ್ತಾದ ರಿಗೆ ಸ್ವಾಗತ ಕೋರಿದೆವು. ನಾಸಿರುದ್ದೀನ್ (ಸಖಾಫಿ) ಕೋಟ್ಟಯಂನ ಮೈನವಿರೇ ಳಿಸುತ್ತಿದ್ದ ಎನೌನ್ಸ್‌ಮೆಂಟ್ ಏರ್‌ಪೋರ್ಟ್ ಪರಿಸರ ವನ್ನು ಹರ್ಷಪುಳಕಗೊಳಿಸುತ್ತಿತ್ತು. ಅಂದು ಸಾಯಂಕಾಲ ಕೋಝಿಕ್ಕೋಡ್ ಮುದಲಕ್ಕುಳಂ ಮೈದಾನದಲ್ಲಿ ಬೃಹತ್ ಅಭಿನಂ ದನಾ ಸಮ್ಮೇಳನವನ್ನೂ ಹಮ್ಮಿ ಕೊಳ್ಳಲಾ ಗಿತ್ತು. ಅದರಲ್ಲಿ ಎ.ಪಿ. ಉಸ್ತಾದರನ್ನು ಅನು ಮೋದಿಸಿ ಹಾಡಲು 'ಬುಶ್‌ರಾಲಕ ಯಾ ಖುರ್ರತ ಐನಿ... ತ್ತೂಬಾ ಲಕ ಯಾ ಗುರ್ರತ ಅಮ್ನಿ' ಎಂದು ಪ್ರಾರಂಭಿಸುವ ಅತ್ಯಾಕರ್ಷಕ ಗೀತೆ ಯೊಂದನ್ನು ಶೈಖುನಾ ಬಾಪು ಉಸ್ತಾದ್ ರಚಿಸಿ ಕೊಟ್ಟಿದ್ದರು. ಸಮ್ಮೇಳ ನದಲ್ಲಿ ಆ ಹಾಡನ್ನು ಮರ್ಕಝ್ ಶರೀಅತ್ ಕಾಲೇಜು ವಿದ್ಯಾರ್ಥಿ ಉಸ್ಮಾನ್(ಸಖಾಫಿ) ತಿರುವತ್ರ ಹಾಗೂ ಮರ್ಕಝ್ ಬೋರ್ಡಿಂಗ್ ಮದ್ರಸ ವಿದ್ಯಾರ್ಥಿ, ಈಗ ಲಂಡನ್‌ನಲ್ಲಿ ನೆಲೆಸಿರುವ ಅಝೀಝ್ ವೇಂಙಂ ಸುಮಧುರ ಕಂಠದಿಂದ ಹಾಡಿ ಲಕ್ಷಾಂತರ ಮಂದಿಯ ಮನಗೆದ್ದಿ ದ್ದರು. ಒಟ್ಟಿನಲ್ಲಿ ವಿಮಾನ ನಿಲ್ದಾಣದ ಸ್ವಾಗತ ಸಮಾರಂಭ ಮತ್ತು ಸಾಯಂಕಾಲದ ಮುದಲ ಕ್ಕುಳಂ ಮೈದಾನದ ಮಹಾ ಸಮ್ಮೇಳನವು ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿತ್ತು. ಸುನ್ನೀ ಸಂಘ ಚಟುವಟಿಕೆಗಳತ್ತ ತೀವ್ರ ಸೆಳೆತ ಮತ್ತು ಕಾಂತಪುರಂ ಉಸ್ತಾದರ ಮೇಲೆ ಕಟ್ಟಾ ಅಭಿಮಾನ ಮೂಡಲು ಇವು ಕಾರಣವಾದವು.

ಮರುದಿನ ಬೆಳಿಗ್ಗೆ 11 ಗಂಟೆಗೆ ನಮ್ಮ ಕಾಲೇ ಜಿಗೆ ವಲಿಯ್ಯುಲ್ಲಾಹಿ ವಡಗರ ಮುಹಮ್ಮದ್ ಹಾಜಿ ಭೇಟಿ ನೀಡಿ ನಮಗೆಲ್ಲಾ ದುಆ ನಡೆಸಿ ಕೊಟ್ಟರು. ಪ್ರತಿ ಹಿಜರಿ ತಿಂಗಳ 20 ರಂದು ಮಲ ಪ್ಪುರಂ ಜಿಲ್ಲೆಯ ತಿರೂರು-ವಾಣಿಯನ್ನೂರ್ ನಲ್ಲಿ ಅವರ ಪತ್ನಿ ಮನೆಯಲ್ಲಿ ನಡೆಯುತ್ತಿದ್ದ ಶಾದುಲೀ ರಾತೀಬ್‌ಗೆ ಅನಂತರ ನಾವು ಖಾಯಂ ಭಾಗಿಗಳಾದೆವು. ಸದ್ರಿ ರಾತೀಬ್‌ಗಳಲ್ಲಿ ವಡಗರ ತಂಙಳ್ ನೇರವಾಗಿ ಹಾಜರಾಗಿ ಕೊನೆ ತನಕ ಇರುತ್ತಿದ್ದರು. ಅವರ ಇಳಿ ವಯಸ್ಸು, ಅನಾರೋಗ್ಯ, ದಣಿವು ಯಾವುದೂ ಅವರಿಗೆ ಅಡ್ಡಿಯಾಗುತ್ತಿರಲಿಲ್ಲ.

ಕೆಲವೇ ದಿನಗಳಲ್ಲಿ ಮಂಬುರಂ ಝಿಯಾ ರತ್‌ಗೆ ಬಂದಿದ್ದ ಎ.ಪಿ.ಉಸ್ತಾದ್, ನಮ್ಮ ಕಾಲೇ ಜ್‌ಗೆ ಬಂದು ಬಾಪು ಉಸ್ತಾದರನ್ನು ಸಂದರ್ಶಿ ಸಿದ್ದರು. ಎ.ಪಿ. ಉಸ್ತಾದರನ್ನು ತುಂಬ ಹತ್ತಿರ ದಿಂದ ಕಂಡು ಧನ್ಯವಾದ ಕ್ಷಣವದು.

ವಿದ್ವತ್ ವಲಯ ಮತ್ತು ಅರಬೀ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಮನ್ನಣೆಯನ್ನು ಗಳಿಸಿದ್ದ ಉಸ್ತಾದ್ ಶೈಖುನಾ ತಿರೂರಂಙಾಡಿ ಬಾಪು ಮುಸ್ಲಿಯಾರರನ್ನು ಭೇಟಿಯಯಾಗಲು ನೂರುಲ್ ಹುದಾ ಅರಬಿಕ್ ಕಾಲೇಜಿಗೆ ಅನೇಕ ಪ್ರಗಲ್ಭ ವಿದ್ವಾಂಸರೂ ಸಾದಾತ್‌ಗಳೂ ಆಗ ಮಿಸುತ್ತಿದ್ದರು. ಉಸ್ತಾದರ ಪರಮಾಪ್ತರಾ ಗಿದ್ದ ಮರ್‌ಹೂಂ ವಲಿಯ್ಯುಲ್ಲಾಹಿ ಕುಂಡೂರ್ ಅಬ್ದುಲ್ ಖಾದಿರ್ ಮುಸ್ಲಿಯಾರ್ ಅಲ್ಲಿನ ನಿತ್ಯ ಸಂದರ್ಶಕರಾಗಿದ್ದರು. ಕೆಲವೊಮ್ಮೆ ತಾನು ನಡೆಸುತ್ತಿದ್ದ ಸಂಸ್ಥೆ ಕುಂಡೂರ್ - ದಾರುತ್ತಅ್‌ಲೀಮಿಲ್ ಗೌಸಿಯ್ಯಃದ ವಿದ್ಯಾರ್ಥಿ ಗಳನ್ನೂ ಜತೆಗೆ ಮೈಕ್, ಬಾಕ್ಸ್‌ಗಳನ್ನೂ ತಂದು ಕಾಲೇಜು ವರಾಂಡದಲ್ಲಿ ಕುಳಿತು ಬುರ್ದಾ ಕಾವ್ಯಾಲಾಪನೆ ಮಾಡುತ್ತಿದ್ದರು. ಇತ್ತೀಚಿನ ಕಾಲದಲ್ಲಿ ನಾಡಿನಾದ್ಯಂತ ಜನಪ್ರಿಯವಾ ಗಿರುವ ಬುರ್ದಾ ಮಜ್ಲಿಸ್‌ಗಳ ಪ್ರೇರಕ ಶಕ್ತಿ ಎರಡು ದಶಕಗಳ ಹಿಂದೆ ಶೈಖುನಾ ಕುಂಡೂರ್ ಉಸ್ತಾದ್ ಆಗಿದ್ದರು ಎನ್ನುವುದು ವಾಸ್ತವ.

ಹೀಗೇ, ಧಾರ್ಮಿಕ ವಿದ್ಯಾಲಯವೆಂಬುದು ಅರಬೀ ಗ್ರಂಥಗಳ ಭಾಷಾಂತರವನ್ನು ಉರುಹೊಡೆಯುವ ಕೇವಲ ಪಾಠಶಾಲೆಗಳಲ್ಲ. ಅದು ಬದುಕಿನ ಅಖಿಲ ಮಜಲುಗಳಲ್ಲಿ ಪರಿ ವರ್ತನೆ ಸೃಷ್ಟಿಸುವ ಪ್ರತಿಭಾ ಪೋಷಣೆಯ ಪ್ರಯೋಗ ಶಾಲೆಯಾಗಿರಬೇಕು ಎಂಬುದಕ್ಕೆ ಹೇಳಿ ಮಾಡಿಸಿದ ಮಾದರಿಯಾಗಿತ್ತು ತಿರೂರಂ ಙಾಡಿ ನೂರುಲ್ ಹುದಾ ಅರಬಿಕ್ ಕಾಲೇಜು. ಕನಸುಗಳಿಗೆ ಸಾಫಲ್ಯದ ಸ್ಪರ್ಶ ನೀಡಿದ, ಬದು ಕಿನಲ್ಲಿ ಎತ್ತರಕ್ಕೇರಲು ಮೆಟ್ಟಿಲುಗಳನ್ನು ಜೋಡಿಸಿ ಕೊಟ್ಟ ಸನ್ಮಾರ್ಗದ ಬೆಳಕಾಗಿತ್ತದು. ಅಕ್ಷರಾರ್ಥದಲ್ಲಿ ನೂರುಲ್ ಹುದಾ.

## 10

### ನೂರುಲ್ ಹುದಾದಿಂದ ದಾರುಲ್ ಮಅರಿಫ್‌ಗೆ

ಬದುಕಿನ ಮಹತ್ತರ ತಿರುವಿಗೆ ಕಾರಣ ವಾದ ತಿರೂರಂಙಾಡಿ ನೂರುಲ್ ಹುದಾ ಅರಬಿಕ್ ಕಾಲೇಜು, ವಿದ್ಯಾರ್ಥಿಗಳ ಜ್ಞಾನಾಭಿ ವೃದ್ಧಿ ಮತ್ತು ಪ್ರತಿಭಾ ಪೋಷಣೆಗೆ ಅಗತ್ಯ ವಾದ ಎಲ್ಲ ವ್ಯವಸ್ಥೆಗಳನ್ನು ಒದಗಿಸುತ್ತಾ 'ಸರ್ವಕಲಾ ಶಾಲೆ' (ಬಾಪು ಉಸ್ತಾದರ ಪ್ರಯೋಗ)ಯಾಗಿ ಮುಂದುವರಿಯು ತ್ತಿದ್ದಂತೆ, ದುರದೃಷ್ಟವಶಾತ್ ಕಾಲೇಜು ಆಡಳಿತ ಸಮಿತಿ ಯಲ್ಲಿ ಸಣ್ಣದೊಂ ದು ಬಿರುಕು ಕಾಣ ತೊಡಗಿತ್ತು. ಅದರ ಕಾರಣಗಳು ಪೂರ್ಣವಾಗಿ ನೆನಪಿಲ್ಲ. ಆ ತನಕ ಕಾಲೇಜಿಗೆ ಬೆನ್ನೆಲುಬಾಗಿ ನಿಂತಿದ್ದ, ಜಿಲ್ಲೆಯ ಪ್ರಮುಖ ವಿದ್ವಾಂಸರೂ, 1989 ಮಾರ್ಚ್ 5ರಂದು ಸಯ್ಯಿದುನಾ ಉಳ್ಳಾಲ್ ತಂಙಳ್ ಅಧ್ಯಕ್ಷ ರಾಗಿಯೂ ಶೈಖುನಾ ಕಾಂತಪುರಂ ಉಸ್ತಾದ್ ಪ್ರಧಾನ ಕಾರ್ಯದರ್ಶಿಯಾಗಿಯೂ ಆಗಿ ಆಯ್ಕೆಯಾದ ಪುನಾರಚಿತ 'ಸಮಸ್ತ'ದ ಪ್ರಪ್ರಥಮ ಕೋಶಾಧಿಕಾರಿಯೂ ಆಗಿದ್ದ ಮರ್‌ಹೂಂ ಚಾಪನಂಙಾಡಿ ಬೀರಾನ್ ಕುಟ್ಟಿ ಮುಸ್ಲಿಯಾರ್, ಕಾಲೇಜು ಸಮಿತಿಯೊಂದಿಗೆ ಅಭಿಪ್ರಾಯ ಭಿನ್ನತೆ ಹೊಂದಿದ್ದು ಈ ಆಘಾತ ಕಾರಿ ಬೆಳವಣಿಗೆಗೆ ಕಾರಣವಾದದ್ದೆಂದು ತೋರುತ್ತದೆ. ಒಂದು ಹಂತದಲ್ಲಿ ಕಾಲೇಜು ಸಂಪೂರ್ಣ ಮುಚ್ಚುವುದೆಂಬ ಗುಮಾನಿ ಹರ ಡಿತ್ತು. ಸಂಸ್ಥೆಗೆ ಬರುವ ಆದಾಯ ನಿಂತಿತ್ತು. ಸಮಿತಿಯ ಪ್ರಮುಖರು ವಿರುದ್ಧ ದಿಕ್ಕಿಗೆ ಮುಖ ಮಾಡಿ ನಿಂ ತಿದ್ದರು. ಕೇರಳದ ಆಧ್ಯಾತ್ಮಿಕ ದಿಗಂತ ದ ಧ್ರುವತಾರೆಯಾ ಗಿದ್ದ ಶೈಖುನಾ ವಲಿಯ್ಯುಲ್ಲಾಹಿ ಚಾಪನಂಙಾಡಿ ಬಾಪು ಮುಸ್ಲಿಯಾರ್ ಅವರ ಊರಿನವರೂ ಪ್ರಮುಖ ಶಿಷ್ಯರೂ ಆಗಿದ್ದ ಬೀರಾನ್ ಕುಟ್ಟಿ ಮುಸ್ಲಿಯಾರ್ ಆ ಕಾಲದಲ್ಲಿ ಆಧ್ಯಾತ್ಮಿಕ ಮಜ್ಲಿಸ್‌ಗಳ ತುಂಬು ಸಾನಿಧ್ಯವಾಗಿದ್ದರು. ಅಪಾರ ಧೈರ್ಯ ಶಕ್ತಿಗೆ ಹೆಸರಾಗಿದ್ದ ಅವರು ಸಮಸ್ತದ ಪುನಾರಚನೆಯ ಕಾಲದಲ್ಲಿ ಮಲ ಪ್ಪುರಂ ಜಿಲ್ಲೆಯಲ್ಲಿ ಸುನ್ನೀ ಚಳವಳಿಯ ಪ್ರಚಂಡ ಶಕ್ತಿಯಾಗಿದ್ದರು. ನೂರುಲ್ ಹುದಾ ಮುಚ್ಚುವುದೋ ಮುಂದುವರಿಸು ವುದೋ ಎಂಬ ಚಾರಿತ್ರಿಕ ತೀರ್ಮಾನ ತೆಗೆಯಲು 1991 ಆಗಸ್ಟ್ 2 ಶುಕ್ರವಾರ (1412 ಮುಹರ್ರಂ 21) ಸಂಜೆ ಸಭೆ ಕರೆಯಲಾಗಿತ್ತು. ಈ ಸಭೆಯಲ್ಲಿ ಯಾವುದೇ ನಿರ್ಣಯ ತೆಗೆ ಯಲು ಸಾಧ್ಯವಾಗದೆ ಸಭೆಯನ್ನು ಮುಂದಿನ ಶುಕ್ರವಾರಕ್ಕೆ ಮುಂದೂಡಲಾಗಿತ್ತು. ಒಂದು ವಾರದ ಮಟ್ಟಿಗೆ ಸಂಸ್ಥೆಯ ಖರ್ಚು ವೆಚ್ಚ ಗಳನ್ನು ಭರಿಸಲು ಸಮಿತಿಯಲ್ಲಿದ್ದ ಅನಿವಾಸಿ ಉದ್ಯಮಿ ಚೆಮ್ಮಾಡ್ ಇಬ್‌ರಾಹೀಂ ಕುಟ್ಟಿ ಹಾಜಿ ಹಾಗೂ ತಿರೂರಂಙಾಡಿ ಪ್ರಸಿದ್ಧ ನಡುವಿಲ್ ಪಳ್ಳಿ ಮುದರ್ರಿಸ್, ಪ್ರದೇಶದಲ್ಲಿ 'ಸುನ್ನೀ' ಎಂದೇ ಖ್ಯಾತರಾಗಿದ್ದ ಪಿ. ಮುಹ ಮ್ಮದ್ ಕುಟ್ಟಿ ಮುಸ್ಲಿಯಾರ್ ಮಂಬೀದಿ ಮುಂದೆ ಬಂದಿದ್ದರು. ಆ ಮೂಲಕ ಒಂದು ವಾರದ ಮಟ್ಟಿಗೆ ಕಾಲೇಜಿಗೆ ಅಪಾಯ ವಿಲ್ಲವೆಂದು ನಾವು ಸಮಾಧಾನ ಪಟ್ಟಿದ್ದೆವು.

ಮರುದಿನ, ಕಾಲೇಜಿನ ಉಳಿವು ಮತ್ತು ಉಸ್ತಾದರ ಘನತೆ ಕಾಪಾಡುವುದಕ್ಕಾಗಿ ನಾವೆಲ್ಲ ವಿಶೇಷ ಪ್ರಾರ್ಥನೆ ನಡೆಸಿದೆವು. 41 ದಿನಗಳ ಕಾಲ ರಸೂಲುಲ್ಲಾಹಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಯಾಸೀನ್ ಮತ್ತು ಅಸ್‌ಹಾಬುಲ್ ಬದ್‌ರ್ ನಾಮ ಪಠಿ ಸಲು ಉಸ್ತಾದ್ ನಮಗೆ ಆದೇಶ ಕೊಟ್ಟರು. ಅದರಂತೆ '91 ಆಗಸ್ಟ್ 5 ಸೋಮವಾರ' ಳುಹರ್ ನಮಾಝಿನಿಂದ ನಾನು ಯಾಸೀನ್ ಮತ್ತು ಬದ್‌ರಿಯ್ಯತ್ ಪ್ರಾರಂಭಿಸಿದ್ದಾಗಿ ಡೈರಿ ಪುಟದಲ್ಲಿ ಕಾಣುತ್ತಿದೆ. ಮುಂದಿನವಾರ, ಆಗಸ್ಟ್ 9 ಶುಕ್ರವಾರ ನಡೆದ ಬಹು ನಿರೀ ಕ್ಷೆಯ ಕಾಲೇಜು ಸಮಿತಿ ಸಭೆಯಲ್ಲಿ ನಿಲ್ಲದ ಹರಕೆ- ಹಾರೈಕೆಗಳ ಫಲವಾಗಿ ಶಅ್‌ಬಾನ್ ತಿಂಗಳ ವರೆಗೆ ಸಂಸ್ಥೆಯನ್ನು ಮುನ್ನಡೆಸಲು ನಿರ್ಧಾರವಾಗಿತ್ತು. ಅಂದು ನಮಗೆಲ್ಲ ಆನಂದಕ್ಕೆ ಪಾರವೇ ಇಲ್ಲದ ದಿವಸ. ಆ ದಿನ ಮಗ್‌ರಿಬ್ ನಂತರ ಜೀಪ್‌ನಲ್ಲಿ ಕಾಲೇಜು ಕ್ಯಾಂಟೀನ್‌ಗೆ ಆಹಾರ ಸಾಮಾಗ್ರಿಗಳು ಸರಬರಾಜು ಆದದ್ದು, ಅದನ್ನು ನೋಡುತ್ತಾ ಕಾಲೇಜು ಮಹಡಿಯ ವರಾಂಡದಲ್ಲಿ ನಿಂತು ನಾವೆಲ್ಲ ಮಹಡಿಯ ಛಾವಣಿ ನಡುಗುವಷ್ಟು ಗಟ್ಟಿಯಾಗಿ ತಕ್‌ಬೀರ್ ಹೇಳಿದ್ದು, ಇದನ್ನು ಗಮನಿಸಿದ ಕಾಲೇಜಿನ ಸಹ ಮುದರ್ರಿಸ್, ಉಸ್ತಾದ್ ಹಂಝ ಕೋಯ ಬಾಖ ವಿ ಮೂನ್ನಿಯೂರ್ ನಮ್ಮ ತಕ್‌ಬೀರ್‌ಗೆ ಧ್ವನಿಗೂಡಿಸಿದ್ದು, ಎಂದಿಗೂ ಮಾಸದ ಜ್ವಾಜಲ್ಯ ನೆನಪುಗಳಾಗಿ ಮರುಕಳಿಸುತ್ತಿವೆ.

ಹಾಗೆ ನಿರಾತಂಕವಾಗಿ ಮುಂದುವರಿದ ಸಂಸ್ಥೆ 1992 ಫೆಬ್ರವರಿ 1, 1412 ರಜಬ್ 25ರ ವರೆಗೆ ಹಾದು ಬಂತು. ಒಲ್ಲದ ಮನಸ್ಸಿನೊಂ ದಿಗೆ ಶಾಶ್ವತವಾಗಿ ನಾವು ನೂರುಲ್ ಹುದಾಕ್ಕೆ ವಿದಾಯ ಹೇಳಿದೆವು. ಮುಂದಿನ ವರ್ಷದಿಂದ ಅಲ್ಲಿ ಆರಂಭಗೊಂಡ ನೂರುಲ್ ಹುದಾ ಬೋರ್ಡಿಂಗ್ ಮದ್ರಸ ದಕ್ಷ ಆಡಳಿತದಡಿ ಯಲ್ಲಿ ಇಂದಿಗೂ ಉತ್ತಮ ರೀತಿಯಲ್ಲಿ ಮುಂದುವರಿಯುತ್ತಿದೆ.

ಪ್ರಗಲ್ಭ ವಿದ್ವಾಂಸ, ಅಪ್ರತಿಮ ಪ್ರತಿಭಾ ಶಾಲಿ, 'ಸಮಸ್ತ'ದ ಕಾರ್ಯದರ್ಶಿಯೂ ಆಗಿದ್ದ ಶೈಖುನಾ ಬಾಪು ಉಸ್ತಾದರ ನೇತೃತ್ವ ದಲ್ಲಿ ತಿರೂರಂಙಾಡಿ ನೂರುಲ್ ಹುದಾದಿಂದ ಮೆಟ್ಟಿಲಿಳಿದ, ಮೂರು ಮುದರ್ರಿಸರು ಮತ್ತು ಎಂಬತ್ತು ಮುತಅಲ್ಲಿಮರ ಬೃಹತ್ ದರ್ಸನ್ನು ಅದೇ ರೀತಿ ಸ್ವೀಕರಿಸಲು ಮಲಪ್ಪುರಂ ಜಿಲ್ಲೆ ಯ ಅದೆಷ್ಟೋ ಮೊಹಲ್ಲಾಗಳು ಮುಂದೆ ಬಂದವು. ಎ.ಪಿ.ಉಸ್ತಾದರು, ಬಾಪು ಉಸ್ತಾದರನ್ನು ಮರ್ಕಝ್‌ಗೆ ಮುದರ್ರಿಸ್ ಆಗಿ ಬರುವಂತೆ ಆಹ್ವಾನ ನೀಡಿದರು.

ಪ್ರಸಿದ್ಧ ವಿದ್ವಾಂಸ ಕುಟುಂಬವಾದ 'ಓಡ ಕ್ಕಲ್' ಮನೆತನದ ಪ್ರಮುಖರೂ, ಜಿಲ್ಲೆಯ ಹೆಸರಾಂತ ವಿದ್ವಾಂಸರೂ, ಬಾಪು ಉಸ್ತಾದರ ನಿಕಟ ಬಂಧುವೂ ಆಗಿದ್ದ ಒ.ಕೆ.ಎಂ. ಬಾಪು ಮೌಲವಿ ಮುನ್ನಡೆಸುತ್ತಿದ್ದ ದಾರುಲ್ ಮಆ ರಿಫ್ ಅರಬಿಕ್ ಕಾಲೇಜು, ಮಲಪ್ಪುರಂ ಸಮೀ ಪದ ವೇಂಙರ ಪೇಟೆಯಿಂದ ದಕ್ಷಿಣಕ್ಕೆ ನಾಲ್ಕು ಕಿಲೋ ಮೀಟರ್ ದೂರದಲ್ಲಿ 'ವಲಿಯೋರ' ಎಂಬ ಪುಟ್ಟ ಊರಿನಲ್ಲಿ ಅನೇಕ ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿತ್ತು. ಕೇವಲ ಪ್ರಾದೇ ಶಿಕ ಸಂಸ್ಥೆ ಮಾತ್ರವಾಗಿದ್ದ ಇದನ್ನು ರಾಜ್ಯದ ಹೆಸರಾಂತ ವಿದ್ಯಾಕೇಂದ್ರವಾಗಿ ಬೆಳೆಸಲು ಬಾಪು ಮೌಲವಿ ಉತ್ಸುಕರಾಗಿದ್ದರು. ಉಸ್ತಾ ದರು ತಿರೂರಂಙಾಡಿ ನೂರುಲ್ ಹುದಾದಿಂದ ನಿರ್ಗಮಿಸುವ ಮುಂಚೆಯೇ ಅವರು ಈ ಬಗ್ಗೆ ಯೋಜನೆ ರೂಪಿಸಿ ಮುದರ್ರಿಸ್‌ಗಳು ಮತ್ತು ಮುತಅಲ್ಲಿಮರ ಸಮೇತ ನೂರುಲ್ ಹುದಾ ವನ್ನು ದಾರುಲ್ ಮಆರಿಫ್‌ಗೆ ಸ್ಥಳಾಂತರ ಮಾಡುವ ಇರಾದೆಯಿಂದ ಬಾಪು ಉಸ್ತಾದ ರಲ್ಲಿ ನಿರಂತರ ಸಂಪರ್ಕ ಇರಿಸಿದ್ದರು. ಇದು ಫಲ ಕೊಟ್ಟಿತ್ತು. ಉಸ್ತಾದರು ವಲಿಯೋರಕ್ಕೆ ಹೋಗಲು ಒಪ್ಪಿಗೆ ಕೊಟ್ಟರು. ಆದರೆ ತಿರೂ ರಂಙಾಡಿಯಲ್ಲಿ ಪ್ರಧಾನ ಸಹಾಯಕ ಮುದ ರ್ರಿಸ್ ಆಗಿದ್ದ ಹಂಝ ಕೋಯ ಬಾಖವಿ ಮೂನ್ನಿಯೂರ್ ಉಸ್ತಾದರ ಅನುಮತಿ ಪಡೆದು ಬೇರೆ ಕಡೆ ದರ್ಸ್ ಸ್ಥಾಪಿಸುವ ಉದ್ದೇಶದಿಂದ ದಾರುಲ್ ಮಆರಿಫ್‌ಗೆ ಬರ ಲಿಲ್ಲ. ಅವರ ಈ ನಿರ್ಧಾರದಿಂದ ತೊಂದರೆ ಗೊಳಗಾದದ್ದು ನಾನು. ನೂರುಲ್ ಹುದಾ ದಲ್ಲಿ ಹೆಚ್ಚಿನ ಕಿತಾಬ್‌ಗಳನ್ನು ಅವರ ಬಳಿಯಲ್ಲೇ ಓದುತ್ತಿದ್ದುದರಿಂದ, ಅವರು ಬೇರೆ ಕಡೆ ಸ್ಥಾಪಿಸುವ ದರ್ಸ್‌ಗೆ ಜತೆಯಲ್ಲಿ ಹೋಗಬೇಕೆಂದು ಅವರು ನನಗೆ ಒತ್ತಡ ಹಾಕ ತೊಡಗಿದರು.

ಬಾಪು ಉಸ್ತಾದರ ಅರ್ಧ ಸಮ್ಮತಿ ಮತ್ತು ನನ್ನ ತಂದೆಯ ಪೂರ್ಣ ಅಸ ಮ್ಮತಿಯೊಂದಿಗೆ ನಾನು ಮುಂದಿನ ವರ್ಷ ಹಂಝ ಕೋಯ ಬಾಖವಿಯ ಹೊಸ ದರ್ಸ್‌ಗೆ ಹೋಗಲು ನಿರ್ಧರಿಸಿದೆ. ಆ ಮೊದಲು ಅವರು ಹೊರ ತಂದ 'ಸುನ್ನತ್ ಜಮಾಅತ್ ಹದೀ ಸಿಲ್' ಎಂಬ ಪುಸ್ತಕಕ್ಕೆ ಲಭ್ಯವಾದ ಎಲ್ಲ ಹದೀಸ್ ಗ್ರಂಥಗಳನ್ನೂ ಕೊಟ್ಟು ಅದರಲ್ಲಿ ವಿಷಯಕ್ಕೆ ಸಂಬಂಧಿಸಿದ ಹದೀಸ್‌ಗಳನ್ನು ಹುಡುಕಿ ಕೊಡುವ ಜವಾಬ್ದಾರಿ ನೀಡಿ ಯಶಸ್ವಿಯಾ ಗಿದ್ದ ಅವರು, ಮುಂದೆ ಬರೆಯಲಿರುವ ಪುಸ್ತಕಗಳಿಗೂ ನನ್ನನ್ನು 'ಶೋಷಣೆ' ಮಾಡುವ ಇರಾದೆ ಹೊಂದಿದ್ದರು.

ಅಪ್ರತಿಮ ಬುದ್ಧಿಶಾಲಿಯೂ ಪ್ರತಿಭಾ ವಂತರೂ ಆಗಿದ್ದ ಹಂಝ ಕೋಯ ಬಾಖವಿ, ಬಾಪು ಉಸ್ತಾದರ ಅಚ್ಚು ಮೆಚ್ಚಿನ ಶಿಷ್ಯರಾ ಗಿದ್ದರು. ಒಂದು ಕಾಲಿಗೆ ಶಕ್ತಿ ಕಡಿಮೆಯಾಗಿ ಆ ಕಾಲಿನ ಮೇಲೆ ಕೈಯೂರಿ ಬಾಗಿ ನಡೆಯು ತ್ತಿದ್ದ ಅವರು ಇದರ ಹೊರತಾಗಿ ಬೇರೆ ಯಾವ ವಿಷಯದಲ್ಲೂ ಹಿಂದೆ ಬಿದ್ದಿರಲಿಲ್ಲ. ದೀನಿ ಜ್ಞಾನ ಶಾಖೆಯ ಎಲ್ಲ 'ಫನ್ನ್'ಗಳಲ್ಲಿ ಯೂ ಅಗಾಧ ಪಾಂಡಿತ್ಯ ಹೊಂದಿದ್ದ ಅವರು ಪ್ರಗಲ್ಭ ವಾಗ್ಮಿಯೂ, ಬರಹಗಾರರೂ, ಗ್ರಂಥಕಾರರೂ ಆಗಿದ್ದರು. ಜಮಾಅತೆ ಇಸ್ಲಾಮಿಯ ಕುರಿತು ಆಳವಾಗಿ ಅಧ್ಯಯನ ಮಾಡಿದ ಅವರು ಅದರ ವಿತಂಡವಾದಗಳನ್ನು ಖಂಡಿಸಿ ಅನೇಕ ಲೇಖನಗಳನ್ನು, ಪುಸ್ತಕಗ ಳನ್ನು ಪ್ರಕಟಿಸಿದ್ದರು. ನೂತನವಾದಿಗಳೊಂ ದಿಗೆ ನೇರ ಕದನಕ್ಕೆ ಇಳಿಯುತ್ತಿದ್ದ ಅವರ ಮೇಲೆ ದಾಳಿಗಳೂ ನಡೆದಿದ್ದು, ವೇದಿಕೆ ಯೊಂದರಲ್ಲಿ ಕಲ್ಲೇಟಿನಿಂದ ಮುರಿದು ಬಿದ್ದ ಹಲ್ಲನ್ನು ತೋರಿಸುತ್ತಾ ದೀನ್‌ಗಾಗಿ ನನ್ನ ಹಲ್ಲೂ ಶಹೀದ್ ಆಗಿದೆ ಎಂದು ನಮ್ಮನ್ನು ಹುರಿದುಂಬಿಸುತ್ತಿದ್ದರು.

ಇವರ ಒತ್ತಾಯಕ್ಕೆ ಮಣಿದು ನನ್ನ ದರ್ಸ್ ಜೀವನದ 6ನೇ ವರ್ಷದ ಕಲಿಕೆಯು ಮಲಪ್ಪುರಂ ಸಮೀಪದ 'ಕೋಡೂರ್' ಪ್ರದೇಶ ವ್ಯಾಪ್ತಿಯ 'ಅಲ್ಪಟ್ಟ ಕುಳಂಬ್' ಎಂಬಲ್ಲಿ ಮುಂದುವರಿಯಿತು. 1992 ಎಪ್ರಿಲ್ 12, 1412 ಶವ್ವಾಲ್ 13 ಶನಿವಾರ ಮಧ್ಯಾಹ್ನದೊಂದಿಗೆ ನಾವು 'ಅಲ್ಪಟ್ಟ ಕುಳಂಬ್'ಗೆ ತಲುಪಿದೆವು. ತೊಂಡಿಕ್ಕಲ್ ಕುಂಞಿದು ಹಾಜಿ ಹಾಗೂ ಹಸ್ಸನ್ ಮಾನು ಎಂಬವರ ಮನೆಗಳಲ್ಲಿ ನನಗೆ ಊಟದ ವ್ಯವಸ್ಥೆ ನಿಗದಿಯಾಯಿತು. ಶವ್ವಾಲ್ 15 ಸೋಮವಾರ ಮಧ್ಯಾಹ್ನದ ಬಳಿಕ ತಫ್ ಸೀರುಲ್ ಜಲಾಲೈನಿಯಲ್ಲಿ 'ಸೂರತುಲ್ ಕಹ್‌ಫ್' ಪ್ರಾರಂಭಿಸುತ್ತಾ ಬಾಖವಿ ಉಸ್ತಾ ದ್ ನಮ್ಮ ದರ್ಸ್‌ಗೆ ಚಾಲನೆ ನೀಡಿದರು.

ಎಲ್ಲ ಮಹತ್ವಗಳ ಜತೆ ಮುಂಗೋಪಿ ಯೂ ಆಗಿದ್ದ ಹಂಝ ಕೋಯ ಉಸ್ತಾದ್ ಯಾಕೋ ಅದೇ ದಿನ ಮಸೀದಿ ಸಮಿತಿಯವರ ಜತೆ ಜಗಳಕ್ಕಿಳಿದರು. ಉಸ್ತಾದ್-ಸಮಿತಿ ಮಧ್ಯೆ ಯಾವುದೋ ಕಾರಣಕ್ಕೆ ಉಲ್ಬಣ ಗೊಂಡ ಭಿನ್ನಾಭಿಪ್ರಾಯ ತಾರಕಕ್ಕೇರಿ ದರ್ಸ್ ತೆರೆದ 5ನೇ ದಿನ, ಆಗಸ್ಟ್ 22 ಬುಧವಾರ ಮಧ್ಯಾಹ್ನದೊಂದಿಗೆ ನಮಗೆ ರಜೆ ಘೋಷಿಸ ಲಾಯಿತು. ಮುಂದಿನ ದರ್ಸ್ ನಿಗದಿಯಾ ಗುವವರೆಗೆ ಬಾಪು ಉಸ್ತಾದರ ಜತೆಗೆ ವಲಿಯೋರ ದಾರುಲ್ ಮಆರಿಫ್‌ನಲ್ಲಿ ಇರುವಂತೆ ಹೇಳಿ ಉಸ್ತಾದ್ ನಮ್ಮನ್ನು ಸಾಗ ಹಾಕಿದರು. ಆ ದಿನ ಸಂಜೆ 5.20ಕ್ಕೆ ಅಲ್ಪಟ್ಟ ಕುಳಂಬಿನ ಚಿರಪುರಾತನ ಪುಟ್ಟ ಮಸೀದಿ ಯೊಂದಿಗೆ ವಿದಾಯ ಕೋರಿದ ಮುತಅಲ್ಲಿ ಮರೆಲ್ಲರೂ ಮಗ್‌ರಿಬ್ ನಮಾಝಿಗೆ ವಲಿಯೋರ ದಾರುಲ್ ಮಆರಿಫ್ ಅರಬಿಕ್ ಕಾಲೇಜ್ ತಲುಪಿದೆವು. ಹಂಝ ಕೋಯ ಉಸ್ತಾದರ ಪರಾಕ್ರಮಗಳ ನೇರ ಅರಿವಿದ್ದ ಬಾಪು ಉಸ್ತಾದರು, 'ಇನ್ನು ಇಲ್ಲಿಯೇ ನಿಲ್ಲು' ಎನ್ನುತ್ತಾ ನನಗೆ ಪ್ರವೇಶ ಕೊಟ್ಟರು. ಕಾಲೇಜಿನ ಆರನೇ ತರಗತಿಯಲ್ಲಿ ನನ್ನ ಹೆಸರು ದಾಖಲಾಯ್ತು. ಮೊದಲೇ ಅರ್ಧಸಮ್ಮತಿ ನೀಡಿದ್ದ ಉಸ್ತಾದರ ಬಳಿಗೆ ಮರು ಸೇರ್ಪಡೆ ಗೊಂಡದ್ದು ಅತೀವ ಆನಂದ ತಂದಿತ್ತು. ಈ ಅನಿರೀಕ್ಷಿತ ವರ್ಗಾವಣೆಯಿಂದ ತಂದೆಗೂ ಸಮಾಧಾನವಾಗಿತ್ತು. ಇನ್ನು ಬಾಪು ಉಸ್ತಾದರನ್ನು ಬಿಟ್ಟು ಕದಲದಂತೆ ಅವರು ನನಗೆ ತಾಕೀತು ನೀಡಿದರು. ನೂರುಲ್ ಹುದಾಗಿಂತ ತುಂಬ ಭಿನ್ನವಾಗಿತ್ತು ದಾರುಲ್ ಮಆರಿಫ್. ಓಡಕ್ಕಲ್ ಪರಂಪರೆಯ ಮಾತೃ ಕುಟುಂಬವು ಪೊನ್ನಾನಿ ಝೈನುದ್ದೀನ್ ಮಖ್‌ದೂಂಗಳ ಮೂಲಕ ಪ್ರಥಮ ಖಲೀಫ ಅಬೂಬಕರ್ ಸಿದ್ದೀಖ್ ﷺ ಅವರಿಗೆ ತಲುಪುತ್ತದೆ. ಅವರ ಪಿತೃ ಪರಂಪರೆ ಪ್ರವಾದಿ ಕುಟುಂಬಕ್ಕೆ ಸೇರಿದ್ದೆಂದು ಅಭಿಪ್ರಾಯವಿದ್ದರೂ ಅದು ರುಜು ವಾತಾಗದ ಕಾರಣ ಓಡಕ್ಕಲ್ ಕುಟುಂಬಸ್ಥರು 'ಸಯ್ಯಿದ್'ಗಳೆಂದು ಹೇಳಿಕೊಳ್ಳುವುದಿಲ್ಲ. ಆದರೆ ಕೇರಳದ ಉಲಮಾ ಚರಿತ್ರೆಯಲ್ಲಿ ಒ.ಕೆ. ಕುಟುಂಬಕ್ಕೆ ಅನನ್ಯವಾದ ಸ್ಥಾನವಿದೆ. ಉಸ್ತಾದುಲ್ ಅಸಾತೀದ್ ಒ.ಕೆ. ಝೈನು ದ್ದೀನ್ ಕುಟ್ಟಿ ಮುಸ್ಲಿಯಾರ್ (ಅಹ್‌ಸನಿ ಕಾಲೇಜಿನ ಸ್ಥಾಪಕರು) ಈ ಪರಂಪರೆಯ ಅಗ್ರಗಣ್ಯ ವ್ಯಕ್ತಿಯಾಗಿದ್ದಾರೆ. ಇಂತಹ ಓಡಕ್ಕ ಲ್ ವಿದ್ವಾಂಸರ ಸಾರಥ್ಯದ ಸಂಸ್ಥೆಯಾದ್ದ ರಿಂದ ದಾರುಲ್ ಮಆರಿಫ್ ಸಂಸ್ಥೆಗಳ ಕ್ಯಾಂಪಸ್‌ಗೆ 'ಝೈನ್ ಘುಡ್' ಎಂದೂ ಅಲ್ಲಿಂದ ನೀಡುವ ಪದವಿಗೆ 'ಮೌಲವಿ ಆಲಿಂ ಝೈನೀ' ಎಂದೂ ಹೆಸರಿಸಲಾಗಿದೆ. ಅವರ ಮಾತಾ ಮಹಾ ಶೈಖ್ ಝೈನುದ್ದೀನ್ ಮಖ್‌ದೂಂ ﷺ ಅವರ ಪಾವನ ಸ್ಮರಣಾ ರ್ಥ ನನ್ನ ಭಾಷಣ ಬದುಕಿಗೆ ಕಾವು ಕೊಟ್ಟು ಬೆಳೆಸಿದ ಈ ಸಂಸ್ಥೆ ಬಗ್ಗೆ ಇಷ್ಟೆಲ್ಲ ವಿವರವಾಗಿ ಬರೆಯ ಬೇಕೆನಿಸಿತು.

# 11

ಬಂತು ನನ್ನ ಹೆಸರು ಹಾಕಿದ ಮೊದಲ ನೋಟೀಸ್...!

ದಾರುಲ್ ಮಆರಿಫ್ ಅರಬಿಕ್ ಕಾಲೇಜು ಮಲಪ್ಪುರಂ ಜಿಲ್ಲೆಯ ಪ್ರಮುಖ ನಗರಗಳಲ್ಲಿ ಒಂದಾದ 'ವೇಜರ'ಯಿಂದ ಪಶ್ಚಿಮ ದಿಕ್ಕಿನಲ್ಲಿ ನಾಲ್ಕು ಕಿಲೋ ಮೀಟರ್ ದೂರದ ವಲಿಯೋರ ಎಂಬಲ್ಲಿತ್ತು. ವಲಿಯೋರ ಎಂಬುದು ಆ ಪ್ರದೇಶವನ್ನು ಸಂಪೂರ್ಣವಾಗಿ ಆವರಿಸಿದ್ದ ಹೆಸರಾಗಿದ್ದು, ಕಾಲೇಜಿನ ಸಮೀಪದ ಪೇಟೆಗೆ ಪುತ್ತನಂಗಾಡಿ ಎಂಬ ಹೆಸರಿತ್ತು. ಕಾಲೇಜಿನ ಕ್ಯಾಂಪಸ್‌ಗೆ 'ಝೈನ್ ಘುಡ್' ಎಂದು ಹೆಸರಿಸಿ ಗುರುತಿಸಲಾಗುತ್ತಿತ್ತು. ಎಲ್ಲ ರೀತಿಯಿಂದಲೂ ಭಿನ್ನವಾಗಿತ್ತು ಇಲ್ಲಿನ ಸ್ಥಿತಿಗತಿಗಳು. ಎಂಬತ್ತು ಮಂದಿ ಮುತಅಲ್ಲಿಮರು ಮತ್ತು ಇಬ್ಬರು ಮುದರ್ರಿಸ್‌ರೊಂದಿಗೆ ತಿರೂರಂಗಾಡಿ ನೂರುಲ್ ಹುದಾವನ್ನು ಅದೇ ರೀತಿ ದಾರುಲ್ ಮಆರಿಫ್‌ಗೆ ವರ್ಗಾಯಿಸಿದ್ದು ಆ ಮೊದಲು ಅಲ್ಲಿ ಕಲಿಯುತ್ತಿದ್ದ ಮುತಅಲ್ಲಿಮರೂ ಸೇರಿ ವಿದ್ಯಾರ್ಥಿಗಳ ಸಂಖ್ಯೆ ನೂರು ದಾಟಿತ್ತು. ಪ್ರಿನ್ಸಿಪಾಲ್ ಒ.ಕೆ. ಎಂ. ಬಾಪು ಮೌಲವಿ ಮರ್‌ಹೂಂ, ಕೆ.ಕೆ. ಸ್ವದಖತುಲ್ಲಾಹ್ ಮುಸ್ಲಿಯಾರರ ಪರಮ ಶಿಷ್ಯರಾಗಿದ್ದು ಸಹಜವಾಗಿಯೇ

ಸ್ವದಖತುಲ್ಲಾಹ್ ಮೌಲವಿ ಸಂಸ್ಥಾಪಿಸಿದ 'ಸಂಸ್ಥಾನ ಕೇರಳ ಜಂಇಯ್ಯತುಲ್ ಉಲಮಾ'ದೊಂದಿಗೆ ಆತ್ಮನಂಟು ಹೊಂದಿದ್ದರೆಂದು ಹೇಳಲಾಗುತ್ತಿತ್ತು. ಸಮಸ್ತ ಕೇರಳ ಜಂಇಯ್ಯತುಲ್ ಉಲಮಾದ ಅಧ್ಯಕ್ಷರಾಗಿದ್ದ ಉದ್ದಾಮ ವಿದ್ವಾಂಸರೂ ಕರ್ಮಶಾಸ್ತ್ರ ವಿಶಾರದರೂ ಆಗಿದ್ದ ಸ್ವದಖತುಲ್ಲಾಹ್ ಮೌಲವಿ ಕೆಲವು 'ಮಸ್‌ಅಲ'ಗಳ ಕುರಿತಾದ ಭಿನ್ನಾಭಿಪ್ರಾಯಗಳ ಕಾರಣ 'ಸಮಸ್ತ'ದ ಅಧ್ಯಕ್ಷ ಪದವಿಯನ್ನು ತೊರೆದು ಹೊಸದಾಗಿ 'ಸಂಸ್ಥಾನ ಕೇರಳ ಜಂಇಯ್ಯತುಲ್ ಉಲಮಾ' ಸ್ಥಾಪಿಸಿ ಅದರ ಅಧ್ಯಕ್ಷರಾದರು. 'ಸಂಸ್ಥಾನ'ಎಂದರೆ ಮಲಯಾಳಂ ನಲ್ಲಿ ರಾಜ್ಯ ಎಂದರ್ಥ. ಆದರೆ ಕಾಲ ಕ್ರಮೇಣ ಸ್ವದಖತುಲ್ಲಾಹ್ ಉಸ್ತಾದರ ಸಂಘಟನೆ, ಚಳವಳಿಗಳು 'ಸಮಸ್ಥಾನ' ಎಂಬ ಹೆಸರಲ್ಲಿ ಪ್ರಸಿದ್ಧವಾಯಿತು. ಕೆಲವು ನಿರ್ದಿಷ್ಟ ಕಡೆಗಳಲ್ಲಿ ಅವು ಇವತ್ತಿಗೂ ಮುಂದು ವರಿಯುತ್ತಿದೆ.

ಪ್ರಿನ್ಸಿಪಾಲ್ ಬಾಪು ಮೌಲವಿ ಅಲ್ಲದೆ 'ಸಂಸ್ಥಾನ'ದ ರಾಜ್ಯ ಜತೆ ಕಾರ್ಯದರ್ಶಿ ಯಾಗಿದದ ಕಿಡಂಙಝಿ ಅಬ್ದುರ್ರಹೀಂ ಮುಸ್ಲಿಯಾರ್ ಕೂಡಾ ಅಲ್ಲಿ ಮುದರ್ರಿಸ್ ಆಗಿದ್ದರಿಂದ 'ಸಂಸ್ಥಾನ'ದ ಉಗಮ ಕೇಂದ್ರ ಮಲಪ್ಪುರಂ ಜಿಲ್ಲೆಯ 'ವಂಡೂರು ಪ್ರದೇಶದ ಸಾಕಷ್ಟು ವಿದ್ಯಾರ್ಥಿಗಳು ನಮ್ಮ ಕಾಲೇಜಿನಲ್ಲಿದ್ದರು. ಅವರೆಲ್ಲ ಸಂಸ್ಥಾನದ ಪರವಾಗಿದ್ದರು. ಇನ್ನು ಕೆಲವು ಮುದರ್ರಿಸರು ಮತ್ತು ಅವರ ನೆಚ್ಚಿನ ಶಿಷ್ಯಂದಿರು ಚೇಳಾರಿ ಸಮಸ್ತದ ಅಭಿಮಾನಿಗಳಾಗಿ ಕೆಲಸ ಮಾಡುತ್ತಿದ್ದರು. ಒಂದೇ ಕಾಲೇಜಿನ ಆಡಳಿತ ಮಂಡಳಿ, ಮುದರ್ರಿಸರು, ಮುತಅಲ್ಲಿಮರು ಮತ್ತು ಸಿಬ್ಬಂದಿಗಳು ಎ.ಪಿ, ಇ.ಕೆ. ಮತ್ತು 'ಸಂಸ್ಥಾನ'ದ ಅಭಿಮಾನಿಗಳಾಗಿ ವಿಂಗಡಣ'ೆಯಾಗಿ ಪ್ರತ್ಯಕ್ಷದಲ್ಲಿಯೇ ಮೂರು ವಿಭಾಗ ಗಳು ಅಲ್ಲಿ ಗೋಚರವಾಗುತ್ತಿತ್ತು. ಎ.ಪಿ. ಉಸ್ತಾದ್ ಸಾರಥ್ಯದ ಸಮಸ್ತದ ಸಹಕಾರ್ಯ ದರ್ಶಿಯಾಗಿದ್ದ ನಮ್ಮ ಉಸ್ತಾದ್ ತಿರೂರಂಙಾಡಿ ಬಾಪು ಮುಸ್ಲಿಯಾರರ ಹಿಂದೆ ಎಂಬತ್ತು ಮುತಅಲ್ಲಿಮರು ಇದ್ದುದರಿಂದ ಕಾಲೇಜಿನಲ್ಲಿ ನಮ್ಮದು ಪ್ರಚಂಡ ಬಹುಮತ ವಾಗಿತ್ತು. ಹೇಗಿದ್ದರೂ ಉಸ್ತಾದ್‌ಗಳ ಮಧ್ಯೆ ಈ ವಿಚಾರವಾಗಿ ಯಾವುದೇ ಕಲಹಗಳು ಉಲ್ಬಣವಾಗದೆ ಒಮ್ಮತ ಮತ್ತು ಪರಸ್ಪರ ಗೌರವಾದರಗಳು ನೆಲೆಸಿತ್ತು. ಆಡಳಿತ ಸಮಿತಿಯ ಸಭೆಗಳಲ್ಲಿ ಕಾರ್ಯಕ್ರಮಗಳಿಗೆ ಅತಿಥಿಗಳನ್ನು ಆಹ್ವಾನಿಸುವ ಚರ್ಚೆಗಳಲ್ಲಿ ಮಾತಿಗೆ ಮಾತು ಬೆಳೆಯುತ್ತಿತ್ತೇ ಹೊರತು ಉಳಿದಂತೆ ಸೌಹಾರ್ದ ಉಳಿದಿತ್ತು. ಆದರೆ ಮೂರೂ ವರ್ಗಕ್ಕೆ ಸೇರಿದ ಕೆಲವು ಗಲಭೆ ಪ್ರಿಯ ಮುತಅಲ್ಲಿಮರೆಡೆಯಲ್ಲಿ ಪ್ರತಿದಿನ ಸಣ್ಣಪುಟ್ಟ ಸದ್ದು-ಗುದ್ದುಗಳು ನಡೆಯುತ್ತಿ ಲೇ ಇದ್ದುವು.

ಕಾಲೇಜಿನಲ್ಲಿ 'ಮುಅ್‌ತಮರುತ್ವಲಬಃ' ಎಂಬ ಹೆಸರಿನಲ್ಲಿ ವಿದ್ಯಾರ್ಥಿ ಸಾಹಿತ್ಯ ವೇದಿಕೆ ಅಸ್ತಿತ್ವದಲ್ಲಿದ್ದರೂ ಭಿನ್ನ ಚಿಂತನೆಯ ಮುತ ಅಲ್ಲಿಮರಿದ್ದುದರಿಂದ ಅದಕ್ಕೆ ಜೀವ ತುಂಬಲು ಪ್ರಿನ್ಸಿಪಾಲ್ ಮನಸ್ಸು ಮಾಡ ಲಿಲ್ಲ. ಆದರೆ ಭಾಷಣ ಪ್ರಿಯರಾದ ಕೆಲವು ಮುತಅಲ್ಲಿಮರು ಇದಕ್ಕೆ ಪ್ರಯತ್ನ ಪಡುತ್ತಲೇ ಇದ್ದರು.

1992 ಜುಲೈ 1 ಬುಧವಾರ ಮಧ್ಯಾಹ್ನ ಊಟದ ಬಿಡುವಿನ ವೇಳೆ ಸಾಹಿತ್ಯ ಸಮಾಜ ಪ್ರಾರಂಭಿಸಲೇ ಬೇಕೆನ್ನುವ ನಮ್ಮ ಇಚ್ಛೆ ಯನ್ನು ಪ್ರಿನ್ಸಿಪಾಲ್ ಬಾಪು ಮೌಲವಿಯ ಮುಂದಿಡಲು ನಿರ್ಧರಿಸಲಾಯಿತು. ಆದರೆ ಗಂಭೀರ ಸ್ವಭಾವದ ಉಸ್ತಾದರ ಮುಂದೆ ಈ ಕುರಿತು ಮಾತನಾಡಲು ಯಾರೂ ಧೈರ್ಯ ತೋರಲಿಲ್ಲ. ಕೊನೆಗೆ ಹಿರಿಯ ವಿದ್ಯಾರ್ಥಿ ಯಾದ ಸುಲೈಮಾನ್ ಕೋಹಿನೂರು ಮತ್ತು ನಾನು ಈ ದೌತ್ಯದೊಂದಿಗೆ ಪ್ರಿನ್ಸಿಪಾಲರ ಕಚೇರಿಗೆ ಹೊಕ್ಕು ಭಯದ ನೆರಳಲ್ಲೇ ವಿಷಯ ಮಂಡಿಸಿದೆವು. ತಕ್ಷಣಕ್ಕೆ ಅವರು ಯಾವುದೇ ಪ್ರತಿಕ್ರಿಯೆ ನೀಡದ್ದು ನಮಗೆ ಅತೀವ ನಿರಾಸೆ ತಂದಿತ್ತು.

ಆದರೆ ಅದೇ ದಿನ ಅಸರ್ ನಮಾಝ್ ನಂತರ ಮುಂದಿನ ಸಾಲಿನಲ್ಲಿ ಕುಳಿತಿದ್ದ ಅವರು ತಿರುಗಿ ಕುಳಿತು ಸ್ವತಃ ಸಿದ್ಧವಾದ ಗಂಭೀರ ಧ್ವನಿಯಲ್ಲಿ 'ಆಗ ಸಾಹಿತ್ಯ ಸಮಾಜ ಬೇಕೆಂದು ಕೇಳಿದ್ದ ಹುಡುಗನೆಲ್ಲಿ? ಎದ್ದು ನಿಲ್ಲು. ಎಂದು ಸೂಚಿಸಿದರು. ಬೆದರಿ ಬೆಂಡಾದ ನಾನು ಒಲ್ಲದ ಮನಸ್ಸಿನಿಂದ ಎದ್ದು ನಿಂತಾಗ 'ಏನಪ್ಪ ನಿನ್ನ ವಿಷಯ ಎಲ್ಲರ ಮುಂದೆ ಹೇಳು' ಎಂದು ಮತ್ತೊಮ್ಮೆ ಆದೇಶಿಸಿದ್ದರು, ಏರು ಧ್ವನಿಯಲ್ಲಿ... ಕಾಲೇಜಿನ ಎಲ್ಲ ಮುತಅಲ್ಲಿಮರೂ, ಉಸ್ತಾದ್‌ಗಳೂ ನೆರೆದಿದ್ದ, ಅಸರ್ ಜಮಾಅತ್‌ನ ತಕ್ಷಣದ ಆ 'ಮಹಾಸಭೆ' ಯಲ್ಲಿ 'ಸಮಾಜದ ಅನಿವಾರ್ಯತೆ' ಎಂಬ ವಿಷಯದ ಬಗ್ಗೆ ನನ್ನದೊಂದು ಪುಟ್ಟ ಭಾಷಣ ನಡೆಯಿತು. ವರ್ಷಗಳ ಹಿಂದೆ ಮೂಡಿಗೆರೆ -ಒಳಗುಳದಲ್ಲಿ ಚೊಚ್ಚಲ ರಂಝಾನ್ ಉರ್ದಿ ನಡೆಸಿದಾಗಿನ ಭಯಾ ಶಂಕೆಗಳನ್ನು ಮೀರಿಸುವಂತಿತ್ತು ಅಂದಿನ ಅನುಭವ. ನನ್ನ ಹೃದಯ ಬಡಿತ ಬರಸಿಡಿಲಿ ನಂತೆ ನನ್ನ ಕಿವಿಗೆ ಅಪ್ಪಳಿಸುತ್ತಿತ್ತು. ಅಲ್ಪ ಸಮಯದಲ್ಲಿ ವಿಷಯ ಮುಗಿಸಿದಾಗ ಬಾಪು ಮೌಲವಿ ಮತ್ತೆ ಗರ್ಜಿಸಿದರು. 'ಸಮಾಜ ಬೇಕಾದವರು ನಿಲ್ಲಿ; ಉಳಿದವರು ತೆರಳಿ; ತಿರೂರಂಗಾಡಿ ಉಸ್ತಾದರ ಶಿಷ್ಯಂದಿರೆಲ್ಲ ಸಮಾಜದ ಪರವಾಗಿ ನಿಂತಾಗ ಚೇಳಾರಿ ಮತ್ತು ವಂಡೂರಿನ ಅಭಿಮಾನಿಗಳು ಮುಖ ತಿರುಗಿಸಿ ಹೊರನಡೆದರು. ಬಾಪು ಮೌಲವಿ 'ಸಮಾಜ'ಕ್ಕೆ ಚಾಲನೆ ಕೊಟ್ಟರು. ಹಿರಿಯ ವಿದ್ಯಾರ್ಥಿಗಳಾದ ಶಂಸುದ್ದೀನ್ ಕೊಲ್ಲಂ ಅಧ್ಯಕ್ಷರಾಗಿಯೂ ಹಂಝ ಮಣ್ಣಾರ್ ಕಾಡ್ ಪ್ರಧಾನ ಕಾರ್ಯದರ್ಶಿಯಾಗಿಯೂ ಕುಟ್ಟಿಪುರಂ ಅಬ್ದುನ್ನೂರ್ ಕೋಶಾಧಿಕಾರಿ ಯೂ ಆಗಿ ಆಯ್ಕೆಯಾದ ಸಮಿತಿಯಲ್ಲಿ ಸಹಕಾರ್ಯದರ್ಶಿಯ ಹುದ್ದೆ ನನಗೆ ಒಲಿಯಿತು. ಭಾಷಣ ಬದುಕಿನ ಪ್ರಚಂಡ ಕಾರ್ಯಗಾರವಾಗಿ ಬೆಳೆದು ನಿಂತ 'ಮುಅ್ ಸಮರು ತ್ವಲಬುದ ವತಿಯಿಂದ ಬರಹ ತರಬೇತಿಗಾಗಿ 'ಅಲ್ - ಈತಿಮಾರ್' ಹೆಸರಿನ ಹಸ್ತಲಿಪಿ ಮಾಸ ಪತ್ರಿಕೆಯೂ ಪ್ರಕಟವಾ ಗುತ್ತಿತ್ತು. ಸಾಹಿತ್ಯ ಸಮಾಜದ ಆಧಿಪತ್ಯವು ಒಂದು ವರ್ಗದ ಮುತಅಲ್ಲಿಮರಿಗೆ ಮಾತ್ರ ಸೇರಿದ್ದನ್ನು ಸಹಿಸದ ಇತರ ವಿದ್ಯಾರ್ಥಿಗಳು ಹೇಗಾದರೂ ಮಾಡಿ ಸಮಾಜವನ್ನು ಮೊಟಕುಗೊಳಿಸುವ ಯೋಜನೆಯನ್ನು ಚಾಲ್ತಿಯಲ್ಲಿಟ್ಟಿದ್ದರು. ಪ್ರತಿ ಬುಧವಾರ ಅಪರಾಹ್ನ ಮೂರು ಗಂಟೆಯಿಂದ ಮಗ್‌ರಿಬ್ ತನಕ ನಡೆಯುತ್ತಿದ್ದ 'ಸಮಾಜಂ'ಗಳಲ್ಲಿ ವಿವಿಧ ಗಂಭೀರ ವಿಷಯಗಳು ಚರ್ಚೆಯಾಗುತ್ತಿದ್ದವು. ತಿರೂರಂಗಾಡಿ ಉಸ್ತಾದರ 'ಸರ್ವ ಕಲಾಶಾಲೆ'ಯ ಮಕ್ಕಳು ತಮ್ಮ ಗರಿಷ್ಠ ಪ್ರತಿಭೆಗಳನ್ನು ಒರೆಗೆ ಹಚ್ಚಿಕೊಳ್ಳುತ್ತಿದ್ದರು. ಹೀಗಿರುವಾಗ 1992 ಅಕ್ಟೋಬರ್ 7 ಬುಧವಾರದ ಸಮಾಜದಲ್ಲಿ 'ಮದತ್ತಿಲ್ ತೀವ್ರವಾದಮೋ?' ಎಂಬ ವಿಷಯದಲ್ಲಿ ಭಾಷಣಗಳು ನಡೆಯುತ್ತಿದ್ದಾಗ ತಮ್ಮನ್ನು ಟೀಕಿಸಿದರು ಎಂದು ಗುಲ್ಲೆಬ್ಬಿಸಿದ ವಿರುದ್ಧ ಗುಂಪಿನ ಮುತಅಲ್ಲಿಮರು ಗುಂಪುಕಟ್ಟಿ ಕದನಕ್ಕೆ ಬಂದರು. 'ಸಮಾಜ' ಪರ ವಿರೋಧಿ ತಂಡಗಳ ನಡುವೆ ಗೌಜಿಗದ್ದಲಗಳು ಏರ್ಪಟ್ಟು ಪುಟ್ಟ ಮಟ್ಟದ ಹೊಡೆದಾಟವೂ ನಡೆದು ಹೋದವು. ಪ್ರಿನ್ಸಿಪಾಲ್ ಮತ್ತು ಉಸ್ತಾದ್‌ಗಳ ಮಟ್ಟದಲ್ಲಿ ಈ ಬಗ್ಗೆ ಗಂಭೀರ ಚರ್ಚೆ ನಡೆದು ತಪ್ಪಿತಸ್ಥರ ವಿರುದ್ಧ ಅಗತ್ಯ ಕ್ರಮ ಕೈಗೊಂಡು ಅಕ್ಟೋಬರ್ 10ರ ಶನಿವಾರ ಪ್ರಿನ್ಸಿಪಾಲರು ಒಂದು ಆದೇಶ ಹೊರಡಿಸಿದರು. ಅದರಂತೆ ಆ ವರ್ಷದ ಸಾಹಿತ್ಯ ಸಮಾಜವನ್ನು ಮೂರೇ ತಿಂಗಳಲ್ಲಿ ರದ್ದು ಪಡಿಸಲಾಯಿತು. ಮತ್ತೆ ಉಳಿದದ್ದು ಹಳೆಯ ಶುಕ್ರವಾರ ಉರ್ದಿ ಮಾತ್ರ.

ಈ ಹಿಂದೆ ಕೊಟ್ಟಪ್ಪೊಯಿಲ್‌ನಲ್ಲಿ ಬಹಿರಂಗ ಭಾಷಣ ಬದುಕಿಗೆ ಎಂಟ್ರಿ ಕೊಟ್ಟಾಗಲೂ ನೋಟೀಸ್‌ನಲ್ಲಿ ಹೆಸರು ಅಚ್ಚಾಗಿ ಬರುವ ಥ್ರಿಲ್‌ಗ್ ಅವಕಾಶ ಸಿಗಲಿಲ್ಲ. ಅದೊಂದು ಸಾಮಾನ್ಯ ಮೀಲಾದ್ ಸಭೆಯಾದ್ದರಿಂದ ಅವರು ನೋಟೀಸ್ ಮುದ್ರಿಸಿರಲಿಕ್ಕಿಲ್ಲ. ಕೊನೆಗೆ ಈ ಕನಸು ಈಡೇರಿದ್ದು ನಮ್ಮ ಕಾಲೇಜು ಪರಿಸರದ 'ಇಲ್ಲಿಪ್ಪುಲಾಕಲ್' ಎಂಬಲ್ಲಿ. ನಮ್ಮ ಕಾಲೇಜಿನ ಹಿರಿಯ ವಿದ್ಯಾರ್ಥಿ, ಈಗ ಮಂಜೇರಿ ಹಿಕಮಿಯ್ಯಃ ದಲ್ಲಿ ಮುದರ್ರಿಸ್ ಆಗಿರುವ ಮುಹಮ್ಮದ್ ಝೈನಿ ಸಖಾಫಿ (ಕುಂಞಾಪು ಉಸ್ತಾದ್) ತನ್ನ ಊರಿನ ಎಸ್ಸೆಸ್ಸೆಫ್ ಸಮ್ಮೇಳನವೊಂದಕ್ಕೆ ಪಿ.ಕೆ.ಎಂ. ಇರಿಂಜಲ್ಲೂರು ಜತೆ ನನಗೂ ಆಹ್ವಾನ ಕೊಟ್ಟಿದ್ದರು. ಅವರು ಪ್ರಕಟಿಸಿದ ನೋಟೀಸ್‌ನಲ್ಲಿ ನನ್ನ ಹೆಸರು 'ಮುಹಮ್ಮದ್ ರಾಶಿದ್ ಮಂಗಲಾಪುರಂ' ಅಂತ ಮುದ್ರಿತವಾಗಿತ್ತು. ಒಂದಕ್ಷರ ತಪ್ಪಿದ್ದರೂ ಮೊಟ್ಟ ಮೊದಲ ನನ್ನ ಹೆಸರಿರುವ ನೋಟೀಸ್ ಎಂಬ ಕಾರಣಕ್ಕೆ ಅದು ಬಹಳ ಮಹತ್ವದ್ದಾಗಿತ್ತು. '92 ಅಕ್ಟೋಬರ್ 29 ಗುರುವಾರ ಮಗ್‌ರಿಬ್ ನಂತರ ಮುಕ್ಕಾಲು ಗಂಟೆ ಕಾಲ ಸಮಾರಂಭದ ಉದ್ಘಾಟನೆ ಮಾಡಿ ನಾನು ಮಾತನಾಡಿದೆ. ನಮ್ಮ ಕಾಲೇಜಿನ ಬಹುತೇಕ ವಿದ್ಯಾರ್ಥಿಗಳು ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಈ ಭಾಷಣದ ಮಧ್ಯೆ ತಲೆದೋರಿದ ಸ್ವರದ ಸಮಸ್ಯೆ ಮುಂದಿನ ಕೆಲವು ಭಾಷಣಗಳಲ್ಲಿ ಮುಂದುವರಿದಿತ್ತು. ಅರ್ಧ ಗಂಟೆಗಿಂತ ಹೆಚ್ಚು ಹೊತ್ತು ಮೈಕಿನ ಮುಂದೆ ಧ್ವನಿಯೆತ್ತಿ ಮಾತನಾಡಿದರೆ ಶಬ್ದ ಕುಂಠಿತವಾಗಿ ಅರಚಿದಂತೆ ಭಾಸವಾಗುತ್ತಿತ್ತು. ಮುಂದೆ ಯಾರದೋ ಸಲಹೆಯ ಮೇರೆಗೆ 'ಸುಆಲಿನ್' ಎಂಬ ಯೂನಾನಿ ಮಾತ್ರೆಯನ್ನು ಬಹಳ ಕಾಲ ಬಳಸಿದಾಗ ಈ ಸಮಸ್ಯೆ ನಿವಾರಣೆಯಾಯಿತು. ಇಲ್ಲಿಪುಲಾಕ್ಕಲ್ ಭಾಷಣಕ್ಕೆ 75ರೂ. ಗೌರವಾರ್ಥ ಲಭಿಸಿತ್ತು. ಮುಂದೆ '90 ನವಂಬರ್ 30 ಸೋಮವಾರ ಮಂಬುರಂ ಮಖಾಂ ಪರಿಸರದಲ್ಲಿ ನಡೆದ ಬೃಹತ್ ಮರ್ಕಝ್ ಪ್ರಚಾರ ಸಮ್ಮೇಳನ ದಲ್ಲಿ ಒಂದು ಗಂಟೆ ಕಾಲ ಭಾಷಣಕ್ಕೆ ಸಿಕ್ಕಿದ ಅವಕಾಶ ಅಮೋಘವಾಗಿತ್ತು ಪೊನ್ಮಳ ಉಸ್ತಾದ್ ಸದ್ರಿ ಕಾರ್ಯಕ್ರಮವನ್ನು ಉದ್ಘಾಟಿಸಿದ್ದು ಕಕ್ಕಾಡ್ ಮುಹಮ್ಮದ್ ಫೈಝಿ ಮುಖ್ಯ ಭಾಷಣ ಮಾಡಿದ್ದರು. ಕಾರ್ಯಕ್ರಮದ ನಂತರ ಕಕ್ಕಾಡ್ ಫೈಝಿ ಅನೇಕ ಉಪಯುಕ್ತ ಸಲಹೆ ನೀಡಿದ್ದರು. ಅಂದಿನ ಗೌರವಧನ ರೂ. ಮೂವತ್ತು ಮಾತ್ರ.

1992ರ ಕಾಲದಲ್ಲಿ ದಾರುಲ್ ಮಆರಿಫ್‌ನ ದರ್ಸೀ ಜೀವನದ ಜತೆಗೆ ಅನೇಕ ಮಹಾತ್ಮರುಗಳನ್ನು ನೇರವಾಗಿ ಕಾಣಲು ಅವಕಾಶ ಸಿಕಿದ್ದು ಜೀವನದ ಸೌಭಾಗ್ಯ. ಈ ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟದ್ದು 92 ಮೇ 1 ಶುಕ್ರವಾರದಿಂದ, ಕಾಲೇಜಿನ ಸಹಪಾಠಿ ಯೂ ಆಧ್ಯಾತ್ಮಿಕ ಮಾರ್ಗದರ್ಶಿಯೂ ಆಗಿದ್ದ ಅಬ್ದುರ್‍ರಶೀದ್ (ಸಖಾಫಿ) ಚಪ್ಪಾರ ಪ್ಪಡವು ಇದರ ಪ್ರೇರಕ ಶಕ್ತಿ. ಸದಾ ಸಮಯ ಆಧ್ಯಾತ್ಮಿಕ ವಿಚಾರದಲ್ಲೇ ಮುಳುಗಿರುತ್ತಿದ್ದ ಚಪ್ಪಾರಪ್ಪಡವು ನನ್ನನ್ನೂ ಅವರ ದಾರಿಗೇ ಸೆಳೆಯಲು ಉತ್ಸುಕರಾಗಿದ್ದರು. ಅದಕ್ಕಾಗಿ ಅನೇಕ ಜೀವಂತ ಮಹನೀಯರ ಮತ್ತು ದರ್ಗಾಗಳ ಸಂದರ್ಶನಕ್ಕೆ ತೆರಳುವಾಗ ಸಂಗಡ ಸೇರಿಸುತ್ತಿದ್ದರು. ಇದು ಬದುಕಿನ ಮಹತ್ವದ ತಿರುವಿಗೆ ನಾಂದಿಯಾಯಿತು. ಪೊಡಿಯಾಟ್ಟ್ ವೀರಾನ್ ಔಲಿಯಾ ಉಪ್ಪಾಪ್ಪ, ಸಯ್ಯಿದ್ ಹಿಬತುಲ್ಲಾಹಿಲ್ ಬುಖಾರಿ ಚಾವಕ್ಕಾಡ್, ಕಕ್ಕಿಡಿಪ್ಪುರಂ ಅಬ್ದುರ್ರಹ್ಮಾನ್ ಕುಟ್ಟಿ ಮುಸ್ಲಿಯಾರ್, ಕುಟ್ಟಿಪ್ಪುರಂ ಅಬ್ದುಲ್ಲ ಮುಸ್ಲಿಯಾರ್, ಎರಮಂಗಲಂ ವಿ. ಅಬ್ದುಲ್ ಖಾದರ್ ಮುಸ್ಲಿಯಾರ್, ಸುಪ್ರಸಿದ್ದ ಫಖೀಹ್ ವೆಳ್ಳಿಯಾಂಬುರಂ ಸೈದಾಲಿ ಮುಸ್ಲಿಯಾರ್, ಚಾಲಿಯಂ ಸಯ್ಯಿದ್ ಝೈನುದ್ದೀನ್ ಇಂಬಿಚ್ಚಿಕೋಯ ತಂಙಳ್, ಕೆ.ಕೆ. ಅಬೂಬಕರ್ ಹಝ್ರುತ್ ವೀಂಬೂರ್ ಸಯ್ಯಿದ್ ಕುಂಞಿಕೋಯ ತಂಙಳ್, ವನ್ಮೇನಾಡ್ ಕಮಾಲುದ್ದೀನ್ ಹಾಜಿ, ವಡಗರ ಮುಹಮ್ಮದ್ ಹಾಜಿ ತಂಙಳ್ ಮುಂತಾದ ಆಧ್ಯಾತ್ಮಿಕ ಅಮರ ಚೇತನಗಳನ್ನು ನೇರವಾಗಿ ಸಂದರ್ಶಿಸಿ ಆಶೀರ್ವಾದ ಬೇಡಲು ಈ ಕಾಲಾವಧಿಯಲ್ಲಿ ಸಾಧ್ಯವಾಯಿತು. '92 ಡಿಸೆಂಬರ್ 24ರಂದು ಪ್ರಖ್ಯಾತ ಸೂಫಿವರ್ಯರೂ ನಾಲ್ಕು ಮದ್‌ಹಬ್‌ಗಳಲ್ಲಿ ಪಾರಂಗತರೂ ಆಗಿದ್ದ ಸಯ್ಯಿದ್ ಹಿಬತುಲ್ಲಾಹಿಲ್ ಬುಖಾರಿ ಅವರಿಂದ ಭಾಷಣಕ್ಕೆ ಇಜಾಝುತ್ (ಅಧ್ಯಾತ್ಮಾನುಮತಿ) ಪಡೆಯಲು, 92 ಮೇ 8 ಶುಕ್ರವಾರ ಚಾಲಿಯಂ ಸಯ್ಯಿದ್ ಇಂಬಿಚ್ಚಿಕೋಯ ತಂಙಳ್ ಅವರಿಂದ ಗ್ರಂಥಪಾರಾಯಣ (ಮುತಾಲಅಃ)ದ ಇಜಾಝುತ್ ಪಡೆಯಲು ಸಾಧ್ಯವಾದದ್ದು ಜೀವಮಾನದ ಸಾಧನೆ ಅನಿಸುತ್ತದೆ. 92 ಏಪ್ರಿಲ್ 4ರಂದು ಪ್ರಸಿದ್ಧ ಸೂಫಿವರ್ಯರೂ ಮಂಗಳೂರಿನ ಧಾರ್ಮಿಕ ನವೋತ್ಥಾನದ ಶಿಲ್ಪಿಯೂ ಆಗಿದ್ದ ಕುಟ್ಟಿಪ್ಪುರಂ ಅಬ್ದುಲ್ಲ ಮುಸ್ಲಿಯಾರ್, 'ಅಸ್ಮಾಅ್ (ಆಧ್ಯಾತ್ಮ ಚಿಕಿತ್ಸೆ)ನ ಇಜಾಝುತ್ ನೀಡಿ ಹರಿಸಿದ್ದರು. ಆದರೆ ಆ ಕ್ಷೇತ್ರಕ್ಕೆ ಪ್ರವೇಶವಾಗಲಿಲ್ಲ. 1993 ನವಂಬರ್ 12 ಶುಕ್ರವಾರ ಪೂರ್ವಾಹ್ನ 10.10ಕ್ಕೆ ಸಯ್ಯಿದ್ ಹಿಬತುಲ್ಲಾಹಿಲ್ ಬುಖಾರಿ ಅವರಿಂದ 'ಖಾದಿರಿಯ್ಯಃ ಆಧ್ಯಾತ್ಮ ದಾರಿಯ ದೀಕ್ಷೆಯನ್ನು ಪಡೆಯಲು ಅಲ್ಲಾಹನ ಅನುಗ್ರಹವುಂಟಾಯಿತು. 20 ವರ್ಷಗಳ ಹಿಂದೆ ಇಂತಹ ಆಧ್ಯಾತ್ಮಿಕ ಮಾರ್ಗದತ್ತ ನನ್ನನ್ನು ಮುನ್ನಡೆಸಿದ ಸಹಪಾಠಿ, ಆತ್ಮೀಯ ಹಿತೈಷಿ ಅಬ್ದುರ್‍ರಶೀದ್ ಸಖಾಫಿ ಚಪ್ಪಾರಪ್ಪಡವು ಇದು ಬರೆಯುವ ವೇಳೆ ತಲಪಾಡಿ ಮಸೀದಿಯಲ್ಲಿ ನನ್ನ ಸಹೋದ್ಯೋಗಿಯಾಗಿ, ಮುದರ್ರಿಸ್ ಆಗಿ ಕಾರ್ಯನಿರ್ವಹಿಸುತ್ತಿರುವುದು ಕಾಕಾತಾಳೀ ಯವಾದರೂ ಅಲ್ಲಾಹನ ಪೂರ್ವ ನಿರ್ಧಾರಗಳ ವಿಸ್ಮಯವಾಗಿ ಅರಿವಿಗೆ ಬರುತ್ತದೆ. ಆತ್ಮ ಪ್ರಶಂಸಗೆ ಅಲ್ಲ, ಬದುಕಿನ ಮಹತ್ವದ ಯಾವೊಂದು ಘಳಿಗೆಯೂ ದಾಖಲಾಗದೆ ಹೋಗಬಾರದೆಂಬ ಅಂತರಾತ್ಮ ದ ಒತ್ತಾಯಕ್ಕೆ ಮಣಿದು ಇದೆಲ್ಲವನ್ನು ಅಕ್ಷರಕ್ಕೆ ಇಳಿಸಿದ್ದೇನೆ.

# 12

ಗ್ರೋಸರಿ ವೀಸಾ ಎಂಬ ತೂಗು ಕತ್ತಿಯ ಕೆಳಗೆ...

ಮಲಪ್ಪುರಂ ಜಿಲ್ಲೆಯ ದರ್ಸ್ ಕಲಿಕೆ ಯ ಸಂದರ್ಭದಲ್ಲಿ ಜೀವಂತ ಮತ್ತು ದಿವಂಗತರಾದ ಅನೇಕ ಮಹಾತ್ಮರ ಸಂದರ್ಶನಕ್ಕೆ ಅವಕಾಶವಾಗುತ್ತಿತ್ತು. ಕೆಲವು ಮಹಾತ್ಮರನ್ನು ತಂದೆಯೇ ನನಗೆ ಪರಿಚಯಿಸಿ ಅವರ ಸಂದರ್ಶನಕ್ಕೆ ಪ್ರೇರಣೆ ಕೊಡುತ್ತಿ ದ್ದರು. ಆ ಕಾಲದಲ್ಲಿ ಬದುಕಿದ್ದ ಉಲಮಾ ಗಳ ಪೈಕಿ ಮರ್‌ಹೂಂ ಶೈಖುಲ್ ಹದೀಸ್ ಕೆ.ಕೆ. ಅಬೂಬಕರ್ ಹಝ್ರುತ್ ಅವರ ಮೇಲೆ ತಂದೆಗೆ ಅಪಾರ ಭಕ್ತಿಯಿತ್ತು. ಅದಕ್ಕೆ ಚಾರಿತ್ರಿಕ ಕಾರಣವೂ ಇತ್ತು.

ಬಡತನದ ಬೇಗೆಯಲ್ಲಿ ಬೆಂದು ಬೆಳೆದಿದ್ದ ತಂದೆಗೆ ಚಿಕ್ಕಂದಿನಲ್ಲಿ ಆಪ್ತ ರೂ ಆಶ್ರಯದಾ ತರೂ ಇರಲಿಲ್ಲ. ತಂದೆ, ತಾಯಿ ಚಿಕ್ಕಂದಿನಲ್ಲೇ ಮ ರಣ ಹೊಂದಿದ್ದರು. ಇದ್ದ ಏಕೈಕ ಅಣ್ಣ ಕುಟುಂಬ ಹೊಣೆಯ ಭಾರ ತಾಳಲಾರದೆ ಊರು ಬಿಟ್ಟಿದ್ದ. ಇರುವ ಏಕೈಕ ತಂಗಿಯನ್ನು ಚಿಕ್ಕಮ್ಮನ ವಶಕ್ಕೆ ಕೊಟ್ಟು ದೂರದ ಊರಿಗೆ ದರ್ಸ್ ಕಲಿಯಲು ಹೋಗಿ ದ್ದರು ತಂದೆ. ಅವರ ಮನೆಯಿದ್ದದ್ದು ಸುಳ್ಯ ತಾಲೂಕಿನ ಜಾಲ್ಸೂರು ಸಮೀಪದ ಕನಕ ಮಜಲು - ಸುಣ್ಣಮೂಲೆಯಲ್ಲಿ.

ದರ್ಸ್ ಕಲಿಕೆಯ ತೀವ್ರ ಪ್ರಯತ್ನದೆಡೆ ಯಲ್ಲಿ ತನ್ನ ಕುಟುಂಬ ನೌಕೆಯನ್ನು ದಡ ಸೇರಿಸಬೇಕಾದ ಜವಾಬ್ದಾರಿಯೂ ಅವರ ಮೇಲಿತ್ತು. ಈ ಜಂಜಾಟಗಳು ಅವರನ್ನು ಕಲಿಕೆ ನಿಲ್ಲಿಸಿ ಗಳಿಕೆ ಯತ್ತ ಹೊರಳಲು ದೃಢ ನಿರ್ಧಾರ ಮಾಡಿಸಿತ್ತು. ತಾ ನು ಕಲಿಯುತ್ತಿದ್ದ ಮಲಪ್ಪುರಂ ಜಿಲ್ಲೆ ಯ ತಾನೂರ್ ಎಂಬಲ್ಲಿನ ಪ್ರಶಸ್ತ 'ಇಸ್ಲಾಹುಲ್ ಉಲೂಂ ಅರಬಿಕ್ ಕಾಲೇ ಜಿನ' ಪ್ರಧಾನ ಮುದರ್ರಿಸ್, ತನ್ನ ಗುರು ವರ್ಯರಾದ ಬಹು। ಅಬೂಬಕರ್ ಹಝ್ರತ್ ಅವರನ್ನು ಭೇಟಿಯಾಗಿ ತಂದೆ ಈ ನಿರ್ಧಾರ ಪ್ರಕಟಿಸಿದರು. ಗಂಟೆಗಟ್ಟಳೆ ತಂದೆಯನ್ನು ರೂಮಿನಲ್ಲಿ ಕೂಡಿ ಹಾಕಿ ನಿರಂತರ ಉಪದೇಶ ಗಳನ್ನು ನೀಡಿ ವಿದ್ಯಾರ್ಜನೆ ಮುಂದುವರಿಸಲು ಬಲವಾದ ಪ್ರೇರಣೆ ಕೊಟ್ಟಿದ್ದರು ಹಝ್ರತ್. ಇದು ಅವರ ಬದುಕಿನಲ್ಲಿ ತಿರುವಾಯಿತು. ಮುಂದೆ ಆರು ವರ್ಷಗಳ ಕಾಲ ತಂದೆ ಕೆ.ಕೆ. ಹಝ್ರತ್ ಶಿಷ್ಯತ್ವದಲ್ಲಿ ದರ್ಸ್ ಕಲಿಕೆ ಮುಂದುವರಿಸಿದ್ದರು. ಈ ಕಾರಣಕ್ಕಾಗಿ ತಂದೆಯ ಉಸ್ತಾದ್‌ಗಳ ಪಟ್ಟಿಯಲ್ಲಿ ಮರ್ ಹೂಂ ಶಂಸುಲ್ ಉಲಮಾ ಇ.ಕೆ. ಉಸ್ತಾದ್ (ತಾನೂರು ಕಾಲೇಜು), ಕೆ.ವಿ. ಮುಹಮ್ಮದ್ ಮುಸ್ಲಿಯಾರ್ ಕೂಟ್ಟನಾಡ್(ತಾನೂರ್), ಸಮಸ್ತ ಮುಫ್ತಿಯಾಗಿದ್ದ ನಿರಮರುದೂರು ಮೀರಾನ್ ಕುಟ್ಟಿ ಮುಸ್ಲಿಯಾರ್ (ತಾನೂರು ), ಉಸ್ತಾದುಲ್ ಅಸಾತೀದ್ ಒ.ಕೆ. ಝೈನು ದ್ದೀನ್ ಕುಟ್ಟಿ ಮುಸ್ಲಿಯಾರ್ (ಚಾಲಿಯಂ), ಕೆ.ಕೆ. ಸ್ವದಖತುಲ್ಲಾಹ್ ಮುಸ್ಲಿಯಾರ್ ( ವಂಡೂರು), ಪಾನೂರು ಪೂಕೋಯ ತಂಙಳ್ (ಪಾರಕ್ಕಡವು), ಪೂಚಕ್ಕಾಡ್ ಅಬೂಬಕರ್ ಹಾಜಿ (ಉಪ್ಪಿನಂಗಡಿ) ಮುಂತಾದವರ ಪೈಕಿ ಕೆ.ಕೆ. ಹಝ್ರತ್ ಜತೆ ಹೆಚ್ಚಿನ ನಿಷ್ಠೆಯಿರಿಸಿದ್ದರು. ತಾನೂರ್ ಇಸ್ಲಾಹುಲ್ ಉಲೂಂನಲ್ಲಿ ಕಲಿಯುತ್ತಿದ್ದ ವೇಳೆ ಪಟ್ಟಿಕ್ಕಾಡ್ ಜಾಮಿಅಃ ನೂರಿಯ್ಯಃ ಅರಬಿಕ್ ಕಾಲೇಜು ಪ್ರಾರಂಭವಾಗಿ, ತನ್ನ ಸಹಪಾಠಿಗಳೆಲ್ಲ ಪದವಿಗಾಗಿ ಅಲ್ಲಿಗೆ ತೆರಳಿ ದಾಗ 'ಇಸ್ಲಾಹ್'ನ ಹಿರಿಯ ಮುದರ್ರಿಸ್ ನಿರಮರುದೂರು ಮೀರಾನ್ ಕುಟ್ಟಿ ಮುಸ್ಲಿಯಾರ್ ತಂದೆಯನ್ನು ನಿರುತ್ಸಾಹಗೊ ಳಿಸಿದ್ದರಂತೆ. ಅದರಿಂದಾಗಿ 'ಫೈಝಿ'ಪದವಿ ಸ್ವಲ್ಪದರಲ್ಲೇ ತಪ್ಪಿಹೋಯಿತು. ಮುಂದೆ ಉಳ್ಳಾಲ ದರ್ಸ್‌ನಲ್ಲಿ ಸಯ್ಯಿದುನಾ ತಾಜುಲ್ ಉಲಮಾರ ಬಳಿ ವಿದ್ಯಾಭ್ಯಾಸ ಮುಂದುವರಿಸಿ ಮರಣದ ತನಕ ತಾಜುಲ್ ಉಲಮಾರ ಮಾರ್ಗದರ್ಶನದಲ್ಲಿಯೇ ಮುಂದುವರಿದಿದ್ದರು.

1993 ಎಪ್ರಿಲ್ 2 ಶುಕ್ರವಾರದಂದು ಕೊನೆಯದಾಗಿ ಅದೇ ಕೆ.ಕೆ. ಹಝ್ರತ್ ಸಂದರ್ಶನಕ್ಕೆ ತಂದೆಯ ಜತೆ ತಾನೂರಿಗೆ ಹೋಗಿದ್ದು, ಅವರು ನನಗೆ ಗ್ರಂಥ ಪಾರಾಯಣ (ಮುತಾಲಅಃ)ದ ಸಮ್ಮತಿ ನೀಡಿದ್ದು ಡೈರಿ ಪುಟದಲ್ಲಿ ದಾಖಲಾಗಿದೆ. 95ರಲ್ಲಿ ಹಝ್ರತ್ ನಿಧನರಾದರು.

1992 ಅಕ್ಟೋಬರ್ 10 ರಂದು ಪ್ರಿನ್ಸಿಪಾಲ್ ಬಾಪು ಮೌಲವಿ ದಾರುಲ್ ಮಆರಿಫ್‌ನಲ್ಲಿ ಡಿಸ್‌ಮಿಸ್ ಮಾಡಿದ್ದ ಸಾಹಿತ್ಯ ಸಮಾಜ ಮುಂದಿನ ವರ್ಷ ಪ್ರಾರಂಭ ವಾದದ್ದು 1993 ಸೆಪ್ಟಂಬರ್ 15, 1414 ರಬೀಉಲ್ ಅವ್ವಲ್ 28 ಬುಧವಾರದಂದು. ಆ ವರ್ಷವೂ ಅದು ನಮ್ಮ ತಿರೂರಂಗಾಡಿ ಉಸ್ತಾದರ ಶಿಷ್ಯಂದಿರಿಗೆ ಸೀಮಿತವಾಗಿದ್ದ ನೆನಪು. ಕಳೆದ ವರ್ಷ ಸಮಾಜ ಬರ್ಖಾಸ್ತು ಗೊಳಿಸಿದಾಗ ಇದ್ದ ಅದೇ ಪದಾಧಿಕಾರಿ ಗಳನ್ನು ಈ ವರ್ಷವೂ ಪುನರಾಯ್ಕೆ ಮಾಡಿ ಅವರಿಗಾದ ನೋವನ್ನು ಮರೆಸುವ ಪ್ರಯತ್ನ ಮಾಡಲಾಗಿತ್ತು. ವಿವಾದಾತ್ಮಕವಾದ ಯಾವುದೇ ವಿಷಯಗಳನ್ನು ಚರ್ಚೆಗೆತ್ತಿ ಮಾತನಾಡಬಾರದೆಂದು ಉಸ್ತಾದರು ಸುತ್ತೋಲೆ ಹೊರಡಿಸಿದ್ದರು. ಅದರಂತೆ ಆ ವರ್ಷವನ್ನು ಸೌಹಾರ್ದ ವರ್ಷವಾಗಿ ಆಚರಿ ಸಲು ನಿರ್ಧರಿಸಿದೆವು.

1993 ನನ್ನ ದರ್ಸ್ ಜೀವನದ 7ನೇ ವರ್ಷವಾಗಿದ್ದು ದಾರುಲ್ ಮಆರಿಫ್‌ನಲ್ಲಿ 7ನೇ ತರಗತಿಯಲ್ಲಿರಬೇಕಿತ್ತು. ನನ್ನ ತಂಗಿಯ ಮದುವೆಗೆ ಸಿದ್ಧತೆ ನಡೆಯುತ್ತಿದ್ದುದರಿಂದ ಏಕಾಂಗಿಯಾಗಿ ಅದಕ್ಕೆ ವ್ಯವಸ್ಥೆ ಮಾಡಲು ತಂದೆಗೆ ಧೈರ್ಯ ಸಿಗಲಿಲ್ಲ. ನನ್ನನ್ನು ಗಲ್ಫ್‌ಗೆ ಕಳುಹಿಸಿ ತನ್ನ ಆರ್ಥಿಕ ಪರಿಮಿತಿಗಳಿಗೆ ಪರಿಹಾರ ಕಂಡುಕೊಳ್ಳುವ ಯೋಚನೆಗೆ ಅವರು ಮತ್ತೆ ಚಾಲನೆ ಕೊಟ್ಟರು. ಈ ಬಾರಿ ಅರ್ಧ ದಾರಿಯಲ್ಲಿ ದರ್ಸ್ ನಿಲ್ಲಿಸಲು ಹೇಳದೆ ಹೇಗಾದರೂ ದಾರುಲ್ ಮಆರಿಫ್ ನಲ್ಲಿ ಮುಂದಿನ ವರ್ಷ, 8ನೇ ತರಗತಿಯಲ್ಲಿ ಪದವಿ ಸಿಗುವುದು ಖಚಿತ, ಶೈಖುನಾ ಬಾಪ್ಪು ಉಸ್ತಾದರಲ್ಲಿ ಮಾತನಾಡಿ ಒಂದು ವರ್ಷ ಜಂಪ್ ಮಾಡಿ ಈಗಲೇ 8ನೇ ತರಗತಿಯಲ್ಲಿ ಕುಳಿತು ವರ್ಷಾಂತ್ಯದಲ್ಲಿ ಪದವಿ ಪಡೆದರೆ ಮತ್ತೆ ವಿದೇಶ ಯಾತ್ರೆಗೆ ಅಡ್ಡಿಯಿಲ್ಲ ಎಂದವರು ಅಂದಾಜಿಸಿದರು. ಬಾಪ್ಪು ಉಸ್ತಾದರಿಗೆ ಸ್ಥಿತಿ ಗತಿಗಳನ್ನು ಮನವರಿಕೆ ಮಾಡಿ ಕೊಟ್ಟು 7ಮತ್ತು 8ನೇ ತರಗತಿ ಕಿತಾಬ್‌ಗಳನ್ನು ಒಟ್ಟಿಗೆ ಓದುವ ಭರವಸೆ ನೀಡಿ 7ನೇ ವರ್ಷದಲ್ಲೇ ಮುಖ್ತಸರ್ (ಪದವಿ) ತರಗತಿಗೆ ಪ್ರವೇಶ ಗಿಟ್ಟಿಸಿ ಕೊಂಡೆ. 2 ತರಗತಿಗಳ ಡರ್ಸುನ್‌ಗಿಂತ ಹೆಚ್ಚು ಗ್ರಂಥಗಳನ್ನು ಪ್ರತಿದಿನ ಬಿಡುವಿಲ್ಲದೆ ಕಲಿಯುವುದು, ಕ್ಲಾಸ್‌ಗೆ ಹಾಜರಾಗುವುದು, ನೋಟ್ಸ್ ಬರೆದಿಡುವುದು, ಸಂಶಯ ನಿವಾರಣೆ ಇವೆಲ್ಲ ತೀವ್ರ ಒತ್ತಡ ತರುತ್ತಿ ದ್ದುವು. 'ಗಲ್ಫ್‌ಗೆ ಹಾರುವ ಮಂಚೆ ಸನದ್ (ಪದವಿ) ಎಂಬ ಗೋಲ್ ಫಿಕ್ಸಿಂಗ್ ಮೊದಲೇ ಮಾಡಿದ್ದರಿಂದ ಕುಸಿದು ಬೀಳದೆ ಸಾವರಿಸಿ ಕೊಂಡು ಹೋಗಲು ಸುಲಭವಾಯಿತು. ಕಾಲೇಜಿನ ಉಸ್ತಾದ್‌ಗಳಲ್ಲೊಬ್ಬರಾದ ಅಬ್ದುಸ್ಸತ್ತಾರ್ ಕಾಮಿಲ್ ಸಖಾಫಿ ಮೂನ್ನಿ ಯೂರ್, ಪರಿಸ್ಥಿತಿಯನ್ನು ಅರ್ಥ ಮಾಡಿ ಕೊಂಡು ನನಗೆ ಸಕಲ ರೀತಿಯ ಬೆಂಬಲ ನೀಡಿದ್ದರು. ಈ ಮಧ್ಯೆ ಭಾಷಣದ ಕಡೆ ಹೆಚ್ಚು ಗಮನ ಕೊಡಲು ಸಾಧ್ಯವಾಗಿಲಿಲ್ಲ. ಆಸಕ್ತಿಯೂ ಕಡಿಮೆಯಾಗಿತ್ತು. ಹೀಗೇ ಮುಂದುವರಿದ ದಾರುಲ್ ಮಆರಿಫ್‌ನ ಎರಡನೇ ವರ್ಷ, 1994 ಜನವರಿ 2ನೇ ವಾರಕ್ಕೆ ನನ್ನನ್ನು, ಬಹು ನಿರೀಕ್ಷಿತ ಮುಖ್ತಸರ್ (Predegree) ವಾರ್ಷಿಕ ಪರೀಕ್ಷೆಯ ಸನಿಹ ತಂದು ನಿಲ್ಲಿಸಿತ್ತು. ಗಂಭೀರ ಸ್ವಭಾವದ ಪ್ರಿನ್ಸಿಪಾಲ್ ಓಡಕ್ಕಲ್ ಬಾಪು ಮೌಲವಿ ಪರೀಕ್ಷೆಯನ್ನು ಗಂಭೀರವಾಗಿಯೇ ತೆಗೆದು ಕೊಂಡಿದ್ದರು. ಯಾವುದೇ ಹೊಂದಾಣಿಕೆಗಳಿಗೆ ಅಲ್ಲಿ ಅವಕಾಶವಿರಲಿಲ್ಲ. ಕಲಿತು ಉತ್ತೀರ್ಣ ರಾದರೆ ಪದವಿ, ಇಲ್ಲದಿದ್ದರೆ ಅದೇ ತರಗತಿ ಯಲ್ಲಿ ಕುಳಿತು ಮುಂದಿನ ವರ್ಷ ಪರೀಕ್ಷೆ ಬರೆಯ ಬೇಕೆಂಬುದು ಅವರ ಅಚಲ ನಿಲು ವಾಗಿತ್ತು. ಪರೀಕ್ಷೆಯ ಮೇಲುಸ್ತುವಾರಿಗೆ ಸಂಸ್ಥಾನ ಜಂಇಯ್ಯತುಲ್ ಉಲಮಾದ ಸಾರಥಿ ವಂಡೂರು ಜಾಮಿಅಃ ವಹ್‌ಬಿಯ್ಯಃ ಅರಬಿಕ್ ಕಾಲೇಜಿನ ಹಿರಿಯ ಮುದರ್ರಿಸ್ ಉಣ್ಣಿ ಮುಹಮ್ಮದ್ ಮುಸ್ಲಿಯಾರನ್ನು ಕರೆಸಲಾಗಿತ್ತು. ಉಣ್ಣಿ ಮುಹಮ್ಮದ್ ಮುಸ್ಲಿಯಾರ್ ಕಣ್ಣಿಗೆ ಕಣ್ಣಿಟ್ಟು ಕಠಿಣವಾಗಿ ಪರೀಕ್ಷೆ ನಡೆಸಿ ಕೊಟ್ಟರು ವಾರದ ಬಳಿಕ ಜಾಹೀರು ಫಲಕದಲ್ಲಿ ಉತ್ತೀರ್ಣರ

ಪಟ್ಟಿಯಲ್ಲಿ ಹೆಸರು ಬಂದಾಗ ಮಾತ್ರ ಉಸಿರು ನೇರ ಬಿದ್ದಿತ್ತು.

1994 ಜನವರಿ 18, 1414 ಶಅ್‌ಬಾನ್ 5 ಮಂಗಳವಾರ ದಾರುಲ್ ಮಆರಿಫ್ ಅರಬಿಕ್ ಕಾಲೇಜು ಪದವಿ ಪ್ರದಾನ ಸಮ್ಮೇಳನಕ್ಕೆ ಸಜ್ಜಾಗಿ ನಿಂತಿತ್ತು. ಆ ವರ್ಷಾರಂಭದಲ್ಲಿ ಕಾಲೇ ಜಿನಲ್ಲಿ ಮುತವ್ವಲ್ (9,10) ತರಗತಿಗಳೂ ಪ್ರಾರಂಭವಾಗಿದ್ದರಿಂದ 8ನೇ ತರಗತಿಯಲ್ಲಿ ಮುಖ್ತಸರ್ ಪದವಿ ನೀಡುವುದು ಬೇಡವೆಂದು ಕೆಲವು ಉಸ್ತಾದ್ ಗಳಿಗೂ, ಸಮಿತಿ ಸದಸ್ಯರಿಗೂ ಅಭಿಪ್ರಾಯವಿತ್ತು. ಇದು ನನ್ನನ್ನು ದಂಗು ಬಡಿಸಿತ್ತು. 6ನೇ ತರಗತಿಯಿಂದ 8ಕ್ಕೆ ಜಿಗಿದು ಮುಖ್ತಸರ್ ಪದವಿ ಸಿಕ್ಕಿದ ತಕ್ಷಣ ಸೌದಿ ಅರೇಬಿ ಯಾದ ಜಿದ್ದಾ - ಶರಫಿಯ್ಯದಲ್ಲಿ ನನ್ನ ಬಾವನ 'ಗ್ರೋಸರಿ'(ದಿನಸಿ ಅಂಗಡಿ) ಒಂದರಲ್ಲಿ ಸೇಲ್ಸ್‌ಮ್ಯಾನ್ ಆಗಿ ಕೆಲಸ ಖಾತರಿ ಪಡಿಸಿದ್ದ ನನಗೆ ಇಲ್ಲಿ ಸನದ್ ಸಿಗದೆ ಹೋದರೆ ಇನ್ನೆರಡು ವರ್ಷ ದರ್ಸ್ ಕಲಿಯುವುದು ಮತ್ತೆ ಸನದ್ ಪಡೆಯುವುದು ಕನಸಿನ ಮಾತಾಗಿತ್ತು. ಕೊನೆಗೆ ಕಾಲೇಜು ಸಮಿತಿ ಸಭೆಯಲ್ಲಿ ಗೌನು(ಕೋಟು) ಇಲ್ಲ; ಪ್ರಮಾಣ ಪತ್ರ ಮಾತ್ರ ನೀಡುವುದೆಂದು ನಿರ್ಧರಿಸಲಾಯಿತು.

ಮಲಪ್ಪುರಂ ಜಿಲ್ಲೆಯ ಪ್ರಸಿದ್ಧ ಸಯ್ಯಿ ದ್‌ಗಳು, ಉಲಮಾಗಳು ಮತ್ತು ಸಾಮಾಜಿಕ ಮುಂದಾಳುಗಳಿಂದ ತುಂಬಿ ನಿಂತ ಸದರಿ ಸಮ್ಮೇಳನದಲ್ಲಿ ಪ್ರಿನ್ಸಿಪಾಲ್ ಮರ್‌ಹೂಂ ಒ.ಕೆ. ಎಂ. ಬಾಪ್ಪು ಮೌಲವಿ, ನಾನು ಸೇರಿ ದಂತೆ 29 ವಿದ್ಯಾರ್ಥಿಗಳಿಗೆ 'ಮೌಲವಿ ಆಲಿಂ ಝೈನಿ (M.A.Z) ಪದವಿಯನ್ನು ಪ್ರದಾನ ಮಾಡಿದರು. ಸಮ್ಮೇಳನದಲ್ಲಿ ಪದವಿ ಪಡೆದ ಉಲಮಾಗಳ ಪ್ರತಿನಿಧಿಯಾಗಿ ಭಾಷಣ ಮಾಡಲು ನನಗೆ ಅವಕಾಶ ದೊರೆಯಿತು. 'ಜೀವನ ಪೂರ್ತಿ ಈ ಸಂಸ್ಥೆಯ ಪ್ರಚಾರಕ್ಕೆ ನನ್ನಿಂದಾದ ಪ್ರಯತ್ನವನ್ನು ಮಾಡುತ್ತೇನೆ' ಎಂದು ಅಂದು ಘೋಷಿಸಿದ್ದೆ. ಮುಂದೆ ಬೇರೆ ಬೇರೆ ಕಾಲೇಜುಗಳಿಂದ ಉನ್ನತ ಪದವಿ ಲಭಿಸಿದಾಗ ಸಹಪಾಠಿಗಳೆಲ್ಲರು ತಮ್ಮ ಹೆಸರಿನಿಂದ 'ಝೈನಿ' ಬಿರುದನ್ನು ಬಿಟ್ಟು ಬಿಟ್ಟ ರೂ ಅಂದಿನ ಘೋಷಣೆಗೆ ನ್ಯಾಯ ಸಲ್ಲಿಸಲು ನಾನದನ್ನು ಉಳಿಸಿ ಕೊಂಡು ಬಂದಿದ್ದೇನೆ.

ಭಾಷಣದಂತೆ ಕಾರ್ಯಕ್ರಮಗಳ ಎನೌ ನ್ಸ್‌ಮೆಂಟ್‌ನಲ್ಲೂ ಈ ಕಾಲದಲ್ಲಿ ಅಗಾಧ ಆಸಕ್ತಿ ಇತ್ತು. ಸಿಕ್ಕ ಸಿಕ್ಕ ಪುಸ್ತಕ- ಪತ್ರಿಕೆಗಳ ಲ್ಲಿರುವ ಆಕರ್ಷಕ ಪದಪುಂಜಗಳನ್ನು, ಪ್ರಯೋಗಗಳನ್ನು ಡೈರಿಯಲ್ಲಿ ಬರೆದಿಟ್ಟು ಕಂಠಪಾಟ ಮಾಡಿ ಬಳಸುವುದು ಅಂದಿನ ಹವ್ಯಾಸವಾಗಿತ್ತು. ಪುಟ್ಟ ಕಾರ್ಯಕ್ರಮಗಳಿಗೆ ಭಾಷಣಕಾರನಾಗಿ ದೊಡ್ಡ ಮಟ್ಟದ ಸಮ್ಮೇ ಳನಗಳಿಗೆ ಎನೌನ್ಸರ್ ಆಗಿ ಸಾಕಷ್ಟು ಆಹ್ವಾನ - ಅವಕಾಶ ಒದಗಿ ಬರುತ್ತಿದ್ದವು. ಆ ಪೈಕಿ 1994 ಜನವರಿ 19,20 ಬುಧವಾರ, ಗುರು ವಾರ ದಿವಸಗಳಲ್ಲಿ ಮಲಪ್ಪುರಂ ಜಿಲ್ಲೆ ಪೂರ್ತಿ ಸುತ್ತಿ ಎನೌನ್ಸ್ ಮಾಡಿದ್ದು ಮರೆಯ ಲಾಗದ ನೆನಪು. '94 ಜನವರಿ 24 ಸೋಮ ವಾರ ಅಸರ್ ನಮಾಝಿನೊಂದಿಗೆ ಪ್ರಸಿದ್ಧ ಚೆಮ್ಮಾಡ್ ಟೌನ್ ಸುನ್ನೀ ಮಸ್ಜಿದ್ ಉದ್ಘಾ ಟನೆಗೊಳ್ಳುವುದಿತ್ತು. ಮಲಪ್ಪುರಂ ಜಿಲ್ಲೆಯ ಪ್ರಮುಖ ಚಾರಿತ್ರಿಕ ಪಟ್ಟಣಗಳಲ್ಲಿ ಒಂದಾದ ಚೆಮ್ಮಾಡ್ ಜುಮಾ ಮಸೀದಿಯಲ್ಲಿ ಚೆರು ಶ್ಯೇರಿ ಝೈನುದ್ದೀನ್ ಮುಸ್ಲಿಯಾರ್ ಮುದ ರ್ರಿಸ್ ಆಗಿದ್ದರು. ಮುಸ್ಲಿಂ ಲೀಗ್ ನಾಯಕ, ವಹ್ಹಾಬಿ ಮುಂದಾಳು, ಶಾಸಕ ಸೀದಿ ಹಾಜಿ ಕೊನೆಯುಸಿರೆಳೆದಾಗ ಲೀಗ್ ಮುಖಂಡರ ಆದೇಶದಂತೆ ಸೀದಿ ಹಾಜಿಗಾಗಿ ಮಸೀದಿ ಗಳಲ್ಲಿ ಮಯ್ಯಿತ್ ನಮಾಝ್ ಮಾಡಲಾಗಿತ್ತು. ಸ್ಥಳೀಯ ಸುನ್ನೀ ಕಾರ್ಯಕರ್ತರ ವಿರೋಧ ವನ್ನು ಲೆಕ್ಕಿಸದೆ ಚೆಮ್ಮಾಡ್ ಮಸೀದಿಯಲ್ಲಿ ಯೂ 'ಕೊನೆಯ ಉಸಿರಿರುವ ತನಕ ಸುನ್ನತ್ ಜಮಾಅತ್‌ಗೆ ವಿರುದ್ಧವಾಗಿ ಕೆಲಸ ಮಾ ಡುವೆ' ಎಂದು ಬಹಿರಂಗವಾಗಿ ಘೋಷಿಸಿದ್ದ ಸೀದಿ ಹಾಜಿಗಾಗಿ ಮಯ್ಯಿತ್ ನಮಾಝ್ ಮಾಡಲಾಗಿತ್ತು. ಇದರಿಂದ ಕೆಂಡಾಮಂಡಲ ವಾದ ಚೆಮ್ಮಾಡ್ ಪ್ರದೇಶದ ಸುನ್ನಿಗಳು ಬಹುಮಾನ್ಯ ಎಂ.ಎನ್. ಕುಂಞ್ಞಹ್‌ಮದ್ ಹಾಜಿ ನೇತೃತ್ವದಲ್ಲಿ ಸ್ವಚ್ಛ ಸುನ್ನೀ ಮಸೀದಿ ಯೊಂದರ ನಿರ್ಮಾಣಕ್ಕೆ ಪಣ ತೊಟ್ಟರು. ಮಸೀದಿ ಶಿಲಾನ್ಯಾಸದ ಸ್ವಾಗತ ಭಾಷಣದಲ್ಲಿ 'ಇಲ್ಲಿ ನಿರ್ಮಾಣವಾಗಲಿರುವುದು ವಹ್ಹಾಬಿಗೆ ಮಯ್ಯಿತ್ ನಮಾಝ್ ಮಾಡದ ಸುನ್ನೀ ಮಸ್ಜಿದ್' ಎಂದು ಎಂ.ಎನ್. ಆವೇಶದಿಂದ ಹೇಳಿದರು. ಜನರು ಹೆಮ್ಮೆಯಿಂದ ತಕ್‌ಬೀರ್ ಮೊಳಗಿಸಿದ್ದರು.

ಮಸೀದಿಯ ಉದ್ಘಾಟನೆಯನ್ನು ಬೃಹತ್ ಸಮ್ಮೇಳನದದೊಂದಿಗೆ ನಡೆಸಲು ನಿರ್ಧರಿಸ ಲಾಗಿತ್ತು. ಸದರಿ ಸಮ್ಮೇಳನದ ಪ್ರಚಾರದ ವಾಹನದಲ್ಲಿ ಎರಡು ದಿನಗಳ ಕಾಲ ಎನೌನ್ಸ್ ಮಾಡುವ ಕೆಲಸ ನನಗೆ ವಹಿಸಲಾಗಿತ್ತು. ಸಹ ಪಾಠಿ ಹಂಝ ಮಣ್ಣಾರ್ ಕಾಡ್ ಮಧ್ಯದಲ್ಲಿ ಕಾಂತಪುರಂ ಮದ್‌ಹ್ ಗೀತೆಗಳನ್ನು ಹಾಡುತ್ತಾ ನನಗೆ ವಿಶ್ರಾಂತಿ ಕೊಡುತ್ತಿದ್ದರು.

ಝೈನೀ ಪದವಿಯೊಂದಿಗೆ ಊರಿಗೆ ಮರ ಳಿದ ನಾನು ಆದಷ್ಟು ಬೇಗೆ ಸೌದಿಗೆ ತೆರಳುವ ಸಿದ್ಧತೆ ಮಾಡಬೇಕಿತ್ತು. ಹೋಗುವ ತನಕ ಎಲ್ಲಾ ದರೂ ನಿಲ್ಲು ಎಂಬ ಸಮ್ಮತಿಯೂ ತಂದೆಯಿಂದ ಸಿಕ್ಕಿತ್ತು. ಈ ಮಧ್ಯೆ ನನಗೆ ಕೆಲಸ ಕೊಡಲಿದ್ದ ನನ್ನ ಅಕ್ಕನ ಗಂಡ ಪಳ್ಳಂಗೊಡ್ ಮುಹ ಮ್ಮದ್ ಹಾಜಿ, ತನ್ನ ತಾಯಿಯ ಅಸೌಖ್ಯದ ನಿಮಿತ್ತ ಊರಿಗೆ ಬಂದದ್ದು, ಅವರ ತಾಯಿ ನನ್ನ ತಂದೆಯ ತಂಗಿಯೂ ಆಗಿರುವುದರಿಂದ ಅವರ ಚಿಕಿತ್ಸೆಗೆ ಸಂಬಂಧ ಪಟ್ಟಂತೆ ತಂದೆ ಮೂಡಿಗೆರೆ ಮಸೀದಿಯಿಂದ ರಜೆ ತೆಗೆದು ನನ್ನನ್ನು ಬದಲಿಗೆ ಕಳುಹಿಸಿದ್ದು ಜೀವನದಲ್ಲಿ ಮತ್ತೊಂದು ತಿರುವಾಯಿತು.

ಜನವರಿ 29ರಂದು ಅತ್ತೆಗೆ ಕಂಕನಾಡಿ ಯಲ್ಲಿ ಶಸ್ತ್ರಕ್ರಿಯೆ ನಡೆದರೂ ಅದು ಫಲಕಾರಿ ಯಾಗದೆ ಅವರನ್ನು ಮಣಿಪಾಲ ಕ್ಯಾನ್ಸರ್ ಆಸ್ಪತ್ರೆಗೆ ದಾಖಲಿಸಲಾಯಿತು. ಇದೇ ವೇಳೆ ಟೈಫಾಯಿಡ್ ಜ್ವರ ಬಾಧೆಯಿಂದಾಗಿ ಬಾವ ನನ್ನು ಫೆಬ್ರವರಿ 2 ರಂದು ಕಕ್ಕಿಂಜೆ ಸೈಂಟ್ ಜೋಸೆಫ್ ಹೆಲ್ತ್ ಸೆಂಟರ್‌ನಲ್ಲಿ 'ಎಡ್ಮಿಟ್' ಮಾಡಲಾಯಿತು. ತಾಯಿ -ಮಗನ ಕೂಟ ರೋಗದಿಂದಾಗಿ ತನ್ನ ರಜೆಯನ್ನು ವಿಸ್ತರಿಸಿದ ತಂದೆ ಮೂಡಿಗೆರೆ ಜುಮಾ ಮಸೀದಿಯ ಸಹಾಯಕ ಖತೀಬ್‌ನ ಜವಾಬ್ದಾರಿ ನನಗೆ ನೀಡಿದರು. ಈ ಎಲ್ಲ ಗಡಿಬಿಡಿಗಳ ಮಧ್ಯೆ ನನ್ನ ಸೌದಿ ಯಾತ್ರೆ ಸದ್ದಿಲ್ಲದೆ ವಿಳಂಬವಾಯಿತು.

ಹೀಗೆ 94 ಜನವರಿ 28 ಶುಕ್ರವಾರ ಜೀವ ನದ ಮೊಟ್ಟ ಮೊದಲ ಖುತ್‌ಬಃ ನಿರ್ವಹಿ ಸಲು, ತರಾವೀಹ್ ಮತ್ತು ಇನ್ನಿತರ ನಮಾ ಝ್‌ಗಳಿಗೆ ನೇತೃತ್ವ ಕೊಡುವ ಮೂಲಕ ತರ ಬೇತಿ ಪಡೆಯಲು ಮೂಡಿಗೆರೆ ಮಸ್ಜಿದುಲ್ ಬದ್ರಿಯ್ಯೀನ್‌ನಲ್ಲಿ ಸಂದರ್ಭಗಳು ಸಿಕ್ಕವು.

ಪ್ರತಿಕೂಲ ಪರಿಸ್ಥಿತಿಗಳು ಒಟ್ಟಾಗಿ ಎರಗಿ ಬಂದಿದ್ದರಿಂದ ನನಗೆ 'ಬಾಸ್' ಆಗಲಿದ್ದ ಬಾವ ತುಂಬ ಸಮಯ ಊರಿನಲ್ಲೇ ಉಳಿ ದರು. ಮತ್ತೆ ಅವರು ಸೌದಿಗೆ ಹೋದ ಮೇಲೆ ನನ್ನ 'ಸೇಲ್ಸ್‌ಮ್ಯಾನ್' ವೀಸಾ ಸರಿಪಡಿಸಬಹು ದೆಂದು ನನ್ನನ್ನು 'ಸಮಾಧಾನ ಪಡಿಸಿದ' ತಂದೆ ರಂಝಾನ್ ನಂತರ ಮುತವ್ವಲ್ (ಪದವಿ) ತರಗತಿಗೆ ಮರ್ಕಝುಸ್ಸಖಾಫತಿಸ್ಸುನ್ನಿಯ್ಯಃ ಶರೀಅತ್ ಕಾಲೇಜಿನಲ್ಲಿ ಸೇರಲು ಹಸಿರು ನಿಶಾ ನೆ ತೋರಿಸಿದರು. ನನ್ನ ವರ್ಷಗಳ ಪ್ರಾರ್ಥನೆಗೆ ಫಲಸಿಕ್ಕಿತ್ತು. ಯಾವ ಪ್ರತಿಕೂಲ ಸನ್ನಿವೇಶ ಬಂದರೂ ನನ್ನನ್ನೊಬ್ಬ 'ಆಲಿಂ' ಮಾಡಿ ದೀನೀ ಸೇವೆಗೆ ಅವಕಾಶ ನೀಡುವಂತೆ ಶಾಲಾ ಪ್ರಾಯ ದಲ್ಲೇ ನಿರಂತರ

ಪ್ರಾರ್ಥಿಸುತ್ತಿದ್ದೆ. ಇದೀಗ ಗಲ್ಫ್ ಸವಾಲು ಸಣ್ಣಗೆ ಕರಗಿ 'ಆಲಿಂ' ಆಗು ವತ್ತ ದಾರಿ ಸುಗಮವಾಗುತ್ತಿತ್ತು. ಭಾಷಣ ಬದು ಕಿನ ಭವಿಷ್ಯಕ್ಕೆ ಭರವಸೆಯ ಕಿರಣವೊಂದು ಎಲ್ಲಿಂದಲೋ ಬಂದು ಬಡಿದಿತ್ತು.

# 13

## ಮಹಾ ಗುರುವಿನ ಆಶೀರ್ವಾದ ಬದುಕು ಬದಲಿಸಿತು

1994 ಡಿಸೆಂಬರ್ 2 ಶುಕ್ರವಾರ ಕೋಟ್ಟಯಂ ಜಿಲ್ಲೆಯ 'ಈರಾಟ್ಟು ಪೇಟ್ಟ' ಎಂಬಲ್ಲಿ ಎಸ್‌ವೈಎಸ್ ಶಾಖೆಯ ಉದ್ಘಾಟನಾ ಕಾರ್ಯಕ್ರಮ ಹಾಗೂ ಜಿಲ್ಲಾ ಸಮ್ಮೇಳನ ಏರ್ಪಡಿಸಲಾಗಿದ್ದು ಮುಖ್ಯ ಭಾಷಣಗಾರ ರಾಗಿ ಅಬ್ದುಲ್ಲ ಸಅದಿ ಚೆರುವಾಡಿ ಹಾಗೂ ಮರ್ಕಝ್ ವಿದ್ಯಾರ್ಥಿಯೂ ಉಜ್ವಲ ವಾಗ್ಮಿಯೂ ಆಗಿದ್ದ ಸುಲೈಮಾನ್ (ಸಖಾಫಿ) ವಡಪುರಂ ಅವರನ್ನು ನಿಗದಿಪಡಿಸಲಾಗಿತ್ತು. ಸಕಾಲಕ್ಕೆ ಚೆರುವಾಡಿ ಸಅದಿಗೆ ಅಸೌಕರ್ಯ ಎದುರಾಗಿ ಬದಲಿಗೆ ಹೋಗುವಂತೆ ಎಸ್ ವೈಎಸ್ ನಿಂದ ನನಗೆ ಕರೆ ಬಂತು. ಆ ಯಾತ್ರೆ ಜೀವನದಲ್ಲಿ ಯಾವತ್ತೂ ಮರೆಯಲಾಗದ ಅನುಭವವೊಂದನ್ನು ನೀಡಿತು.

ಡಿಸೆಂಬರ್ ಒಂದರಂದು ಸಂಜೆ 5.30ಕ್ಕೆ ಮರ್ಕಝ್‌ನಿಂದ ನಾನು ಮತ್ತು ಸುಲೈಮಾನ್ ವಡಪುರಂ ಹೊರಟು 7.15ಕ್ಕೆ ಕೋಝಿ ಕ್ಕೋಡ್ ರೈಲ್ವೇ ಸ್ಟೇಶನ್‌ನಿಂದ 'ತಿರುವಂತ ಪುರಂ ಎಕ್ಸ್‌ಪ್ರೆಸ್' ಹತ್ತಿದೆವು. ರೈಲಿನಲ್ಲಿ ಬರ್ತ್ ಸಿಕ್ಕಿದ್ದು ಒಬ್ಬರಿಗೆ ಮಾತ್ರ. ಆದ ಕಾರಣ ಇನ್ನೊಬ್ಬರು ಜನರಲ್ ಕಂಪಾರ್ಟ್ ಮೆಂಟ್ ನಲ್ಲಿ ಸಾಹಸ ಯಾತ್ರೆ ಮಾಡ ಬೇಕಿತ್ತು. ಕಿಕ್ಕಿರಿದು ತುಂಬಿದ್ದ ಸಾಮಾನ್ಯ ಬೋಗಿಗಳಲ್ಲಿ ನಿಂತು ಕೊಂಡು ಯಾತ್ರೆ ಮಾಡುವುದೂ ದುಸ್ಸಹವಾಗಿತ್ತು. ಬೇರೆ ದಾರಿಯಿಲ್ಲದೆ ಟಿ.ಟಿ.ಇ. (ಟಿಕೆಟ್ ಪರೀಕ್ಷಕ)ನ ಕಣ್ಣು ತಪ್ಪಿಸಿ ನಾವಿಬ್ಬರೂ ಒಂದೇ ಸ್ಲೀಪರ್ ಸೀಟ್‌ನಲ್ಲಿ ಹೊಂದಾಣಿಕೆ ಮಾಡಿ ಯಾತ್ರೆ ಮಾಡಲು ನಿರ್ಧರಿಸಿದೆವು. ಕೋಝಿಕ್ಕೋಡ್‌ನಿಂದ ತ್ರಿಶೂರ್ ವರೆಗಿನ ಸುಮಾರು ಮೂರುವರೆ ಗಂಟೆಗಳ ಕಾಲ ಟಿ.ಟಿ.ಇ. ಯ ಕಣ್ಣು ತಪ್ಪಿಸಿ ಒಂದೆ ಸೀಟ್‌ನಲ್ಲಿ ತಲೆ ಆಚೆ - ಈಚೆ ಹಾಕಿ ಮಲಗಿ ಪ್ರಯಾಣಿಸಿದ ನಮ್ಮನ್ನು ತ್ರಿಶೂರ್ ನಲ್ಲಿ ಟಿಕೆಟ್ ಪರೀಕ್ಷಕ ಪತ್ತೆ ಹಚ್ಚಿಯೇ ಬಿಟ್ಟ. ಎಸ್- ಒನ್ ಬೋಡಿಯ 72ನೇ ನಂಬ್ರದ ಸೀಟ್ ಆಗಿತ್ತದು. ಯಾರಾದ ರೊಬ್ಬ ಇಳಿದು ಸಾಮಾನ್ಯ ಬೋಗಿಯಲ್ಲಿ ಯಾತ್ರೆ ಮುಂದುವರಿಸುವಂತೆ ಟಿ.ಟಿ.ಇ. ತಾಕೀತು ಮಾಡಿದ. ಬೇರೆ ದಾರಿಯಿಲ್ಲದೆ ತ್ರಿಶೂರ್‌ಲ್ಲಿ ಇಳಿದು ನಾನು ಸಾಮಾನ್ಯ ಬೋಗಿಯ ಮೊರೆ ಹೋದೆ. ಯಾವುದೋ ಉತ್ಸವಕ್ಕೆ ಹೋಗುತ್ತಿದ್ದ ಅಸಂಖ್ಯ ಭಕ್ತಾ ದಿಗಳಿಂದ ತುಂಬಿ ತುಳುಕಿದ್ದ ಸದ್ರಿ ಬೋಗಿ ಯಲ್ಲಿ ನಿಲ್ಲುವುದೂ ಕೂಡಾ ಅಸಾಧ್ಯ ವಾಗಿತ್ತು. ತಡ ರಾತ್ರಿಯ ಅಸಹ್ಯ ಪ್ರಯಾ ಣದ ದಣಿವಿನಲ್ಲಿ ನಿಯಂತ್ರಣಾತೀತ ನಿದ್ದೆ ಯಲ್ಲಿ ಸಮೀಪದಲ್ಲಿದವನ ಮೇಲೆ ಒರಗಿ ದರೆ ಆತ ಯಾವುದೇ ದಯೆಯಿಲ್ಲದೆ 'ಪಿಡಿಚ್ಚು ಒರಂಜ ಡೋ' ಅಂತ ಒದರುತ್ತಿದ್ದ. ಅಲ್ಲಿ ಹಿಡಿಯಲು ರೈಲಿನ 'ರಾಡ್'ಗಳಾಗಲೀ, ಒರ ಗಲು ಸೀಟಿನ ಬದಿಯಾಗಲೀ ನೆಲದಲ್ಲಿ ಕೂರಲು ಒಂದಿಷ್ಟು ಜಾಗವಾಗಲೀ ಇಲ್ಲ ವೆಂದು ಆತನಿಗೆ ಗೊತ್ತಿಲ್ಲದೆ ಅಲ್ಲ. ಆದರೆ ಮಧ್ಯ ವಯಸ್ಸು ದಾಟಿದ್ದ ಆತ ಇನ್ನಷ್ಟು ದಣಿದಿದ್ದು ನನ್ನ ತಲೆಯ ಏಟು ಎದುರಿಸಲು ಅಶಕ್ತನಾಗಿದ್ದ. ಪ್ರಯಾಣದ ಈ ಭಯಾನಕ ಕಷ್ಟದ ಜತೆಗೆ ನಾನು ಇಳಿಯ ಬೇಕಾದ ಕೋಟ್ಟಯಂ ಜಿಲ್ಲೆಯ ಚಂಗನಾಶ್ಶೇರಿ ರೈಲ್ವೇ ಸ್ಟೇಶನ್ ಎಷ್ಟು ಹೊತ್ತಿಗೆ ಬರುತ್ತದೆ ಎಂದಾಗಲೀ ಅದು ನನಗೆ ಹೇಗೆ ತಿಳಿಯುತ್ತದೆ ಎಂದಾಗಲೀ ಯಾವುದೇ ಅಂದಾಜು ಇರಲಿಲ್ಲ. ಆದ್ದರಿಂದ ಪ್ರತಿ ಕ್ಷಣವೂ ಮಂಪರುಗಣ್ಣಿ ನೊಂದಿಗೆ ಹೋರಾಡಿ ಚಂಗನಾಶ್ಶೇರಿ ಸ್ಟೇಶನ್ ಬಂದಿದೆಯೇ ಎಂದು ಖಾತರಿ ಪಡಿಸಬೇಕಾದ ಜವಾಬ್ದಾರಿಯೂ ಇತ್ತು. ಅದೂ ಅಲ್ಲದೆ ನನ್ನ ಪಾಲುದಾರಿಕೆ ಹೋದ ನಂತರ ಆರಾಮವಾಗಿ ಲಭಿಸಿದ ಸ್ಲೀಪರ್‌ನಲ್ಲಿ ಹಾಯಾಗಿ ನಿದ್ರೆಗೆ ಜಾರಿರುವ ವಡಪುರಂ ಸುಲೈಮಾನ್ ಕ್ಲಪ್ತವಾಗಿ ಅದೇ ಸ್ಟೇಶನ್‌ನಲ್ಲಿ ಇಳಿಯ ಬಹುದೇ, ನಿದ್ರೆಯಲ್ಲಿ ಮುಂದುವರಿಯ ಬಹುದೇ ಎನ್ನುವ ಆತಂಕ ಸಿಂಹಸ್ವಪ್ನವಾಗಿ ಕಾಡುತ್ತಿತ್ತು. ಬೆಳಗ್ಗಿನ ಜಾವ 2.20ಕ್ಕೆ ಕೋ ಟ್ಟಯಂ ಪ್ರಧಾನ ನಿಲ್ದಾಣಕ್ಕೆ ತಲುಪಿದಾಗ 2.45ಕ್ಕೆ ಚಂಗನಾಶ್ಶೇರಿ ತಲುಪುವುದಾಗಿ ಮಾಹಿತಿ ಲಭಿಸಿತು. ಅದರಂತೆ ನಾನು ಸಕಾಲಕ್ಕೆ ಸರಿಯಾದ ಸ್ಟೇಶನ್‌ನಲ್ಲಿ ಇಳಿದು ನೋಡಿ ದರೆ ಸುಲೈಮಾನ್ ವಡಪುರಂ ಕಾಣೆಯಾಗಿದ್ದ. ರಾತ್ರಿಯ ಕೊನೆಯ ರೈಲಿಗೆ ಹಸಿರು ಬಾವುಟ ತೋರಿಸಿ ಸ್ಟೇಶನ್‌ನ ಬೆಳಕುಗಳನ್ನು ಆರಿಸಿ ವಿಶ್ರಾಂತಿಗೆ ತೆರಳಲು ತವಕಿಸುತ್ತಿದ್ದ ಅಲ್ಲಿನ ಇಬ್ಬರು ಸಿಬ್ಬಂದಿಗಳನ್ನು ಬಿಟ್ಟರೆ ಬೇರಾವ ನರ ಪಿಳ್ಳೆಯೂ ಅಲ್ಲಿರಲಿಲ್ಲ. ನನ್ನ ಆತಂಕ ದಂತೆ ವಡಪುರಂ ಸುಖ ನಿದ್ರೆಯಲ್ಲಿ ಇಳಿಯು ವುದನ್ನು ಮರೆತಿದ್ದ. ರೈಲು ತೆರಳಿದಾಗ ಪೋಲೀಸ್ ಅಧಿಕಾರಿಯೊಬ್ಬ ತನ್ನ ಪಾಡಿಗೆ ಹೋದರೆ ಉಳಿದ 'ಪ್ಯೂನ್' ರವೀಂದ್ರನ್ ಎನ್ನುವವ ನನಗೆ ಕೆಲವು ಮಾಹಿತಿ ನೀಡಿದ. ಉಟ್ಟ ಬಣ್ಣದ ಲುಂಗಿ ಮತ್ತು ಅಂಗಿಯಲ್ಲದೆ ನಯಾ ಕಾಸು ಕೂಡಾ ನನ್ನ ಕೈಯ್ಯಲ್ಲಿರಲಿಲ್ಲ. ಎಲ್ಲವೂ ವಡಪುರಂ ಕೈಯ್ಯಲ್ಲಿದ್ದ ಬ್ಯಾಗ್ ನಲ್ಲಿತ್ತು. ಆ ಭಯಾನಕ ಕತ್ತಲಲ್ಲಿ, ಅಪರಿ ಚಿತ ನಾಡಿನಲ್ಲಿ ನಡು ರಾತ್ರಿಯ ಭೀಕರ ಮೌ ನದಲ್ಲಿ ಏಕಾಂಗಿಯಾಗಿ ನಾನು. ಈ ಸಂದಿಗ್ಧ ತೆಯಲ್ಲಿ ಸ್ಟೇಶನ್ ಸಿಬ್ಬಂದಿ ರವೀಂದ್ರನ್ ನನ್ನೊಂದಿಗೆ ತುಸು ವಿಚಿತ್ರರಾಗಿ ವರ್ತಿಸುತ್ತಿ ದ್ದಾನೋ ಎಂಬ ಅನುಮಾನವೂ ಕಾಡ ತೊಡ ಗಿತ್ತು. ಒಟ್ಟನಲ್ಲಿ ಬದುಕಿನಲ್ಲಿ ಯಾವತ್ತೂ ಮರೆಯದ ಕ್ಷಣ. ಹೇಗೂ ಸಾವರಿಸಿ ಕೊಂಡು ರವೀಂದ್ರನ್‌ನ ಸಂಭಾವ್ಯ ದಾಳಿಯನ್ನು ತಪ್ಪಿಸಿಕೊಂಡು ಸ್ಟೇಶನ್‌ನ ಬೆಂಚೊಂದರಲ್ಲಿ ಮಲಗಿದೆ. ಕಣ್ಣಮುಂದೆ ಪ್ರಶ್ನೆ ಚಿಹ್ನೆಗಳು ಮಾತ್ರ. ಎಲ್ಲವೂ ಅಲ್ಲಾಹನಲ್ಲಿ ಭಾರ ಹಾಕಿ ಶೈಖುನಾ ಎ.ಪಿ. ಉಸ್ತಾದ್ ಇಜಾಝತ್ (ಆಧ್ಯಾತ್ಮಾನುಮತಿ) ಕೊಟ್ಟಿದ್ದ ಆಪತ್ತಿನ ವೇಳೆ ಹೇಳುವ 'ದುಆಉಲ್ ಕರ್ಬ್' ಓದುತ್ತಾ ಬಲವಂತದಿಂದ ನಿದ್ದೆಗೆ ಪ್ರಯತ್ನ ಪಡುತ್ತಿದ್ದೆ. ಕೆಲ ಹೊತ್ತಿನ ಬಳಿಕ ಮಂಪರಿ ನಿಂದ ಯಾರೋ ಎಬ್ಬಿಸಿದಂತಾಗಿ ನೋಡಿದರೆ 'ಉರಂಜಿಪ್ಪೋಯಿಡೋ' ಅನ್ನುತ್ತಾ ವಡಪುರಂ ಮುಂದೆ ನಿಂತು ಹಲ್ಲು ಕಿಸಿಯು ತ್ತಿದ್ದ. ಮುಂದಿನ ಚೆಂಙನ್ನೂರ್ ಸ್ಟೇಶನ್ ನಲ್ಲಿ ಇಳಿದ ಆತ ದಡಬಡಿಸಿ ಬೇರೆ ವಾಹನ ಮಾಡಿ ಓಡಿ ಬಂದಿದ್ದ. ಭಾಷಣ ಬದುಕಿನ ಅವಿಸ್ಮರಣೀಯ ಘಟನೆಯಾಗಿ ಇದನ್ನೂ ಡೈರಿ ಪುಟದಲ್ಲಿ ದಾಖಲಿಸಿಟ್ಟಿದ್ದೇನೆ. ಆ ದಿನ ಅಪರಾಹ್ನ 3 ಗಂಟೆಗೆ ಈರಾಟ್ಟು ಪೇಟ್ಟ - ಪುದುಪ್ಪಳ್ಳಿ - ತೆಕ್ಕೇಕರ ಸರಕಾರೀ ಹೈಸ್ಕೂಲ್ ನಲ್ಲಿ ಸುನ್ನೀ ಕನ್‌ವೆನ್ಶನ್ ಹಾಗೂ ಮಗ್‌ರಿಬ್ ನಂತರ

ಈರಾಟ್ಟು ಪೇಟ್ಟ ಪ್ರ ಧಾನ ಜಂಕ್ಷನ್‌ನಲ್ಲಿ ಸಾರ್ವಜನಿಕ ಸಮ್ಮೇ ಳನವೂ ನಡೆದಿತ್ತು. ಜಿಲ್ಲಾ ಜಂಇಯ್ಯತುಲ್ ಉಲಮಾ ನಾಯಕ ರಫೀಖ್ ಅಹ್ಮದ್ ಸಖಾಫಿ, ಇಝ್ಝುದ್ದೀನ್ ಸಖಾಫಿ ಕೊಲ್ಲಂ, ಸುಲೈಮಾನ್ ಸಖಾಫಿ ವಡಪುರಂ ಮುಂತಾ ದವರು ಭಾಷಣ ಮಾಡಿದ ವೇದಿಕೆಯಲ್ಲಿ ಮರ್ಕಝ್‌ನ ಸಾಹಿತ್ಯ ಸ್ಪರ್ಧೆಯ ವಿಜೇತ ಎಂಬ ನೆಲೆಯಲ್ಲಿ ನನಗೆ ಉದ್ಘಾಟನಾ ಭಾಷಣ ನೀಡಿ 'ಗೌರವಿಸಿದರು'. ಒಂದು ಗಂಟೆಯ ಭಾಷಣ ಕ್ರೈಸ್ತ ಸಮುದಾಯದ ಶಕ್ತಿ ಕೇಂದ್ರ ವಾಗಿದ್ದ ಅಲ್ಲಿ ಎಲ್ಲರಿಗೂ ಖುಷಿ ಕೊಟ್ಟಿತು ಎಂದು ನಂತರ ತಿಳಿಯಿತು.

'94 ಡಿಸೆಂಬರ್ 8 ಗುರುವಾರ ವಯನಾಡ್ ಜಿಲ್ಲೆಯ 'ರಿಪ್ಪಣ್' ಎಂಬಲ್ಲಿ ಮರ್ಕಝ್ ಪ್ರಚಾರ ಸಮ್ಮೇಳನದಲ್ಲಿ ಭಾಷಣ ಮಾಡುತ್ತಿ ದ್ದಾಗ ವೇದಿಕೆಗೆ ಆಗಮಿಸಿದ ಮರ್ಕಝ್ ಜನರಲ್ ಮ್ಯಾನೇಜರ್ ಸಿ. ಮುಹಮ್ಮದ್ ಫೈಝಿ ಅಂದು ನನ್ನ ಭಾಷಣವನ್ನು ತದೇಕ ಚಿತ್ತದಿಂದ ಆಲಿಸಿದರು. ಎ.ಪಿ. ಉಸ್ತಾದರನ್ನು ಪರಿಚಯಿಸುತ್ತಾ 'ನಾವೆಲ್ಲರೂ ನಿಶೆಯ ನಿಶ ಬ್ಧತೆಯಲ್ಲಿ ರಗ್ಗು ಹೊದ್ದು ಗಾಢ ನಿದ್ರೆ ಯಲ್ಲಿರುವಾಗ ನಮ್ಮ ನಾಯಕ ಕಾಂತಪುರಂ ಉಸ್ತಾದರ 'ಟ್ರೂಪರ್ ಇಸುಝು' ಎನ್ನುವ ಕಾರು ಈ ಸಮುದಾಯದ ನವೋತ್ಥಾನಕ್ಕಾಗಿ ಅವಿಶ್ರಾಂತ ಸಂಚರಿಸುತ್ತಾ ಇರುತ್ತದೆ' ಎಂದು ಹೇಳಿದ್ದನ್ನು ಮುಂದಿನ ದಿನ ಮರ್ಕಝ್ ಮಸೀದಿಯಲ್ಲಿ ಕರೆದಿದ್ದ ಸರ್ವವಿದ್ಯಾರ್ಥಿಗಳ ಸಮಾವೇಶದಲ್ಲಿ ಸಿ. ಉಸ್ತಾದ್ ಉಲ್ಲೇಖಿ ಸಿದ್ದರು. ಮತ್ತೆ ಹೆಚ್ಚಿನ ಭಾಷಣ ಕಾರ್ಯ ಕ್ರಮಗಳಿಗೆ ತೆರಳುವಾಗ ಸಿ. ಫೈಝಿ ನನ್ನನ್ನು ಸಂಗಡ ಕರೆದೊಯ್ಯುತ್ತಿದ್ದರು. ಅವರ ಅಂದಿನ 'ಅರ್ಮಡಾ' ಕಾರ್‌ನಲ್ಲಿ ಹೋಗು ವಾಗ ಭಾಷಣಕ್ಕೆ ವಿಷಯಗಳನ್ನು ಹೇಳಿ ಕೊಡುತ್ತಿದ್ದರು. ತನ್ನ ಭಾಷಣದ ಮೊದಲು ಹತ್ತಿಪ್ಪತ್ತು ನಿಮಿಷಗಳ ಕಾಲ ನನ್ನಿಂದ ಭಾಷಣ ಮಾಡಿಸಿ ಅನಂತರ ನಾನು ಹೇಳಿದ ವಿಚಾರ ಗಳನ್ನು ಚರ್ಚೆಗೆ ಎತ್ತಿ ಕೊಳ್ಳುತ್ತಿದ್ದರು. ತಪ್ಪು ಗಳನ್ನು ತಿದ್ದಿ 'ಒಪ್ಪುಗಳನ್ನು ಪ್ರೋತ್ಸಾಹಿಸಿ ತನ್ನ ಭಾಷಣಗಳಲ್ಲಿ ಅವನ್ನು ಉಲ್ಲೇಖಿಸಿ ನನಗೆ ಅತೀವ ಸ್ಫೂರ್ತಿ ತುಂಬುತ್ತಿದ್ದರು. ಡಿಸೆಂಬರ್ 27 ಮಂಗಳವಾರ ಸಾಯಂಕಾಲ ಕೊಡುವಳ್ಳಿ ಪೇಟೆಯಲ್ಲಿ ಸ್ಥಳೀಯ ಪಂಚಾ ಯತ್ ಮಟ್ಟದ ಸುನ್ನೀ ಸಮ್ಮೇಳನದಲ್ಲಿ ಸಿ. ಫೈಝಿ ಮುಖ್ಯ ಭಾಷಣಗಾರನಾಗಿದ್ದು, ತಾನು ತಲುಪುವವರೆಗೆ ಭಾಷಣ ಮಾಡು ಎನ್ನುತ್ತಾ ಮರ್ಕಝ್‌ನಿಂದ ನನ್ನನ್ನು ಕಳಿಸಿದರು. ಸಂಘಟಕ ಹುಸೈನ್ ಮುಸ್ಲಿಯಾರರಲ್ಲಿ ಈ ವಿಚಾರ ತಿಳಿಸಿದಾಗ 'ಊರು ಮಂಗಳೂರು' ಆದ ಕಾರಣ ಅವರಿಗೆ ಎಲ್ಲಿಲ್ಲದ ಆತಂಕ. ಮಲಯಾಳಂ ಗೊತ್ತಿದೆಯಾ? ಭಾಷಣ ಮಾಡಬಲ್ಲಿರಾ? ಇಲ್ಲಿ ಭಾಷೆ 'ಮೋಶಂ' ಆದರೆ ನಮ್ಮ ಮರ್ಯಾದೆ ಹೋಗುತ್ತದೆ. ನಿಮ್ಮನ್ನು ಸಿ. ಫೈಝಿ ಕಳಿಸಿದ್ದು ನಿಜಾನಾ ಎಂದು ಥರಾವರಿ ವಿಚಾರಣೆಗೆ ಒಳಪಡಿಸಿ ಸಿ. ಬರುವ ವರೆಗೆ ವೇದಿಕೆ ಹತ್ತಿಸಲು ನಿರಾಕರಿಸಿ ದ್ದರು. ಸಿ. ಬಂದ ನಂತರ ನನ್ನ ಭಾಷಾ ಪಟು ತ್ವವನ್ನು ರುಜುವಾತು ಮಾಡಬೇಕಾದ ಸವಾ ಲು ಸ್ವೀಕರಿಸಿದಾಗ ಮತ್ತೆ ಹುಸೈನ್ ಮುಸ್ಲಿ ಯಾರ್ ಬಂದು ತಣ್ಣಗೆ ಅಭಿನಂದಿ ಸಿದ್ದರು..

1995ರ ಜನವರಿ ಒಂದರ ಹೊಸ ವರ್ಷದ ಮೊದಲ ದಿನ ನನ್ನ ಭಾಷಣ ಬದು ಕಿನಲ್ಲಿಯೂ ಮಹತ್ತರವಾದ ಶುಭದಿನ ವಾಗಿತ್ತು. ಆ ದಿನ ಕಣ್ಣೂರು ಜಿಲ್ಲೆಯ ವಳ ಪಟ್ಟಣಂ ಪಂಚಾಯತ್ ಎಸ್‌ವೈಸ್ ಮಹಾ ಸಮ್ಮೇಳನದಲ್ಲಿ ಸಯ್ಯಿದುನಾ ತಾಜುಲ್ ಉಲಮಾ ಸಭಾಧ್ಯಕ್ಷರಾಗಿದ್ದು, ಮೌಲಾನಾ ಎಂ.ಎ. ಉಸ್ತಾದ್ ಉದ್ಘಾಟಕರಾಗಿದ್ದರು. ಸಮಸ್ತದ ಕಾರ್ಯದರ್ಶಿ ಚಿತ್ತಾರಿ ಹಂಝ ಮುಸ್ಲಿಯಾರ್, ಎಸ್ಸೆಸ್ಸೆಫ್ ಕಣ್ಣೂರು ಜಿಲ್ಲಾಧ್ಯಕ್ಷರಾಗಿದ್ದ ಮರ್‌ಝೂಖ್ ಸಅದಿ ಪಾಪಿನಿಶ್ಶೇರಿ ಮುಖ್ಯ ಭಾಷಣಗಾರರಾ ಗಿದ್ದರು. ಸದ್ರಿ ಸಮ್ಮೇಳನದಲ್ಲಿ ಮರ್ಕಝ್ ಸಮ್ಮೇಳನ ಪ್ರಚಾರ ಮಾಡಲು ವಿಲ್ಯಾಪಳ್ಳಿ ಉಸ್ತಾದ್ ನನ್ನನ್ನು ಕಳುಹಿಸಿದ್ದರು. ರಾತ್ರಿ ಹನ್ನೊಂದು ಮೂವತ್ತರಿಂದ ಹನ್ನೆರಡರ ತನಕ ಅರ್ಧ ಗಂಟೆ ಮಹಾತ್ಮರಾದ ನಾಯಕರುಗಳ ಮುಂದೆ ಬದುಕಿನಲ್ಲಿ ಮೊದಲ ಬಾರಿ ಭಾಷಣ ಮಾಡುವ ಮಹಾ ಅವಕಾಶ ನನ್ನದಾಯಿತು. ಭಾಷಣ ಮುಗಿದ ತಕ್ಷಣ ತಾಜುಲ್ ಉಲಮಾ ಹಿಂದಕ್ಕೆ ತಿರುಗಿ ನೀನು ಎಲ್ಲಿಯವ ಎಂದು ಕೇಳಿದರು. ಕಕ್ಕಿಂಜೆ ಮೂಸ ಮುಸ್ಲಿಯಾರ್ ರವರ ಮಗ ಎಂದು ಉತ್ತರಿಸಿದೆ. ಜೋರಾಗಿ ನಕ್ಕ ತಂಙಳ್ ಉತ್ತಮ 'ಮೂಡ್'ನಲ್ಲಿದ್ದು ಕಲಿಯುವ ಸ್ಥಳ ಮತ್ತು ವಿಶೇಷಗಳನ್ನು ಕೇಳಿ ದರು. ದುಆ ಮಾಡಿ ಹರಸಿದರು. ಮುಂದೆ ಊರಿನಲ್ಲಿ ತಂದೆಯನ್ನು ಭೇಟಿಯಾದಾಗ ಈ ವಿಚಾರವನ್ನು ಉಳ್ಳಾಲ್ ತಂಙಳ್ ತಂದೆಗೆ ತಿಳಿಸಿದ್ದು ಅವರಿಗೆ ಅತೀವ ಖುಷಿ ಕೊಟ್ಟಿತ್ತು. ಆನಂದ ತುಂದಿಲರಾದ ತಂದೆಯವರು, ತಕ್ಷಣ ನನಗೆ ಮರ್ಕಝ್‌ಗೆ ಫೋನ್ ಮಾಡಿ ವಿಷಯ ತಿಳಿಸಿದ್ದರು. ಮಗನ ಭಾಷಣ ಬದು ಕಿಗೆ ಮಹಾ ಗುರುವಿನ ಆಶೀರ್ವಾದವೂ ಇದೆ ಎಂದಾದ ಮೇಲೆ ನನ್ನನ್ನು ಗಲ್ಫ್‌ಗೆ ಕಳಿಸುವ ಇಚ್ಛೆಯಿಂದ ತಂದೆ ಸಂಪೂರ್ಣವಾಗಿ ಹಿಂದೆ ಸರಿದರು. ಮುಂದೆ ಊರಿಗೆ ಬಂದಾ ಗಲೆಲ್ಲಾ ಉಳ್ಳಾಲಕ್ಕೆ ತೆರಳಿ ತಂಙಳ್ ಅವರ ಪರಿಚಯ ಮತ್ತು ಆಶೀರ್ವಾದವನ್ನು 'ಅಪ್‌ಡೇಟ್' ಮಾಡುತ್ತಿರಲು ಈ ವಳಪಟ್ಟ ಣಂ ಸಮ್ಮೇಳನ ಕಾರಣವಾಯಿತು. ಭಾಷಣದ ಯಶಸ್ಸಿಗೆ ಸುಂದರ ಶಬ್ದ, ಸುಲಲಿತ ಶೈಲಿ, ಶುದ್ಧ ಭಾಷೆ ಮತ್ತು ಸುಪ್ರಸಿದ್ಧಿ ಮಾತ್ರ ಕಾರಣವಲ್ಲ, ಮಹಾತ್ಮರ ಆಶೀರ್ವಾದ, ಬೆಂಬಲ ಮತ್ತು ಪ್ರಾರ್ಥನೆಗಳಿಂದ ಮಾತ್ರ ಈ ಕ್ಷೇತ್ರದಲ್ಲಿ ನೆಲೆನಿಲ್ಲಲು ಸಾಧ್ಯ ಎಂದು ಮುಂದಿನ ದಿನಗಳಲ್ಲಿ ಮನದಟ್ಟು ಮಾಡಿ ಕೊಂಡಿದ್ದೇನೆ. ಅಲ್ಲಾಹು ನಮ್ಮ ಗುರುಗ ಳನ್ನೆಲ್ಲ ಅನುಗ್ರಹಿಸಿ ಅವರ ನೆರಳಲ್ಲಿ ನಡೆಯಲು ನಮಗೆ ಸುಯೋಗ ನೀಡಲಿ, ಆಮೀನ್.

# 14

## ಕೆ.ಎಸ್.ಓ. ಮತ್ತು ಎಸ್ಸೆಸ್ಸೆಫ್ ಶಕ್ತಿ ತುಂಬಿತು...

ಮರ್ಕಝು ಸ್ಸಖಾಫತಿ ಸ್ಸುನ್ನಿಯ್ಯಃದ 17ನೇ ವಾರ್ಷಿಕ ಮಹಾ ಸಮ್ಮೇಳನಕ್ಕೆ ನಿರೀಕ್ಷೆಯಂತೆ 1995 ಜನವರಿ 6 ಶುಕ್ರವಾರ ಅಪರಾಹ್ನ 2.45ಕ್ಕೆ ಮಡವೂರ್ ಸಿ.ಎಂ. ವಲಿಯ್ಯುಲ್ಲಾಹಿ ಮಖಾಂ ಝಿಯಾರತ್ ನೊಂದಿಗೆ ಚಾಲನೆ ದೊರೆಯಿತು. ಜನವರಿ 8ರ ಸಮಾರೋಪ ಸಮಾರಂಭದಲ್ಲಿ ಸಖಾಫಿ

ಪದವೀಧರರಿಗೆ ಹಾಗೂ ಹಾಫಿಳ್‌ಗಳಿಗೆ 'ಸನದ್' (ಗುರು ಪರಂಪರೆಯ ಪ್ರಮಾಣ ಪತ್ರ) ನೀಡಲು ಎ.ಪಿ. ಉಸ್ತಾದರ ಗುರು ವರ್ಯರೂ ಆಗಿದ್ದ ಉಸ್ತಾದುಲ್ ಅಸಾತೀದ್ ಒ.ಕೆ. ಝೈನುದ್ದೀನ್ ಕುಟ್ಟಿ ಮುಸ್ಲಿಯಾರರನ್ನು ನಿಗದಿಪಡಿಸಲಾಗಿತ್ತು. ಸೌಭಾಗ್ಯವಶಾತ್ ಅವರನ್ನು ಅವರ ಮನೆಗೆ ಹೋಗಿ ಮರ್ಕಝ್‌ಗೆ ಕರೆ ತರುವ ಕೆಲಸ ಸ್ವಾಗತ ಸಮಿತಿ ನನಗೆ ವಹಿಸಿತು. ಮಲಪ್ಪುರಂ ಜಿಲ್ಲೆಯ 'ಒದುಕ್ಕುಂಜಲ್' ಎಂಬಲ್ಲಿರುವ ಉಸ್ತಾದರ ಮನೆಗೆ ತೆರಳಿ ಅವರ ಜತೆ ಮಧ್ಯಾಹ್ನದ ಊಟ ಮಾಡಿ ಅವರದೇ ಕಾರಿನಲ್ಲಿ ಕುಳಿತು ಮರ್ಕಝ್ ತನಕ ಪ್ರಯಾಣಿಸಿದ್ದು ಎಂದಿಗೂ ಮರೆಯಲಾ ಗದು. ತಾಜುಲ್ ಉಲಮಾರಂತೆ ಒ.ಕೆ. ಉಸ್ತಾದರೂ ನನ್ನ ತಂದೆಯ ಉಸ್ತಾದ್ ಆಗಿದ್ದರು. ಪರಿಚಯ ಹೇಳಿ ಆಶೀರ್ವಾದ ಬೇಡಲು ಇದೊಂದು ನಿಮಿತ್ತವಾಯಿತು. ಅವರು ಗ್ರಂಥ ಪಾರಾಯಣದ ಅನುಮತಿ ನೀಡಿ ಹರಸಿದರು.

ಆ ವರ್ಷ ಮರ್ಕಝ್ ಸಮ್ಮೇಳನ ಪ್ರಯುಕ್ತ ಕೇರಳದ ವಿವಿಧ ಜಿಲ್ಲೆಗಳಲ್ಲಿ ಭಾಷಣಕ್ಕೆ ಅವಕಾ ಶ ಸಿಕ್ಕಿತು. ಕೆಲವೆಡೆ ಎನೌನ್ಸ್‌ಮೆಂಟ್, ಕೆಲವೆಡೆ ಬೀದಿ ಭಾಷಣವಾದರೆ ಬೇರೆ ಕೆಲವು ಕಡೆ ವಾಹನ ಜಾಥಾ, ಕಾಲ್ನಡಿಗೆ ಜಾಥಗಳಂತಹ ಕಾರ್ಯಕ್ರಮಗಳಲ್ಲಿ ಜನ ಸೇರಿದ ಕಡೆಗಳಲ್ಲಿ ಮರ್ಕಝ್ ಪ್ರಚಾರ ಭಾಷಣ ಮಾಡಬೇ ಕಿತ್ತು. ಈ ಎಲ್ಲ ಕಾರ್ಯಕ್ರಮಗಳು ನನಗೆ ಉಜ್ವಲ ಭಾಷಣ ತರಬೇತಿ ಕಾರ್ಯಾಗಾರ ಗಳಾಗಿ ರೂಪುಗೊಳ್ಳುತ್ತಿದ್ದವು. ಮರ್ಕಝ್ ಉಸ್ತಾದ್‌ಗಳ ಮತ್ತು ಸಂಘಟನಾ ನೇತಾರರ ಮುಂದೆ ಅವರ ವೇದಿಕೆಗಳಲ್ಲಿ ಮಾತನಾಡಿ ಅವರಿಂದ ಮೆಚ್ಚುಗೆ ಪಡೆದು ಕೊಳ್ಳುವುದು ರೋಚಕ ಅನುಭವವಾಗಿತ್ತು.

ಈ ಮಧ್ಯೆ 95 ಜನವರಿ 12 ಗುರುವಾರ ಮಂಗಳೂರು ಫಿರ್ದೌಸ್ ಲಾಡ್ಜ್‌ನಲ್ಲಿದ್ದ ಎಸ್ಸೆಸ್ಸೆಫ್ ಕಚೇರಿಯಲ್ಲಿ ಸೇರಿದ್ದ ದ.ಕ. ಜಿಲ್ಲಾ ಎಸ್ಸೆಸ್ಸೆಫ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನನ್ನನ್ನು ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾ ಯಿತು. ಎಸ್ಸೆಸ್ಸೆಫ್‌ನಲ್ಲಿ ನನಗೆ ಲಭಿಸಿದ ಪ್ರಥಮ ಹುದ್ದೆಯೂ ಪದಾಧಿಕಾರವೂ ಅದಾಗಿತ್ತು. ಆಗ ರಾಜ್ಯ ಎಸ್ಸೆಸ್ಸೆಫ್ ಸಲಹಾ ಸಮಿತಿ ಅಧ್ಯಕ್ಷ ರಾಗಿದ್ದ ಹುಸೈನ್ ಸಅದಿ ಕೆ.ಸಿ.ರೋ ಡ್ 'ಓರ್ಗನೈಝಿಂ ಗ್ ಸೆಕ್ರಟರಿ'ಯ ಜವಾಬ್ದಾರಿಗಳನ್ನು ನೆನಪಿಸಿ ನನ್ನನ್ನು ಎಚ್ಚ ರಿಸಿದ್ದು ನೆನಪಿದೆ.

ಜನವರಿ 22 ಭಾನುವಾರ ಬೆಳಿಗ್ಗಿನಿಂದ ಸಂಜೆಯ ತನಕ ದೇರಳಕಟ್ಟೆಯಲ್ಲಿ ನಡೆದ ಕೋಣಾಜೆ ಪಂಚಾಯತ್ ಎಸ್ಸೆಸ್ಸೆಫ್ ಸಮಾವೇಶದಲ್ಲಿ ಭಾಷಣಕ್ಕೆ ಅವಕಾಶ ಸಿಕ್ಕಿ ದ್ದು ಸಂಘಟನಾ ಜವಾಬ್ದಾರಿಯ ನಂತರದ ಪ್ರಥಮ ಕಾರ್ಯಕ್ರಮವಾಗಿತ್ತು. ಮಂಜ ನಾಡಿ ಇಬ್‌ರಾಹೀಮ್ ಮದನಿ ಕಾಮಿಲ್ ಸಖಾಫಿ ಅಂದು ಕೋಣಾಜೆ ಪಂಚಾಯತ್ ಎಸ್ಸೆಸ್ಸೆಫ್ ಅಧ್ಯಕ್ಷರಾಗಿದ್ದರು. ಜನವರಿ ಎರಡನೇ ವಾರ ಶಅಬಾನ್‌ನಲ್ಲಿ ಮರ್ಕಝ್‌ನ ನಮ್ಮ ಮೊದಲ ವರ್ಷ ಮುಗಿಯಿತು. ಪದವಿ ತರಗತಿಯ ಮೊದಲ ವರ್ಷದಲ್ಲಿ ಇಹ್ಯಾ ಉಸ್ಸುನ್ನಃ ವಿದ್ಯಾರ್ಥಿ ಸಂಘದ ಬೆಂಬಲ ದೊಂದಿಗೆ ಭಾಷಣ ಬದುಕಿಗೆ ಭದ್ರ ತಳಪಾಯ ಹಾಕಲು ಅವಕಾಶವಾಯಿತು. ಉಸ್ತಾದ್ ಕೆ. ಹುಸೈನ್ ಮುಸ್ಲಿಯಾರ್ ಪಡನಿಲಂ ಆ ವರ್ಷ ನಮ್ಮ 'ಕ್ಲಾಸ್ ಟೀಚರ್' ಆಗಿದ್ದರು. ನನ್ನ ಹಾಜರ್ ನಂಬ್ರ 135 ಮತ್ತು ಊಟದ ಟೋಕನ್ ನಂಬ್ರ 127 ಆಗಿತ್ತು ಎಂಬುದಕ್ಕೆ ಡೈರಿ ಸಾಕ್ಷಿ.

ಮಲಯಾಳಂ ಭಾಷಣ ನನ್ನ ನೆಚ್ಚಿನ ಕ್ಷೇತ್ರವಾಗಿತ್ತು. ಕನ್ನಡದಲ್ಲಿ 'ಭಯಂಕರ' ಭಾಷಣ ಮಾಡಬೇಕೆಂಬ ಅಪೇಕ್ಷೆಯಿದ್ದರೂ ಅದು ಅಸಾಧ್ಯವೇನೋ ಎಂದಿನಿಸಿತ್ತು. ಆದರೆ ಇದನ್ನು ಸಾಧ್ಯಗೊಳಿಸಲು ಸಹಾಯ ಮಾಡಿದ್ದು ಮರ್ಕಝ್ ಕನ್ನಡಿಗ ವಿದ್ಯಾರ್ಥಿ ಗಳ ವೇದಿಕೆಯಾಗಿದ್ದ 'ಕನ್ನಡ ಸಾಹಿತ್ಯ ವೇದಿಕೆ. ಅಂದು 'ವೇದಿಕೆ' ಕೇವಲ ಭಾಷಣ ತರಬೇತಿ ಮತ್ತು ಕೈ ಬರಹ ಮಾಸಿಕಕ್ಕೆ ಸೀಮಿತ ವಾಗಿತ್ತು. ಇದನ್ನು ಅಭಿವೃದ್ಧಿ ಪಡಿಸಿ ಸಾಹಿತ್ಯ ವೇದಿಕೆಯನ್ನು ಕರ್ನಾಟಕ ವಿದ್ಯಾರ್ಥಿಗಳ ಅಧಿಕೃತ ಶಕ್ತಿ ಕೇಂದ್ರವನ್ನಾಗಿ ಮಾರ್ಪಡಿಸ ಬೇಕೆಂಬ ಬಲವಾದ ತುಡಿತ ನನ್ನಲ್ಲಿತ್ತು. '95 ಎಪ್ರಿಲ್ 27 ಗುರುವಾರ ಮರ್ಕಝ್ ಶರೀಅತ್ ಕಾಲೇಜಿನ 38ನೇ ಸಂಖ್ಯೆಯ ಕೋಣೆಯಲ್ಲಿ ನಡೆದ 'ಸಾಹಿತ್ಯ ವೇದಿಕೆ' ಮಹಾಸಭೆಯಲ್ಲಿ ಇದನ್ನು ಅಧಿಕೃತವಾಗಿ ಚರ್ಚೆಗೆ ಹಾಕಿದೆ. ಸಭೆಗೆ ಮೊದಲೇ ವಿದ್ಯಾರ್ಥಿ ಪ್ರಮುಖರೊಂದಿಗೆ ಈ ವಿಷಯ ಸಮಾಲೋಚಿಸಿ ಅನುಮೋದನೆ ಪಡೆಯ ಲಾಗಿತ್ತು. ಎಲ್ಲರಿಗೂ ಇದು ಒಪ್ಪಿಗೆಯಾಗಿ ಉಸ್ತಾದ್‌ಗಳ ಸಮ್ಮತಿ ಪಡೆದು ಅಧಿಕೃತ ಚಾಲನೆ ಕೊಡಲು ನಿರ್ಧರಿಸಲಾಯಿತು.

ಅದರಂತೆ 95 ಎಪ್ರಿಲ್ 30 ಭಾನುವಾರ ಮರ್ಕಝ್ - ಮಸ್ಜಿದುಲ್ ಹಾಮಿಲಿಯಲ್ಲಿ ನಡೆದ ಸಭೆಯಲ್ಲಿ ಕನಸಿನ ಸಂಘಟನೆಗೆ ಅಂತಿಮ ರೂಪ ಕೊಡಲಾಯಿತು. ಸಮಿತಿಗೆ 'ಕರ್ನಾಟಕ ಸ್ಟೂಡೆಂಟ್ಸ್ ಓರ್ಗನೈಝೇಶನ್' (ಕೆ.ಎಸ್.ಒ) ಎಂದು ಹೆಸರಿಸಲಾಗಿ ಪ್ರಥಮ ಅಧ್ಯಕ್ಷರಾಗಿ ಡಿ.ಎ. ಹಂಝ (ಸಖಾಫಿ) ಆತೂರು ಹಾಗೂ ಪ್ರಧಾನ ಕಾರ್ಯದರ್ಶಿ ಯಾಗಿ ಮೂಸ (ಸಖಾಫಿ) ಮಾದಾಪುರ -ಕೊಡಗು ಅವರನ್ನು ಆರಿಸಲಾಯಿತು. ಇಂದು ಸಾಹಿತ್ಯ ಮತ್ತು 'ದಅ್‌ವಾ' ರಂಗದಲ್ಲಿ ಗಮನಾರ್ಹ ಸೇವೆ ಸಲ್ಲಿಸಿ ಅಸಂಖ್ಯ ಪ್ರತಿಭೆಗಳನ್ನು ಸಮುದಾಯಕ್ಕೆ ಸಮರ್ಪಿಸು ತ್ತಿರುವ ಮರ್ಕಝ್ - ಕೆ.ಎಸ್.ಒ. ಈ ಲೇಖಕನ ಚಿಂತನೆ ಮತ್ತು ಶ್ರಮದ ಫಲವಾಗಿ ರೂಪು ಗೊಂಡಿದ್ದಾಗಿದೆ ಎನ್ನುವುದು ಸಂಘಟನೆಯ ಚರಿತ್ರೆ ಕೌತುಕಿಗಳ ಮಾಹಿತಿಗಾಗಿ ದಾಖಲಿಸುತ್ತಿದ್ದೇನೆ. ಭಾಷಣ ಮತ್ತು ಬರಹ ತರಬೇತು ಅಲ್ಲದೆ ವಿದ್ಯಾರ್ಥಿ ಶಕ್ತಿಯ ಸಮಗ್ರ ಸದ್ಬಳಕೆಗೆ ಶಕ್ತಿ ತುಂಬಲು ವಿವಿಧ ಉಪ ಸಮಿತಿ ಮತ್ತು ಯೋಜನೆ ಗಳನ್ನು ರೂಪಿಸಿ ಕೆ.ಎಸ್.ಒ. ಬೆಳೆದು ಬಂತು. ನನ್ನ ಕನ್ನಡ ಭಾಷಣಗಳ ಮೊದಲ ಪ್ರಯೋಗ ಶಾಲೆ ಇದಾಗಿತ್ತು.

ಮೊದಲ ಬಹಿರಂಗ ಕನ್ನಡ ಭಾಷಣಕ್ಕೆ ಅವಕಾಶ ಸಿಕ್ಕಿದ್ದು ಮಂಗಳೂರು ತಾಲೂಕಿನ ಸೂರಿಂಜೆಯಲ್ಲಿ. ಆಗ ಎಸ್ಸೆಸ್ಸೆಫ್ ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾಗಿದ್ದ ಜಿ.ಎಂ. ಮುಹಮ್ಮದ್ ಕಾಮಿಲ್ ಸಖಾಫಿ ಸೂರಿಂಜೆಯಲ್ಲಿ ಮುದರ್ರಿಸ್ ಆಗಿದ್ದರು. '95 ಮೇ 12,13 ಶುಕ್ರವಾರ ಮತ್ತು ಶನಿವಾರ ಸೂರಿಂಜೆ ಮದ್ರಸದಲ್ಲಿ ಆಯೋಜಿಸಲಾಗಿದ್ದ ಎರಡು ದಿನಗಳ ಜಿಲ್ಲಾ ಸಾಂಘಿಕ ಶಿಬಿರದಲ್ಲಿ ಹನ್ನೆರಡರ ರಾತ್ರಿ ಹನ್ನೊಂದು ಗಂಟೆಯಿಂದ ಹನ್ನೆರಡರವರೆಗೆ 'ಸಾಂಘಿಕ ತರಬೇತಿ' ವಿಷಯದಲ್ಲಿ ಮಾತನಾಡಲು ನನಗೆ 'ವಿಧಿ' ಯುಂಟಾಯಿತು. ಅಂದಿನ ಒಂದು ಗಂಟೆಯ ಭಾಷಣದಲ್ಲಿ ಕನ್ನಡ ಶಬ್ದಗಳು ಎಷ್ಟಿದ್ದವು ಎಂಬುದು ನೆನಪಿಲ್ಲ. ಆದರೆ ರಾಜ್ಯದ ಸಂಘ ಚರಿತ್ರೆ ಮತ್ತು ನನ್ನ ಕನ್ನಡ ಭಾಷಣ ಚರಿತ್ರೆಯಲ್ಲಿ ಅದೊಂದು ಅಮೋಘ ತಿರುವಾಗಿತ್ತು ಎಂಬುದು ಮರೆಯಲಾಗದು.

ಆ ಕಾಲದಲ್ಲಿ ದೇಶಾದ್ಯಂತ ಭಾರೀ ಚರ್ಚೆಗೆ ಗ್ರಾಸವಾದ ಒಂದು ವಿಷಯವಾ ಗಿತ್ತು 'ಸಮಾನ ನಾಗರಿಕ ಸಂಹಿತೆ' (Uniform Civil Code). ದೇಶದಲ್ಲಿರುವ ಎಲ್ಲ ಪ್ರಜೆಗಳಿಗೆ ಎಲ್ಲ ವಿಷಯಗಳಲ್ಲಿಯೂ ಸಮಾನವಾದ ಸಂಹಿತೆ ಇರಬೇಕೆಂದು ರಾಷ್ಟ್ರ ಸಂವಿಧಾನದ ಮಾರ್ಗ ನಿರ್ದೇಶನ ತತ್ವಗಳಲ್ಲಿ ಪ್ರತಿಪಾದಿಸಲಾಗಿದೆ. ಅದನ್ನು ಜಾರಿಗೊಳಿಸ ಬೇಕೆಂದು ಕೆಲವು ಕೋಮುವಾದಿ ಪರಿ ವಾರಗಳು ಅಂದು ಗುಲ್ಲೆಬ್ಬಿಸಿದ್ದವು. ಯಾವ ಮತದವರಿಗೂ ಅವರವರ ಧಾರ್ಮಿಕ ಕಟ್ಟುಪಾಡುಗಳ ಪ್ರಕಾರ ಬದುಕಲು ಅವಕಾಶ ನೀಡದೆ ದೇಶದ ಸಮಸ್ತ ಪ್ರಜೆಗಳಿಗೆ ಒಂದೇ ಒಂದು ರೀತಿಯ ಕಾನೂನು ಇರಬೇಕೆಂಬುದು ಅಂಥವರ ವಾದವಾಗಿತ್ತು. ಇದನ್ನು  ಖಂಡಿಸಿ, ಭಾರತದ ಜಾತ್ಯತೀತ ಸಿದ್ಧಾಂತದಲ್ಲಿ ಎಲ್ಲರಿಗೂ ಅವರವರ ಧರ್ಮಗಳಂತೆ ಬಾಳು ವ ಅವಕಾಶ ಮುಂದುವರಿಸಬೇಕು; ಇದಕ್ಕೆ ಸಂವಿಧಾನದ ಮೂಲಭೂತ ಸಿದ್ಧಾಂತಗಳಲ್ಲಿ ಅವಕಾಶವಿದೆ ಎಂಬುದನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿಸಲು ಕೇರಳದಾದ್ಯಂತ ಸುನ್ನೀ ಸಂಘಟನೆಗಳು ಅಭಿಯಾನ ಹಮ್ಮಿ ಕೊಂಡವು. ಈ ವಿಷಯದಲ್ಲಿ ಮಾತನಾಡಲು ಅನೇಕ ವೇದಿಕೆಗಳು ಅಂದು ಲಭಿಸುತ್ತಿದ್ದವು. ಮೇ ಇಪ್ಪತ್ತಾರು ಶುಕ್ರವಾರ ಸಾಯಂಕಾಲ ಪಾಲಕ್ಕಾಡ್ ಜಿಲ್ಲೆಯ 'ಮಣ್ಣಿಯಂ ಪೆರುಂ ಬಲಂ' ಎಂಬಲ್ಲಿ ಈ ವಿಷಯದಲ್ಲಿ ನನ್ನ ಮೊದಲ ಭಾಷಣ ನಡೆಯಿತು. ಈ ಕುರಿತು ಎಸ್.ವೈ.ಎಸ್. ಕೇರಳ ರಾಜ್ಯ ಸಮಿತಿ ಹಮ್ಮಿ ಕೊಂಡಿದ್ದ ಅಭಿಯಾನದ ಅಂಗವಾಗಿ ಆಲ ಪ್ಪುಝ ಜಿಲ್ಲಾ ಘಟಕದ ಬೃಹತ್ ಸಮ್ಮೇಳ ನಕ್ಕೆ ತೆರಳುವ ವಾಗ್ಮಿಗಳ ತಂಡದಲ್ಲಿ ನನಗೂ ಪಾಲು ಸಿಕ್ಕಿತ್ತು. ಮರ್‌ಹೂಂ ಪಿ.ಪಿ. ಮುಹ್ಯಿ ದ್ದೀನ್ ಕುಟ್ಟಿ ಮುಸ್ಲಿಯಾರ್ ಪಾರನ್ನೂರು ತಂಡದ ಮುಖ್ಯಸ್ಥರಾಗಿದ್ದು ಪಿ.ಕೆ.ಎಂ. ಸಖಾಫಿ ಇರಿಂಜಲ್ಲೂರು, ವಿ.ಯಂ. ಕೋಯಾ ಮಾಸ್ಟರ್ ಕಿಣಾಶ್ಶೇರಿ ಪ್ರಮುಖ ಅಂಗಗಳಾಗಿದ್ದರೆ ನಾನು ಮತ್ತು ಇಸ್ಮಾಈಲ್(ಸಖಾಫಿ) ತೋಟ್ಟುಮುಕ್ಕಂ ಕಿರಿಯ ಸದಸ್ಯರಾಗಿದ್ದೆವು. 95 ಜೂನ್ ಎರಡು ಶುಕ್ರವಾರ ಆಲಪ್ಪುಝ ನಗರದ ಸಮೀಪ ವೆಳ್ಳಕ್ಕಿಣರ್, ಇರ್‌ಶಾದ್ ರೋಡ್ ವಲಿಯಮರಂ ಜುಮಾ ಮಸ್ಜಿದ್ ಮುಂಭಾಗದ ಮೈದಾನದಲ್ಲಿ ಸಮ್ಮೇಳನ ನಡೆದಿತ್ತು.

ಸುನ್ನೀ ತತ್ವಾದರ್ಶಗಳ ಮಂಡನೆ ಮತ್ತು ಬಿದ್‌ಅತ್‌ಗಳ ಖಂಡನೆಗೆ ತರಬೇತಿ ನೀಡಲು ಅಂದು ಮರ್ಕಝ್‌ನಲ್ಲಿ ಸ್ಟೂಡೆಂಟ್ಸ್ ಪಾರ್ಲಿಮೆಂಟ್ ವ್ಯವಸ್ಥೆಯಿತ್ತು. 95 ಜುಲೈ 9 ಭಾನುವಾರ ಆ ವರ್ಷದ ಪಾರ್ಲಿಮೆಂಟ್ ಅಸ್ತಿತ್ವಕ್ಕೆ ಬಂದಿತ್ತು. ಕೊಳತ್ತೂರು ಅಲವಿ ಸಖಾಫಿ ಸ್ಪೀಕರ್ ಮತ್ತು ಕುಟ್ಟಶ್ಶೇರಿ ಅಬ್ದುಲ್ ಮಜೀದ್ ಸಖಾಫಿ ಪ್ರಧಾನ ಮಂತ್ರಿಯಾದ  ಸಂಸತ್ತಿನಲ್ಲಿ ನಾನು ತಾರೀಖ್ (ಚರಿತ್ರೆ) ಮಂತ್ರಿಯಾಗಿದೆ. ಚರಿತ್ರೆ ಸಾಮಾನ್ಯವಾಗಿ ಪ್ರಶ್ನಾತೀತವಾದ್ದರಿಂದ ನನಗೆ ಯಾವ ಪ್ರಶ್ನೆಗಳೂ ಎದುರಾ ಗುತ್ತಿರಲಿಲ್ಲ.

ಕರ್ನಾಟಕದ ಕಾರ್ಯಕ್ರಮಗಳ ಪೈಕಿ ಆ ಕಾಲದಲ್ಲಿ ಸೆಳೆದದ್ದು ಮಂಚಿ ಪಂಚಾಯತ್ (ಬಂಟ್ವಾಳ ತಾಲೂಕು) ಎಸ್ಸೆಸ್ಸೆಫ್ ಮೀಲಾದ್ ಜಾಥಾ ಮತ್ತು ಸಮ್ಮೇಳನ ವಾಗಿತ್ತು. ಸಹಪಾಠಿ ಕೆ.ಕೆ.ಎಂ. ಕಾಮಿಲ್ ಸಖಾಫಿ ಸುರಿಬೈಲು ಅಧ್ಯಕ್ಷರಾಗಿದ್ದ ಮಂಚಿ ಪಂಚಾಯತ್ ಎಸ್ಸೆಸ್ಸೆಫ್‌ನ ಈ ರೀತಿಯ ಮೊದಲ ಕಾರ್ಯಕ್ರಮಕ್ಕೆ ಆಹ್ವಾನ ಸಿಕ್ಕಿದ್ದು 95 ಆಗಸ್ಟ್ 12 ಶನಿವಾರ. ಪ್ರದೇಶದ ಅಬಾಲವೃದ್ಧ ಜನ ಆವೇಶದಿಂದ ಪಾಲ್ಗೊ ಳ್ಳುತ್ತಿದ್ದ ಸದರಿ ಕಾರ್ಯಕ್ರಮ ಅನೇಕ ವರ್ಷಗಳ ಕಾಲ ವಿಜೃಂಭಣೆಯಿಂದ ನಡೆದು ಈಗ ನಿಂತು ಹೋಗಿದೆ. ಆಗ ದಕ್ಷಿಣ ಕನ್ನಡ ಜಿಲ್ಲಾ ಎಸ್ಸೆಸ್ಸೆಫ್ ಪಿ.ಪಿ. ಅಹ್‌ಮದ್ ಸಖಾಫಿ ಅಧ್ಯಕ್ಷ ಮತ್ತು ಜಿ.ಎಂ. ಮುಹ ಮ್ಮದ್ ಕಾಮಿಲ್ ಸಖಾಫಿ ಪ್ರಧಾನ ಕಾರ್ಯದರ್ಶಿಯಾಗಿ ಕ್ರಾಂತಿಕಾರಿ ಯೋಜನೆ ಗಳನ್ನು ರೂಪಿಸಿ ಅನುಷ್ಠಾನಗೊಳಿಸಿತ್ತು. 1989ರಲ್ಲಿ ಸ್ಥಾಪನೆಗೊಂಡು ಅನಂತರ ಕಾರ್ಯಕರ್ತರ ಕೊರತೆಯಿಂದ ನಿಷ್ಕ್ರಿಯ ವಾಗಿದ್ದ ಎಸ್ಸೆಸ್ಸೆಫ್ ಕ್ರಮೇಣ ಎಸ್.ಪಿ. ಹಂಝ ಸಖಾಫಿ, ಪಿ.ಪಿ. ಅಹ್ಮದ್ ಸಖಾಫಿ ಕಾಶಿಪಟ್ನ ಹಾಗೂ ಜಿ.ಎಂ. ಕಾಮಿಲ್ ಸಖಾಫಿಯವರ ಉತ್ಸಾಹಿ ನಾಯಕತ್ವದಡಿ ಮರುಜೀವ ಪಡೆಯ ತೊಡಗಿತು. ದ.ಕ. ಜಿಲ್ಲಾ ಘಟಕ ಸಕ್ರಿಯವಾದಂತೆ ರಾಜ್ಯ ಸಮಿತಿಗೆ ಪುನರ್ಜನ್ಮ ನೀಡಬೇಕೆಂದು ಅಪೇಕ್ಷೆ ಬಲವಾಯಿತು. ಅದರಂತೆ 95 ಆಗಸ್ಟ್ 13 ಭಾನುವಾರ ಅಪರಾಹ್ನ ಮಂಗಳೂರು ಬದ್ರಿಯಾ ಕಾಲೇಜಿನಲ್ಲಿ ನಡೆದ ಮೀಲಾದ್ ಸಮಾವೇಶದಲ್ಲಿ ರಾಜ್ಯ ಎಸ್ಸೆಸ್ಸೆಫ್‌ಗೆ ಮತ್ತೆ ಚಾಲನೆ ಕೊಡಲಾಯಿತು. ಮಾಜಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಹುಸೈನ್ ಸಅದಿ ಕೆ.ಸಿ.ರೋಡ್ ಮತ್ತು ಪ್ರೊಫೆಸರ್ (ಡಾ|) ಎಸ್. ಅಬ್ದುರ್ರಹ್ಮಾನ್ ಇಂಜಿನಿ ಯರ್ ಇದಕ್ಕೆ ಕಾರ್ಮಿಕತ್ವ ವಹಿಸಿದರು. ಪಿ.ಪಿ. ಅಹ್ಮದ್ ಸಖಾಫಿ ಕನ್ನಂಗಾರ್ ಅಧ್ಯಕ್ಷ ರಾಗಿ, ಜಿ.ಎಂ. ಮುಹಮ್ಮದ್ ಕಾಮಿಲ್ ಸಖಾಫಿ ಪ್ರಧಾನ ಕಾರ್ಯದರ್ಶಿಯಾಗಿ, ಅಬ್ದುರ್ರಝಾಖ್ ಹಾಸನ ಕೋಶಾಧಿಕಾರಿ ಯಾಗಿ ನೇಮಕಗೊಂಡ ಸಭೆಯಲ್ಲಿ ಮರ್ಕ ಝ್ ವಿದ್ಯಾರ್ಥಿಯಾಗಿದ್ದ ನಾನು ಮತ್ತು ಸಅದಿಯ್ಯ ವಿದ್ಯಾರ್ಥಿಯಾಗಿದ್ದ ಮಲ್ಲೂರು ಅಶ್ರಫ್ ಸಅದಿ ರಾಜ್ಯ ಸಂಚಾಲಕರಾಗಿ ಆಯ್ಕೆಯಾದೆವು. ಸಂಘಟನೆ ಭಾಷಣ ಬದುಕಿಗೆ ಶಕ್ತಿ ತುಂಬ ತೊಡಗಿತು.

# 15

## ವಿದ್ಯೆ ನೀಡಿದ ಗುರು ಉದ್ಯೋಗವನ್ನೂ ಕೊಡಮಾಡಿದರು

ಮರ್ಕಝ್ ಜೀವನದಲ್ಲಿ ಪರಿಚಯ ವಾದ ಭಾಷಣದ ಹೊಸ ಪ್ರಕಾರವಾಗಿತ್ತು ಮದುವೆ ಶುಭಾಶಯ ಭಾಷಣ. ಸಾಮಾನ್ಯ ವಾಗಿ ಮಲಪ್ಪುರಂ ಜಿಲ್ಲೆಯಲ್ಲಿ ಹುಡುಗರಿಗೆ ಸಣ್ಣ ಹರೆಯದಲ್ಲೇ ಮದುವೆ ಮಾಡಿಸುವ ಪರಿಪಾಠವಿತ್ತು. ಅದರಂತೆ ಮರ್ಕಝ್‌ನಲ್ಲಿ ಕಲಿಯುತ್ತಿರುವ ಆ ಭಾಗದ ವಿದ್ಯಾರ್ಥಿಗಳ ಮದುವೆಯ ಆಮಂತ್ರಣ ಆಗಾಗ ನಮಗೆ ಲಭಿಸುತ್ತಿದ್ದವು. ಹೀಗೆ ನಡೆಯುವ ಮದು ವೆಗಳಲ್ಲಿ ನಿಕಾಹ್ ಮುಗಿದ ತಕ್ಷಣ ಎದ್ದು ನಿಂತು ಮೈಕ್‌ನಲ್ಲಿ ವಧೂವರರನ್ನು ಅಭಿ ನಂದಿಸಿ ಮಾಡುವ ಭಾಷಣ ಅಲ್ಲಿ ಜನಪ್ರಿಯ ವಾಗಿತ್ತು. ಇದಕ್ಕೆ ಮಲಯಾಳಂನಲ್ಲಿ 'ಮಂಗಳ ಪ್ರಸಂಗಂ' ಎನ್ನುತ್ತಾರೆ.

'ಮಂಗಳಪ್ರಸಂಗ'ಕ್ಕೆ ಬೇಡಿಕೆಯಿದೆ ಎಂದು ಅರಿವಾದಾಗ ಆ ಕ್ಷೇತ್ರಕ್ಕೂ ಪಾದಾ ರ್ಪಣೆ ಮಾಡಿಬಿಡುವ ಅನ್ನಿಸಿತ್ತು. ಮಲಯಾ ಳಂ ಡಿಕ್ಷನರಿಯಿಂದ ಮತ್ತು ಸಾಹಿತಿಗಳ ಪುಸ್ತಕಗಳಿಂದ ಪ್ರಾಸಬದ್ಧ ಪದಗಳನ್ನು ಹೆಕ್ಕಿ ತೆಗೆದು ಒಂದು 'ಮಂಗಳ ಭಾಷಣ' ಪೋ ಣಿಸಿದೆ. "ಮಧು ವಿಧುವೂರುನ್ನ ಮಧುರ ಕ್ಕಿನಾಕ್ಕಳುಮಾಯಿ ಮಾಂಗಲ್ಯ ಮಲರ್ ವಾಡಿಯಿಲೇಕ್..." ಎಂದು ಆರಂಭಿಸು ತ್ತಿದ್ದ ಆ ಭಾಷಣ ಆ ಕಾಲದಲ್ಲಿ ನನ್ನ ಅನೇಕ ಸಹಪಾಠಿಗಳಿಗೆ ಬಾಯಿಪಾಠವಾಗಿತ್ತು. ಮದುವೆಯಾಗುವ ವಿದ್ಯಾರ್ಥಿ ಮಿತ್ರರ ನಿಕಾಹ್ ಮಂಟಪಗಳಲ್ಲಿ ಇದರ ಅಲೆಗಳು ಅನು ರಣಿಸುತ್ತಿದ್ದವು.

ಈ ಪ್ರಕಾರದ ಮೊದಲ ನನ್ನ ಭಾಷಣ ನಡೆದದ್ದು ನಮ್ಮ ಮೊದಲ ದರ್ಸ್‌ನ ಹಿರಿಯ ವಿದ್ಯಾರ್ಥಿಯಾಗಿದ್ದ, ಈಗ ಮಂಜೇರಿ ಹಿಕಮಿಯ್ಯಃದಲ್ಲಿ ಮುದರ್ರಿಸ್ ಆಗಿರುವ ಪಿ.ಮುಹಮ್ಮದ್ ಝ್ಹುನೀ ಸಖಾಫಿ ಅವರ ಮದುವೆಗೆ. 1995 ಆಗಸ್ಟ್ 20 ಭಾನುವಾರ ವಾಗಿತ್ತದು. ಕೇರಳದ ಬಹುತೇಕ ಜಿಲ್ಲೆಗಳಲ್ಲಿ ಹಾಗೂ ಕರ್ನಾಟಕದ ಕೆಲವು ಸ್ನೇಹಿತರ ಮದುವೆಗಳಲ್ಲೂ ಈ ರೀತಿಯ ಭಾಷಣ ನಡೆ ದಿತ್ತು. ಕೊನೆಗೆ ಪೇರೋಡ್ ಉಸ್ತಾದರ ಒಂದು ಭಾಷಣದಲ್ಲಿ ಈ ಕುರಿತು ನಿರುತ್ಸಾ ಹದ ಮಾತು ಕೇಳಿದಾಗ ಮತ್ತೆ ಅದನ್ನು ಸಂಪೂರ್ಣ ನಿಲ್ಲಿಸಿದೆ. ಮರ್ಕಝ್‌ನಲ್ಲಿ ನಮ್ಮ ಕ್ಲಾಸ್ ಉಸ್ತಾದ್ ಆಗಿದ್ದ ಪಡನಿಲಂ ಹುಸೈನ್ ಮುಸ್ಲಿಯಾರ್ ನನ್ನನ್ನು 'ಮಂಗಳ ಪ್ರಸಂಗಂ' ಅಂತಲೇ ಕರೆಯುತ್ತಿದ್ದರು.

ಮರ್ಕಝ್ ಪದವಿ ತರಗತಿಯ ಅಂತಿಮ ವರ್ಷ ನನಗೆ ಮೂರು ಖಾಯಂ ಭಾಷಣ ಕಾರ್ಯ ಕ್ರಮ ಲಭಿಸುತ್ತಿತ್ತು. ಅದಾಗಲೇ ಮ್ಯಾನೇಜರ್ ಸಿ.ಮುಹಮ್ಮದ್ ಫೈಝಿ ಯವರ ನಾಯಕತ್ವದಲ್ಲಿ ಮರ್ಕಝ್‌ನಲ್ಲಿ ದಅ್‌ವಾ ಸೆಲ್ ಎಂಬ ಸಮಿತಿಯೊಂದಕ್ಕೆ ರೂಪುಕೊಟ್ಟು ಅಲ್ಪಸ್ವಲ್ಪ ಭಾಷಣ ಮಾಡಲು ಬರುವ ವಿದ್ಯಾರ್ಥಿಗಳನ್ನೆಲ್ಲ ಇದರಲ್ಲಿ ಸೇರಿಸಿಕೊಳ್ಳಲಾಗಿತ್ತು. ಈ 'ಸೆಲ್'ನಲ್ಲಿ ಬಂಧಿಯಾದವರಲ್ಲಿ ನಾನೂ ಒಬ್ಬನಾಗಿದ್ದೆ. ಮರ್ಕಝ್ ಬೋರ್ಡಿಂಗ್ ಮದ್ರಸದ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ 'ಸುನ್ನತ್ ಜಮಾಅತ್' ಕ್ಲಾಸ್ ತೆಗೆಯುವ ಜವಾಬ್ದಾರಿ ನನಗೆ ವಹಿಸಲಾಗಿತ್ತು. ವಾರಕ್ಕೊಂದು ನಿಗದಿತ ದಿನ ಬೆಳಗ್ಗೆ 7ರಿಂದ 9ರವರೆಗೆ ಮಕ್ಕಳಿಗೆ ಸುನ್ನೀ ಸಿದ್ಧಾಂತಗಳನ್ನು ಬೋಧಿಸಿ ಅವರ ಸಂಶಯಗಳಿಗೆ ಉತ್ತರಿಸಬೇಕಾಗಿತ್ತು. ಇದು ಪ್ರತಿವಾರ 'ನಿರಂತರವಾಗಿ' ಮುಂದು ವರಿದಿತ್ತು. ಇದರ ಪ್ರತಿಫಲವಾಗಿ ಮರ್ಕಝ್ ನಿಂದ ಬಿಡುಗಡೆಯಾಗಿ ಬರುವಾಗ ಸಿ. ಉಸ್ತಾದ್ ಒಂದು ಬಿಳಿ ಶರ್ಟ್ ಪೀಸ್ ನೀಡಿ ಅನುಗ್ರಹಿಸಿದ್ದರು.

ಎರಡನೆಯದಾಗಿ ಕೊಯಿಲಾಂಡಿ ಸಮೀ ಪದ 'ವೆಂಙಳಂ' ಎಂಬಲ್ಲಿ ಪ್ರತಿ ಶನಿವಾರ ಅಪರಾಹ್ನ ಖಾಯಂ ಮಹಿಳಾ ಕ್ಲಾಸ್ ನನಗೆ ವಹಿಸಲಾಗಿತ್ತು. ಮರ್ಕಝ್ ಆರ್ಟ್ಸ್ ಕಾಲೇಜು ವಿದ್ಯಾರ್ಥಿಯಾಗಿದ್ದ ಆ ಊರಿನವ ನೊಬ್ಬ ನನ್ನನ್ನು ಪ್ರತಿವಾರ ಕರೆದುಕೊಂಡು ಹೋಗುತ್ತಿದ್ದ. 'ವೆಂಙಳಂ' ಮದ್ರಸದ ಒಂದು ಹಾಲ್‌ನಲ್ಲಿ ಆತ ನನ್ನ ಮುಂದೆ ಒಬ್ಬಂಟಿ ಯಾಗಿ ಕುಳಿತರೆ, ಪರದೆಯ ಹಿಂದೆ ಸಾಕಷ್ಟು ಮಹಿಳೆಯರು ಕ್ಲಾಸ್ ಕೇಳಲು ಕಾತರರಾಗಿ ಕುಳಿತಿದ್ದಾರೆ ಎಂದು ನನಗೆ ನಂಬಿಸುತ್ತಿದ್ದ. ನಾನು ಆ ಖಾತರಿಯ ಮೇಲೆ ಅನೇಕ ಸ್ತ್ರೀ ಸಂಬಂಧಿ 'ಮಸ್‌ಅಲ'ಗಳನ್ನು ವಿವರಿಸಿ ಸುಸ್ತಾಗುತ್ತಿದ್ದೆ.

ಅದೊಂದು ದಿನ ನನ್ನ ಭಾಷಣ ತುಸು ವಿಪರೀತವಾಯಿತು. ಮಹಿಳೆಯರ ರಂಗ ಪ್ರವೇಶವನ್ನು ಅತಿಯಾಗಿ ಟೀಕಿಸಿ ಆ ದಿನ ಗಂಭೀರ ಭಾಷಣ ಮಾಡಿದೆ. ಕಾರ್ಯಕ್ರಮ ಮುಗಿಸಿ ಮರ್ಕಝ್‌ಗೆ ಬಸ್ಸು ಹತ್ತುವಾಗ ಜತೆಗಿದ್ದ ವೆಂಙಳಂ ವಿದ್ಯಾರ್ಥಿಯಲ್ಲಿ ಈ ದಿನದ ಭಾಷಣ ಕೇಳಿ ಇಲ್ಲಿನ ಸ್ತ್ರೀಯರಿಗೆ ಏನಾದರೂ ಬೇಸರವಾದೀತಾ? ಎಂದು ಕೇಳಿದೆ. ನಿರ್ಭಾವುಕನಾಗಿ ಆತ ಹೇಳಿದ; ಈ ದಿನ ಯಾರಿಗೂ ಯಾವುದೇ ಬೇಸರವಾಗಲು ಸಾಧ್ಯವಿಲ್ಲ. ಯಾಕೆಂದರೆ ಇವತ್ತು ಊರಿನಲ್ಲಿ ಮದುವೆಯಿದ್ದ ಕಾರಣ ಪರದೆಯ ಹಿಂದೆ ಒಂದೇ ಒಂದು ಹೆಣ್ಣು ಕೂಡಾ ಇರಲಿಲ್ಲ!! ಅಂದರೆ ಅವತ್ತು ನಾನು ಎರಡು ಗಂಟೆ ಕಾಲ ಮಾಡಿದ 'ಸ್ತ್ರೀ ಭಾಷಣ'ಕ್ಕೆ ಶ್ರೋತೃ ಈತ ಮಾತ್ರ. ಈ ನಷ್ಟದ ವ್ಯಾಪಾರ ಇನ್ನು ಸಾಕೆಂದು ಆತ ನಿಗೆ ತಿಳಿಸಿ ಮುಂದೆ ಅಲ್ಲಿಗೆ ಹೋಗಲಿಲ್ಲ. ಪ್ರತಿ ವಾರದ ಆದಾಯ ಎಪ್ಪತ್ತೈದು ರೂ. ತಪ್ಪಿ ಹೋದ ಬೇಸರ ಮಾತ್ರ ಬಹುಕಾಲ ಕಾಡುತ್ತಿತ್ತು.

ಆದರೆ ಬತ್ತದ ಉತ್ಸಾಹವಾಗಿ ಆ ಕಾಲ ದಲ್ಲಿ ಮುಂದುವರಿದಿದ್ದ ನನ್ನ ಇನ್ನೊಂದು ರೆಗ್ಯುಲರ್ ಕಾರ್ಯಕ್ರಮವೆಂದರೆ ಕೋಝಿಕ್ಕೋಡ್ ನಗರ ಮಧ್ಯದ 'ಕುಟ್ಟಿಚ್ಚಿರ-ಮುಚ್ಚುಂದಿ'ಯ ಮದ್ರಸದಲ್ಲಿ ನಡೆ ಯುತ್ತಿದ್ದ ಕ್ಲಾಸ್ ಆಗಿತ್ತು. ಪ್ರದೇಶದಲ್ಲಿ ಕಿಕ್ಕಿ ರಿದು ತುಂಬಿದ್ದ ಮುಸ್ಲಿಂ ಮನೆಗಳಿಂದ ಸ್ತ್ರೀ ಪುರುಷರೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದ ಸದ್ರಿ ಕ್ಲಾಸ್‌ನಲ್ಲಿ ಹೆಚ್ಚಿನ ಸಭಿಕರು ಯುವಕರಾಗಿದ್ದರು. ಕೋಝಿ ಕೋಡ್‌ನ ವಿವಿಧ ಉದ್ಯಮ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದ, ಉತ್ತಮ ವಿದ್ಯಾಭ್ಯಾಸ ಮತ್ತು ವೇತನವಿರುವ ಇವರು ಪ್ರತಿ ಭಾನುವಾರದ ಅಪರಾಹ್ನ ವೇಳೆಯನ್ನು ಈ ರೀತಿ ಜ್ಞಾನ ಗಳಿಕೆಗೆ ವ್ಯಯಿಸುತ್ತಿದ್ದರು. ನಿರಂತರ ಪ್ರಶ್ನೆ ಕೇಳಿ ಜ್ಞಾನದಾಹ ಇಂಗಿಸುತ್ತಿ ದ್ದರು. ಅಂದಿನ ಸಭಿಕ ರಲ್ಲಿ ಹೆಚ್ಚಿನವರು ವಾರಕ್ಕೆ ಎರಡು ದಿನ ಉಪ ವಾಸ ಮತ್ತು ಸಾಮಾನ್ಯ ಎಲ್ಲ ಸುನ್ನತ್ ನಮಾ ಜುಗಳನ್ನು ನಿರ್ವಹಿಸು ವವರಾಗಿದ್ದರು. ಪ್ರತಿ ಭಾನು ವಾರ ಅಪ ರಾಹ್ನದ ಮುಚ್ಚುಂದಿ ಕ್ಲಾಸ್ ನನಗೆ ಯಾವತ್ತೂ ಮರೆಯಲಾಗದ ಅನುಭವ ವಾಗಿತ್ತು. ಅಲ್ಲಿಯೂ ವಾರಕ್ಕೆ ಎಪ್ಪತ್ತೈದು ರೂ. ಗೌರವ ಧನವಿತ್ತು. ಈಗ ಸಿರಾಜ್ ದಿನ ಪತ್ರಿ ಕೆಯ ಗಲ್ಫ್ ಜಾಹೀರಾತು ಮನೇಜರ್ ಆಗಿ ದುಬೈ ಯಲ್ಲಿ ದುಡಿಯುತ್ತಿರುವ ಯೂನುಸ್ ಮುಚ್ಚುಂದಿ ಇದರ ಪ್ರಧಾನ ಸಂಘಟ ಕನಾಗಿದ್ದರು. ಸುಮಾರು ಒಂದೂವರೆ ವರ್ಷ ಗಳ ಕಾಲ ನಾನು ಈ ಕ್ಲಾಸ್ ಮುನ್ನಡೆಸಿದ್ದೆ.

ಈ ಮಧ್ಯೆ ಕರ್ನಾಟಕದಲ್ಲಿ ಎಸ್ಸೆಸ್ಸೆಫ್ ಮೆಲ್ಲನೆ ಜೀವ ಪಡೆಯುತ್ತಿತ್ತು. ಹೊಸ ರಾಜ್ಯ ಸಮಿತಿಯ ಮುಖ್ಯ ಕಾರ್ಯಸೂಚಿ ಯಾಗಿ ಜಿಲ್ಲಾ ಘಟಕಗಳ ವಿಸ್ತರಣೆ ಮತ್ತು ರಚನೆಯಿತ್ತು. ದ.ಕ.ಜಿಲ್ಲಾಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿದ್ದ ಪಿ.ಪಿ.ಅಹ್‌ಮದ್ ಸಖಾಫಿ ಮತ್ತು ಜಿ.ಎಂ.ಕಾಮಿಲ್ ಸಖಾಫಿ ನೇರವಾಗಿ ರಾಜ್ಯಾಧ್ಯಕ್ಷ ಮತ್ತು ಕಾರ್ಯ ದರ್ಶಿಯಾಗಿ ಭಡ್ತಿ ಹೊಂದಿದ ಹಿನ್ನೆಲೆಯಲ್ಲಿ ದ.ಕ.ಜಿಲ್ಲೆಗೆ ನೂತನ ಸಾರಥ್ಯದ ಅಗತ್ಯ ಬಂದಿತ್ತು. 1995 ಅಕ್ಟೋಬರ್ 21ಶನಿವಾರ ಬೆಳಿಗ್ಗೆ 9 ಗಂಟೆಗೆ ಮಂಗಳೂರು ಏರ್‌ಲೈನ್ಸ್ ಹೋಟೆಲ್‌ನಲ್ಲಿ ಇದಕ್ಕಾಗಿ ಕರೆದಿದ್ದ ದ.ಕ. ಜಿಲ್ಲೆಯ ವಿಶೇಷ ಮಹಾಸಭೆಯಲ್ಲಿ ತೀರಾ ಅನಿರೀಕ್ಷಿತವಾಗಿ ನನ್ನನ್ನು ಜಿಲ್ಲಾ ಎಸ್ಸೆಸ್ಸೆಫ್ ಅಧ್ಯಕ್ಷನಾಗಿ ನೇಮಕ ಮಾಡಲಾ ಯಿತು. ಆಗ ಮಂಗಳೂರು - ಪಕ್ಷಿಕೆರೆ ಖತೀಬ್ ಆಗಿದ್ದ ಬಿ.ಎ. ಇಬ್‌ರಾಹೀಮ್ ಸಖಾಫಿ ಕುಕ್ಕಾಜೆ ಪ್ರಧಾನ ಕಾರ್ಯದರ್ಶಿಯೂ ಕರ್ನಾಟಕ ರಾಜ್ಯ ಎಸ್ಸೆ ಸ್ಸೆಫ್ ಸ್ಥಾಪಕ ನಾಯಕರಲ್ಲೊಬ್ಬರಾದ ಸಯ್ಯಿದ್ ಇಸ್ಮಾ ಈಲ್ ಹಾದಿ ತಂಙಳ್ ಉಜಿರೆ ಕೋಶಾಧಿಕಾರಿಯಾಗಿಯೂ ಆಯ್ಕೆಯಾ ದರು. ಹೊರ ರಾಜ್ಯದಲ್ಲಿ ವಿದ್ಯಾರ್ಥಿಯಾಗಿದ್ದ ಜಿಲ್ಲಾಧ್ಯಕ್ಷನ ಅನುಪಸ್ಥಿತಿ ಗಮನಿಸಲ್ಪ ಡದಂತೆ ಅಂದು ಕಾರ್ಯದರ್ಶಿ ಬಿ.ಎ.ಸಖಾಫಿ ಸಕ್ರಿಯವಾಗಿ ಮುಂದಡಿಯಿ ಟ್ಟಿದ್ದರು. ಅವಿಭಕ್ತ ದ. ಕನ್ನಡದ ಎಂಟು ತಾಲೂಕುಗಳು ಅಂದು ನಮ್ಮ ವ್ಯಾಪ್ತಿಯಲ್ಲಿದ್ದು ಜವಾ ಬ್ದಾರಿ ಗುರುತರ ವಾಗಿತ್ತು.

1996 ಜನವರಿ ಮೂರು, ಹಿಜರಿ 1416 ಶಅಬಾನ್ 11 ಬುಧವಾರ ನನ್ನ ಮರ್ಕಝ್ ಮುತವ್ವಲ್ (ಪದವಿ) ತರಗತಿಯು ಮುಕ್ತಾ ಯಗೊಂಡಿತು.

'ಮೌಲವಿ ಫಾಝಿಲ್ ಸಖಾಫಿ' ಪದವಿಗೆ ಅರ್ಹತೆ ಪಡೆಯುವಲ್ಲಿಗೆ ನನ್ನ ಧಾರ್ಮಿಕ ವಿದ್ಯಾಭ್ಯಾಸ ಬಂದು ನಿಂತಿತು. ಆ ವರ್ಷ ಸಮ್ಮೇಳನ ಇಲ್ಲದ ಕಾರಣ ಸನದ್ ಮತ್ತು ಗೌನಿಗಾಗಿ ಒಂದು ವರ್ಷ ಕಾಯ ಬೇಕಿತ್ತು ಅಷ್ಟೆ.

96 ಜನವರಿ16ರಂದು ಕೋಝಿಕ್ಕೋಡ್ ಜಿಲ್ಲೆಯ 'ಮಾಂಜನಾಡ್' ಎಂಬಲ್ಲಿ ಭಾಷಣ ಮಾಡುತ್ತಿದ್ದಾಗಲೇ ಆರಂಭಿಸಿ ತೀವ್ರಗೊ ಳ್ಳುತ್ತಾ ಹೋದ ಎದೆನೋವು ಭಾಷಣ ಬದು ಕಿನಲ್ಲಿ ಮರೆಯಲಾಗದ ನೋವು. ಭಾಷಣ ನಿಲ್ಲಿಸಿ ದರೆ ಬದಲಿ ವ್ಯವಸ್ಥೆ ಇಲ್ಲ ಎಂಬುದನ್ನು ಮನಗಂಡು ಅದೇ ಸ್ಥಿತಿಯಲ್ಲಿ ಮುಂದುವರಿ ದಿದ್ದೆ. ತುಂಬ ಹೊತ್ತಿನ ಬಳಿಕ ವೇದನೆ ಅದಾ ಗಿಯೇ ಮಾಯವಾಗಿತ್ತು. ಜನವರಿ 19ರಂದು ಶೈಖುನಾ ಎ.ಪಿ.ಉಸ್ತಾದರ ಮನೆಯಿಂದ ಕೂಗಳತೆ ದೂರದಲ್ಲಿ ಕಾಂತಪುರಂ ಶಾಖಾ ಎಸ್ಸೆಸ್ಸೆಫ್ ಕಾರ್ಯಕ್ರಮದಲ್ಲಿ ಭಾಷಣ ಮಾಡಿದ್ದು ರೋಮಾಂಚಕ ಅನುಭವ.

ಜನವರಿ 26 ಪವಿತ್ರ ರಮಳಾನಿನ ಮೊದಲ ಶುಕ್ರವಾರವಲ್ಲದೆ ರಾಷ್ಟ್ರದ ಗಣ ರಾಜ್ಯ ದಿನವೂ ಆಗಿದ್ದರಿಂದ ಬೈಕಂಪಾಡಿ ಜುಮಾ ಮಸ್ಜಿದ್‌ನಲ್ಲಿ ಭಾಷಣಕ್ಕೆ ಹೋಗಿದ್ದೆ. ಅಲ್ಲಿ ಖತೀಬ್ ಆಗಿದ್ದ ನನ್ನ ತಂದೆ ಮರ್ ಹೂಂ ಎಂ.ಎಸ್.ಮೂಸ ಮುಸ್ಲಿಯಾರ್ ನನ್ನನ್ನು ಪರಿಚಯಿಸಿ ಭಾಷಣಕ್ಕೆ ಸ್ವಾಗತಿಸಿದ್ದು ವಿಭಿನ್ನ ಅನುಭವವಾಗಿತ್ತು. ನನ್ನ ಭಾಷಣಗಳ ಮೇಲೆ ತಂದೆಗೆ ಅತಿಯಾದ ಅಭಿಮಾನವಿತ್ತು. ಅವರು ಏಕ ಕಾಲದಲ್ಲಿ ನನ್ನ ಶ್ರೋತೃವೂ ಗುರುವೂ ಆಗುತ್ತಿದ್ದರು. ಒಮ್ಮೆ ನಾನು ಕನ್ನಡ ಭಾಷಣ ದಲ್ಲಿ 'ಅಲ್ಲಾಹು ಸುಬ್‌ಹಾನಹೂ ವ ತಆಲಾ' ಅಂದಿದ್ದನ್ನು ವಿಮರ್ಶಿಸಿ, ಅಲ್ಲಿ ಕೇವಲ 'ಅಲ್ಲಾಹು' ಎಂದು ಮಾತ್ರ ಬಳಸುವುದು ಸೂಕ್ತ ಅಂದಿದ್ದರು.

ರಮಳಾನ್ ಕೊನೆಯ ವಾರ ಫೆಬ್ರವರಿ 13ರಿಂದ 18ರ ವರೆಗೆ 6 ದಿನಗಳ ಕಾಲ ಲುಹ್‌ರ್ ನಮಾಝಿನ ಬಳಿಕ ಕಾಟಿಪಳ್ಳ ಜುಮಾ ಮಸೀ ದಿಯಲ್ಲಿ ಸ್ಥಳೀಯ ಖತೀಬ್ ಅಬೂಸುಫ್ಯಾನ್ ಮದನಿಯವರ ಮುಂದಾ ಳುತ್ವದಲ್ಲಿ ಸ್ಟಡೀ ಕ್ಲಾಸ್ ಆಯೋಜಿಸ ಲಾಗಿತ್ತು. ಮೊದಲ ದಿನ ಮಲಯಾಳಂನಲ್ಲಿ ಮಾತನಾಡಿದ್ದೆ. ಎರಡನೇ ದಿನ ಭಾಷಣ ಪ್ರಾರಂಭವಾಗುವಷ್ಟರಲ್ಲಿ ಸಭಿಕರ ಸಾಲಿನಲ್ಲಿದ್ದ ಹಿರಿಯರಾದ ಮರ್ ಹೂಂ ಹಾಜಿ ಹಸನಬ್ಬ ಮಾಸ್ಟರ್ ಬಂದು ಬ್ಯಾರಿ ಭಾಷೆಯಲ್ಲಿ ಮಾತನಾಡಿ ಎಂದು ಸಲಹೆ ಕೊಟ್ಟರು. ಅಂದು ಮಾಡಿದ್ದು ನನ್ನ ಮೊದಲ ಬ್ಯಾರಿ ಭಾಷಣ. ಅಬೂಸುಫ್ಯಾನ್ ಮದನಿಯವರು ಕಾಟಿಪಳ್ಳವನ್ನು ಅದಾಗಲೇ ಒಂದು ಬ್ಯಾರಿ ಸಾಮ್ರಾಜ್ಯವಾಗಿ ಬೆಳೆಸಿ ಬಿಟ್ಟಿದ್ದರು.

96 ಫೆಬ್ರವರಿ 23 ಶುಕ್ರವಾರ ಜುಮಾ ನಂತರ ಖತೀಬ್ ಆಗಿದ್ದ ತಂದೆಯ ಮಾರ್ಗ ದರ್ಶನ ಮತ್ತು ಜಿಲ್ಲಾಧ್ಯಕ್ಷನಾಗಿದ್ದ ನನ್ನ ಉಸ್ತುವಾರಿಯಲ್ಲಿ ಬೈಕಂಪಾಡಿ ಶಾಖಾ ಎಸ್ಸೆಸ್ಸೆಫ್ ರಚಿಸಲಾಯಿತು. ಇಂದಿನ ಮುಂ ಚೂಣಿ ಯುವ ಉದ್ಯಮಿ ನಾಸಿರ್ ಲಕ್ಕಿ ಸ್ಟಾರ್ ಅಧ್ಯಕ್ಷರೂ ಅಲ್ಪಸಂಖ್ಯಾತ ಅಭಿ ವೃದ್ಧಿ ನಿಗಮದ ನಿಕಟಪೂರ್ವ ಅಧ್ಯಕ್ಷ ಎನ್.ಬಿ.ಅಬೂಬಕರ್ ಕಾರ್ಯದರ್ಶಿಯೂ ಆಗಿ ಶಾಖಾ ಸಮಿತಿಯನ್ನು ಮುನ್ನಡೆಸಿದರು.

ಮರ್ಕಝ್‌ನಲ್ಲಿ ಪದವಿ ತರಗತಿ ಕಳೆದ ನಂತರ ಒಂದು ವರ್ಷ ಸ್ನಾತಕೋತ್ತರ (ತಖಸ್ಸುಸ್) ತರಗತಿಗೆ ಸೇರಬೇಕೆಂಬ ಅತಿಯಾದ ಹಂಬಲಕ್ಕೆ ತಂದೆ ಅನುಮೋದಿಸಿದ್ದ ರಿಂದ 96 ಮಾರ್ಚ್ 4 ಶವ್ವಾಲ್ 13 ಸೋಮ ವಾರ ಮರ್ಕಝ್ ತಖಸ್ಸುಸ್ (ಕಾಮಿಲ್ ಸಖಾಫಿ) ಕೋರ್ಸ್‌ಗೆ ಪ್ರವೇಶ ಪಡೆಯಲು ಸಾಧ್ಯವಾಯಿತು.

ಆ ತನಕ ಶೈಖುನಾ ಎ.ಪಿ.ಉಸ್ತಾದರಿಗೆ ನನ್ನ ನೇರ ಪರಿಚಯ ಇರಲಿಲ್ಲ. ಸಾಮಾನ್ಯ ವಾಗಿ ಭಾಷಣ ಕಾರ್ಯಕ್ರಮಕ್ಕೆ ತೆರಳಿ ಬರುವಾಗ ಕೆಲವೊಮ್ಮೆ ಕ್ಲಾಸ್‌ಗೆ ತಡವಾಗು ವುದರಿಂದ ಹೆಚ್ಚಾಗಿ ಉಸ್ತಾದ್‌ಗಳ ಗಮನಕ್ಕೆ ಬಾರದಂತೆ ಹಿಂಬದಿ ಸೀಟ್‌ನಲ್ಲೇ ಕುಳಿತು ಪಾಠ ಕೇಳುತ್ತಿದ್ದೆ. ಮಾರ್ಚ್ 13ರಂದು ಬಂದಡ್ಕ-ಏಣಿಯಾಡಿ ಉರೂಸ್‌ನ ವೇದಿಕೆ ಯಲ್ಲಿ ಉಸ್ತಾದರ ಮುಂದೆ ಭಾಷಣ ಮಾಡಲು ನನಗೆ ಮೊಟ್ಟ ಮೊದಲ ಅವಕಾಶ ಒದಗಿ ಬಂತು. ಉಸ್ತಾದರ ಗಮನ ಸೆಳೆಯಲು ಮತ್ತು ನಾನು ಮರ್ಕಝ್ ವಿದ್ಯಾರ್ಥಿ ಎಂಬುದನ್ನು ಅವರಿಗೆ ಮನವರಿಕೆ ಮಾಡಿಸಲು ಆ ದಿನ ಬೆಳಗ್ಗೆ ಉಸ್ತಾದ್ 'ತಖಸ್ಸುಸ್' ತರಗತಿಯಲ್ಲಿ ತೆಗೆದಿದ್ದ ಖುರ್‌ಆನ್ ಆಯತೊಂದರ ವಿವರಣೆಯನ್ನು ಅಲ್ಲಿ ಪ್ರತಿಪಾದಿಸಿದೆ. ಇದು ಕೆಲಸ ಮಾಡಿತ್ತು. ಮರುದಿನ ಕ್ಲಾಸ್‌ನಲ್ಲಿ ಉಸ್ತಾದ್, 'ಎಲ್ಲಿ ಅವನು?' ಎಂದು ಅನ್ವೇಷಿಸಿದರು. 'ತ್ವಲ್‌ಹತ್ ಬಿನ್ ಅಬ್ದಿಲ್ಲಾಹ್ ﷺ' ಎಂಬ ಸ್ವಹಾಬಿ ಯನ್ನು ಉಲ್ಲೇಖಿಸಿ ನಾನು ಮಂಡಿಸಿದ ಚರಿತ್ರೆಯಲ್ಲಿ ಬಂದ ಅಲ್ಪಮಟ್ಟದ ಪ್ರಮಾದ ವನ್ನು ತಿದ್ದಿದರು. "ಮಗ ಮಾಡಿದ ಕೆಲಸ ವನ್ನೂ ತಂದೆಯ ತಲೆಗೆ ಕಟ್ಟುವುದಾ?" ಎಂದು ಆಕರ್ಷಕ ಮುಗುಳ್ನಗೆಯೊಂದಿಗೆ ಗದರಿದ್ದರು.

ಪ್ರತಿಭಾ ಪೋಷಣೆಯಲ್ಲಿ ಎ.ಪಿ.ಉಸ್ತಾ ದರದ್ದು ವಿಶಿಷ್ಟ ಕಾಳಜಿ. ದೇಶ ವಿದೇಶಗಳಲ್ಲಿ ಮಿಂಚುತ್ತಿರುವ ಸಕಲ ಕಲಾ ವಲ್ಲಭರಾದ ಸಖಾಫಿಗಳನ್ನು ನೋಡಿದರೆ ಇದು ಸ್ಪಷ್ಟವಾ ಗುತ್ತದೆ. ನನಗೆ ಬೇಗನೇ ಇದರ ಅನುಭವ ವಾಯಿತು. ಮಾರ್ಚ್ 18 ಸೋಮವಾರ ಇತಿ ಹಾಸ ಪ್ರಸಿದ್ಧ ಇಚ್ಲಂಗೋಡ್‌ನ ಉರೂಸ್ ಸಮಾರಂಭದಲ್ಲಿ ಎ.ಪಿ.ಉಸ್ತಾದರ ಭಾಷಣ ವಿತ್ತು. ಬೆಳಗ್ಗಿನಿಂದಲೇ ಅಲ್ಲಿನ ಪ್ರತಿನಿಧಿಗಳು ಬಂದು ಉಸ್ತಾದರನ್ನು ಕರೆದುಕೊಂಡು ಹೋಗಲು ಕಾಯುತ್ತಿದ್ದರು. ಅಸಾಧ್ಯ ಒತ್ತ ಡದ ಮಧ್ಯೆ ದೂರದ ಕಾಸರಗೋಡ್ ಯಾತ್ರೆ ಗೆ ಉಸ್ತಾದರಿಗೆ ಬಿಡುವಾಗಲೇ ಇಲ್ಲ. ತಕ್ಷಣ ನನಗೆ ಬುಲಾವ್ ಬಂತು. ಇಚ್ಲಂಗೋಡ್ ಹೋಗಿ 'ವಅಳ್' ಹೇಳಲು. ಕಾಂತಪುರಂ ಉಸ್ತಾ ದರ ಬದಲಿಗೆ ಹೋಗುವುದೆಂಬ ಮಹಾ ಸಾಹಸದ ಪರಿಣಾಮದ ಅರಿವಿದ್ದರೂ ಉಸ್ತಾದರ ಆದೇಶದಂತೆ ತೆರಳಿದೆ. ಜಮಾ ಅತ್/ದರ್ಗಾ ಮುಖಂಡರು ಇರುಸು ಮುರುಸು ಅನುಭವಿಸಿದ್ದರೂ ಆಗ ಅಲ್ಲಿ ಮುದರ್ರಿಸ್ ಆಗಿದ್ದ ನನ್ನ ಊರಿನವರೇ ಆದ ಇಬ್‌ರಾಹೀಂ ಫೈಝಿ ಕಕ್ಕಿಂಜೆ ಎಲ್ಲವನ್ನೂ ಸಂಭಾಳಿಸಿದರು.

ಅದಾಗಿ ಐದು ವರ್ಷಗಳ ಬಳಿಕ 2001ರಲ್ಲಿ ಗುರುವರ್ಯರಾದ ಅಲೀಕುಂಞಿ ಉಸ್ತಾದರ ಸಲಹೆಯ ಮೇರೆಗೆ ನಾನು ಅದೇ ಇಚ್ಲಂಗೋಡ್ ಮುದರ್ರಿಸ್ ಹುದ್ದೆಗೆ 'ಸೆಲೆಕ್ಷನ್'ಗೆ ಹೋದೆ. ಸಣ್ಣ ಪ್ರಾಯ ಸಣಕಲು ದೇಹ, ಸವಕಲು ಗಡ್ಡ ಇವೆಲ್ಲ ಪ್ರತಿಷ್ಠಿತ ಇಚ್ಲಂಗೋಡ್ ಮುದರ್ರಿಸ್ ಹುದ್ದೆಯ ಪ್ರಮುಖ ಅನರ್ಹತೆಗಳಾಗಿದ್ದವು. ಅದರ ಹೊರತಾಗಿಯೂ ಕಮಿಟಿ ಸಭೆಯಲ್ಲಿ 'ಕಳೆದ ಉರೂಸಿಗೆ ಎ.ಪಿ.ಯ ಬದಲಿಗೆ ಬಂದವ' ಎಂಬ ಅರ್ಹತೆ ಫಲ ನೀಡಿತು. ನಾನು ಮುದರ್ರಿಸ್ ಆಗಿ ಆಯ್ಕೆಯಾದೆ. ಹೀಗೆ ವಿದ್ಯೆ ನೀಡಿದ ಗುರುಶ್ರೇಷ್ಠರು ನನಗೆ ಉದ್ಯೋಗ ವನ್ನೂ ಕೊಡಮಾಡಿದರು...

# 16

## ಸಂಘರ್ಷದ ದಶಕ ಸನದ್ ಪಡೆಯುವ ತನಕ...

ಮರ್ಕಝ್ ಶರೀಅತ್ ಕಾಲೇಜಿನ ಸ್ನಾತಕೋತ್ತರ ವಿಭಾಗ (ತಖಸ್ಸುಸ್) ಎಲ್ಲ ಅರ್ಥದಲ್ಲೂ ಅಪ್ರತಿಮವೆನಿಸಿತ್ತು. ಪ್ರತಿದಿನ ಬೆಳಗ್ಗೆ ಶೈಖುನಾ ಕಾಂತಪುರಂ ಉಸ್ತಾದ್‌ರ 'ತಫ್‌ಸೀರುಲ್ ಖುರ್‌ಆನ್' ವರ್ಣಿಸಲಸಾಧ್ಯವಾದ ಜ್ಞಾನ ಭಂಡಾರವಾಗಿತ್ತು. ಸಂಕೀರ್ಣವಾದ ಆಯತ್‌ಗಳನ್ನು ವಿವಿಧ ತಫ್‌ಸೀರ್ ಗ್ರಂಥಗಳ ಆಧಾರದಲ್ಲಿ ವ್ಯಾಖ್ಯಾನಿಸಿ, ವಿವರಿಸಿ, ಚರ್ಚಿಸಿ ಅವರು ಖುರ್‌ಆನಿನ ಅಗಾಧತೆಗಳಿಗೆ ನಮ್ಮನ್ನು ಕೊಂಡೊಯ್ಯುತ್ತಿದ್ದರು. ವಿದ್ಯಾರ್ಥಿಗಳಿಗೆ ಮುಕ್ತವಾಗಿ ಪ್ರಶ್ನೆ ಕೇಳಲು ಅವಕಾಶವಿದ್ದು ಕೆಲವೊಮ್ಮೆ ಅಲ್ಲಿ ಗಂಭೀರ ಸಂವಾದಗಳೇ ಸೃಷ್ಟಿಯಾಗುತ್ತಿದ್ದವು. ತರಗತಿಯಲ್ಲಿ ಅರಬಿ ಭಾಷೆ ಕಡ್ಡಾಯವಾಗಿತ್ತು.

ಶೈಖುಲ್ ಫಿಖ್‌ಹ್ ಮರುಹೂಂ ಚೆರುಶ್ಶೋಲ ಕುಂಞಿ ಮುಹಮ್ಮದ್ ಮುಸ್ಲಿಯಾರ್ ವಿಶ್ವೋತ್ತರ ಕರ್ಮಶಾಸ್ತ್ರ ಗ್ರಂಥ 'ತುಹ್‌ಫತುಲ್ ಮುಹ್‌ತಾಜ್' ಮುಂದಿಟ್ಟು ಜಟಿಲವಾದ ಫಿಖ್‌ಹ್ ಮಸ್‌ಅಲಗಳನ್ನು ಚರ್ವಿತ ಚರ್ವಣ ಮಾಡುತ್ತಿದ್ದರು. ಬೆಳೆದು ಬೆಳಗ ಬಯಸುವ ವರಿಗೆ ಮರ್ಕಝ್ ತಖಸ್ಸುಸ್ ಒಂದು ವಿಶ್ವ ವಿದ್ಯಾಲಯವಾಗಿತ್ತು. ಕಿತಾಬ್‌ಗಳ ಜತೆಯಲ್ಲಿ ಭಾಷಾಧ್ಯಯನ, ಸಂವಾದ, ಭಾಷಣ ತರಬೇತಿ, ವಾದ ಪ್ರತಿವಾದ ಎಲ್ಲದಕ್ಕೂ ಪುಷ್ಕಲ ಅವಕಾಶಗಳಿದ್ದವು. ಶರೀಅತ್ ಕಾಲೇಜಿನ ವಿದ್ಯಾರ್ಥಿ ಸಂಘಟನೆಯಾದ ಇಹ್ಯಾಉಸ್ಸುನ್ನಃದಲ್ಲಿ ತಖಸ್ಸುಸ್ ವಿದ್ಯಾರ್ಥಿಗಳಿಗೆ ಅವಕಾಶವಿಲ್ಲದ್ದರಿಂದ ನಾವು ನಾಲ್ಕೈದು ಮಂದಿ ಸೇರಿ ಒಂದು ವೇದಿಕೆಗೆ ರೂಪು ಕೊಟ್ಟು 'ಅಶ್‌ಅರಿಯ್ಯಃ ಸ್ಟಡೀ ಸೆಂಟರ್' ಎಂಬ ಹೆಸರಿಟ್ಟೆವು. ತಖಸ್ಸುಸ್‌ನ ಪ್ರಗಲ್ಭ ವಿದ್ಯಾರ್ಥಿಯೂ ಸ್ಟುಡೆಂಟ್ ಪಾರ್ಲಿಮೆಂಟ್‌ನ ಪ್ರಧಾನ ಮಂತ್ರಿಯೂ ಆಗಿದ್ದ ಕುಟ್ಟಶ್ಶೇರಿ ಅಬ್ದುಲ್ ಮಜೀದ್ ಸಖಾಫಿ ನಮ್ಮ ಪಕ್ಷದಲ್ಲಿದ್ದರು. ಇದರ ವತಿಯಿಂದ ನಾವು ವಿವಿಧ ವಿಷಯಗಳನ್ನು ಆರಿಸಿ 'ಮ್ಯಾಟರ್' ತಯಾರಿಸಿ ಶರೀಅತ್ ಕಾಲೇಜಿನ ವಿದ್ಯಾರ್ಥಿಗಳಿಗೆ ಉಚಿತ ಕ್ಲಾಸ್‌ಗಳನ್ನು ನಡೆಸಿ ಕೊಟ್ಟು ಮ್ಯಾಟರ್ ವಿತರಿಸುತ್ತಿ ದ್ದೆವು. 'ಕ್ರಿಸ್ತ್ಯಾನಿಸಂ' ನನ್ನ ಐಚ್ಛಿಕ ವಿಷಯ ವಾಗಿದ್ದರೆ ಸ್ಟಡೀ ಸೆಂಟರ್‌ನ ಇನ್ನೊಬ್ಬ ನಾಯಕ ಮಲಯಮ್ಮ ಅಬ್ದುಲ್ಲಾ ಸಖಾಫಿ 'ಖಾದಿಯಾನಿಸಂ' ಎಂಬ ವಿಷಯ ಆರಿಸಿ ಕೊಂಡಿದ್ದರು.

ಕ್ರೈಸ್ತ ಧರ್ಮದ ಬಗ್ಗೆ ಅಧಿಕೃತವಾಗಿ ಕಲಿತು, ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿ ಸಲು ಮತ್ತು ಅವರ ಪ್ರಶ್ನೆಗಳಿಗೆ ಉತ್ತರ ಕಂಡು ಹಿಡಿಯಲು ನಾನಂದು ಕಠಿನ ಶ್ರಮ ಪಟ್ಟಿದ್ದೆ. ಕ್ರೈಸ್ತ್ಯಾನಿಸಂ ಬಗ್ಗೆ ಅಧಿಕೃತವಾಗಿ ಅಧ್ಯಯನ ಮಾಡಿದ್ದ ಮರ್‌ಹೂಂ ಪಿ.ಯಂ. ಕೆ. ಫೈಝಿ ಮೋಂಙಂ ಹಾಗೂ ಡಾ. ಅಲಿ ಫೈಝಿ ಪತ್ತನಂತಿಟ್ಟ ಉತ್ತಮ ಮಾರ್ಗ ದರ್ಶನ ನೀಡಿದ್ದರು. ಆ ಕಾಲದಲ್ಲಿ ವಿವಿಧ ಭಾಷೆಗಳ ಬೈಬಲ್‌ಗಳನ್ನು ಸಂಗ್ರಹಿ ಸಲು ಮತ್ತು ಅಧ್ಯಯನ ಮಾಡಲು ಅವಕಾಶವುಂಟಾಯಿತು.

ಮಿತ್ರ ಅಬ್ದುಲ್ಲ ಸಖಾಫಿ ಮಲಯಮ್ಮ 'ಖಾದಿಯಾನಿಸಂ' ತಜ್ಞರಾಗಲು ಬಯಸಿದ್ದ ರಿಂದ ನಾವಿಬ್ಬರೂ ಅನೇಕ ಖಾದಿಯಾನೀ ಮುಖಂಡರನ್ನೂ ಭೇಟಿ ಮಾಡಲು ನಿರ್ಧರಿಸಿದೆವು. 1996 ಜುಲೈ 6 ಶನಿವಾರ ಅಪರಾಹ್ನ ಮೂರು ಗಂಟೆಗೆ ಕೋಝಿ ಕ್ಕೋಡ್‌ನಲ್ಲಿ ಖಾದಿಯಾನೀ ಕೇರಳ ಅಮೀರ್ ಎ.ಪಿ. ಕುಂಞಾಮು ಅವರನ್ನು ಭೇಟಿಯಾದೆವು. ಮುಬಲ್ಲಿಗ್ (ಪ್ರಚಾರಕ) ಝಫರ್ ಅಹ್‌ಮದ್ ಎಂಬ ಯವಕ ಅವರ ಜತೆಗಿದ್ದ. ಅನೇಕ ಕ್ಯಾಸೆಟ್‌ಗಳನ್ನು ಪ್ಲೇ ಮಾಡಿ ಖಾದಿಯಾನಿಸಂ ಬಡಿಸಿದ ಅವರು ನಮ್ಮ ಅಪೇಕ್ಷೆಯಂತೆ ಕೆಲವು ಪುಸ್ತಕಗಳನ್ನು ದಯಪಾಲಿಸಿದರು. ತಾನು ಖಾದಿಯಾನಿ ಯಾಗಲು ಕಾರಣ ಕೇಳಿದಾಗ ಜಮಾಅತೆ ಇಸ್ಲಾಮಿ ಮುಖಂಡ ಕೆ.ಸಿ. ಅಬ್ದುಲ್ಲ ಮೌಲವಿ ಒಂದು ವೇದಿಕೆಯಲ್ಲಿ ಖಾದಿ ಯಾನಿ ಮತದ ಸ್ಥಾಪಕ ಮಿರ್ಝಾ ಗುಲಾಂ ಅಹ್‌ಮದ್‌ನನ್ನು ವಾಚಾಮಗೋಚರ ವಾಗಿ ನಿಂದಿಸಿದಾಗ ಆತನ ಬಗ್ಗೆ ಕನಿಕರವುಂ ಟಾಗಿ ಆತನ ಕುರಿತು ಕಲಿಯಬೇಕೆನಿಸಿತಂತೆ. ಕಲಿತಾಗ 'ಖಾದಿಯಾನಿಸಂ' ಸತ್ಯಮಾರ್ಗ ವೆಂದು ಗೊತ್ತಾಯಿತಂತೆ. ಹೀಗೇ ಮುಂದು ವರಿದಿತ್ತು ಅಮೀರರ ಸಂಭಾಷಣೆ. ಈ ಮತ ಸ್ವೀಕರಿಸುವ ಮೊದಲು ನೀವೇನಾಗಿದ್ದಿರಿ ಅಂತ ಕೇಳಿದಾಗ ನಾನೊಬ್ಬ ಅಪ್ಪಟ ಮುಜಾಹಿದ್ (ಸಲಫಿ) ಕಾರ್ಯಕರ್ತನಾ ಗಿದ್ದೆ ಎಂದಿದ್ದರು. ಆ ಬಳಿಕ ಮುಬಲ್ಲಿಗ್ ಝಫರ್ ಅಹ್‌ಮದ್‌ನ ಸಹಕಾರದೊಂದಿಗೆ ಅವರ ಇನ್ನಷ್ಟು ಕೇಂದ್ರಗಳಿಗೆ ತೆರಳಿ ಅವರ ಪುಸ್ತಕಗಳನ್ನು ಸಂಗ್ರಹಿಸಲು ಪ್ರಯತ್ನಿಸಿ ದ್ದೆವು. ನಮ್ಮ ಸಂದರ್ಶನ ವಿವರವನ್ನು ಎ.ಪಿ. ಉಸ್ತಾದರಿಗೆ ತಿಳಿಸುತ್ತಿದ್ದೆವು. ಮುಂದೆ ಕೇರಳದ ಹದಿನಾಲ್ಕು ಜಿಲ್ಲೆಗಳಲ್ಲಿ ಉಸ್ತಾದ್ ಖಾದಿಯಾನಿಸಂ ವಿರುದ್ಧ ಅಭಿಯಾನ ಏರ್ಪಡಿಸಿದಾಗ ನಾವು ತಂದಿದ್ದ ಪುಸ್ತಕಗಳು ಅವರಿಗೆ ಉಪಕರಿಸಿದ್ದವು.

'ಅಶ್‌ಅರಿಯ್ಯಃ ಸ್ಟಡೀ ಸೆಂಟರ್' ವತಿಯಿಂದ ನಾವು ಏರ್ಪಡಿಸುತ್ತಿದ್ದ ಇಂತಹ ಕ್ಲಾಸ್‌ಗಳು ಮರ್ಕಝ್‌ನ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸೆಳೆದಿತ್ತು. ನಾವು ಕೊಟ್ಟ ಮ್ಯಾಟರ್‌ನಲ್ಲಿ ಕೆಲವರು ಮರ್ಕಝ್ ಮಸ್ಜಿದುಲ್ ಹಾಮಿಲಿಯಲ್ಲಿ ಶುಕ್ರವಾರ ಜುಮಾ ನಂತರ ಭಾಷಣ ಮಾಡಿ ಕೊನೆ ಯಲ್ಲಿ 'ಅಶ್‌ಅರಿಯ್ಯಃ' ಕ್ಕೆ ಧನ್ಯವಾದ ಹೇಳುತ್ತಿದ್ದರು. ಇದು ಕ್ರಮೇಣ ಇಹ್ಯಾ ಉಸ್ಸುನ್ನಃದವರ ಗಮನಕ್ಕೆ ಬಂದು, ಇದು ಅತಿಯಾಯಿತೆಂದು ಅವರಿಗೆ ಅನಿಸಿದ್ದರಿಂದ ನಮ್ಮಲ್ಲಿ ವಿನಂತಿಸಿ ಕೊನೆಯ ಧನ್ಯವಾದ ಕೈ ಬಿಡುವಂತೆ ತಿಳಿಸಿದ್ದರು.

ಖಾದಿಯಾನಿಸಂ, ಕ್ರಿಸ್ತ್ಯಾನಿಸಂ, ಫಾಶಿಸಂ ಮುಂತಾದ ವಿಷಯಗಳ ಬಗ್ಗೆ ಕ್ಲಾಸ್ ಮತ್ತು ಮ್ಯಾಟರ್‌ಗಳು ಬೇಕಿದ್ದರೆ ಸಂಪರ್ಕಿಸಿ ಎಂದು ನಾವು ಅಲ್ಲಲ್ಲಿ ಭಿತ್ತಿಪತ್ರ ಅಂಟಿಸುತ್ತಿದ್ದೆವು. ಇದರಿಂದಾಗಿ ನಮ್ಮನ್ನು ಹುಡುಕಿ ಹಲವು ವಿದ್ಯಾರ್ಥಿಗಳು ತಖಸ್ಸುಸ್ ಕೊಠಡಿಗೆ ಬರುತ್ತಿದ್ದರು. ಇದು ನಮ್ಮ ಕೆಲವು

ಸಹಪಾಠಿಗಳಿಗೆ ಹಿಡಿಸಲಿಲ್ಲ. ಒಂದು ದಿನ ಅಂತಹ ಕೆಲವರು ಸಭೆ ಸೇರಿ ನಮ್ಮ ಸೆಂಟರ್‌ಗೆ ವಿರುದ್ಧವಾಗಿ 'ಇಮಾಂ ರಾಝಿ ಫೌಂಡೇಶನ್' ಎನ್ನುವ ಇನ್ನೊಂದು ವೇದಿ ಕೆಗೆ ರೂಪು ಕೊಟ್ಟರು. ಅವರೂ ಕೆಲವು ವಿಷಯ ಕಲಿತು ಮ್ಯಾಟರ್ ಸಿದ್ಧಪಡಿಸಿ ವಿತರಿಸಲು ಬಯಸಿದ್ದರು. ಇದು ನಮ್ಮ ಮಧ್ಯೆ ಸ್ವಲ್ಪ ಜಟಾಪಟಿಗೆ ಕಾರಣವಾಗಿತ್ತು. ಪರಿಣಾಮವಾಗಿ 96 ಜೂನ್ ಹದಿನೇಳು ಸೋಮವಾರ ರಾತ್ರಿ 'ಇಸ್ತಿಗಾಸ' ಎಂಬ ವಿಷಯದಲ್ಲಿ ಪರಸ್ಪರ ವಾದ ಪ್ರತಿವಾದ ಇಟ್ಟು ಕೊಂಡೆವು. ನಾವು ಇಸ್ತಿಗಾಸದ ಪರವಾಗಿ ನಿಂತು ವಾದಿಸಿ ಜಯಿಸಿದೆವು. ಕೊನೆಯ ತನಕ 'ಅಶ್‌ಅರಿಯ್ಯಃ ಸೆಂಟರ್' ಮತ್ತು 'ರಾಝಿ ಫೌಂಡೇಶನ್' ಆರೋಗ್ಯ ಕರ ಹೋರಾಟವನ್ನು ಚಾಲ್ತಿಯಲ್ಲಿಟ್ಟಿತ್ತು. ಅನೇಕ ವಿಷಯಗಳ ಅಧ್ಯಯನಕ್ಕೆ ಇದು ನಿಮಿ ತ್ತವಾಯಿತು ಎಂಬುದು ಉಲ್ಲೇಖನೀಯ.

ತಖಸ್ಸುಸ್ ವಿದ್ಯಾರ್ಥಿಗಳಿಗೆ ಇಹ್ಯಾಉ ಸ್ಸುನ್ನಃ ವಿದ್ಯಾರ್ಥಿ ವೇದಿಕೆಯಲ್ಲಿ ಅವಕಾಶ ವಿರಲಿಲ್ಲ. ಆದರೆ ಕರ್ನಾಟಕ ವಿದ್ಯಾರ್ಥಿ ಸಂಘವಾದ ಕೆ.ಎಸ್.ಓ. ನಲ್ಲಿ ಈ ನಿಯಮ ವಿರಲಿಲ್ಲ. ಆದ್ದರಿಂದ ಮಾರ್ಚ್ 26 ಮಂಗ ಳವಾರ ನಡೆದ ಸಂಘದ ಮಹಾಸಭೆಯಲ್ಲಿ ಅಧ್ಯಕ್ಷನ ಹೊಣೆಗಾರಿಕೆ ನನಗೆ ನೀಡಲಾಯಿತು.

ಅದಾಗಲೇ ರಾಜ್ಯ ಎಸ್ಸೆಸ್ಸೆಫ್‌ನ ಸಂಘ ಟನಾ ಕಾರ್ಯದರ್ಶಿಯಾಗಿಯೂ ಆಯ್ಕೆ ಗೊಂಡಿದ್ದರಿಂದ ಮಾರ್ಚ್ 28 ಗುರುವಾರ ಬೆಂಗಳೂರು ಜಿಲ್ಲಾ ಎಸ್ಸೆಸ್ಸೆಫ್ ರಚನಾ ಸಮಾವೇಶಕ್ಕೆ ಆಹ್ವಾನ ಬಂದಿತ್ತು. ಮೆಜೆಸ್ಟಿಕ್‌ನ, ಹಿಂದೂಸ್ಥಾನ್ ಲಾಡ್ಜ್ ಸಭಾಂಗಣದಲ್ಲಿ ನಡೆದ ಸಮಾವೇಶದಲ್ಲಿ ರಾಜ್ಯ ಎಸ್ಸೆಸ್ಸೆಫ್‌ನ ಪ್ರಧಾನ ಕಾರ್ಯದರ್ಶಿ ಜಿ.ಎಂ. ಕಾಮಿಲ್ ಸಖಾಫಿ ಮತ್ತು ಯಅ್‌ಕೂಬ್ ಯೂಸುಫ್ ಹೊಸನಗರ್ ಮುಖ್ಯ ಆಹ್ವಾನಿತರಾಗಿ ಬಂದಿದ್ದರು. ನನ್ನ ಸಹಪಾಠಿಯಾಗಿದ್ದ ಅಬ್ದುಲ್ ಜಬ್ಬಾರ್ ಬಾಖವಿ, ಸಖಾಫಿ, ಬೆಂಗಳೂರು ಜಿಲ್ಲಾಧ್ಯ ಕ್ಷರಾಗಿ ಆ ದಿನ ನೇಮಕಗೊಂಡಿದ್ದರು. ಅನಂತರ ನಾವೆಲ್ಲ ಸೇರಿ ಶಿವಾಜಿನಗರದಲ್ಲಿ ಅಖಿಲ ಭಾರತ ಸುನ್ನೀ ಜಂಇಯ್ಯತುಲ್ ಉಲಮಾ ಅಧ್ಯಕ್ಷರಾಗಿದ್ದ ಮರ್‌ಹೂಂ ಮೌಲಾನಾ ಅಬ್ದುಲ್ ಹಫೀಳ್ ಜುನೈದಿ ಅವರನ್ನೂ ಭೇಟಿಯಾಗಿದ್ದೆವು.

ಮೇ 16 ಗುರುವಾರ ರಾತ್ರಿ ಸುಳ್ಯದಲ್ಲಿ ನನಗೆ ಭಾಷಣ ಕಾರ್ಯಕ್ರಮವಿದ್ದು ಅದಕ್ಕಾಗಿ ಮರ್ಕಝ್‌ನಿಂದ ಹಿಂದಿನ ರಾತ್ರಿ ಹೊರಟಿದ್ದೆ. ಕೋಝಿಕ್ಕೋಡ್ ರೈಲ್ವೇ ನಿಲ್ದಾಣದಲ್ಲಿ ಮಂಗಳೂರಿಗೆ ರೈಲು ಕಾಯು ತ್ತಾ ಇರುವುದರ ಮಧ್ಯೆ ರಾತ್ರಿ 2ಗಂಟೆಗೆ ನನ್ನ ವಿ.ಐ.ಪಿ. ಅಲ್ಫಾ ಸೂಟ್‌ಕೇಸನ್ನು ಯಾರೋ ಅಪಹರಿಸಿದ್ದರು. ಅಧಿಕೃತ ಬಟ್ಟೆಗಳನ್ನು ಬದಲಾಯಿಸಿ ಯಾತ್ರಿಕ ವೇಷ ತೊಟ್ಟಿದ್ದೆ. ಸ್ವಲ್ಪ ಅಶ್ರದ್ಧೆ ತಾಳಿದಾಗ ಸಮೀಪದಲ್ಲಿಟ್ಟಿದ್ದ ಪೆಟ್ಟಿಗೆ ಕಾಣೆ. ರೈಲ್ವೇ ಪೋಲೀಸ್‌ಗೆ ದೂರು ನೀಡಿ ಅವರ ಜತೆ ಇಡೀ ಕೋಝಿಕ್ಕೋಡ್ ಸುತ್ತಾಡಿದರೂ ಪೆಟ್ಟಿಗೆ ಪತ್ತೆಯಾಗಲಿಲ್ಲ. ಎರಡು ಜತೆ ಬಟ್ಟೆಯ ಜತೆಗೆ ಅಮೂಲ್ಯವಾದ ಒಂದು ಡೈರಿ ನಷ್ಟವಾದದ್ದು ಇಂದಿಗೂ ಅರಗಿಸಿ ಕೊಳ್ಳಲು ಆಗುವುದಿಲ್ಲ. ಮತ್ತೆ ತಡ ರಾತ್ರಿ ಮರ್ಕಝ್‌ಗೆ ಮರಳಿ ಬಟ್ಟೆ ಬದಲಾಯಿಸಿ ಬೆಳಗ್ಗೆ ಊರು ತಲುಪಿದೆ. ಮರುದಿನ ಜುಮಾ ನಮಾಝ್‌ಗೆ ಅಳಕೆ ಮಜಲು ಮಸೀದಿಗೆ ಹೋದಾಗ ಅಲ್ಲಿ ಖತೀಬ್ ಆಗಿದ್ದ ಸಹಪಾಠಿ ಸೇರಾಜೆ ಮಹ್‌ಮೂದ್ ಸಖಾಫಿ ಅವರಿವರ ಕಿವಿಯಲ್ಲಿ ವಿಷಯ ಅರುಹಿ ನನ್ನ 'ಗೌರವ'ಕ್ಕೆ ಚ್ಯುತಿ ಬಾರದ ಹಾಗೆ ಪುಟ್ಟ ಮಟ್ಟದ 'ಸಂತ್ರಸ್ತ ನಿಧಿ' ಒದಗಿಸಿದ್ದರು.

ದ.ಕ. ಜಿಲ್ಲಾ ಎಸ್ಸೆಸ್ಸೆಫ್‌ನ ಅಧೀನದಲ್ಲಿ ಭಾಷಣಗಾರರಿಗೆ ತರಬೇತಿ ನೀಡಲು ಆಗ 'ಇಸ್ಲಾಮಿಕ್ ಸ್ಪೀಕರ್ಸ್ ಕೌನ್ಸಿಲ್' (ಐ. ಎಸ್.ಸಿ) ಎಂಬ ಉಪಸಮಿತಿ ಚಾಲ್ತಿಯಲ್ಲಿದ್ದು ಡಿ.ಎ. ಹಂಝ ಸಖಾಫಿ ಆತೂರು ಸಂಚಾಲಕರಾಗಿದ್ದರು. ಅದರ ವತಿಯಿಂದ ಮೇ 17 ಮತ್ತು 18ರಂದು ಬಂಟ್ವಾಳ ತಾಲೂಕಿನ ವಳವೂರು ಮದ್ರಸಾದಲ್ಲಿ ಶಿಬಿರ ಏರ್ಪಡಿಸಲಾಗಿತ್ತು. ಆ ಶಿಬಿರದಲ್ಲಿ ನಾನು ಮಾತನಾಡುತ್ತಿದ್ದಾಗ ಗಣ್ಯರೊಬ್ಬರು ಆಗಮಿಸಿದ್ದು ಅವರು ಅತಿಗಣ್ಯರೊಬ್ಬರ ಮಗಳ ಪತಿಯಾಗಿದ್ದರು. ಅವರನ್ನು ಸ್ವಾಗತಿಸುತ್ತಾ 'ಅಳಿಯ' ಎಂಬ ಪದ ಬಳಕೆ ತಿಳಿಯದೆ ಮಗಳ 'ಬರ್ತಾವು' ಅಂದಿದ್ದೆ. ಸಭೆ ಗೊಳ್ಳನೆ ನಕ್ಕಿತ್ತು. ಆಗ ನಾನು ಕನ್ನಡ ಭಾಷೆಯಲ್ಲಿ ಮೊದಲ ಮಾತಿನ ಹುಡುಗ, ಪರಭಾಷಾ ಆಕ್ರಮಣದಲ್ಲಿ ನನ್ನ ಕನ್ನಡ ಸೊರಗಿತ್ತು.

'96 ಆಗಸ್ಟ್ 19 ಸೋಮವಾರ ಬೆಳಗ್ಗೆ ಮರ್ಕಝ್ ಶರೀಅತ್ ಕಾಲೇಜಿನಲ್ಲಿ ವಿದ್ಯಾ ರ್ಥಿಗಳ ಸಾಹಿತ್ಯ ಸ್ಪರ್ಧೆ 'ಮುಸಾಬಖಃ'ದ ಸಿದ್ಧತೆ ನಡೆಯುತ್ತಿತ್ತು. ಅದಾಗಲೇ ಬೆಳ ಗ್ಗಿನ ರೇಡಿಯೋದಲ್ಲಿ ಶಂಸುಲ್ ಉಲಮಾ ಇ.ಕೆ. ಅಬೂಬಕರ್ ಮುಸ್ಲಿಯಾರ್‌ರವರ ನಿಧನವಾರ್ತೆ ಬಿತ್ತರವಾಯಿತು. ಮುಸಾ ಬಖಃ ರದ್ದಾಯಿತು. ನಾವೆಲ್ಲರೂ ಮರ್ಕ ಝ್‌ಗೆ ಸಮೀಪವೇ ಇರುವ 'ವೆಳ್ಳಿಮಾಡ್ ಕುನ್ನ್'ನಲ್ಲಿರುವ ಶಂಸುಲ್ ಉಲಮಾರ ವಸತಿಗೆ ತೆರಳಿದೆವು. ಜನಾಝಃ ದರ್ಶಿಸಿದ ವರಲ್ಲಿ ಮೊದಲಿಗರು ಮರ್ಕಝ್ ಶರೀಅತ್ ಕಾಲೇಜಿನ ನೂರಾರು ಮುತಅಲ್ಲಿಮ ರಾಗಿದ್ದರು.

ಮಲಪ್ಪುರಂ ಜಿಲ್ಲೆಯ ತಾನೂರ್, ಇಸ್‌ಲಾಹುಲ್ ಉಲೂಂ ಅರಬಿಕ್ ಕಾಲೇ ಜಿನಲ್ಲಿ ನನ್ನ ತಂದೆ ಓದುತ್ತಿದ್ದಾಗ ಅಲ್ಲಿ ಶಂಸುಲ್ ಉಲಮಾ ಕೆಲಕಾಲ ಮುದರ್ರಿಸ್ ಆಗಿದ್ದು ತಂದೆಯ ಗುರುವರ್ಯರಾಗಿದ್ದರು. ಈ ಗೌರವದಿಂದಾಗಿ ಶಂಸುಲ್ ಉಲಮಾರನ್ನು ಸಂದರ್ಶಿಸುತ್ತಿರಬೇಕೆಂದು ತಂದೆ ನನಗೆ ಸಲಹೆ ನೀಡಿದ್ದರು. ಅದರಂತೆ ಮರ್ಕಝಿನ ಸಂಜೆಯ ಬಿಡುವು ವೇಳೆಗಳಲ್ಲಿ ನಾನು ಇ.ಕೆ. ಉಸ್ತಾದರನ್ನು ಅವರ ಮನೆಯಲ್ಲಿ ಭೇಟಿ ಮಾಡುತ್ತಿದ್ದೆ. ಹೆಚ್ಚಿನ ಮಾತುಕತೆಗೆ ಅಲ್ಲಿ ಅವಕಾಶ ಕಡಿಮೆಯಿ ದ್ದರೂ ಸಂದರ್ಶಿಸಿ ಬರಲು ಮುಕ್ತ ಅವಕಾಶ ವಿತ್ತು. ಒಮ್ಮೆ ಸಂದರ್ಶನ ಮಧ್ಯೆ ಮರ್ಕ ಝ್‌ನಲ್ಲಿ ಎ.ಪಿ. ಅಲ್ಲದೆ ಬೇರೆ ಯಾರೆಲ್ಲ ಮುದರ್ರಿಸರು ಇದ್ದಾರೆ ಅಂತ ಕೇಳಿದ್ದರು. ನಾನು ಒಂದಿಬ್ಬರ ಹೆಸರು ಹೇಳಿದಾಗ 'ಒಳ್ಳೆಯದು' ಎಂದು ಉತ್ತರಿಸಿದ್ದರು.

ಬಯಸಿದ್ದಷ್ಟು ಎತ್ತರಕ್ಕೆ ಬೆಳೆಯಲು ಮರ್ಕಝ್‌ನಲ್ಲಿ ವಿಪುಲ ಅವಕಾಶಗಳಿ ದ್ದುವು. ಆದರೆ ಅದನ್ನು ಸದುಪಯೋಗ ಪಡಿಸುವ ಮನಸ್ಸು ಮತ್ತು ಬಿಡುವು ಇರಬೇಕಷ್ಟೆ. ಸಹಪಾಠಿ ಅಬ್ದುರ್ರಶೀದ್ ಸಖಾಫಿ ವಳ್ಳತ್ತೋಳ್ ನಗರ್ (ತ್ರಿಶೂರ್) ಅವರ ಪ್ರೇರಣೆಯಿಂದಾಗಿ ಸೆಪ್ಟಂಬರ್ 27 ಶುಕ್ರವಾರದಿಂದ ಮರ್ಕಝ್ ಡ್ರೈವಿಂಗ್ ಸ್ಕೂಲಿಗೆ ಸೇರಿದ್ದು ನಲವತ್ತು ಕ್ಲಾಸ್‌ಗಳ ಬಳಿಕ ಡಿಸೆಂಬರ್ 6ರಂದು ಕೊಡುವಳ್ಳಿ, ಆರ್.ಟಿ. ಓ. ನ ಮುಂದೆ ಪರೀಕ್ಷೆ ಜಯಿ ಸಿದ್ದು ಮತ್ತೆ ಲೈಸನ್ಸ್ ಪಡೆದದ್ದು ಯಾವುದೂ ವಿಶೇಷವೆನಿಸಲಿಲ್ಲ. ಆದರೆ ತಪ್ಪು ಸಂಭವಿಸಿದಾಗ ಗುರುವರ್ಯ ಅರಮಾನ್ ಕುಟ್ಟಿಕ್ಕನಿಂದ ತಿಂದ ಅಸಹ್ಯ ಬೈಗುಳ ಮತ್ತು ಪೆಟ್ಟು ಯಾವತ್ತೂ ಮರೆಯುವಂತಿರಲಿಲ್ಲ.

'ಸಖಾಫಿ' ತರಗತಿ ಪೂರ್ತಿಗೊಳಿಸುವ ಮುಂಚೆ ತಂದೆಯ ಒತ್ತಡದಿಂದಾಗಿ ಅನೇಕ ಬಾರಿ ಗಲ್ಫ್ ಪ್ರವಾಸದ ಸವಾಲು ಎದುರಾಗಿತ್ತು. ಎಲ್ಲವನ್ನೂ

ಕೂದಲಳತೆ ಯಿಂದ ತಪ್ಪಿಸಿಕೊಂಡು 'ಓದು' ಮುಂದು ವರಿಸಿದ್ದೆ. ಇದೀಗ ಎರಡು ಪದವಿಗಳಿದ್ದು ಮುಂದೆ ಯಾವುದೇ ಧಾರ್ಮಿಕ ಹುದ್ದೆ ಗಳನ್ನು ನಿಭಾಯಿಸುವುದಕ್ಕೆ ಅಭ್ಯಂತರವಿಲ್ಲ ಎಂಬ ಸ್ಥಿತಿ ಬಂದಾಗ, ನಾನೇ ಸ್ವಯಂ ಪ್ರೇರಿತನಾಗಿ ಗಲ್ಫ್ ಕನಸಿಗೆ ಜೀವ ಕೊಟ್ಟೆ. ಬಡ ಕುಟುಂಬಗಳ ಒಬ್ಬ ಸದಸ್ಯನಿಗೆ ವೀಸಾ ನೀಡಿ ಅವರ ಕುಟುಂಬಕ್ಕೆ ನೆರವಾಗುವ ಯೋಜನೆಯನ್ನು ಆಗ ಮರ್ಕಝ್ ಚಾಲ್ತಿಗೆ ತಂದಿತ್ತು. ಅಬುದಾಬಿಯ 'ಅಡ್ನೋಕ್' ಕಂಪೆನಿಯು ನೂರಾರು ವೀಸಾಗಳನ್ನು ಈ ನಿಟ್ಟಿನಲ್ಲಿ ಮರ್ಕಝ್‌ಗೆ ನೀಡಲು ಮುಂದೆ ಬಂದಿತ್ತು. ಅಬೂದಾಬಿ ನ್ಯಾಶನಲ್ ಆಯಿಲ್ ಕಂಪೆನಿ (ADNOL) ಯಲ್ಲಿ ವಾಹನಗಳಿಗೆ ಪೆಟ್ರೋಲ್ ತುಂಬಿಸು ವುದರಿಂದ ಪ್ರಾರಂಭಿಸಿ ವಿವಿಧ ಹಂತದ ಹುದ್ದೆಗಳ ವೀಸಾಗಳು ಅದರಲ್ಲಿದ್ದವು. ಸಹಪಾಠಿ ಮಿತ್ರ ನುಜೂಮುದ್ದೀನ್ ಸಖಾಫಿ ವರ್ಕಲ ಎಂಬವರ ಪ್ರೇರಣೆಯಿಂದ ನಾನೂ 'ವೀಸಾ'ಕ್ಕೆ ಅಪೇಕ್ಷಿಸಿದೆ. ಕರ್ನಾಟಕ ಕೋಟದಿಂದ ನನಗೆ ವೀಸಾ ಸಿಗುವುದು ಖಾತರಿಯೆಂದೂ ಆದ್ದರಿಂದ ಪ್ರಯಾಣದ ಅರ್ಹತೆಗಳನ್ನು ತಕ್ಷಣ ಗಳಿಸಿಕೊಳ್ಳಬೇ ಕೆಂದೂ ಅನಧಿಕೃತ ಧ್ವನಿಗಳು ಕೇಳಿಬಂದವು. ಶಿಷ್ಟದಿನಗಳನ್ನು ಕಂಪ್ಯೂಟರ್ ಮತ್ತು ಸ್ಪೋಕನ್ ಅರಬಿ ಕಲಿಯಲು ಮೀಸಲಿಟ್ಟೆ. ಪಾಸ್‌ಪೋರ್ಟ್ ಪ್ರತಿ ಮತ್ತು ಭಾವ ಚಿತ್ರ ಗಳನ್ನು ನೀಡಿ ಅಬುದಾಬಿ ಪ್ರವಾಸದ ದಿನ ಕ್ಕಾಗಿ ಚಾತಕ ಪಕ್ಷಿಯಂತೆ ಕಾಯ ಹತ್ತಿದೆ. ತಖಸ್ಸುಸ್ ಮೊಟಕುಗೊಳಿಸಲು ನಿರ್ಧರಿಸಿದೆ.

ಅದೊಂದು ದಿನ ಮರ್ಕಝ್ ಮ್ಯಾನೇ ಜರ್ ಸಿ. ಮುಹಮ್ಮದ್ ಫೈಝಿಯಿಂದ ಬುಲಾವ್ ಬಂತು. ಹೋದಾಗ ಅವರು ನನ್ನ 'ಅಡ್ನೋಕ್' ಅಪೇಕ್ಷೆ ಮತ್ತು ಪಾಸ್ ಪೋರ್ಟ್ ಪ್ರತಿಯನ್ನು ಹಿಡಿದು ಕೊಂಡಿ ದ್ದರು. ಇನ್ನು ಅಬುದಾಬಿಗೆ ನಾನು ಹೋಗಿ ಯೇ ಬಿಟ್ಟೆ ಎಂದು ಮನಸ್ಸು ಒತ್ತಿಹೇಳಿತು. ಸಿ. ಉಸ್ತಾದ್ ಈಗ ವೀಸಾದ ಪ್ರತಿ ಕೊಡಲು ಕರೆದಿರುವುದಾಗಿ ಬುದ್ಧಿ ತೀರ್ಪು ನೀಡಿತು. ಕ್ಷಣ ಮಾತ್ರದಲ್ಲಿ... ಇಲ್ಲಿ ಭಾಷಣ ಮಾಡಿ ದೀನೀ ಕೆಲಸ ಮಾಡಬೇ ಕಾದ ನೀನು ಗಲ್ಫ್‌ಗೆ ಹೋಗಿ ಪೆಟ್ರೋಲ್ ಹಾಕುವುದಾ? ಎಂದು ಸಿ. ಉಸ್ತಾದ್ ಅಬ್ಬರಿಸಿದರು. ನೋಡ ನೋಡುತ್ತಿದ್ದಂತೆ ಯೇ ನನ್ನ ಕಾಗದ ಪತ್ರಗಳನ್ನು ಚಿಪ್ಪಾ ಚೂರು ಮಾಡಿ ತಿಪ್ಪೆಗೆಸೆದರು. ಭೂಮಿಯೇ ಕುಸಿದಂತೆ ಭಾಸ. ಭವಿಷ್ಯಕ್ಕೆ ಕತ್ತಲಡರಿದ ಭಾವ. ತಲೆ ತಗ್ಗಿಸಿ ಅಲ್ಲಿಂದ ಹೊರ ನಡೆದೆ.

1996 ಡಿಸೆಂಬರ್ 20 ರಂದು ಮರ್ಕಝುಸ್ಸಖಾಫತಿಸ್ಸುನ್ನಿಯ್ಯ:ದ ಹತ್ತೊಂಬತ್ತನೇ ವಾರ್ಷಿಕ, ಎಂಟನೇ ಸನದು ದಾನ ಸಮ್ಮೇಳನಕ್ಕೆ ಧ್ವಜಾರೋ ಹಣವಾಯಿತು. ಡಿಸೆಂಬರ್ 22 ಆದಿತ್ಯ ವಾರ ಅಪರಾಹ್ನ'ಮೌಲವಿ ಫಾಝಿಲ್ ಸಖಾಫಿ'ಯ ಕಪ್ಪು ಮತ್ತು 'ಮೌಲವಿ ಕಾಮಿಲ್ ಸಖಾಫಿ'ಯ ಹಳದಿ ಬಣ್ಣದ ಗೌನುಗಳನ್ನು ನಮಗೆ ವಿತರಿಸಲಾಯಿತು. ಅಂದು ರಾತ್ರಿ ನಡೆದ ಬೃಹತ್ ಸಮಾರೋಪ ಸಮ್ಮೇಳನದಲ್ಲಿ ಲಕ್ಷಾಂತರ ಸತ್ಯವಿಶ್ವಾಸಿಗಳ ಸಮ್ಮುಖದಲ್ಲಿ ನಮಗೆ ಸನದ್ ನೀಡ ಲಾಯಿತು. ಹೀಗೆ ಆಲಿಂ ಪದವಿ ಗಳಿಸಬೇ ಕೆಂಬ ನನ್ನ ಜೀವಮಾನದ ಅಪೇಕ್ಷೆ ಅಂದು ಸಫಲವಾಗಿತ್ತು. ನನ್ನ ಪ್ರಕಾರ ಈ ಕ್ಷಣ ನನಗೆ ಊಹಿಸಲೂ ಸಾಧ್ಯವಿರಲಿಲ್ಲ. ಒಂಬತ್ತುವರೆ ವರ್ಷಗಳ ನನ್ನ ಈ ಅಸಾಧ್ಯ ಹೋರಾಟದ ಮಧ್ಯೆ ಎಲ್ಲೋ ಕುಸಿದು ಬಿದ್ದು ಯಾವುದೋ ಅರಬ್ ಮರುಭೂ ಮಿಯಲ್ಲಿ ಬದುಕಿಗಾಗಿ ಬೆವರಿಳಿಸಬೇಕಾಗಿದ್ದ ನಾನು ಅಲ್ಲಾಹನ ಅನುಗ್ರಹದಿಂದ ಈ ಸೌಭಾಗ್ಯಕ್ಕೆ ಅರ್ಹನಾಗಿದ್ದೆ. ಜಗದ್ರಕ್ಷಕನಿಗೆ ಸ್ತುತಿಸ್ತೋತ್ರಗಳರ್ಪಿಸುವುದರ ಜತೆ, ಎಲ್ಲೂ ಬಿದ್ದು ಬಿಡದಂತೆ ನನ್ನನ್ನು ಹಿಡಿದಿಟ್ಟ, ಒಬ್ಬ ಮಹಾ ಮನುಷ್ಯನ ಬಗ್ಗೆ ನಾನು ಬರೆಯಲೇಬೇಕು. ಅವರು ನನಗೆ ನೆರವಾದರು. ನೆರಳಾದರು...

# 17

## ಪಯೋಟ ತಂಙಳ್ ಎಂಬ ದೈತ್ಯ ವೃಕ್ಷದ ನೆರಳಲ್ಲಿ...

1987 ಜೂನ್ ಹದಿನೈದರಿಂದ 1996 ಡಿಸೆಂಬರ್ ಇಪ್ಪತ್ತೆರಡರ ತನಕದ ದೀರ್ಘವಾದ ಒಂಬತ್ತುವರೆ ವರ್ಷದ ನನ್ನ ದರ್ಸ್ ಜೀವನ ಒಂಟಿ ಬಿದಿರಿನ ಮೇಲೆ ನಡೆಯುವ ಅನುಭವವಾಗಿತ್ತು. ತಂದೆಯ ಆರ್ಥಿಕ ಸಂಕಷ್ಟಗಳಿಂದಾಗಿ ನನ್ನ ದರ್ಸ್ ಮುಂದುವರಿಕೆಯಲ್ಲಿ ಅವರಿಗೆ ಆಸಕ್ತಿ ಇದ್ದರೂ ತನ್ನ ಆರ್ಥಿಕತೆಗೆ ಬಲ ಒದಗಿಸಲು ಅವರು ಉದ್ದೇಶಿಸಿದ್ದು ನನ್ನ ಗಲ್ಫ್ ಪ್ರಯಾಣ.

ದರ್ಸ್‌ನ ಐದನೇ ವರ್ಷದಲ್ಲಂತೂ ಕನಸಿನ ಮಲಪ್ಪುರಂ ಜಿಲ್ಲೆಗೆ ದರ್ಸ್ ಜೀವನ ಬದಲಾಯಿಸಿದ್ದರಿಂದ ಪ್ರಯಾಣ ಖರ್ಚು ದುಪ್ಪಟ್ಟಾಯಿತು. ಮಲಪ್ಪುರಂ ಸ್ಟೈಲ್ ಊಟದ ಹೊಂದಾಣಿಕೆಯ ಕೊರತೆಯಿಂದಾಗಿ ಕೆಲವೆಡೆ ದಿನ ನಿತ್ಯದ ಆಹಾರಕ್ಕಾಗಿ ಹೋಟೆಲ್‌ಗಳನ್ನೇ ಆಶ್ರಯಿಸಬೇಕಾಗಿತ್ತು. ಮಲಯಾಳದಲ್ಲಿ ಹೊರ ಬರುತ್ತಿದ್ದ ಬಹುತೇಕ ಪುಸ್ತಕಗಳನ್ನು ಖರೀದಿಸಿ ಸಂಗ್ರಹಿಸುವ ಖಯಾಲಿ ಇದ್ದುದರಿಂದ ಅದಕ್ಕೆ ದೊಡ್ಡ ಮೊತ್ತದ ಬಜೆಟ್ ಬೇಕಿತ್ತು. ಕೆಲವೇ ವರ್ಷಗಳ ಮಲಪ್ಪುರಂ ವಾಸ್ತವ್ಯದ ಮಧ್ಯೆ ಕೇರಳದ ಅತ್ತಿಂದಿತ್ತ ಬದುಕಿರುವ ಎಲ್ಲ ಮಹಾತ್ಮರ ಸಂದರ್ಶನ ಒಂದು ಪ್ರಮುಖ ಕಾರ್ಯಸೂಚಿಯಾಗಿತ್ತು. ಅಸಂಖ್ಯ ಮಹಾತ್ಮರ ಅಂತ್ಯ ವಿಶ್ರಮ ಕೇಂದ್ರವಾದ ಮಲಪ್ಪುರಂ ಪರಿಸರದ ದರ್ಗಾಗಳಿಗೆ ಪ್ರತಿವಾರದ ಬಿಡುವುಗಳಲ್ಲಿ ನಡೆಸುತ್ತಿದ್ದ ಝಿಯಾರತ್ ಯಾತ್ರೆಗಳು ಬದುಕಿನಲ್ಲಿ ಬಲುದೊಡ್ಡ ಆರ್ಥಿಕ ಹೊಡೆತ ನೀಡುತ್ತಿದ್ದವು. ತಂದೆಯಲ್ಲಿ ಆ ಅಗತ್ಯಕ್ಕೆಲ್ಲ ಹಣ ಕೇಳುವ ಪರಿಸ್ಥಿತಿ ಇರಲಿಲ್ಲ. ಅವರ ಸಾಮರ್ಥ್ಯಕ್ಕೆ ಮೀರಿ ಅವರು ಕೊಡುತ್ತಿದ್ದ ಹಣವು ನನ್ನ ಯಾತ್ರಾ ವೆಚ್ಚ ಕಳೆದರೆ ಒಂದೆರಡು ದಿನಗಳಲ್ಲಿ ಮುಗಿದು ಹೋಗುತ್ತಿತ್ತು. ಶುಕ್ರವಾರ ಜುಮಾ ನಂತರದ 'ಉರ್ದಿ'ಗೆ ಅನೇಕ ಮಸೀದಿಗಳಿಗೆ ಎಡತಾಕಿ ಅಲ್ಲಿ ಮುಕ್ರಿಗಳಿಂದ ಉಗಿಸಿಕೊಂಡು, ಇನ್ನಾವು ದೋ ಮಸೀದಿಯ ಮುಕ್ರಿಯ ಕೃಪಾಕಟಾಕ್ಷ ದಿಂದ ಭಾಷಣಕ್ಕೆ ಅವಕಾಶ ಸಿಕ್ಕಿದರೆ, ಸಿಗುವ ಮೊತ್ತದಿಂದ ಪ್ರಯಾಣ ವೆಚ್ಚವನ್ನು ಕಳೆದರೆ ಉಳಿಯುತ್ತಿದ್ದದ್ದು

ಕನಿಷ್ಠ ಸಂಖ್ಯೆ ಮಾತ್ರ.

ಇಂತಹ ಸನ್ನಿವೇಶದಲ್ಲಿ ನನ್ನ ಬಿದಿರಿನ ಮೇಲಿನ ನಡಿಗೆಗೆ ಹೆಚ್ಚು ಆಯುಷ್ಯ ಇದ್ದಂತೆ ಅನಿಸಲಿಲ್ಲ. ಪ್ರತಿಬಾರಿ ದರ್ಸ್ ರಜೆ ಸಿಕ್ಕಿ ಊರಿಗೆ ಹೋಗುವಾಗಲೂ ನನ್ನ ಮಟ್ಟಿಗೆ ಬೃಹತ್ ಮೊತ್ತದ ಸಾಲ ಇರುತ್ತಿತ್ತು. ಅದನ್ನು ಸಂದಾ ಯ ಮಾಡುವಷ್ಟು ಹಣ ನೀಡಲು ತಂದೆ ಶಕ್ತ ರಾಗಿರಲಿಲ್ಲ. ಅಲ್ಲದೆ ಅವರಲ್ಲಿ ಆ ಬಗ್ಗೆ ಪ್ರಸ್ತಾಪಿಸುವಂತೆಯೂ ಇರಲಿಲ್ಲ.

ಇಂತಹ ಸಂದರ್ಭಗಳಲ್ಲಿ ನನಗೆ ಜೀವ ತುಂಬುತ್ತಿದ್ದವರು ನನ್ನ ಮಾವ, ಅಂದರೆ ನನ್ನ ತಾಯಿಯ ತಮ್ಮ. ಅವರ ಮಾತೃ ಪರಂಪರೆಯು ಕೇರಳದ ಉದ್ಯಾವರ ಮೂಲದ 'ಅಲ್ ಹಾದಿ' ಎಂಬ ಅಹ್ಲುಬೈತ್ ಕುಟುಂಬಕ್ಕೆ ಸೇರಿದ್ದರಿಂದ , ತಂಙಳ್ ಕುಟುಂಬದ ಆಧ್ಯಾತ್ಮಿಕ ಗುಣಗಳನ್ನು ಅವರು ಅಳವಡಿಸಿ ಕೊಂಡಿದ್ದರು. ಕುಟುಂಬದ ಹಿರಿಯರು ನೀಡಿದ್ದ ಸಯ್ಯಿದ್ ಮುಹಮ್ಮದ್ ಎಂಬ ಹೆಸರು ಮತ್ತು ಆಧ್ಯಾತ್ಮಿಕ ಚಿಕಿತ್ಸಾ ಪರಂಪರೆಯ ಮುಂದುವರಿಕೆಯಿಂದಾಗಿ ಅವರನ್ನು ಜನರು ತಂಙಳ್ ಎಂದೇ ಕರೆಯುತ್ತಿದ್ದರು. ಕಾಸರಗೋಡ್ ಸಮೀಪದ ವಿದ್ಯಾನಗರ ಒಳ ಪ್ರದೇಶವಾದ 'ಪಯೋಟ' ಎಂಬ ಕುಗ್ರಾಮ ಅವರ ಆಧ್ಯಾತ್ಮಿಕ ವ್ಯಕ್ತಿತ್ವಕ್ಕೆ ಆಶ್ರಯ ನೀಡಿದ ಪ್ರದೇಶವಾದ್ದರಿಂದ 'ಪಯೋಟ ತಂಙಳ್' ಎಂಬ ಹೆಸರಿನಲ್ಲಿ ಅವರು ಪ್ರಸಿದ್ಧರಾದರು.

ಮಾನವ ಪ್ರೀತಿ ಮತ್ತು ಕಾರುಣ್ಯದ ನಡೆದಾಡುವ ಪ್ರತೀಕದಂತಿದ್ದ ಅವರು ದೀನೀ ಜ್ಞಾನ ಮತ್ತು ಮುತಅಲ್ಲಿಮರನ್ನು ಅಗಾಧ ವಾಗಿ ಪ್ರೀತಿಸುತ್ತಿದ್ದರು. ತನ್ನ ಸಂದರ್ಶನಕ್ಕೆ ಬರುವವರಲ್ಲಿ ಮುತಅಲ್ಲಿಮರಿದ್ದರೆ ಗುಂಪಿನಿಂದ ಅವರನ್ನು ಗುರುತಿಸಿ ಅವರ ಸಮಸ್ಯೆಗಳಿಗೆ ಪರಿಹಾರ ಕೊಡುತ್ತಿದ್ದರು. ಮರಳುವಾಗ ಕೈ ತುಂಬ ಹಣ ಮತ್ತು ಉಡುಗೊರೆಗಳನ್ನು ನೀಡುತ್ತಿದ್ದರು. ತಾನು ಸಂಚರಿಸುವ ದಾರಿಗಳಲ್ಲಿ ಮುತಅಲ್ಲಿಂ ಅಥವಾ ಆಲಿಂಗಳನ್ನು ಕಂಡರೆ ಕಾರಿನಲ್ಲಿ ಕುಳ್ಳಿರಿಸಿ ಅವರ ಗಮ್ಯ ಸ್ಥಳಕ್ಕೆ ತಲುಪಿಸು ತ್ತಿದ್ದರು. ಪವಿತ್ರ ರಂಝಾನಿನ ದಿನ ರಾತ್ರಿಗಳಲ್ಲಿ ತನ್ನನ್ನು ಅರಸಿ ಬರುತ್ತಿರುವ ದೀನೀ ವಿದ್ಯಾರ್ಥಿಗಳಿಗಾಗಿ ಅವರು ಮೀಸಲಿ ಟ್ಟಿದ್ದು ಎಷ್ಟೋ ಲಕ್ಷ ರೂಪಾಯಿಗಳು, ಪೆಟ್ಟಿಗೆ ತುಂಬಾ ವಸ್ತ್ರಗಳು, ರಾಶಿ ರಾಶಿ ವಿದೇಶಿ ಅತ್ತರಿನ ಬಾಟಲಿಗಳು!

ಪಯೋಟ ತಂಙಳ್‌ರ ಕಾರುಣ್ಯದ ಸ್ಪರ್ಶ ನನಗೂ ಅನುಭವವಾಯಿತು. ತನ್ನ ಅಕ್ಕನ ಮಗ ಎಂಬುದಕ್ಕಿಂದ ನಾನೊಬ್ಬ ಬಡಪಾಯಿ ಮುತಅಲ್ಲಿಂ ಎಂಬುದಕ್ಕೆ ಅವರು ಹೆಚ್ಚು ಪ್ರಾಶಸ್ತ್ಯ ನೀಡಿದ್ದರು ಎಂದೆನಿಸುತ್ತದೆ.

ದರ್ಸ್ ಜೀವನದ ಸಾಲ ತಾಳಲಾರದೆ ಬಂದಾಗ, ನಾನು ಅತೀವ ಹಿಂಜರಿಕೆಯಿಂದಲೇ ಮಾವನನ್ನು ಭೇಟಿಯಾಗುತ್ತಿದ್ದೆ. ವಿಷಯ ತಿಳಿಸುವ ಅಗತ್ಯವೇ ಇರಲಿಲ್ಲ. ಮನಸ್ಸನ್ನು ಓದಿದವರಂತೆ ನನ್ನ ಅಗತ್ಯದ ಮೊತ್ತವನ್ನು ಅವರು ಕೈಗಿಡುತ್ತಿದ್ದರು. ಕರುಣಾಮಯಿ ಯಾದ ಅತ್ತೆಯಿಂದ ಬೇರೆಯೇ ಹಣ ಸಿಗುತ್ತಿತ್ತು. ಅಂದಿನ ಕಾಲದಲ್ಲಿ ಊಹಿಸಲೂ ಸಾಧ್ಯವಾಗದಿದ್ದ ಫಾರಿನ್ ವಸ್ತ್ರಗಳು, ಆಕರ್ಷಕ ಮಾದರಿಯ, ಅನನ್ಯ ಸುಗಂಧದ ಅನೇಕ ಸೆಂಟ್ ಬಾಟಲಿಗಳು, ಕನ್ನಡಕದ ಫ್ರೇಮ್, ಕೊಡೆ, ಚಪ್ಪಲಿಗಳು... ಹೀಗೆ ಪ್ರತಿಬಾರಿ ಹೋದಾಗಲೂ ಚೀಲ ತುಂಬ ಉಡುಗೊರೆಗಳು..

ದರ್ಸ್ ಜೀವನದ ಆರ್ಥಿಕ ಅಗತ್ಯದ ಈಡೇರುವಿಕೆ ಮಾತ್ರವಲ್ಲದೆ ಸಹಪಾಠಿಗಳ ಮಧ್ಯೆ ಮನೆಯ ಬಡತವನ್ನು ಮುಚ್ಚಿಟ್ಟು ಅಭಿಮಾನದಿಂದ ಬದುಕಲು ಮಾವನ ಕೊಡುಗೆ ನೆರವಾಗುತ್ತಿತ್ತು. ನನ್ನ ಒಂಟಿ ಬಿದಿರಿನ ಅಡ್ಡಾದಿಡ್ಡಿ ನಡಿಗೆಯಲ್ಲಿ ಎಲ್ಲೂ ಬಿದ್ದು ಬಿಡದಂತೆ ಅವರು ನನ್ನನ್ನು ಕಾಪಾಡಿದರು. ಸವಾಲುಗಳು ಬೆಟ್ಟದೆತ್ತರಕ್ಕೆ ಬೆಳೆದು ಇನ್ನು ಓದು ಮುಂದುವರಿಸಲು ಸಾಧ್ಯವಿಲ್ಲ ಎಂದೆನಿಸಿದಾಗಲೆಲ್ಲ ಪಯೋಟ ತಂಙಳ್ ಒಂದು ಅಗೋಚರ ಶಕ್ತಿಯಾಗಿ ನನ್ನನ್ನು ಮುನ್ನಡೆಸಿದರು. ಒಂದು ಹಂತದಲ್ಲಿ ನನ್ನ ಕೈ ತೋರಿಸಿ ನನಗೆ ದರ್ಸ್ ಮುಂದುವರಿಸುವ ಯೋಗವಿಲ್ಲ. ತಂದೆಯ ಇಚ್ಚೆಯಂತೆ ಸೌದಿಗೆ ಹೋದರೆ ಹಣ ವಾದೀತಾ ಅಂತ ಲಕ್ಷಣ ನೋಡಿ ಎಂದಾಗ 'ಇಲ್ಲ ನೀನು ದೊಡ್ಡ ಆಲಿಂ ಆಗಿ ಖಮರ್ (ಚಂದ್ರ) ನಂತೆ ಹೊಳೆಯಲಿರುವೆ' ಎನ್ನುತ್ತಾ ಹುರಿದುಂಬಿಸಿದ್ದರು. ವಿದ್ಯಾರ್ಥಿ ಜೀವನದಲ್ಲಿ ಭಾಷಣ ವೇದಿಕೆಗಳಲ್ಲಿ ನಾನು ಪ್ರತ್ಯಕ್ಷಗೊಂಡಾಗ ಅವರಿವರಿಂದ ತಿಳಿದು ಹೆಮ್ಮೆಪಟ್ಟು ಕೊಳ್ಳುತ್ತಿದ್ದರು. ಶುಕ್ರವಾರ ಗಳಲ್ಲಿ ನಾನು ಪಯೋಟ ಮಸೀದಿಗೆ ತಲು ಪಿದರೆ ತಾನು ಖತೀಬ್ ಆದ ಮಸೀದಿಯಲ್ಲಿ ನನ್ನಿಂದಲೇ ಖುತ್‌ಬಾ ಓದಿಸಿ ಭಾಷಣ ಮಾಡಿಸುತ್ತಿದ್ದರು.

ಸಂಘರ್ಷ ಭರಿತವಾದ ನನ್ನ ಹಾದಿಯಲ್ಲಿ ಅವರು ಯಾವತ್ತೂ ಸಾಂತ್ವನದ ಸಾಗರವಾ ದರು. ನಿರಾಶೆಯ ನಟ ಮಧ್ಯಾಹ್ನಗಳಲ್ಲಿ ನಿರೀಕ್ಷೆಗಳ ಹೂ ಮಳೆಯಾದರು. ಅರೇಬ್ಯನ್ ಗಲ್ಫ್‌ನ ಮರಳುಗಾಡಿನ ಯಾವುದೋ ಗ್ರೋಸರಿಯೊಂದರಲ್ಲಿ ಬದುಕಿನ ಎರಡೂ ತುದಿಗಳನ್ನು ಒಟ್ಟು ಗೂಡಿಸಲು ಹೆಣಗಾಡಿ ಹೈರಾಣಾಗಬೇಕಾಗಿದ್ದ ನನ್ನನ್ನು ಇಂದಿನ ಸ್ಥಿತಿಗೆ ತಲುಪಿಸುವಲ್ಲಿ ಪ್ರತ್ಯಕ್ಷವೂ ಪರೋಕ್ಷವೂ ಅವರು ಕಾರಣವಾದರು. ನನ್ನಂತಹ ಸಹಸ್ರಾರು ಮಂದಿಗೆ ಜೀವನದ ವಿವಿಧ ಸ್ತರಗಳಲ್ಲಿ ಆಸರೆಯಾದ ಪಯೋಟ ತಂಙಳ್, ಎರಡೂವರೆ ದಶಕಗಳ ಕಾಲ ಪಯೋಟ ಎಂಬ ಪುಟ್ಟ ಹಳ್ಳಿ ಕೇಂದ್ರವಾಗಿ ಕಾಸರಗೋಡ್ ಜಿಲ್ಲೆಯ ಪರಿಸರ ಪ್ರದೇಶ ಗಳ ಆಧ್ಯಾತ್ಮಿಕ ಆಶಾಕೇಂದ್ರವಾಗಿ ಮೆರೆದರು.

ಆಧ್ಯಾತ್ಮಿಕ ಚಿಕಿತ್ಸೆಗಾಗಿ ಅವರನ್ನು ಸಮಾಜದ ನಾನಾ ಹಂತಗಳ ಜನರು ಜಾತಿ-ಭೇದವಿಲ್ಲದೆ ಸಂದರ್ಶಿಸುತ್ತಿದ್ದರು. ಜನರ ಸಮಸ್ಯೆಗಳಿಗೆ ಅವರಿಗಿಂತ ಆದ್ರವಾದ ಶೈಲಿಯಲ್ಲಿ ಉತ್ತರಿಸುತ್ತಿದ್ದರು. ಮನಸ್ಸನ್ನು ಮುಟ್ಟುವ ತನ್ನ ವಿನಯಾನ್ವಿತ ಶೈಲಿಯಿಂದ ಸಂದರ್ಶಕರ ಅಹವಾಲುಗಳ ಆಳಕ್ಕಿಳಿದು ಪರಿಹಾರ ಹುಡುಕಿ ಕೊಡುತ್ತಿದ್ದ ಅವರು ಅನೇಕರ ಪಾಲಿಗೆ ಓರ್ವ ನುರಿತ ಆಪ್ತ ಸಮಾಲೋಚಕ (ಕೌನ್ಸೆಲರ್) ರಾಗಿದ್ದರು.

ಮರ್ಕಝ್‌ನಿಂದ ನಾನು ಪದವಿ ಪಡೆದು ನಾಲ್ಕು ವರ್ಷಗಳ ಬಳಿಕ ಕುಟುಂಬದ ಮೂಲಗಳಿಂದ ಅವರ ಮಗಳನ್ನು ವರಿಸುವಂತೆ ಪ್ರಸ್ತಾಪ ಬಂದಾಗ, 'ನೀನೀಗ ನನ್ನ ನಿರೀಕ್ಷೆಗಿಂತ ಬೆಳೆದಿದ್ದೀಯ. ಮಗಳನ್ನು ಮದುವೆಯಾಗುವಂತೆ ಯಾವುದೇ ಒತ್ತಡವಿಲ್ಲ. ಒಂದು ತಿಂಗಳ ಕಾಲ ಯೋಚಿಸಿ ನಿರ್ಧಾರ ಕೈಗೊಳ್ಳು ಅಂದಿದ್ದರು. ಆದರೆ ಅಲ್ಲಾಹನ ಮುನ್‌ವಿಧಿಯಂತೆ 2000 ಜನವರಿ ಮೂವತ್ತರಂದು ಅವರ ಹಿರಿಯ ಮಗಳೊಂದಿಗೆ ನನ್ನ ನಿಕಾಹ್ ನಡೆಯಿತು.

ಹೀಗೆ ಸಹಸ್ರಾರು ಜನರ ಭರವಸೆಯ ಹೊಂಗಿರಣವಾಗಿದ್ದ ಪಯೋಟ ತಂಙಳ್ ಅಲ್ಲಾಹನ ಅನುಲ್ಲಂಘನೀಯ ವಿಧಿಯಂತೆ 2011 ಜುಲೈ ಆರರಂದು ಬುಧವಾರ ತನ್ನ ಐವತ್ತನಾಲ್ಕನೇ ವಯಸ್ಸಿನಲ್ಲಿ ಇಹಲೋಕ ವಾಸದಿಂದ ವಿರಮಿಸಿ, ತನ್ನ ಆಧ್ಯಾತ್ಮಿಕ ಮಾರ್ಗದರ್ಶಕರಾಗಿದ್ದ ಸಯ್ಯಿದುನಾ ತ್ವಾಹಿರುಲ್

ಅಹ್‌ದಲ್ ತಂಙಳ್ ಅವರ ಪವಿತ್ರ ಮಖಾಂನ ಹತ್ತಿರ ಮುಹಿಮ್ಮಾತ್ ನಗರಿನಲ್ಲಿ ಅಂತ್ಯ ವಿಶ್ರಾಂತಿ ಪಡೆಯುತ್ತಿದ್ದಾರೆ.

1997 ಡಿಸೆಂಬರ್ 22 ರಂದು ಧಾರ್ಮಿಕ ವಿದ್ಯಾಭ್ಯಾಸದ ಪ್ರಮಾಣ ಪತ್ರಗಳನ್ನು ಪಡೆದು ಮರ್ಕಝುಸ್ಸಖಾಫತಿಸ್ಸುನ್ನಿಯ್ಯಾ ದಿಂದ ಹೊರಬರುವಾಗ, ಅಂದಿನ ನೆಮ್ಮದಿ ಯ ನಿಟ್ಟುಸಿರಿಗೆ ಕಾರಣ ಕರ್ತರಾದವರಲ್ಲಿ ನನ್ನ ಮಾವ ಮರ್‌ಹೂಂ ಪಯೋಟ ತಂಙಳ್ ಪ್ರಮುಖರಾಗಿದ್ದರು. ಅಲ್ಲಾಹು ಅವ ರೊಂದಿಗೆ ಸ್ವರ್ಗಲೋಕದಲ್ಲಿ ನಮ್ಮೆಲ್ಲರನ್ನೂ ಒಗ್ಗೂಡಿಸಲಿ.

ಮರ್ಕಝ್‌ನಿಂದ ಹೊರ ಬಂದು ಕರ್ನಾಟಕದಲ್ಲಿ ದಅ್‌ವಾ ಕ್ಷೇತ್ರದಲ್ಲಿ ಭಾಗಿಯಾಗಲು ತವಕಿಸುತ್ತಾ ಕನಸುಗಳನ್ನು ಕಟ್ಟುತ್ತಿದ್ದ ನನಗೆ ಮರ್ಕಝ್ ಮ್ಯಾನೇಜರ್ ಸಿ. ಉಸ್ತಾದ್ ಮರ್ಕಝ್ ಆರ್ಟ್ಸ್ ಕಾಲೇಜಿನಲ್ಲಿ ಶಿಕ್ಷಕನಾಗಿ ನಿಲ್ಲುವಂತೆ ಒತ್ತಡ ಹೇರಿದರು. ಇನ್ನೊಂದು ಕಡೆಯಿಂದ ಎ.ಪಿ. ಉಸ್ತಾದರ ಆಪ್ತ ಕಾರ್ಯದರ್ಶಿಯಾಗಿದ್ದು ಅನಿವಾರ್ಯ ಕಾರಣದಿಂದ ವಿದೇಶ ಪ್ರವಾಸ ಹೋಗುತ್ತಿದ್ದ ವಡಪುರಂ ಸುಲೈಮಾನ್ ಸಖಾಫಿ ತನ್ನ ಹುದ್ದೆಯನ್ನು ವಹಿಸಿಕೊಳ್ಳು ವಂತೆ ಒತ್ತಾಯ ಮಾಡತೊಡಗಿದರು. ಇದು ತುಂಬ ಗೊಂದಲ ಮೂಡಿಸಿತು.

ಕಲಿಕೆ ಮುಗಿದು ಕರ್ನಾಟಕದಲ್ಲಿ, ಅದರಲ್ಲೂ ಉಡುಪಿ-ಕುಂದಾಪುರ ಭಾಗ ಗಳಲ್ಲಿ ಉದ್ಯೋಗ ಮಾಡಬೇಕೆಂಬುದು ನನ್ನ ಅಕಾರಣ ಬಯಕೆಯಾಗಿತ್ತು. 1998ರಲಿ ಕುಂದಾಪುರ - ಕೋಡಿ ದರ್ಸ್‌ನಲ್ಲಿ ಓದುತ್ತಿದ್ದಾಗ ಮಂಗಳೂರು -ಕುಂದಾಪುರ ಮಧ್ಯೆ ಸಂಚರಿಸುವಾಗ ರಸ್ತೆ ಬದಿಯ ಮಸೀದಿಗಳನ್ನು ನೋಡುತ್ತಾ ಇವುಗಳ ಪೈಕಿ ಯಾವ ಮಸೀದಿಯಲ್ಲಿ ಮುಂದೆ ನನಗೆ ಕೆಲಸ ಸಿಕ್ಕೀತು ಅಂತ ಮನಸ್ಸಿನಲ್ಲೇ ಮಂಡಕ್ಕಿ ಮೆಲ್ಲುತ್ತಿದ್ದೆ. 'ಭಾರತ ಒಂದು ಪುಟ್ಟ ಬ್ರಹ್ಮಾಂಡವಾದೊಡೆ ಕರ್ನಾಟಕದ ಒಂದು ಪುಟ್ಟ ಭಾರತ ನೋಡ... ಇಲ್ಲಿಲ್ಲದುದು ಇನ್ನಲ್ಲಿದೆ ತೋರ... ಇಲ್ಲಿ ಜನ್ಮವನ್ನು ಬೇಡಿ ಕೊಂಡರೆ ಎಲ್ಲವನೂ ಬೇಡಿ ಕೊಂಡಂತೆ' ಎಂಬ ಕವಿ ಸಿದ್ದಯ್ಯ ಪುರಾಣಿಕರ ಮಾತು ಕಿವಿಯಲ್ಲಿ ಗುಂಯ್ ಗುಡುತ್ತಿದ್ದುವು...

# 18

### ಮೊದಲ ಕರ್ಮಭೂಮಿಯಾಗಿ ಕುಪ್ಪೆಪದವು

1996 ಡಿಸೆಂಬರ್ 22ರಂದು ಮರ್ಕಝ್‌ನಿಂದ ಬೊರ ಬಂದ ನಂತರ ಮುಂದಿನ ದಿನಗಳು ಕೆಲಸದ ಹುಡುಕಾಟವಾಗಿತ್ತು. ತಂದೆಯ ಬದಲಿಗೆ ಕೆಲಕಾಲ ನಿಂತು ಪರಿಚಯವಿರುವ ಬೈಕಂಪಾಡಿ ಜುಮಾ ಮಸೀದಿಯಲ್ಲಿ ನಿಲ್ಲುವಂತೆ ಕಅಲ್ಲಿನ ಹಿರಿಯರಾದ ಲಕ್ಕಿಸ್ಟಾರ್ ಅಬೂಬಕರ್ ಹಾಜಿಯವರು ಅಪೇಕ್ಷಿಸಿದರೂ ಮನಸ್ಸು ಒಪ್ಪಲಿಲ್ಲ. ಹಾಗಿರುವಾಗ ಯಾವುದೋ ಪಿ.ಪಿ.ಫೋನ್ ಕರೆಯ ಮುಖಾಂತರ ವಿಟ್ಲಸಮೀಪದ ಕಂಬಳಬೆಟ್ಟು ಮಸೀದಿಯಲ್ಲಿ ನಿಲ್ಲುವಂತೆ ಆಹ್ವಾನ ಬಂತು. ಪೂರ್ವ ಪರಿಚಯವಾಗಲೀ ಖತೀಬ್ ಹುದ್ದೆಯ ದೈಹಿಕ ಅರ್ಹತೆಯಾಗಲೀ ಇಲ್ಲದ್ದರಿಂದ ಸಿಗುವ ಕೆಲಸ ಷರತ್ತು ಇಲ್ಲದೆ ಒಪ್ಪಿಕೊಳ್ಳುವುದೆಂದು ಮೊದಲೇ ಮನಸಾ ಒಪ್ಪಂದ ಮಾಡಿಕೊಂಡಿದ್ದೆ. ಆದ್ದರಿಂದ ಕಂಬಳಬೆಟ್ಟುವಿನಿಂದ ಕರೆ ಬಂದಿದೆ. ಹೇಗಿದ್ದರೂ ಸರಿ ಹೋಗಿ ನಿಲ್ಲುವುದೆಂದು ತೀರ್ಮಾನಿಸಿ 1997 ಜನವರಿ 17ಶುಕ್ರವಾರ, ರಮಳಾನ್ 8ರಂದು ಕಂಬಳಬೆಟ್ಟುವಿಗೆ ಹೊರಟೆ. ಹೋಗುವ ದಾರಿಯಲ್ಲಿ ವಿಟ್ಲ ಬದ್ರಿಯಾ ಬಟ್ಟೆ ಅಂಗಡಿಯ ಮೂಲಕ ಕಂಬಳಬೆಟ್ಟು ಜಮಾಅತ್ ಪ್ರಮುಖರಾದ ಅಬ್ದುಲ್ ಖಾದರ್ ಹಾಜಿಯನ್ನು ಭೇಟಿ ಮಾಡುವಂತೆ ಸೂಚಿಸಲಾಗಿತ್ತು. ವಿಟ್ಲ ಪೇಟೆಯಲ್ಲಿ ಬದ್ರಿಯಾ ಟೆಕ್ಸ್‌ಟೈಲ್ಸ್‌ನ ಹಿಂಬದಿಯಲ್ಲಿರುವ ಪುಟ್ಟ ನಮಾಝ್ ಹಾಲ್‌ನಲ್ಲಿ ಬದ್ರಿಯಾ ಹಾಜಿಯವರಿಂದ ನನ್ನ 'ಇಂಟರ್‌ವ್ಯೂ' ನಡೆಯಿತು. ಮಸೀದಿಯಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ವಿವರಿಸಿದ ಹಾಜಿಯವರು ಸದ್ಯ ಸಾವಿರದ ಮುನ್ನೂರು ಮಾಸಿಕ ವೇತನ ನೀಡುವುದಾಗಿಯೂ ಮುಂದೆ ಜಮಾಅತ್‌ನಲ್ಲಿ ತಾವು ಮಾಡುವ ಅಭಿವೃದ್ಧಿ ಕಾರ್ಯಗಳನ್ನು ನೋಡಿ ವೇತನ ಏರಿಕೆ ಮಾಡುವುದಾಗಿಯೂ ಪ್ರಕಟಿಸಿದ್ದರು. ಜುಮಾಗೆ ಸ್ವಲ್ಪ ಮುಂಚಿತವಾಗಿ ಮಸೀದಿ ತಲುಪಲಾಯಿತು. ಹಳೆಯ ಪುಟ್ಟ ಮಸೀದಿಯ ಇಕ್ಕಟ್ಟಾದ ಮರದ ಏಣಿಯನ್ನು ಹತ್ತಿ ರೂಮಿಗೆ ತಲುಪಿದಾಗ ಮನಸ್ಸಿಗೆ ಏನೇನೋ ಕಸಿವಿಸಿ. ಮುಅದ್ದಿನ್ ಮಅಶಿರ ಕರೆದು ಖಡ್ಗ ಕೈಗೆ ಕೊಟ್ಟಾಗ ಜೀವನದ ಮೊದಲ ಅಧಿಕೃತ ಖುತ್‌ಬಃ ಪಾರಾಯಣದ ಪುಳಕದೊಂದಿಗೆ ಮಿಂಬರ್‌ಗೆ ಹತ್ತಿ ಖಡ್ಗವನ್ನು ಬದಿಯಲ್ಲಿಡುವಂತ್ತಿದ್ದಂತೆ ಅದು ಜಾರಿ ಹೋಗಿ ಜನರು ಕುಳಿತಿರುವ ಸ್ಥಳದಲ್ಲಿ ಎಲ್ಲೋ ಬಿದ್ದು ಮರೆಯಾಯಿತು. ಇದರೊಂದಿಗೆ ಈ ಮಸೀದಿ ನನಗೆ ಒಗ್ಗಿ ಬರುವುದಿಲ್ಲವೆಂದು ಮನಸ್ಸಿನಲ್ಲೇ ಎಣಿಕೆ ಹಾಕಿದೆ. ಜನವರಿ 19 ಆದಿತ್ಯವಾರ ಬದ್ರಿಯಾ ಹಾಜಿಯವರಿಗೆ ಫೋನ್ ಮಾಡಿ ಕಂಬಳಬೆಟ್ಟು ಯೋಜನೆಯಿಂದ ಹಿಂದೆ ಸರಿಯುವುದಾಗಿ ತಿಳಿಸಿದೆ. ಬದಲಿಗೆ ಅದಾಗಲೇ 'ಸಅದಿ' ಪದವೀಧರರಾಗಿ ಹೊರಬಂದಿದ್ದ ಮಲ್ಲೂರು ಅಶ್ರಫ್ ಸಅದಿಯನ್ನು ಸೂಚಿಸಿದೆ. ಸಅದಿ ಅಲ್ಲಿ ಖತೀಬ್ ಮತ್ತು ಮುದರ್ರಿಸ್ ಆಗಿ ನೇಮಕ ಗೊಂಡರು. ನನ್ನ ಕೆಲಸದ ಹುಡುಕಾಟ ಮತ್ತೆ ಮುಂದುವರಿಯಿತು.

ಅದೇ ರಮಳಾನ್ ತಿಂಗಳ ಹತ್ತರಿಂದ ಹದಿನಾಲ್ಕು ಸೇರಿದಂತೆ 5 ದಿನಗಳ ಕಾಲ ಸುಬ್‌ಹ್ ನಮಾಝಿನ ಬಳಿಕ ಕಾಟಿಪಳ್ಳ ಜುಮಾ ಮಸೀದಿಯಲ್ಲೂ ಒಂಬತ್ತರಿಂದ ಹದಿನಾಲ್ಕರ ವರೆಗೆ ಆರು ದಿನಗಳ ಕಾಲ ಲುಹ್‌ರ್ ನಮಾಝಿನ ಬಳಿಕ ನಾನು ಈಗ ಖತೀಬ್ ಆಗಿರುವ ತಲಪಾಡಿ ಬಿಲಾಲ್ ಜುಮಾ ಮಸೀದಿಯಲ್ಲಿಯೂ ರಮಳಾನ್ ವಿಶೇಷ ಉಪನ್ಯಾಸ ಕಾರ್ಯಕ್ರಮವಿದ್ದುವು.

ವಿಷಯ ಸಂಗ್ರಹಕ್ಕೆ ಮತ್ತು ನಾಡಭಾಷೆಯಲ್ಲಿ ಮಾತನಾಡಿ ಪರಿಚಯ ಹೊಂದಲು ಇವು ಅವಕಾಶ ನೀಡಿತು. 97 ಜನವರಿ 26ರಂದು ಮಂಗಳೂರು ಏರ್‌ಲೈನ್ಸ್ ಹೊಟೇಲ್‌ನಲ್ಲಿ ನಡೆದ ದಕ್ಷಿಣ ಕನ್ನಡ ಸುನ್ನೀ ಸೆಂಟರ್ (ಡಿಕೆಎಸ್ಸಿ) ಜಿಲ್ಲಾ ಸಮಿತಿ ಮಹಾಸಭೆಗೆ ಅದರ ಕಾರ್ಯಕರ್ತನಾಗಿದ್ದ ಅಬ್ದುಲ್ ಅಝೀಝ್ ಸೂರಿಂಜೆ (ಅಲ್‌ಕೋಬಾರ್) ಅವರ ಮೂಲಕ ನಮಗೂ ಅಬೂಸುಫ್‌ಯಾನ್ ಮದನಿ ಅವರಿಗೂ ಆಹ್ವಾನ ಬಂದಿತ್ತು. ಸಭೆಯಲ್ಲಿ ನಮ್ಮಿಬ್ಬರನ್ನೂ ಸಮಿತಿ ಸದಸ್ಯರಾಗಿ ಆಯ್ಕೆ ಮಾಡಲಾಯಿತು. ಮುಂದೆ ಡಿಕೆಎಸ್ಸಿಯಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಳ್ಳಲು ಈ ಆಯ್ಕೆ ಕಾರಣವಾಗಿತ್ತು.

ರಮಳಾನ್ ಮುಗಿದು ಶವ್ವಾಲ್ ಮುಗಿಯುವ ಹೊತ್ತಾಗಿದ್ದರೂ ಎಲ್ಲಿಯೂ ಕೆಲಸ ಸರಿಯಾಗದೆ ಚಿಂತೆ ಕಾಡುತ್ತಿತ್ತು. ಆ ಮಧ್ಯೆ ಮಂಗಳೂರುತಾಲೂಕಿನ ಕುಪ್ಪೆಪದವಿನಲ್ಲಿ ಅಕಸ್ಮಾತ್ ಖತೀಬ್ ಹುದ್ದೆ ಖಾಲಿ ಬಿದ್ದಿದೆ ಯೆಂದೂ ತಕ್ಷಣ ಆ ನಿಟ್ಟಿನಲ್ಲಿ ಮಾತನಾಡಲು ಮನೆಗೆ ಬರಬೇಕೆಂದೂ ಅಬೂಸುಫ್‌ಯಾನ್ ಮದನಿ ಕರೆ ನೀಡಿದ್ದರು. ಮೂಡಬಿದ್ರೆ ಪ್ರಪಂಚದ ಯಾವ ದಿಕ್ಕಿನಲ್ಲಿದೆ ಎಂದು ತಿಳಿಯದ ನಾನು ಆಗ ಕಾಟಿಪಳ್ಳದಲ್ಲಿ ಸದರ್ ಮುಅಲ್ಲಿಮ್ ಹುದ್ದೆಯಲ್ಲಿದ್ದ ಮಿತ್ರ ಶಂಸುಲ್ ಹುದಾ ಮಾಡನ್ನೂರ್ ಅವರ ಜತೆಗೆ ಅಬೂಸುಫ್‌ಯಾನ್ ಮದನಿಯವರ ಮೂಡಬಿದ್ರೆ ಜ್ಯೋತಿ ನಗರದಲ್ಲಿರುವ 'ಅಲ್‌ಅಹ್‌ಸನ್' ಎಂಬ ಮನೆಗೆ ತೆರಳಿದ್ದೆ. ಸಂಜೆಯ ಹೊತ್ತಿಗೆ ಕುಪ್ಪೆಪದವು ಜಮಾಅತ್ ಪ್ರಮುಖರ ತಂಡ ಆಗಮಿಸಿ ಸಂದರ್ಶನ ನಡೆಸಿತು. ಅಂದು ರಾತ್ರಿ ಅಲ್ಲಿ ನಡೆಯಲಿದ್ದ ಮತ ಪ್ರವಚನ ಕಾರ್ಯಕ್ರಮಕ್ಕೆ ಪ್ರವಚನಕಾರ ಅಬೂಸುಫ್‌ಯಾನ್ ಉಸ್ತಾದರ ಜತೆ ಅವರು ಬಂದ ಜೀಪಿನಲ್ಲೇ ನಾವೆಲ್ಲ ಒಟ್ಟಾಗಿ ಹೊರಟೆವು. ಊರು ನೋಡುವುದರ ಜತೆ ನನ್ನ ಭಾಷಣ ಪಟುತ್ವವನ್ನು ಪ್ರದರ್ಶಿಸಿ ಅವರ ಪರೀಕ್ಷೆಯಲ್ಲಿ ಗೆದ್ದು ಕೆಲಸ ಖಾತರಿ ಪಡಿಸುವುದು ನನ್ನ ಮುಂದಿನ ಸವಾಲಾಗಿತ್ತು.

ಬಹಳ ಅಚ್ಚುಕಟ್ಟಿನ ಸಮಾರಂಭವಾಗಿತ್ತದು. ನನ್ನಿಂದಲೂ ಸ್ವಲ್ಪ ಹೊತ್ತು ಭಾಷಣ ಮಾಡಿಸಿದರು. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರು ಹೇಳುವಾಗ ಏರು ಧ್ವನಿಯಲ್ಲಿ ಸ್ವಲಾತ್ ಹೇಳುವುದು, ಭಾಷಣವನ್ನು ತದೇಕ ಚಿತ್ತದಿಂದ ಆಲಿಸುವುದು, ಕೊನೆಗೆ ನಡೆಯುವ ಹರಾಜಿನಲ್ಲಿ ತೀವ್ರ ಪೈಪೋಟಿಯಿಂದ ಭಾಗವಹಿಸುವುದು ಆ ದಿನ ನಾನು ಅಲ್ಲಿಕಂಡ ಕೆಲವು ವಿಶೇಷತೆಗಳು. ಕಂಬ್ಲಬೆಟ್ಟುವಿಗಿಂತ ಭಿನ್ನವಾಗಿದ್ದ ಅಲ್ಲಿನ ಪರಿಸರ ಮನಸ್ಸಿಗೆ ಮುದ ನೀಡುವಂತಿತ್ತು ಅವರ ನಿಗದಿತ ಕಾರ್ಯಕ್ರಮದ ದಿನಾಂಕ ಮುಗಿದ ನಂತರವೂ ಮಾರ್ಚ್ ಆರು ಗುರುವಾರದಂದು ನನ್ನ ಭಾಷಣ ಕಾರ್ಯಕ್ರಮ ಇಟ್ಟುಕೊಂಡಿದ್ದರು. ಮರುದಿನ 9 ಮಾರ್ಚ್ ಏಳು ಶುಕ್ರವಾರ ಕುಪ್ಪೆಪದವು ಬದ್ರಿಯಾ ಜುಮಾ ಮಸೀದಿಯಲ್ಲಿ ಖುತುಬಾ ನಿರ್ವಹಿಸಿ ನಾನು ಖತೀಬ್ ಹುದ್ದೆಯನ್ನೂ ವಹಿಸಿಕೊಳ್ಳುವಂತೆ ವ್ಯವಸ್ಥೆ ಮಾಡಲಾಗಿತ್ತು.

ಆಗ ಕುಪ್ಪೆಪದವು ಜಮಾಅತ್ ಅಧ್ಯಕ್ಷರಾಗಿದ್ದ ಮರ್‌ಹೂಂ ಮಡಿಕೇರಿ ಯೂಸುಫ್ ಉಲಮಾಗಳ ಮೇಲೆ ಅತೀವ ಪ್ರೀತ್ಯಾದರ ಹೊಂದಿದ್ದ ವ್ಯಕ್ತಿಯಾಗಿದ್ದರು. ಬಿಳಿ ಲುಂಗಿ ಮತ್ತು ಬಿಳಿ ಅರ್ಧ ತೋಳಿನ ಅಂಗಿಯಲ್ಲಿ ಸದಾ ಕಂಗೊಳಿಸುವ ಈಸುಬಾಕ ತುಂಬ ಉದಾರಿಯೂ ಧಾರಾಳಿಯೂ ಆಗಿದ್ದರು. ಅಪ್ಪಟ ಪ್ರತಿಭಾಶಾಲಿಯಾಗಿದ್ದ ಆಚಾರಿ ಚೋರ ಅಬ್ಬು ಬ್ಯಾರಿ ಮಸೀದಿಯ ಪ್ರದಾನ ಕಾರ್ಯದರ್ಶಿಯಾಗಿದ್ದರು. ಇವರಿಬ್ಬರ ಒಡನಾಟ ತುಂಬ ಆಕರ್ಷಕವಾಗಿತ್ತು. ಅಲ್ಲದೆ ನನ್ನ ತಂದೆ ಮೂಡಿಗೆರೆಯಲ್ಲಿದ್ದಾಗ ಅಲ್ಲಿನ ಮೈಸೂರು ಲಾಡ್ಜ್‌ನ ವ್ಯವಸ್ಥಾಪಕರಾಗಿದ್ದ ಅಬ್ದುರ್ರಹ್ಮಾನ್ ಎಂಬ ಅದ್ದಾಕ ಇದೇ ಊರಿನವರಾಗಿದ್ದು ಹಳೆಯ ಪರಿಚಯ ಹತ್ತಿರದ ಒಡನಾಟಕ್ಕೆ ಅವಕಾಶ ನೀಡಿತ್ತು. ಒಟ್ಟಿನಲ್ಲಿ ಕುಪ್ಪೆಪದವು ಪ್ರಥಮ ದೃಷ್ಟಿಯಲ್ಲಿಯೇ ಹುದ್ದೆ ವಹಿಸಿಕೊಳ್ಳುವಂತೆ ಪ್ರೇರೇಪಿಸುವಂತಿತ್ತು. ಅದರಂತೆ ಬದುಕಿನ ಮೊದಲ ಕರ್ಮಭೂಮಿಯಾಗಿ ಕುಪ್ಪೆಪದವು ಬದ್ರಿಯಾ ಜುಮಾ ಮಸೀದಿ ನಿಗದಿಯಾಯಿತು. ಆಗ ಎಸ್ಸೆಸ್ಸೆಫ್ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷನಾಗಿದ್ದರಿಂದ ಜಿಲ್ಲೆಯಾದ್ಯಂತ ಸಾಂಘಿಕ ಕೆಲಸ ಮತ್ತು ಭಾಷಣ ಕಾರ್ಯಕ್ರಮವಿರುವುದರಿಂದ ಮದ್ರಸಾ ಕೆಲಸ ಕೊಡಬಾರದೆಂದು ಅಬೂಸುಫ್‌ಯಾನ್ ಮದನಿ ಸಮಿತಿಯವರಿಗೆ ತಾಕೀತು ನೀಡಿದ್ದರು. ಉದಾರಿಯಾದ ಮಡಿಕೇರಿ ಈಸ್‌ಬಾಕ 'ಇದ್ದಾಗ ಇಮಾಮತ್ ನಿಲ್ಲಿ, ಶುಕ್ರವಾರ ತಪ್ಪಿಸಬೇಡಿ' ಎಂಬ ಹಿತ ವಚನದೊಂದಿಗೆ ಎರಡು ಸಾವಿರ ರೂ ವೇತನ ನಿಗದಿ ಪಡಿಸಿದರು.

ಇದೇ ಕುಪ್ಪೆಪದವಿಗೆ ಮುತಅಲ್ಲಿಂ ಆಗಿದ್ದಾಗ ನಾನೊಮ್ಮೆ ರಮಳಾನ್ ಉರ್ದಿಗೆ ಹೋಗಿದ್ದೆ. ಅತ್ತಾಳಕ್ಕೆ ಯಾರೂ ಕರೆಯಲಾರರು ಎಂದು ಭಾವಿಸಿ ಇಶಾಗೆ ಮುಂಚೆ ಕೆಲವು ಬಾಳೆಹಣ್ಣುಗಳನ್ನು ತಂದು 'ಹೌಳ್'ನ ಹಂಚಿನ ಛಾವಣಿಯ ತುದಿಯಲ್ಲಿಟ್ಟಿದ್ದೆ. ತರಾವೀಹ್ ನಂತರ ಉರ್ದಿಯ ಪ್ರತಿಫಲ ಎಣಿಸಿಕೊಟ್ಟು ಖತೀಬ್ ಇಬ್‌ರಾಹೀಮ್ ಮುಸ್ಲಿಯಾರ್ ಮಸೀದಿಯ ವರಾಂಡದಲ್ಲಿ ಏಣಿಯ ಅಡಿಭಾಗದಲ್ಲಿ ಮಲಗಿ ಕೊಳ್ಳುವಂತೆ ಅನುಮತಿ ಕೊಟ್ಟು ಮನೆಗೆ ತೆರಳಿದ್ದರು. ಪುರಾತನ ಮಸೀದಿಯ ತೆರೆದ ವರಾಂಡದಲ್ಲಿ ಹೆದರಿ ಹಿಪ್ಪೆಯಾಗಿದ್ದೆ. ಏಕಾಂಗಿ ಯಾಗಿದ್ದ ನಾನು ಸಹರಿಯ ಹೊತ್ತಾದದ್ದು ತಿಳಿದರೂ ಹೌಳಿನ ಛಾವಣಿಯಲ್ಲಿಟ್ಟಿದ್ದ ಬಾಳೆಹಣ್ಣು ತೆಗೆದು ತಿನ್ನಲು ಭಯಬಿಡುತ್ತಿರಲಿಲ್ಲ. ಆದರೆ ಅಷ್ಟು ಹೊತ್ತಿಗಾಗಲೇ ಸಮೀಪದ ಮನೆಯಿಂದ ಸಾತ್ವಿಕರಾದ ಮಿಲ್ ಅಬ್ದುಲ್ ಖಾದರ್ ಹುಡುಗನನ್ನು ಕಳಿಸಿ ನನ್ನನ್ನು ಕರೆಸಿ ಸಹರಿಯೂಟ ನೀಡಿ ಅನುಗ್ರಹಿಸಿದ್ದರು.

ಕುಪ್ಪೆಪದವಿನಲ್ಲಿ ಮೊದಲ ಅಧಿಕೃತ ಖುತ್‌ಬಃ ನಿರ್ವಹಿಸಲು ತರಬೇತಿಗಾಗಿ ನಾನು ಸಂಪರ್ಕಿಸಿದ್ದು ಮರ್ಕಝ್‌ನಲ್ಲಿ ನನ್ನ ಸಹಪಾಠಿಯಾಗಿದ್ದ ಅಬ್ದುಲ್ ಜಬ್ಬಾರ್ ಬಾಖವಿ ಸಖಾಫಿ (ಬೆಂಗಳೂರು) ಅವರನ್ನು. ಅವರು ಆಗ ಉಜಿರೆಯಲ್ಲಿ ಖತೀಬ್ ಆಗಿದ್ದರು. ಜುಮಾ ಖುತ್‌ಬಃದ ಮಸ್‌ಅಲಗಳು ವಶವಿದ್ದರೂ ಅದರ ಪ್ರಾಯೋಗಿಕ ರೀತಿಯಲ್ಲಿ ಚರ್ಚಿಸಲು ಜಬ್ಬಾರ್ ಬಾಖವಿ ನೆರವಾದರು. 'ಅನುಭವ ಇದ್ದಲ್ಲಿ ಅಮೃತವಿದೆ' ಎನ್ನುವುದು ನಿಜವಾಗಿತ್ತು.

97 ಮಾರ್ಚ್ 9 ಆದಿತ್ಯವಾರ ಕುಪ್ಪೆಪದವಿನಲ್ಲಿ ನಾನು ನಿರ್ವಹಿಸಿದ ಪ್ರಥಮ ನಿಕಾಹ್ ಅನಂತರ ತ್ವಲಾಖ್ ಆಗಿ ಬೇರ್ಪಟ್ಟಿತು ಎಂಬುದೊಂದು ದುಃಖ ಸತ್ಯ.

ಮಾರ್ಚ್ 14 ಶುಕ್ರವಾರ ನನ್ನ ಹುಟ್ಟೂರಾದ ಕಕ್ಕಿಂಜೆಯಲ್ಲಿ ಖುತ್‌ಬಿಯ್ಯತುಲ್ ಅನ್‌ವರಿಯ್ಯಃ ಸಮಿತಿಯ ಪ್ರವಚನ ಪರಂಪರೆಯಲ್ಲಿ ನನಗೊಂದು ದಿನದ ಅವಕಾಶ ದೊರಕಿತು. ಅದು ಸ್ವಂತ ಊರಿನಲ್ಲಿ ನನಗೆ ಸಿಕ್ಕ ಮೊಟ್ಟ ಮೊದಲ ಮತ್ತು ಈವರೆಗಿನ ಕಟ್ಟಕಡೆಯ ಅವಕಾಶವಾಗಿತ್ತು. ಅಂದು ನೋಟೀಸ್‌ನಲ್ಲಿ ನನ್ನ ಹೆಸರಿನ 'ಕಾಮಿಲ್ ಸಖಾಫಿ' ಎಂಬುದರ ಬದಲಿಗೆ 'ಕಮಿಟಿ ಸರ್ಕಾರ್' ಎಂದು ತಪ್ಪಾಗಿ ಮುದ್ರಿಸಲಾಗಿತ್ತು. ಆ ಬಗ್ಗೆ ಯಾವತ್ತೂ ಯಾರೊಂದಿಗೂ ಚರ್ಚಿಸಲಿಲ್ಲ.

ಮಾರ್ಚ್ 21 ಶುಕ್ರವಾರ ನಾನು ಉಳ್ಳಾಲ ಮೇಲಂಗಡಿಯಲ್ಲಿ ಭಾಷಣ ಮಾಡುತ್ತಿದ್ದಾಗ ಕುಪ್ಪೆಪದವಿನಿಂದ ಎರಡು ವಾಹನದಲ್ಲಿ ಜನ ಬಂದಿಳಿದರು. ಕಾರ್ಯಕ್ರಮಕ್ಕೆ ದೇಣಿಗೆ ಕೇಳಿದಾಗ ಕೈ ತುಂಬ ಹಣ ಕೊಟ್ಟರು. ಯಾಕೆ ಹೀಗೆ ಎಲ್ಲರೂ ಸೇರಿ ಇಲ್ಲಿಗೆ ಬಂದಿರಿ ಎಂದು ಕೇಳಿದಾಗ 'ಎಲ್ಲ ಊರಿನವರೂ ಅವರ ಕಾರ್ಯಕ್ರಮಕ್ಕೆ ಉಳ್ಳಾಲ ಉಸ್ತಾದರನ್ನು ಆಹ್ವಾನಿಸುತ್ತಾರೆ, ಆದರೆ ಉಳ್ಳಾಲದವರು ನಮ್ಮ ಉಸ್ತಾದರನ್ನು ಆಹ್ವಾನಿಸಿದ್ದಾರೆ' ಎಂದಿದ್ದರು ಬಹಳ ಮುಗ್ಧತೆಯಿಂದ.

ಎಸ್ಸೆಸ್ಸೆಫ್ ಬಲಿಷ್ಠಗೊಳ್ಳುತ್ತಿದ್ದಂತೆ ಸಂಘಟನಾ ನಾಯಕರ ಮುಂದಾಳುತ್ವದಲ್ಲಿ ಒಂದು ಸಮನ್ವಯ ಶಿಕ್ಷಣ ಸಂಸ್ಥೆ ಸ್ಥಾಪಿಸಬೇಕೆಂದು ನಮ್ಮಲ್ಲಿ ಕೆಲವರಿಗೆ ಅನಿಸಿತ್ತು. ಇದರ ಪ್ರಥಮ ಹಂತದ ಚರ್ಚೆಗಾಗಿ 97 ಏಪ್ರಿಲ್ 2 ಬುಧವಾರ ಬೆಳಿಗ್ಗೆ ಹನ್ನೊಂದಕ್ಕೆ ಮೂಡಬಿದ್ರೆ ಅಬೂಸುಫ್ಯಾನ್ ಮದನಿಯ ಮನೆಯಲ್ಲಿ ಸಭೆ ಕರೆಯಲಾಗಿತ್ತು. ಎಸ್ಸೆಸ್ಸೆಫ್ ರಾಜ್ಯಾಧ್ಯಕ್ಷ ಪಿ.ಪಿ.ಅಹ್ಮದ್ ಸಖಾಫಿ, ಎಸ್.ಪಿ.ಹಂಝ ಸಖಾಫಿ, ಡಿ.ಎ.ಹಂಝ ಸಖಾಫಿ ಆತೂರು, ಶಂಸುಲ್ ಹುದಾ ಮಾಡನ್ನೂರು ಸೇರಿದಂತೆ ನಾವು ಆರು ಮಂದಿ ಪಾಲ್ಗೊಂಡೆವು. ಕನಸಿನ ಯೋಜನೆಗೆ 'ಇಶಾಅತುಸ್ಸುನ್ನಃ ಕಲ್ಚರಲ್ ಸೊಸೈಟಿ' ಎಂದು ಹೆಸರಿಸಿದೆವು.

# 19

## ಬದುಕು ಮಗ್ಗುಲು ಬದಲಿಸುತ್ತಾ!

ಮರ್ಕಝ್ ಶರೀಅತ್ ಕಾಲೇಜಿನಿಂದ ಪದವಿ ಪಡೆದ ಬಳಿಕ ಭಾಷಣ ಕ್ಷೇತ್ರ ಕೇರಳದಿಂದ ಕರ್ನಾಟಕಕ್ಕೆ ಸ್ಥಳಾಂತರಗೊಂಡಿತು.

ಆದರೆ ಕೇರಳದಲ್ಲಿ ಸ್ಫಟಿಕ ಮಲಯಾಳಂನಲ್ಲಿ ಮಾತನಾಡುವ ಖುಷಿ ಸ್ಥಳೀಯ ಭಾಷಣಗಳಲ್ಲಿ ಸಿಗುತ್ತಿರಲಿಲ್ಲ. ಕನ್ನಡ ಇನ್ನೂ ನಾಲಗೆಗೆ ಸರಿಯಾಗಿ ಒಗ್ಗಿರದ ಕಾರಣ ವೇದಿಕೆಗಳಲ್ಲಿ ಇರುಸು ಮುರುಸು ಅನುಭವವಾಗುತ್ತಿದ್ದುದು ನಿಜ. ಕೇರಳದ ಭಾಷಣ ಶೈಲಿಗಳಿಂದ ಭಿನ್ನವಾಗಿ ರಾಗವಾಗಿ ಪವ ಅಳ್‌ಪ ಹೇಳುವ ಅನಿವಾರ್ಯತೆ ಇಲ್ಲಿತ್ತು. ಹಾಡುವುದು ನನಗೆಂದೂ ಒಲಿದು ಬರಲಿಲ್ಲ. ಆದ್ದರಿಂದ ರಾಗದ ಪ್ರವಚನ ತುಸು ಸಮಸ್ಯೆಯಾಗಿಯೇ ಎದ್ದು ನಿಂತಿತು. ಆ ಕಾಲದಲ್ಲಿ ವಅಳ್‌ಗೆ ಆಹ್ವಾನ ಸಿಕ್ಕಿರುವುದರ ಪೈಕಿ ಉಲ್ಲೇಖನೀಯ ಸ್ಥಳವೆಂದರೆ ಬೇಕಲ. ಶೈಖುನಾ ಬೇಕಲ್ ಉಸ್ತಾದ್ ಮುದರ್ರಿಸ್ ಆಗಿರುವ ಬೇಕಲದಲ್ಲಿ ಅಲ್ಲಿನ ಬಾವಾ ವಲ್ ಹಸನ್ ದರ್ಗಾ ಶರೀಫಿನ ಉರೂಸಿನ ಪ್ರಯುಕ್ತ ನಡೆಯುವ ಪ್ರವಚನ ಪರಂಪರೆಯಲ್ಲಿ ಮೂರು ದಿನಗಳ ಸತತ ವಅಳ್‌ಗೆ ಆಹ್ವಾನ ಬಂದಿತ್ತು. 1997 ಎಪ್ರಿಲ್ 3,4,5 ದಿನಗಳಲ್ಲಿ ಪ್ರತಿಷ್ಠಿತ ಬೇಕಲ್ ಉರೂಸ್‌ನಲ್ಲಿ ಅಗ್ರೇಸರ ವಿದ್ವಾಂಸ ಖಾಝಿ ಬೇಕಲ್ ಉಸ್ತಾದರ ಸಮ್ಮುಖದಲ್ಲಿ ಲಭಿಸಿದ ಅವಕಾಶ ಅವಿಸ್ಮರಣೀಯ. ಕೈತುಂಬ ಹಣ ನೀಡಿ ಉಸ್ತಾದ್ ಪ್ರೋ ಅವರ ಮುತಅಲ್ಲಿಮರನ್ನು ಕರೆದು ನನಗೆ ಪರಿಚಯಿಸಿ ಇವರೆಲ್ಲ ನಿಮ್ಮ ಅಭಿಮಾನಿಗಳು ಎಂದಿದ್ದು ಸ್ಫೋಟಕ ಸ್ಫೂರ್ತಿಯಾಗಿತ್ತು. ಈ ಮಧ್ಯೆ ಮೂಡಬಿದ್ರೆ 20 ೌವಿಶಿಶಿವಿಶಿಣಿಜ್ಞಿವಿಶ್ಶಿಷಿಾ ಎಮ್ಮೆಸಾಹಿಂ ಝ್ಯುನಿ ಕಾಮಿಲ್ 39 ಮೈಸೂರಿನಲ್ಲಿ ದೂರ ಶಿಕ್ಷಣಕ್ಕಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅದಾಗಲೇ ಪ್ರಾರಂಭವಾಗಿದೆಯೆಂದೂ, ಮಸೀದಿಯಲ್ಲೇ ಕುಳಿತು ಕಲಿತು ಪದವಿ ಪಡೆಯಬಹುದೆಂದೂತಿಳಿಸಿದರು. ಮುಹಮ್ಮದ್ ಬ್ಯಾರಿಯವರು ಸ್ವಂತ ಪ್ರಾಸ್‌ಪೆಕ್ಟಸ್ ನನ್ನನ್ನು ಮನೆಗೆ ಕರೆಸಿಕೊಂಡು ಎಂ.ಎ. ಪದವಿಗೆ ಕಲಿಯುವಂತೆ ಸಲಹೆ ನೀಡಿದರು. ಆಗ ತೋಚಿದ್ದೇ ಒಂದು ಬೈಕ್ ಖರೀದಿಸುವ ಯೋಜನೆ. ಮ್ಯೊಲಾಂಜಿ ಪುಟ  ಜುಲೈ 2013 ಮಮ್ಮದ್ ಹಾಜಿಗೆ ಪ್ರೋ ಮಾಡುವುದಾಗಿ ಹೇಳಿ ಮರಳಲಾಯಿತು. ಕುಪೆಯಹಪದವು ಬದ್ರಿಯಾ ಜುಮಾ ಮಸೀದಿಯಲ್ಲಿ ನನ್ನನ್ನು ಖತೀಬ್ ಮಾಡಲು ಮುತುವರ್ಜಿ ವಹಿಸಿದ ಅಬೂಸುಫ್ಯಾನ್ ಮದನಿ ಅಲ್ಲಿನ ಜಮಾಅತರೊಂದಿಗೆ ನಾನು ಮದ್ರಸ ತೆಗೆಯುವುದಿಲ್ಲವೆಂದೂ, ಅದಕ್ಕೆ ಬದಲಾಗಿ ಇಡೀ ಜಮಾಅತ್‌ಗೆ ಪಕ್ಲಾಸ್‌ಪ ತೆಗೆಯುವುದಾಗಿಯೂ ಘೋಷಿಸಿದ್ದರು. ಇದನ್ನು ಅನ್ವರ್ಥಗೊಳಿಸಲು ಪ್ರತಿವಾರ ಊರಿನ ಸ್ತ್ರೀ ಪುರುಷರಿಗೆ ಸ್ಟಡೀ ಕ್ಲಾಸ್ ಏರ್ಪಡಿಸಲು ನಿರ್ಧರಿಸಿ ಏಪ್ರಿಲ್ 20 ಮಂಗಳವಾರಾಸ್ತ ರಾತ್ರಿ ವಿಧ್ಯುಕ್ತವಾಗಿ ಉದ್ಘಾಟಿಸಲಾಯಿತು. ಮುಂದೆ ಪ್ರತಿವಾರವೂ ಊರವರ ಸ್ಟಡೀ ಕ್ಲಾಸ್ ಉತ್ತಮ ರೀತಿಯಲ್ಲಿ ಮುಂದುವರಿಯುತ್ತಿತ್ತು. ನನ್ನ ಮಟ್ಟಿಗೆ ಅದು ಬ್ಯಾರಿ ಭಾಷಣದ ತರಬೇತು ಶಾಲೆಯೂ ಆಗಿತ್ತು. ಮೇ 22ರಂದು ಉತ್ತರ ಕನ್ನಡದ ಭಟ್ಕಳದಲ್ಲಿ ನಡೆದ ಸುನ್ನೀ ಸಮ್ಮೇಳನ ಭಾಷಣ ಬದುಕಿನ ತಿರುವು ಆದದ್ದು ನಿಜ. ಇಡೀ ದಿನ ಮುಂದುವರಿದ ಶಾಫಿ  ಹನಫಿ ಸಮ್ಮಿಶ್ರ ಸಮ್ಮೇಳನಕ್ಕೆ ಎಸ್.ವೈ.ಎಸ್. ನಾಯಕ ಇಂಜಿನಿಯರ್ ಎಸ್. ಅಬ್ದುರ್ರಹ್ಮಾನ್ ಮುಖ್ಯ ಸಂಘಟಕರಾಗಿದ್ದರು. ಆ ವೇದಿಕೆಯಲ್ಲಿ ಬೆಳಗ್ಗೆ ಮತ್ತು ಅಪರಾಹ್ನ ನನಗೆ ಎರಡು ಭಾಷಣಗಳು ಸಿಕ್ಕವು. ಕನ್ನಡದಲ್ಲಿ ತಕ್ಕ ಮಟ್ಟಿಗೆ ಹೊಂದಿಸಿಕೊಂಡು ಮಾಡಿದ ಭಾಷಣದಲ್ಲಿ ಹನಫಿ ಸಭಿಕರ ಗಮನ ಸೆಳೆಯಲು ಅಲ್ಲಾಮಾ ಇಕ್ಬಾಲ್ ಮತ್ತು ಮೌಲಾನಾ ಅಳ್‌ಲಾ ಹಝ್ರತ್ ಅವರ ಕೆಲವು ಉರ್ದು ಶಾಯರಿಗಳನ್ನೂ ಉಲ್ಲೇಖಿಸಿದೆ. ಇದು ಕೇಳಿದಾಗ ಪನಾರೇ ತಕ್‌ಬೀರ್‌ಪ ಹೇಳಿ ಹುರಿದುಂಬಿಸಿದ ಸಭಿಕರು ಮತ್ತೆ ಮಧ್ಯಾಹ್ನ ನಂತರ ಇನ್ನೊಮ್ಮೆ ಭಾಷಣ ಮಾಡುವಂತೆ ಕೇಳಿ ಕೊಂಡಿದ್ದರು. ಆದರೆ ಆಗ ಬಳಸಲು ನನ್ನ ಬತ್ತಳಿಕೆಯಲ್ಲಿ ಉರ್ದು ಶಾಯಿರಿಗಳು ಉಳಿದಿರಲಿಲ್ಲ. ಸದರಿ ಸಮ್ಮೇಳನದ ಸಮಾರೋಪದಲ್ಲಿ ಶೈಖುನಾ ಎ.ಪಿ. ಉಸ್ತಾದ್ ಮುಖ್ಯ ಭಾಷಣ ಮಾಡಿದ್ದರು.

ಭಾಷಣ ಮುಗಿದ ಮೇಲೆ ಹಾನಗಲ್‌ನಿಂದ ಬಂದಿದ್ದ, ಅಲ್ಲಿನ ಸಯ್ಯಿದ್ ಮಖ್‌ಬೂಲ್ ಶಾಹ್ ಕಾಶ್ಮೀರಿ ವಲಿಯವರ ದರ್ಗಾ ಶರೀಫಿನ ಪದಾಧಿಕಾರಿಗಳು ನನ್ನನ್ನು ಮತ್ತು ಅಬೂ ಸುಫ್‌ಯಾನ್ ಮದನಿ ಅವರನ್ನು ಹಾನಗಲ್ ಉರೂಸ್‌ಗೆ ಬುಕ್ ಮಾಡಿದರು. ಜೂನ್ ಹನ್ನೊಂದು ಬುಧವಾರದಂದು ನಾವು ಹಾನಗಲ್ ಉರೂಸ್‌ನಲ್ಲಿ ಭಾಗವಹಿಸಿ ಮಾತನಾಡಿದೆವು. ಭಟ್ಕಳ್ ಹಾಗೂ ಹಾನಗಲ್ ಭಾಷಣಗಳು ವಿಭಿನ್ನ ಅನುಭವವಾಗಿತ್ತು.

ಸಾರ್ವಜನಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗುವ ವೇಳೆ ಎದುರಾಗುವ ಕೆಲವು 'ಅಗೋಚರ' ತೊಂದರೆಗಳನ್ನು ನಿವಾರಿಸಲು ನಾವೊಂದು ಆಧ್ಯಾತ್ಮಿಕ ಆಶ್ರಯದ ಮೊರೆ ಹೋಗಲು ಉದ್ದೇಶಿಸಿದೆವು. ಕೇರಳದ ಪ್ರಸಿದ್ಧ ಆಧ್ಯಾತ್ಮಿಕ ಶೈಖ್ ಆಗಿದ್ದ ಅಯಿಲ ಕ್ಕಾಡ್ ಎಮಲಪುಯಹರಂಪ ಸಈದ್ ಸಿರಾಜುದ್ದೀನ್ ಮಖ್‌ದೂಮೀ ಅಲ್ ಬುಖಾರಿ ಅವರ ಪತ್ವರೀಖತ್‌ಪ ಪ್ರಕಾರವಿರುವ ವಿಶೇಷ ದಾಹಿಕ್ರ್ ಒಂದನ್ನು ನಾವು ಮರ್ಕಝ್ ನಲ್ಲಿದ್ದಾಗ ಪಡೆದು ಕೊಂಡಿದ್ದೆವು. ಇದರ ಇಜಾಝತ್ ಪಡೆಯುವುದಕ್ಕಾಗಿ ಆ ಪರಂಪರೆಯ ಪ್ರಗಲ್ಭ ಪ್ರತಿನಿಧಿಯಾಗಿದ್ದ ಶೈಖುನಾ ಇ.ಕೆ. ಮುಹಮ್ಮದ್ ದಾರಿಮಿ ಅಲ್ ಖಾದಿರಿ ಅವರನ್ನು ಭೇಟಿ ಮಾಡಲು ಅವರ ತಂದೆ ಶೈಖುನಾ ಇ.ಕೆ. ಉಮರ್ ಹಾಜಿ ಅವರ ಮಖ್‌ಬರ ಇರುವ ಕೋಝಿ ಕ್ಕೋಡ್ ಪರಂಬಿಲ್ ಬಝಾರ್‌ಗೆ ನಾನು ಮತ್ತು ಸಹಪಾಠಿ ಕೆ.ಕೆ.ಎಂ. ಕಾಮಿಲ್ ಸಖಾಫಿ ಹೋಗಿದ್ದೆವು. ಅವರ ಇಜಾಝತ್ ಪ್ರಕಾರ ಅದನ್ನು ಮುಂದುವರಿಸಲು ನಾವೊಂದು ತಂಡಕಟ್ಟಿ ಪ್ರತಿಯೊಬ್ಬ ಸದಸ್ಯರ ಉಸ್ತುವಾರಿಯಲ್ಲಿ ಎರಡು ತಿಂಗಳಿಗೊಮ್ಮೆ ಸದ್ರಿ ದಾಹಿಕ್‌ರನ್ನು

ಅನುಷ್ಠಾನಗೊಳಿಸಲು ನಿರ್ಧರಿಸಿದೆವು. ಇದರ ಅಧಿಕೃತ ಪ್ರಾರಂಭೋತಾಹಿವವು.

ಮೇ 30 ಶುಕ್ರವಾರ ಮಗ್‌ರಿಬ್ ನಂತರ ಕೆಮ್ಮಾರ ಜುಮಾ ಮಸೀದಿಯಲ್ಲಿ ನಡೆಯಿತು. ಕೆಕೆಎಂ ಸಖಾಫಿ ಅಲ್ಲಿ ಮುದರ್‍ರಿಸ್ ಆಗಿದ್ದರು. ಜುಲೈ ಒಂದರಂದು ಉಳ್ಳಾಲ ದರ್ಗಾದ ಅಧ್ಯಕ್ಷ ಮರ್‌ಹೂಂ ಇಬ್‌ರಾಹೀಮ್ ಹಾಜಿ ಪ್ಫೋ ಮಾಡಿ ಬಂದು ಭೇಟಿಯಾಗುವಂತೆ ತಿಳಿಸಿದ್ದರು. ಆಕಾಂಕ್ಷೆ ಮತ್ತು ಆತಂಕದೊಂದಿಗೆ ದರ್ಗಾಕ್ಕೆ ತೆರಳಿದಾಗ ಹಾಜಿಯವರು ಮತ್ತು ಚುಳ್ಳಿಕ್ಕೋಡ್ ಉಸ್ತಾದರು ಸೇರಿ ಕಲ್ಲಾಪು ಪಟ್ಲದಲ್ಲಿ ಖತೀಬ್ ಹುದ್ದೆ ವಹಿಸಿಕೊಳ್ಳುವಂತೆ ಕೇಳಿದರು. ಆದರೆ ಕುಪೆಯಹಪದವಿನ ಸ್ನೇಹ ಜನರನ್ನು ತ್ಯಜಿಸಿ ತೆರಳಲು ಮನಸೂಹಿ ಒಪಯಹ ಲಿಲ್ಲ. ಅಂದಿನ ಭಾಷಣ ಬದುಕಿನ ಅವಕಾಶಗಳಲ್ಲಿ ಪ್ರಮುಖವಾದ ಮತ್ತೊಂದು, ಮಂಗಳೂರಿನ ಈದ್‌ಗಾಹ್ ಮಸೀದಿಯಲ್ಲಿ ನಡೆದ ರಬೀಉಲ್ ಅವ್ವಲ್ ಹನ್ನೆರಡರ ಮೀಲಾದ್ ಸಮಾವೇಶದಲ್ಲಿ ದೊರೆತ ಭಾಷಣ. ಸನ್ಮಾನ್ಯ ಮಂಗಳೂರು ಇಬ್‌ರಾಹೀಂ ಬಾವ ಹಾಜಿಯವರ ಮುತುವರ್ಜಿಯ ಮೇಲೆ ಸಿಕ್ಕಿದ ಈ ಅವಕಾಶವು ಸ್ಫೂರ್ತಿದಾಯಕವಾಗಿತ್ತು. ಜುಲೈ ಹದಿನೇಳು ಗುರುವಾರವಾಗಿತ್ತದು. ಖಾಝಿ ಮರ್‌ಹೂಂ ಕೋಟ ಅಬ್ದುಲ್ ಖಾದಿರ್ ಮುಸ್ಲಿಯಾರ್ ಉದ್ಘಾಟಿಸಿದರು. ಅನಂತರ ಬಾವ ಹಾಜಿಯವರು ಪ್ಫೋ ಮಾಡಿ ಪ್ಫೋ ಮಾತುಗಳನ್ನಾಡಿ ಹುರಿದುಂಬಿಸಿದ್ದರು.

1987 ರಲ್ಲಿ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಹೈಸ್ಕೂಲ್‌ನಲ್ಲಿ ನಿಲ್ಲಿಸಿದ್ದ ಲೌಕಿಕ ಶಿಕ್ಷಣವನ್ನು ಮುಂದುವರಿಸಲು ಏನಾದರೊಂದು ವ್ಯವಸ್ಥೆ ಇರಬಹುದಾ ಎಂದು ಗಂಭೀರವಾಗಿ ಯೋಚಿಸುತ್ತಿರುವಾಗ ಅಚಾನಕ್ ಆಗಿ ಕಣ್ಣಿಗೆ ಬಿದ್ದವರು ಎಡಪದವು ಮುಹಮ್ಮದ್ ಬ್ಯಾರಿ. ಕುಪೆಯಹಪದವು ಜಮಾಅತ್ ಸದಸ್ಯರಾಗಿದ್ದ ಅವರು 40 ಮ್ಯೆಲಾಂಜಿ ಪುಟ  ಜುಲೈ 2013 ಜುಮುಅಕ್ಕೆ ಬಂದಿದ್ದಾಗ ಪರಿಚಯವಾಯಿತು. ಅವರ ಪಕ್ವಾಲಿಫಿಕೇಶನ್‌ಪ ಕೇಳಿ ತಿಳಿದಾಗ ನನಗೂ ಏನಾದರೊಂದು ಡಿಗ್ರಿ ಮಾಡಲು ಸಾಧ್ಯವಾ ಎಂದು ಕೇಳಿದ್ದೆ. ಮೈಸೂರಿನಲ್ಲಿ ದೂರ ಶಿಕ್ಷಣಕ್ಕಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ ಅದಾಗಲೇ ಪ್ರಾರಂಭವಾಗಿದೆಯೆಂದೂ, ಮಸೀದಿಯಲ್ಲೇ ಕುಳಿತು ಕಲಿತು ಪದವಿ ಪಡೆಯಬಹುದೆಂದೂ ಅದಕ್ಕೆ ಎಲ್ಲ ರೀತಿಯ ಸಹಾಯ ಮಾಡುವು ದಾಗಿಯೂ ಮುಹಮ್ಮದ್ ಬ್ಯಾರಿ ತಿಳಿಸಿದರು. ಮುಹಮ್ಮದ್ ಬ್ಯಾರಿಯವರು ಸ್ವಂತಹಣದಲ್ಲಿ ಮೈಸೂರಿನಿಂದ ಪ್ರಾಸ್‌ಪೆಕ್ಟಸ್ ತರಿಸಿ ನನ್ನನ್ನು ಮನೆಗೆ ಕರೆಸಿಕೊಂಡು ಎಂ.ಎ. ಪದವಿಗೆ ಕಲಿಯುವಂತೆ ಸಲಹೆ ನೀಡಿದರು. ನಾವು ಸದಾ ಸಮಾಜದ ಜೊತೆ ಇರುವುದರಿಂದ ಸಮಾಜ ಶಾಸ್ತ್ರವನ್ನೇ ಆಯ್ಕೆ ಮಾಡಲು ಸೂಚಿಸಿದರು. ಹಾಗೆ 1997 ಜುಲೈ 28 ಸೋಮವಾರ ನಾನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ಮಂಗಳೂರು ಬ್ರಾಂಚ್‌ನಲ್ಲಿ ಎಂ.ಎ. ಸೋಶಿಯೋಲಜಿಗೆ ಶುಲ್ಕ ಪಾವತಿಸಿದೆ. ಆಗ ಕುಳಾಯಿಯಲ್ಲಿ ಖತೀಬ್ ಆಗಿದ್ದ ಡಿ.ಪಿ. ಯೂಸುಫ್ ಸಖಾಫಿ ಬೈತಾರ್ ಆರಂಭದಲ್ಲಿ ನನ್ನ ಜತೆಗಿದ್ದರೂ ಅನಂತರ ಕಳಚಿಕೊಂಡರು.

ದಿನಾಲೂ ಕುಪೆಪದವಿನಿಂದ ಐದು ಕಿಲೋಮೀಟರ್ ದೂರದ ಎಡಪದವಿಗೆ ಹೋಗಿ ಮುಹಮ್ಮದ್ ಬ್ಯಾರಿಯವರ ಸೋಶ್ಯೋಲಜಿ ಕ್ಲಾಸ್ ತೆಗೆಸಿ ಕೊಳ್ಳುವುದು ಸುಲಭವಿರಲಿಲ್ಲ. ಸಮಯಕ್ಕೆ ಸರಿಯಾಗಿ ಬಸ್ ಇಲ್ಲದೆ, ಇನ್ನಿತರ ವ್ಯವಸ್ಥೆಗಳೂ ಇಲ್ಲದೆ ಯಾತ್ರೆ ದುಸ್ತರವಾಗಿತ್ತು. ಇಂಗ್ಲಿಷ್ ಪಠ್ಯ ಪುಸ್ತಕಗಳನ್ನು ಸ್ವತಃ ಓದಿ ಅರಗಿಸಿ ಕೊಳ್ಳುವುದು ಕಷ್ಟವಾಗಿತ್ತು. ಆಗ ತೋಚಿದ್ದೇ ಒಂದು ಬೈಕ್ ಖರೀದಿಸುವ ಯೋಜನೆ. ಕಕ್ಕಿಂಜೆ ಪಂಚಾಯತ್ ಮೈದಾನದಲ್ಲಿ ಬಿದ್ದು, ಎದ್ದು ಸೈಕಲ್ ಕಲಿತಿದ್ದ ಮೂಲಭೂತ ಅರಿವನ್ನಿಟ್ಟು ಕೊಂಡು ಒಂದು ರಮಳಾನ್ ತಿಂಗಳ ತರಾವೀಹ್ ನಂತರ ಬೈಕ್ ಕಲಿಯುವ ಯೋಜನೆ ಶುರುವಾಯಿತು. ಸ್ಥಳೀಯ ಟೆಲಿಪ್ಫೋ ಬೀಡಿ ಉಮರಾಕ ತನ್ನ ಸ್ಕೂಟರನ್ನು ನನ್ನ ಕಲಿಕೆಗೆ ಬಿಟ್ಟು ಕೊಟ್ಟರು. ಹಿಂದೆ ಮುಂದೆ ನಿಂತು ಉಮರಾಕ ನನ್ನ ಗುರುವಾದರು. ಸ್ಥಳೀಯ ಎಸ್ಸೆಸ್ಸೆಫ್‌ನ ರಫೀಖ್ ಪದ್ರೆಂಗಿ ತನ್ನ ಹೀರೋ ಹೊಂಡಾ ಸೆಯಹ್ಲಂಡರ್ ಕೊಟ್ಟು ನನ್ನ ತರಬೇತನ್ನು ಸುಧಾರಿಸಿದರು. 1998 ಮಾರ್ಚ್ 5 ಗುರುವಾರದಂದು ಮಂಗಳೂರಿನ ಬಿಜೈ ತ್ರಿಭುವನ್ ಮೋಟಾರ್‌ನಲ್ಲಿ ಹೀರೋ ಹೊಂಡ ಸೆಯಹ್ಲಂಡರ್ ಬುಕ್ ಮಾಡಲಾಯಿತು. ಇದಕ್ಕೂ ಎಡಪದವು ಮುಹಮ್ಮದ್ ಬ್ಯಾರಿ ಬಹಳಷ್ಟು ನೆರವಾದರು. ಮುಂದಿನ ದಿನಗಳು 'ಸಮಾಜ ಶಾಸ್ತ್ರ' ಅಧ್ಯಯನದ ದಿನಗಳು. ಎಡಪದವು ಮುಹಮ್ಮದ್ ಬ್ಯಾರಿಯ ಮನೆ ಮರೂಫ್ ಮಂಝಿಲ್, ನನ್ನ ಪಿ.ಜಿ. ತರಗತಿಯ ಕ್ಲಾಸ್ ರೂಂ ಆಯಿತು. ಮಮ್ಮದಾಕ ನನ್ನ ಉಪನ್ಯಾಸಕರಾದರು. ಇಶಾಅತುಸೂಹಿನ್ನಃದ ಚಟುವಟಿಕೆಗಳನ್ನು ಪ್ರಾರಂಭಿಸಲು ಪೊಸೋಟ್ ತಂಙಳ್‌ರ ಆಗಮನವನ್ನು ನಿರೀಕ್ಷಿಸುತ್ತಿರುವಂತೆಯೇ ದ.ಕ. ಜಿಲ್ಲಾ ಎಸ್ಸೆಸ್ಸೆಫ್ 'ಅಲ್‌ಇಖ್‌ದಾಂ' ಎಂಬ ಹೊಸ ಯೋಜನೆಯನ್ನು ಹಾಕಿ ಸಂಘ ಸಬಲೀಕರಣ ಪ್ರಯಾಣ ಬೆಳೆಸಿತು. ಜಿಲ್ಲಾಧ್ಯಕ್ಷನೆಂಬ ನೆಲೆಯಲ್ಲಿ ನನ್ನ ಜವಬ್ಧಾರಿ ಬಹಳ ಷ್ಟಿತ್ತು. ಅವಿಭಕ್ತ ದ.ಕ. ಜಿಲ್ಲೆಯ 8 ತಾಲೂಕು ಕೇಂದ್ರಗಳಲ್ಲೂ ಸಂಜೆಯಿಂದ ತಡರಾತ್ರಿಯ ತನಕ ವಿವಿಧ ವಿಷಯಗಳಲ್ಲಿ ತರಬೇತು ನೀಡುವುದು ಈ ಶಿಬಿರದ ಉದ್ದೇಶವಾಗಿತ್ತು. ಸಂಘಟನಾ ಚರಿತ್ರೆಯಲ್ಲಿ 'ಅಲ್ ಇಖ್‌ದಾಂ' ಜಿಲ್ಲೆಯ ಕಾರ್ಯಕರ್ತರಿಗೆ ಹೊಸ ಹುಮ್ಮಸೂಹಿ ತುಂಬಿತ್ತೆಂಬುದರಲ್ಲಿ ಎರಡು ಮಾತಿಲ್ಲ. ಜಿಲ್ಲೆಯ ಮುಸ್ಲಿಂ ಬಹುಜನರ ತುಂಬು ನಿರೀಕ್ಷೆಯಾಗಿದ್ದ ದಕ್ಷಿಣ ಕನ್ನಡ ಸುನ್ನೀ ಸೆಂಟರ್ ಆ ಕಾಲದಲ್ಲಿ ದೀನೀ ಪ್ರಚಾರ ರಂಗದಲ್ಲಿ ವಿಭಿನ್ನ ಯೋಜನೆಗಳೊಂದಿಗೆ ಮುನ್ನಡೆಯುತ್ತಿತ್ತು. ಪವಿತ್ರ ಅಹ್‌ಲುಸೂಹಿನ್ನತಿ ವಲ್ ಜಮಾಅತಿನ ತತ್ವಾದರ್ಶಗಳ ಪ್ರಚಾರಕ್ಕೆ ಕನ್ನಡ ಭಾಷಣದ ಆಡಿಯೋ ಕ್ಯಾಸೆಟ್‌ಗಳನ್ನು ಹೊರತರಲು ತೀರ್ಮಾನಿಸಿದ ಅದರ ಕೇಂದ್ರ ಸಮಿತಿಯು 'ತೌಹೀದ್' ಹೆಸರಿನಲ್ಲಿ ಆಡಿಯೋ ಭಾಷಣ ನಡೆಸಲು ನನಗೆ ವಹಿಸಿತ್ತು. ನವೆಂಬರ್ 8 ಶನಿವಾರ ಮಂಗಳೂರಿನ ಸ್ಟುಡಿಯೋ ಒಂದರಲ್ಲಿ ಸದ್ರಿ ಭಾಷಣ ರೆಕಾರ್ಡ್ ಮಾಡಲಾಯಿತು. ಹೀಗೇ ಭಾಷಣ ಬದುಕು ಮಗ್ಗುಲು ಬದಲಿಸುತ್ತಾ ಚಲಿಸಿತು.

# 20

## ಬರೆದು ಮೆರೆಯಲೊಂದು ಮೆಟ್ಟಿಲೊದಗಿತು

ರಾಜ್ಯದ ಧಾರ್ಮಿಕ ಶೈಕ್ಷಣಿಕ ರಂಗ ದಲ್ಲಿ ಕ್ರಾಂತಿಕಾರಿ ಬದಲಾವಣೆಗೆ ಮುನ್ನುಡಿ ಬರೆಯಲು ನಾವು ಯೋಜನೆ ಹಾಕಿದ್ದ ಇಶಾಅತುಸ್ಸುನ್ನಃ ಕಲ್ಚರಲ್ ಸೊಸೈಟಿ ಎಂಬ ಕನಸಿನ ಸಂಸ್ಥೆಯ ಬಗ್ಗೆ ಗಂಭೀರ ಚರ್ಚೆಗಳು ನಡೆದವು. ಅದಾಗಲೇ ದಕ್ಷಿಣ ಕನ್ನಡ ಸುನ್ನೀ ಸೆಂಟರ್‌ನ ಅಧೀನದಲ್ಲಿ ಉಡುಪಿಯ ಮೂಳೂರಿನಲ್ಲಿ ಬಹುಮುಖ ಸಂಸ್ಥೆಯೊಂದರ ಸ್ಥಾಪನೆಗೆ ಅಂತಿಮ ನಕ್ಷೆ ಸಿದ್ಧವಾಗಿತ್ತು. ಈ ನಿಟ್ಟಿನಲ್ಲಿ ಇನ್ನೊಂದು ಬಹುಮುಖ ಸಂಸ್ಥೆ ಯೆಂಬ ಯೋಜನೆಯ

ಅಗತ್ಯದ ಕುರಿತು ಮಾತುಕತೆ ನಡೆಯಬೇಕೆಂದು ಸುನ್ನಿ ಸೆಂಟರ್ ಅಧ್ಯಕ್ಷರಾಗಿದ್ದ ಎಂ.ಬಿ. ಹಸನುಲ್ ಫೈಝಿ ಆಹ್ವಾನ ನೀಡಿದರು. ಅದರಂತೆ ಮಂಗಳೂರಿನ ಎಸ್ಸೆಸ್ಸೆಫ್ ರಾಜ್ಯ ಕಚೇರಿಯಲ್ಲಿ ನಡೆದ ಸಭೆಯಲ್ಲಿ 'ಇಶಾಅತ್' ನಾಯಕರು ಮತ್ತು ದ.ಕ. ಸುನ್ನೀ ಸೆಂಟರ್ ನಾಯಕರು ಒಗ್ಗೂಡಿ ಚರ್ಚಿಸಿದ ಫಲವಾಗಿ, ಸುನ್ನೀ ಕಾರ್ಯ ಕರ್ತರು ಮತ್ತು ನಾಯಕರು ಕಡಿಮೆ ಸಂಖ್ಯೆ ಯಲ್ಲಿರುವಾಗ, ಇರುವ ಶಕ್ತಿಯು ಹರಿಹಂ ಚಾಗಿ ಹೋಗದೆ ಒಂದೆಡೆ ಕೇಂದ್ರೀಕರಣ ಗೊಳ್ಳಲು ಸದ್ಯ ಒಂದೇ ಸಂಸ್ಥೆ ಸಾಕೆಂದು ನಿರ್ಧರಿಸಿ ಎಲ್ಲರೂ ಮೂಳೂರು ಯೋಜನೆಗೆ ಬೆಂಬಲ ಘೋಷಿಸಿ ಸಭೆ ವಿಸರ್ಜಿಸಲಾಯಿತು. ಅದರೊಂದಿಗೆ ಇಶಾಅತುಸ್ಸುನ್ನಃ ಬರ್ಖಾಸ್ತಾಯಿತು. ಇಶಾಅತ್‌ಗೆ ನೇತೃ ತ್ವ ಕೊಡುತ್ತಿದ್ದವರ ಪೈಕಿ ಕೆ.ಪಿ. ಹುಸೈನ್ ಸಅದಿ, ಅಬೂಸು ಫ್‌ಯಾನ್ ಮದನಿ, ಜಿ.ಎಂ. ಕಾಮಿಲ್ ಸಖಾಫಿ ಹಾಗೂ ನಾನು ಸೇರಿದಂತೆ ನಾಲ್ವರಲ್ಲಿ ಒಬ್ಬರು ಮೂಳೂರು ಯೋಜಿತ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಹುದ್ದೆಯನ್ನು ವಹಿಸಿಕೊಳ್ಳುವಂತೆ ಹಸನುಲ್ ಫೈಝಿ ಒತ್ತಾಯಿಸಿದರು. ಪರಿಣಾಮ ಹುಸೈನ್ ಸಅದಿ ಕೆ.ಸಿ.ರೋಡ್ ಜನರಲ್ ಮ್ಯಾನೇಜರ್ ಆದರು. ಆಗ ಅಸ್ತಿತ್ವದಲ್ಲಿದ್ದ ದ.ಕ. ಸುನ್ನೀ ಸೆಂಟರ್‌ನ ಜಿಲ್ಲಾ ಘಟಕಕ್ಕೆ ಸಅದಿಯವರೇ ಅಧ್ಯಕ್ಷರಾಗಿದ್ದರು ಕೂಡಾ. ಉಳಿದವರಿಗೆ ಡಿಕೆಎಸ್ಸಿಯಲ್ಲಿ ವಿವಿಧ ಜವಾಬ್ದಾರಿ ನೀಡ ಲಾಯಿತು. ಸಂಸ್ಥೆಯ ಪ್ರಕಾಶನ ಘಟಕದ ಉಸ್ತುವಾರಿಯನ್ನು ಫೈಝಿಯವರು ನನಗೆ ವಹಿಸಿ ಅದರ ಯೋಜನೆ ಸಿದ್ಧಪಡಿಸಲು ಸೂಚಿಸಿದರು. 98 ಎಪ್ರಿಲ್ 14 ಮಂಗಳವಾರ ಮಧ್ಯಾಹ್ನ ಪುತ್ತೂರು ಬಸ್‌ನಿಲ್ದಾಣದ ಸೂಪರ್ ಲಾಡ್ಜ್‌ನಲ್ಲಿ ಸೇರಿದ ಸಭೆಯಲ್ಲಿ ಪ್ರಕಾಶನ ಘಟಕಕ್ಕೆ 'ಸುನ್ನೀ ಗೈಡನ್ಸ್ ಬ್ಯೂರೋ' ಎಂಬ ಹೆಸರು ಹಾಗೂ ಕೆಲವು ಕಾರ್ಯ ಯೋಜನೆಗಳ ಪಟ್ಟಿಯನ್ನು ಫೈಝಿ ಉಸ್ತಾದರ ಮುಂದಿಟ್ಟೆ. ಅವರು ನನ್ನನ್ನು ಗೈಡನ್ಸ್ ಬ್ಯೂರೋದ ಪ್ರಧಾನ ಕಾರ್ಯದರ್ಶಿ ಯಾಗಿ ಘೋಷಿಸಿದರು. ಹಿರಿಯ ಸುನ್ನೀ ಬರಹಗಾರ ಅರಂತೋಡು ಶಾಹ್ ಮುಸ್ಲಿ ಯಾರ್ ಅಧ್ಯಕ್ಷರಾದರು.

ಇನ್ನೊಂದು ಕಡೆಯಲ್ಲಿ ಕುಪ್ಪೆಪದವು ಮೊಹಲ್ಲಾ ಸುಧಾರಣೆಗೆ ಅಬೂಸುಫ್‌ಯಾನ್ ಉಸ್ತಾದರ ಮಾರ್ಗದರ್ಶನದಲ್ಲಿ ವಿವಿಧ ಕಾರ್ಯ ಕ್ರಮಗಳನ್ನೂ ಹಾಕಲಾಯಿತು. ವಾರಕ್ಕೊಮ್ಮೆ ಮಹಿಳಾ ಕ್ಲಾಸ್, ಎಸ್ಸೆಸ್ಸೆಫ್ ಘಟಕ ಸ್ಥಾಪನೆ, ಮದ್ರ ಸಾದ ಅಭಿವೃದ್ಧಿ ಗಾಗಿ ಸುನ್ನೀ ವಿದ್ಯಾ ಭ್ಯಾಸ ಬೋರ್ಡ್‌ನ ಅಂಗೀಕಾರ, ಮದ್ರ ಸಕ್ಕೆ ಮದೀನತುಲ್ ಉಲೂಂ ಎಂಬ ನಾಮಕರಣ, 'ಪ್ರತಿ ಮನೆಗೆ ಅಲ್ ಅನ್ಸಾರ್' ಎಂಬ ಕಾರ್ಯಕ್ರಮ. ಪುನರ್ನಿರ್ಮಾಣ ಹಂತದಲ್ಲಿದ್ದ ಮಸೀದಿಯ ಪೂರ್ತೀಕರಣ ಎಲ್ಲವೂ ಭರದಿಂದ ಸಾಗು ತ್ತಿತ್ತು. ಆ ಮಧ್ಯೆ ಜಮಾಅತ್ ಅಧ್ಯಕ್ಷರಾಗಿ ಆಯ್ಕೆಯಾದ ನವಾಝ್ ಮಂಝಿಲ್ ಇಬ್‌ರಾಹೀಮ್ ಹಾಜಿ ಅಭಿವೃದ್ಧಿ ಕಾರ್ಯ ಗಳಿಗೆ ಸಂಪೂರ್ಣ ಬೆಂಬಲ ನೀಡಿದರು. ಆಡಳಿತ ಸಮಿತಿಯವರು ಹೆಗಲಿಗೆ ಹೆಗಲು ಕೊಟ್ಟು 'ಕುಪ್ಪೆಪದವು ಬೆಳೆಯಬೇಕು' ಎಂಬ ಘೋಷವಾಕ್ಯದ ಅನುಷ್ಠಾನಕ್ಕೆ ಕಟಿಬದ್ಧರಾಗಿ ನಿಂತರು. ಅಬ್ದುರ್ರಝಾಕ್ ನೇತೃತ್ವದ ಬದ್ರಿ ಯಾ ಇಸ್ಲಾಂ ಯಂಗ್ ಮೆನ್ಸ್ ಎಸೋಸಿಯೇ ಶನ್, ಮುಹಮ್ಮದ್ ಮದನಿ ನೇತೃತ್ವದ ಎಸ್ಸೆಸ್ಸೆಫ್ ಜಮಾಅತಿನ ಅಭಿವೃದ್ಧಿಗೆ ಯುವ ಪಡೆಯನ್ನು ಸಜ್ಜುಗೊಳಿಸಿ ಶಕ್ತಿ ತುಂಬು ತ್ತಿತ್ತು. ಒಟ್ಟಿನಲ್ಲಿ ಕುಪ್ಪೆಪದವಿನ ಜೀವನ ಹರ್ಷದಾಯಕವಾಗಿತ್ತು.

ಹೀಗಿರುವಾಗ '98 ಎಪ್ರಿಲ್ ಏಳು ಮಂಗಳವಾರ ಪವಿತ್ರ ಬಕ್ರೀದ್ ಹಬ್ಬದ ದಿನ ನನ್ನ ಭಾಷಣದಲ್ಲಿ, ಶ್ರೀಮಂತರು ಹಜ್ ನಿರ್ವಹಣೆಯನ್ನು ವಿಳಂಬ ಮಾಡಬಾರದು ಎಂಬ ಧಾರ್ಮಿಕ ವಿಧಿಯನ್ನು ನೆನಪಿಸಿ, ಉದಾಹರಣೆಗೆ ವ್ಯಕ್ತಿಯೊಬ್ಬರ ಹೆಸರನ್ನು ಪ್ರಸ್ತಾಪಿಸಿದಾಗ ಅಲ್ಲಿದ್ದ ಕೆಲವರಿಗೆ ಅದು ಅನಿಷ್ಟವಾಯಿತೆಂದು ತೋರುತ್ತದೆ. ಅವರು ಪ್ರತಿಭಟಿಸಿದರು. ಪರ-ವಿರೋಧ ಮಾತು ಬೆಳೆದು ಎಲ್ಲರೂ ಮಸೀದಿಯಿಂದ ಹೊರ ನಡೆದರು. ಈದ್ ನಮಾಝ್ ಮತ್ತು ಖುತ್‌ಬಃ ನಿರ್ವಹಣೆಯ ಮೊದಲೇ ಹಲವರು ಮಸೀದಿಯಿಂದ ತೆರಳಿಯಾಗಿತ್ತು. ಅದೊಂದು ವಿಚಿತ್ರ ಮತ್ತು ಭಯಾನಕ ಸನ್ನಿವೇಶ. ಕೊನೆಗೆ ಈದ್ ನಮಾಝ್ ಮತ್ತು ಖುತ್‌ಬಃ ಹೇಗೋ ಮುಗಿಯಿತು. ಇದು ಬದುಕಿನಲ್ಲಿ ಮರೆಯ ಲಾಗದ ದುರನುಭವ. ಇದರೊಂದಿದೆ ಕುಪ್ಪೆ ಪದವು ತೊರೆಯಲು ಮನಸ್ಸು ಬಲವಾಗಿ ಬಯಸತೊಡಗಿತು. ಈ ಕಾರಣವನ್ನು ಮುಂದಿ ಟ್ಟು ರಾಜೀನಾಮೆ ಕೊಟ್ಟರೆ ಸ್ನೇಹ ಜನರಿಗೆ ಬೇಸರವಾದೀತೆಂದು ಭಾವಿಸಿ ಬೇರೆ ಕಾರಣ ಹುಡುಕಿದೆ. ದಿನನಿತ್ಯ ಹಲವು ಬಾರಿ ಸಂಘ ಟನಾ ಕೆಲಸ ಮತ್ತು ಭಾಷಣಕ್ಕೆ ಆಹ್ವಾನಿಸಿ ಫೋನ್ ಬರುತ್ತದೆ. ಮಸೀದಿಯಲ್ಲಿ ಫೋನ್ ಸಂಪರ್ಕ ಇಲ್ಲದ ಕಾರಣ ನೆರೆಯ ಒಂದೆರಡು ಮನೆಗಳಿಗೆ ಸದಾ ಸಮಯ ಫೋನ್ ಎತ್ತಲು ಹೋಗುವುದು ಸರಿ ಕಾಣುತ್ತಿಲ್ಲ. ಆದ್ದರಿಂದ ಜಾಗ ಬದಲಾಯಿಸುತ್ತಿರುವುದಾಗಿ ತಿಳಿಸಿ '98 ಎಪ್ರಿಲ್ 24 ಶುಕ್ರವಾರ ಜುಮಾ ನಂತರ ನನ್ನ ರಾಜೀನಾಮೆ ಘೋಷಿಸಿದೆ. ಆಗ ನಾನಲ್ಲಿ ಕೆಲಸಕ್ಕೆ ಸೇರಿ ಒಂದು ವರ್ಷ, ಒಂದು ತಿಂಗಳು ಮತ್ತು ಎರಡು ವಾರವಾಗಿತ್ತು. ನನ್ನ ರಾಜೀ ನಾಮೆ ಘೋಷಣೆಯ ತಕ್ಷಣ ಜಮಾಅತ್ ಅಧ್ಯಕ್ಷ ನವಾಝ್ ಇಬ್‌ರಾಹೀಮ್ ಹಾಜಿ ಯೂ ರಾಜೀನಾಮೆ ಘೋಷಿಸಿದರು. ಊರು ಮತ್ತೆ ಗೊಂದಲದ ಗೂಡು. ಅಬೂಸುಫ್ ಯಾನ್ ಮದನಿ ಊರಿನ ಸರ್ವಜಮಾಅತರ ಸಭೆ ಕರೆದರು. ಮಸೀದಿಗೆ ಫೋನ್ ವ್ಯವಸ್ಥೆ ಮಾಡಿಕೊಟ್ಟರೆ ಖತೀಬರ ರಾಜೀನಾಮೆ ಹಿಂಪಡೆಸಿ ಇಲ್ಲೇ ಮುಂದುವರಿಸುವುದಾಗಿ ಹೇಳಿದರು. ಸ್ಥಳೀಯ ಮುಖಂಡರೂ ಆಗ ಜನತಾದಳದ ಜಿಲ್ಲಾ ಸಂಘಟನಾ ಕಾರ್ಯ ದರ್ಶಿಯೂ ಆಗಿದ್ದ ಡಿ.ಪಿ. ಹಮ್ಮಬ್ಬ ಒಂದು ವಾರದೊಳಗೆ ತಾನು ಫೋನ್ ಕೊಡಿಸುವು ದಾಗಿ ಭರವಸೆ ನೀಡಿದರು. ನುಡಿದಂತೆ ನಡೆದ ಡಿ.ಪಿ. ತನ್ನ ರಾಜಕೀಯ ಪ್ರಭಾವ ಬಳಸಿ ವಾರದೊಳಗೆ ದೂರವಾಣಿ ಸಂಪರ್ಕ ತರಿಸಿ ದರು. 765262 ಸಂಖ್ಯೆ ನನ್ನದಾಯಿತು.

ಎಡಪದವು ಮುಹಮ್ಮದ್ ಬ್ಯಾರಿಯ ಮನೆಯಲ್ಲಿನ ನನ್ನ ಎಂ.ಎ. ಕ್ಲಾಸ್ ರೂಂಗೆ ತಲುಪಲು ಯಾತ್ರಾ ಸಮಸ್ಯೆಗೆ ಪರಿಹಾರ ವೆಂಬಂತೆ ಬುಕ್ ಮಾಡಿದ್ದ ಬೈಕ್ ಮಂಗ ಳೂರು ಬಿಜೈ ತ್ರಿಭುವನ್ ಮೋಟಾರ್ಸ್‌ನಿಂದ '98 ಎಪ್ರಿಲ್ ಹದಿನೆಂಟು ಶನಿವಾರ ಸಂಜೆ ನನ್ನ ಕೈ ಸೇರಿತು. ಗ್ರೇ ಬಣ್ಣದ ಹೀರೋ ಹೊಂಡಾ ಸ್ಪ್ಲೆಂಡರ್ ವಾಹನಕ್ಕೆ ಮತ್ತೆ ಕೆಎ - 19 ಜೆ -9083 ಎಂಬ ನೊಂದಣಿ ಸಂಖ್ಯೆ ದೊರೆಯಿತು. ವಿವಿಧ ಸಂದರ್ಭಗಳಲ್ಲಿ ಸ್ಥಳೀಯ ರಝಾಕ್, ಶೇಖ್ ಅಬ್ದುಲ್ಲ ಮತ್ತು ರಫೀಖ್ ಪದ್ರೆಂಗಿ ಯವರು ನನ್ನ ಚಾಲನಾ ತರಬೇತುದಾರರಾಗಿ ನೆರವಾದರು.

ಭಾಷಣದಲ್ಲೆಂಬಂತೆ ಆ ದಿನಗಳಲ್ಲಿ ಬರಹದ ಮೇಲೂ ವಿಪರೀತ ಆಸಕ್ತಿಯಿತ್ತು. ಬರೆದು ಬೆಳೆಯಲು ಅವಕಾಶವಿರಲಿಲ್ಲ. ಆಗ ಅಲ್ ಅನ್ಸಾರ್ ಕಚೇರಿಯಲ್ಲಿ ಪರಿಚಯ ವಾದ ಉಳ್ಳಾಲದ ಅಯ್ಯೂಬ್ ಮಂಚಿಲ ಎಂಬವರು ತಾನೊಂದು ಪತ್ರಿಕೆ ಪ್ರಾರಂಭಿಸಿಲು ಉದ್ದೇಶಿಸಿದ್ದು ನೆರವು ಬೇಕೆಂದರು. ಹೊಸ ಪತ್ರಿಕೆಯೆಂಬ ನೆಲೆಯಲ್ಲಿ ಬರಹದ ಗುಣಮಟ್ಟ ಕಡಿಮೆ ಇದ್ದರೂ ಬರೆದು ಮೆರೆ ಯಲು ಇದೊಂದು ಉತ್ತಮ ಅವಕಾಶವೆಂದು ತಿಳಿದು ಒಪ್ಪಿಗೆ

ಸೂಚಿಸಿದೆ.

ಆದರೆ '98 ಆಗಸ್ಟ್ 22 ಶನಿವಾರ ಕುಪ್ಪೆಪದವು ಮಸೀದಿಗೆ ತನ್ನ ತಂಡದೊಂದಿಗೆ ಬಂದ ಅಯ್ಯೂಬ್ ಮಂಚಿಲ ತಾನು ಪ್ರಾರಂ ಭಿಸುತ್ತಿರುವ ಪತ್ರಿಕೆಗೆ 'ಹಸಿರು ಭೂಮಿ' ಎಂದು ಹೆಸರು ಲಭಿಸಿದೆಯೆಂದೂ, ನಾನು ಅದರ ಪ್ರಧಾನ ಸಂಪಾದಕನಾಗಬೇಕೆಂದೂ ಅಪೇಕ್ಷಿಸಿದರು. ಚರ್ಚೆಗಳು ಭರದಿಂದ ಸಾಗಿದವು. ಬಳಿಕ ಪತ್ರಿಕೆಯನ್ನು ಉಳ್ಳಾಲ ದರ್ಗಾದಿಂದ ಅಧ್ಯಕ್ಷ ಮರ್‌ಹೂಂ ಯು.ಕೆ. ಇಬ್ರಾಹೀಮ್ ಹಾಜಿ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಪ್ರಕಾಶಿಸುವುದೆಂದು ನಿರ್ಧರಿಸ ಲಾಯಿತು. ಪತ್ರಿಕಾ ಮಂಡಳಿಗೆ ಹಾಜಿ ಕಣಚೂರು ಮೋನು, ಹುಸೈನ್ ಸಅದಿ, ಅಬೂಸುಫ್‌ಯಾನ್ ಮದನಿ, ಯೂಸುಫ್ ಉಳ್ಳಾಲ್, ಜಮಾಲ್ ಉಳ್ಳಾಲ್ ಮುಂತಾದ ವರನ್ನೆಲ್ಲ ಸೇರಿಸಲಾಯಿತು. ಪ್ರಧಾನ ಸಂಪಾದಕನಾಗಿ ನನ್ನನ್ನು ಅಧಿಕೃತವಾಗಿ ಘೋಷಿಸಲಾಯಿತು. 'ಹಸಿರು ಭೂಮಿ' ರಾಜ್ಯ ದ ಪತ್ರಿಕಾ ಪ್ರಪಂಚದಲ್ಲಿ ಗಮನಾರ್ಹ ಉತ್ಪನ್ನವಾಗಬೇಕೆಂದು ನಿರ್ಧರಿಸಿ ನಾವೆಲ್ಲ ರಾತ್ರಿಹಗಲೆನ್ನದೆ ಕಾರ್ಯಪ್ರವೃತ್ತರಾದೆವು. ವಿವಿಧ ಕ್ಷೇತ್ರದ ನೂರಾರು ಮಂದಿ ಪ್ರತಿಭಾ ಶಾಲಿಗಳಿಂದ ಪತ್ರಿಕೆ ಹೇಗಿರಬೇಕೆಂದು ಲಿಖಿತ ವಾಗಿ ಅಭಿಪ್ರಾಯ ಪಡೆಯಲಾಯಿತು. 98 ಅಕ್ಟೋಬರ್ 4 ರಂದು ಬಿಡುಗಡೆಗೆ ದಿನಾಂಕ ವನ್ನು ಪ್ರಕಟಿಸಲಾಯಿತು.

ಅದೊಂದು ದಿನ ಬೆಳ್ಳಂಬೆಳಗ್ಗೆ ಫೋನ್ ಮಾಡಿದ ಪ್ರಕಾಶಕ ಅಯ್ಯೂಬ್ ಮಂಚಿಲ ಪತ್ರಿಕೆ ಬಿಡುಗಡೆಗೆ ಸ್ವಲ್ಪ ಕಾಲಾವಕಾಶ ಬೇಕೆಂ ದರು. ಮುಂದಿನ ನಿರ್ಧಾರ ತಿಳಿಸುವವರೆಗೆ ಯಾವುದೇ ರೀತಿಯಲ್ಲಿ ಮುಂದುವರಿಯ ಬೇಡಿ ಎಂದರು. ಮತ್ತೆ ಅವರು ಫೋನ್ ಮಾಡುವುದನ್ನು ನಿಲ್ಲಿಸಿದರು. ಫೋನ್ ಸ್ವೀಕರಿಸುವುದನ್ನೂ...

ಅಲ್ಲಾಹನ ವಿಧಿ ನಮ್ಮ ನಿರ್ಧಾರವನ್ನು ಹಿಂದಿಕ್ಕಿತು. 'ರಝಾ ಪಬ್ಲಿಕೇಶನ್' ವತಿ ಯಿಂದ ನನ್ನ ಸಂಪಾದಕತ್ವದಲ್ಲಿ ಹೊರಬರ ಬೇಕಾದ 'ಹಸಿರು ಭೂಮಿ' ಮಾಸ ಪತ್ರಿಕೆ. ಅಲ್ಲಾಹನ ಮುನ್‌ವಿಧಿಯಂತೆ ಉಳ್ಳಾಲ ಮದನಿ ಪಬ್ಲಿಕೇಶನ್ ವತಿಯಿಂದ ನಂತರ ಪ್ರಕಾಶಿತವಾಯಿತು. ಗೌರವಾನ್ವಿತ ವಿದ್ವಾಂಸ ಮರ್‌ಹೂಂ ಟಿ.ಎಚ್. ಇಬ್‌ರಾಹೀಮ್ ಮುಸ್ಲಿಯಾರ್ ಅವರ ಪ್ರಧಾನ ಸಂಪಾದ ಕತ್ವದಲ್ಲಿ...

98 ಅಕ್ಟೋಬರ್ ನಾಲ್ಕರಂದು ಉಳ್ಳಾಲ ದಲ್ಲಿ ಮದನೀಸ್‌ನ ವತಿಯಿಂದ ನಡೆದ ಪ್ರಸಿದ್ಧ ಸಮ್ಮೇಳನ ನನ್ನ ಕನ್ನಡ ಭಾಷಣ ಬದುಕಿನಲ್ಲೊಂದು ಅಸಾಧಾರಣ ಅವಕಾಶ ವಾಗಿತ್ತು. ನನ್ನೊಳಗಿನ ಕನ್ನಡ ವಾಗ್ಮಿಯನ್ನು ಸಮುದಾಯಕ್ಕೆ ಪರಿಚಯಿಸಲು ಅಂದು ಭಾಷಣದ ಮೂಲಕ ಸಾಧ್ಯವಾಯಿತು. ತಪ್ಪಿಲ್ಲದೆ ಕನ್ನಡದಲ್ಲಿ ಸ್ಫುಟವಾಗಿ ಮಾತ ನಾಡಲು ಅನೇಕ ದಿನಗಳ ಕಾಲಸಿದ್ಧತೆ ನಡೆಸಿದ್ದೆ. ಶೋತೃಗಳಿಂದ ದೊರೆತ ತುಂಬು ಪ್ರೋತ್ಸಾಹ ಕನ್ನಡ ಇನ್ನಷ್ಟು ಕಲಿಯಲು ಪ್ರೇರಕವಾಯಿತು. ಹಿರಿಯ ಸಾಹಿತಿಯೊಬ್ಬರ ಸಲಹೆಯಂತೆ ಲಂಕೇಶ್ ಪತ್ರಿಕೆ ಮತ್ತು ಹಾಯ್ ಬೆಂಗಳೂರಿನ ಖಾಯಂ ಓದುಗ ನಾದೆ. ಮಂಗಳೂರು ಅತ್ರಿ ಬುಕ್ ಸೆಂಟರ್ ನಿಂದ ಪ್ರಸಿದ್ಧ ಸಾಹಿತಿಗಳ ಪುಸ್ತಕ ತಂದು ಗುಡ್ಡೆ ಹಾಕಿ ಓದ ತೊಡಗಿದೆ. ಗೋಪಾಲ ಕೃಷ್ಣ ಅಡಿಗ, ಕುವೆಂಪು ಮತ್ತು ಬದುಕಿರುವ ರಾಷ್ಟ್ರ ಕವಿ ಜಿ.ಎಸ್. ಶಿವರುದ್ರಪ್ಪ ನನ್ನ ಅಚ್ಚುಮೆಚ್ಚಿನ ಕವಿಗಳಾದರು. ಅವರ ಕವನಗಳು ಎಲ್ಲಿ ಸಿಕ್ಕರೂ ನೋಟ್ ಮಾಡು ವುದು, ಕೋಟ್ ಮಾಡುವುದು ಅಂದಿನ ಹವ್ಯಾಸವಾಗಿತ್ತು.

'98 ಡಿಸೆಂಬರ್ 29ರಿಂದ 99 ಜನವರಿ 5ರ ತನಕ ನಡೆದ ಸುರತ್ಕಲ್ ಗಲಭೆಯದ್ದು ಕರಾಳ ನೆನಪು. ವಿವಿಧ ಕಡೆಗಳಿಂದ ಫೋನ್ ಬಂದು ಅಂತೆ ಕಂತೆಗಳನ್ನು ಹಂಚಿ ಕೊಳ್ಳುವುದು, ಭಯಪಡಿಸುವುದು, ತಪ್ಪು ಮಾಹಿತಿ ನೀಡು ವುದು ಮುಂತಾದವು ನಿರಾತಂಕ ನಡೆಯುತ್ತಿ ದ್ದುವು. ಅದೊಂದು ದಿನ ಅರ್ಧ ರಾತ್ರಿ ಕುಪ್ಪೆ ಪದವು ಮಸೀದಿಗೆ ಬಂದ ಫೋನ್ ಕರೆ ಯೊಂದು ಬಡಕಬೈಲು ಮಸೀದಿಯ ಮೇಲೆ ಭೀಕರ ದಾಳಿಯಾಯಿತೆಂದೂ ಖತೀಬ್ ಮಿತ್ತೂರು ಹಂಝ ಮದನಿ 'ಹೋಗಿ ಬಿಟ್ಟ' ರೆಂದೂ ಮಾಹಿತಿ ನೀಡಿತು'. ಭಯಾನಕತೆಯ ನಿಮಿಷಗಳು ಸರಿದು ಬೆಳಗಾದಾಗ ಅದೊಂದು ಸುಳ್ಳು ಸುದ್ದಿಯೆಂದು ಗೊತ್ತಾ ಯಿತು. ಎಸ್ಸೆಸ್ಸೆಫ್ ಜಿಲ್ಲಾ ನಾಯಕರಾಗಿದ್ದ ಹಂಝ ಮದನಿ ಎಲ್ಲೂ ಹೋಗದೆ ಊರಿನಲ್ಲಿ ಆರಾಮವಾಗಿದ್ದರು.

1999 ಎಸ್ಸೆಸ್ಸೆಫ್ ಹತ್ತು ವರ್ಷ ತುಂಬಿದ ಸಂಭ್ರಮದ ವರ್ಷ. ವಿಶ್ವಶಾಂತಿಗೆ ಧರ್ಮ ಕ್ರಾಂತಿಯ ಸಂದೇಶ ತಲುಪಿಸಲು ನಾವೆಲ್ಲ ರೂ ಯೋಜನಾ ಮೇಜಿನ ಸುತ್ತ ಕುಳಿತು ಕೊಂಡೆವು...

# 21

ಬದುಕು ಅಟ್ಟಾಡಿಸಿತು, ಭಾಷಣ ಆಶ್ರಯ ನೀಡಿತು

1999 ಎಸ್ಸೆಸ್ಸೆಫ್‌ನ ದಶಮಾನೋತ್ಸವ ವರ್ಷ. ರಾಜ್ಯದ ಸುನ್ನೀ ಕಾರ್ಯಕ್ಷೇತ್ರದಲ್ಲಿ ನಿರ್ಣಾಯಕ ತಿರುವಿಗೆ ಸಾಕ್ಷಿಯಾದ ದಿನ ಗಳು. ರಾಜ್ಯಾದ್ಯಂತ 'ವಿಶ್ವಶಾಂತಿಗೆ ಧರ್ಮ ಕ್ರಾಂತಿ' ಎಂಬ ಘೋಷಣಾವಾಕ್ಯದೊಂದಿಗೆ ಸಹಸ್ರಾರು ಕಾರ್ಯಕರ್ತರು ರಾತ್ರಿ ಹಗಲೆನ್ನದೆ ಧಾರ್ಮಿಕ ಜಾಗೃತಿ ಚಳವಳಿಗಳಲ್ಲಿ ತೊಡಗಿಸಿ ಕೊಂಡು ಬಲಿಷ್ಠ ಸುನ್ನೀ ಸಂಘ ಶಕ್ತಿಗೆ ಮುನ್ನುಡಿ ಬರೆದ ಧನ್ಯ ದಶಕದ ಸಂಭ್ರಮದ ಕ್ಷಣಗಳು. 99 ಜನವರಿ 31 ಭಾನುವಾರ ಅಪರಾಹ್ನ ಮೈಸೂರು ಶ್ರೀರಂಗ ಪಟ್ಟಣದ ಶಹೀದೇ ಮಿಲ್ಲತ್ ಟಿಪ್ಪು ಸುಲ್ತಾನರ ವೀರಭೂಮಿ ಯಲ್ಲಿ, ಟಿಪ್ಪು ದರ್ಗಾಕ್ಕೆ ಸೇರಿರುವ ಕಟ್ಟಡ ವೊಂದರಲ್ಲಿ ಒಂದು ವರ್ಷದ ಕಾಲ ಮುಂದು ವರಿಯುವ ಕಾರ್ಯಕ್ರಮಗಳಿಗೆ ಚಾಲನೆ ಕೊಡಲಾಗಿತ್ತು. ಈ ಅವಧಿಯಲ್ಲಿ ಅನೇಕ ಜನಾಕರ್ಷಕ ಕಾರ್ಯಕ್ರಮಗಳು ನಡೆದು ಸಂಘಟನೆ ಜನರ ಗಮನ ಸೆಳೆಯತೊಡಗಿತ್ತು. ಈ ಪೈಕಿ ನಡೆದ ಉಲ್ಲೇಖನೀಯ ಕಾರ್ಯ ಕ್ರಮವೆಂದರೆ 99 ಜೂನ್ 30 ಬುಧವಾರ ದ.ಕ. ಜಿಲ್ಲಾ ಎಸ್ಸೆಸ್ಸೆಫ್ ವತಿಯಿಂದ ನಡೆದ ಕಾರ್ಗಿಲ್ ಜಾಥಾ. ಪಾಕಿಸ್ತಾನದ ಪಾತಕಿ ಕೂಟ ನಮ್ಮ ಭಾರತದ ಕಾಶ್ಮೀರದ ಕಾರ್ಗಿಲ್ ಕಣಿವೆಗಳ ಹಿಮಾಚ್ಛಾದಿತ

ಪ್ರದೇಶಗಳಲ್ಲಿ ನಡೆಸುತ್ತಿದ್ದ ಆಕ್ರಮಣವನ್ನು ತೀವ್ರವಾಗಿ ಖಂಡಿಸಿ, ಭಾರತದ ವೀರಯೋಧರಿಗೆ ಬೆಂಬಲ ಸೂಚಿಸಿ ನಡೆದ ಸದ್ರಿ ಜಾಥಕ್ಕೆ ಜಿಲ್ಲೆಯಾ ದ್ಯಂತ ಅಭೂತಪೂರ್ವ ಬೆಂಬಲ ವ್ಯಕ್ತವಾಗಿತ್ತು. ಈ ಮುಸಲ್ಮಾನರೂ ಹೀಗೆ ಪಾಕಿಸ್ತಾನಕ್ಕೆ ಬೈಯ್ಯುತ್ತಾರೆಯಾ ಎನ್ನುವ ರೀತಿಯಲ್ಲಿ ಅನೇಕ ಕಡೆಗಳಲ್ಲಿ ಸಹೋದರ ಸಮುದಾಯ ಬಾಂಧ ವರು ಬೆರಗುಗಣ್ಣಿನಿಂದ ನೋಡುತ್ತಿದ್ದರು. ಕೆಲವು ಕಡೆಗಳಲ್ಲಿ ಅಂಥ ಯುವಕರ ಗುಂಪು ಸಿಳ್ಳೆಹೊಡೆದು ನಮ್ಮನ್ನು ಹುರಿದುಂಬಿಸುತ್ತಿದ್ದರೆ ಇನ್ನು ಕೆಲವೆಡೆ ಪೆಪ್ಸಿ ಬಾಟಲಿಗಳು, ಎಳನೀರುಗಳು, ಚಾಕಲೇಟ್‌ಗಳನ್ನು ನೀಡಿ ಪುನೀತರಾಗುತ್ತಿದ್ದವು.

ದಶಮಾನೋತ್ಸವವನ್ನು ಬೃಹತ್ ಘಟನೆ ಯನ್ನಾಗಿಸಲು ಸೆಪ್ಟಂಬರ್ 12 ಭಾನುವಾರ ಸ್ವಾಗತ ಸಮಿತಿ ರಚಿಸಲಾಗಿ ಅಬೂ ಸುಫ್ ಯಾನ್ ಮದನಿ ಅಧ್ಯಕ್ಷರಾಗಿಯೂ ಮಲ್ಲೂರು ಅಶ್ರಫ್ ಸಅದಿ ಪ್ರಧಾನ ಕಾರ್ಯದರ್ಶಿ ಯಾಗಿಯೂ ಆಯ್ಕೆಯಾದರು. ಸಮಾ ರೋಪ ಸಮ್ಮೇಳನ ವನ್ನು ಕುಂದಾಪುರ ಗಾಂಧಿ ಮೈದಾನ ದಲ್ಲಿ ನಡೆಸಲು ನಿರ್ಧರಿಸಿದ್ದರಿಂದ ಸ್ಥಳೀಯ ಸ್ವಾಗತ ಸಮಿತಿಗೆ ಭಾಷಾ ಟ್ರಾನ್ಸ್ ಪೋರ್ಟ್‌ನ ಮಾಲಕ ಸಯ್ಯಿದ್ ಫರೀದ್ ಭಾಷಾ ಅವರು ಅಧ್ಯಕ್ಷರಾದರು.

ನವಂಬರ್ 22 ಸೋಮವಾರದಿಂದ ವಿವಿಧ ಜಿಲ್ಲೆಗಳ ಮೂಲಕ ಹಾದು ಸಮ್ಮೇಳನ ಸಂದೇಶ ಹರಡಿದ "ದಶಮಾನೋತ್ಸವ ಭಾವೈಕ್ಯತಾ ಜಾಥಾ" ವಿಭಿನ್ನ ಅನುಭವವಾ ಗಿತ್ತು. ಸಾಮಾನ್ಯ ಎಲ್ಲ ವಾಹನ ಜಾಥಾಗಳ ಲ್ಲಿ ಸ್ವಾಗತ ಕೇಂದ್ರಗಳಲ್ಲಿ ನಿಗದಿಪಡಿಸಿದ ಸಮಯಕ್ಕಿಂತ ಒಂದೆರಡು ಗಂಟೆ ತಡವಾಗಿ ತಲುಪುವುದು ವಾಡಿಕೆಯಾಗಿದ್ದರೆ ನಮ್ಮ ಜಾಥಾ ತಂಡ ನಿಗದಿತ ಸಮಯಕ್ಕಿಂತ ಒಂದೆ ರಡು ಗಂಟೆ ಮೊದಲೇ ತಲುಪುತ್ತಿತ್ತು!! ಅದು ಮರುದಿನವಾಗಿತ್ತೆಂಬುದು ಬೇರೆ ಮಾತು!! ಒಟ್ಟಿನಲ್ಲಿ ಅಲಂಕೃತ ವಾಹನ, ಅದರ ಹಿಂದೆ ಹತ್ತಾರು ವಾಹನಗಳ ಸಾಲು, ಮುಂಡಾಸು ದಾರಿಗಳಿಂದ ಕನ್ನಡದಲ್ಲಿ ಸುಲಲಿತ ಭಾಷಣ ಇವೆಲ್ಲ ಕನ್ನಡನಾಡಿನ ಬೀದಿಗಳಲ್ಲಿ ಹೊಸ ಉತ್ಸಾಹ ಮೂಡಿಸಿತ್ತು.

99 ಡಿಸಂಬರ್ 4,5 ಶನಿವಾರ ಮ ತ್ತು ಭಾನುವಾರ ಗಳಲ್ಲಿ ನಡೆದ ಎಸ್ಸೆ ಸ್ಸೆಫ್‌ನ ಹತ್ತನೇ ವಾರ್ಷಿಕೋತ್ಸವ ರಾಜ್ಯದ ಸುನ್ನೀ ಚಳವಳಿಯ ಹೆಬ್ಬಾಗಿಲು ತೆರೆಯಿತು. ಕುಂದಾ ಪುರ ಗಾಂಧಿ ಮೈದಾನದಲ್ಲಿ ಸೇರಿದ ಅಪಾರ ಜನಸ್ತೋಮ ಅಂದು ಮಾಡಿದ ಪ್ರತಿಜ್ಞೆಯ ಫಲವೇ ಇಂದಿನ ಸಾಂಘಿಕ ಪ್ರಗತಿಯ ಚೈತನ್ಯ. ಸಮಾರೋಪ ಸಮ್ಮೇಳನದಲ್ಲಿ ಸ್ವಾಗತ ಭಾಷಣ ಮಾಡುವ ಅವಕಾಶ ನನಗೆ ಒಲಿ ದಿತ್ತು. ಮಹಾ ಸಮ್ಮೇಳನ ಪ್ರಾರಂಭವಾಗುವ ಮುಂಚೆ ಸಮಯ ಹೊಂದಾಣಿಕೆ ಮತ್ತು ನೆರೆದಿದ್ದ ಜನಾವಳಿಯನ್ನು ಮೈದಾನದೊಳಗೆ ಹಿಡಿದಿಡಲು ಅಂದಿನ ಕಿರಿಯ ಕಾರ್ಯಕರ್ತ ಸಿದ್ದೀಖ್ ಮೊಂಟುಗೋಳಿ ಮಾಡಿದ ಭಾಷಣ ಜನಮನ ಗೆದ್ದಿತ್ತು.

ಮಾಣಿ ದಾರುಲ್ ಇರ್ಶಾದ್‌ನ ಪ್ರಚಾರ ಕ್ಕಾಗಿ ಡಿಸೆಂಬರ್ 20,21,22 ಗಳಲ್ಲಿ ಮುಂಬೈ ಡೋಂಗ್ರಿಯಲ್ಲಿ ಏರ್ಪಡಿಸಿದ ಭಾಷಣ ಕಾರ್ಯಕ್ರಮಕ್ಕೆ ಕೆ.ಸಿ.ರೋಡ್ ಹುಸೈನ್ ಸಅದಿಯ ಜತೆಗೆ ಮಾಣಿ ಉಸ್ತಾದ್ ನನ್ನನ್ನು ಕರೆದೊಯ್ದಿದ್ದರು. ಡೋಂಗ್ರಿ ಚಾವಕ್ಕಾಡ್ ಸಂಘಂ ಸಭಾಂಗಣ ಮತ್ತು ಕುರ್ಲದಲ್ಲಿ ಹಾಗೆ ನನ್ನ ಅಂತರ ರಾಜ್ಯ ಭಾಷಣ ನೆರವೇರಿತ್ತು.

99 ಸೆಪ್ಟೆಂಬರ್ ಒಂದು ಶುಕ್ರವಾರ ನಾನು ಮೊದಲ ಕರ್ಮಭೂಮಿಯಾದ ಕುಪ್ಪೆಪದ ವಿಗೆ ಎರಡನೇ ಬಾರಿ ರಾಜೀನಾಮೆ ನೀಡಿ ಅಲ್ಲಿಂದ ಬಿಡುಗಡೆಗೊಂಡೆ. ದಕ್ಷಿಣ ಕರ್ನಾಟಕ ಸುನ್ನೀ ಸೆಂಟರ್‌ನ ಪ್ರಕಾಶನ ವಿಭಾಗವಾದ ಸುನ್ನೀ ಗೈಡನ್ಸ್ ಬ್ಯೂರೋದಲ್ಲಿ ಕಾರ್ಯದರ್ಶಿಯಾ ಗಿದ್ದ ಕಾರಣ ಮುಂದೆ ಮಸೀದಿ ಕೆಲಸ ನೋಡದೆ ಗೈಡೆನ್ಸ್ ಬ್ಯೂರೋ ಕಚೇರಿಯಲ್ಲಿ ಖಾಯಂ ಆಗಿ ನಿಲ್ಲುವಂತೆ ಹಸನುಲ್ ಫೈಝಿ ಪ್ರಸ್ತಾಪ ವಿಟ್ಟರು. 99 ಆಗಸ್ಟ್ 1ರಂದು 'ಅಲ್ ಹಸನಾತ್' ಎಂಬ ಸ್ಮರಣ ಸಂಚಿಕೆಯ ಕೆಲಸ ವಹಿಸಿಕೊಳ್ಳುತ್ತಾ ಅವರ ಅಪೇಕ್ಷೆ ಸ್ವೀಕರಿಸಿದೆ. ತಲಪಾಡಿಯ ಅಶ್ರಫ್ ಸೋಮೇಶ್ವರ ಸುನ್ನೀ ಸೆಂಟರ್ ಕಚೇರಿ ಕಾರ್ಯದರ್ಶಿಯಾಗಿದ್ದರು. ರಫೀಖ್ ಕಲ್ಲಡ್ಕ ಅವರನ್ನು ಸಹಾಯಕನಾಗಿ ನಾನು ನೇಮಿಸಿಕೊಂಡೆ. ಅಲ್ ಹಸನಾತ್ ಸೋವನೀರ್‌ನ ಜತೆಗೆ ಸುನ್ನೀ ಪ್ರಚಾರ, ಪ್ರಕಾಶನ ರಂಗದಲ್ಲಿ ಇನ್ನಷ್ಟು ಯೋಜನೆಗಳು ನಮ್ಮ ಮುಂದೆ ಇದ್ದವು. ಸುನ್ನತ್ ಜಮಾಅತ್‌ನ ತತ್ವಾದರ್ಶಗಳ ಪ್ರಚಾರಕ್ಕೆ 'ತೌಹೀದ್' ಹೆಸರಿನಲ್ಲಿ ನನ್ನ ಒಂದು ಆಡಿಯೋ ಭಾಷಣ ಕ್ಯಾಸೆಟ್ ಆಗ ಪ್ರಕಟಗೊಂಡಿತ್ತು. ದ.ಕ. ಸುನ್ನೀ ಸೆಂಟರ್ ಅನೇಕ ಕ್ರಾಂತಿಕಾರಕ ಯೋಜನೆಗಳೊಂದಿಗೆ ಮುನ್ನುಗ್ಗುತ್ತಿತ್ತು. ಹೆಚ್ಚಿನ ಸಮಯ ಇದರ ಸೇವೆಯಲ್ಲಿ ತೊಡಗಿ ಸಿಕೊಳ್ಳಬೇಕು ಎನಿಸಿದ್ದರಿಂದ ಅವತ್ತು ಎಸ್ಸೆ ಸ್ಸೆಫ್‌ನ ರಾಜ್ಯ ಸಮಿತಿ ಸದಸ್ಯ ಎಂಬ ಜವಾಬ್ದಾರಿ ಯನ್ನು ಹೊರತು ಪಡಿಸಿ ಉಳಿದೆಲ್ಲ ಹುದ್ದೆ ಗಳಿಂದ ಬಿಡುಗಡೆ ಹೊಂದಿದ್ದೆ. ಏನಿದ್ದರೂ ಡಿಕೆಎಸ್ಸಿಗೇ ಪ್ರಥಮ ಆದ್ಯತೆ ಎಂಬ ಸ್ಥಿತಿಯಿತ್ತು.

2000 ಜನವರಿ 30 ಭಾನುವಾರ ನನ್ನ ಮದುವೆ ದಿನ. ಜೀವನದ ಮಹತ್ವ ಪೂರ್ಣ ಕ್ಷಣದ ಸಂಭ್ರಮವನ್ನು ಊರಿನ ಗ್ರೂಪಿಸಂ ತಲೆಗೆ ಹತ್ತಿದ ಕೆಲವು 'ಮಹನೀಯರು' ಕೆಡಿಸಿ ಬಿಟ್ಟಿದ್ದರು. ಮರ್ಕಝ್ ವಿದ್ಯಾರ್ಥಿ ಅಶ್ರಫ್ (ಸಖಾಫಿ) ನಡಕ್ಕಾವ್ ಮತ್ತು ಮಂಗಳೂರಿನ ಸುನ್ನೀ ಮುಂದಾಳು ಹಾಜಿ ಹಮೀದ್ ಕಂದಕ್ ನಿಕಾಹಿನ ನಂತರ ಶುಭಾಶಯ ಸಲ್ಲಿಸಿ ಭಾಷಣ ಮಾಡಿದ್ದರು. ಭಾಷಣದಲ್ಲಿ ಶೈಖುನಾ ಕಾಂತ ಪುರಂ ಉಸ್ತಾದರ ಮತ್ತು SSFನ ಪ್ರಸ್ತಾಪ ಬರುತ್ತಿದ್ದಂತೆ ಕೆಲವು ಮಂದಿ ಗದ್ದಲ ಪ್ರಾರಂ ಭಿಸಿದರು. ಬೊಬ್ಬೆ ಹೊಡೆದರು. ಶಾಲೆಯಲ್ಲಿ ಪ್ರಾಥಮಿಕ ತರಗತಿಯಿಂದಲೇ ನನ್ನ ಸಹಪಾಠಿ ಯಾಗಿದ್ದ ವ್ಯಕ್ತಿಯೊಬ್ಬ 'ಪೆಂಡಾಲ್'ನ ಕಾಲ ನ್ನು ಕಿತ್ತು ಚಪ್ಪರ ಬೀಳಿಸಲು ಪ್ರಯತ್ನಿಸಿದರೆ ಇನ್ನೊಬ್ಬ ಮಹಾಶಯ ಊಟದ ತಟ್ಟೆ ಯನ್ನು ಚೆಲ್ಲಿದ್ದ. ಇದಕ್ಕೆಲ್ಲ ನನ್ನ ಮೊಹಲ್ಲಾದ ಒಬ್ಬ ಮುಖಂಡ ಮತ್ತು ಯುವ ಮುಂದಾಳು ವೊಬ್ಬ ನಾಯಕತ್ವ ಕೊಟ್ಟಿದ್ದರು. ಇದರ ಹೊರ ತಾಗಿಯೂ ಅನೇಕ ಉಲಮಾ -ಸಾದಾತ್ ಗಳು, ಉಮರಾ ಪ್ರಮುಖರು ಮತ್ತು ಸಾಂಘಿಕ ನಾಯಕರ ಉಪಸ್ಥಿತಿಯಲ್ಲಿ ಮದುವೆ ಕಾರ್ಯಕ್ರಮ ಸಾಂಗವಾಗಿ ನೆರವೇರಿತ್ತು.

ಸಾಮಾನ್ಯವಾಗಿ ನನ್ನ ಹತ್ತನೇ ವಯಸ್ಸಿ ನಿಂದಲೇ ತಂದೆಯ ಜತೆ ಅವರ ಭಾಷಣ ಕಾರ್ಯಕ್ರಮಕ್ಕೆ ಹೋಗುತ್ತಿದ್ದುದು, ವೇದಿಕೆ ಯ ಹಿಂಬದಿಯಲ್ಲಿ ಕುಳಿತು ಕೊಳ್ಳುತ್ತಿದ್ದುದು ವಾಡಿಕೆಯಾಗಿತ್ತು. 2000 ಎಪ್ರಿಲ್ 28 ಶುಕ್ರವಾರದಂದು ಇದಕ್ಕೆ ತದ್ವಿರುದ್ಧವಾದ ಅನುಭವವೊಂದು ನನಗಾಯಿತು. ಸಕಲೇಶಪುರ ಸಮೀಪದ ಹಲಸುಳಿಗೆ ದರ್ಗಾ ಉರೂಸ್ ನಲ್ಲಿ ನನ್ನ ಭಾಷಣವಿದ್ದು ಅಲ್ಲಿ ಖತೀಬ್ ಆಗಿದ್ದ ಬಂಧು ಆಚೆಂಗಿ ಅಬೂಬಕರ್ ಸಖಾಫಿಯ ವರು ನನ್ನ ತಂದೆಯನ್ನೂ ಆಹ್ವಾನಿಸಿದ್ದರು. ಆಗ ಕಕ್ಕಿಂಜೆ ಮುದರ್ರಿಸ್ ಆಗಿದ್ದ ಸಯ್ಯಿದ್ ಎ.ಪಿ.ಎಸ್. ಹುಸೈನುಲ್ ಅಹ್‌ದಲ್ ತಂಙಳ್ (ಉಪ್ಪಳ್ಳಿ) ಕಾರ್ಯಕ್ರಮದಲ್ಲಿ ದುಆ ಮಾಡುವವರಿದ್ದರು. ನನಗೆ ಡೈರಿ ಬರಹ ಮತ್ತು ವಿಷಯ ಸಂಗ್ರಹದ ತಂತ್ರಜ್ಞಾನ ಕಲಿಸಿದ್ದ ಸನ್ಮಿತ್ರ ಹಸೈನಾರ್ ಕಾರಿಕುಳಂ ಅಂದು ತ್ರಿಶೂರ್‌ನಿಂದ

ಕಕ್ಕಿಂಜೆಗೆ ಬಂದಿದ್ದ. ಇವರೆಲ್ಲರ ಜತೆ 'ಕಮಾಂಡರ್' ಜೀಪ್ ಒಂದ ರಲ್ಲಿ ಧರ್ಮಸ್ಥಳ ದಾರಿಯಾಗಿ ಹಲಸುಳಿಗೆ ತಲುಪಲಾಯಿತು. ನನ್ನ ಭಾಷಣಕ್ಕಿಂತ ಮುಂಚೆ ತಂದೆಯಿಂದ ಭಾಷಣ ಮಾಡಿಸಿದರು. ಭಾಷಣ ಬದುಕಿನಲ್ಲಿ ಇದೊಂದು ಸುಮಧುರ ಅನುಭವ. ಹೀಗೆ ಕೆಲವೊಂದು ಭಾಷಣ ಕಾರ್ಯಕ್ರಮಗಳಿಗೆ ಬಂದು ಅವರು ನನ್ನ ಮಾತುಗಳನ್ನು ಆಲಿಸುತ್ತಿದ್ದರು. ಸಲಹೆ, ತಿದ್ದುಪಡಿ ಸೂಚಿಸುತ್ತಿದ್ದರು. ಉಜಿರೆ ಜನಾ ರ್ಧನ ದೇವಸ್ಥಾನದಲ್ಲಿ ನಡೆದ ಸೌಹಾರ್ದ ಸಮ್ಮೇಳನಕ್ಕೆ ಹೋಗುವಾಗ ತಂದೆಯೂ ಜತೆಗೆ ಆಗಮಿಸಿದ್ದರು. ಇದು ತಂದೆಯ ಜತೆ ನಾನು ಭಾಗವಿಸಿದ ಕಟ್ಟಕಡೆಯ ಸಮಾರಂಭ ವಾಗಿತ್ತು. 2001 ಮೇ ಹನ್ನೊಂದರಂದು ತಮ್ಮ ಅರವತ್ತೊಂದನೆಯ ವಯಸ್ಸಿನಲ್ಲಿ ತಂದೆ ಇಹಲೋಕವಾಸ ತ್ಯಜಿಸಿದರು.

ಈ ಮಧ್ಯೆ ಗೈಡನ್ಸ್ ಬ್ಯೂರೋ ಕಚೇರಿ ಯಲ್ಲಿದ್ದ ನನ್ನನ್ನು ತಾತ್ಕಾಲಿಕ ನಿಯೋಜ ನೆಯ ಮೇರೆಗೆ ಜೂನ್ 2ರಿಂದ ಮೂಳೂರು ಸುನ್ನೀ ಸೆಂಟರ್‌ಗೆ ವರ್ಗಾಯಿಸಲಾಯಿತು. ರಬೀಉಲ್ ಅವ್ವಲ್ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವುದು ನನ್ನ ಉದ್ಯೋಗವಾಗಿತ್ತು. ಸುನ್ನೀ ಸೆಂಟರ್ ಮತ್ತು ಗೈಡನ್ಸ್ ಬ್ಯೂರೋಗಳಲ್ಲಿ 2001 ಆಗಸ್ಟ್ ತಿಂಗಳಲ್ಲಿ ಗೈಡನ್ಸ್ ಬ್ಯೂರೋದ ಸಭೆ ಕರೆಯುವಂತೆ ಕಚೇರಿ ಕಾರ್ಯದರ್ಶಿ ಅಶ್ರಫ್ ಸೋಮೇಶ್ವರ ಅವರಿಗೆ ತಿಳಿಸಿದಾಗ; ನೀವು ಕರೆಯುವುದು ಸಾಧ್ಯವಿಲ್ಲ. ನಿಮ್ಮನ್ನು ಎಲ್ಲ ಹುದ್ದೆಗಳಿಂದ ತೆರವುಗೊಳಿಸಿ ಸೆಂಟ್ರಲ್ ಕಮಿಟಿಯಿಂದ ಆದೇಶ ಬಂದಿದೆ ಎಂದ ದುಃಖದಿಂದ. ಅನಂತರದ ಬೆಳವಣಿಗೆಯಲ್ಲಿ ಅದರ ಪ್ರಮುಖರಾದ ಉಮರ್ ಹಾಜಿ ಮುಕ್ವೆ, ಉಮರ್ ಇಸ್ಮಾಈಲ್ ಪುಂಜಾಲ್ ಕಟ್ಟೆ ಹಾಗೂ ಮುಹಮ್ಮದ್ ಖಾನ್ಸಾ ಅವರು ಸೇರಿ ಮಾತುಕತೆ ನಡೆಸಿ ಸಂತೈಸಿದರು. ಡಿಕೆ ಎಸ್ಸಿಗೆ ಬಾಹ್ಯಬೆಂಬಲ ಮುಂದುವರಿಸ ಬೇಕೆಂದರು.

ಅಕಾಲದಲ್ಲಿ ಕೆಲಸ ತೆರವು ಆದ್ದರಿಂದ ಬೇರೆ ಅನುಯೋಜ್ಯ ಹುದ್ದೆ ಇಲ್ಲದೆ ಕಂಗಾ ಲಾದೆ. ಅದೇ ಸಂದರ್ಭದಲ್ಲಿ ರಾಜ್ಯ ಎಸ್ಸೆ ಸ್ಸೆಫ್‌ನ ಪೋಷಕ ಸಂಘಟನೆಯಾಗಿ ಯು.ಎ.ಇ ಯ ಕೆಲವೆಡೆ 'ಕರ್ನಾಟಕ ಸುನ್ನೀ ಸಂಘ' ಅಸ್ತಿತ್ವಕ್ಕೆ ಬಂದಿತ್ತು. ಅದರ ದುಬೈ ಘಟಕ ನಮಾಝ್ ಬಗ್ಗೆ ಕನ್ನಡದಲ್ಲಿ ಒಂದು ಪುಸ್ತಕ ಹೊರತರಲು ರಾಜ್ಯ ಸಮಿತಿಗೆ ಪತ್ರ ಬರೆದಿತ್ತು. ಇದು ಸಮಿತಿಯಲ್ಲಿ ಚರ್ಚೆಗೆ ಬಂದು ಪುಸ್ತಕ ಬರೆಯುವ ಹೊಣೆಯನ್ನು ಅಂದಿನ ರಾಜ್ಯಾಧ್ಯಕ್ಷರಾದ ಎಸ್.ಪಿ. ಹಂಝ ಸಖಾಫಿ ನನಗೆ ವಹಿಸಿದರು.

ಪುಸ್ತಕ ಬರೆಯಲು ಸಿಕ್ಕ ಮೊದಲ ಅವ ಕಾಶ ಕೈಚೆಲ್ಲದಿರಲು ಮತ್ತು ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಈ ದೌತ್ಯವನ್ನು ತಕ್ಷಣ ಒಪ್ಪಿಕೊಂಡೆ. ಫಿಖ್‌ಹ್ ವಿಷಯವಾ ದ್ದರಿಂದ 'ಮಸ್‌ಅಲ'ಗಳಲ್ಲಿ ಎಚ್ಚರ ವಹಿಸು ವುದು ಅಗತ್ಯ. ಅದಕ್ಕಾಗಿ ಶೈಖುನಾ ಬೇಕಲ್ ಉಸ್ತಾದರ ಮಾರ್ಗದರ್ಶನದಲ್ಲಿಯೇ ಬರೆಯಲು ನಿರ್ಧರಿಸಿದೆ. ಬೇಕಲ್ ಉಸ್ತಾದರ ಸ್ವಂತ ಮೊಹಲ್ಲಾವಾದ 'ಮರಿಕ್ಕಳ'ದಲ್ಲಿ ಆಗ ಮಿತ್ರ ಕೆಕೆಎಂ ಸಖಾಫಿ ಮುದರ್ರಿಸ್ ಆಗಿದ್ದರಿಂದ ಅವರ ಮಸೀದಿಯಲ್ಲಿ ತಂಗಿ, ಬೇಕಲ್ ಉಸ್ತಾದರನ್ನು ಅವರ ಮನೆಯಲ್ಲಿ ಭೇಟಿಯಾಗಿ ಎಡಿಟಿಂಗ್ ನಡೆಸಿ ಪುಸ್ತಕ ರೂಪಿಸಲು ಅನುಕೂಲವಾಯ್ತು. ಸೆಪ್ಟೆಂಬರ್ 20ರಿಂದ ಡಿಸೆಂಬರ್ ಏಳರ ತನಕ ಎಪ್ಪ ತ್ತೊಂಬತ್ತು ದಿನಗಳ ಅವಧಿಯಲ್ಲಿ 'ನಮಾಝ್ ಗೈಡ್' ಎಂಬ ಹೆಸರಲ್ಲಿ ನನ್ನ ಚೊಚ್ಚಲ ಪುಸ್ತಕ ಸಿದ್ಧಗೊಂಡಿತು.

ಆ ಮಧ್ಯೆ ನಿರುದ್ಯೋಗದ ಅಸಹ್ಯತೆ ಮತ್ತು ರಮಳಾನ್ ತಿಂಗಳ ಆಗಮನದ ಹಿನ್ನೆಲೆಯಲ್ಲಿ ಎಲ್ಲಾದರೊಂದು ಕಡೆ ಮಸೀದಿ ಆಯ್ಕೆ ಮಾಡುವುದು, ಅಲ್ಲಿ ದರ್ಸ್ ಪ್ರಾರಂ ಭಿಸುವುದು ನನ್ನ ಕನಸಾಯಿತು. ಎಸ್ಸೆಸ್ಸೆಫ್ ರಾಜ್ಯ ಸಲಹಾ ಮಂಡಳಿ ಅಧ್ಯಕ್ಷರಾಗಿದ್ದ ಕೆ.ಪಿ. ಹುಸೈನ್ ಸಅದಿ ಉಸ್ತಾದರ ಕೆ.ಸಿ. ರೋಡ್ ಮಸೀದಿಗೆ ತೆರಳಿ ವಿಷಯ ತಿಳಿಸಿ ದಾಗ ಅವರಿಂದ ಸೂಕ್ತ ಮಸೀದಿಯ ಭರವಸೆ ಸಿಕ್ಕಿತ್ತು. ಅದಾಗಿ ಮೂರನೇ ದಿವಸ ಸಅದಿ ಉಸ್ತಾದ್ ಫೋನ್ ಮಾಡಿ ತಲಪಾಡಿಯಲ್ಲಿ ಖತೀಬ್ ಹುದ್ದೆ ಇರುವುದಾಗಿ ತಿಳಿಸಿ ಸಂಬಂಧ ಪಟ್ಟವರನ್ನು ಸಂಪರ್ಕಿಸಲು ಹೇಳಿದರು. 2000 ನವೆಂಬರ್ ಹದಿನೇಳು ಶುಕ್ರವಾರ ತಲಪಾಡಿ ಬಿಲಾಲ್ ಜುಮಾ ಮಸೀದಿಯಲ್ಲಿ ಖತೀಬ್ ಹುದ್ದೆ ವಹಿಸಿಕೊಂಡೆ. ಇಂದಿಗೂ ಮುಂದುವರಿಯುತ್ತಿದ್ದೇನೆ.

ದೂರವಾಣಿ ಸಂಪರ್ಕವೆನ್ನುವುದು ತ್ರಾಸ ದಾಯಕವಾಗಿದ್ದ ಈ ಕಾಲದಲ್ಲಿ ಮೊಬೈಲ್ ಕೊಳ್ಳುವುದು ತುಂಬಾ ಸಾಹಸಿಕವಾಗಿತ್ತು. ಮೊಬೈಲ್ ಸೆಟ್‌ನ ದುಬಾರಿ ಬೆಲೆ, ನಗರ ಪ್ರದೇಶದಲ್ಲಿ ಮಾತ್ರ ಸಿಗುವ ನೆಟ್‌ವರ್ಕ್ ಹಾಗೂ ಇನ್‌ಕಮಿಂಗ್ ಕಾಲ್‌ಗಳಿಗೂ ನಿಮಿಷಕ್ಕೆ ಮೂರು ರುಪಾಯಿ ದರ!!! ಸಾಮಾನ್ಯರ ಪಾಲಿಗೆ ಮೊಬೈಲ್ ಎನ್ನುವುದು ಹಗಲುಗನಸಾಗಿತ್ತು.

ಆದರೆ ಸಾಂಘಿಕ ಮತ್ತು ಭಾಷಣ ಸಂಪರ್ಕ ಗಳಿಗೆ ಪರ್ಯಾಯ ವ್ಯವಸ್ಥೆಯೊಂದನ್ನು ಹುಡುಕಿದಾಗ 'ಪೇಜರ್' ಎಂಬ ಸಾಧನವೊಂ ದರ ಪರಿಚಯವಾಗಿತ್ತು. ಕಂಪೆನಿಯಿಂದ ನಾವೊಂದು ಉಪಕರಣ ಖರೀದಿಸಿದರೆ ನಮಗೊಂದು ಸಂಖ್ಯೆ ಸಿಗುವುದು. ಕಂಪೆನಿಗೆ ಫೋನ್ ಮಾಡಿ ನಿಗದಿತ ನಂಬರಿಗೆ ಈ ಸಂದೇಶ ಕೊಡಿ ಎಂದು ಕೇಳಿಕೊಂಡರೆ ನಮ್ಮ ಪೇಜರ್‌ಗೆ ಈ ಸಂದೇಶ ತಲುಪುತ್ತಿತ್ತು. ನಾವು ಬೇರೆ ಸ್ಥಿರ ದೂರವಾಣಿಯಿಂದ ಅವರಿಗೆ ಕರೆಮಾಡಿ ವಿಚಾರ ತಿಳಿದು ಕೊಳ್ಳಬೇಕಿತ್ತು. 2000 ಜುಲೈಯಿಂದ ಡಿಸೆಂಬರ್ ವರೆಗಿನ 6 ತಿಂಗಳಿಗೆ 1575ರೂ ಪಾವತಿಸಿ ನಾನು ಪೇಜರ್ ಗ್ರಾಹಕನಾದೆ. ನನ್ನ ಕಂಪೆನಿ ಸಂಖ್ಯೆ 9652 ಹಾಗೂ ನನ್ನ ಪೇಜರ್ ಸಂಖ್ಯೆ 501272 ಆಗಿತ್ತು. ಆರು ತಿಂಗಳೊಳಗೆ ಕಂಪೆನಿಯು ತನ್ನ ಮಂಗಳೂರು ಕಚೇರಿಯನ್ನು ಸದ್ದಿಲ್ಲದೆ ಮುಚ್ಚಿ ಪರಾರಿಯಾಗಿತ್ತು. ಪೇಜರ್ ನಿಶ್ಚಲ.

ಡಿಸೆಂಬರ್ 12, ರಮಳಾನ್ ಹದಿನೇಳರ ಬದ್‌ರ್ ದಿನದ ಮುಸ್ಸಂಜೆಯಲ್ಲಿ ನಮ್ಮ ಕಕ್ಕಿಂಜೆಯ ಮನೆಯಲ್ಲೊಂದು ಪುಟ್ಟ ಸಂಭ್ರಮ. ಆ ದಿನ 75427 ನಂಬ್ರದಲ್ಲಿ ನಮ್ಮ ಮನೆಗೆ ಫೋನ್ ಸಂಪರ್ಕ ಲಭಿಸಿತ್ತು. ಅಂದಿನಿಂದ ಪ್ರತಿದಿನ ಉಪವಾಸ ತೊರೆದ ತಕ್ಷಣ ತಂದೆ ತಲಪಾಡಿಗೆ ಫೋನ್ ಮಾಡಿ ಕ್ಷೇಮ ವಿಚಾರಿಸುತ್ತಿದ್ದರು. ಆ ದಿನಗಳಲ್ಲಿ ಫೋನ್ ಮಾಡುವುದೂ ತೆಗೆಯುವುದೂ ರೋಮಾಂಚಕ ಅನುಭವ.

ಕೆಲಸಕ್ಕೊಂದು ಮಸೀದಿ ಹೇಗೋ ಸಿಕ್ಕಿತ್ತು. ಆದರೆ ಹಳೆ ಮಸೀದಿ ಕೆಡವಿ ಹೊಸ ಮಸೀದಿ ನಿರ್ಮಾಣದ ಅಂತಿಮ ನಕ್ಷೆ ಸಿದ್ಧಗೊಂಡಿದ್ದ ತಲಪಾಡಿಯಲ್ಲಿ ದರ್ಸ್ ಪ್ರಾರಂಭಿಸುವುದು ಸಾಧ್ಯವಿರಲಿಲ್ಲ. ಮತ್ತೆ ಮುಂದುವರಿಯಿತು, ದರ್ಸ್ ಸ್ಥಾಪಿಸಲು ಸಾಧ್ಯವಿರುವ ಬೇರೆ ಮಸೀದಿ ಯೊಂದರ ತಲಾಷು... ಪ್ರತಿಷ್ಠಿತ ಮೊಹಲ್ಲಾ ವೊಂದಕ್ಕೆ ಭಾಷಣಗಾರ ಮುದರ್ರಿಸ್ ಬೇಕೆಂಬ ಸುದ್ದಿಯೊಂದು ಆಗ ಕಿವಿಗೆ ಬಿತ್ತು.

# 22

## ಬದುಕಿನ ಅತ್ಯಂತ ಸಂತೋಷ ಮತ್ತು ಅತ್ಯಂತ ದುಃಖದ ಎರಡು ದಿನಗಳು

ಪ್ರವಾದಿ ಶ್ರೇಷ್ಠ (ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ)ರ ಕಾಲದಲ್ಲೇ ಕೇರಳಕ್ಕೆ ಇಸ್ಲಾಂ ಪ್ರವೇಶಿಸಿತು ಎನ್ನುತ್ತದೆ ಇತಿಹಾಸ. ಭಾರತದ ಮೊಟ್ಟ ಮೊದಲ ಮಸೀದಿ ಕೇರಳದ ತ್ರಿಶೂ ರ್ ಜಿಲ್ಲೆಯ ಕೊಡುಂಙಲ್ಲೂರ್ ಎಂಬಲ್ಲಿ ಕ್ರಿಸ್ತಶಕ 629ರಲ್ಲಿ ನಿರ್ಮಾಣವಾಗಿದ್ದು ಇದಕ್ಕೆ ಸ್ವಹಾಬಿವರ್ಯರಾದ ಮಾಲಿಕ್ ದೀನಾರ್ ﵁ ತಂಡವು ನೇತೃತ್ವ ಕೊಟ್ಟಿತ್ತು. ಕ್ರಿಸ್ತಶಕ 632 ಜೂನ್ 8 ಸೋಮವಾರದಂದು ವಿಶ್ವ ಪ್ರವಾದಿ ಮುಹಮ್ಮದ್ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಾ ಮುನವ್ವ ರದಲ್ಲಿ ಇಹಲೋಕ ವಾಸ ತ್ಯಜಿಸುವುದಕ್ಕಿಂತ ಮೂರು ವರ್ಷಗಳ ಮೊದಲಾಗಿತ್ತು ಇದು. ಹೀಗೆ ಪ್ರವಾದಿ ಶ್ರೇಷ್ಠರ ನೇರ ಶಿಷ್ಯಂದಿರು ಮದೀನಾದಿಂದ ಬಂದು ಭಾರತದಲ್ಲಿ ಮೊದಲ ಬಾರಿಗೆ ಇಸ್ಲಾಂ ಧರ್ಮವನ್ನು ಪ್ರಚಾರ ಮಾಡಿದಾಗ ಆ ಸಂಘದಲ್ಲಿ ಸಯ್ಯಿದ್ ರಾಫಿಲ್ ಬಿನ್ ಹಬೀಬ್﵁ ಎಂಬ ಸ್ವಹಾಬಿಯೊಬ್ಬರು ಇದ್ದರೆಂದು ಚರಿತ್ರೆಯ ಕೆಲವು ಉಲ್ಲೇಖಗಳಲ್ಲಿ ದಾಖಲಾಗಿದೆ. ಆ ಮಹಾತ್ಮರ ಸಮಾಧಿಯು ಕಾಸರಗೋಡ್ ಜಿಲ್ಲೆಯ ಉತ್ತರ ಭಾಗವಾದ ಇಚ್ಲಂಗೋಡ್ ನಲ್ಲಿದೆ. ಇಲ್ಲಿನ ಪುರಾತನ ಮಾಲಿಕ್ ದೀನಾರ್ ಜುಮಾ ಮಸೀದಿಯ ಪಾರ್ಶ್ವ ದಲ್ಲಿ ಅಂತ್ಯ ವಿಶ್ರಾಂತಿ ಹೊಂದುತ್ತಿರುವ ಇವರ ಜತೆ ಇನ್ನೂ ಅನೇಕ ಮಹಾತ್ಮರ ಖಬರ್‌ಗಳಿವೆ. ಆಧ್ಯಾತ್ಮಿಕ ಕೇಂದ್ರದ ಜತೆಗೆ ಇಚ್ಲಂಗೋಡ್ ಧಾರ್ಮಿಕ ಜ್ಞಾನದ ಕೇಂದ್ರ ವೂ ಆಗಿತ್ತು. ಶತಮಾನಗಳಿಂದಲೇ ಈ ಮಸೀದಿ ಯಲ್ಲಿ ಪ್ರಗಲ್ಭ ಉಲಮಾಗಳ ನೇತೃತ್ವದಲ್ಲಿ ದರ್ಸ್ ನಡೆಯುತ್ತಿತ್ತು.

ಅಂತಹ ಇಚ್ಲಂಗೋಡ್‌ನಲ್ಲಿ 2001ನೇ ವರ್ಷ ಪಂಚವಾರ್ಷಿಕ ಉರೂಸಿನ ಸಂಭ್ರಮ. ಒಂದು ತಿಂಗಳ ಕಾಲ ಮುಂದುವರಿಯುವ ಉರೂಸ್ ಆಚರಣೆಗೆ ಅದಾಗಲೇ ದಿನಾಂಕ ನಿಗದಿಯಾಗಿತ್ತು. ಉರೂಸ್ ಕಾರ್ಯಕ್ರಮದ ಯಶಸ್ಸಿಗೆ ಮತ್ತು ಉಪನ್ಯಾಸದ ದಿನಗಳಲ್ಲಿ ಯಾರಾದರೊಬ್ಬ ಭಾಷಣಗಾರ ಬಾರ ದಿದ್ದರೆ ಆ ದಿನ ವನ್ನು ಭರ್ತಿ ಮಾ ಡಲು ಸಾಧ್ಯವಿ ರುವ ವಾಗ್ಮಿ ಈ ಬಾರಿ ತಮಗೆ ಮು ದರ್ರಿಸ್ ಆಗಿ ಸಿಕ್ಕಿದ್ದರೆ ಚೆನ್ನಾಗಿರುತ್ತಿತ್ತೆಂದು ಆಡಳಿತ ಸಮಿತಿಯವರು ನಿರೀಕ್ಷಿಸಿ ಅಂತವರ ಹುಡುಕಾಟದಲ್ಲಿ ನಿರತರಾಗಿದ್ದರು. ಸೂಕ್ತ ಅಭ್ಯರ್ಥಿಯ ಆಯ್ಕೆಗೆ ಶೈಖುನಾ ಅಲಿ ಕುಂಞಿ ಉಸ್ತಾದ್‌ರಿಗೆ ವಹಿಸಿದ್ದರು.

ತಲಪಾಡಿಯಲ್ಲಿ ಮಸೀದಿ ನವೀಕರಣ ಕೆಲಸ ನಡೆಯುವುದರಿಂದ ಸದ್ಯ ದರ್ಸ್ ಪ್ರಾರಂಭಿಸಲು ಸಾಧ್ಯವಾಗದ ಕಾರಣ ಅಲ್ಲಿ ಜುಮಾ ಖುತ್‌ಬಃವನ್ನು ಮಾತ್ರ ವಹಿಸಿ ಕೊಂಡು ಉಳಿದ ದಿನಗಳಲ್ಲಿ ಇಚ್ಲಂಗೋಡ್ ಮುದರ್ರಿಸ್ ಆಗಿ ನಿಲ್ಲುವಂತೆ ಅಲಿಕುಂಞಿ ಉಸ್ತಾದ್ ಸಲಹೆ ನೀಡಿದರು. ಅದರಂತೆ ಕನಸಿನ ದರ್ಸ್‌ಗೆ ಪವಿತ್ರ ಸ್ವಹಾಬಿಯೋರ್ವರ ಪುಣ್ಯ ಭೂಮಿಯಲ್ಲಿ ಚಾಲನೆ ಕೊಡಲು ಸುಸಂ ದರ್ಭ ಒದಗಿ ಬಂತು.

2001ಜನವರಿ 16, ಶವ್ವಾಲ್ 20 ಮಂಗಳವಾರಾಸ್ತ ಬುಧವಾರ ಮಗ್‌ರಿಬ್ ನಂತರ ಇಚ್ಲಂಗೋಡ್ ಜುಮಾ ಮಸೀದಿ ಯಲ್ಲಿ ನನ್ನ ಮೊದಲ ದರ್ಸ್‌ನ್ನು ಶೈಖುನಾ ಅಲಿಕುಂಞಿ ಉಸ್ತಾದ್ ಪ್ರಾರಂಭಿಸಿಕೊ ಟ್ಟರು. ಕಾರ್ಯಕ್ರಮಕ್ಕೆ ಸಾಕ್ಷಿಯಾಗಲು ನನ್ನ ತಂದೆ ಮರ್‌ಹೂಂ ಎಂ.ಎಸ್.ಮೂಸ ಮುಸ್ಲಿಯಾರ್ ಹಾಗೂ ಮಾವ ಮರ್‌ಹೂಂ ಕೆ.ಎಸ್.ಎಂ. ಪಯೋ ಟ ತಂಙಳ್ ಆಗಮಿಸಿ ದ್ದರು. ಹತ್ತು ಮಂದಿ ಮುತಅಲ್ಲಿಮರಿ ದ್ದರು.

ಮರುದಿನ, ಜನ ವರಿ 17 ನನ್ನ ದರ್ಸ್ ನ ಪ್ರಾರಂಭೋತ್ಸವ. ಮುತಅಲ್ಲಿಮರಿಗೆ ವಿವಿಧ ಕಿತಾಬ್‌ಗಳನ್ನು ಪ್ರಾರಂಭಿಸಲಾಯಿತು. ನನ್ನ ಡೈರಿಯಲ್ಲಿ ಈ ದಿನವನ್ನು ಬದುಕಿನ ಅತ್ಯಂತ ಸಂತೋಷದ ದಿನವೆಂದು ಬರೆದಿಟ್ಟಿದ್ದೇನೆ.

2001 ಜನವರಿ 19 ಮತ್ತು 20ಗಳಲ್ಲಿ ಉಪ್ಪಳ ಸಮೀಪದ ಪತ್ತುಪಾಡಿ ಎಂಬಲ್ಲಿ ನನಗೆ 2 ದಿನಗಳ ಭಾಷಣ ಕಾರ್ಯಕ್ರಮ ವಿತ್ತು. ಸಾಮಾಜಿಕ ಭಾದ್ಯತೆಗಳು ಎಂಬುದು ಭಾಷಣ ವಿಷಯ. ಆ ಎರಡು ದಿನಗಳಲ್ಲಿ ನಾನು ನಡೆಸಿದ ಭಾಷಣ ನನ್ನ ಭಾಷಣ ಬದುಕಿನಲ್ಲಿ ಅತ್ಯಂತ ಕೆಟ್ಟ ಭಾಷಣವೆಂದು ಡೈರಿಯಲ್ಲಿ ನಮೂದಿಸಿದ್ದೇನೆ. ಬೆರಳೆಣಿಕೆಯ ಸಭಿಕರು, ವಿಷಯ ದಾರಿದ್ರ್ಯ, ಎರಡೂ ಕಾಲುಗಳ ಅಸಾಧ್ಯ ಸೆಳೆತ, ತೀವ್ರ ಹಿಂಜರಿಕೆ ಇವೆಲ್ಲವೂ ಒಂದೊಂದು ನಿಮಿಷವೂ ನನಗೆ ಅಸಹ್ಯವಾಗುವಂತೆ ಮಾಡುತ್ತಿತ್ತು. ಹಿರಿಯ ಮಿತ್ರ ಕೊಡಿಯಮ್ಮ ಅಬ್ದುರ್ರಹ್ಮಾನ್ ಫೈಝಿ ಆಗ ಅಲ್ಲಿ ಮುದರ್ರಿಸ್ ಆಗಿದ್ದರು.

ದರ್ಸಿಗೆ ಪ್ರಥಮ ಆದ್ಯತೆ ನೀಡಿ ಅನೇಕ ಮುತಅಲ್ಲಿಮರಿಗೆ ಜ್ಞಾನ ದಾನ ಮಾಡುವ ಅಮೋಘ ಅವಕಾಶವನ್ನು ಕೈಚೆಲ್ಲಕೂಡ ದೆಂದು ಮನಸ್ಸು ನಿರ್ಧರಿಸಿತ್ತು. ಎಸ್ಸೆಸ್ಸೆಫ್ ನಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಹುದ್ದೆ ಯಿದ್ದು, ದರ್ಸ್‌ನ ಬಿಡುವು ವೇಳೆಗಳನ್ನು ಸಂಘ ಧರ್ಮಕ್ಕೆ ವ್ಯಯಿಸಲು ಮತ್ತು ದರ್ಸ್‌ಗೆ ಧಕ್ಕೆಯಾಗದ ರೀತಿಯಲ್ಲಿ ಮಾತ್ರ ಭಾಷಣ ವಹಿಸಿಕೊಳ್ಳಲು ನನ್ನೊಂದಿಗೆ ನಾನೇ ಒಪ್ಪಂದ ಮಾಡಿ ಕುಳಿತಿದ್ದೆ. ಇನ್ನಾವುದೇ ಚಟುವಟಿಕೆಗಳು ಸದ್ಯ ಬೇಡವೆಂದು ಗಟ್ಟಿ ನಿರ್ಧಾರ ಮಾಡಿ ಬಿಡಲಾಗಿತ್ತು. ಅದೊಂದು ದಿನ ಶೈಖುನಾ ಎ.ಪಿ.ಉಸ್ತಾದ್ ಫೋನ್ ಮಾಡಿ ಮರ್ಕಝ್‌ಗೆ ಬರುವಂತೆ ಸೂಚಿಸಿ ದ್ದರು. ನನ್ನಂತೆ ಪುತ್ತೂರು ಉಸ್ಮಾನ್ ಹಾಜಿಯವರಿಗೂ ಈ ಬುಲಾವ್ ಹೋಗಿತ್ತು. ನಾವಿಬ್ಬರೂ ಜತೆಯಾಗಿ ಮರ್ಕಝ್‌ಗೆ ಹೋಗಿ ಉಸ್ತಾದರನ್ನು ಭೇಟಿಯಾದೆವು. ಅದಾಗಲೇ ಪುತ್ತೂರು-ಕುಂಬ್ರದಲ್ಲಿ ಸಾತ್ವಿಕ ರಾದ ಮಮ್ಮುಂಞಿ ಹಾಜಿಯವರು ತನ್ನ ಅಮೂಲ್ಯವಾದ ಒಂದು ಎಕರೆ ಜಮೀನನ್ನು ಕಾರಂದೂರು ಮರ್ಕಝ್‌ಗೆ ದಾನ ನೀಡಿ ದ್ದರು. ಅಲ್ಲೊಂದು ವಿದ್ಯಾ ಮಂದಿರ ನಿರ್ಮಾಣಕ್ಕೆ 2001 ಜನವರಿ 26ರಂದು ಶಿಲಾನ್ಯಾಸ ಮಾಡಲಾಗಿತ್ತು ಕೂಡಾ. ಆ ಕಾರ್ಯಕ್ರಮದಲ್ಲಿ ಒಬ್ಬ ಗಣ್ಯ ಆಮಂತ್ರಿತ ನಾಗಿ ನಾನೂ ಮುಖ್ಯ ಭಾಷಣ ಮಾಡಿ ಬಂದಿದ್ದೆ. ಪುತ್ತೂರು ಉಸ್ಮಾನ್ ಹಾಜಿಯವರ ಸಾರಥ್ಯದಲ್ಲಿ ಅಲ್ಲೊಂದು ಶಿಕ್ಷಣ ಸಂಸ್ಥೆ ಬೆಳೆದು ಬರುವ ಬಗ್ಗೆ ಉಳಿದವರಂತೆ ನನಗೂ ಮಾಹಿತಿ ಸಿಕ್ಕಿತ್ತು. ಆದರೆ ಹಾಜಿಯವರ ಜತೆ ಮರ್ಕಝ್‌ಗೆ ಹೋಗಿ ಎ.ಪಿ.ಉಸ್ತಾದರನ್ನು ಭೇಟಿಯಾದರೆ ಕುಂಬ್ರದ ಯೋಜಿತ ಮರ್ಕ ಝುಲ್ ಹುದಾ ವಿದ್ಯಾ ಸಂಸ್ಥೆಗೆ ನಿನ್ನನ್ನು ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಿದ್ದೇನೆ ಎಂದರು ಉಸ್ತಾದ್ ಆದೇಶದ ಧ್ವನಿಯಲ್ಲಿ. ಅದಕ್ಕಾಗಿ ದುಬೈಗೆ ಹೋಗಬೇ ಕೆಂದೂ ಪಾಸ್‌ಪೋರ್ಟ್ ಪ್ರತಿ ನೀಡಬೇ ಕೆಂದೂ

ಹೇಳಿದರು.

ಇದರೊಂದಿಗೆ ಮುಂದೆ ದರ್ಸ್‌ಗೇ ಆದ್ಯತೆ ಎಂಬಂತಿದ್ದ ನನ್ನ ನಿಲುವಿಗೆ ಮೊದಲ ಏಟು ಬಿತ್ತು. ಕೆಲವು ದಿನ ಬಿಟ್ಟು ಮರ್ಕಝ್‌ನಿಂದ ನನಗೆ 'ವೀಸಾ' ಲಭಿಸಿರುವ ಸುದ್ದಿ ಸಿಕ್ಕಿತು. ದುಬೈಗೆ ಹೊರಡಲು ಸಿದ್ಧರಾಗುವಂತೆ ಬಹು। ವಿಲ್ಯಾಪಳ್ಳಿ ಉಸ್ತಾದ್ ತಿಳಿಸಿದರು.

ನಿರೀಕ್ಷೆಯಂತೆ 2001 ಮಾರ್ಚ್ 9ರಂದು ಇತಿಹಾಸ ಪ್ರಸಿದ್ಧ ಇಚ್ಲಂಗೋಡ್‌ನಲ್ಲಿ ಮಾಲಿಕ್‌ದೀನಾರ್ ಉರೂಸ್‌ಗೆ ಚಾಲನೆಯಾ ಯಿತು. ಪ್ರಗಲ್ಭಾತಿ ಪ್ರಗಲ್ಭ ಭಾಷಣಗಾ ರರೆಲ್ಲರ ಆಗಮನದಿಂದ ಒಂದು ತಿಂಗಳ ಉರೂಸ್ ದಾಖಲೆ ಸೃಷ್ಟಿಸಿತು. ಉರೂಸ್‌ನ ಕೊನೆ ದಿನ ದುಬೈ ಪ್ರವಾಸ ನಿಮಿತ್ತ ನಾನು ದರ್ಸ್‌ಗೆ ಒಂದು ತಿಂಗಳ ರಜೆ ಹಾಕಿದೆ. ಈಶ್ವರ ಮಂಗಳ ಅಬ್ದುಲ್ ರಝಾಖ್ ಅಲ್‌ಖಾಸಿ ಮಿ ನನ್ನ ಬದಲಿಗೆ ನೇಮಕಗೊಂಡರು. ಏಪ್ರಿಲ್ 9ರಂದು ನನ್ನ ಮೊಟ್ಟ ಮೊದಲ ವಿದೇಶ ಯಾತ್ರೆ ಮನೆಯಿಂದ ಪ್ರಾರಂಭವಾ ಯಿತು. 10 ರಂದು ಮುಂಬೈಗೂ 11ರಂದು ದುಬೈಗೂ ತಲುಪಲಾಯಿತು. ದುಬೈ ಏರ್ ಪೋರ್ಟ್‌ನಿಂದ ಮರ್ಕಝ್ ಕಚೇರಿಗೆ ತಲುಪಿದರೆ ಎ.ಪಿ.ಉಸ್ತಾದ್ ಅಲ್ಲಿ ನಮ ಗಾಗಿ ಕಾಯುತ್ತಿದ್ದರು. ಅಲ್ಲಿಂದ ನಾವು ಜತೆ ಯಾಗಿ ಉಸ್ತಾದರ ಕಾರಿನಲ್ಲಿ ಅಬುಧಾಬಿಗೆ ತೆರಳಿದೆವು. ಆ ದಿನ ಮಗ್‌ರಿಬ್ ಬಳಿಕ ಅಬುಧಾಬಿ ಎಸ್.ವೈ.ಎಸ್. ಕಚೇರಿಯಲ್ಲಿ ನಡೆದ ಸಮಾವೇಶದಲ್ಲಿ ಉಸ್ತಾದ್ ನನ್ನಿಂದ ಭಾಷಣ ಮಾಡಿಸಿದರು. ಭಾಷಣಕ್ಕೆ ಮುಂಚೆ ಉಸ್ತಾದ್ ನನ್ನನ್ನು ಸಭೆಗೆ ಪರಿಚಯಿಸಿದರು. ತನ್ನ ಶಿಷ್ಯಂದಿರ ಬೆಳವಣಿಗೆಯಲ್ಲಿ ಉಸ್ತಾ ದ್‌ಗೆ ಇರುವ ಅಪಾರ ಕಾಳಜಿ ಅವರ ಭಾಷಣ ದುದ್ದಕ್ಕೂ ಎದ್ದು ಕಾಣುತ್ತಿತ್ತು. ಈ ಸಖಾಫಿ ಹತ್ತು ವರ್ಷದ ಹಿಂದೆಯೇ ಯುಎಇಗೆ ಬರಬೇಕಿತ್ತು. ಆದರೆ ಈಗ ಬಂದಿದ್ದಾರೆ ಇನ್ನು ಬರುತ್ತಲೇ ಇರುತ್ತಾರೆ. ಕರ್ನಾಟಕದ ಸುನ್ನೀ ಬೆಳವಣಿಗೆಯ ವಿಜಯಕ್ಕೆ ನೀವೆಲ್ಲರೂ ಇವರನ್ನು ಬೆಂಬಲಿಸಬೇಕು ಎಂದರು ಉಸ್ತಾ ದ್. ಮುಂದೆ ಯುಎಇಯ ವಿವಿಧ ಭಾಗಗಳಲ್ಲಿ ನಾನು ಮತ್ತು ಉಸ್ಮಾನ್ ಹಾಜಿಯವರು ಉಸ್ತಾದರೊಂದಿಗೆ ಸುತ್ತಾಡಿದೆವು. ಉದ್ಯಮ ಜಗತ್ತಿನ ದಿಗ್ಗಜರಾದ ಉಮೈರ್ ಬಿನ್ ಯೂ ಸುಫ್, ಎಂ.ಕೆ.ಗ್ರೂಪ್‌ನ ಯೂಸುಫ್ ಅಲಿ ಸೇರಿ ದಂತೆ ಅನೇಕರ ಮನೆಗಳನ್ನು ಸಂದರ್ಶಿಸಿದೆವು.

ಹತ್ತು ದಿನಗಳ ಕಾಲ ಉಸ್ತಾದರ ಜತೆಗಿನ ಈ ಸಹಯಾತ್ರೆಯಲ್ಲಿ ಅನೇಕ ಸಲಹೆಗಳನ್ನು ನೀಡುತ್ತಿದ್ದರು. ಜನರನ್ನು ಕೇವಲ ಹಣ ಸಂಗ್ರ ಹದ ಉದ್ದೇಶದಿಂದ ಮಾತ್ರ ಸಂಪರ್ಕಿಸಬಾ ರದು. ನಮ್ಮ ಸಂಪರ್ಕದಲ್ಲಿರುವ ವ್ಯಕ್ತಿಗಳ ನ್ನೆಲ್ಲ ಸುನ್ನೀ ಕಾರ್ಯಕರ್ತರಾಗಿ ಮಾರ್ಪಡಿಸ ಬೇಕು ಎನ್ನುತ್ತಿದ್ದರು. ಸಖಾಫಿಗಳ ಪೈಕಿ ಜನ ಸಂಪರ್ಕ ಮತ್ತು ಧನ ಸಂಗ್ರಹದಲ್ಲಿ ಪ್ರಥಮ ಸ್ಥಾನ ಪೇರೋಡ್ ಅಬ್ದುರ್‍ರಹ್ಮಾನ್ ಸಖಾಫಿ ಮತ್ತು ದ್ವಿತೀಯ ಸ್ಥಾನ ಕೊಲ್ಲಂ ಮುಹಮ್ಮದ್ ಕುಂಞಿ ಸಖಾಫಿ ಪಡೆದಿದ್ದಾರೆ. ಮೂರನೇ ಸ್ಥಾನ ನೀನು ತುಂಬಬೇಕು ಎನ್ನುತ್ತಿದ್ದರು. ಒಟ್ಟಿನಲ್ಲಿ ಬದುಕಿನಲ್ಲಿ ಮಹತ್ತರವಾದ ಒಂದು ತಿರುವಾಗಿತ್ತು ನನ್ನ ಮೊಟ್ಟ ಮೊದಲ ವಿದೇಶ ಪ್ರವಾಸ.

ನಿರುದ್ಯೋಗ ಸಮಸ್ಯೆಗೆ ಪರಿಹಾರವೆಂ ಬಂತೆ 79 ದಿನಗಳನ್ನು ಬರೆದು ಮುಗಿಸಿದ್ದ ನನ್ನ ಚೊಚ್ಚಲ ಪುಸ್ತಕ 'ನಮಾಝ್ ಗೈಡ್' ಅನ್ನು ದುಬೈನ ಕರ್ನಾಟಕ ಸುನ್ನೀ ಸಂಘದ ಕಾರ್ಯಕರ್ತರು ದುಬೈಯಲ್ಲಿಯೇ ಬಿಡುಗಡೆ ಮಾಡಲು ಬಯಸಿದ್ದರು. ಹಾಗೇ ಏಪ್ರಿಲ್ 18 ರಂದು ಭಾನುವಾರ ಇಶಾ ನಂತರ ದುಬೈಯ ಪ್ರಸಿದ್ಧ ಝುರ್‌ವಾನೀ ಮಸೀದಿಯಲ್ಲಿ ದುಬೈ ಎಸ್‌ವೈಎಸ್ ಅಧ್ಯಕ್ಷ ಸಯ್ಯಿದ್ ಎಂ.ಕೆ. ತಂಙಳ್ ಆಂದ್ರೋತ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪುಟ್ಟ ಸಮಾರಂಭದಲ್ಲಿ ಸಮಸ್ತ ಕೇಂದ್ರ ಮುಶಾವರ ಸದಸ್ಯ ಶೈಖುನಾ ಆಲಿಕುಂಞಿ ಉಸ್ತಾದ್, ಸುನ್ನೀ ಕಾರ್ಯಕರ್ತ ಅಶ್‌ರಫ್ ಅಡ್ಯಾರ್‌ಗೆ ಪ್ರತಿ ನೀಡುವ ಮೂಲಕ ಪುಸ್ತಕ ಬಿಡುಗಡೆಗೊಳಿಸಿದರು.

1996ರಲ್ಲಿ ನಾನು ಮರ್ಕಝ್‌ನಲ್ಲಿ ಕೊನೆಯ ವರ್ಷದ ವಿದ್ಯಾರ್ಥಿಯಾಗಿದ್ದಾಗ ಅಡ್ನೋಕ್ ಕಂಪೆನಿಯ ಮೀಸಾಕ್ಕೆ ಅಪೇಕ್ಷಿಸಿ ಅಬುಧಾಬಿಯ ಪೆಟ್ರೋಲ್ ಪಂಪ್‌ಗಳಲ್ಲಿ ಕೆಲಸಕ್ಕೆ ಪ್ರಯತ್ನಿಸಿದ್ದೆ. ಮರ್ಕಝ್ ಮ್ಯಾನೇಜರ್ ಸಿ.ಮುಹಮ್ಮದ್ ಫೈಝಿ ಈ ಪ್ರಯತ್ನವನ್ನು ವಿಫಲಗೊಳಿಸಿದ್ದರೆಂದು ಮೊದಲೊಮ್ಮೆ ಬರೆದಿದ್ದೆ. ಈಗ ಮರ್ಕಝ್‌ನ ಸಾರಥಿ ಕಾಂತ ಪುರಂ ಉಸ್ತಾದರ ಜತೆ ಅದೇ ಅಬುಧಾಬಿಯ ಅಡ್ನೋಕ್ ಪಂಪ್‌ಗಳ ಮೂಲಕ ಹಾದು ಹೋಗುವಾಗ ಉಸ್ತಾದ್, ಅಂದು ನಾವು ನಿನ್ನನ್ನು ತಡೆಯದಿದ್ದರೆ ನೀನೂ ಇವರಂತೆ ಲೇಬರ್ ಡ್ರೆಸ್ ಹಾಕಿ ಪೆಟ್ರೋಲ್ ಸುರಿಯುತ್ತಿದ್ದೆ. ಈಗ ನಿನಗೆ ಸಮಾಜದಲ್ಲಿ ಎಷ್ಟು ಗೌರವವಿದೆ ಎನ್ನುತ್ತಿದ್ದರು. ಅಂದಿಗೆ 25 ವರ್ಷಗಳ ಹಿಂದೆ ಉಸ್ತಾದ್ ಖತರ್‌ಗೆ ಹೋಗಿದ್ದಾಗ ಅಲ್ಲೊಂದು ಮಸೀದಿ ಇಮಾಮತ್ ಕೆಲಸಕ್ಕೆ ಅವರ ಮೇಲೆ ಒತ್ತಡ ಬಂದಿತ್ತಂತೆ, ಅದನ್ನು ನಾನವತ್ತು ಒಪ್ಪಿ ಕೊಂಡಿದ್ದರೆ ಏನಾಗುತ್ತಿತ್ತು ಎಂದು ಕೇಳಿ ನಗು ತ್ತಿದ್ದರು. ಒಂದು ಕಾಲದಲ್ಲಿ ಕೇರಳದ ಸುನ್ನೀ ಭಾಷಣ ಕ್ಷೇತ್ರದ ಸ್ಫೋಟಕ ಸಾನಿಧ್ಯವಾಗಿದ್ದು ಈಗ ಒಮಾನಿನ ಸಲಾಲದಲ್ಲಿ ಅರಬಿ ಮನೆ ಯೊಂದರ ಚಾಲಕ ಮತ್ತು 'ಮಂದೂಬ್' ಆಗಿ ಕೆಲಸ ಮಾಡುತ್ತಿರುವ ಬಗ್ಗೆ ಪ್ರಸ್ತಾಪಿಸಿ ಬೇಸರ ಮಾಡಿಕೊಳ್ಳುತ್ತಿದ್ದರು. ನಾವು ನಿಷ್ಕಳಂಕ ದೀನೀ ಸೇವಕರಾದರೆ 'ದುನಿಯಾವ್' ನಮ್ಮ ಹಿಂದೆ ಓಡೋಡಿ ಬರುತ್ತದೆ. ಅಲ್ಲಾಹು ನಮ್ಮನ್ನು ವಹಿ ಸಿಕೊಳ್ಳುತ್ತಾನೆ. ಆದರೆ ಭೌತಿ ಕತೆಯ ಹಿಂದೆ ಬಿದ್ದರೆ ಇಹ-ಪರಗಳೆರಡೂ ದುರ್ಬಲವಾ ದದ್ದೇ ಹಲವರ ಉದಾಹರಣೆ ಎನ್ನುತ್ತಿದ್ದರು.

ಒಟ್ಟಿನಲ್ಲಿ ಉಸ್ತಾದರ ಜತೆಗಿನ ಈ ದುಬೈ ಪ್ರವಾಸ ಬದುಕಿನಲ್ಲಿ ಮರೆಯಲಾಗದ ಘಟನೆ, ಆ ಯಾತ್ರೆಯಲ್ಲಿ ನಾನು ಮತ್ತು ಉಸ್ಮಾನ್ ಹಾಜಿಯವರು ಯೋಜಿತ ಮರ್ಕಝುಲ್ ಹುದಾ ಸಂಸ್ಥೆಯ ನಿರ್ಮಾಣ ನಿಧಿಗೆ ಸ್ವಲ್ಪ ಮಟ್ಟಿನ ಹಣ ಸಂಗ್ರಹಿಸಿದೆವು. ಅಬುಧಾಬಿ ಮತ್ತು ಶಾರ್ಜಾದಲ್ಲಿ ಸಂಸ್ಥೆಯ ಸಮಿತಿ ಗಳನ್ನು ಸ್ಥಾಪಿಸಿದೆವು.

ಒಂದು ತಿಂಗಳ ಯಶಸ್ವಿ ಪರ್ಯಟನೆ ಮುಗಿಸಿ ನಾವು ಊರಿಗೆ ಮರಳುವ ಸಿದ್ಧತೆ ನಡೆಸಿದೆವು. ಮೇ 12ರಂದು ರಾತ್ರಿ ನಮಗೆ ದುಬೈಯಿಂದ ಮುಂಬೈಗೆ ವಿಮಾನ ಟಿಕೆಟ್ ಮತ್ತು 12 ರಂದು ಮುಂಬೈ-ಮಂಗಳೂರು ರೈಲಿಗೆ ಟಿಕೆಟ್ ಮಾಡಲಾಗಿತ್ತು. ನಾಳೆ ಊರಿಗೆ ಹೊರಡುವ ಸಂಭ್ರಮ, ಈ ಮಾಹಿತಿಯನ್ನು ತಂದೆ, ತಾಯಿಗೆ ತಿಳಿಸುವ ಉದ್ದೇಶದಿಂದ ಮೇ 11 ರಂದು ಶುಕ್ರವಾರ ಬೆಳಗ್ಗೆ ಮನೆಗೆ ಫೋನ್ ಮಾಡಿದೆ. ಮೊಬೈಲ್ ವ್ಯಾಪಕವಾಗಿರದ ಆ ಕಾಲ ದಲ್ಲಿ ಟೆಲಿಫೋನ್ ಕಾರ್ಡ್‌ಗಳನ್ನು ಬಳಸಿ ಸ್ಥಿರ ದೂರವಾಣಿ ಅಥವಾ ಅಲ್ಲಲ್ಲಿ ಸ್ಥಾಪಿಸಲಾಗಿ ರುವ ಟೆಲಿಫೋನ್ ಕ್ಯಾಬಿನ್‌ಗಳಿಂದ ಫೋನ್ ಮಾಡಬೇಕಿತ್ತು. ಅಂತಹದ್ದೇ ಒಂದು ಕಾರ್ಡ್ ಬಳಸಿ ಅಬುಧಾಬಿ ಮರ್ಕಝ್ ಕಚೇರಿಯಿಂದ ಮನೆಗೆ ಫೋನ್ ಮಾಡಿದರೆ ತಂದೆಗೆ ಅನಾರೋ ಗ್ಯವಿದೆ ತಕ್ಷಣ ಅವರು ಖತೀಬ್ ಆಗಿರುವ ಚಿಕ್ಕಮಗಳೂರು ಸಂಗೀನ್ ಮಸೀದಿಗೆ ಫೋನ್ ಮಾಡುವಂತೆ ತಾಯಿ ತಿಳಿಸಿದರು.

ಚಿಕ್ಕಮಗಳೂರಿನಲ್ಲಿ ಫೋನ್ ಎತ್ತಿದ ಮುಅಲ್ಲಿಂ ರಶೀದ್ ಮುಸ್ಲಿಯಾರ್ ಉಸ್ತಾ ದ್‌ಗೆ ತೀವ್ರ ಅಸೌಖ್ಯವಿದೆ. ವೈದ್ಯರು ಕೈ ಬಿಟ್ಟಿ ದ್ದಾರೆ ಎಂದರು. ನಂತರ ಬಾವ ಕಲ್ಲಕಟ್ಟೆ, ತಂಙಳ್‌ಗೆ ಕರೆದಾಗ ಅವರೊಂದು ಗಂಭೀರ ಮಾಹಿತಿ ನೀಡಿದರು. ಪ್ರೀತಿಯ ತಂದೆ ಮೃತ ಪಟ್ಟು ಅದಾಗಲೇ ಒಂದು ಗಂಟೆಯಾಗಿತ್ತು. ಯಾವುದೇ ರೀತಿಯ ದೊಡ್ಡ ಮಟ್ಟದ  ಖಾಯಿಲೆಗಳು ಇಲ್ಲದ ತಂದೆ ಸಾಮಾನ್ಯ ಆರೋಗ್ಯವಂತರಾಗಿಯೇ ಇದ್ದರು. ಒಂದೆರಡು ವರ್ಷಗಳಿಂದ ಮನೆಯಲ್ಲೇ ಇದ್ದು ಬೋರ್ ಹೊಡೆದಾಗ ಒಂದು ಮಸೀದಿಯಲ್ಲಿ ನಿಲ್ಲಬೇ ಕೆಂದು ಬಯಸಿದ್ದರು. ಅಬೂಸುಫ್‌ಯಾನ್ ಮದನಿಯ ಮೂಲಕ ಅದೇ ಮಾರ್ಚ್ 16ರಂದು ಅವರು ಸಂಗೀನ್ ಮಸೀದಿಯಲ್ಲಿ ಕೆಲಸ ವಹಿಸಿಕೊಂಡಿದ್ದರು. ಮೇ ಹನ್ನೊಂದರ ಶುಕ್ರವಾರ ಬೆಳಗ್ಗೆ ಜುಮಾ ಖುತ್‌ಬಾದ ಸಿದ್ಧತೆಯಲ್ಲಿ ತೊಡಗಿದ್ದಾಗ ಶುರುವಾದ ಪುಟ್ಟ ಎದೆನೋವೊಂದು ಅವರ ಬದುಕನ್ನೇ ಕಸಿದುಕೊಂಡು ಹೋಯಿತು. ಆ ದಿನ ಬೆಳಗ್ಗೆ 9.10ಕ್ಕೆ ಯಾರಿಗೂ ಹೇಳದೆ, ಕೇಳದೆ  ಅವರು ಅರವತ್ತೊಂದು ವರ್ಷದ ಇಹಲೋಕ ಜೀವನಕ್ಕೆ ವಿದಾಯ ಹೇಳಿದ್ದರು.

ಇತ್ತ ದೂರದ ಅಬುಧಾಬಿಯ ಮರ್ಕ ಝ್ ಕಚೇರಿಯಲ್ಲಿ ಸುದ್ದಿಯ ಆಘಾತ ತಾಳ ಲಾರದೆ ನಿಶ್ಚಲನಾಗಿ ಕುಳಿತಿದ್ದೆ ನಾನು. ನನ್ನ ಊರವರೂ ತಂದೆಯ ಶಿಷ್ಯರೂ ಆಗಿದ್ದ  ಕೆ.ಎಚ್.ಅಹ್ಮದ್ ಫೈಝಿ, ಅವರ ತಮ್ಮಂದಿರಾದ ಹಕೀಂ ಮತ್ತು ಲತೀಫ್ ಹಾಗೂ ಮಿತ್ರ ಇಬ್‌ನು ಖತೀಬಿಲ್ ಮಾನಿ ಅಲ್ಲಿಗೆ ಆಗಮಿಸಿ ನನ್ನನ್ನು ಸಮಾಧಾನ ಪಡಿಸಲು ಪ್ರಯತ್ನಿಸುತ್ತಿದ್ದರು. ತಂದೆಯ ಅಂತಿಮ ದರ್ಶನವನ್ನು ಪಡೆಯಲು ಅಸಾಧ್ಯವಾಗಿದ್ದ ನನ್ನ ಸ್ಥಿತಿಯು ಪರಮ ದಯನೀಯವಾಗಿತ್ತು. ಒಂದು ತಿಂಗಳ ಗಲ್ಫ್ ಯಾತ್ರೆಯ ಸಂಭ್ರಮ ನಿಮಿಷಾರ್ಧದಲ್ಲಿ ನುಚ್ಚು ನೂರಾಗಿತ್ತು.

# 23

## ಭಾಷಣ ವೇದಿಕೆಗಳ ಅವಿಸ್ಮರಣೀಯ ಕ್ಷಣಗಳು

ತಂದೆಯ ಮರಣದ ನಂತರದ ದಿನಗಳು ಬದುಕಿನಲ್ಲಿ ತಂದಿಟ್ಟದ್ದು ತುಂಬಲಾರದ ದುಃಖ. ಸ್ಥಿರೋತ್ಸಾಹಿ ಯೂ, ಧೀರ ವ್ಯಕ್ತಿತ್ವದವರೂ ಆಗಿದ್ದ ತಂದೆ ಬದುಕಿನ ಪ್ರತಿ ಕ್ಷಣವನ್ನೂ ಗಮನಿಸಿ ಉಪದೇಶ ನೀಡಿ ತಿದ್ದುತ್ತಿದ್ದರು. ಧಾರ್ಮಿಕ ಜ್ಞಾನದ ಜತೆಯಲ್ಲಿ ಉನ್ನತ ಲೌಕಿಕ ಶಿಕ್ಷಣ ಪಡೆಯಬೇಕೆಂಬುದು ಅವರ ಅಭಿಲಾಷೆ ಯಾಗಿತ್ತು. ಆಧ್ಯಾತ್ಮಿಕ ವ್ಯಕ್ತಿಗಳ ಜತೆ ಸಂಪರ್ಕವಿರಿಸಿಕೊಳ್ಳಲು ಮತ್ತು ಮಹಾತ್ಮರ ದರ್ಗಾ ಝಿಯಾರತ್ ಮಾಡುತ್ತಿರಲು ನಿರಂತರ ಉಪದೇಶಿಸುತ್ತಿದ್ದರು. ತಂದೆಯ ವ್ಯಕ್ತಿತ್ವ ಮತ್ತು ಸಾಂದರ್ಭಿಕ ಸಲಹೆ ಸೂಚನೆಗಳು ನನ್ನ ಬದುಕಿನಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಗಿತ್ತು. ಪ್ರಗಲ್ಭ ವಾಗ್ಮಿಯಾಗಿದ್ದ ತಂದೆ, ಸಾಮಾನ್ಯವಾಗಿ ಯಾರೂ ಹೇಳದ ಅಪರೂಪದ ವಿಷಯಗಳನ್ನೇ ಹೆಚ್ಚಾಗಿ ಹೇಳುತ್ತಿದ್ದರು. ಜನರೊಂದಿಗೆ ಉಪದೇಶಗಳಲ್ಲಿ ಯಾರನ್ನೂ 'ಕ್ಯಾರ್' ಮಾಡದ ಗಂಭೀರ ಶೈಲಿಯನ್ನೂ ಹೊಂದಿದ್ದರು. ಮೂಡಿಗೆರೆ ಮಸೀದಿಯಲ್ಲಿ ಅವರು ಜುಮಾ ನಂತರ ಮಾಡುತ್ತಿದ್ದ ಭಾಷಣಗಳು ಒಂದು ಮೊಹಲ್ಲಾವನ್ನು ಸಮುದ್ಧರಿಸಲು ಓರ್ವ ಖತೀಬ್ ಹೇಗೆ ವ್ಯವಹರಿಸಬೇಕೆಂಬುದರ ನೇರ ಉದಾಹರಣೆಗಳಾಗುತ್ತಿತ್ತು.

ನಾನು ಝಿಯಾರತ್‌ಗೆ ಹೋದ ದರ್ಗಾಗಳ ಮತ್ತು ಸಂದರ್ಶಿಸಿದ ಮಹಾತ್ಮರ ವಿವರಗಳನ್ನು ಆಗಾಗ ಪತ್ರ ಮೂಲಕ ತಂದೆಗೆ ತಿಳಿಸುತ್ತಿದ್ದೆ. ಸಮಯ ಸಿಕ್ಕಾಗ ಆ ಮಹಾತ್ಮರ ಸಂದರ್ಶನಕ್ಕೆ ಅವರೂ ಯೋಜನೆ ಹಾಕುತ್ತಿದ್ದರು. 1987ರಲ್ಲಿ 9ನೇ ತರಗತಿಯಲ್ಲಿ ಶಾಲೆಗೆ ವಿದಾಯ ಹೇಳಿ ಅವರ ಕೆಂಗಣ್ಣಿಗೆ ಗುರಿಯಾಗಿದ್ದ ನಾನು ಮುಂದೆ ಯುನಿವರ್ಸಿಟಿಯ ಎಂ.ಎ. ಪದವಿ ಪರೀಕ್ಷೆ ಬರೆಯುತ್ತಿರುವುದು ಅವರಿಗೆ ಅಪಾರ ಖುಷಿ ಕೊಟ್ಟಿತ್ತು. ಮುಂದೆ ಪಿ.ಎಚ್.ಡಿ. ಪಡೆಯುವ ನನ್ನ ಕನಸಿನ ಯೋಜನೆಯ ಬಗ್ಗೆ ತಿಳಿಸಿದಾಗ ಅವರ ಸಂತೋಷಕ್ಕೆ ಪಾರವಿರಲಿಲ್ಲ. ಆದರೆ ಅವರ ಮರಣದೊಂದಿಗೆ ನನ್ನ ಇಂತಹ ಅನೇಕ ಕನಸುಗಳೂ ಮಣ್ಣು ಪಾಲಾದವು. ಬದುಕಿನ ಮುಂದಿರುವ ಗುರುತರ ಜವಾಬ್ದಾರಿಗಳು ಎಲ್ಲ ನೂತನ ಯೋಜನೆಗಳನ್ನು ಹೊಸಕಿ ಹಾಕಿ ಕೇವಲ ಹತಾಶೆಯನ್ನು ಮಾತ್ರ ಉಳಿಸಿತ್ತು. 'ಬದುಕೊಂದು ಜಟಕಾ ಬಂಡಿ, ವಿಧಿಯದರ ಸಾಹೇಬ' ಎನ್ನುವುದರ ವಾಸ್ತವ ಅರಿವಾದ ದಿನಗಳು...

2001 ಜುಲೈ 13 ಶುಕ್ರವಾರ ಸಂಜೆ ಕುಂಬಳೆ ಪೇಟೆಯಲ್ಲಿ 'ಸೂಫಿಗಳುಂ ದೇಶೀಯ ಪ್ರಸ್ಥಾನವುಂ' ಎಂಬ ವಿಷಯದಲ್ಲಿ ನಾನು ಮಾಡಿದ್ದ ಮಲಯಾಳಂ ಭಾಷಣ ಮುಂದೆ ಆಡಿಯೋ ಕ್ಯಾಸೆಟ್ ಆಗಿ ಹೊರಬಂದಿತ್ತು. ಅದೇ ವರ್ಷ ನವೆಂಬರ್ 18 ರಂದು ನನ್ನ ಎರಡನೇ ದುಬೈ ಯಾತ್ರೆ. ನಿರ್ಮಾಣದ ಹಂತದಲ್ಲಿರುವ ಮರ್ಕಝುಲ್ ಹುದಾಗಾಗಿ ಅನಿವಾರ್ಯವಾಗಿ ನಾನು ವಿದೇಶಕ್ಕೆ ಹೋಗಬೇಕಿತ್ತು. ಆ ಬಾರಿ ಜತೆಗೆ ಮಿತ್ರ ಅಬ್ದುಲ್ ಕರೀಂ ಚೆನ್ನಾರ್ ಅವರೂ ಇದ್ದರು. ಎಸ್ಸೆಸ್ಸೆಫ್ ಅಧೀನ ಸಂಸ್ಥೆ 'ಇಫ್‌ರಾದ್'ಗೆ ಸ್ವಂತವಾಗಿ ಒಂದು ಕಚೇರಿ ಎಂಬ ಯೋಜನೆಯೊಂದಿಗೆ ಅದರ ಕಾರ್ಯದರ್ಶಿಯಾದ ಕರೀಂ ಚೆನ್ನಾರ್ ವಿಮಾನ ಹತ್ತಿದ್ದರು. ರಂಝಾನ್ ತಿಂಗಳ ಆ ದಿನಗಳಲ್ಲಿ ತಲಪಾಡಿ ಮಸೀದಿಯಲ್ಲಿ ತರಾವೀಹ್ ಮತ್ತಿತ್ತರ ಚಟುವಟಿಕೆಗಳಿಗೆ ಆಗ ತಾನೆ ಮರ್ಕಝ್‌ನಿಂದ ಪದವಿ ಪಡೆದು ಬಂದ ತೋಕೆ ಮುಹ್ಯಿದ್ದೀನ್ ಕಾಮಿಲ್ ಸಖಾಫಿಯನ್ನು ನೇಮಕ ಮಾಡಲಾಯಿತು. ಒಂದನೇ ಯಾತ್ರೆ ಮುಗಿಸಿ ಬರುವುದರೊಳಗೆ ನಾನು ತಂದೆಯನ್ನು ಕಳೆದುಕೊಂಡರೆ ಎರಡನೇ ಯಾತ್ರೆ ಮುಗಿಸಿ ಬರುವುದರೊಳಗೆ ಕುಂಬ್ರ ಮರ್ಕಝುಲ್ ಹುದಾಗೆ ಸ್ಥಳದಾನ ಮಾಡಿದ್ದ ಕುಂಬ್ರ ಮಮ್ಮುಂಞಿ ಹಾಜಿಯವರು ಇಹಲೋಕ ವಾಸ ತ್ಯಜಿಸಿದ್ದರು.

ಇಚ್ಲಂಗೋಡ್ ಪ್ರಸಿದ್ಧ ಮಾಲಿಕ್ ದೀನಾರ್ ಜುಮಾ ಮಸೀದಿಯಲ್ಲಿ ನನ್ನ ಮೊದಲ ದರ್ಸ್. ಒಂದು ವರ್ಷ ಪೂರ್ತಿ ಮಾಡಿದಾಗ ತಲಪಾಡಿ ಜುಮಾ ಮಸೀದಿಯ ಕಾಮಗಾರಿ ಸ್ವಲ್ಪ ಅಭಿವೃದ್ಧಿ ಹೊಂದಿತ್ತು. ಆದ್ದರಿಂದ ದರ್ಸ್ ತಲಪಾಡಿಗೆ ಸ್ಥಳಾಂತರಿಸಬೇಕೆಂದು ಜಮಾಅತ್ ಸಮಿತಿ ಅಪೇಕ್ಷಿಸಿತು. ಅದರಂತೆ 2002 ಜನವರಿ ಒಂದು ಮಂಗಳವಾರಸ್ತ ಬುಧವಾರ ರಾತ್ರಿ ಶೈಖುನಾ ಎಂ. ಅಲಿಕುಂಞಿ ಉಸ್ತಾದ್ ಶಿರಿಯಾ ತಲಪಾಡಿಯಲ್ಲಿ ದರ್ಸ್ ಉದ್ಘಾಟಿಸಿ ಕೊಟ್ಟರು. ಜನವರಿ ತಿಂಗಳ ಆರಂಭದ ದಿನಗಳು ತುಂಬ ನೆಮ್ಮದಿ ದಾಯಕವಾಗಿದ್ದವು. ಜನವರಿ 9ರ ಡೈರಿ ಪುಟದಲ್ಲಿ ಇತ್ತೀಚಿನ ದಿನಗಳು ನನ್ನ ಪಾಲಿಗೆ ತುಂಬ ಸಂತಸಕರವಾಗಿದ್ದವು ಎಂದು ಬರೆದಿಟ್ಟಿದ್ದೇನೆ.

ಇಫ್‌ರಾದ್‌ಗಾಗಿ ಫಂಡ್ ಸಂಗ್ರಹಿಸಲು ದುಬೈ ಹೋಗಿದ್ದ ಕರೀಂ ಚೆನ್ನಾರ್, ನಮ್ಮ ಚಟುವಟಿಕೆಗೆ ಬೆಂಬಲ ಸಿಗಬೇಕಿದ್ದರೆ ಗೌರವಾನ್ವಿತ ಸಯ್ಯಿದ್ ಒಬ್ಬರನ್ನು ಇದರ ಮುಖ್ಯ ಪೋಷಕರಾಗಿ ನೇಮಿಸಬೇಕೆಂದು ಸಲಹೆ ನೀಡಿದ್ದರು. ಅದರಂತೆ ರಾಜ್ಯ ಸಮಿತಿಯಲ್ಲಿ ಚರ್ಚಿಸಿ ಸಯ್ಯಿದ್ ತ್ವಾಹಿರುಲ್ ಅಹ್ದಲ್ ತಂಙಳ್ ಅವರನ್ನು ಚೀಫ್ ಪೇಟ್ರನ್ ಮಾಡಲು ನಿರ್ಧರಿಸಿ ಅವರ ಒಪ್ಪಿಗೆ ಪಡೆಯಲು 2002 ಫೆಬ್ರವರಿ 3 ಭಾನುವಾರ ನಾನು ಮತ್ತು ಚೆನ್ನಾರ್ ಮುಹಿಮ್ಮಾತ್‌ಗೆ ತೆರಳಿದೆವು. ಕರ್ನಾಟಕದಲ್ಲಿ ಸುನ್ನತ್ ಜಮಾಅತ್ ಬಲಪಡಿಸಲು ತನ್ನ ನೆರವು ಬೇಕಿದ್ದರೆ ಸದಾ ಲಭ್ಯವಿರುವುದಾಗಿ ತಿಳಿಸಿದ ತಂಙಳ್ ಇಫ್‌ರಾದ್ ಪ್ರಕಾಶನ ಸಂಸ್ಥೆಯ ಮುಖ್ಯ ಪೋಷಕರಾಗಿ ಒಪ್ಪಿಕೊಂಡಿದ್ದರು.

ಮಾರ್ಚ್ 3 ಭಾನುವಾರದಂದು ಬಂಟ್ವಾಳ ತಾಲೂಕಿನ ಮೋಂಟುಗೋಳಿಯಲ್ಲಿ 'ಸಂಯುಕ್ತ' ಎಂಬ ಸಂಘಟನೆ ಸಮಾಜ ಸೇವಕ ಹೈದರ್ ಪರ್ತಿಪ್ಪಾಡಿ ಅವರಿಗೆ ಸನ್ಮಾನ ಸಮಾರಂಭ ಏರ್ಪಡಿಸಿತ್ತು. ಅದರಲ್ಲಿ ಭಾಷಣ ಮಾಡಲು ನನಗೆ ಆಹ್ವಾನವಿತ್ತು. ಯೇನಪೋಯ ಅಬ್ದುಲ್ಲ ಕುಂಞಿ ಹಾಗೂ ಬೆಂಗಳೂರು ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ಆಗಿದ್ದ ಜಿ.ಎ. ಬಾವಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದರು. ಅಂದಿನ ಭಾಷಣ ಎಲ್ಲರಿಗೂ ಖುಷಿ ಕೊಟ್ಟಿತ್ತು. ಅದರ ಬಗ್ಗೆ ಡೈರಿಯಲ್ಲಿ 'ಇಂದಿನ ಕಾರ್ಯಕ್ರಮ ನನ್ನ ಸಾರ್ವಜನಿಕ ಬದುಕಿಗೆ ಹೊಸ ಆಯಾಮ ತಂದಿತು' ಎಂದು ಬರೆದಿಟ್ಟಿದ್ದೇನೆ. ಕಾರ್ಯಕ್ರಮದ ನಂತರ ಯೇನಪೋಯ ಅಬ್ದುಲ್ಲ ಕುಂಞಿ ಹಾಜಿಯವರು ತಮ್ಮ ಮೆಡಿಕಲ್ ಕಾಲೇಜಿನ 'ಸಮನ್ವಯ' ಎಂಬ ಕಾರ್ಯಕ್ರಮಕ್ಕೂ ಜಿ.ಎ. ಬಾವಾರವರು ಬೆಂಗಳೂರಿನಲ್ಲಿ ಒಂದು ಪೊಲೀಸ್ ಸೌಹಾರ್ದ ಕಾರ್ಯಕ್ರಮಕ್ಕೂ ಆಹ್ವಾನ ನೀಡಿದ್ದರು.

ಮೋಂಟುಗೋಳಿ ಕಾರ್ಯಕ್ರಮದಲ್ಲಿ ಸನ್ಮಾನಿತರಾದ ಹೈದರ್ ಪರ್ತಿಪ್ಪಾಡಿಯವರು ಮಾರ್ಚ್ ಎಂಟರಂದು ಫೋನ್ ಮಾಡಿ ನಿಮಗೊಂದು ಮೊಬೈಲ್‌ನ ಅಗತ್ಯವಿದೆ. ಆದ್ದರಿಂದ ಸಿಂ ಖರೀದಿಸಿ ಸಂಪರ್ಕ ಮಾಡಿಸಿ ಕೊಡುವುದಾಗಿ ತಿಳಿಸಿ ಮರುದಿನ ನೋಕಿಯಾ ಮೊಬೈಲ್ ಸೆಟ್ (Spice) 'ಸ್ಪೈಸ್'ನ ಸಿಂ ಕಾರ್ಡ್ ಹಾಗೂ ರೀಚಾರ್ಜ್ ಮಾಡಲು ಒಂದು ಸಾವಿರ ರೂಪಾಯಿ ತಲಪಾಡಿ ಮಸೀದಿಗೆ ತಂದು ಕೊಟ್ಟು ಹೋದರು. 98441 27555 ಅದರ ನಂಬ್ರ. ಮೊದಲೇ ನಾನು ಖರೀದಿಸಿ ಇಟ್ಟಿದ್ದ ಅಲ್ ಕಾಟೇಲ್ ಸೆಟ್‌ಗೆ ನಂತರ 'ಸಿಂ' ವರ್ಗಾಯಿಸಲಾಯಿತು. ಆ ದಿನಗಳಲ್ಲಿ ಒಳಬರುವ ಕರೆ ನಿಮಿಷಕ್ಕೆ ಎರಡೂವರೆ ರೂ. ಹಾಗೂ ಹೊರ ಹೋಗುವ ಕರೆ ನಿಮಿಷಕ್ಕೆ ಮೂರುವರೆ ರೂ. ಕಸಿದು ಕೊಳ್ಳುತ್ತಿತ್ತು. ಮೊಬೈಲ್ ರಿಂಗ್ ಆದ ತಕ್ಷಣ ಯಾವುದಾದರೊಂದು ಸ್ಥಿರ ದೂರವಾಣಿಯೆಡೆಗೆ ಓಡಿ ಹೋಗಿ ಅದರ ನಂಬರ್ ಹೇಳಿ ಅದಕ್ಕೆ ಕರೆ ಮಾಡುವಂತೆ ಸೂಚಿಸಿ ತಕ್ಷಣ ಕಟ್ ಮಾಡುವುದು ವಾಡಿಕೆಯಾಗಿತ್ತು. 2002 ಮಾರ್ಚ್ 9 ಶನಿವಾರ ರಾತ್ರಿ 8.10ಕ್ಕೆ ನಾನು ಮೊದಲ ಬಾರಿಗೆ ಮೊಬೈಲೀ ಆದೆ.

ಅಬ್ದುಲ್ಲ ಕುಂಞಿ ಹಾಜಿ ಆಹ್ವಾನಿಸಿದ ಪ್ರಕಾರ ಮಾರ್ಚ್ 13 ಬುಧವಾರ ಯೇನಪೋಯ ಮೆಡಿಕಲ್ ಕಾಲೇಜಿನ 'ಸಮನ್ವಯ' ಕಾರ್ಯಕ್ರಮಕ್ಕೆ ತೆರಳಿದೆ. ಮಂಗಳೂರು ಆಸುಪಾಸಿನ ಶಿಕ್ಷಣ ಸಂಸ್ಥೆಗಳಲ್ಲಿ ಸಾಮುದಾಯಿಕ ಸೌಹಾರ್ದದ ಬೋಧನೆ ಮಾಡಲು ರೂಪಿಸಿದ ಸಂಸ್ಥೆಯಾಗಿತ್ತದು.

ಮೆಡಿಕಲ್ ಕಾಲೇಜಿನ ಎಕ್ಸಾಂ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಮಂಗಳೂರು ಪರಿಸರದ ಪ್ರಮುಖ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಲ್ಲದೆ ಪಶ್ಚಿಮ ವಲಯ ಐಜಿಪಿ ಧರ್ಮಪಾಲ್ ನೇಗಿ ಜಿಲ್ಲಾ ಎಸ್.ಪಿ. ಸೀಮಂತ್ ಕುಮಾರ್ ಸಿಂಗ್ ಮುಂತಾದವರೂ ಇದ್ದರು. ಸಂಜೆ 6.55ರಿಂದ 7.15ರ ವರೆಗೆ ನಡೆದ 20 ನಿಮಿಷಗಳ ಸಮನ್ವಯ ಭಾಷಣಕ್ಕೆ ಎಲ್ಲರಿಂದ ಮುಕ್ತ ಕಂಠದ ಪ್ರಶಂಸೆ ವ್ಯಕ್ತವಾಯಿತು. ಸೈಂಟ್ ಅಗ್ನೇಸ್ ಕಾಲೇಜಿನವರು ಆಗಲೇ ತಮ್ಮ ಕಾಲೇಜಿನಲ್ಲಿ ಸಮನ್ವಯ ಭಾಷಣಕ್ಕೆ ದಿನಾಂಕ ಗೊತ್ತು ಮಾಡಿ ಹೋದರು.

ಕಾರ್ಯಕ್ರಮ ಕಳೆದು ನಮಾಝಿಗೆಂದು ಕಾಲೇಜಿನ ಪ್ರೆಯರ್ ಹಾಲ್‌ಗೆ ತೆರಳಿದರೆ ಅಲ್ಲಿಗೆ ಅನಿರೀಕ್ಷಿತವಾಗಿ ಶೈಖುನಾ ಕಾಂತಪುರಂ ಉಸ್ತಾದ್ ಮತ್ತು ಪುತ್ತೂರು ಉಸ್ಮಾನ್ ಹಾಜಿಯವರು ಆಗಮಿಸಿದ್ದರು. ಚೇರ್ಮೆನ್ ಅಬ್ದುಲ್ಲ ಕುಂಞಿ ಹಾಜಿಯವರು ನನ್ನನ್ನು ಉಸ್ತಾದ್‌ಗೆ ಪರಿಚಯಿಸಲು ಮುಂದಾದರು. ಆಗ ಉಸ್ತಾದ್ ಅವನು ನನ್ನ ಶಿಷ್ಯ ಎಂದಾಗ, ಹಾಗಾದರೆ ಅದ್ಭುತ ಪಡಬೇಕಾಗಿಲ್ಲ ಎಂದಿದ್ದರು ಯೇನಪೋಯ. ಈ ದಿನ 'ಭಾಷಣ ಬದುಕಿನ ಮರೆಯಲಾಗದ ದಿನ' ಎಂದು ಡೈರಿಯಲ್ಲಿ ನಮೂದಾಗಿದೆ.

ಮೋಂಟುಗೋಳಿ 'ಸಂಯುಕ್ತ' ಕಾರ್ಯಕ್ರಮದ ಇನ್ನೊರ್ವ ಮುಖ್ಯ ಅತಿಥಿ ಜಿ.ಎ. ಬಾವಾ ಬೆಂಗಳೂರಿನಲ್ಲಿ ಭಾವೈಕ್ಯತಾ ಸಮಾವೇಶಕ್ಕೆ ಆಹ್ವಾನ ನೀಡಿದ್ದರು. ಬೆಂಗಳೂರು ಪಶ್ಚಿಮ ವಿಭಾಗದ, ಚಿಕ್ಕಪೇಟೆ ಉಪವಿಭಾಗದ ವಶಪಡಿಸಿಕೊಂಡ ಕಳವು ಮಾಲುಗಳ ವಿತರಣ ಕಾರ್ಯಕ್ರಮ ಹಾಗೂ ಸಿಟಿ ವಿಭಾಗದ ಪೊಲೀಸ್ ಠಾಣೆ ಚೌಕ್‌ನ ಉದ್ಘಾಟನಾ ಸಮಾರಂಭದ ಪ್ರಯುಕ್ತ ಪೊಲೀಸರೇ ಏರ್ಪಡಿಸಿದ ಸಮಾವೇಶ ಆಗಿತ್ತದು. 2002 ಮಾರ್ಚ್ 21 ಗುರುವಾರ ಬೆಳಗ್ಗೆ ನಾನು ಮತ್ತು ಮಿತ್ರ ಹಮೀದ್ ಬಜಪೆ ಬೆಂಗಳೂರು ತಲುಪಿದೆವು. ಉಪ್ಪಾರ ಪೇಟೆ ಎ.ಸಿ.ಪಿ. ಕಚೇರಿಯಲ್ಲಿ ಜಿ.ಎ. ಬಾವಾ ನಮಗಾಗಿ ಕಾಯುತ್ತಿದ್ದರು. ಸಮೀಪದ ಸ್ವಾಗತ್ ಹೋಟೆಲ್ ರೂಂ ನಂಬ್ರ 209ರಲ್ಲಿ ನಮಗೆ ಕೊಠಡಿ ಕಾದಿರಿಸಲಾಗಿತ್ತು. ಆ ದಿನ ನಾನು ಮತ್ತು ಹಮೀದ್ ಬಜಪೆ ವಿಧಾನ ಸೌಧಕ್ಕೆ ಹೋಗಿ ಅಧಿವೇಶನವನ್ನು ನೇರವಾಗಿ ವೀಕ್ಷಿಸಿದೆವು. ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಬಜೆಟ್ ಮಂಡಿಸುತ್ತಿದ್ದರು. ಮತ್ತೆ ಹೈದರ್ ಪರ್ತಿಪ್ಪಾಡಿ ನಮ್ಮೊಂದಿಗೆ ಸೇರಿಕೊಂಡರು. ಸಾಯಂಕಾಲ 5.30ಕ್ಕೆ ಕಾರ್ಯಕ್ರಮ ಪ್ರಾರಂಭವಾಯಿತು. ಜ್ಞಾನಪೀಠ ಪುರಸ್ಕೃತ ಸಾಹಿತಿ ಡಾ। ಯು. ಆರ್. ಅನಂತ ಮೂರ್ತಿ, ಕವಿ ಡಾ। ಸಿದ್ಧಲಿಂಗಯ್ಯ, ಸಾಹಿತಿ ನಾಡಿಸೋಜ, ಬೆಂಗಳೂರು ಪೊಲೀಸ್ ಆಯುಕ್ತ ಎಚ್.ಟಿ. ಸಾಂಗ್ಲಿಯಾನ ಮುಖ್ಯ ಅತಿಥಿಗಳಾಗಿದ್ದರು. ನನ್ನ ಭಾಷಣ 7 ಗಂಟೆಯಿಂದ 20 ನಿಮಿಷಗಳ ವರೆಗೆ ಇತ್ತು. ಅನಂತರ ಮಾತನಾಡಿದ ಅನಂತ ಮೂರ್ತಿಯವರು ನನ್ನನ್ನು ಬಾಯಿ ತುಂಬ ಪ್ರಶಂಸಿಸಿದ್ದರು. ಇಂತಹ ಪ್ರತಿಭೆಯೊಂದು ನಮ್ಮ ನಾಡಿನಲ್ಲಿದ್ದು ಆ ಬಗ್ಗೆ ಈ ತನಕ ನನಗೆ ತಿಳಿಯಲಿಲ್ಲ ಎನ್ನುವುದಕ್ಕೆ ನಾಚಿಕೆ ಪಡುತ್ತೇನೆ ಎಂದಿದ್ದರು. ಮರುದಿನ ಕೆಲವು ಪತ್ರಿಕೆಗಳು ಅದನ್ನು ಮಹತ್ವದಿಂದ ಪ್ರಕಟಿಸಿದ್ದವು.

ಮುಂದೆ ನನ್ನ ಭಾಷಣ ವೇದಿಕೆಗಳಲ್ಲಿ ಸ್ವಾಗತ ಭಾಷಣಕಾರರು ಅನಂತ ಮೂರ್ತಿಯವರ ಈ ಮಾತುಗಳನ್ನು ಉಲ್ಲೇಖಿಸಲು ಸ್ಪರ್ಧಿಸುತ್ತಿದ್ದರು. ಈ ಪೈಕಿ ಜೋಕಟ್ಟೆಯ ಕಾರ್ಯಕ್ರಮ ಒಂದರಲ್ಲಿ ಸ್ವಾಗತ ಭಾಷಣ ಮಾಡಿದ ಹಿರಿಯರೊಬ್ಬರು ವಿಷಯವೇನೆಂದು ತಿಳಿಯದೆ 'ಇವರು ಎಂಥವರೆಂದರೆ ಇವರ ಬಗ್ಗೆ ಬೆಂಗಳೂರಿನಲ್ಲಿ ಯಾರೋ ಒಬ್ಬ ಏನೋ ಹೇಳಿದ್ದರಂತೆ' ಎಂದು ನಗೆ ಉಕ್ಕಿಸಿದ್ದರು.

ಏಪ್ರಿಲ್ 19 ಶುಕ್ರವಾರ ಸಂಜೆ ಕುಟ್ಯಾಡಿ ಸಿರಾಜುಲ್ ಹುದಾ ಪ್ರಚಾರಾರ್ಥ ದೇರಳಕಟ್ಟೆಯಲ್ಲಿ ನಡೆದ ಬೃಹತ್ ಸುನ್ನೀ ಸಮ್ಮೇಳನದಲ್ಲಿ ನನ್ನ "ಮುಸ್ಲಿಂ ಭಯೋತ್ಪಾದನೆ??" ಎಂಬ ಆಡಿಯೋ ಕ್ಯಾಸೆಟ್ ಸಯ್ಯಿದುನಾ ತಾಜುಲ್ ಉಲಮಾ, ಉಚ್ಚಿಲ ಮಜೀದ್ ಹಾಜಿಯವರಿಗೆ ನೀಡಿ ಬಿಡುಗಡೆ ಮಾಡಿದರು.

ಅಪಘಾನಿಸ್ತಾನಕ್ಕೆ ಹೋಗಿ ಬಂದ ಪತ್ರಕರ್ತ, 'ಹಾಯ್ ಬೆಂಗಳೂರಿನ' ಸಂಪಾದಕ ರವಿ ಬೆಳಗೆರೆ 'ಮುಸ್ಲಿಂ' ಎಂಬ ಹೆಸರಿನ ಪುಸ್ತಕ ಬರೆದು ಪ್ರಕಟಿಸಿದ್ದರು. ಅದರಲ್ಲಿ ಮುಸ್ಲಿಮರೇ ಅಲ್ಲದ, ಆದರೆ 'ಖಾನ್' ಎಂಬ ಹೆಸರಿರುವ ಚೆಂಗಿಸ್‌ಖಾನ್ ಮತ್ತು ಆತನ ಮಂಗೋಳಿಯನ್ ಸಾಮ್ರಾಜ್ಯದ ಸಕಲ ಅಕ್ರಮಗಳನ್ನು ಮುಸ್ಲಿಮರ ತಲೆ ಮೇಲೆ ಕಟ್ಟಿ ಮುಸ್ಲಿಮರನ್ನು ಕನ್ನಡಿಗರಿಗೆ ಪರಿಚಯಿಸುವ 'ಮಹತ್ಕಾರ್ಯ'ವನ್ನು ಮಾಡಿದ್ದರು. ಅದನ್ನು ಖಂಡಿಸಿ, ಬೆಳಗೆರೆ ಅವರಿಗೆ ಕಳಿಸಿ ಕೊಡಲಿಕ್ಕಾಗಿಯೇ ಸಿದ್ಧ ಪಡಿಸಿದ ಧ್ವನಿ ಸುರುಳಿ ಆಗಿತ್ತದು. ಇದರ ಪ್ರತಿಗಳನ್ನು ಬೆಳಗೆರೆಗೆ ಕೊರಿಯರ್ ಮೂಲಕ ಕಳಿಸಿ ಕೊಡಲಾಗಿತ್ತು.

ಏಪ್ರಿಲ್ 21 ಭಾನುವಾರ ಉಡುಪಿಯ ಮಜೂರು ಮಸೀದಿ ಬಳಿ ನಡೆದ ರಾಜ್ಯ ಮಟ್ಟದ ದಫ್ ಸ್ಪರ್ಧಾ ಕಾರ್ಯಕ್ರಮದಲ್ಲಿ ನಡೆಸಿದ ಭಾಷಣಕ್ಕೆ ಸಭಿಕರಿಂದ ಆಕರ್ಷಕ ಪ್ರತಿಕ್ರಿಯೆ ಸಿಕ್ಕಿತ್ತು. ಮಾಜಿ ಶಾಸಕ ಸಂಜೀವ ಐಕಳ ಆಲಂಗಿಸಿ ಅಭಿನಂದಿಸಿದರೆ, ಇನ್ನೊಬ್ಬ ಅತಿಥಿ ಕಾಪು ದಂಡ ತೀರ್ಥ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯ ಆಲ್ಬಂ ರೋಡ್ರಿಗಸ್ ಇದು ನಾನು ಜೀವಮಾನದಲ್ಲಿ ಕೇಳಿದ 3ನೇ ಅತ್ಯದ್ಭುತ ಭಾಷಣ ಎನ್ನುತ್ತಾ ನನಗೇ ಅಚ್ಚರಿ ಮೂಡಿಸಿದ್ದರು. ಹಾರ ಹಾಕಿ ಹಾರೈಸಿದ್ದರು.

ಮೇ 5 ಭಾನುವಾರ ಕುಟ್ಯಾಡಿ ಸಿರಾಜುಲ್ ಹುದಾ ದಶವಾರ್ಷಿಕದ ಮಹಾ ಸಮ್ಮೇಳನದಲ್ಲಿ 15 ನಿಮಿಷಗಳ ದ್ವಿಭಾಷಾ ಭಾಷಣಕ್ಕೆ ಪೇರೋಡ್ ಉಸ್ತಾದ್ ಅವಕಾಶ ಕೊಟ್ಟಿದ್ದರು. ಆ ದಿನ ಮಧ್ಯಾಹ್ನ 'ಸಂಸ್ಥೆಯ ಪ್ರತಿನಿಧಿಗಳ' ಸಮಾವೇಶದಲ್ಲೂ ಪುಟ್ಟ ಭಾಷಣಕ್ಕೆ ಅನುವು ಸಿಕ್ಕಿತ್ತು.

ಮೇ 16 ಗುರುವಾರ ಶಿವಮೊಗ್ಗ ಜಿಲ್ಲಾ ಎಸ್ಸೆಸ್ಸೆಫ್‌ನ 'ಇಸ್ಲಾಂ ಮತ್ತು ಭಯೋತ್ಪಾದನೆ' ಎನ್ನುವ ಸೆಮಿನಾರ್‌ನಲ್ಲಿ ಯು. ಆರ್. ಅನಂತ ಮೂರ್ತಿ ಜತೆ ಮತ್ತೊಮ್ಮೆ ವೇದಿಕೆ ಒದಗಿ ಬಂತು. ಬೆಂಗಳೂರಿನ ಭಾಷಣ ಶಾಂತವಾಗಿತ್ತು. ಇಲ್ಲಿನದ್ದು ಗಂಭೀರವಾಗಿದೆ ಎಂದಿದ್ದರು ಮೂರ್ತಿಯವರು. ನಿಮ್ಮ ಇಷ್ಟುದ್ದದ ಹೆಸರಿನ ಪೈಕಿ ಯಾವುದನ್ನು ನೆನಪಿಡಬೇಕು ಎಂದು ಕೇಳಿದಾಗ 'ಝುೖನಿ' ಎಂದಿದ್ದೆ.

ಮೇ 21 ಮಂಗಳವಾರ ನನ್ನ ಮೊದಲ ವರ್ಷದ ಎಂ.ಎ. ಪರೀಕ್ಷೆ ಪ್ರಾರಂಭವಾಗಿತ್ತು. ಮೊದಲು ಎರಡು ಬಾರಿ ಸಮಾಜ ಶಾಸ್ತ್ರ ಹಾಗೂ ಕನ್ನಡದಲ್ಲಿ ಎಂ.ಎ. ಮೊದಲ ವರ್ಷದ ಪರೀಕ್ಷೆ ಮುಗಿಸಿದ್ದ ನಾನು ಎರಡರಲ್ಲೂ ಎರಡನೇ ವರ್ಷದ ಪರೀಕ್ಷೆ ತಪ್ಪಿಸಿದ್ದೆ. ಇದೀಗ 'ಮಾರು ಇಲ್ಲವೆ ಮಡಿ' ಎನ್ನುವ ತತ್ವಕ್ಕೆ ಅಂಟಿಕೊಂಡು ರಾಜ್ಯ ಶಾಸ್ತ್ರಕ್ಕೆ ಸೇರ್ಪಡೆಗೊಂಡ ಮೊದಲ ವರ್ಷದ ಮೊದಲ ಪರೀಕ್ಷೆಗೆ ಮಂಗಳೂರು ಕೆನರಾ ಕಾಲೇಜಿನಲ್ಲಿ ಹಾಜರಾಗಿದ್ದೆ. ಅದೇ ದಿನ ನಾದಿನಿಯ ಮದುವೆ ಇದ್ದುದರಿಂದ ಮದುವೆ ಸಂಭ್ರಮದಿಂದ ವಂಚಿತನಾಗಿ ಬರೆದ ಪರೀಕ್ಷೆ ನೀರಸವೆನಿಸಿತ್ತು.

ಜೂನ್ 2 ಭಾನುವಾರ ಬೆಂಗಳೂರು ಕ್ವೀನ್ ರಸ್ತೆಯ ದಾರುಸ್ಸಲಾಂ ಕಾಂಪ್ಲೆಕ್ಸ್‌ನ ಸಭಾಂಗಣದಲ್ಲಿ ನಡೆದ ಎಸ್ಸೆಸ್ಸೆಫ್ ರಾಜ್ಯ ಮಹಾ ಸಭೆಯಲ್ಲಿ ನನಗೆ ಮತ್ತೆ ಸಂಘಟನಾ ಕಾರ್ಯದರ್ಶಿಯ ಹುದ್ದೆ. ಆ ದಿನ ರಾಜ್ಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಮರ್‌ಹೂಂ ಅಬ್ದುಲ್ಲಾ ಸಹೋದರ ಹೊಣೆಗಾರಿಕೆಯ ಭಾರ ಅರಿತು ಅದರಿಂದ ತಪ್ಪಿಸಿಕೊಂಡಿದ್ದರು. ತನ್ನನ್ನು ಸಹ ಕಾರ್ಯದರ್ಶಿ ಮಾಡಿದರೆ ಸಾಕೆಂದು ಅಲವತ್ತು ಕೊಂಡಿದ್ದರು. ಕೊನೆಗೆ ಬಶೀರ್ ಅಹ್‌ಮದ್ ಜಿ. ಕೆರೆಯ ಜತೆ ಕಾರ್ಯ ದರ್ಶಿಯಾಗಿ ಅಬ್ದುಲ್ಲಾ ಹೊದವಾಡ (ಕೊಡಗು) ಆಯ್ಕೆಯ ಅಂತಿಮ ಹಂತದಲ್ಲಿ ದ್ದರು. ವಿನಿಯಾನ್ವಿತನಾದ ಆ ಸಜ್ಜನ ಆಯ್ಕೆಯಾದರು. ನಿಶ್ಶಬ್ಧ ಕಾರ್ಯಕರ್ತನಾಗಿ ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದ ಸ್ನೇಹ ನಿಧಿಯಾಗಿದ್ದ ಆ ಸಹ ಕಾರ್ಯಕರ್ತ ಮುಂದೆ ವಾಹನ ಅಪಘಾತದಲ್ಲಿ ನಮ್ಮಿಂದ ಮರೆಯಾದರು.

ಜೂನ್ 13 ಗುರುವಾರ ನಾನು ಜೀವನದಲ್ಲಿ ಪ್ರಥಮ ಬಾರಿ ಕೋರ್ಟ್‌ಗೆ ಹೋದೆ. ಉಳ್ಳಾಲ ದರ್ಗಾ ಸಮಿತಿಯ ಪರವಾಗಿ, ಉಳ್ಳಾಲದಲ್ಲಿ ನಡೆದಿದ್ದ ಸುನ್ನೀ, ಸಲಫಿ ತಲ್‌ಖೀನ್ ಕುರಿತ ಸಂಘರ್ಷದಲ್ಲಿ ಸುನ್ನಿಗಳ ನ್ಯಾಯವಾದಿ ಪಿ. ರಂಜನ್‌ರಾವ್‌ಗೆ ಧಾರ್ಮಿಕ ವಿಷಯದಲ್ಲಿ ನೆರವಾಗಲೆಂದು ದರ್ಗಾ ಸಮಿತಿ ನನ್ನನ್ನು ನೇಮಕ ಮಾಡಿತ್ತು. ಸಲಫಿಗಳ ಪರವಾಗಿ ಮುಹಮ್ಮದ್ ಹಸನ್ ಶರೀಫ್ ಮರಕಡ ಎಂಬವರು ಬಂದಿದ್ದು ಅವರ ವಕೀಲರುಗಳಾಗಿ ಎಸ್.ಎಸ್. ಖಾಝಿ ಮತ್ತು ಇಲ್ಯಾಸ್ ಎಂಬವರಿದ್ದರು. ಒಂದು ಗಂಟೆ ಕಾಲ ನ್ಯಾಯಾಧೀಶರು ಸಲಫಿ ಮೌಲವಿಯನ್ನು ಪ್ರಶ್ನಿಸಿದ್ದರು. ನನಗೆ ಆ ದಿನ ಕುಳಿತು ವೀಕ್ಷಿಸುವ ಸರದಿ ಮಾತ್ರವಾಗಿತ್ತು.

ಜೂನ್ 22 ಶನಿವಾರ ನಾವು ಮಲಪ್ಪುರಂ ಕಡೆಗೊಂದು ಝಿಯಾರತ್ ಯಾತ್ರೆಯ ಮಧ್ಯೆ ಸಾಯಂಕಾಲ ಚೆಮ್ಮಾಡ್ ಸುನ್ನೀ ಮಸ್ಜಿದ್‌ಗೆ ತಲುಪಿದೆವು. ಪೊನ್ಮಳ ಉಸ್ತಾದರ ಬೃಹತ್ ದರ್ಸ್‌ನ ವಿದ್ಯಾರ್ಥಿಗಳು ಅಂದು ಸಾಹಿತ್ಯ ಸ್ಪರ್ಧೆ ಇಟ್ಟಿದ್ದರು. ಅದರ ಸಮಾರೋಪದ ಉದ್ಘಾಟನಾ ಭಾಷಣಕ್ಕೆ ನನಗೆ ಅವಕಾಶ ನೀಡಿದರು. ಆ ದಿನ ಸ್ಪರ್ಧೆಯಲ್ಲಿ ಕನ್ನಡಿಗ ಪೋರನೊಬ್ಬ ಮಲಯಾಳಂ ಭಾಷಣದಲ್ಲಿ ಇಡೀ ಸಂಸ್ಥೆಗೆ ಪ್ರಥಮ ಬಹುಮಾನ ಹೊಡೆದ. ಮರ್ಕಝ್‌ನಲ್ಲಿ ನಾನು ಮಾಡಿದ್ದ ದಾಖಲೆಯನ್ನು ಈತ ಇಲ್ಲಿ ಸರಿಗಟ್ಟಿದ್ದ. ಆತನ ಹೆಸರು ನೌಫಲ್ ಕಳಸ.

## 24

### ಮಾಜಿ ಪ್ರಧಾನ ಮಂತ್ರಿಯ ಗಮನ ಸೆಳೆಯಲೊಂದು ಹಿಂದಿ ಕವನ

ಯೇನಪೋಯ ಮೆಡಿಕಲ್ ಕಾಲೇಜಿನ ಎಕ್ಸಾಂ ಹಾಲ್‌ನಲ್ಲಿ ನಡೆದ 'ಸಮನ್ವಯ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಂಗ ಳೂರು ಪರಿಸರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಮುಖಂಡರ ಪೈಕಿ ಸೈಂಟ್ ಆಗ್ನೆಸ್ ಕಾಲೇಜಿನ ಸಿಸ್ಟರ್ ಲಿನೆಟ್ ಎಂಬವರು ಆಗಲೇ ತಮ್ಮ ಸಂಸ್ಥೆಯಲ್ಲೊಂದು ಕಾರ್ಯಕ್ರಮಕ್ಕೆ ಬರಬೇಕೆಂದು ಆಹ್ವಾನಿಸಿದ್ದರು. ಅದರಂತೆ 2002 ಜುಲೈ 15 ಸೋಮವಾರ ಬೆಳಗ್ಗೆ 11 ಗಂಟೆಗೆ ಆಗ್ನೆಸ್ ಕಾಲೇಜು ತಲುಪಿದೆ. ಪ್ರಿನ್ಸಿಪಾಲ್ ಕಾರ್ಮೆಲ್ ರೀಟಾ, ಸಮನ್ವಯದ ಸಂಯೋ ಜಕಿ ಸಿಸ್ಟರ್ ಲಿನೆಲ್ ಹಾಗೂ ಕನ್ನಡ ಪ್ರಾಧ್ಯಾ ಪಕ ಸಂಪೂರ್ಣಾನಂದ ಬಳಕೂರು ಸೇರಿ ಕಚೇರಿಯಲ್ಲಿ ಸ್ವಾಗತಿಸಿದರು. ಅದೊಂದು ಮಹಿಳಾ ಕಾಲೇಜು ಎಂಬುದು ತಡವಾಗಿ ನನ್ನ ಗಮನಕ್ಕೆ ಬಂದಿತ್ತು. 11.30ರಿಂದ 12.25ರ ತನಕ ಸರ್ವ ಧರ್ಮ ಸದ್ಭಾವನೆ ಕುರಿತು ನಾನಲ್ಲಿ ಮಾತನಾಡಿದೆ. ಬಿ.ಎ. ಬಿ.ಕಾಂ., ಬಿಎಸ್ಸಿ ಮತ್ತು ಬಿಬಿಎಂ ನ ದ್ವಿತೀಯ ವರ್ಷ ದ ಮುನ್ನೂರಕ್ಕೂ ಅಧಿಕ ವಿದ್ಯಾರ್ಥಿ ವಿದ್ಯಾ ರ್ಥಿನಿಯರು ಶ್ರೋತೃಗಳಾಗಿ ನೆರೆದಿದ್ದರು. ಎರಡು ದಿನಗಳ ನಂತರ ಜುಲೈ 17 ಬುಧವಾರ ಅದೇ ಸಂಸ್ಥೆಯ ಅದೇ ಪದವಿ ತರಗತಿಗಳ ಪ್ರಥಮ ವರ್ಷದ ವಿದ್ಯಾರ್ಥಿನಿಗಳಿಗೆ 'ಸರ್ವ ಧರ್ಮ'ದ ಬಗ್ಗೆ ಕ್ಲಾಸ್ ತೆಗೆಯುವ ಮತ್ತೊಂದು ಅವ ಕಾಶ ಒದಗಿ ಬಂತು.

ಆಗಸ್ಟ್ 2 ರಂದು ಶುಕ್ರವಾರ ಚೆಮ್ಮಾಡ್-ಪೊನ್ನ ಳ ಉಸ್ತಾದರ ಕನ್ನಡಿಗ ದರ್ಸ್ ವಿದ್ಯಾರ್ಥಿ ಗಳು ಸಂಪರ್ಕಿಸಿ ಮಲಯಾಳಂನಲ್ಲಿ ಕಾಂತ ಪುರಂ ಉಸ್ತಾದರ ಬಗ್ಗೆ ಆಡಿಯೋ ಕ್ಯಾಸೆಟ್ ಒಂದನ್ನು ತಯಾರಿಸಿ ಕೊಡುವಂತೆ ಕೋರಿ ಕೊಂಡರು. ಒಂದು ವಾರದ ಸಿದ್ಧತೆಯ ನಂತರ ಆಗಸ್ಟ್ 9 ಶುಕ್ರವಾರ ಜುಮಾ ನಂತರ ಕಾಸರಗೋಡ್ ಕೆ.ಎಂ. ಸ್ಟುಡಿಯೋದಲ್ಲಿ ನನ್ನ 'ಕಾಂದಪುರಂ ನೂಟಾಂಡಿಂಡೆ ಸಮುದ್ಧಾ ರಗನ್' ಎಂಬ ಭಾಷಣದ ರೆಕಾರ್ಡಿಂಗ್ ನಡೆಯಿತು. ಮುಚ್ಚಿದ ಕೋಣೆಯೊಳಗೆ ನಡೆದ ಗಂಭೀರ ಸ್ಟುಡಿಯೋ ಭಾಷಣಕ್ಕೆ, ಶ್ರೋತೃಗ ಳಾಗಿ ಚೆಮ್ಮಾಡ್ ವಿದ್ಯಾರ್ಥಿಗಳಾದ ಜಿ.ಎಂ. ಸುಲೈಮಾನ್, ಇಸ್ಮಾಈಲ್ ಕೊಂಡಂಗೇರಿ ಮತ್ತು ನೌಫಲ್ ಕಳಸ ಮಾತ್ರ ಇದ್ದರು. ಭಾಷಣ ಮುಗಿದ ನಂತರ ನಿರ್ವಹಣೆಯಲ್ಲಿ ಏನೋ ಅಸಂತೃಪ್ತಿ ತೋರಿದ್ದರಿಂದ ಮರು ದಿನ ಭಾಷಣವನ್ನು ರೀ ರಿಕಾರ್ಡಿಂಗ್ ಮಾಡಲು ನಿರ್ಧರಿಸಲಾಯಿತು. ಆಗಸ್ಟ್ 11 ಭಾನುವಾರ ಮಂಚೇರಿ ಆವಾರ್ಝ್ ಸ್ಟುಡಿಯೋದಲ್ಲಿ ಮರು ಧ್ವನಿ ಮುದ್ರಣ ನಡೆಯಿತು. ಆಗಸ್ಟ್ 18ರಂದು ಭಾನುವಾರ ಕೊಡಗಿನ ಸಿದ್ಧಾಪುರದಲ್ಲಿ ನಡೆದ ಬೃಹತ್ ಮರ್ಕಝ್ ಬೆಳ್ಳಿಹಬ್ಬ ಪ್ರಚಾರ ಸಭೆಯಲ್ಲಿ ಎ.ಪಿ.ಉಸ್ತಾದರ ಸಮ್ಮುಖದಲ್ಲಿ ಸದ್ರಿ ಕ್ಯಾಸೆಟ್ ಬಿಡುಗಡೆಯಾಯಿತು. ಮಾಜಿ ಕೇಂದ್ರ ಸಚಿವ ಸಿ.ಎಂ. ಇಬ್‌ರಾಹೀಂ, ಉದ್ಯಮಿ ಹಾಜಿ ಬಿ.ಎಂ. ಮುಮ್ತಾಝ್ ಅಲಿ ಅವರಿಗೆ ನೀಡುವ ಮೂಲಕ ಬಿಡುಗಡೆಗೊಳಿಸಿದರು. ಅನಂತರ ಭಾಷಣ ಮಾಡಿದ ಅಂದಿನ ಜೆಡಿಎಸ್ ರಾಜ್ಯಾ ಧ್ಯಕ್ಷರೂ ಆಗಿದ್ದ ಸಿ.ಎಂ.ಇಬ್ರಾಹೀಮ್ ಮುಂದಿನ ಚುನಾ ವಣೆಯಲ್ಲಿ ನನ್ನನ್ನು ಬಂಟ್ವಾಳ ಕ್ಷೇತ್ರ ದಿಂದ ಅಭ್ಯರ್ಥಿ ಯಾಗಿ ಕಣಕ್ಕಿಳಿಸುವ ಬಗ್ಗೆ ರಾಜಕೀಯ ಪ್ರವಚನ ಮಾಡಿದ್ದರು.

ಸೆಪ್ಟಂಬರ್1 ಭಾನುವಾರ ಸಾಯಂಕಾಲ ಮಂಗಳೂರು - ಕಂಕನಾಡಿ ವೆಸ್ಟ್‌ಸೈಡ್ ಇನ್ ಹೋಟೆಲ್ ಸಭಾಂಗಣದಲ್ಲಿ ಮರ್ಕಝ್ ಬೆಳ್ಳಿಹಬ್ಬ ಪ್ರಯುಕ್ತ ಉಮರಾ ಮೀಟ್ ನಡೆದಿತ್ತು. ಶೈಖುನಾ ತಾಜುಲ್ ಉಲಮಾ, ಎ.ಪಿ. ಉಸ್ತಾದ್, ಕುಂಬೋಲ್ ತಂಙಳ್, ಡಾ. ಚುಳ್ಳಿಕ್ಕೋಡ್ ಸಖಾಫಿ, ಅಡ್ವಕೇಟ್ ಇಸ್ಮಾ ಈಲ್ ವಫಾ, ಡಾ. ಹುಸೈನ್ ರಂಡತ್ತಾಣಿ, ಡಾ. ಹಕೀಂ ಅಝ್‌ಹರಿ, ಸಿ.ಎಂ. ಇಬ್ ರಾಹೀಂ, ಯೇನೆಪೋಯ ಅಬ್ದುಲ್ಲ ಕುಂಞಿ ಹಾಜಿ ಮುಂತಾದ ನಾಯಕರೆಲ್ಲರೂ ಅದರಲ್ಲಿ ಭಾಗವಹಿಸಿದ್ದರು. ಪಂಪ್‌ವೆಲ್ ಮಸ್ಜಿದ್ ತಖ್‌ವಾದ ಹುಟ್ಟಿಗೆ ಕಾರಣವಾದ ಮೊದಲ ಸಭೆ ಇದಾಗಿತ್ತು.

ಅಕ್ಟೋಬರ್ 10 ಗುರುವಾರ ಮರ್ಕ ಝುಸ್ಸಖಾಫತಿ ಸ್ಸುನ್ನಿಯ್ಯಃದ 25ನೇ ವಾರ್ಷಿಕ ಉದ್ಘಾಟನೆ ಮತ್ತು ಬೃಹತ್ ದ್ಸಿಕ್ರ್ ಹಲ್ಖಾ ಇತ್ತು. ದೇಶವಿದೇಶಗಳಿಂದ ಹಲವು ಗಣ್ಯಾತಿ ಗಣ್ಯ ಉಲಮಾ ಸಯ್ಯಿದ್‌ಗಳು ಆಗಮಿಸಿ ದ್ದರು. ಆ ದ್ಸಿಕ್ರ್ ಹಲ್ಖಾದ ವೇದಿಕೆಯಲ್ಲಿ ಎ.ಪಿ. ಉಸ್ತಾದ್ ನನ್ನಿಂದ ಭಾಷಣ ಮಾಡಿಸಿ ದರು. ಕನ್ನಡ ಮತ್ತು ಮಲಯಾಳಂನಲ್ಲಿ ಮಾತನಾಡುವಂತೆ ಸೂಚಿಸಿದ್ದರು. ಹೀಗೊಂದು ಅವಕಾಶದ ಬಗ್ಗೆ ಮೊದಲು ನನಗೆ ಮಾಹಿತಿಯಿರಲಿಲ್ಲ. ಯಾವುದೋ ಪುಸ್ತಕ ಮೇಳದಲ್ಲಿ ಪುಸ್ತಕ ಖರೀದಿಯಲ್ಲಿ ಏರ್ಪಟ್ಟಿದ್ದ ನನಗೆ ಮೈಕ್‌ನಲ್ಲಿ ಉಸ್ತಾದ್ ನನ್ನನ್ನು ಭಾಷಣಕ್ಕೆ ಕರೆಯುತ್ತಿರುವುದು ಕೇಳಿ ದಿಗಿಲಾಯಿತು. ಲಕ್ಷಾಂತರ ಮಂದಿ ನೆರೆದಿದ್ದ ಈ ಬೃಹತ್ ಜನಸ್ತೋಮವನ್ನು ದಾಟಿ ದ್ಸಿಕ್ರ್ ಸ್ಟೇಜಿನ ಹತ್ತಿರ ತಲುಪುವುದನ್ನು ಕಲ್ಪಿಸಿ ಕೊಳ್ಳಲೂ ಆಗುತ್ತಿರಲಿಲ್ಲ. ಇದನ್ನು ಮನಗಂಡ ಉಸ್ತಾದ್, ಅವನಲ್ಲಿ ನಾನು ಮೊದಲು ಭಾಷಣದ ಬಗ್ಗೆ ಹೇಳಿರಲಿಲ್ಲ. ಎಲ್ಲಿದ್ದರೂ ತಲುಪಬಹುದು ಎನ್ನುತ್ತಾ ನನಗಾಗಿ ಹಲವು ನಿಮಿಷ ಕಾದಿದ್ದರು. ಒಬ್ಬ ಮಹಾ ನಾಯಕ ತನ್ನ ಶಿಷ್ಯಂದಿರನ್ನು ಬೆಳೆಸುವ ಈ ಅನನ್ಯ ವೈಖರಿ ನನ್ನನ್ನು ದಿಗ್ಭ್ರಮೆ ಗೊಳಿಸಿದೆ. ಹೇಗೋ ವೇದಿಕೆಗೆ ತಲುಪಿ ದ್ವಿಭಾಷಾ ಭಾಷಣ ನಿರ್ವಹಿಸಿದೆ. ನನ್ನ ಭಾಷಣ ಬದುಕಿನಲ್ಲಿ ನಾನು ಸಂಬೋಧಿಸಿದ ಅತೀ ದೊಡ್ಡ ಸಭೆ ಇದಾಗಿತ್ತು. ಈ ದಾಖಲೆ ಇನ್ನೂ ಮುರಿಯದೆ ಉಳಿದಿದೆ. ಮುಂದಿನ ತಿಂಗಳು ದುಬೈಯಲ್ಲಿ ಹಲವು ಮಹನೀಯರನ್ನು ಕುಂಬ್ರ ಮರ್ಕಝ್‌ಗಾಗಿ ಭೇಟಿಯಾದಾಗ ನೀವು ಮರ್ಕಝ್ ದ್ಸಿಕ್ರ್ ಹಲ್ಖಾದಲ್ಲಿ ಭಾಷಣ ಮಾಡಿದ ವ್ಯಕ್ತಿ ಅಲ್ಲವೇ? ಎನ್ನುತ್ತಾ ಹೆಚ್ಚಿನ ಸಂಭಾವನೆ ಕೊಟ್ಟು ಪ್ರೋತ್ಸಾಹಿಸಿದ್ದರು.

ಅಕ್ಟೋಬರ್ 18 ಶುಕ್ರವಾರ ತಲಪಾಡಿ ಯ ನನ್ನ ಮೊದಲ ವರ್ಷದ ದರ್ಸ್ ಮುಕ್ತಾ ಯವಾಯಿತು. ನವೀಕರಣ ಕಾಮಗಾರಿಯ ನಡುವೆ ಸೀಮಿತ ಸೌಕರ್ಯಗಳ ಮಧ್ಯೆ ಆ ಬಾರಿ ಇಪ್ಪತ್ತು ಮಂದಿ ಮುತಅಲ್ಲಿಮರು ಕಲಿಯುತ್ತಿದ್ದರು. ಹತ್ತು ಮಂದಿ ಶಾಲೆ ಸಹಿತ 'ಸಮನ್ವಯ ಶಿಕ್ಷಣ' ಪಡೆಯುತ್ತಿದ್ದರು. ಡಿಸೆಂಬರ್ 22ರಂದು ತಲಪಾಡಿಯ ದ್ವಿತೀಯ ವರ್ಷದ ದರ್ಸ್ ಶುರುವಾಯಿತು.

ಡಿಸೆಂಬರ್ 15 ಭಾನುವಾರ ಬೆಳಿಗ್ಗೆ 10ಗಂಟೆಗೆ ಉಡುಪಿ ರೋಟರಿ ಜಿಲ್ಲೆಯ ಬೆಳ್ಳಿ ಹಬ್ಬ ಪ್ರಯುಕ್ತ ಕಾರ್ಯಕ್ರಮಕ್ಕೆ ಮಣಿಪಾಲದ ಎಸ್.ಎ. ರಹ್‌ಮಾನ್ ಆಹ್ವಾನದ ಮೇರೆಗೆ ತೆರಳಿದ್ದೆ. ಅಲ್ಲಿನ ಭಾಷಣ ಸಭಿಕರ ಮನಗೆದ್ದಿತ್ತು. ಕೊನೆಗೆ ಮರಳುವಾಗ ಪ್ರೊಫೆಸರ್ ದಂಪತಿಯೊಂದು ಅಭಿನಂದಿಸಲು ಬಂದಿದ್ದರು. ಹಿರಿಯ ಮಹಿಳೆ ಹಸ್ತದಾನಕ್ಕೆ ಮುಂದಾದಾಗ ನಿರಾಕರಿಸಿ ಕೈ ಮುಗಿದೆ. ಆದರೆ ಅವರು ನನ್ನ ಕಾಲು ಮುಟ್ಟಿ ನಮಸ್ಕರಿಸಿ ಬಿಟ್ಟಿದ್ದರು!!

ಡಿಸೆಂಬರ್ 25 ಬುಧವಾರ ಕುಂಬ್ರ ಮರ್ಕಝ್‌ಗಾಗಿ ನನ್ನ ಮೂರನೇ ದುಬೈ ಯಾತ್ರೆ. ಕಾಸರಗೋಡ್‌ನಿಂದ ಸಫರ್ ಬಸ್‌ನಲ್ಲಿ ಮುಂಬೈ ತನಕ ಹೋಗಿ ಅಲ್ಲಿಂದ ದುಬೈಗೆ ಹಾರುವ ರೀತಿಯಾಗಿತ್ತು ಯಾತ್ರೆ. ಆಗ ಮಂಗಳೂರಿನಿಂದ ದುಬೈಗೆ ನೇರ ವಿಮಾನಯಾನ ಇರಲಿಲ್ಲ. ಹೀಗೆ ಮುಂಬೈ ದಾಟಿ

ವಿದೇಶ ಯಾತ್ರೆಗೆ ತೆರಳಿದಾಗಲೆಲ್ಲ ಮುಂಬೈಯಲ್ಲಿ ನನಗೆ ನೆರವಾಗುತ್ತಿದ್ದವರು ಮೊಂಟೆಪದವಿನ ಉಮರ್. ಎಸ್ಸೆಸ್ಸೆಫ್ ನಾಯಕ ಸಿದ್ದೀಖ್ ಮೋಂಟುಗೋಳಿಯ ಸೋದರ ಮಾವ. ಬಸ್ ನಿಲ್ದಾಣಕ್ಕೆ ಬಂದು ಕರೆದೊಯ್ಯುವುದು, ವಿಮಾನ ನಿಲ್ದಾಣಕ್ಕೆ ಕರೆ ತರುವುದು, ಊಟೋಪಚಾರ, ವಾಸ್ತವ್ಯದ ವ್ಯವಸ್ಥೆಗಳೆಲ್ಲವೂ ಅವರದ್ದೆ ಆಗಿತ್ತು. ಮುಂಬೈಯ ಚೆಂಬೂರಿನಲ್ಲಿ ಪುಟ್ಟ ಅಂಗಡಿಯನ್ನು ನಡೆಸುತ್ತಿರುವ ಉಮರಾಕ ನನಗಾಗಿ ಈ ಯಾತ್ರೆಯ ಮಧ್ಯೆ ಬಹಳಷ್ಟು ಸಮಯವನ್ನು ಮೀಸಲಿಡುತ್ತಿದ್ದರು.

2003ನೇ ವರ್ಷದ ಫೆಬ್ರುವರಿ 7ರ ತನಕ ಯು.ಎ.ಇ.ಯ ವಿವಿಧ ಕಡೆಗಳಲ್ಲಿ ಸುತ್ತಾಡಿ ಮುಂಬೈ ಬಂದಿಳಿದಾಗ 'ಒಮಾನ್‌ಏರ್' ವಿಮಾನದಲ್ಲಿ ನನ್ನ ಲಗೇಜ್ ಕಳೆದು ಹೋಗಿತ್ತು. ಮೂರ್‍ನಾಲ್ಕು ದಿನಗಳ ತೀವ್ರ ಕಾಯುವಿಕೆ ನಂತರ ಲಗ್ಗೇಜ್ ಬಂದರೂ ಮುಂಬೈ ಏರ್‌ಪೋರ್ಟ್‌ನವರು ಅನಧಿಕೃತ ವಾಗಿ ನನ್ನಿಂದ ಸಾವಿರಾರು ರೂ. ಗಳನ್ನು ಕಸಿದುಕೊಂಡರು.

ದುಬೈಯಲ್ಲಿದ್ದಾಗ, ಅಂದಿನ ಕರ್ನಾಟಕ ರಾಜ್ಯ ಸರಕಾರದ ವಸತಿ ಸಚಿವರಾದ ಸಗೀರ್ ಅಹ್‌ಮದ್ ಫೋನ್ ಮಾಡಿ ಚಿಕ್ಕಮಗಳೂರಿ ನಲ್ಲೊಂದು ಕಾರ್ಯಕ್ರಮಕ್ಕೆ ಆಹ್ವಾನ ನೀಡಿದರು. ಸಿರಿಗೆರೆ ಸ್ವಾಮಿಯ ತರಳ ಬಾಳು ಹುಣ್ಣಿಮೆ ಕಾರ್ಯಕ್ರಮವಾಗಿತ್ತದು. ಡಾ. ಶಿವಾಚಾರ್ಯ ಶಿವಮೂರ್ತಿ ಸ್ವಾಮೀಜಿಗಳ ನೇತೃತ್ವದ ಈ ಕಾರ್ಯಕ್ರಮ ಪ್ರತಿ ವರ್ಷ ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆಯುತ್ತಿದ್ದು ಆ ಬಾರಿ ಚಿಕ್ಕಮಗಳೂರಿನಲ್ಲಿತ್ತು. ದಶ ಸಹಸ್ರಾರು ಮಂದಿ ನೆರೆದಿದ್ದ ಕಾರ್ಯಕ್ರಮ ದಲ್ಲಿ ಭಾರತದ ಮಾಜಿ ಪ್ರಧಾನ ಮಂತ್ರಿ ಕೆ. ಚಂದ್ರಶೇಖರ್, ಪೇಜಾವರ ಸ್ವಾಮಿಗಳು, ಸ್ಥಳೀಯ ಸಂಸದ ಬಿ.ಎಲ್. ಶಂಕರ್ ಆದಿಯಾಗಿ ಅನೇಕ ಗಣ್ಯರ ಉಪಸ್ಥಿತಿಯಿತ್ತು. ಮಾಜಿ ಪ್ರಧಾನಿಯ ಗಮನ ಸೆಳೆಯಬೇಕೆ ನ್ನುವ ಉದ್ದೇಶದಿಂದ ಹಿಂದಿ ಕವನವೊಂದನ್ನು ಎಲ್ಲಿಂದಲೋ ಹುಡುಕಿ ಬಾಯಿ ಪಾಠ ಮಾಡಿ ಹೋಗಿದ್ದೆ. ಅದು ಫಲನೀಡಿತು. ಮಾಜಿ ಪ್ರಧಾನಿಗಳು ತಮ್ಮ ಭಾಷಣದಲ್ಲಿ ನನ್ನ ಭಾಷಣವನ್ನೂ ಹಿಂದಿ ಕವನವನ್ನೂ ಉಲ್ಲೇಖಿಸಿದರು. ನನ್ನ ಕನ್ನಡ ಭಾಷಣ ಅವರಿಗೆ ಅರ್ಥವಾಗದಿದ್ದರೂ ಅದನ್ನವರು ಗಮನಿಸುತ್ತಿದ್ದರು ಮತ್ತು ನನ್ನ ಮಾತನ್ನೂ 'ಕೋಟ್' ಮಾಡಿದರು ಎನ್ನುವುದು ಆ ಕ್ಷಣದಲ್ಲಿ ನನಗೆ ಅತೀವ ಖುಷಿ ನೀಡಿತ್ತು. ಭಾಷಣದ ಬಳಿಕ ನನ್ನ ಬಳಿ ಬಂದು ಕುಳಿತ ಸಂಸದ ಬಿ.ಎಲ್. ಶಂಕರ್, ನನ್ನನ್ನು ಕಾಂಗ್ರೆಸ್ ಪಕ್ಷಕ್ಕೆ ಆಹ್ವಾನಿಸಿದರು. ನಿಮ್ಮ ಸಮುದಾಯದ ನಾಯಕರು ಪಕ್ಷದಲ್ಲಿ ಸಾಕಷ್ಟು ಜನ ಇದ್ದರೂ ಪ್ರಭಾವಿಗಳಿಲ್ಲ. ನೀವು ಬನ್ನಿ, ಎಮ್ಮೆಲ್ಸಿ ತನಕ ಬೆಳೆಯ ಬಹುದು ಎಂದು 'ಆಶ್ವಾಸನೆ' ಕೊಟ್ಟಿದ್ದರು. ಅನಂತರವೂ ಇದೇ ಅಗತ್ಯಕ್ಕಾಗಿ ಸಂಪರ್ಕಿಸಿ ದ್ದರು. ಬೆಳ್ತಂಗಡಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರನ್ನೂ ಎರಡು ಬಾರಿ ಮನೆಗೆ ಕಳಿಸಿದ್ದರು. ಮೊದಲು ಬ್ಲಾಕ್ ಉಪಾಧ್ಯಕ್ಷ ರನ್ನಾಗಿ ಮಾಡುತ್ತೇವೆ. ಮತ್ತೆ ಹಂತ ಹಂತವಾಗಿ ಬೆಳೆಯಬಹುದು ಎಂದರು. ಕೆಲವು ಮಿತ್ರರೊಂದಿಗೆ, ಹಿರಿಯರೊಂದಿಗೆ ಈ ಬಗ್ಗೆ ಸಮಾಲೋಚಿಸಿದಾಗ ಪಕ್ಷಕ್ಕೆ ಸೇರಿ ಬಿಡಿ. ಅವಕಾಶ ಕೈ ಚೆಲ್ಲಬೇಡಿ ಎಂದು ಬೆಂಬಲಿಸಿ ದ್ದರೂ ಕೊನೆಯದಾಗಿ ಎ.ಪಿ. ಉಸ್ತಾದರಲ್ಲಿ ಸಮಾಲೋಚಿಸಿದಾಗ, ಕಾಂಗ್ರೆಸ್ ಸೇರಿದರೆ ಒಂದು ಪಕ್ಷದ ಜನ ಆಗುತ್ತೀ, ನೀನು ಎಲ್ಲ ಪಕ್ಷದವರಿಂದಲೂ ಗೌರವಿಸಲ್ಪಡಬೇಕು ಎಂದು ಸಲಹೆ ನೀಡಿದ್ದರು. ಅದರೊಂದಿಗೆ ರಾಜಕೀಯ ಕನಸು ಕೊನೆಗೊಂಡಿತು.

2003 ಏಪ್ರಿಲ್ 27 ಭಾನುವಾರ ನನ್ನ ಪಾಲಿಗೆ ವಿಶೇಷ ಅವಕಾಶವೊಂದು ಒದಗಿ ಬಂತು. ಗುರುವಾಯನಕೆರೆ ದರ್ಗಾಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರಿಗೆ ಸ್ವಾಗತ ಭಾಷಣ ಮಾಡಲು ದರ್ಗಾ ಸಮಿತಿ ನನಗೆ ಆಹ್ವಾನ ನೀಡಿತು. ಆ ದಿನ ಸಂಜೆ ಮುಖ್ಯಮಂತ್ರಿ ಆಗಮನ ಮತ್ತು ನನ್ನ ಸ್ವಾಗತ ಭಾಷಣ ನಡೆಯಿತು. ನಾನು ಮೊದಲ ಬಾರಿ ಕಲಿತ ಗುರುವಾಯನಕೆರೆಯಲ್ಲಿ ಇದೊಂದು ಹೆಗ್ಗಳಿಕೆಯ ವಿಷಯವಾಗಿ ನನಗೆ ಅನುಭವವಾಯಿತು. ಸಭೆಯಲ್ಲಿ ಎಂ.ಎ. ಗಫೂರ್, ರಮಾನಾಥ ರೈ, ವಿನಯಕುಮಾರ್ ಸೊರಕೆ, ಶಾಸಕ ವಿಜಯ ಕುಮಾರ್ ಶೆಟ್ಟಿ ಎಲ್ಲ ಸೇರಿ ಮುಖ್ಯಮಂತ್ರಿಗೆ ನನ್ನನ್ನು ಪರಿಚಯ ಮಾಡಿ ಕೊಟ್ಟರು. 'ಇವರನ್ನು ಬೆಂಗಳೂರಿಗೆ ಕರೆಸಿ' ಎಂದರು ಎಸ್.ಎಂ. ಕೃಷ್ಣ.

ಮೇ ಐದು ಸೋಮವಾರ ಫರಂಗಿಪೇಟೆ ಯಶಸ್ವಿಹಾಲ್‌ನಲ್ಲಿ ಮಿತ್ರ ಮಲ್ಲೂರು ಅಶ್ರಫ್ ಸಅದಿಯ ಮದುವೆ ದಿನ. ವಿದ್ಯಾರ್ಥಿ ಜೀವನದಿಂದಲೇ ನಾನು ಆರಂಭಿಸಿದ್ದ ಮದುವೆ ಸಭೆಗಳ ಮಂಗಳ ಭಾಷಣಕ್ಕೆ, ಆ ದಿನ ಮಂಗಳ ಹಾಡಿದೆ. ಸಅದಿ ನಿಕಾಹ್ ನಂತರ ಭಾಷಣ ಮಾಡಿದ ಬಳಿಕ ಹೀಗೊಂದು ನಿರ್ಧಾರಕ್ಕೆ ಬಂದೆ. ಈಗ ನಿಕಾಹ್‌ನ ಬಳಿಕ ಭಾಷಣ ಮಾಡಬೇಕೆಂದು ಅಪೇಕ್ಷೆಯಿಟ್ಟು ಕರೆಯುವ ಮದುವೆಗಳಿಗೆ ತಪ್ಪಿಸಿಕೊಳ್ಳುವುದನ್ನು ರೂಢಿ ಮಾಡಿದ್ದೇನೆ. ಕಿರಿಯ ಪ್ರಾಯದಲ್ಲಿ ಇದೆಲ್ಲ ಒಂದು ಆವೇಶವಾಗಿದ್ದರೆ, ಹಿರಿತನ ಬರುತ್ತಿ ದ್ದಂತೆ ಯಾಕೋ ಇಂತಹ ಭಾಷಣಗಳಲ್ಲಿ ನಿರಾಸಕ್ತಿ ಬೆಳೆದುಬಂದಿದೆ. ಅದರಂತೆ ಸಭಿಕರನ್ನು ಆವೇಶಭರಿತರನ್ನಾಗಿಸಿ ತಕ್‌ಬೀರ್ ಮೊಳಗಿಸುವಂತೆ ಭಾಷಣ ಮಾಡುವ ಶೈಲಿಯೊಂದಿಗೂ ಕ್ರಮೇಣ ಆಸಕ್ತಿ ಕಡಿಮೆಯಾಗುತ್ತಿದೆ. ಏನಿದ್ದರೂ ಜನರಿಗೆ ವಿಷಯ ಮನದಟ್ಟಾಗುವ ಪ್ರಬುದ್ಧ ಮಾತುಗಳಿಗೇ ಯಾವತ್ತೂ ತೂಕವಿದೆ ಎಂದು ಅಂತರಂಗ ವಿಧಿಸಿಬಿಟ್ಟಿದೆ.

2003 ಮೇ 14ರಂದು ರಬೀಉಲ್ ಅವ್ವಲ್ ಹನ್ನೆರಡು. ಆದಿನ ಕೃಷ್ಣಾಪುರ, ತಲಪಾಡಿ, ಉಳ್ಳಾಲ ದರ್ಗಾ, ಮದನಿ ನಗರ ಮತ್ತು ಕಬಕದಲ್ಲಿ ಕಾರ್ಯಕ್ರಮವಿತ್ತು. ಅಸರ್ ನಮಾಝಿನ ಬಳಿಕ ಉಳ್ಳಾಲ ದರ್ಗಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಯ್ಯಿದುನಾ ತಾಜುಲ್ ಉಲಮಾ ನನ್ನ ಭಾಷಣ ಮುಗಿಯುವ ತನಕ ಆಲಿಸಿ ಆರ್ಶೀವದಿಸಿದರು. ನಂತರ ಅವರ ಕೋಣೆಗೆ ಹೋದಾಗ 'ಅಹ್‌ಸನ್ತ, ಬಾರಕಲ್ಲಾಹು ಫೀಕ' (ಅತ್ಯುತ್ತಮವಾಗಿತ್ತು. ಅಲ್ಲಾಹು ಅನುಗ್ರಹಿ ಸಲಿ) ಎನ್ನುತ್ತಾ ಕೈ ತುಂಬ ಹಣ ಕೊಟ್ಟಿದ್ದರು. ಜತೆಗೆ ಮೈಕ್‌ನ ಹತ್ತಿರ ನಿಂತು ಮಾತನಾಡಿದ್ದಕ್ಕೆ, ಇನ್ನೂ ಮೈಕ್ ಬಳಸಲು ಕಲಿತಿಲ್ವಾ? ಎಂದು ಗದರಿಸಿದ್ದರು ಕೂಡಾ.

ಮೇ 16 ಶುಕ್ರವಾರ ಜುಮಾ ವೇಳೆ ಮಂಗಳೂರು ತಾಲೂಕು ಪಂಚಾಯತ್ ಅಧ್ಯಕ್ಷರಾಗಿದ್ದ ಮಲ್ಲೂರು ಎಂ.ಡಿ. ಜಬ್ಬಾರ್‌ರನ್ನು ದುಷ್ಕರ್ಮಿಗಳು ಇರಿದು ಕೊಂದಿದ್ದರು. ಪರಿಸರದಲ್ಲಿ ನನ್ನ ಭಾಷಣ ಎಲ್ಲಿದ್ದರೂ ಜಬ್ಬಾರ್ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಮರಣದ ಕೆಲ ದಿನಗಳ ಹಿಂದೆ ಉದ್ದಬೆಟ್ಟು ಮಸೀದಿಯಲ್ಲಿ ಮತ ಪ್ರವಚನಕ್ಕೆ ಹೋದಾಗ ಭೇಟಿಯಾದ ಜಬ್ಬಾರ್, ಕನ್ನಡದಲ್ಲಿ ಮಾತನಾಡಬೇಕು. ನನ್ನ ಮುಸ್ಲಿಮೇತರ ಸ್ನೇಹಿತರನ್ನೂ ಕರೆ ತರುತ್ತೇನೆ ಎನ್ನುತ್ತಾ ಅಲ್ಪ ಸಮಯದ ನಂತರ ಸ್ಕಾರ್ಪಿಯೋ ಒಂದರಲ್ಲಿ ಹತ್ತು ಜನ ಕಾಂಗ್ರೆಸ್ ಕಾರ್ಯಕರ್ತರನ್ನ ಕರೆತಂದು ಭಾಷಣದ ಕೊನೆ ತನಕ ಕುಳಿತಿದ್ದರು.

ಜೂನ್ 9 ಸೋಮವಾರದಂದು ನನ್ನ ರಾಜ್ಯ ಶಾಸ್ತ್ರ ಎಂ.ಎ. ಅಂತಿಮ ವರ್ಷದ ಪರೀಕ್ಷೆ ಮಂಗಳೂರು ಯುನಿವರ್ಸಿಟಿ ಕಾಲೇಜಿನಲ್ಲಿ ಪ್ರಾರಂಭವಾಯಿತು. ಜೂನ್ 18 ಬುಧವಾರ ಪರೀಕ್ಷೆ ಕೊನೆಗೊಂಡಾಗ ಡೈರಿ ಪುಟದಲ್ಲಿ 'ಇದು ನನ್ನ ಬದುಕಿನ ಸುಪ್ರಧಾನ ಕ್ಷಣ. 1997ರಿಂದ ನಾನು ಹೆಣಗಾಡುತ್ತಿರುವ ಎಂ.ಎ. ಕನಸು ಇವತ್ತು ಫೈನಲ್ ಪೇಪರ್ ಬರೆದು ಮುಗಿಸಿದಾಗ ಸಾಕಾರಗೊಳ್ಳುವತ್ತ ಬಂದಿದೆ. 1987ರಲ್ಲಿ ಉಜಿರೆ ಹೈಸ್ಕೂಲ್‌ನಲ್ಲಿ 9ನೇ ತರಗತಿಯಲ್ಲಿ ಶಾಲೆ ಬಿಟ್ಟಾಗ ಸಿಟ್ಟಿನಿಂದ ಗದರಿದ ತಂದೆ ಇವತ್ತು ಇದ್ದಿದ್ದರೆ ನಾನು ಪಿ.ಜಿ. ಮುಗಿಸಿದ ಕ್ಷಣವನ್ನು ಹೇಗೆ ಸಂಭ್ರ ಮಿಸುತ್ತಿದ್ದರೋ...' ಎಂದು ದಾಖಲಿ ಸಿದ್ದೇನೆ.

2003 ಆಗಸ್ಟ್ 20 ಬುಧವಾರ ಪುತ್ತೂರು ತಾಲೂಕಿನ ಕುಂಬ್ರದಲ್ಲಿ ಮರ್ಕಝುಲ್ ಹುದಾ ಮಹಿಳಾ ಕಾಲೇಜಿನ ಉದ್ಘಾಟನೆ ನಡೆಯಿತು. ನಾಡಿನ ಸಾತ್ವಿಕ ಉಮರಾ ಮುಂದಾಳು ಶೇಕಮಲೆ ಮಮ್ಮುಂಞಿ ಹಾಜಿಯವರು ದಾನ ನೀಡಿದ ಸುಮಾರು ಒಂದು ಏಕ್ರೆ ಜಾಗದಲ್ಲಿ ಕಾಂತಪುರಂ ಉಸ್ತಾದರ ಮಾರ್ಗದರ್ಶನದಲ್ಲಿ ಶಿಕ್ಷಣ ಪ್ರವರ್ತಕ ಪುತ್ತೂರು ಉಸ್ಮಾನ್ ಹಾಜಿಯವರ ಸಾರಥ್ಯದಲ್ಲಿ ಮರ್ಕಝ್ ಉದಯಗೊಂಡಿತ್ತು. ಆ ತನಕ ಸಂಸ್ಥೆಯ ಜವಾಬ್ದಾರಿ, ಹಣ ಸಂಗ್ರಹ ಮುಂತಾದವು ಗಳನ್ನು ಅಲರ್ಜಿಯಿಂದ ನೋಡುತ್ತಿದ್ದ ನಾನು ಯಾಂತ್ರಿಕವಾಗಿ ಈ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹುದ್ದೆ ವಹಿಸಿ ಕೊಂಡಿದ್ದೆ. ಹೆಣ್ಣು ಮಕ್ಕಳ ಮತ -ಲೌಕಿಕ ಶಿಕ್ಷಣದ ಹಾದಿಯಲ್ಲಿ ಮಾದರಿಯೋಗ್ಯ ಹತ್ತು ವರ್ಷಗಳನ್ನು ಮುಗಿಸಿದ ಕುಂಬ್ರ ಮರ್ಕಝ್‌ನ ಇಂದಿನ ಅನಿವಾರ್ಯತೆಯನ್ನು ಕಾಣುವಾಗ ಅದಕ್ಕಾಗಿ ಶ್ರಮಿಸಿದ್ದು, ಒಲ್ಲದ ಮನಸ್ಸಿನಿಂದ ಹಣ ಸಂಗ್ರಹಕ್ಕೆ ಇಳಿದಿದ್ದು ಎಲ್ಲವೂ ಸಾರ್ಥಕವೆನಿಸುತ್ತದೆ. ದಣಿವರಿ ಯದ ಧರ್ಮ ಸೇವಕ ಮಾನ್ಯ ಪುತ್ತೂರು ಉಸ್ಮಾನ್ ಹಾಜಿಯವರು ಇಲ್ಲಿ ಸಲ್ಲಿಸುತ್ತಿ ರುವ ಸೇವೆ ಸಮಾಜದ ಎಲ್ಲ ಸ್ತರದಲ್ಲಿರುವವರಿಗೂ ಮಾದರಿಯೇ ಸರಿ. ಸಯ್ಯಿದ್ ಕೂರತ್ ತಂಙಳ್ ಅವರ ಪ್ರಾರ್ಥನೆಯೊಂದಿಗೆ ನಡೆದ ಸಮಾರಂಭದಲ್ಲಿ ಸಯ್ಯಿದ್ ಫಾರೂಖ್ ತಂಙಳ್ ಪೊಸೋಟು ಸಂಸ್ಥೆಯನ್ನು ಉದ್ಘಾಟಿಸಿದ್ದರು.

ಸೆಪ್ಟಂಬರ್ 12 ಶುಕ್ರವಾರ, ದಕ್ಷಿಣ ಕೇರಳದ ಪ್ರತಿಷ್ಠಿತ ವಿದ್ಯಾಕೇಂದ್ರ ಕೊಲ್ಲಂ ಜಿಲ್ಲೆಯ 'ಖಾದಿಸಿಯ್ಯಃ' ಸಂಸ್ಥೆಯ ಸಮ್ಮೇಳನದ ಉದ್ಘಾಟನೆಯ ಅಂಗವಾಗಿ ಕೊಲ್ಲೂರ್‌ಪಳ ಪಟ್ಟಣದ ಪಳ್ಳಿಮುಕ್ಕ್ ಎಂಬಲ್ಲಿ ನನಗೆ ಭಾಷಣವಿತ್ತು. ಆ ದಿನ ನನ್ನ ಭಾಷಣ ಪ್ರಾರಂಭವಾಗುವವರೆಗೆ ಸಮಯ ಹೊಂದಾಣಿಕೆಗಾಗಿ ಭಾಷಣ ಮಾಡಿದ್ದ ಫಾರೂಖ್ ನಈಮಿ ಇಂದು ಭಾಷಣ ದಿಗಂತದಲ್ಲಿ ಏರಿರುವ ಎತ್ತರ ಅತ್ಯದ್ಭುತಕರ.

ಎಸ್ಸೆಸ್ಸೆಫ್ ಅರಳು ಪ್ರತಿಭೆಗಳ ನೈಸರ್ಗಿಕ ಕೌಶಲ್ಯಗಳನ್ನು ಬೆಳೆಸಲು ಹಮ್ಮಿಕೊಂಡಿರುವ ಪ್ರತಿಭೋತ್ಸವ ಕಾರ್ಯಕ್ರಮ ಇಂದು ಜನಪ್ರಿಯ. ಈ ಮೂಲಕ ಹಲವಾರು ಬರಹ - ಭಾಷಣ - ಗಾಯನ ತಾರೆಗಳನ್ನು ಸಮಾಜಕ್ಕೆ ಸಮರ್ಪಿಸಲು ಸಾಧ್ಯವಾಗಿದೆ. ಇದರ ಪ್ರಪ್ರಥಮ ರಾಜ್ಯ ಮಟ್ಟದ ಕಾರ್ಯಕ್ರಮವು 2003 ಸೆಪ್ಟಂಬರ್ 20,21 ದಿನಾಂಕಗಳಲ್ಲಿ 'ಸಾಹಿತ್ಯ ಸಂಗಮ' ಎಂಬ ಹೆಸರಲ್ಲಿ ಮಂಗಳೂ ರಿನ ಕಾಟಿಪಳ್ಳ ಜಾಸ್ಮಿನ್ ಹಾಲ್‌ನಲ್ಲಿ ನಡೆದಿತ್ತು. ಸೀನಿಯರ್ ವಿಭಾಗದಲ್ಲಿ ಹಾಡುಗಾರ ಮಹ್‌ಬೂಬ್ ಕಾಟಿಪಳ್ಳ ಹಾಗೂ ಜೂನಿಯರ್ ವಿಭಾಗದಲ್ಲಿ ಭಾಷಣ ಗಾರ ನೌಫಲ್ ಕಳಸ ವರ್ಷದ ಪ್ರತಿಭೆಗಳಾಗಿ ಆಯ್ಕೆಯಾಗಿದ್ದರು.

ಅಕ್ಟೋಬರ್ 22 ಬುಧವಾರ ಮಾಣಿ ದಾರುಲ್ ಇರ್ಶಾದ್‌ನಲ್ಲಿ ನಡೆದ ರಾಜ್ಯ ಎಸ್ಸೆ ಸ್ಸೆಫ್ ಮಹಾ ಸಭೆಯು ಸಾಂಘಿಕ ರಂಗದ ಲ್ಲೊಂದು ತಿರುವಾಗಿತ್ತು. 1995ರಿಂದ ಅಳವಡಿಸಿಕೊಂಡಿದ್ದ ಸಂಘಟನೆಯ ಕಾರ್ಯ ಶೈಲಿಗ ಮಹತ್ತರವಾದ ಬದಲಾವಣೆಗೆ ಅಂದು ಚಾಲನೆ ನೀಡಲಾಗಿತ್ತು. ತಾಲೂಕು ವ್ಯವಸ್ಥೆಯನ್ನು ರದ್ದುಪಡಿಸಿ 'ಡಿವಿಷನ್' ಗಳನ್ನು ಅಸ್ತಿತ್ವಕ್ಕೆ ತರಲು ಯೋಜನೆ ಹಾಕಲಾಯಿತು. ಆ ಮೂಲಕ ಸಂಘಟನೆಯ ಕಾರ್ಯ ವ್ಯಾಪ್ತಿ ಹಿಗ್ಗಿಸಿಕೊಂಡದ್ದಲ್ಲದೆ  ಅಸಂಖ್ಯ ನಾಯಕರ ಸೃಷ್ಟಿಗೆ ವೇದಿಕೆ ಸಜ್ಜು ಗೊಂಡಿತ್ತು. ರಾಜ್ಯದ ಮೊಟ್ಟ ಮೊದಲ 'ಡಿವಿಶನ್' ಆಗಿ ಬೆಳ್ತಂಗಡಿ ತಾಲೂಕಿನ 'ಕುಪ್ಪೆಟ್ಟಿ' ರಚಿತವಾಯಿತು. ರಾಜ್ಯ ಮಹಾಸಭೆಯೊಂದಿಗೆ ಆ ದಿನ ಕಾಟಿಪಳ್ಳದ ಸಾಹಿತ್ಯ ಸಂಗಮದ ವಿಜೇತರಿಗೆ ತರಬೇತು ನೀಡಲು ಸಾಹಿತ್ಯ ಕಮ್ಮಟ ಏರ್ಪಡಿಸಲಾ ಗಿತ್ತು. ಅದರಲ್ಲಿ ಭಾಗವಹಿಸಿ ಮುಂದೆ ಇಂಜಿನಿಯರ್ ಆಗುವ ಬಯಕೆ ಪ್ರಕಟಿಸಿದ್ದ ಬಾಲ ಪ್ರತಿಭೆ ಉಡುಪಿಯ ಮೂಳೂರಿನ ಫಯಾಝ್ ಇಸ್ಮಾಈಲ್ ಮುಂದೆ ಕೆಲವೇ ದಿನಗಳಲ್ಲಿ ಮರಣ ಹೊಂದಿದ್ದ. ಎಸ್ಸೆಸ್ಸೆಫ್‌ನ ಸಾಂಘಿಕ ಸೋದರತ್ವದ ಪ್ರತೀಕವಾಗಿ ಈಗಲೂ ಸಂಘಟನೆಯ ಎಲ್ಲ ವೇದಿಕೆಗಳಲ್ಲಿ ಯೂ ಫಯಾಝ್ ಸ್ಮರಿಸಲ್ಪಡುತ್ತಾನೆ, ಸಂಘಟನೆಯ ಬಾಲ ಘಟಕದ ಕಾರ್ಯ ಕರ್ತರಿಗೆ ಸದಾ ಸ್ಫೂರ್ತಿಯ ನೆಲೆಯಾಗಿ.

ಕಳೆದ ರಬೀಉಲ್ ಅವ್ವಲ್ ಕೊನೆಯ ದಿನ ಮೂಳೂರಿನಲ್ಲಿ ಫಯಾಝ್‌ನ ಮನೆಯವರ ಗೃಹ ಪ್ರವೇಶಕ್ಕೆ ಹೋದಾಗ ಹೊಚ್ಚ ಹೊಸ ಮನೆಯ ಶೆಲ್ಫ್‌ನಲ್ಲಿ ಎಸ್ಸೆ ಸ್ಸೆಫ್‌ನ ಹಳೇ ಫಲಕವೊಂದು ಇಣುಕುತ್ತಿತ್ತು. 2003ರ ಕಾಟಿಪಳ್ಳ ಪ್ರತಿಭೋತ್ಸವದಲ್ಲಿ ಫಯಾಝ್ ಪಡೆದ ಬಹುಮಾನವಾಗಿತ್ತದು. ಸುದೀರ್ಘ ಹತ್ತು ವರ್ಷಗಳ ಬಳಿಕವೂ ಫಯಾಝ್ ಎಂಬ ಅಗಲಿದ ತಮ್ಮನ ಅಪ್ಪಟ ಪ್ರತಿಭೆಯ ಜೀವಂತ ಕುರುಹಾಗಿ...

# 25

## ಆಕಾಶದಲ್ಲೊಂದು ಭಾಷಣ...

2004ನೇ ವರ್ಷದ ಪೂರ್ವಾರ್ಧ ದಲ್ಲಿ ಭಾಷಣ ಬದುಕಿನ ಪುಟಗಳಲ್ಲಿ ಸ್ಮರಣೀಯವಾದುದೇನೂ ಘಟಿಸಿದ್ದು ನಮೂದಾಗಿಲ್ಲ. ಆದರೆ ಆ ವರ್ಷದ ಉತ್ತ ರಾರ್ಧ, ಬದುಕಿನ ಇನ್ನೊಂದು ಅವಿಸ್ಮರಣೀಯ ಘಟನೆಗೆ ಸಾಕ್ಷಿಯಾದದ್ದು ನಿಜ. ಭಾರತ ರಾಷ್ಟ್ರೀಯ ಹಜ್ ಸಮಿತಿಯ ವತಿಯಿಂದ ವಿವಿಧ

ರಾಜ್ಯಗಳಿಂದ ಆಯ್ಕೆಯಾದವರಿಗೆ ಹಜ್ ತರಬೇತಿ ಶಿಬಿರ ನಡೆಸುವುದು ಮತ್ತು ಅರ್ಹರನ್ನು ಆ ವರ್ಷದ ಹಾಜಿಗಳಿಗೆ ಮಾರ್ಗ ದರ್ಶಕರಾಗಿ ಸರಕಾರಿ ವೆಚ್ಚದಲ್ಲೇ ಹಜ್‌ಗೆ ಕಳಿಸುವ ವ್ಯವಸ್ಥೆಯೊಂದು ಜಾರಿಯಲ್ಲಿತ್ತು.

ಒಂದು ಸುದಿನದಲ್ಲಿ ಹಿರಿಯರಾದ ಮಂಗ ಳೂರಿನ ಹಾಜಿ ಹಮೀದ್ ಕಂದಕ್, ನಿಮ್ಮನ್ನು ಹಜ್ ಟ್ರೈನಿಂಗ್‌ಗೆ ಕಳಿಸುವ ಇರಾದೆಯಿದೆ. ಅದೃಷ್ಟವಿದ್ದರೆ ಈ ಬಾರಿ ಸರಕಾರದ ಖರ್ಚಿ ನಲ್ಲಿ ಹಜ್‌ಗೂ ಹೋಗಬಹುದು ಎಂದು ಶುಭ ಸುದ್ದಿ ನೀಡಿದರು. ಅದರಂತೆ ಅವರ ಮುತುವರ್ಜಿಯಿಂದಾಗಿ ಕರ್ನಾಟಕದಿಂದ ಆಯ್ಕೆಯಾದ 'ಹಜ್ ಟ್ರೈನರ್'ಗಳಲ್ಲಿ ನನ್ನ ಹೆಸರೂ ಬಂತು. 2004 ಆಗಸ್ಟ್ 30, 31 ಮತ್ತು ಸೆಪ್ಟಂಬರ್ ಒಂದರಂದು ಮುಂಬೈ ಹಜ್ ಹೌಸ್‌ನಲ್ಲಿ ನಡೆಯುವ ತರಬೇತಿ ಶಿಬಿರಕ್ಕೆ ನಾನು ಹೋಗಬೇಕಿತ್ತು.

ಆಗಸ್ಟ್ 29 ಭಾನುವಾರ ಅಪರಾಹ್ನ 2.40ಕ್ಕೆ ಮಂಗಳೂರಿನಿಂದ ಹೊರಡುವ ಮತ್ಸ್ಯಗಂಧ ಎಕ್ಸ್‌ಪ್ರೆಸ್ ರೈಲಿನಲ್ಲಿ ಮುಂಬೈಗೆ ಯಾತ್ರೆ. ಆ ವರ್ಷ ರಾಜ್ಯ ಎಸ್ಸೆಸ್ಸೆಫ್ 15ನೇ ವಾರ್ಷಿಕದ ಪ್ರಯುಕ್ತ 'ಸ್ಫಟಿಕ ಮಹೋತ್ಸವ' ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು 'ಮಾನವತೆಗೆ ಮರಳೋಣ' ಎಂಬ ಘೋಷ ವಾಕ್ಯದೊಂದಿಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿತ್ತು. ಇದರ ಸಂಚಾಲಕರಾಗಿ ಆಯ್ಕೆಯಾಗಿದ್ದ ಮಿತ್ರ ಕೆಕೆಎಂ ಕಾಮಿಲ್ ಸಖಾಫಿ ಮುಂಬೈಯಲ್ಲಿ ಸಂಘಟನೆಯ ಸಂದೇಶ ಪ್ರಚಾರ ಮತ್ತು ಧನ ಸಂಗ್ರಹಕ್ಕಾಗಿ ನನ್ನ ಜತೆ ರೈಲು ಏರಿದ್ದರು. ಆಗಸ್ಟ್ 30 ಸೋಮವಾರ ಮಧ್ಯಾಹ್ನದಿಂದ ಸೆಪ್ಟಂಬರ್ 1 ಬುಧವಾರ ಸಂಜೆಯ ತನಕ ಮುಂಬೈ ಹಜ್ ಕಮಿಟಿ ಕಚೇರಿಯಲ್ಲಿ ನಮಗೆ ತರಬೇತು ಶಿಬಿರ ನಡೆಯಿತು. ಸೌದಿ ಅರೇಬಿಯಾದ ಇಂಡ್ಯನ್ ಹಜ್ ಕೋನ್ಸಲ್ (Consul) ಅಬ್ದುಲ್ ಮಜೀದ್ ಪಾಡಾರ್ ಎಂಬವರು ಮೂರು ದಿನಗಳ ಕಾಲ ಸತತವಾಗಿ ಮಾತನಾಡಿದರು. ಉತ್ತರ ಕರ್ನಾಟಕ ಭಾಗದಿಂದ ಕೆಲವು ಮಂದಿ ನನ್ನಂತೆ ಶಿಬಿರಕ್ಕೆ ಬಂದಿದ್ದರು.

ಪಾಡಾರ್ ಸಾಹೇಬರ ವಿವರಣೆ ಕೇಳಿದಾಗ ಸರಕಾರದ 'ಖಾದಿಮುಲ್ ಹುಜ್ಜಾಜ್' (ಹಜ್ ಸೇವಕ) ಆಗಿ ತೆರಳಿ ಹಾಜಿಗಳ ಸೇವೆ ಮಾಡಿ ಪುಣ್ಯ ಕಟ್ಟಿಕೊಳ್ಳುವ ಅವಕಾಶಕ್ಕಾಗಿ ಮನಸ್ಸು ಮಿಡಿದರೂ ವಿಚಾರಿಸಿ ನೋಡಿದಾಗ ಅದಕ್ಕೆ ಇರಬೇಕಾದ ಮೂರು ಅರ್ಹತೆಗಳಲ್ಲಿ ಎರಡೂ ನನಗಿರಲಿಲ್ಲ. ಸರಕಾರಿ ಉದ್ಯೋಗದಲ್ಲಿರು ವುದು, ಮೊದಲು ಹಜ್ ಮಾಡಿರುವುದು ಹಾಗೂ ಮೂವತ್ತೈದು ವರ್ಷ ದಾಟದೆ ಇರುವುದು ಎಂಬುದಾಗಿತ್ತು ಅರ್ಹತೆಗಳು. ಇದರಲ್ಲಿ ವಯಸ್ಸಿನ ಅರ್ಹತೆ ಮಾತ್ರ ನನ್ನೊಂದಿಗಿದ್ದು ಹಜ್‌ನ ಅವಕಾಶ ಇರಲಿಲ್ಲ. ಆ ಕನಸು ನನಸಾಗುವ ಸಾಧ್ಯತೆಯಿರಲಿಲ್ಲ.

ಅದಾಗಿ ಎರಡು ತಿಂಗಳ ಬಳಿಕ ಅಕ್ಟೋ ಬರ್ 28 ಗುರುವಾರ ಅಪರಾಹ್ನ 2 ಗಂಟೆಗೆ ಫೋನ್ ಮಾಡಿದ ಹಾಜಿ ಹಮೀದ್ ಕಂದಕ್ ನಾನು ಅರ್ಹತೆಗಳನ್ನು ಮೀರಿ 'ಖಾದಿಮುಲ್ ಹುಜ್ಜಾಜ್' ಆಗಿ ಆಯ್ಕೆಯಾದ ಶುಭ ಸುದ್ದಿ ನೀಡಿದರು. ಅಂದಿನ ಹಜ್ ಸಚಿವ ತನ್ವೀರ್ ಸೇಠ್ ರವರ ಕಾರ್ಯದರ್ಶಿ ನಿಸಾರ್ ಅಹ್ಮದ್ ಎಂಬವರ ಮೇಲೆ ಪ್ರಭಾವ ಬೀರಿ ಕಂದಕ್ ಹಾಜಿಯವರು ನನಗೆ ಈ ಅವಕಾಶ ಮಾಡಿ ಕೊಟ್ಟಿದ್ದರು.

ಅದೇ ಸಂದರ್ಭದಲ್ಲಿ ಕರ್ನಾಟಕ ಹಜ್ ಸಮಿತಿಗೆ ಸದಸ್ಯರ ಆಯ್ಕೆ ಪ್ರಕ್ರಿಯೆ ನಡೆಯು ತ್ತಿದ್ದು ನನಗೆ ಸದಸ್ಯತನ ಕೊಡಿಸುವ ಪ್ರಯತ್ನ ವೊಂದು ನಡೆದಿತ್ತು. ಮಂಗಳೂರಿಗೆ ಹಜ್ ಸಚಿವರು ಬಂದಿದ್ದಾಗ ಅವರನ್ನು ಭೇಟಿ ಯಾಗಿ ನನ್ನ ಅಭ್ಯರ್ಥಿತನವನ್ನು ಪ್ರದರ್ಶಿಸಿದ್ದೆ.

ಶಾಸಕ ಮರ್‌ಹೂಂ ಯು.ಟಿ. ಫರೀದ್, ಉಳ್ಳಾಲ ದರ್ಗಾ ಅಧ್ಯಕ್ಷರಾಗಿದ್ದ ಮರ್‌ಹೂಂ ಯು.ಕೆ. ಇಬ್‌ರಾಹೀಮ್ ಹಾಜಿಯವರು ಅಲ್ಲಿದ್ದು ನನಗಾಗಿ ಶಿಫಾರಸ್ಸು ಮಾಡಿದ್ದರು. ಎ.ಪಿ. ಉಸ್ತಾದ್ ಮತ್ತು ಯೇನೆಪೋಯ ಅಬ್ದುಲ್ಲ ಕುಂಞಿ ಹಾಜಿಯವರೂ ಸಚಿವರಿಗೆ ಶಿಫಾರಸ್ಸು ಪತ್ರ ಕಳಿಸಿದ್ದರು. ಅನಂತರ ಹಜ್ ಸಚಿವರು ಸಿಕ್ಕಿದಾಗ ಈಗ ಮೆಂಬರ್ ಮಾಡುವ ಪ್ರಕ್ರಿಯೆ ಸ್ಥಗಿತವಾಗಿದೆ, ನೀವು ಹಜ್‌ಗೆ ಹೋಗಿ ಬನ್ನಿ, ಮತ್ತೆ ನೋಡುವ ಎಂದು ಆಶ್ವಾ ಸನೆ ಕೊಟ್ಟಿದ್ದರು. ರಾಜ್ಯ ಹಜ್ ಕಮಿಟಿ ಸದಸ್ಯ ನಾಗಲು ಸಾಧ್ಯವಾಗದಿದ್ದರೂ ಸಚಿವರ ಕೃಪೆ ಯಿಂದ 'ಖಾದಿಮುಲ್ ಹುಜ್ಜಾಜ್' ಆಗಿ ಪವಿತ್ರ ಭೂಮಿಗೆ ತೆರಳಲು ಅವಕಾಶ ಒದಗಿ ಬಂತು.

2004 ಡಿಸೆಂಬರ್ 23ರಂದು ಮನೆಯಿಂದ ಹೊರಟು 25 ಶನಿವಾರ ಬೆಳಗ್ಗೆ 5.40ರ ವಿಮಾ ನದಲ್ಲಿ ಜಿದ್ದಾಕ್ಕೆ ತೆರಳಲಾಯಿತು. ಈ ವಿಮಾ ನದಲ್ಲಿ ನಮ್ಮ ಸಹಯಾತ್ರಿಕರಾಗಿ ವಾಲೆ ಮುಂ ಡೋವು ಉಸ್ತಾದ್, ಪಟ್ಟೋರಿ ಉಸ್ಮಾನ್ ಸಅದಿ ಮುಂತಾದವರಿದ್ದರು. ಹಜ್ ಪಾಸ್ ಪೋರ್ಟ್‌ನ ನಂಬ್ರ 71547 ಆಗಿದ್ದರೆ ಕವರ್ ನಂಬ್ರ ಕೆ.ಎಚ್.ಕೆ.ಎ. 62-1 ಎಂದು ಬರೆ ಯಲಾಗಿತ್ತು.

ಬೆಂಗಳೂರು ನಿಲ್ದಾಣದಿಂದ ವಿಮಾನ ಮೇಲೇರುತ್ತಿರುವಂತೆ ನನ್ನ 'ಖಾದಿಮುಲ್ ಹುಜ್ಜಾಜ್' ನ ಜವಾಬ್ದಾರಿಯೂ ಶುರುವಾ ಯಿತು. ಏರ್ ಹೋಸ್ಟೆಸ್‌ಗಳು ನನಗೆ ವಿಮಾನದ ಮೈಕ್ ನೀಡಿ ನಿಮ್ಮ ಯಾತ್ರೆಯ ವಿಧಿ ವಿಧಾನಗಳನ್ನು ನಿರ್ವಹಿಸಿ ಎಂದರು. ಯಾತ್ರೆ ಹೊರಡುವಾಗಿನ ದ್ಸಿಕ್ರ್ ದುಆಗಳು, ಇಹ್‌ರಾಂನ ನಿಯ್ಯತ್, ತಲ್ಬಿಯತ್ ಸೇರಿ ದಂತೆ ವಿಮಾನದಲ್ಲಿದ್ದ 500ರಷ್ಟು ಹಜ್ ಯಾತ್ರಿಕರಿಗೆ ಹಜ್, ಉಮ್ರಾದ ಬಗ್ಗೆಯೂ ನಾನು ಭಾಷಣ ಮಾಡಬೇಕಿತ್ತು. ಹಾಗೆ ನನ್ನ ಬದುಕಿನ ಅವಿಸ್ಮರಣೀಯವಾದ ಆಕಾಶ ಭಾಷಣ 2004 ಡಿಸೆಂಬರ್ 25 ಶನಿವಾರ ದಂದು ಏರ್‌ಇಂಡಿಯಾ ವಿಮಾನದೊಳಗೆ ನಡೆಯಿತು.

ಜಿದ್ದಾದಿಂದ ಬಸ್ ಮೂಲಕ ಹೊರಟು ಆ ದಿನ ಮಗ್‌ರಿಬ್‌ನೊಂದಿಗೆ ನಾವು ಪವಿತ್ರ ಮಕ್ಕಾ ತಲುಪಿದೆವು. ನಮ್ಮ ಬಸ್ ಮಕ್ಕಾ ತಲುಪುತ್ತಿದ್ದಂತೆ ಪವಿತ್ರ ಮಸ್ಜಿದುಲ್ ಹರಾಂ ನಿಂದ ಪ್ರೌಢ ಗಂಭೀರವಾದ ಮಗ್‌ರಿಬ್ ಅದ್ಸಾನ್ ನಮ್ಮನ್ನು ಸ್ವಾಗತಿಸುತ್ತಿತ್ತು. ಸ್ವಯಂ ಮರೆತು ಪುಳಕಗೊಂಡ ದಿನ, ಮಾತು ಗಳಿಂದ ವರ್ಣಿಸಲಾಗದ ರೋಮಾಂಚನ. ಮಕ್ಕಾದ ಅಜ್‌ಯಾದ್ ಎಂಬಲ್ಲಿ 'ಅಜ್ ಯಾದ್ ತಹಾನಿ' ಹೋಟೇಲ್‌ನ ನಾಲ್ಕನೇ ಮಹಡಿಯ 406ನೇ ಕೊಠಡಿಯನ್ನು ನಮಗೆ ಕೊಡಲಾಗಿತ್ತು. ಜತೆಗೆ ತಲಪಾಡಿ ಕೆ.ಸಿ. ರೋಡ್‌ನ, ಆಗ ತಾನೆ ಪರಿಚಯವಾದ ಅಬ್ದುಲ್ ಖಾದರ್ (ಅಡ್ಯಾರ್ ಕಣ್ಣೂರು) ಬಳ್ಳಾರಿಯ ಮಧ್ಯ ವಯಸ್ಕ ಮಹಿಳೆ ಶಂಸುನ್ನಿಸಾ ಮತ್ತು ಆಕೆಯ ಮಗ ಜಾವೇದ್ ಎನ್ನುವವರು ನಮ್ಮ 'ರೂಂ ಮೇಟ್' ಗಳಾದರು. ಕೆಲದಿನಗಳ ಬಳಿಕ ಅಜ್‌ಮೀರ್ ನಿಂದ ಬಂದ ಹಲವರು ಆ ರೂಂನಲ್ಲಿ ಸೇರಿಕೊಂಡರು. ಅಂದು ರಾತ್ರಿ 10.15ಕ್ಕೆ ಜೀವನದ ಮೊಟ್ಟಮೊದಲ ಉಮ್ರಾ

ನಿರ್ವಹಿಸಿದ ಸಾರ್ಥಕತೆ.

ನಾವು ಮಕ್ಕ ತಲುಪಿದ ತಕ್ಷಣ 'ಇಂಡ್ಯನ್ ಹಜ್ ಮಿಷನ್' ಕಚೇರಿಗೆ ತೆರಳಿ ಭಾರತದಿಂದ ಬಂದ 'ಖಾದಿಮುಲ್ ಹುಜ್ಜಾಜ್' ಎಂಬು ದನ್ನು 'ರಿಪೋರ್ಟ್' ಮಾಡಬೇಕಿತ್ತು. ತಡ ರಾತ್ರಿ ಕಚೇರಿ ಹುಡುಕಿ ಅಲ್ಲಿಗೆ ತೆರಳಿದಾಗ ಮುಬೀನ್ ಅಯ್ಯೂಬಿ ಎಂಬವರು ಸ್ವಾಗತಿಸಿ ನಾಳೆಯಿಂದ ಕೆಲಸ ಶುರುಮಾಡಿ ಎಂದು ಆದೇಶ ನೀಡಿದರು. 'INDIA' ಎಂದು ಬರೆದ ಹಸಿರು ಜಾಕೆಟ್ ಧರಿಸಿ ನಾವು ಸದಾ ಸಮಯ ಹಾಜಿಗಳ ಸೇವೆಯಲ್ಲಿ ತೊಡಗಬೇಕಿತ್ತು. ಪ್ರತಿದಿನ ವಿವಿಧ ಕಟ್ಟಡಗಳಲ್ಲಿನ ಸುಮಾರು 600 ಕರ್ನಾಟಕದ ಹಾಜಿಗಳ ಯೋಗಕ್ಷೇಮ ವಿಚಾರಿಸುವುದು, ಅವರ ಸಮಸ್ಯೆ, ಕುಂದು ಕೊರತೆಗಳನ್ನು ದಾಖಲಿಸಿ ಹಜ್ ಮಿಷನ್ ಕಚೇರಿಗೆ ವರದಿ ಮಾಡುವುದು. ಪರಿಹಾರ ಒದಗಿಸುವುದು ನನ್ನ ಹೊಣೆಯಾಗಿತ್ತು. ನಿರ್ದಿಷ್ಟ ಸಮಯಕ್ಕೆ ನಾನು ನಿಗದಿತ ಕಟ್ಟಡದ ಕೊಠಡಿಗಳ ಕರೆಗಂಟೆಯನ್ನು ಒತ್ತುತ್ತಿದ್ದರೆ ಒಳಗಿನಿಂದ ಮಹಿಳೆಯರು, ಮಹನೀಯರು ಜಾಗ್ರತರಾಗಿ 'ಬರೆಯುವವ ಬಂದ' ಎನ್ನುತ್ತಾ ತಮ್ಮ ಅಹವಾಲುಗಳನ್ನು ಮುಂದಿಡುತ್ತಿ ದ್ದರು. ಕೆಲವರು ಅವರ ಸೌಲಭ್ಯತೆಗಳ ಕೊರತೆ, ಅವರು ಖರ್ಚು ಮಾಡಿದ ಹಣ, ಅಧ್ವಾನವನ್ನೆಲ್ಲ ಹೇಳುತ್ತಾ ನನ್ನನ್ನು ಹೀನಾಯವಾಗಿ ಬೈಯ್ಯುತ್ತಿದ್ದರು. ಅಲ್ಲಿದ್ದ ಹೆಚ್ಚಿನವರಿಗೆ ನನ್ನ ಪರಿಚಯವೇ ಇರಲಿಲ್ಲ. ಅವರ ದೂರುಗಳನ್ನು 'ಇಂಡ್ಯನ್ ಹಜ್ ಮಿಷನ್' ಕಚೇರಿಗೆ ತಲುಪಿಸಿದರೆ ಯಾವುದೇ ಪರಿಹಾರ ಸಿಗುತ್ತಿರಲಿಲ್ಲ. ಅಲ್ಲಿ ಉನ್ನತ ಉದ್ಯೋಗದಲ್ಲಿದ್ದ ಕೆಲವು ಉತ್ತರ ಭಾರತದ ಅಧಿಕಾರಿಗಳು ಉಡಾಫೆಯಿಂದ ವರ್ತಿಸುತ್ತಿ ದ್ದರು. ಕಾಶ್ಮೀರ ಕಡೆಗಳಿಂದ ಬಂದಿದ್ದ ಕೆಲವು ಅಧಿಕಾರಿಗಳು ಕೆಕ್ಕರಿಸಿ ನೋಡುತ್ತಿದ್ದರು. ಕೆಲವು ಸುಮನಸ್ಸಿನ ಮಲಯಾಳಿ ಅಧಿಕಾರಿ ಗಳು ಹೀಗೆಲ್ಲ ನೀವು ಕಷ್ಟ ಪಡುವುದೇಕೆ? ದೂರು ಬರೆದಂತೆ ಮಾಡಿ ಮತ್ತೆ ಹರಿದು ಹಾಕಿ ಸುಮ್ಮನೆ ಇರಿ. ಇಲ್ಲಿ ಪರಿಹಾರ ಕಾರ್ಯ ಬಹಳ ನಿಧಾನ ಎನ್ನುತ್ತಿದ್ದರು. ನನ್ನ ಸಹೋ ದ್ಯೋಗಿ, ಕರ್ನಾಟಕದ ಇತರ ಎಂಟು ಜನ ಖಾದಿಮುಲ್ ಹುಜ್ಜಾಜ್‌ಗಳು ಅವರಿಗೆ ನೀಡಲಾಗಿದ್ದ ಜಾಕೆಟ್‌ಗಳನ್ನು ಅದರ ಗುರು ತುಗಳು ಮರೆಯಾಗುವಂತೆ ತಿರುಗಿಸಿ ಧರಿಸಿ ನನ್ನನ್ನು ಹಾಗೆ ಮಾಡಲು ಒತ್ತಾಯಿಸುತ್ತಿ ದ್ದರು. ಒಂದೆಡೆ ಹಜ್ ಮಿಷನ್ ಕಚೇರಿಗಳಲ್ಲಿ ಈ ರೀತಿಯ ಉದಾಸೀನವಿದ್ದರೆ ಇನ್ನೊಂದೆಡೆ ನನ್ನ ಆಗಮನ ಕಾಯುತ್ತಿದ್ದ ನೂರಾರು ಮಂದಿ ಹಾಜಿಗಳು ದೂರದಿಂದಲೇ 'ಬರೆಯು ವವ ಬಂದ' ಎನ್ನುತ್ತಾ ತಮ್ಮ ದೂರುಗಳ ಪಟ್ಟಿಯನ್ನು ಹಿಡಿದು ನನ್ನೊಂದಿಗೆ ಯುದ್ಧಕ್ಕೆ ಅಣಿಯಾಗುತ್ತಿದ್ದರು. ಒಟ್ಟಿನಲ್ಲಿ 'ಖಾದಿ ಮುಲ್ ಹುಜ್ಜಾಜ್'ನ ದಿನಗಳು ಬಹಳ ಕಠಿಣಮಯವಾಗಿದ್ದುವು. ಈ ಪೈಕಿ ಮಕ್ಕಾದ ಪ್ರಧಾನ ಕಚೇರಿಯಲ್ಲಿದ್ದ ಅಸಿಸ್ಟೆಂಟ್ ಹಜ್ ಆಫೀಸರ್, ರಾಜಸ್ಥಾನದ ಶಾಹುದ್ದೀನ್ ಎಂಬವರು ಮಾತ್ರ ನನ್ನನ್ನು ಪ್ರೀತಿಯಿಂದ ಕಾಣುತ್ತಿದ್ದರು. ಬೇಗನೇ ಸ್ಪಂದಿಸುತ್ತಿದ್ದರು. ನನ್ನನ್ನು ಕಂಡಾಗಲೆಲ್ಲ 'ಝ್ಯುನೀ ಆಲಿಂ ಭೀ ಹೇ, ಆಮಿಲ್ ಭೀ ಹೇ' ಎನ್ನುತ್ತಿದ್ದರು. ಇದೊಂದು ಸಮಾಧಾನಕರ ಸಂಗತಿಯಾದರೆ ಆ ವರ್ಷ ಹಜ್‌ನಲ್ಲಿದ್ದ ಅಬೂಸುಫ್ಯಾನ್ ಉಸ್ತಾದ್ ಮತ್ತು ಅವರ ಕುಟುಂಬದ ಸದಸ್ಯರಿಂದಾಗಿ ನನ್ನ ದಿನ ನಿತ್ಯದ ಬದುಕು ಆರಾಮವಾಗಿ ಸಾಗುತ್ತಿ ತ್ತು. ಅವರಿಂದಾಗಿ ಮನೆಯ ಆಹಾರ ಮತ್ತು ಊರಿನ ವಾತಾವರಣದ ಅನುಭವವಾಗು ತ್ತಿತ್ತು. ಮರುಭೂಮಿಯ ಒಯಾಸಿಸ್‌ನಂತೆ.

2001ರಲ್ಲಿ ನನ್ನ ಚೊಚ್ಚಲ ಕೃತಿ 'ನಮಾಝ್ ಗೈಡ್' ಬಿಡುಗಡೆಗೊಂಡ ನಂತರ ಬರಹದ ಮೇಲೆ ಆಸಕ್ತಿ ಬೆಳೆದಿತ್ತು. ಸದಾ ಕಾಲ ಜನರಿಗೆ ಅಗತ್ಯವೆನಿಸುವ ಅಧ್ಯಯನಾ ತ್ಮಕ ಗ್ರಂಥಗಳನ್ನೇ ಬರೆಯಬೇಕೆಂದು ಮನಸ್ಸು ಹೇಳುತ್ತಿತ್ತು. ಪವಿತ್ರ ಖುರ್‌ಆನ್‌ಗೆ ಕನ್ನಡ ದಲ್ಲಿ ವ್ಯಾಖ್ಯಾನವೊಂದು ಬರೆಯಬೇಕೆಂ ಬುದು ಜೀವಮಾನದ ಅಪೇಕ್ಷೆಯಾಗಿತ್ತು. ಎಲ್ಲದಕ್ಕೂ ಸಮಯದ್ದೇ ಸಮಸ್ಯೆ.

2001ರಲ್ಲಿ ದುಬೈಗೆ ಹೋಗಿದ್ದಾಗ ಕನ್ನಡ ಸುನ್ನೀ ಸಾಹಿತ್ಯದ ಕೊರತೆಯ ಬಗ್ಗೆ ಎ.ಪಿ. ಉಸ್ತಾದ್ ಮತ್ತು ಪುತ್ತೂರು ಉಸ್ಮಾನ್ ಹಾಜಿ ಕಾರಿನಲ್ಲಿ ಚರ್ಚಿಸುತ್ತಿದ್ದರು. ಅಗತ್ಯವಾಗಿ ಖುರ್‌ಆನ್ ವ್ಯಾಖ್ಯಾನವೊಂದು ಕನ್ನಡದಲ್ಲಿ ಹೊರಬರಬೇಕೆಂದು ಉಸ್ಮಾನ್ ಹಾಜಿ ಉಸ್ತಾ ದರಲ್ಲಿ ಹೇಳುತ್ತಿದ್ದರು. ತಕ್ಷಣ ಉಸ್ತಾದ್, ಅದು ಬರೆದು ಪ್ರಕಟಿಸುವ ಕೆಲಸವನ್ನು ಮಾಡುವಂತೆ ನನಗೆ ಆದೇಶವಿತ್ತರು. ವ್ಯಾಖ್ಯಾ ನಗಳು ಅಧಿಕೃತ ತಫ್‌ಸೀರ್ ಗ್ರಂಥಗಳನ್ನು ಆಧರಿಸಿ ಆಗ ಬೇಕು ಮತ್ತು ಪ್ರಧಾನ ಭಾಗಗ ಳನ್ನು ತಮ್ಮ ಗಮನಕ್ಕೆ ತಂದು ಸಮ್ಮತಿ ಪಡೆದ ಬಳಿಕವಷ್ಟೇ ಪ್ರಕಟಿಸಬೇಕೆಂಬ ಶರತ್ತಿನೊಂದಿಗೆ ಎ.ಪಿ. ಉಸ್ತಾದ್ ಖುರ್‌ಆನ್ ಕನ್ನಡ ವ್ಯಾಖ್ಯಾನ ಸಿದ್ಧಪಡಿಸುವ 'ಇಜಾಝತ್' (ಆಧ್ಯಾತ್ಮಿಕಾನುಮತಿ) ನೀಡಿ ಪ್ರಾರ್ಥಿಸಿದರು.

ಎಸ್ಸೆಸ್ಸೆಫ್ ಅಧೀನದ ಪ್ರಕಾಶನ ಸಂಸ್ಥೆ ಯಾದ 'ಇಫ್‌ರಾದ್'ಗೆ ಆಗ ನಾನೇ ಕಾರ್ಯ ದರ್ಶಿಯಾಗಿದ್ದರಿಂದ ಬೇರೆ ಪ್ರಕಾಶನ ಸಂಸ್ಥೆ ಯನ್ನು ಹುಡುಕುವ ಅಗತ್ಯವಿರಲಿಲ್ಲ. ಅಲ್ಲದೆ ಇಫ್‌ರಾದ್‌ನ ಮುಖ್ಯ ಪೋಷಕರಾಗಿ ಮರ್ ಹೂಂ ಸಯ್ಯಿದ್ ತ್ವಾಹಿರುಲ್ ಅಹ್‌ದಲ್ ತಂಙಲ್ ಇದ್ದುದರಿಂದ ಸುಲಭದಲ್ಲಿ ಅವರ ಮಾರ್ಗದರ್ಶನವೂ ಸಿಗುವುದರಿಂದ ಪವಿತ್ರ ಖುರ್‌ಆನಿನ ಕೊನೆಯ ಕಾಂಡ 'ಅಮ್ಮ ಜು ಝ್‌ಉ್'ನ್ನು ಮೊದಲ ಹಂತದಲ್ಲಿ ಹೊರತ ರುವ ನಿರ್ಧಾರವಾಯಿತು.

ಪ್ರತಿ ಹಂತಗಳಲ್ಲೂ ತ್ವಾಹಿರ್ ತಂಙಳ್ ಉಸ್ತಾದರ ಸಲಹೆ ಪಡೆಯಲಾಗುತ್ತಿತ್ತು. ಅಂತಿಮ ಮೊಹರಿಗಾಗಿ ಎ.ಪಿ. ಉಸ್ತಾದರನ್ನು ಸಂಪರ್ಕಿಸಿ ಅವರ ಒಪ್ಪಿಗೆಯೂ, ಅಂಗೀಕಾರವೂ ದೊರೆತ ಬಳಿಕ ಪುಸ್ತಕ ಪ್ರಕಟಣೆಗೆ ಸಿದ್ಧ ವಾಯಿತು. ಅದಕ್ಕೆ 'ಅಲ್ ಫುರ್‌ಖಾನ್ ಬೈನಲ್ ಹಿದಾಯತಿ ವಳ್ಳಲಾಲಃ' ಎಂದು ಎ.ಪಿ. ಉಸ್ತಾದ್ ಹೆಸರಿಟ್ಟರು. 'ಅಮ್ಮ' ಬರೆದಂತೆ ಖುರ್‌ಆನ್ ಪೂರ್ಣವಾಗಿ ವ್ಯಾಖ್ಯಾನಿಸಿ ಹೊರ ತರುವಂತೆ ತ್ವಾಹಿರುಲ್ ಅಹ್ದಲ್ ತಂಙಳ್ ಮತ್ತು ಎ.ಪಿ. ಉಸ್ತಾದ್ ಸಲಹೆ ನೀಡಿ ದ್ದರು. ಬಹು ನಿರೀಕ್ಷೆಯ 'ಅಮ್ಮ ಜುಝ್‌ಉ್' ಬಿಡುಗಡೆ ಕಾರ್ಯಕ್ರಮವು 2004 ನವೆಂಬರ್ ಬುಧವಾರ, ರಮಳಾನ್ 27ರಂದು ಸಂಜೆ ಬಜಪೆ ಜುಮಾ ಮಸೀದಿಯ ಸಭಾಂಗಣದಲ್ಲಿ ನಡೆಯಿತು. ಹಿರಿಯ ಶಿಕ್ಷಣ ತಜ್ಞ, ಕಲ್ಲಿಕೋಟೆ ಮತ್ತು ಕಣ್ಣೂರು ವಿಶ್ವವಿದ್ಯಾನಿಲಯಗಳ ವಿಶ್ರಾಂತ ಕುಲಪತಿ ಮಂಗಳೂರಿನ ಪ್ರೊ. ಡಾ. ಎಂ. ಅಬ್ದುರ್ರಹ್ಮಾನ್ ಅವರಿಗೆ ಮೊದಲ ಪ್ರತಿ ನೀಡುತ್ತಾ ಶೈಖುನಾ ಬೇಕಲ್ ಉಸ್ತಾದ್ ಗ್ರಂಥದ ಬಿಡುಗಡೆ ನೆರವೇರಿಸಿದರು. ಇದೇ ಪುಸ್ತಕದ ಎರಡನೇ ಆವೃತ್ತಿ ಅನಂತರ ಹೊರಬಂದರೂ, ಖುರ್‌ಆನಿನ ಮುಂದಿನ ಭಾಗದ ವ್ಯಾಖ್ಯಾನ ಬರೆದು ಮುಗಿಸಲು ಸಾಧ್ಯವಾಗಿಲ್ಲ. ಸೂರಃ ಅಲ್ ಬಖರ ಮುಂದಿನ ಗುರಿಯಾಗಿದ್ದು ಅರ್ಧದಷ್ಟು ಬರೆದು ಮುಗಿ ದಿದೆ. ಮತ್ತೆ ಪೆನ್ನೆತ್ತಲು ಸಮಯ ಸಮ್ಮತಿ ಸುವುದಿಲ್ಲ.

ನನ್ನ ಸಂಗ್ರಹದಿಂದ 2005ರ ಡೈರಿ ನಾಪತ್ತೆ ಯಾಗಿರುವುದು ನನ್ನ ಸದ್ಯದ ಸಂಕಷ್ಟ. ಮುಂದಿನ ಸಂಚಿಕೆಗೆ ಬರೆಯುವುದರೊಳಗೆ ಅದು ಪತ್ತೆ ಯಾಗಬಹುದೇನೋ ಇಲ್ಲದಿದ್ದರೆ ಒಂದು ವರ್ಷದ 'ಬದುಕು' ನಷ್ಟವಾದಂತೆ...

# 26

## ಮರೆಯಲಾಗದ ಒಂದು ತಣ್ಣನೆಯ ದಿನ...

ಖಾದಿಮುಲ್ ಹುಜ್ಜಾಜ್‌ನ ಕರ್ತವ್ಯ ನಿರ್ವಹಣೆಯ ಅಂಗವಾಗಿ 2004 ಡಿಸೆಂಬರ್ 28ರಿಂದ 2005 ಜನವರಿ 4ರವರೆಗೆ ನಮ್ಮ ನಿಯೋ ಗವು ಮದೀನಾದಲ್ಲಿ ಇದ್ದುದರಿಂದ ಹೊಸ ವರ್ಷವನ್ನು ಪುಣ್ಯ ನಗರದಲ್ಲಿ ಬರಮಾಡಿ ಕೊಳ್ಳಲು ಸಾಧ್ಯವಾಯಿತು. ಮಕ್ಕಾಗಿಂತ ಭಿನ್ನ ವಾಗಿತ್ತು ಮದೀನಾದ ಕೆಲಸ ಕಾರ್ಯಗಳು, ಅಲ್ಲಿನ ಹಜ್ ಅಧಿಕಾರಿ ಕೇರಳದ ಶಾಜಹಾನ್ ಎಂಬ ಸಹೃದಯಿ ವ್ಯಕ್ತಿಯೊಬ್ಬರಾಗಿದ್ದು ಉತ್ತ ಮವಾಗಿ ಸ್ಪಂದಿಸುತ್ತಿದ್ದರು. ಮಲಯಾಳಂ ನಲ್ಲಿ ಮುಕ್ತ ಸಂವಹನ ಸಾಧ್ಯವಿರುವುದರಿಂದ ಮಕ್ಕಾದ, ಉತ್ತರ ಭಾರತದ ಒರಟು, ಮತ್ತು ಪಕ್ಷ ಪಾತಿ ಅಧಿಕಾರಿಗಳೊಂದಿಗೆ ಉಸಿರು ಬಿಗಿ ಹಿಡಿದು ಅರ್ಧಂಬರ್ಧ ಇಂಗ್ಲೀಷ್, ಉರ್ದು ಗಳಲ್ಲಿ ಮಾತನಾಡಬೇಕಾದ 'ರಿಸ್ಕ್' ಇಲ್ಲಿ ರಲಿಲ್ಲ. ಅಲ್ಲದೆ ಮದೀನಾದಲ್ಲಿ ನನಗೆ ವಹಿಸ ಲಾಗಿದ್ದ ಕಟ್ಟಡಗಳಲ್ಲಿದ್ದದ್ದು ಕಾಶ್ಮೀರದ ಹಾಜಿಗಳಾದ್ದುದರಿಂದ ಅವರ ಭಾಷೆ ನನಗೂ ನನ್ನ ಭಾಷೆ ಅವರಿಗೂ ತೀರಾ ಅರ್ಥವಾಗದ ಕಾರಣ ಯಾವುದೇ ಸಮಸ್ಯೆಯಿರಲಿಲ್ಲ. ಅವರು ದೂರುಗಳನ್ನು ಹೇಳುತ್ತಲೂ ಇರಲಿಲ್ಲ. ಒಂದು ವಾರಗಳ ಕಾಲ ಸುಮಾರು ನಾಲ್ಕು ನೂರರಷ್ಟು ಜನ ಕಾಶ್ಮೀರಿಗಳ ಜತೆಗಿದ್ದರೂ ಅವರಲ್ಲೊಬ್ಬ ರೂಪಾಯಿಯನ್ನು ರಿಯಾಲ್‌ಗೆ ಬದಲಾಯಿಸಲು ಎಕ್ಸ್‌ಚೇಂಜ್ ಹುಡುಕುತ್ತಾ 'ಅಲ್ ರಾಜೀ ಬ್ಯಾಂಕ್' ಎಲ್ಲಿ ಎಂಬುದನ್ನು ಕೇಳಿದ್ದು ಬಿಟ್ಟರೆ ಉಳಿದ ಯಾವುದೇ ಪ್ರಶ್ನೆ, ತಕರಾರುಗಳು ಅವರಿಂದ ಎದುರಾಗಲಿಲ್ಲ. ಅದರಿಂದಾಗಿ ಹೆಚ್ಚಿನ ಸಮಯ ಪವಿತ್ರ ರೌಳಾ ಶರೀಫ್‌ಲ್ಲಿ ಕಳೆಯಲು ಸಾಧ್ಯವಾಯಿತು.

ಮದೀನಾದಿಂದ ಹಿಂದುರುಗಿದ ಮೇಲೆ ಮಕ್ಕಾದಲ್ಲಿ ಜವಾಬ್ದಾರಿಗಳು ಹೆಚ್ಚಾಗುತ್ತಾ ಹೋಯಿತು. ದುಲ್‌ಹಜ್ಜ್ 7ರಂದು ಹಜ್‌ನ ಕರ್ಮಗಳು ಪ್ರಾರಂಭಗೊಂಡವು. ಮಿನಾದಲ್ಲಿ ಟೆಂಟ್ ಸಂಖ್ಯೆ 25ರ ಜವಾಬ್ದಾರಿ ನನ್ನ ಪಾಲಾ ಯಿತು. ಮರುದಿನ 'ಅರಫಾ'ಕ್ಕೆ ಕಾಲ್ನಡಿಗೆ ಯಲ್ಲೇ ಸಾಗಿದ್ದು ಅಲ್ಲಿಂದ ನಡೆದುಕೊಂಡೇ ಮರಳಿದ್ದು ಮರೆಯಲಾಗದ ಅನುಭವ. ಈ ವೇಳೆ ನನಗೆ ನೆರವಾಗಿದ್ದ ಕೆ.ಸಿ.ರೋಡ್ ಅಬ್ದುಲ್ ಖಾದರ್ ಹಾಜಿ ಇತ್ತೀಚೆಗೆ ನಿಧನರಾದರು. ಮಿನಾದ ಟೆಂಟ್‌ನಲ್ಲಿ ಕರ್ನಾಟಕದ ವ್ಯಕ್ತಿಯೊ ಬ್ಬರು ಮರಣಹೊಂದಿದ್ದು ಮತ್ತು ಅನಾರೋ ಗ್ಯದ ಕಾರಣ ಹೇಳಿ ಹಿರಿಯ ವ್ಯಕ್ತಿಯೊಬ್ಬರು ಅರಫಾಗೆ ಹೋಗದೆ ಮೀನಾದ ಡೇರೆಯಲ್ಲೇ ಉಳಿದುಕೊಂಡದ್ದು 'ಹಜ್ ಸೇವಕ' ನೆಂಬ ನೆಲೆ ಯಲ್ಲಿ ತುಂಬ ತಲೆನೋವು ತಂದಿತ್ತು. ಮಕ್ಕಾದ ಈ ರೀತಿಯ ಒತ್ತಡಗಳ ಮಧ್ಯೆ ಸದಾ ಸಮ ಯ ನೆರವಿಗೆ ಬರುತ್ತಿದ್ದ ಮಕ್ಕಾದಲ್ಲಿ ಪುಟ್ಟ ಮಟ್ಟದ ಕೆಲಸದಲ್ಲಿದ್ದ, ಕಲ್ಲಡ್ಕದ ಝಕರಿ ಯ್ಯಾನ ಸಹಾಯ ಮತ್ತು ಬೆಂಬಲ ಸದಾ ಸ್ಮರ ಣೀಯ. ಆ ವರ್ಷ ಮಿನಾದಲ್ಲಿ ಸುರಿದ ಭಾರೀ ಮಳೆಯಿಂದಾಗಿ ಜನರೆಲ್ಲ ಅಸ್ತವ್ಯಸ್ಥಗೊಂಡಿ ದ್ದರು. ಮನುಷ್ಯರೂ, ವಾಹನಗಳೂ ಕೆಲವೆಡೆ ನೆರೆಯಲ್ಲಿ ತೇಲಾಡುತ್ತಿದ್ದುದು ಕಂಡು ಬರು ತ್ತಿತ್ತು. ಆ ದಿನ ಜಿದ್ದಾದ ಮಲಯಾಳಿ ಕುಟುಂ ಬವೊಂದರ ಪುಟ್ಟ ಮಗುವಿನ ಕೈ ಹಿಡಿದು ನೀರು ದಾಟಿಸುತ್ತಾ ನನ್ನೊಂದಿಗೆ ನಡೆಯು ತ್ತಿದ್ದ ಕಾಂಞಂಗಾಡ್ ಬಲ್ಲಾ ಕಡಪ್ಪುರಂ ದರ್ಸ್‌ನಲ್ಲಿ ನನ್ನ ಸಹಪಾಠಿಯಾಗಿದ್ದ ಬಾಯಾರ್ ಅಬ್ದುಲ್ ಹಮೀದ್ ಕಳೆದ ಶುಕ್ರವಾರ ಕಿಡ್ನಿ ವೈಫಲ್ಯದಿಂದ ನಿಧನರಾದರು.

2003ರಲ್ಲಿ ಮೈಸೂರಿನಿಂದ ರಾಜ್ಯ ಶಾಸ್ತ್ರದಲ್ಲಿ ಎಂ.ಎ. ಮುಗಿಸಿದ ನಂತರ ಪಿ.ಎಚ್.ಡಿ ಕನಸು ಮನಸ್ಸನ್ನು ಸದಾ ಸಮಯ ಕೊರೆಯುತ್ತಿತ್ತು. ಆಗ ಮಂಗ ಳೂರು ಯುನಿವರ್ಸಿಟಿಯಲ್ಲಿ ಪ್ರಾಧ್ಯಾಪಕರಾ ಗಿದ್ದ ಡಾ. ಮುಹಮ್ಮದ್ ಗೌಸ್ ಎಂಬವರು ನನಗೆ ಪಿ.ಎಚ್.ಡಿ. ಮಾರ್ಗದರ್ಶನ ನೀಡಲು ಮುಂದೆ ಬಂದಿದ್ದರು. ಹಜ್ ಮುಗಿಸಿ ಪ್ರಾರ್ಥಿ ಸಿ ಬನ್ನಿರಿ ಅನಂತರ ಕೆಲಸ ಶುರುಮಾಡೋಣ ಎಂದು ಒಪ್ಪಂದವಾಗಿತ್ತು. ಅಲ್ಲಾಹನ ವಿಧಿ ಯನ್ನು ತಡೆದು ನಿಲ್ಲಿಸುವವರಾರು? ನಾನು 2005 ಫೆಬ್ರವರಿ 5ರಂದು ಮಕ್ಕಾದಿಂದ ಮ ನೆಗೆ ಮರಳುವುದರೊಳಗೆ ಡಾ. ಗೌಸ್ ಸಾಹೇ ಬರು ಅಕಾಲಿಕವಾಗಿ ನಿಧನರಾಗಿದ್ದರು.

ಮನಶಾಸ್ತ್ರ ಮತ್ತು ಆಧ್ಯಾತ್ಮಿಕತೆ (ತಸ ವ್ವುಫ್)ಯ ಗ್ರಂಥಗಳನ್ನು ಓದುವುದರಲ್ಲಿ ಚಿಕ್ಕಂದಿನಲ್ಲೇ ಬಹಳ ಆಸಕ್ತಿಯಿತ್ತು. ತಂದೆ ಯ ಸಂಗ್ರಹದಲ್ಲಿದ್ದ ಎಲ್ಲ ಮಲಯಾಳಂ ಆಧ್ಯಾತ್ಮ ಪುಸ್ತಕಗಳನ್ನು ಅದಾಗಲೇ ಓದಿ ಮುಗಿಸಿಯಾಗಿತ್ತು. ಮನಶಾಸ್ತ್ರಕ್ಕೆ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಸಂಬಂಧಪಟ್ಟ ಪುಸ್ತಕಗಳ ಗೀಳು ಅತಿಯಾಗಿ ಅಂಟಿಕೊಂಡದ್ದು ಮರ್ಕಝ್ ನಲ್ಲಿ ಕಲಿಯುವ ವೇಳೆ. ಆಗ ವಿದ್ಯಾರ್ಥಿ ಸಂಘದ ಸಭೆಯೊಂದರಲ್ಲಿ ಮಾತನಾಡುತ್ತಿದ್ದ ಮರ್ಕ ಝ್ ಮ್ಯಾನೇಜರ್ ಸಿ. ಮುಹಮ್ಮದ್ ಫೈಝಿ ಮಲಯಾಳಂನ ಆಧ್ಯಾತ್ಮಿಕ ಬರಹಗಾರ ಕೆ.ಪಿ. ಕೇಶವ ಮೆನೋನ್ ಅವರ 'ನಾಂ ಮುನ್ನೋಟ್ಟ್' ಎನ್ನುವ ಪುಸ್ತಕ ಓದುವಂತೆ ತಿಳಿಸಿದ್ದರು. ಮೆನೋನ್ ಕುರಿತಾಗಿ ಆಗ ಅವರು ಬಳಸಿದ್ದ 'ಹಿಂದೂ ಮದತ್ತಿಲೆ ಗಝ್ಝಾಲಿ' ಎಂಬ ಪ್ರಯೋಗವು ಕೆಲವರಿಗೆ ಹಿತವೂ ಹಲವರಿಗೆ ಅಹಿತವೂ ಆಗಿ ಅನಂತರ ಕೆಲ ಹೊತ್ತು ಚರ್ಚೆಯ ಲ್ಲಿತ್ತು. ಒಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಈ ರೀತಿಯ ಪುಸ್ತಕಗಳನ್ನು ಹೆಕ್ಕಿ ತೆಗೆದು ಓದಲು ಸಿ. ಉಸ್ತಾದರ ಭಾಷಣ ತೀವ್ರ ಪ್ರೇರಣೆ ಕೊಟ್ಟಿ ತ್ತು. ಅಲ್ಲಿಂದ ಪಡೆದ ಪ್ರೇರಣೆಯಿಂದಾಗಿ ಮುಂದೆ ಮನಶಾಸ್ತ್ರದಲ್ಲಿ ಹೆಚ್ಚಿನ ಅಧ್ಯಯನ ನಡೆಸಿ ಪದವಿ ಪಡೆಯಬೇಕೆಂದು ಮನಸ್ಸಿನ ಒಳಾಂಗಣದಲ್ಲೊಂದು ಪುಟ್ಟ ಆಸೆಯಿತ್ತು. ಡಾ. ಗೌಸ್ ಮರಣದಿಂದ ಭಗ್ನಗೊಂಡ ಡಾಕ್ಟ ರೇಟ್ ಕನಸಿನ ದುಃಖ ಮರೆಮಾಚಲು ತಕ್ಕ 'ಸೈಕಾಲಜಿ' ಯಲ್ಲೊಂದು ಪ್ರಯತ್ನ ಮಾಡುವ ಎಂದೆನಿಸುತ್ತಿದ್ದಾಗ ಕಣ್ಣಿಗೆ ಬಿದ್ದದ್ದು ಶಿವ ಮೊಗ್ಗದ ಕುವೆಂಪು ಯುನಿವರ್ಸಿಟಿಯ ಸಹಯೋಗದಲ್ಲಿ

ಶಿವಮೊಗ್ಗದ ನರ್ಸಿಂಗ್ ಹೋಂ ನಡೆಸುತ್ತಿದ್ದ ಹಲವು ಬಗೆಯ 'ಮಾನ ಸಿಕ' ಕೋರ್ಸ್‌ಗಳು.

ಈ ಬಗ್ಗೆ 'ಮಾನಸ'ದ ಮುಖ್ಯಸ್ಥ, ಪ್ರಖ್ಯಾತ ಮನೋರೋಗ ತಜ್ಞ ಡಾ. ಕೆ.ಎಂ. ಅಶೋಕ್ ಪೈ ಹಾಗೂ ಅವರ ಪತ್ನಿ ಡಾ. ರಜನಿ ಪೈ ಅವರನ್ನು ಸಂಪರ್ಕಿಸಿದಾಗ ಉತ್ತಮ ಪ್ರತಿಕ್ರಿಯೆ ಸಿಕ್ಕಿತ್ತು. ಧರ್ಮ ಗುರುವಾಗಿ ತಾವು ಈ ಕೋರ್ಸ್ ಮಾಡಲೇಬೇಕು. ಅಪಾರ ಜನ ರಿಗೆ ಆಪ್ತ ಸಲಹೆ ಕೊಟ್ಟು ಬದುಕಿನ ಹಳಿಗೆ ಅವ ರನ್ನು ಕರೆ ತರಲು ಸಾಧ್ಯವಿದೆ ಎನ್ನುತ್ತಾ ರಜನಿ ಪೈ ಅವರು 'ಸೈಕೋತೆರಪಿ ಮತ್ತು ಕೌನ್ಸಿಲಿಂಗ್' ನಲ್ಲಿ ಎಂ.ಎಸ್. (ಮಾಸ್ಟರ್ ಆಫ್ ಸೈನ್ಸ್) ಪದವಿ ಯನ್ನು ಆರಿಸಿ ಕೊಳ್ಳುವಂತೆ ನನಗೆ ಆಪ್ತ ಸಲಹೆ ಕೊಟ್ಟರು. ಪಾಠ ಪುಸ್ತಕಗಳ ಓದು ಮಾತ್ರವಲ್ಲದೆ ನಿಗದಿತ ಸಮಯಗಳಲ್ಲಿ ಶಿವಮೊಗ್ಗ ಮಾನಸ ಆಸ್ಪತ್ರೆಯ ರೋಗಿಗಳ ಜತೆ ಬೆರೆಯುವುದು. ಅವರಿಗೆ ಆಪ್ತ ಸಲಹೆ ಕೊಡುವುದು ಮುಂತಾದ 'ಪ್ರಾಯೋಗಿಕ' ಅಂಶಗಳೂ ಪಠ್ಯಕ್ರಮದಲ್ಲಿ ಇದ್ದ ಕಾರಣ ಸಮಯದ ಅಸಮ್ಮತಿಯಿಂದಾಗಿ ಅದನ್ನು ಮುಂದುವರಿಸಲು ಆಗಲೇ ಇಲ್ಲ. ಆಗ ಪ್ರಾ ರಂಭ ಹಂತವೆಂಬ ನೆಲೆಯಲ್ಲಿ ಮುಕ್ತವಾಗಿದ್ದ ಕೋರ್ಸ್‌ಗಳ ಪ್ರತಿಗಾತಿ ನಿಯಮ ನಿಬಂಧನೆ ಗಳ ಹಿಡಿತದಲ್ಲಿ ಈಗ ಜಟಿಲವಾಗಿ ಬಿಟ್ಟಿದೆ.

2006 ಫೆಬ್ರವರಿ 26ನೇ ದಿನಾಂಕ ಭಾನು ವಾರ ಶಿವಮೊಗ್ಗ ಜಿಲ್ಲೆಯ ಸಾಗರ ಮರ್ಕಝುಲ್ ಉಲೂಂ ವಿದ್ಯಾ ಕೇಂದ್ರದಲ್ಲಿ ನಡೆದ ರಾಜ್ಯ ಎಸ್ಸೆಸ್ಸೆಫ್‌ನ ಮಹಾ ಸಭೆಯಲ್ಲಿ ಸಂಘಟನೆಯ ಆರನೇ ರಾಜ್ಯಾಧ್ಯಕ್ಷನಾಗಿ ನನ್ನ ಆಯ್ಕೆ ನಡೆ ಯಿತು. ಈ ಹಿಂದೆ ಎ.ಬಿ. ಹಸನುಲ್ ಫೈಝಿ ಸುಳ್ಯ, ಯೂಸುಫ್ ಸಅದಿ ಅಯ್ಯಂಗೇರಿ, ಎಸ್. ಪಿ. ಹಂಝ ಸಖಾಫಿ ಬಂಟ್ವಾಳ, ಪಿ.ಪಿ. ಅಹ್ಮದ್ ಸಖಾಫಿ, ಜಿ.ಎಂ. ಕಾಮಿಲ್ ಸಖಾಫಿ ಅಧ್ಯಕ್ಷರಾಗಿದ್ದರು. 1994ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಯಾಗಿ ಎಸ್ಸೆಸ್ಸೆಫ್‌ನ ಕಾರ್ಯಕ್ಷೇತ್ರಕ್ಕೆ ಪ್ರವೇ ಶಿಸಿದ್ದೆ. ಸಂಘಟನೆ ಬೆಳ್ಳಿ ಹಬ್ಬ ಆಚರಿಸುವ ಈ ವೇಳೆ ವೈಯಕ್ತಿಕವಾಗಿ ಸಂಘ ಬದುಕಿನ ಇಪ್ಪತ್ತನೇ ವರ್ಷಾಚರಣೆ ಸಂಭ್ರಮ ನನ್ನ ಪಾಲಿಗೆ.

2003ರಲ್ಲಿಕುಂಬ್ರದಲ್ಲಿ ಮರ್ಕಝುಲ್ ಹುದಾ ಮಹಿಳಾ ಕಾಲೇಜು ಪ್ರಾರಂಭಿಸಿದ ನಂತರ ಜಿಲ್ಲೆಯ ಪ್ರಮುಖ ಮುಸ್ಲಿಂ ಬಾಹುಳ್ಯ ಪ್ರದೇಶವಾದ ಸುರತ್ಕಲ್ - ಕೃಷ್ಣಾಪುರದಲ್ಲಿ ಅದರ ಶಾಖೆಯೊಂದನ್ನು ಪ್ರಾರಂಭಿಸುವ ಬಗ್ಗೆ ಗಂಭೀರ ಚರ್ಚೆ ನಡೆದಿತ್ತು. 2006 ನವೆಂಬರ್ 20 ಸೋಮವಾರ ಈ ಯೋಜನೆಯು ಸಾಕಾರ ಗೊಂಡ ದಿನ. ಕೃಷ್ಣಾಪುರ ನೈತಂಗಡಿ ಬಳಿ, ಅಂಗಡಿ ಹಸನಬ್ಬ ಎಂಬವರ ಬಾಡಿಗೆ ಕಟ್ಟಡ ದಲ್ಲಿ 'ಮಿಸ್‌ಬಾಹುಲ್ ಹುದಾ' ಮಹಿಳಾ ಕಾಲೇಜನ್ನು ಉದ್ಘಾಟಿಸಲಾಗಿತ್ತು. ನವೆಂಬರ್ 29 ಬುಧವಾರ ಕಾಲೇಜಿನಲ್ಲಿ ಕ್ಲಾಸ್‌ಗಳು ಪ್ರಾರಂಭಗೊಂಡ ದಿನ ಅಕಸ್ಮಾತ್ ಅಲ್ಲಿಗೆ ಭೇಟಿ ನೀಡಿದ ಉದ್ಯಮಿಯೂ ಸುನ್ನೀ ಮುಖಂಡರೂ ಆದ ಖತರ್ ನಝೀರ್ ಹಾಜಿ ಯವರು ಬಾಡಿಗೆ ಕಟ್ಟಡದಲ್ಲಿ ಸಂಸ್ಥೆ ನಡೆಸು ವುದರ ಅಪರ್ಯಾಪ್ತತೆಯ ಬಗ್ಗೆ ಮರುಗಿ ತನ್ನ ಅತ್ಯಂತ ಬೆಲೆ ಬಾಳುವ ಅರ್ಧ ಎಕ್ರೆ ಜಾಗ ವನ್ನು ಕಾಲೇಜು ನಡೆಸಲು ಉಚಿತವಾಗಿ ಬಿಟ್ಟು ಕೊಡುವುದಾಗಿ ಪ್ರಕಟಿಸಿದರು. ಇಂದು ನಿರ್ಮಾಣದ ಅಂತಿಮ ಹಂತದಲ್ಲಿರುವ 'ಮಿಸ್‌ಬಾಹ್', ಮಹಿಳಾ ಪದವಿ ಕಾಲೇಜು ಸಮುದಾಯದಲ್ಲಿ ಹೊಸ ಹೊಸ ಭರವಸೆ ಯನ್ನು ಮೂಡಿಸಿರುವುದು ನಿಜ.

2007 ಮಾರ್ಚ್ 3 ಶನಿವಾರ ಕಾಸರ ಗೋಡ್ ಜಿಲ್ಲೆಯ ಪ್ರಸಿದ್ಧ 'ಪುದಿಯವ ಳಪ್ಪ್' ದರ್ಗಾದ ಉರೂಸ್‌ನ ಕಾರ್ಯಕ್ರಮ ದಲ್ಲಿ ಭಾಷಣ ಮುಗಿಸಿ, ವಠಾರದಲ್ಲಿದ್ದ ಹಳೆಯ ಸಣ್ಣ ಮಸೀದಿಯೊಂದರಲ್ಲಿ ಊಟಕ್ಕೆ ಕರೆದೊಯ್ದಿದ್ದರು. ಊಟ ಮುಗಿಸಿ ಅಲ್ಲಿನ ಚಿರ ಪುರಾತನ 'ಹೌಳ್'ನಲ್ಲಿ ಕೈ ತೊಳೆಯಲು ಹೋದಾಗ ಕಿಸೆಯಲ್ಲಿದ್ದ ಮೊಬೈಲ್ ನೀರಿಗೆ ಬಿದ್ದಿತ್ತು. ಇದನ್ನು ತೆಗೆಯಲು ತರಾತುರಿ ಯಿಂದ ಬಾಗಿದಾಗ ಕಾಲು ಜಾರಿ ಹೌಳ್‌ಗೆ ಬಿದ್ದು ಬಿಟ್ಟದ್ದು ಭಾಷಣ ಬದುಕಿನಲ್ಲಿ ಎಂದೂ ಒಣಗದ ಒಂದು ತಣ್ಣನೆಯ ಅನುಭವ. ಅಲ್ಲಿನ ಉಸ್ತಾದರುಗಳ ಸಾಂದರ್ಭಿಕ ಸಹಾ ಯದಿಂದಾಗಿ ಹೊರಗಿನವರಿಗೆ ಸುದ್ದಿ ತಲುಪ ಲಿಲ್ಲ. ಹೊರ ಜಗತ್ತಿಗೆ ಈ ಸುದ್ದಿ ಮು ಟ್ಟಲು ಬರೊ ಬ್ಬರಿ ಏಳು ವರ್ಷ ಬೇಕಾಯಿತು ಎನ್ನುವುದು ಸುದ್ದಿ ಪ್ರಪಂಚದಲ್ಲಿ ಅಳಿ ದುಳಿದ ನಂಬಿಕೆಯ ಸಾಕ್ಷ್ಯವೆನ್ನ ಬಹುದೇನೋ...

## 27

### ಸೌಹಾರ್ದ ಸಭೆಗಳೆಂಬ ವಿಐಪಿ ದಅ್‌ವಾ ಮೀಟ್‌ಗಳು

2008ನೇ ವರ್ಷದ ಪ್ರಾರಂಭದಲ್ಲಿ ಮಂಗಳೂರು ಪಂಪ್‌ವೆಲ್‌ನಲ್ಲಿ ಭವ್ಯ ಮಸೀದಿಯೊಂದು ಉದ್ಘಾಟನೆಗೆ ಸಜ್ಜಾಗಿ ನಿಂತು ವಿಶ್ವಾಸಿಗಳ ಮನಗಳನ್ನು ಪುಳಕಗೊಳಿ ಸಿತ್ತು. ಪಂಪ್‌ವೆಲ್‌ನಲ್ಲೊಂದು ಮಸೀದಿ ಎನ್ನುವುದು ಮಂಗಳೂರು ಮೂಲಕ ಹಾದು ಹೋಗುವ ಮಂಗಳೂರಿನೊಂದಿಗೆ ನಿಕಟ ಸಂಪರ್ಕವಿರುವ ಎಲ್ಲರ ಚಿರಕಾಲದ ಕನಸಾ ಗಿತ್ತು. ಈ ಕನಸಿಗೆ ರೆಕ್ಕೆ ಮೊಳೆತದ್ದು ಮರ್ಕ ಝುಸ್ಸಖಾಫತಿಸ್ಸುನ್ನಿಯ್ಯಃದ ಬೆಳ್ಳಿ ಹಬ್ಬದ ಪ್ರಯುಕ್ತ ಮಂಗಳೂರು-ಕಂಕನಾಡಿ 'ವೆಸ್ಟ್ ಸೈಡ್ ಇನ್' ಹೋಟೆಲ್‌ನಲ್ಲಿ ಜರಗಿದ ಉಮರಾ ಸಮಾವೇಶದಲ್ಲಾಗಿತ್ತು. ಅಲ್ಲಿ 'ನೀವು ಜಾಗ ಕೊಡಿ ನಾನು ಮಸೀದಿ ಕೊಡುತ್ತೇನೆ' ಎಂದಿದ್ದರು ಎ.ಪಿ. ಉಸ್ತಾದ್.

ನಂತರ ಚರ್ಚೆಯಲ್ಲಿ ಪ್ರಗತಿ ಸಾಧಿಸಿ ಪಂಪ್‌ವೆಲ್ ಮಸೀದಿ ನಿರ್ಮಾಣಕ್ಕೆ ಸಮಿತಿ ಮತ್ತು ಯೋಜನೆ ಸಿದ್ಧಪಡಿಸಲಾಯಿತು. ಇಸ್ಲಾಮಿಕ್ ಕಲ್ಚರಲ್ ಸೆಂಟರ್ (ಮರ್ಕ ಝುಸ್ಸಖಾಫತಿಲ್ ಇಸ್ಲಾಮಿಯ್ಯಃ) ಎಂದು ಸಮಿತಿಗೆ ಹೆಸರಿಸಿ, ಯೇನಪೋಯ ಅಬ್ದುಲ್ಲ ಕುಂಞಿ ಹಾಜಿ ಅಧ್ಯಕ್ಷರಾಗಿಯೂ ಹಾಜಿ ಬಿ.ಎಂ. ಮುಮ್ತಾಝ್ ಅಲೀ ಕೃಷ್ಣಾಪುರ ಪ್ರಧಾನ ಕಾರ್ಯದರ್ಶಿಯಾಗಿಯೂ, ಪುತ್ತೂರು ಉಸ್ಮಾನ್ ಹಾಜಿ ಕೋಶಾಧಿಕಾರಿ ಯಾಗಿಯೂ ನೇಮಕಗೊಂಡರು. ನನಗೆ ಜತೆ ಕಾರ್ಯದರ್ಶಿಯ ಹುದ್ದೆ ಸಿಕ್ಕಿತು. ಮಸೀದಿ ನಿರ್ಮಾಣ ಪ್ರೇರಕ ಶಕ್ತಿ ಶೈಖುನಾ ಕಾಂತಪುರಂ ಉಸ್ತಾದ್ ಆಜೀವ ಪೋಷಕರಾದರು. ಉದ್ಯಮ ಕುಂಬಳೆ ಮುಹಮ್ಮದ್ ಅರಬಿ ಹಾಜಿ ಅವರು ತಮ್ಮ ಅತ್ಯಂತ ಬೆಲೆ ಬಾಳುವ ಭೂಮಿಯನ್ನು ಕಡಿಮೆ ಬೆಲೆಗೆ ಒದಗಿಸಿ ಕೊಟ್ಟು ತನ್ನ ಪರಲೋಕದ ಉದ್ಯಮಕ್ಕೆ ಠೇವಣಿ ಕಟ್ಟಿದ್ದರು.

2004 ಡಿಸೆಂಬರ್ 19 ಭಾನುವಾರ ಸಾಯಂಕಾಲ ಮಂ ಗಳೂರು-ತಾಜ್ ಮಂಜರುನ್ ಹೋ ಟೆಲ್ ಸಭಾಂಗಣ ದಲ್ಲಿ ನಡೆದ 'ಇಂಟ ರಾಕ್ಷನ್ ಮೀಟಿಂ ಗ್ ಮತ್ತು ಗೆಟ್ ಟುಗೆದರ್'ನಲ್ಲಿ ಯೋಜನೆಯ ಅಂತಿಮ ನಕ್ಷೆ ಸಿದ್ಧವಾಯಿತು. ಸಯ್ಯಿದುನಾ ತಾಜುಲ್ ಉಲಮಾ ಅಧ್ಯಕ್ಷರಾಗಿದ್ದ ಸದ್ರಿ ಸಮಾವೇಶದಲ್ಲಿ ಎ.ಪಿ. ಉಸ್ತಾದ್, ಕುಂಬೋಲ್ ತಂಙಳ್, ಪೇರೋಡ್ ಉಸ್ತಾದ್, ಸಿ.ಎಂ. ಇಬ್ರಾ ಹೀಮ್ ಅತಿಥಿಗಳಾಗಿದ್ದರು. 'ಗೆಸ್ಟ್ ಲಿಸ್ಟ್' ನಲ್ಲಿ ಮಂಗಳೂರು ಖಾಝಿ ಕೋಟ ಅಬ್ದುಲ್ ಖಾದಿರ್ ಮುಸ್ಲಿಯಾರ್ ಇದ್ದರು. ನಿರೀಕ್ಷೆ ಗಳ ಕ್ಷಣಗಣನೆಯನ್ನು ಕೊನೆಗಾಣಿಸಿ 2008 ಫೆಬ್ರವರಿ ಏಳು ಗುರುವಾರ ಅಸರ್ ನಮಾಝಿ ನೊಂದಿಗೆ ಮಸ್ಜಿದ್ ತಖ್ವಾ ಉದ್ಘಾಟನೆ ಗೊಂಡಿತು. ತಾಜುಲ್ ಉಲಮಾ ವಕ್ಫ್ ನಿರ್ವಹಿಸಿದರೆ ಸಯ್ಯಿದ್ ಮುಹಮ್ಮದಲಿ ಶಿಹಾಬ್ ತಂಙಳ್ ಪಾಣಕ್ಕಾಡ್ ಅಸರ್ ನಮಾಝಿಗೆ ನೇತೃತ್ವ ಕೊಟ್ಟರು. ಕಾಂತಪುರಂ ಉಸ್ತಾದ್ ಮುಖ್ಯ ಭಾಷಣ ನಡೆಸಿದರು. ಮಂಗಳೂರು ಖಾಝಿ ಕೋಟ ಅಬ್ದುಲ್ ಖಾದಿರ್ ಮುಸ್ಲಿಯಾರ್, ಕಾಸರಗೋಡ್ ಖಾಝಿ ಟಿ.ಕೆ.ಎಂ. ಬಾವಾ ಮುಸ್ಲಿಯಾರ್ ಮಂಗಳೂರಿನ ಮಾಜಿ ಸಹಾಯಕ ಖಾಝಿ ಮಿತ್ತಬೈಲ್ ಅಬ್ದುಲ್ ಜಬ್ಬಾರ್ ಮುಸ್ಲಿ ಯಾರ್ ಮುಖ್ಯ ಅತಿಥಿಗಳಾಗಿದ್ದರು. ಪಂಪ್‌ವೆಲ್ ತಖ್ವಾ ಮಸೀದಿ ಸಾವಿರದ ನಾನೂರು ವರ್ಷಗಳ ಮಂಗಳೂರಿನ ಉಜ್ವಲ ಇಸ್ಲಾಮೀ ಪಾರಂಪರ್ಯಕ್ಕೆ ಮುಕುಟ ಮಣಿಯಾಯಿತು.

2008 ಫೆಬ್ರವರಿ 22 ಶುಕ್ರವಾರ ರಾತ್ರಿ ಚಿಕ್ಕಮಗಳೂರು -ಉಪ್ಪಳಿಯಲ್ಲಿ ಎಸ್ಸೆಸ್ಸೆಫ್ ರಾಜ್ಯ ಮಹಾಸಭೆ ನಡೆದು ಎರಡನೇ ಬಾರಿಗೆ ನಾನು ರಾಜ್ಯಾಧ್ಯ ಕ್ಷನಾದೆ. ಹಿಂದಿ ನಂತೆ ಶಿವಮೊಗ್ಗ ಜಿಲ್ಲೆಯ ಯಾಕೂ ಬ್ ಯೂಸುಫ್ ಹೊಸನಗರ ಪ್ರಧಾನ ಕಾರ್ಯ ದರ್ಶಿಯೂ, ಹಾಸನ ಜಿಲ್ಲೆಯ ಡಾ. ಮುಹಮ್ಮದ್ ಫಾಝಿಲ್ ರಝ್ವಿ ಚೆನ್ನರಾ ಯಪಟ್ನ ಕೋಶಾಧಿಕಾರಿಯಾಗಿ ಮರು ಆಯ್ಕೆಯಾದರು. ಅದು ಸಂಘಟನೆಯ ಇಪ್ಪತ್ತನೇ ವಾರ್ಷಿಕದ ಹೊಸ್ತಿಲು. ಆದ್ದ ರಿಂದ ಜವಾಬ್ದಾರಿ ಹೆಚ್ಚಿತ್ತು. ಅಲ್ಲದೆ ದೇಶದ ಲ್ಲಿಡೀ 'ಎಸ್ಸೆಸ್ಸೆಫ್'ಗೆ ಏಕರೂಪ ಇರಬೇಕೆಂಬ ಕೇರಳ ನಾಯಕರ ಸಲಹೆಗೆ ಸ್ಪಂದಿಸುವ ಅನಿವಾರ್ಯತೆಯೂ ಇತ್ತು. ಇದಕ್ಕಾಗಿ ನಾವು ಅನೇಕ ಹೊಂದಾಣಿಕೆಗಳನ್ನು ಮಾಡಿ ಕೊಳ್ಳಬೇಕಾಗಿತ್ತು. ಒಟ್ಟಿನಲ್ಲಿ ಈ ಅವಧಿಯು ಸಂಘಟನೆಯ ಪರ್ವಕಾಲವಾಗಿತ್ತು.

ಫೆಬ್ರವರಿ 25ರಂದು ಚಿಕ್ಕಮಗಳೂರು ಜಿಲ್ಲೆಯ 'ಕಳಸ'ದಲ್ಲಿ ಸ್ಥಳೀಯ ಮಹಿಳಾ ಮಂಡಳಿಯ ಆಶ್ರಯದಲ್ಲಿ ನಡೆದ ಸೌಹಾರ್ದ ಸಂಗಮವು ವಿಶಿಷ್ಟ ಅನುಭವವಾ ಯಿತು. ಇಸ್ಲಾಂ, ಹಿಂದೂ, ಕ್ರೈಸ್ತ ಹಾಗೂ ಜೈನ ಧರ್ಮದ ಪ್ರತಿನಿಧಿಗಳು ಅರ್ಧ ಗಂಟೆಯಂತೆ, ತಮ್ಮ ಧರ್ಮದ ಸಂದೇಶ ಗಳನ್ನು ಪ್ರತಿಪಾದಿಸಬೇಕಿತ್ತು. ಮುಸ್ಲಿಂ ಧರ್ಮದ ಬಗ್ಗೆ ನಾನು ಮಾತನಾಡಿದ ಮೇಲೆ ಹಿಂದೂ ಧರ್ಮದ ಕುರಿತು ಪ್ರಕಾಶ್ ರಾವ್ ಪಾವಗಡ ಎಂಬವರು ಮಾತನಾಡಿದರು. ನನ್ನ ಭಾಷಣವನ್ನು ತದೇಕ ಚಿತ್ತದಿಂದ ಆಲಿಸಿದ ಅವರು ಮಾತು ಮುಗಿಸಿದಾಗ ನನ್ನನ್ನು ಆಲಂಗಿಸಿಕೊಂಡರು. 'ಇಸ್ಲಾಂ ಈ ರೀತಿಯ ಸಿದ್ಧಾಂತಗಳನ್ನೂ ಹೊಂದಿದೆ' ಎಂದು ನಾನು ಭಾವಿಸಿರಲೇ ಇಲ್ಲ, ಎನ್ನುತ್ತಾ ತನ್ನ ಅರ್ಧ ಗಂಟೆಯ ಭಾಷಣದುದ್ದಕ್ಕೂ ರಾಯರು ನನ್ನ ಮಾತುಗಳನ್ನೇ ಉಲ್ಲೇಖಿಸುತ್ತಿದ್ದರು. ಇಸ್ಲಾಮಿನ ಕುರಿತ ಅನೇಕ ತಪ್ಪು ಗ್ರಹಿಕೆಗಳಿಗೆ ಇಂದಿನ ಕಾರ್ಯಕ್ರಮ ನನಗೆ ಉತ್ತರ ವಾಯಿತು ಎಂದರವರು.

ತಪ್ಪು ಅವಲಂಬಗಳು ಮತ್ತು ಮುಸ್ಲಿಂ ವಿರೋಧಿ ಸಾಹಿತ್ಯಗಳ ಓದಿನಿಂದ ಸಮಾಜದ ಅನೇಕ ಮಂದಿ ಗಣ್ಯರು ಇಸ್ಲಾಮನ್ನು ತಪ್ಪು ತಿಳಿದಿದ್ದು ಅವರ ಭಾವನೆಗಳನ್ನು ಬದಲಾಯಿ ಸಲು ಇಂತಹ ಸೌಹಾರ್ದ ಸಂಗಮಗಳು ಬಹಳಷ್ಟು ಸಹಕಾರಿಯಾಗುತ್ತದೆ. ಅವರೊಂ ದಿಗೆ ಮಾತನಾಡಬೇಕಾದರೆ ಆ ರೀತಿಯ ಸಭೆಗಳಿಗೇ ಹೋಗಬೇಕಷ್ಟೆ. ಸಭೆಗಳಲ್ಲಿ ದೀಪ ಬೆಳಗಿಸಬೇಕಾದ ಸನ್ನಿವೇಶ, ವೇದಿಕೆಗಳಲ್ಲಿ ಮಹಿಳೆಯರ ಉಪಸ್ಥಿತಿ ಹಾಗೂ ಬ್ಯಾಂಡು -ಡೋಲುಗಳ ಮೆರವಣಿಗೆಗಳು ಇಲ್ಲವೆಂದು ಖಾತರಿಪಡಿಸಿದ ಬಳಿಕವಷ್ಟೇ ಇಂತಹ ಕಾರ್ಯಕ್ರಮಗಳಿಗೆ ಹೋಗುವ ವಾಡಿಕೆ ಇಟ್ಟುಕೊಂಡಿದ್ದೇನೆ. ಆದರೂ ಕೆಲವೆಡೆಗಳಲ್ಲಿ ವಿಪರೀತ ಸಂದರ್ಭಗಳು ಬಂದು ಇಕ್ಕಟ್ಟಿಗೆ ಸಿಲುಕಬೇಕಾಗುತ್ತದೆ. ಯಾವತ್ತೂ ಇಸ್ಲಾ ಮಿನ ಬಗ್ಗೆ ಸರಿಯಾದ ಮಾಹಿತಿ ಪಡೆದು ಕೊಳ್ಳಲು ಅವಕಾಶ ಸಿಗದ ಗಣ್ಯಾತಿಗಣ್ಯರು ಇಂತಹ ವೇದಿಕೆಗಳಲ್ಲಿ ಮಾತ್ರ ಸಿಗುತ್ತಿದ್ದು ಅವರಿಗೆ ದೀನಿನ ಸಂದೇಶ ತಲುಪಿಸುವ ಶ್ರೇಷ್ಠ ಕೆಲಸವನ್ನು ಕೈಗೆತ್ತಿಕೊಂಡಾಗ, ಅನುಬಂಧವಾಗಿ ಘಟಿಸುವ ಸಣ್ಣಪುಟ್ಟ ತಪ್ಪುಗಳಿಗೆ ಧರ್ಮ ಸಂಸ್ಥಾಪಕ ಸೃಷ್ಟಿಕರ್ತನ ಬಳಿ ಕ್ಷಮೆ ಇದೆಯೆಂದು ಭಾವಿಸಬೇಕಷ್ಟೆ. ನೂತನವಾದಿಗಳ ಮುಂದೆ ಮುಖಾಮುಖಿ, ಸಂವಾದ, ಖಂಡನೆ ಮಂಡನೆಗಳ ಮೂಲಕ ಸುನ್ನೀ ತತ್ವಾದರ್ಶಗಳನ್ನು ಪ್ರತಿಪಾದಿಸಿ ಅವರ ತಪ್ಪು ಗ್ರಹಿಕೆಗಳನ್ನು ನಿವಾರಿಸಿ 'ಈಮಾನ್' ಸಂರಕ್ಷಿಸುವ ರೀತಿಯಲ್ಲಿ ಮುಸ್ಲಿ ಮೇತರರ ಮುಂದೆ ಅವರ ತಪ್ಪುಕಲ್ಪನೆಗಳನ್ನು ನಿವಾರಿಸಿ 'ಇಸ್ಲಾಂ' ಸಂರಕ್ಷಿಸಬೇಕಾದ ಜವಾ ಬ್ದಾರಿಯೂ ನಮ್ಮ ಮುಂದಿದೆ. ಇದಕ್ಕೆ ಸರ್ವಧರ್ಮ ಸೌಹಾರ್ದ ವೇದಿಕೆಗಳಲ್ಲದೆ ಅನ್ಯ ಮಾರ್ಗವೇ ಇರುವುದಿಲ್ಲ ಎಂಬುದು ನನ್ನ ಅಭಿಮತ.

2008 ಮೇ ಒಂದು ಗುರುವಾರ ರಾಜ್ಯದ ಸುನ್ನೀ ಕಾರ್ಯಕರ್ತರ ಪಾಲಿಗೆ ದುಃಖ ದಿನ. ಎಸ್ಸೆಸ್ಸೆಫ್ 'ರಾಜ್ಯ ಕಾರ್ಯದರ್ಶಿ' ವರೆಗೆ ಬೆಳೆದಿದ್ದ ಆತ್ಮೀಯ ಮಿತ್ರ, ವಿನಯಾನ್ವಿತ ಸಜ್ಜನ ಎಚ್.ಎ. ಅಬ್ದುಲ್ಲ ಹೊದವಾಡ ಆ ದಿನ ನಮ್ಮನ್ನು ಅಗಲಿದ್ದ. ಮಡಿಕೇರಿಯ ಫಿರ್ದೌಸ್ ವಾರಪತ್ರಿಕೆಯ ಕಚೇರಿಯಲ್ಲಿ ಪರಿಚಿತನಾದ ಅಬ್ದುಲ್ಲ, ಬಹುಬೇಗ ಆತ್ಮೀಯನಾಗಿ ಬಿಟ್ಟಿದ್ದ. ಮಾತು ಮಾತಿಗೂ ಉಸ್ತಾ ಉಸ್ತಾ, ಅಂತ ಕರೆಯುತ್ತಾ ನನ್ನಂತವ ರಿಗೆಲ್ಲ ಪ್ರೀತಿ ಪಾತ್ರನಾಗಿ ಮಾರ್ಪಟ್ಟಿದ್ದ. ಬೆಂಗಳೂರಿನ ದಾರುಸ್ಸಲಾಂ ಸಭಾಂಗಣದಲ್ಲಿ ನಡೆದ ಮಹಾಸಭೆಯಲ್ಲಿ ಎಸ್ಸೆಸ್ಸೆಫ್ ರಾಜ್ಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಒಮ್ಮತ ದಿಂದ ಸೂಚಿಸಲ್ಪಟ್ಟಾಗಲೂ ರಾಜ್ಯ ನಾಯ ಕರ ಒತ್ತಾಯದ ಹೊರತಾಗಿಯೂ ಹೊಣೆ ಗಾರಿಕೆಯ ಹೊರೆಯನ್ನು ಅರಿತು ಅದರಿಂದ ಜಾರಿಕೊಂಡಿದ್ದ, ಕೊನೆಗೆ ಬಶೀರ್ ಅಹ್ಮದ್ ಜಿ.ಕೆರೆಯ ಸಹಕಾರ್ಯದರ್ಶಿ ಯಾಗಿ ನೇಮಕಗೊಳಿಸಲಾಗಿತ್ತು.

ಅಂತಹ ಸನ್ಮಿತ್ರ ಆ ದಿವಸ, ಕುವೈತ್‌ನಿಂದ ರಜೆಯ ಮೇಲೆ ಊರಿಗೆ ಆಗಮಿಸುತ್ತಿದ್ದ ತನ್ನ ತಂದೆ ಅಹ್ಮದ್ ಮುಸ್ಲಿಯಾರನ್ನು ಕೋಝಿಕೋಡ್ ವಿಮಾನ ನಿಲ್ದಾಣದಿಂದ ಬರಮಾಡಿಕೊಳ್ಳಲು ಕೊಟ್ಟಮುಡಿ -ಹೊದವಾಡದಿಂದ 'ಓಮ್ನಿ' ಕಾರು ತೆಗೆದು ಹೊರಟಿದ್ದ. ಸಂಜೆ 4.15ಕ್ಕೆ ಕೋಝಿಕ್ಕೋಡ್ ಜಿಲ್ಲೆಯ 'ಪಯ್ಯೋಳಿ' ಎಂಬಲ್ಲಿ ಕಾರು ಅಪಘಾತವಾಗಿ ಆತನ ಪ್ರಾಣಪಕ್ಷಿ ಹೊರಟು ಹೋಗಿತ್ತು. ಮಿತ್ರನ ಮರಣ ವಾರ್ತೆ ಸಿಕ್ಕಿದ ತಕ್ಷಣ ನಾವೆಲ್ಲ ಕೊಡಗಿಗೆ ಹೊರಟೆವು. ತಡರಾತ್ರಿ ಶ್ವೇತ ವಸ್ತ್ರದ ಹೊದಿಕೆಯೊಳಗಿಂದ ಅಬ್ದುಲ್ಲಾ, ಹೂಮಂದಹಾಸ ಬೀರುತ್ತಾ ಜನ್ಮ ನಾಡಿಗೆ ಆಗಮಿಸಿದ. ಅಲ್ಪ ಸಮಯ ದಲ್ಲೇ ಕೊಟ್ಟಮುಡಿ ಅಝ್ಹರ್‌ನಗರ ಜುಮಾ ಮಸೀದಿಯ ಬಳಿ ತನಗಾಗಿ ಸಿದ್ಧಗೊಂಡಿದ್ದ 'ಭವನ'ಕ್ಕೆ ಆತ ತೆರಳಿ ಬಿಟ್ಟ. ನಾವೆಲ್ಲ ಕಣ್ಣೀರ ವಿದಾಯ ಕೋರಿದೆವು.

ಡಾ. ಗೌಸ್ ಮರಣದಿಂದ ಸ್ಥಗಿತಗೊಂ ಡಿದ್ದ ಡಾಕ್ಟರೇಟ್ ಕನಸು, ತಮಿಳುನಾಡಿನ, ಕಾರೈಕುಡಿ ಅಳಗಪ್ಪ ಯುನಿವರ್ಸಿಟಿಯ ಒಂದು ಜಾಹೀರಾತು ಕಂಡಾಗ ಮತ್ತೆ ಚಿಗುರ ತೊಡಗಿತು. ಮಂಗಳೂರು ಬಲ್ಲಾಲ್ ಭಾಗ್ ನ ಶ್ರೀ ದೇವಿ ಎಜುಕೇಶನ್ ಟ್ರಸ್ಟ್‌ನಲ್ಲಿ ಆಗ ಅಳಗಪ್ಪ ಯುನಿವರ್ಸಿಟಿಯ ಅಧ್ಯಯನ ಕೇಂದ್ರವೊಂದಿತ್ತು. ಹೋಗಿ ವಿಚಾರಿಸಿದಾಗ ದೂರ ಶಿಕ್ಷಣದ ಮೂಲಕ ಎಂ.ಫಿಲ್ (M.Phil) ಮಾಡುವ ವಿಧಾನ ಅಲ್ಲಿತ್ತು. ಕೋರ್ಸ್‌ಗೆ ಸೇರುವ ನಿರ್ಧಾರ ಮಾಡಿದೆ. ಆದರೆ ನನ್ನ ಎಂ.ಎ.ಯ ಪ್ರಮಾಣ ಪತ್ರ ಆ ವರೆಗೆ ಬಂದಿರಲಿಲ್ಲ. ಒಂದೆರಡು ತಿಂಗಳೊಳಗೆ ಸರ್ಟಿಫಿಕೇಟ್ ತಂದು ಕೊಡಿ ಈಗ ನೋಂದಾಯಿಸಿ ಕೊಳ್ಳಿ ಎಂದರು ಅಧ್ಯಯನ ಕೇಂದ್ರದ ಉಸ್ತುವಾರಿಯಾಗಿದ್ದ ಲೀಲಾ ಮೇಡಂ. ಮಂಗಳೂರು ಅಶೋಕ ನಗರದ 'ಸಮನ್ವಯ' ಮನೆಯಲ್ಲಿ ವಾಸ್ತವ್ಯವಿದ್ದ ಡಾಕ್ಟರ್, ಫಾದರ್ ರೋನಾಡ್ಸ್ ಕುಟಿನೋ -ರನ್ನು ನನಗೆ ಗೈಡ್ ಮಾಡಲಾಯಿತು. ಇತಿಹಾಸದಲ್ಲಿ ಪಿ.ಎಚ್.ಡಿ. ಪಡೆದ ಅವರು 'ರಾಜ್ಯಶಾಸ್ತ್ರ'ದ ನನಗೆ ಮಾರ್ಗದರ್ಶಿ ಯಾಗಲು ಒಪ್ಪಿದರು. ಕೋರ್ಸ್ ಫೀಸ್ ಏಳು ಸಾವಿರದ ಮುನ್ನೂರು ರೂಪಾಯಿ ನಿಗಧಿಯಾಯಿತು.

ಡಾ. ಗೌಸ್ ಮಾರ್ಗದರ್ಶನದಲ್ಲಿ ಪಿ.ಎಚ್.ಡಿ.ಗೆ 'ಖಲೀಫಾ ಉಮರ್ﷺ ಅವರ ರಾಜಕೀಯ ಬದುಕು, ಆಡಳಿತ ಸುಧಾರಣೆಗಳು ಮತ್ತು ಇಸ್ಲಾಮೀ ರಾಜ್ಯ ಶಾಸ್ತ್ರ' ಎಂಬ ವಿಷಯವನ್ನು ಉದ್ದೇಶಿಸಿದ್ದೆ. ಎಂ.ಫಿಲ್‌ಗೂ ಅದರ ಅನ್ವಯತೆಯ ಬಗ್ಗೆ ಯೋಚಿಸುತ್ತಿದ್ದೆ. ಆದರೆ ದಾಖಲಾತಿಯ ಕಟ್ಟಕಡೆಯ ದಿನದವರೆಗೂ ಮೈಸೂರಿನಿಂದ ಎಂ.ಎ. ಪ್ರಮಾಣ ಪತ್ರ ಬರಲೇ ಇಲ್ಲ. ಅಪೇಕ್ಷಾ ಪತ್ರದಲ್ಲಿ ಅಸಲಿ ಅಂಕ ಪಟ್ಟಿಯ ನ್ನು ಇಡುವ ಬದಲು ಅದರ ಪ್ರತಿಗಳನ್ನು ಲಗತ್ತಿಸಿದ್ದರಿಂದ ಅಪೇಕ್ಷೆ ತಿರಸ್ಕೃತವಾಗಿ ತ್ತಂತೆ, ಮುಂದಿನ ವರ್ಷ ಪ್ರಮಾಣ ಪತ್ರ ಬಂದು 'ಅಳಗಪ್ಪ'ನ ಬಾಗಿಲು ಬಡಿದರೆ ಈ ವರ್ಷ ಇಲ್ಲಿ ಅಧ್ಯಯನ ಕೇಂದ್ರ ಇಲ್ಲ ಎಂದು ಬಿಟ್ಟರು ಮೇಡಂ ಲೀಲಾ!!

2009 ಜನವರಿ 3 ಶನಿವಾರ ಮಂಗಳೂರಿ ನಲ್ಲಿ ನಡೆದ ಬೃಹತ್ ಉಗ್ರವಾದ ವಿರುದ್ಧ ಸಮ್ಮೇಳನ ಐತಿಹಾಸಿಕ ವೆನಿಸಿತ್ತು. ಮರ್ಕಝುಸ್ಸಖಾಫತಿಸ್ಸುನ್ನಿಯ್ಯಃ ಹಾಗೂ ಉಳ್ಳಾಲ ಸಯ್ಯಿದ್ ಮದನಿ ಸಮಿತಿಯ ಆಶ್ರಯದಲ್ಲಿ ನಡೆದ ಸಮ್ಮೇಳನದ ಸಂಘ ಟನಾ ಸಮಿತಿಗೆ ಕಣಚೂರು ಮೋನು ಹಾಜಿ ಅಧ್ಯಕ್ಷರಾಗಿದ್ದರು. ಜನವರಿ 16,17,18 ಗಳಲ್ಲಿ ನಡೆದ ಮರ್ಕಝ್‌ನ 31ನೇ ವಾರ್ಷಿಕ ಸಮ್ಮೇಳನದ ಅಂಗವಾಗಿ ಸದರಿ ಉಗ್ರವಾದ ವಿರುದ್ಧ ಸಮ್ಮೇಳನ ಆಯೋಜಿಸಲಾಗಿತ್ತು.

ಮಾರ್ಚ್ 3 ಮಂಗಳವಾರ ನನ್ನ ಮೊಟ್ಟ ಮೊದಲ ಓಮಾನ್ ಯಾತ್ರೆ ಕುಂಬ್ರ ಮರ್ಕ ಝುಲ್ ಹುದಾಗಾಗಿ ನಡೆಯಿತು. ಸೀಬ್ ಇಂಟರ್ ನ್ಯಾಷನಲ್ ಏರ್‌ಪೋರ್ಟ್‌ನಲ್ಲಿ ಮಿತ್ತೂರು ಉಮರ್ ಸಖಾಫಿ ಸ್ವಾಗತಿಸಲು ಬಂದಿದ್ದರು. ಅಲ್ಲಲ್ಲಿ ಧನ ಸಂಗ್ರಹದ ಭಾಷಣ ಯಾತ್ರೆಗಳು ನಡೆದು ಮಾರ್ಚ್ 17 ಮಂಗಳವಾರ ಒಮಾನಿನ ಪ್ರಸಿದ್ಧ ಯಾತ್ರಾ ಸ್ಥಳ 'ಸಲಾಲ' ತಲುಪಿದೆವು. ರಾಜಧಾನಿ ಮಸ್ಕತ್‌ನಿಂದ ಒಂದು ಸಾವಿರ ಕಿ.ಮಿ. ದೂರವಿರುವ ಸಲಾಲಕ್ಕೆ ಬಸ್‌ನಲ್ಲಿ 12 ಗಂಟೆಗಳ ಯಾತ್ರೆ. ಅಲ್ಲಿನ ಪ್ರಸಿದ್ಧ ಝಿಯಾ ರತ್ ಕೇಂದ್ರಗಳಾದ ಇಮ್ರಾನ್ ನಬಿ ﷺ ದರ್ಗಾ, ಅಯ್ಯೂಬ್ ನಬಿ ﷺ ದರ್ಗಾ, ಭಾರತಕ್ಕೆ ಮಾಲಿಕ್ ಬಿನ್ ದೀನಾರ್ ಸಂಘವನ್ನು ಮುನ್ನಡೆಸಿ ದಾರಿಮಧ್ಯೆ ಮರಣ ಹೊಂದಿದ ಚೇರ್‌ಮಾನ್ ಪೆರುಮಾಳ್ ಚಕ್ರವರ್ತಿ ﷺ ಅವರ ದರ್ಗಾ, ಬಾಅಲವಿ ತಂಙಳ್ ಮನೆತನದ ಪಿತಾಮಹಾ ಸ್ವಾಹಿ ಬುಲ್ ಮಿರ್‌ಖಾತ್ವ್ ಸಯ್ಯಿದ್ ಮುಹ ಮ್ಮದ್ ಅಲ್‌ಹದ್ದಾದ್ ಬಾಅಲವಿ ﷺ ಅವರ ದರ್ಗಾ ಹಾಗೂ ಸ್ವಾಲಿಹ್ ನಬಿ ﷺ ಅವರ ಒಂಟೆಯನ್ನು ವಧಿಸಿದ ಸ್ಥಳ, ಏರುಮುಖ ರಸ್ತೆಯಲ್ಲೂ ಅದ್ಭುತಕರವಾಗಿ ವಾಹನಗಳು ಸ್ಟಾರ್ಟ್ ಮಾಡದೆ, ಚಲಾಯಿಸದೆ, ಸ್ವಯಂ ಚಲಿಸುವ ಮ್ಯಾಗ್ನೆಟ್ ರಸ್ತೆ, ಮುಂತಾದ ಸ್ಥಳಗಳನ್ನು ಸಂದರ್ಶಿ ಸಿದೆವು. ಮಸ್ಕತ್‌ನಿಂದ ಮಿತ್ತೂರು ಉಮರ್ ಸಖಾಫಿ ಜತೆಗಿದ್ದರೆ, 'ಸಲಾಲಾ'ದಲ್ಲಿ ಪ್ರಖ್ಯಾತ ವಾಗ್ಮಿ, ಭಾಷಣ ರಂಗದಲ್ಲಿ ಮಲಯಾಳಿ ಸಮೂಹವನ್ನು ರೋಮಾಂಚನ ಗೊಳಿಸಿದ್ದ ನಾಸಿರುದ್ದೀನ್ ಸಖಾಫಿ ಕೋಟ್ಟ ಯಂ ಮಾರ್ಗದರ್ಶಕರಾಗಿಯೂ ವಾಹನದ ಚಾಲಕರಾಗಿಯೂ ನಮ್ಮ ಜತೆ ಸೇರಿ ಕೊಂಡಿ ದ್ದರು. ಸಲಾಲಾದಲ್ಲಿ ಉದ್ಯೋಗವನ್ನು ಹೊಂದಿದ್ದ 'ಕೋಟ್ಟಯಂ' ಕುಟುಂಬ ಸಮೇತ ಅಲ್ಲಿ ವಾಸವಾಗಿದ್ದರು.

ಮಾರ್ಚ್ 19 ಗುರುವಾರ ಮಸ್ಕತ್‌ನಿಂದ ನಾನು ಬಸ್ ಮೂಲಕ ದುಬೈ ಹೊರಟೆ. ಆ ದಿವಸವನ್ನು ನನ್ನ ಈವರೆಗಿನ ಬದುಕಿನಲ್ಲಿ ಅತ್ಯಂತ 'ಒತ್ತಡದ ದಿನ'ವಾಗಿ ದಾಖಲಿಸಿಟ್ಟಿದ್ದೇನೆ. ಆ ದಿನ ಬೆಳಿಗ್ಗೆ 7 ಗಂಟೆಗೆ ಮಸ್ಕತ್‌ನಿಂದ ಹೊರಟು ಮಧ್ಯಾಹ್ನ ದುಬೈ ತಲುಪಿದೆ. ಸಂಜೆ ಏಳು ಗಂಟೆಗೆ ಅಬುದಾಬಿ 'ಸುಡಾನಿ ಕ್ಲಬ್'ನಲ್ಲಿ ಆಯೋಜಿಸಿದ್ದ ಬೃಹತ್ ಮೀಲಾದ್ ಸಮಾವೇಶದಲ್ಲಿ ಭಾಗವಹಿಸುವುದಿತ್ತು. ಪ್ರತಿಯೊಂದು ಹಂತದಲ್ಲಿಯೂ ಅಸಾಧ್ಯ ಒತ್ತಡ ಅನುಭವಿಸಿ ಅದ್ಭುತಕರವಾಗಿ ಅಂದು ಸಮಯಕ್ಕೆ ಸರಿಯಾಗಿ ಸಭಾಂಗಣಕ್ಕೆ ತಲುಪಿದ್ದೆ. ಕೈಯ್ಯಲ್ಲಿ ಫೋನ್ ಇಲ್ಲದೆ, ಖರ್ಚಿಗೆ ಯುಎಇ ಕರೆನ್ಸಿ ಇಲ್ಲದೆ, ಬಸ್ ನಿಲ್ದಾಣದಿಂದ ಮಿತ್ರ ಯೂಸುಫ್ ಮೌಲವಿ ಕುಕ್ಕಾಜೆ ಅವರ 'ದೇರಾ'ದಲ್ಲಿರುವ ರೂಂ ತಲುಪುವ ದಾರಿ ಗೊತ್ತಿಲ್ಲದೆ ಕಂಗಾಲಾಗಿದ್ದೆ. ಕೊನೆಗೆ ರೂಮಿನಿಂದ ಅಬುದಾಬಿ ಹೋಗುವ ಬಸ್ ನಿಲ್ದಾಣದ ದಾರಿ, ಸಾಹಸಕರವಾಗಿ ಕಂಡು ಹಿಡಿದರೂ ಅಲ್ಲಿ ಸಕಾಲಕ್ಕೆ ಬಸ್ ಇರಲಿಲ್ಲ. ಅಬುದಾಬಿ ತಲುಪಿದರೆ ಅಲ್ಲಿ ಟ್ಯಾಕ್ಸಿ ಇರಲಿಲ್ಲ. ಸಿಕ್ಕಿದ ಟ್ಯಾಕ್ಸಿ ಭಾರೀ ಸಂಚಾರ ದಟ್ಟಣೆಯಿಂದಾಗಿ ಒಂದಿಂಚೂ ಮುಂದೆ ಚಲಿಸಲಿಲ್ಲ. ಕೊನೆಗೆ ಟ್ಯಾಕ್ಸಿ ತ್ಯಜಿಸಿ ಭಾರವಾದ ಬ್ಯಾಗನ್ನು ಹೊತ್ತು ಸುಡಾನೀ ಕ್ಲಬ್ ಕೇಳುತ್ತಾ ನಡೆದದ್ದೇ ನಡೆದದ್ದು. ಕೊನೆಯ ಹಂತದಲ್ಲಿ ಕಾರ್ಯಕ್ರಮಕ್ಕೆ ಹೋಗುತ್ತಿದ್ದ ವ್ಯಕ್ತಿಯೊಬ್ಬ ರಸ್ತೆ, ಗಲ್ಲಿ, ಕಟ್ಟಡಗಳ ಇಕ್ಕಟ್ಟು, ಗಟರುಗಳನ್ನು ದಾಟಿಸಿ ಸಂಜೆ ಏಳು ಗಂಟೆಗೆ ಸುಡಾನಿ ಕ್ಲಬ್‌ನ ಅಂಗಳಕ್ಕೆ, ತಲುಪಿಸಿದ. ನಿಜಾರ್ಥದಲ್ಲಿ 'ಸುಡಾನ್'ದೇಶಕ್ಕೇ ತಲುಪಿದಂತಾಗಿತ್ತು ನನ್ನ ಸ್ಥಿತಿ. ಆ ದಿನ ನನ್ನ ಹೃದಯ ಬಹಳ ಗಟ್ಟಿ ಯಾಗಿದೆಯೆಂಬುದನ್ನು ಖಾತರಿ ಪಡಿಸಿ ಕೊಂಡೆ. ಇಲ್ಲದಿದ್ದರೆ ಮಧ್ಯದಲ್ಲೆಲ್ಲೋ ಅದು ಮಿಡಿತ ನಿಲ್ಲಿಸಿ 'ಬೈ' ಎಂದು ಬಿಡುತ್ತಿತ್ತು.

2009 ಮೇ 24 ಭಾನುವಾರ ಸುನ್ನಿ ಪರಿವಾರದಲ್ಲೊಂದು ಪುಟ್ಟ ಸಂಭ್ರಮ. ಎಸ್ಸೆಸ್ಸೆಫ್ 20ನೇ ವಾರ್ಷಿಕೋತ್ಸವ ಕಾರ್ಯ ಕ್ರಮಗಳಿಗೆ ಅಂದು ಚಾಲನೆ ದೊರಕಿತ್ತು. ಮೇ 22 ಶುಕ್ರವಾರ ರಾತ್ರಿ 10.30ಕ್ಕೆ ಸುರತ್ಕಲ್ ನಿಂದ 'ರಾಹುಲ್'ಎಂಬ ಮಿನಿ ಬಸ್‌ನಲ್ಲಿ ರಾಜ್ಯ ನಾಯಕತ್ವದ 20 ಮಂದಿ ಬೀದರ್‌ಗೆ ಹೊರಟೆವು. ಬಿಜಾಪುರ, ಗುಲ್ಬರ್ಗಾ ಮುಂತಾದೆಡೆ ಸಂದರ್ಶಿಸಿ 24ರಂದು ಸಂಜೆ ಬೀದರ್ ಮುಟ್ಟಿತು ನಾಯಕ ಪಡೆ.

ಸಂಜೆ ಐದುಗಂಟೆಗೆ ಬೀದರ್‌ನ ಪ್ರಸಿದ್ಧ ದರ್ಗಾ ಖಿತ್‌ಬೇ ದಖ್ಖನ್ ಖ್ವಾಜಾ ಅಬುಲ್ ಫೈಝ್ ಅವರ ಝಿಯಾರತ್ ನೊಂದಿಗೆ ಎಂಟು ತಿಂಗಳ ಕಾಲಾವಧಿಯ ಇಪ್ಪತ್ತನೇ ವರ್ಷಾಚರಣೆಗೆ ವಿದ್ಯುಕ್ತ ಚಾಲನೆ ಕೊಡಲಾಯಿತು.

ಸುನ್ನೀ ವಿದ್ಯಾರ್ಥಿ ಯುವ ಶಕ್ತಿ ಮತ್ತೊ ಮ್ಮೆ ಅಷ್ಟ ದಿಕ್ಕು ನಡುಗುವಂತೆ ಗಟ್ಟಿಯಾಗಿ ಧಾರ್ಮಿಕ ಜಾಗೃತಿಗೆ ಝಿಂದಾಬಾದ್ ಕೂಗಿತು.

# 28

## ವಿದೇಶದಲ್ಲೊಂದು ಖುತ್‌ಬಾ ಪಾರಾಯಣ ಮತ್ತು ಒಂಟೆಯ ಮಾಂಸ...

ಮಂಗಳೂರು ಪ್ರದೇಶದಿಂದ ಹಜ್‌ಗೆ ತೆರಳಬೇಕಾದರೆ ಬೆಂಗಳೂರು ತೆರಳಿಯೇ ವಿಮಾನ ಏರಬೇಕಾದ ಪರಿಸ್ಥಿತಿಯಿದ್ದು ದರಿಂದ ಈ ಪ್ರದೇಶದ ಯಾತ್ರಿಕರಿಗೆ ಅದೊಂದು ದೊಡ್ಡ ಮಟ್ಟದ ಅನನುಕೂಲ ತೆಯಾಗುತ್ತಿತ್ತು. ಇದಕ್ಕೆ ಪರಿಹಾರವಾಗಿ ಮಂಗಳೂರಿನಿಂದಲೇ ಹಜ್ ವಿಮಾನ ಯಾನದ ವ್ಯವಸ್ಥೆಯಾಗಬೇಕೆಂಬುದು ಪ್ರದೇಶದ ಎಲ್ಲರ ತೀವ್ರ ಬಯಕೆಯಾಗಿತ್ತು.

ಈ ಬಗ್ಗೆ ಕೇಂದ್ರ ಸರಕಾರದ ಗಮನ ಸೆಳೆಯಲು ದ.ಕ. ಜಿಲ್ಲಾ ಕಾಂಗ್ರೆಸ್ ಅಲ್ಪ ಸಂಖ್ಯಾತ ವಿಭಾಗದ ಅಧ್ಯಕ್ಷರೂ ಹಾಲಿ ಮಂಗಳೂರು ಉತ್ತರದ ಶಾಸಕರೂ ಆಗಿರುವ ಬಿ.ಎ. ಮೊಯ್ದಿನ್ ಬಾವಾರವರ ನೇತೃತ್ವದಲ್ಲಿ ಮಂಗಳೂರಿನ ಘಟಾನುಘಟಿಗಳನ್ನೊ ಳಗೊಂಡ ನಿಯೋಗವೊಂದು ಸಿದ್ಧವಾಯಿತು.

ನಿಯೋಗದಲ್ಲಿ ಮಾಜಿ ಸಚಿವ ಬಿ.ಎಂ. ಮೊಯ್ದಿನ್, ಹಾಲಿ ಸಚಿವ ಯು.ಟಿ. ಖಾದರ್, ಉದ್ಯಮಿಗಳಾದ ಯೇನೆಪೋಯ ಅಬ್ದುಲ್ಲ ಕುಂಞಿ, ಬಿ.ಎಂ. ಫಾರೂಖ್ ಬೆಂಗಳೂರು, ಹಾಜಿ ಮುಮ್ತಾಝ್ ಅಲಿ ಕೃಷ್ಣಾಪುರ, ಉಡುಪಿ ಸಂಸದ ವಿನಯ ಕುಮಾರ್ ಸೊರಕೆ, ಸಮಾಜ ಸೇವಕ ಹಾಜಿ ಹಮೀದ್ ಖಂದಕ್ ಮುಂತಾದ ವಿವಿಧ ಕ್ಷೇತ್ರಗಳ ಗಣ್ಯರ ಜತೆಗೆ 'ಉಲಮಾ ಕೋಟ' ದಿಂದ ಖಾಝಿ ಬೇಕಲ್ ಉಸ್ತಾದ್ ಹಾಗೂ ನಾನೂ ಒಳಗೊಂಡಿ ದ್ದೆವು. ಒಟ್ಟು ಇಪ್ಪತ್ತು ಮಂದಿ ನಿಯೋಗ ದಲ್ಲಿದ್ದರು.

2009 ಜುಲೈ 6 ಸೋಮವಾರ ಬೆಳಿಗ್ಗೆ 11.10ಕ್ಕೆ ಮಂಗಳೂರಿನಿಂದ ಮುಂಬೈ ಮೂಲಕ ನಮ್ಮ ನಿಯೋಗವು ದೆಹಲಿ ಯಾತ್ರೆಗೆ ಹೊರಟಿತು. ಅಲ್ಲಿಂದ ಮತ್ತೊಂದು ವಿಮಾನದಲ್ಲಿ ಸಂಜೆ 4.10ಕ್ಕೆ ದೆಹಲಿ ತಲುಪಿದೆವು. ಹೋಟೆಲ್ 'ರಿಜೆಂಟ್' ಇಂಟರ್ ನ್ಯಾಷನಲ್‌ನಲ್ಲಿ ನಮಗೆ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಅಂದು ರಾತ್ರಿ ಒಂಬತ್ತು ಗಂಟೆಗೆ ಆಸ್ಕರ್ ಫೆರ್ನಾಂಡಿಸ್ ಅವ ರನ್ನು ಭೇಟಿ ಮಾಡು ವ ಮೂಲಕ ಮಂಗಳೂರಿನಿಂದ ಹಜ್ ವಿಮಾನ' ಎಂಬ ಅಭಿಯಾನಕ್ಕೆ ಚಾಲನೆಯಾಯಿತು. ಮರುದಿನದ ಬೆಳಗ್ಗಿನ ಉಪಹಾರ ಕೇಂದ್ರ ರೈಲ್ವೇ ಸಹಾಯಕ ಸಚಿವರೂ ರಾಜ್ಯದ ಕೋಲಾರದ ಸಂಸದರೂ ಆದ ಕೆ.ಎಚ್. ಮುನಿಯಪ್ಪ ಅವರ ಮನೆಯಲ್ಲಿ ಏರ್ಪಾಡು ಮಾಡಲಾಗಿತ್ತು. ಆ ದಿನ ನಿಯೋಗವು ಮಾಜಿ ಕೇಂದ್ರ ಸಚಿವ ಜಾಫರ್ ಶರೀಫ್, ವಿದೇ ಶಾಂಗ ಸಚಿವ ಎಸ್.ಎಂ. ಕೃಷ್ಣ, ಕಾರ್ಮಿಕ ಸಚಿವ ಮಲ್ಲಿಕಾರ್ಜುನ ಖರ್ಗೆ, ಕಾನೂನು ಸಚಿವ ವೀರಪ್ಪ ಮೊಯ್ಲಿ, ರಾಜ್ಯ ಸಭಾ ಉಪಾ ಧ್ಯಕ್ಷ ಕೆ.ರಹ್ಮಾನ್ ಖಾನ್, ಸೋನಿಯಾರ ರಾಜಕೀಯ ಕಾರ್ಯದರ್ಶಿ ಅಹ್ಮದ್ ಪಟೇಲ್ ಅವರನ್ನು ಭೇಟಿ ಮಾಡಿತು. ಮರುದಿನ ಯು.ಪಿ.ಎ. ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ವಿಮಾನಯಾನ ಸಚಿವ ಪ್ರಫುಲ್ ಪಟೇಲ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು. ಅದೇ ದಿನ ನಾವು ಪಾರ್ಲಿಮೆಂಟಿನ ಲೋಕಸಭಾ ಕಲಾಪಗಳನ್ನು ವೀಕ್ಷಿಸಿದೆವು. ರೈಲ್ವೇ ವಿಚಾರವಾಗಿ ನಡೆಯುತ್ತಿದ್ದ ಚರ್ಚೆಯಲ್ಲಿ ಮಮತಾ ಬ್ಯಾನರ್ಜಿ ಗರ್ಜಿ ಸುತ್ತಿರುವುದು ಕೇಳುತ್ತಿತ್ತು. ಈ ನಿಯೋಗದ ಫಲ ವಾಗಿಯೇ ಇತ್ತೀ ಚಿನ ಕಾಲದಲ್ಲಿ ಮಂಗಳೂರು -ಜಿದ್ದಾ ಹಜ್ ವಿಮಾನಯಾನ ಪ್ರಾರಂಭಗೊಂಡಿರುವುದು.

2009 ಜುಲೈ 9 ಗುರುವಾರ ನನ್ನ ಮೊತ್ತ ಮೊದಲ ಹಜ್ ಅಮೀರ್ ಯಾತ್ರೆ. ಬೆಳಿಗ್ಗೆ 6 ಗಂಟೆಗೆ ದೆಹಲಿಯಿಂದ ಹೊರಡುವ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನಲ್ಲಿ ನಿಯೋಗದ ಸದಸ್ಯರಾ ಗಿದ್ದ ಹಾಜಿ ಹಮೀದ್ ಕಂದಕ್ ಮಂಗಳೂರು ಹಾಗೂ ಬಿ.ಎಚ್. ಖಾದರ್ ಬಂಟ್ವಾಳ ಮತ್ತು ನಾನು ಮಧ್ಯಾಹ್ನ 1 ಗಂಟೆಗೆ ಅಜ್‌ಮೀರ್ ತಲುಪಿದೆವು. ಭಾರತದ ಆಧ್ಯಾತ್ಮಿಕ ಚಕ್ರ ವರ್ತಿ ಶೈಖ್ ಮುಈನುದ್ದೀನ್ ಚಿಸ್ತಿ(ﷺ) ರವರ ದರ್ಗಾವನ್ನು ಮೊದಲ ಬಾರಿ ಸಂದರ್ಶಿ ಸಿದ ಪುಳಕ. ಅದೇ ದಿನ ರಾತ್ರಿ 10 ಗಂಟೆಗೆ ದೆಹಲಿಗೆ ಮರಳಿ ತಲುಪಿದೆವು.

2009 ಜುಲೈ 18 ಶನಿವಾರದಂದು ಮಾಣಿ ದಾರುಲ್ ಇರ್ಶಾದ್‌ನಲ್ಲಿ ನಡೆದ ಎಸ್ಸೆಸ್ಸೆಫ್ 20ನೇ ವರ್ಷಾಚರಣೆಯ ಜುಬಿಲೀ ಮೀಟ್ ನಲ್ಲಿ ಮಹತ್ತರವಾದ ಒಂದು ನಿರ್ಣಯ ಕೈಗೊಳ್ಳಲಾಯಿತು. ಸಂಘಟನೆಯನ್ನು ಅಖಿಲ ಭಾರತದ ಮಟ್ಟದಲ್ಲಿ ಏಕೀಕರಣ ಮಾಡುವು ದರ ಅಂಗವಾಗಿ ಕರ್ನಾಟಕ ಎಸ್ಸೆಸ್ಸೆಫ್ ಹೊಂದಿದ್ದ ಪ್ರತ್ಯೇಕ ವಿನ್ಯಾಸದ ಧ್ವಜವನ್ನು ಬದಲಾಯಿಸಿ ಈಗಿನ ಪತಾಕೆಯನ್ನು ಅಂಗೀಕರಿಸಲಾಯಿತು. 1989ರ ವರೆಗೆ ಎಸ್ಸೆಸ್ಸೆಫ್‌ಗೆ ಕೇರಳದ ಮಾದರಿಯ ಧ್ವಜವನ್ನೇ ಇಲ್ಲಿಯೂ ಬಳಸಲಾಗುತ್ತಿತ್ತು. 89ರಲ್ಲಿ ಸಂಘಟನೆ ಸ್ವತಂತ್ರ ನೋಂದಣಿ ಯನ್ನು ಪಡೆದಾಗ ಅಂಗೀಕರಿಸಿದ ಪತಾಕೆಯು ಗುಲಾಬಿ ಬಣ್ಣವನ್ನು ಹೊಂದಿತ್ತು. 1995 ರಲ್ಲಿ ಸಂಘಟನೆಯ ನವೋದಯದ ಪರ್ವ ಆರಂಭಗೊಂಡಾಗ ಮೇಲ್ಭಾಗದಲ್ಲಿ ನೀಲಿ, ಕೆಳಗೆ ಹಸಿರು ಹಾಗೂ ಮಧ್ಯದ ಬಿಳಿಯಲ್ಲಿ ಕೆಂಪು ಬಣ್ಣದಲ್ಲಿ SSF ಎಂದು ಬರೆಯುವ ರೀತಿಯು ನೂತನ ಪತಾಕೆಯನ್ನು ಜಾರಿಗೆ ತರಲಾಯಿತು. ಧ್ವಜದ ಈ ಮಾದರಿಯನ್ನು ವಿನ್ಯಾಸ ಮಾಡುವಲ್ಲಿ 1995ರಲ್ಲಿ ಮರ್ಕಝ್ ವಿದ್ಯಾರ್ಥಿಯಾಗಿದ್ದ ನಾನೂ ಭಾಗಿಯಾಗಿದ್ದೆ.

2009 ಆಗಸ್ಟ್ 2ರಿಂದ ಸಪ್ಟೆಂಬರ್ 13ರ ವರೆಗೆ ನಲವತ್ತು ದಿನಗಳ ಕಾಲ ಸೌದಿ ಅರೇಬಿಯಾದಲ್ಲಿ ಕುಂಬ್ರ ಮರ್ಕಝ್‌ಗಾಗಿ ಸಂದರ್ಶನ ಮತ್ತು ಸಂಗ್ರಹ ನಡೆಸಲಾಯಿತು.

ಮೊಯ್ದಿನ್ ಬಾವಾ ಕೃಷ್ಣಾಪುರ ನೇತೃ ತ್ವದ ನಿಯೋಗದ ಫಲಶ್ರುತಿಯೆಂಬಂತೆ ಮಂಗಳೂರಿನಿಂದ ನೇರ ಹಜ್ ವಿಮಾನವು ಅದೇ ವರ್ಷ ಅಕ್ಟೋಬರ್

25 ಶನಿವಾರ ಬೆಳಿಗ್ಗೆ 9ಗಂಟೆಗೆ ವಿದೇಶಾಂಗ ಸಚಿವ ಎಸ್ಸೆಂ ಕೃಷ್ಣ ಯಾನಕ್ಕೆ ಚಾಲನೆ ಕೊಟ್ಟರು.

2009 ಅಕ್ಟೋಬರ್ 29 ಗುರುವಾರ ಸಂಜೆ ಮಂಗಳೂರಿನ 'ಮಂಜರುನ್' ಹೋಟೆಲ್ ಸಭಾಂಗಣದಲ್ಲಿ ನಡೆದ 'ಹಿಂದೂ - ಮುಸ್ಲಿಂ' ಸಂವಾದ ಭಾಷಣ ಬದುಕಿನ ರೋಚಕ ಅನುಭವ. ಕರ್ನಾಟಕ ಅಲ್ಪ ಸಂಖ್ಯಾತ ಆಯೋಗದ ಅಧ್ಯಕ್ಷರಾಗಿದ್ದ ಖುಸ್ರೋ ಖುರೈಶಿ ಅವರ ವಿಶೇಷ ಆಸಕ್ತಿ ಯಿಂದ ಆಯೋಜಿಸಲಾಗಿದ್ದ ಈ ಕಾರ್ಯ ಕ್ರಮದಲ್ಲಿ ದ.ಕ. ಜಿಲ್ಲಾ ಎಸ್.ಪಿ., ಜಿಲ್ಲಾಧಿ ಕಾರಿ, ಖುಸ್ರೋ ಖುರೇಶಿ ಅಲ್ಲದೆ ಆರೆಸ್ಸೆಸ್‌ನ ಪ್ರಮುಖ ಕಲ್ಲಡ್ಕ ಪ್ರಭಾಕರ ಭಟ್ ವೇದಿಕೆಯಲ್ಲಿದ್ದರು. ಎರಡೂ ಧರ್ಮಗಳಿಂದ ತಲಾ 25 ಮಂದಿಯಂತೆ ಭಾಗವಹಿಸಿದ ಸಂವಾದ ಕಾರ್ಯಕ್ರಮದಲ್ಲಿ ಮತಾಂತರ, ಗೋಹತ್ಯೆ, ಉಗ್ರವಾದ ಮುಂತಾದ ವಿಷಯ ಗಳಲ್ಲಿ ಮುಕ್ತ ಚರ್ಚೆಯಿತ್ತು. ಭಯೋತ್ಪಾ ದನೆ ಮತ್ತು ಗೋಹತ್ಯೆ ಎಂಬ ವಿಷಯದಲ್ಲಿ ನಾನು ಭಾಷಣ ಮಾಡಿದೆ. ಗೋಹತ್ಯೆಯ ನನ್ನ ಮಂಡನೆಯನ್ನು ಸತ್ಯಜಿತ್ ಸುರತ್ಕಲ್ ಎಂಬವರು ಖಂಡಿಸಿದರೆ, ಭಯೋತ್ಪಾದನೆಯ ಕುರಿತ ಉಲ್ಲೇಖಗಳನ್ನು ತಾನು ಒಪ್ಪುವು ದಾಗಿ ಕಲ್ಲಡ್ಕ ಭಟ್ಟರು ತನ್ನ ಸಮಾರೋಪ ಭಾಷಣದಲ್ಲಿ ಅರುಹಿದರು. ಮುಸ್ಲಿಂ ಸಮೂಹದ ಪ್ರತಿನಿಧಿಗಳಾಗಿ ಯೇನೆಪೋಯ ಮುಹಮ್ಮದ್ ಕುಂಞಿ, ಕಣಚೂರು ಮೋನು ಹಾಜಿ, ಹೈದರ್ ಪರ್ತಿಪ್ಪಾಡಿ ಮುಂತಾದವರಿ ದ್ದರು. ರಹೀಂ ಉಚ್ಚಿಲ ಕಾರ್ಯಕ್ರಮ ನಿರೂಪಿಸಿದರು.

ಮಂಗಳೂರು ನಗರದಲ್ಲಿ ವ್ಯವಸ್ಥಿತ ಧಾರ್ಮಿಕ ಬೋಧನೆಯನ್ನು ಮುಂದಿಟ್ಟು ಸಮಾನ ಮನಸ್ಕರಾದ ಕೆಲವರನ್ನು ಸೇರಿಸಿ ನಾವು 'ವಾಯ್ಸ್ ಆಫ್ ಖುರ್‌ಆನ್' ಎನ್ನುವ ಸಂಘವನ್ನು ಕಟ್ಟಿದ್ದೆವು. ಅಬೂ ಸುಫ್ಯಾನ್ ಮದನಿ ಅಧ್ಯಕ್ಷರಾಗಿಯೂ, ಮಂಗಳೂರು ಆರ್ಶಾದ್ ಹಾರ್ಡ್‌ವೇರ್ಸ್‌ನ ಮನ್ಸೂರ್ ಹಾಜಿ ಸಂಚಾಲಕರಾಗಿಯೂ ಇದ್ದ ಸಮಿತಿ ಯಲ್ಲಿ ಸುಪ್ರಿಂ ಸಿದ್ದೀಖ್ ಹಾಜಿ, ಹೈಸಂ ಶಕೀರ್ ಹಾಜಿ, ಮಲ್ಲೂರು ಅಶ್ರಫ್ ಸಅದಿ ಮುಂತಾದವರಿದ್ದರು. ಇದರ ಉದ್ಘಾಟನೆಯ 2009 ನವಂಬರ್ 18 ಬುಧವಾರ ಮಂಗ ಳೂರು ಝೀನತ್ ಭಕ್ಷ್ ಸಭಾಂಗಣದದಲ್ಲಿ ನಡೆಯಿತು. ನಂತರ ನಗರದ ವಿವಿಧೆಡೆಯಲ್ಲಿ ನಿರಂತರ ಖುರ್‌ಆನ್ ಕ್ಲಾಸ್‌ಗಳು ನಡೆದವು.

ನವಂಬರ್ 24 ಮಂಗಳವಾರ ಜಾವಗಲ್ ಬಾಬಾ ಖಲಂದರ್ ಶಾಹ್ ಪೀರ್‌ವಲಿರವರು ನಿಧನರಾದದ್ದು ಧಾರ್ಮಿಕ ವಲಯದಲ್ಲಿ ದೊಡ್ಡ ಸುದ್ದಿಯಾಗಿತ್ತು. ಅವರ ಅಂತ್ಯ ಸಂಸ್ಕಾರ ಕಾರ್ಯದಲ್ಲಿ ಲಕ್ಷಾಂತರ ಜನ ಪಾಲ್ಗೊಂಡಿದ್ದರು. ಅಪಾರ ಪ್ರವಾದಿ ಪ್ರೇಮಿಯಾಗಿ ಗುರುತಿಸಲ್ಪಟ್ಟಿದ್ದ ಅವರು ದ.ಕ. ಜಿಲ್ಲೆಯ ಅನೇಕ ಉರೂಸ್ ಮತ್ತಿತರ ವೇದಿಕೆಗಳಲ್ಲಿ ಒಂದು ಕಾಲದಲ್ಲಿ ಪ್ರಮುಖ ಆಕರ್ಷಣೆಯಾಗಿದ್ದರು. ಈಗ, ಹಾಸನ ಜಿಲ್ಲೆಯ ಜಾವಗಲ್ ರಾಜ್ಯದ ಪ್ರಮುಖ ತೀರ್ಥ ಕೇಂದ್ರವಾಗಿದೆ.

2010 ಜನವರಿ 1 ಶುಕ್ರವಾರ ಅಸರ್ ನಮಾಝಿನ ಬಳಿಕ ಗುರುಕಂಬಳ ಸಯ್ಯಿದ್ ಅಸ್ರಾರುದ್ದೀನ್ ದರ್ಗಾ ಝಿಯಾರತ್‌ನೊಂ ದಿಗೆ ಬಜಪೆಯಲ್ಲಿ ಎಸ್ಸೆಸ್ಸೆಫ್‌ನ ಐತಿಹಾಸಿಕ ಇಪ್ಪತ್ತನೇ ವಾರ್ಷಿಕ ಪ್ರಾರಂಭವಾಯಿತು. ಜನವರಿ 2ರಂದು ನಡೆದ ರಾಜ್ಯ ಮಹಾಸಭೆ ಯಲ್ಲಿ ನಾಲ್ಕು ವರ್ಷಗಳ ನನ್ನ ಅಧ್ಯಕ್ಷ ಹುದ್ದೆ ಕೊನೆಗೊಂಡು ಶಾಫಿ ಸಅದಿ ಬೆಂಗಳೂರು ರಾಜ್ಯಾಧ್ಯಕ್ಷರಾಗಿಯೂ ಕೆ.ಎಂ. ಸಿದ್ದೀಖ್ ಮೋಂಟುಗೋಳಿ ಪ್ರಧಾನ ಕಾರ್ಯದರ್ಶಿ ಯಾಗಿಯೂ ಆಯ್ಕೆಯಾದರು. ಜನವರಿ 3 ಭಾನುವಾರ ಸಮ್ಮೇಳನ ಗಂಭೀರವಾಗಿ ಕೊನೆಗೊಂಡಿತು.

ಫೆಬ್ರವರಿ 10 ಬುಧವಾರ ಕಾಸರಗೋಡ್ ಜಿಲ್ಲೆಯ ನೀಲೇಶ್ವರ - ತೈಕ್ಕಡಪ್ಪುರಂ ಎಂಬಲ್ಲಿ ಭವ್ಯ ಮಸೀದಿಯೊಂದರ ಉದ್ಘಾಟ ನಾ ಸಮಾವೇಶದ ವೇದಿಕೆಯಲ್ಲಿ ಅಚ್ಚರಿಯ ವಾಗ್ಮಿಯೊಬ್ಬರು ನನಗೆ ಪರಿಚಯವಾದರು. ಕಾಞಂಗಾಡ್ ಕಾಲೇಜೊಂದರಲ್ಲಿ ಉಪನ್ಯಾ ಸಕನಾಗಿರುವ ಎಂ.ಎ. ಪದವೀಧರರಾದ ಇವರ ಹೆಸರು ಕೊಪ್ಪಲ ಚಂದ್ರಶೇಖರ್. ಖುರ್‌ಆನ್ ಆಯತ್‌ಗಳನ್ನು ಅರಬಿ ಉಚ್ಚಾರಗಳನ್ನು ಕರಾರುವಾಕ್ಕಾಗಿ ಬಳಸುವ ಅವರು ಒಬ್ಬ ಮುಸ್ಲಿಂ ಆಲಿಂಗೆ ಕಮ್ಮಿಯಿ ಲ್ಲದಂತೆ ರಾಗವಾಗಿ 'ವಅಳ್'ನ ದಾಟಿಯಲ್ಲಿ ಭಾಷಣ ಮಾಡುತ್ತಿದ್ದರೆ ಸಭಿಕರಿಗೆ ಬೆರಗೋ ಬೆರಗು. ಇಸ್ಲಾಮೀ ಚರಿತ್ರೆಗಳನ್ನು ಉಲ್ಲೇಖಿಸುವ ಅವರು ಅದಕ್ಕೆ ಸಮಾನವಾದ ಸಂದರ್ಭಗಳನ್ನು ವೇದೋಪನಿಷತ್ತುಗಳಿಂದ ತಂದು ಸಮೀಕರಿಸಿ ವಿಶಿಷ್ಟ ಶೈಲಿಯ ಸಮನ್ವ ಯ ಪ್ರಭಾಷಣವನ್ನು ನಿರರ್ಗಳವಾಗಿ ನಿರ್ವ ಹಿಸುತ್ತಿದ್ದರು. ಈಗಲೂ ಕಾಸರಗೋಡಿನ ಹಲವು ಸೌಹಾರ್ದ ಸಭೆಗಳಲ್ಲಿ ಕೊಪ್ಪಲ್ ಚಂದ್ರಶೇಖರ್ ಸಾನಿಧ್ಯ ಕಂಡು ಬರುತ್ತದೆ.

2010 ಮಾರ್ಚ್ 19 ಶುಕ್ರವಾರ ಭಾರತದ ಹೊರ ದೇಶವೊಂದರಲ್ಲಿ ಜುಮಾ ಖುತ್‌ಬಾ ನಿರ್ವಹಿಸುವ ವಿಶೇಷ ಅವಕಾಶ ಒದಗಿ ಬಂತು. ಓಮಾನ್ ದೇಶದ ಗಾಲಃ ಎಂಬಲ್ಲಿನ 'ಗಲ್ಫಾರ್ ಕ್ಯಾಂಪ್'ನ ಮಸೀದಿ ಯೊಂದರ ಖತೀಬ್ ಆದಿನದ ಖುತ್‌ಬಃ ನನಗೆ ಬಿಟ್ಟು ಕೊಟ್ಟರು. ಅದು ನನ್ನ ಎರಡನೇ ಓಮಾನ್ ಸಂದರ್ಶನ ವೇಳೆ. ಅದಲ್ಲದೆ ಸಮೀಪದ 'ಅಲ್ ಖೂದ್' ಖೂದ್ ಎಂಬಲ್ಲಿ ಎಡಪದವು ಡಾ. ಅಬ್ದುರ್ರಹ್ಮಾನ್ ಅವರ ಮನೆಯಲ್ಲಿ ಮಧ್ಯಾಹ್ನ ಊಟಕ್ಕೆ ಹೋದಾಗ ಮೊದಲ ಬಾರಿ ಒಂಟೆ ಮಾಂಸದ ರುಚಿ ಸವಿಯಲು ಸಂದರ್ಭವೊದಗಿ ಬಂತು.

2010 ಮೇ 26 ಬುಧವಾರ ಜೀವನದ ಲ್ಲೊಂದು ಮಹತ್ತರ ತಿರುವು. ಹುಟ್ಟಿ ಬೆಳೆದ ನನ್ನ ಊರು ಕಕ್ಕಿಂಜೆಗೆ ನಾನು ಅಂದು ವಿದಾಯ ಕೋರಿದೆ. ಕೆಲಸ ಕಾರ್ಯಗಳೆಲ್ಲವೂ ಮಂಗ ಳೂರು ಪರಿಸರದಲ್ಲಿ ಇದ್ದ ಕಾರಣ ಅಲ್ಲಿಂದ ಎಂಬತ್ತಕ್ಕೂ ಮಿಕ್ಕ ಕಿ.ಮೀ. ದೂರವಿರುವ, ಸರಿಯಾಗಿ ವಾಹನ ಸೌಕರ್ಯವಿಲ್ಲದ ಜನ್ಮನಾಡಿಗೆ ಅನಿವಾರ್ಯವಾಗಿ ವಿದಾಯ ಹೇಳಲೇ ಬೇಕಿತ್ತು. ತಲಪಾಡಿ ಸಮೀಪ ಕೆ.ಸಿ. ನಗರದಲ್ಲೊಂದು ಮನೆಯ ಮಹಡಿಯ ಮೇಲಿನ ಮನೆಯಲ್ಲಿ ಬಾಡಿಗೆಗೆ ವಾಸ್ತವ್ಯ ಗೊತ್ತುಪಡಿಸಲಾಗಿ ಮೇ 30 ಭಾನುವಾರ ಅದರ ಉದ್ಘಾಟನೆಯನ್ನು ನನ್ನ ಬಾವ ಕಲ್ಲಕಟ್ಟ ಪೂಕುಂಞಿ ತಂಙಳ್ ನಿರ್ವಹಿಸಿ ಕೊಟ್ಟರು. ಸುಳ್ಯ ತಾಲೂಕಿನ ಜಾಲ್ಸೂರು - ಕನಕಮಜಲು ನಿವಾಸಿಯಾದ ನನ್ನ ತಂದೆ ಮರ್‌ಹೂಂ ಎಂ.ಎಸ್. ಮೂಸಾ ಮುಸ್ಲಿ ಯಾರ್ 1966ರಲ್ಲಿ ವಿವಾಹದ ಬಳಿಕ ನನ್ನ ತಾಯಿಯ ಊರಾದ, ಬೆಳ್ತಂಗಡಿ ತಾಲೂಕಿನ ಕಕ್ಕಿಂಜೆಗೆ ವಾಸ್ತವ್ಯ ಬದಲಾಯಿಸಿದ್ದರು. ನನ್ನ ತಾಯಿಯ ತಂದೆ ಉಮರ್ ಮುಸ್ಲಿಯಾರ್ ಸುದೀರ್ಘ ಮೂವತ್ತಮೂರು ವರ್ಷಗಳ ಕಾಲ ಕಕ್ಕಿಂಜೆಯಲ್ಲಿ ಖತೀಬ್ ಆಗಿ 1968ರಲ್ಲಿ ನಿವೃತ್ತರಾದಾಗ ಅವರ ಉತ್ತರಾಧಿಕಾರಿ ಯಾಗಿ ತಂದೆ ಅಲ್ಲಿ ಖತೀಬ್ ಮತ್ತು ಮುದರ್‍ರಿಸ್ ಆಗಿ ನೇಮಕಗೊಂಡದ್ದು, ಇದು 1979ರವರೆಗೆ ಮುಂದುವರಿಯಿತು. ಈ ಮಧ್ಯೆ 1970ರಲ್ಲಿ ಅಕ್ರಮ ಸಕ್ರಮ ವ್ಯವಸ್ಥೆಯಡಿ ಕಕ್ಕಿಂಜೆಯಲ್ಲಿ ತಂದೆ ಸ್ವಲ್ಪ ಜಾಗ ಸ್ವಾಧೀನ ಪಡಿಸಿ ಅಲ್ಲಿ ಮನೆ ನಿರ್ಮಿಸಿದ್ದರು. ಉಮರ್ ಮುಸ್ಲಿಯಾರರ ತಂದೆ ಅಹ್ಮದ್ ಮುಸ್ಲಿ ಯಾರ್ ಎಂಬ

ಅಬ್ಬು ಮುಕ್ರಿಕ ಚಾರ್ಮಾಡಿ ಮಸೀದಿಯ ಸ್ಥಾಪಕರಾಗಿದ್ದು ಕಕ್ಕಿಂಜೆ ಮಸೀದಿಯಲ್ಲಿಯೂ ಇಪ್ಪತ್ತು ವರ್ಷಗಳ ಕಾಲ ಸೇವೆಗೈದಿದ್ದರು. ಅವರ ತಂದೆ ಬಂಟ್ವಾಳ ತಾಲೂಕಿನ ಮಿತ್ತೂರು ಮೂಲದ ಉಮರ್ ಎಂಬವರಾಗಿದ್ದು ಹಾಡು ರಚನೆ ಯಲ್ಲೂ ಹಾಡುವುದರಲ್ಲೂ ನಿಷ್ಣಾತರಾಗಿ ಪಾಟ್ ಉಮರಾಕ ಎಂದು ಪ್ರಸಿದ್ಧರಾ ಗಿದ್ದರಂತೆ. ಈ ಪರಂಪರೆಯಲ್ಲಿ ಉಮರ್, ಅಹ್ಮದ್ ಎಂಬ ಹೆಸರುಗಳು ಪುನರಾವರ್ತನೆ ಯಾಗುವುದು ಕಂಡು ಬರುತ್ತಿದ್ದು ಇದರ ಕಾರ ಣ ಏನೆಂಬ ಕುತೂಹಲಕ್ಕೆ ಉತ್ತರ ಸಿಕ್ಕಿಲ್ಲ.

ನನ್ನ ತಾಯಿಯ ತಾಯಿ, ಅತ್ಯುತ್ತರ ಕೇರಳದ ಉದ್ಯಾವರದಿಂದ ಬಂದು ಬೆಳ್ತಂಗಡಿ ಯ ಉಜಿರೆಯಲ್ಲಿ ಮದುವೆಯಾಗಿ ಅಲ್ಲಿ ಯೇ ನೆಲೆಸಿದ್ದ ಸಯ್ಯಿದ್ ಮುಹಮ್ಮದ್ ಕುಂಞಿಕೋಯ ತಂಙಳ್ ಅವರ ಪುತ್ರಿ ಸಯ್ಯಿದತ್ ಉಮ್ಮು ಹಬೀಬ ಎಂಬ ಉಮ್ಮಾಬಿ ಅಹ್ಲ್‌ಬೈತ್‌ನ 'ಅಲ್ ಹಾದಿ' ಕುಟುಂಬಕ್ಕೆ ಸೇರಿದವರಾಗಿದ್ದರು. ಹೀಗೇ ಕುಟುಂಬಕ್ಕೆ ಒಂದು ಶತಮಾನಕ್ಕೂ ಅಧಿಕದ ನಂಟಿರುವ ಇದೇ ಕಕ್ಕಿಂಜೆಯಲ್ಲಿ ನನ್ನ ಜನನ, ಪ್ರಾಥಮಿಕ ಶಿಕ್ಷಣ, ವಿವಾಹವೆಲ್ಲವೂ ನಡೆಯಿತು. ಜೀವನದ ಮೂವತ್ತೆಂಟು ಸಂವತ್ಸರಗಳನ್ನು ಇಲ್ಲಿ ಕಳೆದು ಹೆಚ್ಚಿನ ಸೌಕರ್ಯಕ್ಕಾಗಿ ಜನ್ಮ ನಾಡನ್ನು ತೊರೆದೆ.

ಸುನ್ನೀ ಸಂಘಟನಾ ರಂಗದ ಅಭಿಪ್ರಾಯ ಭಿನ್ನತೆಗಳಲ್ಲಿ ನಾನು ಒಂದು ಕಡೆಯಾದರೆ ನನ್ನೂರು ಇನ್ನೊಂದು ಕಡೆಯಲ್ಲಿ ನಿಂತಿತು. ವಾತಾ ವರಣ ಉಸಿರುಗಟ್ಟಿಸಿದಾಗ ನೆಮ್ಮದಿಯ ನೆಲೆ ಗಾಗಿ ವಲಸೆ ಅನಿವಾರ್ಯವೆನಿಸಿತು...

# 29

## ಸುನ್ನೀ ವಿದ್ಯಾರ್ಥಿ ಶಕ್ತಿಯು ರಾಜ್ಯ ಮತ್ತು ದೇಶದ ಗಡಿ ದಾಟಿದಾಗ...

2011 ಜನವರಿ 29 ಭಾನುವಾರ ಉಡುಪಿ ಜಿಲ್ಲೆಯ ಮೂಳೂರಿನಲ್ಲಿ ರಾಜ್ಯ ಎಸ್ಸೆಸ್ಸೆಫ್ ಮಹಾ ಸಭೆಯ ದಿನ. ನನ್ನ ಸಾಂಘಿಕ ಜೀವನದಲ್ಲಿ ಸಾರ್ಥಕತೆ ಮತ್ತು ಬೇಸರದ ಸಮ್ಮಿಶ್ರ ಅನುಭವ. 1995ರಿಂದ ಆರಂಭ ಗೊಂಡ ಎಸ್ಸೆಸ್ಸೆಫ್ ಸದಸ್ಯತನ, ಸಂಘಟ ನೆಯ ಪ್ರಾಯ ಮಿತಿ ದಾಟಿದ ಹಿನ್ನೆಲೆಯಲ್ಲಿ ಅಂದು ಕೊನೆಗೊಂಡಿತು. 16ವರ್ಷಗಳ ಅವಧಿ ಯಲ್ಲಿ, ಮೊಟ್ಟ ಮೊದಲಿಗೆ ದ.ಕ. ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಸಂಘಟನೆಗೆ ಪ್ರವೇಶಗೈದ ನಾನು ಅನಂತರ ಜಿಲ್ಲಾಧ್ಯಕ್ಷ ನಾಗಿ, ರಾಜ್ಯ ಸಮಿತಿಯ ಸಂಘಟನಾ ಕಾರ್ಯ ದರ್ಶಿಯಾಗಿ, ಕರ್ನಾಟಕ ದಕ್ಷಿಣ ಪ್ರಾಂತ್ಯ ಸಮಿತಿಯ ಅಧ್ಯಕ್ಷನಾಗಿ, ರಾಜ್ಯ ಉಪಾಧ್ಯಕ್ಷ ನಾಗಿ ಕೊನೆಗೆ ನಾಲ್ಕು ವರ್ಷಗಳ ಕಾಲ ರಾಜ್ಯಾ ಧ್ಯಕ್ಷನಾಗಿ ಸಂಘಟನೆಗೆ ಸೇವೆಗೆಯ್ಯುವ ಮಹ ದವಕಾಶ ಲಭಿಸಿದ್ದು ಬದುಕಿನ ಸಾರ್ಥಕತೆ ಯಾಗಿ ಸಂತೋಷ ತಂದಿದೆ. ಧಾರ್ಮಿಕ ಜಾಗೃತಿಯ ಹೋರಾಟದ ಅನನ್ಯವಾದ 'ವಿದ್ಯಾರ್ಥಿ ಚಳವಳಿ'ಯ ಕಾಲ ಬದುಕಿನಲ್ಲಿ ಇನ್ನೆಂದೂ ಮರುಕಳಿಸದು ಎಂದು ನೆನೆದಾಗ ಅಸಾಧ್ಯ ದುಃಖವಾಗುತ್ತಿತ್ತು. ಎಸ್ಸೆಸ್ಸೆಫ್‌ನ ನವೋದಯ ಚಳವಳಿಗೆ ಚಾಲನೆ ನೀಡಿದ ಜಿ.ಎಂ. ಕಾಮಿಲ್ ಸಖಾಫಿ, ಅವರು ಮುದರ್ರಿಸ್ ಆಗಿದ್ದ ಮಂಗಳೂರಿನ ಸೂರಿಂಜೆ ಜುಮಾ ಮಸ್ಜಿದ್‌ನಲ್ಲಿ ನಾವೆಲ್ಲ ಆಗಾಗ ಸಭೆ ಸೇರುವುದು, ಚರ್ಚಿಸುವುದು, ರಾತ್ರಿಗಳನ್ನು ಹಗಲಾಗಿಸಿ ಯೋಜನೆ ಹಾಕುವುದು. ರಾಜ್ಯಾದ್ಯಂತ ಪ್ರವಾಸ ಮಾಡುವುದು ಇವೆಲ್ಲ ಯಾವತ್ತೂ ಮರೆಯಲಾಗದ ನಿತ್ಯ ಹರಿತ ನೆನಪುಗಳು. ಪಿ.ಪಿ. ಅಹ್ಮದ್ ಸಖಾಫಿ, ಎಸ್.ಪಿ. ಹಂಝ ಸಖಾಫಿ, ಜಿ.ಎಂ. ಕಾಮಿಲ್ ಸಖಾಫಿ, ಮಲ್ಲೂರು ಅಶ್ರಫ್ ಸಅದಿ ಹಾಗೂ ಈ ಲೇಖಕನನ್ನೂ ಒಳಗೊಂಡ ಐದು ಮಂದಿಯ ತಂಡವು ಸದಾ ಸಮಯ ಸಂಘಟನಾ ಅಭಿವೃದ್ಧಿಯ ಬಗ್ಗೆ ಮಾತ್ರ ಯೋಚಿಸುವ, ಕಾರ್ಯಪ್ರವೃತ್ತರಾಗುವ ಶುಭ ಕಾಲವಾಗಿತ್ತಂದು. ಕ್ರಮೇಣ ನಮ್ಮ ತಂಡಕ್ಕೆ ಅಬ್ದುಲ್ ಹಮೀದ್ ಬಜಪೆ ಸೇರಿ ಕೊಂಡರು. ಸಂಘಟನೆಯ ಲೌಕಿಕ ವಿದ್ಯಾರ್ಥಿ ವೃಂದದ ಪ್ರತಿನಿಧಿಯಾಗಿ ಹಮೀದ್ ಬಜಪೆ ಸಮರ್ಥವಾಗಿ ಕಾರ್ಯನಿರ್ವಹಿಸಿದರು. ನವೋದಯ ಕಾಲದ ಮೊಟ್ಟ ಮೊದಲ 'ಭೌತಿಕ' ಪ್ರಧಾನ ಕಾರ್ಯದರ್ಶಿಯೂ ಅವರಾದರು. 2011ರ ಮಹಾ ಸಭೆಯಲ್ಲಿ ಮೊದಲ ಬಾರಿಗೆ ದ.ಕ. ಮತ್ತು ಕೊಡಗು ಒಳಗೊಂಡ 'ಮಲಯಾಳಂ' ವ್ಯಾಪ್ತಿಯ ಹೊರಗಿನಿಂದ ಹನಫೀ ವಿಭಾಗದ ವ್ಯಕ್ತಿಯೊಬ್ಬರನ್ನು ಅಧ್ಯಕ್ಷನಾಗಿ ಕಾಣುವ ಅವ ಕಾಶವು ಸುನ್ನೀ ಕನ್ನಡಿಗರಿಗೆ ಒದಗಿ ಬಂತು. ಹಾಸನ ಜಿಲ್ಲೆಯ ಚೆನ್ನರಾಯ ಪಟ್ಟಣ ಮೂಲದ ಡಾ. ಮುಹಮ್ಮದ್ ಫಾಝಿಲ್ ರಝ್ವಿ ಎಂಬ ಕಾವಲಕಟ್ಟೆ ಹಝ್ರತ್ ರಾಜ್ಯಾಧ್ಯಕ್ಷ ರಾಗಿ ಆಯ್ಕೆಯಾದರು.

ಅನಂತರ ಸಂಘಟನೆ ದಕ್ಷಿಣ ಭಾರತ ಮಟ್ಟದಲ್ಲೂ ರಾಷ್ಟ್ರೀಯ ಮಟ್ಟದಲ್ಲೂ ಸಕ್ರಿ ಯವಾಗುವ ಹಂತ ಬಂದಾಗ ಸದಸ್ಯತ್ವದ ಅವಧಿಯ ನಂತರ ಎಸ್ಸೆಸ್ಸೆಫ್ ಕಾರ್ಯಕರ್ತ ನಾಗಿ ದುಡಿಯಲು ಹೆಚ್ಚುವರಿ ಅವಕಾಶ ಸಿಕ್ಕಿದ್ದು ಇಂದಿಗೂ ಮುಂದುವರಿಯುತ್ತಿದೆ.

2011 ಫೆಬ್ರವರಿ 18 ಶುಕ್ರವಾರ ಯು.ಎ.ಇ. ಯ ಅನಿವಾಸಿ ಕನ್ನಡಿಗರ ಪಾಲಿಗೆ ಹಬ್ಬದ ದಿನವಾಗಿತ್ತು. ಊರಿನ ವಿದ್ಯಾ ಸಂಸ್ಥೆಗಳ ಪೋಷಕ ಸಂಘಟನೆಗಳನ್ನು ಕಟ್ಟಿ ಅದರ ಆಶ್ರಯದಲ್ಲಿ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಿದ್ದ ಸುನ್ನೀ ಕಾರ್ಯಕರ್ತರ ಪಾಲಿಗೆ ಮೇಲಿನ ದಿನ ಮಹತ್ತರವಾಗಿತ್ತು. ದುಬೈಯಲ್ಲಿ ನೆಲೆಸಿದ್ದ ಕೆಲವು ಉತ್ಸಾಹಿ ಎಸ್ಸೆಸ್ಸೆಫ್ ಕಾರ್ಯಕರ್ತರ ಮನದಲ್ಲಿ ಮೂಡಿದ ಆಶಯದಂತೆ ದುಬೈ ಕೇಂದ್ರವಾಗಿ ರೂಪುಗೊಂಡಿದ್ದ ಕರ್ನಾಟಕ ಎಸ್.ವೈ.ಎಸ್‌ನ ಅಧೀನದಲ್ಲಿ ಆ ದಿನ ದುಬೈ ಮರ್ಕಝ್ ಸಭಾಂಗಣದಲ್ಲಿ ಬೃಹತ್ 'ಹುಬ್ಬುರ್ರಸೂಲ್' ಸಮ್ಮೇಳನ ನಡೆದು ಕನ್ನಡಿಗ ಸುನ್ನಿಗಳಲ್ಲಿ ಹೊಸ ಹುಮ್ಮಸ್ಸು ಮತ್ತು ನವ ಚೈತನ್ಯಕ್ಕೆ ಕಾರಣವಾಗಿತ್ತು. ಭಾಷಣಕಾರರಾಗಿ ನಾನು ಮತ್ತು ಕಾವಲಕಟ್ಟೆ ಹಝ್ರತ್ ಇದ್ದೆವು. ಯು.ಎ.ಇ. ರಾಷ್ಟ್ರದಾ ದ್ಯಂತ ಕನ್ನಡಿಗ ಸುನ್ನಿಗಳಿಗೆ ಸ್ವಂತವಾಗಿ ಒಂದು ಕ್ರಿಯಾ ವೇದಿಕೆ ಬೇಕೆಂಬ ಉತ್ಕಟ ವಾಂಛೆಗೆ ಆ ಸಮಾವೇಶ ಕಿಡಿ ಹೊತ್ತಿಸಿತ್ತು.

ಮರ್ಕಝುಲ್ ಹುದಾದ ಅಗತ್ಯಕ್ಕಾಗಿ ನಾನು ದುಬೈ ಹೋಗಿದ್ದಾಗ ಅಲ್ಲಿನ ಕೆಲವು ಉತ್ಸಾಹಿ ಕಾರ್ಯಕರ್ತರು ಭೇಟಿಯಾಗಿ ಕನ್ನಡಿಗರಿಗೆ ಸ್ವಂತವಾದ

ಸುನ್ನೀ ಸಂಘಟನೆ ರಚಿಸುವ ಬಗ್ಗೆ ಚರ್ಚಿಸಿದ್ದರು. ಅಬೂಬಕರ್ ಈಶ್ವರ ಮಂಗಲ, ದಾವೂದ್ ವಿರಾಜಪೇಟೆ, ಅಸ್ಗರ್ ಮೂರ್ನಾಡು, ಮರ್ಹೂಮ್ ಮೊೖದಿನ್ ಕುಂಞಿ ಮುಸ್ಲಿಯಾರ್ ಉಕ್ಕುಡ ಮುಂತಾದ ವರು ಈ ತಂಡದಲ್ಲಿದ್ದರು. ಚರ್ಚೆ ಇನ್ನಷ್ಟು ವಿಸ್ತರಿಸಿ, ಕಾರ್ಯರೂಪಕ್ಕಿಳಿಸುವ ಬಗ್ಗೆ ದುಬೈ ದೇರಾದಲ್ಲಿದ್ದ ಕೇರಳ ಎಸ್.ವೈ.ಎಸ್.ನ ಮದ್ರಸಾದಲ್ಲಿ ಪುಟ್ಟ ಸಮಾವೇಶವೊಂದನ್ನು ಕರೆದು 'ಕರ್ನಾಟಕ ಎಸ್.ವೈ.ಎಸ್'ಎಂಬ ಸಂಘಟನೆಗೆ ರೂಪು ಕೊಡಲಾಯಿತು. ಇದರ ಪ್ರಥಮ ಅಧ್ಯಕ್ಷರಾಗಿದ್ದ ವಿಟ್ಲ- ಉಕ್ಕುಡದ ಮೊೖದಿನ್ ಕುಂಞಿ ಮುಸ್ಲಿಯಾರ್ ಕಳೆದ ವರ್ಷ ಅಲ್ಪ ಕಾಲದ ಅಸೌಖ್ಯದಿಂದ ನಿಧನರಾ ದರು. ಇಂದು ಆ ಪುಟ್ಟ ಪ್ರಯತ್ನ ಗಲ್ಫ್ ಪ್ರದೇಶವನ್ನೇ ಆವರಿಸಿ 'ಕೆ.ಸಿ.ಎಫ್' ಎಂಬ ಬೃಹತ್ ಸಂಘ ಶಕ್ತಿಯಾಗಿ ಬೆಳೆದು ಬರುತ್ತಿದೆ. ಇಲ್ಲಿ ಎಸ್ವೈಎಸ್, ಎಸ್ಸೆಸ್ಸೆಫ್‌ಗಳಲ್ಲಿ ದುಡಿದಿದ್ದ ಕಾರ್ಯಕರ್ತರು ಗಲ್ಫ್‌ಗೆ ತೆರಳಿದ ತಕ್ಷಣ 'ಕರ್ನಾಟಕ ಕಲ್ಚರಲ್ ಫೌಂಡೇಶನ್'ನ ತೆಕ್ಕೆಗೆ ಬಿದ್ದು ತಮ್ಮ ಸಂಘ ಪ್ರಜ್ಞೆಯನ್ನು ಸಮ ರ್ಪಕವಾಗಿ ಬಳಸಿಕೊಳ್ಳಲು ಅವಕಾಶ ವನ್ನು ಪಡೆದುಕೊಂಡಿದ್ದಾರೆ. ಗಲ್ಫ್ ಕನ್ನಡಿಗ ಸುನ್ನಿ ಗಳ ಪಾಲಿಗೆ ಇಂದು 'ಕೆಸಿಎಫ್' ಸ್ಫೂರ್ತಿಯ ಸೆಲೆ.

2011 ಫೆಬ್ರವರಿ 25 ರಂದು ಕುವೈತ್‌ನಲ್ಲಿ ನಡೆದ ಕನ್ನಡಿಗ ಸುನ್ನಿಗಳ ಬೃಹತ್ ಮೀ ಲಾದ್ ಸಮಾವೇಶ ಆಕರ್ಷಕವಾಗಿತ್ತು. ಅಲ್ಲಿನ ಸುನ್ನೀ ಕಾರ್ಯಕರ್ತರು ರಚಿಸಿ ಕೊಂಡಿದ್ದ ಕುವೈತ್ ಕರ್ನಾಟಕ ಸುನ್ನೀ ಎಸೋಸಿಯೇಶನ್ (ಕೆ.ಕೆ.ಎಸ್.ಎ) ನ ಮೀ ಲಾದ್ ಸಮಾವೇಶದಲ್ಲಿ ಭಾಷಣಕ್ಕಾಗಿ ನನಗೆ ಆಹ್ವಾನ ಬಂತು. ಒಂದು ದೇಶಕ್ಕೆ ಕೇವಲ ಭಾಷಣದ ಉದ್ದೇಶದಿಂದ ಹೊರಟ ಮೊದಲ ಅನುಭವವಾಗಿತ್ತದು. ಫೆಬ್ರವರಿ 24 ರಂದು ದುಬೈಯಿಂದ ಕುವೈತ್ ಏರ್‌ಪೋರ್ಟ್‌ಗೆ ಬಂದಿಳಿದಾಗ ಕೆಕೆಎಸ್ಎ ಮುಖಂಡ ಹಬೀಬ್ ಕೋಯ ನೇತೃತ್ವದ ಸುನ್ನೀ ಕಾರ್ಯಕರ್ತರ ದಂಡೇ ವಿಮಾನ ನಿಲ್ದಾಣದಲ್ಲಿ ಸಂಗಮಿಸಿ ತ್ತು. ಭಾಷಣ ಬದುಕಿನ ರೋಮಾಂಚನಾಕಾರಿ ಸಂದರ್ಭ. ಅನಂತರ ಕುವೈತ್‌ನ ವಿವಿಧ ಭಾಗ ಗಳಲ್ಲಿ ವಿವಿಧ ಸಂಘಟನೆಗಳ ಕಾರ್ಯಕ್ರಮ ಗಳು ಏರ್ಪಾಡಾಗಿತ್ತು. ಸದ್ದಾಂ ಹುಸ್ಸೈನ್‌ನ ಕುವೈತ್ ಅತಿಕ್ರಮಣದ ನೇರ ಸಾಕ್ಷಿಯಾಗಿದ್ದ ಕಡಂಬು ಅಬೂಬಕರ್, ಕುವೈತ್‌ನ ವಿವಿಧ ಕಡೆಗಳಿಗೆ ತನ್ನ ಕಾರಿನಲ್ಲಿ ನಮ್ಮನ್ನು ಕೊಂಡೊ ಯ್ಯುತ್ತಾ ಗಲ್ಫ್ ಯುದ್ಧದ ದೃಕ್‌ಸಾಕ್ಷ್ಯ ಗಳನ್ನು ವಿವರಿಸುತ್ತಿದ್ದರು.

2011 ಮೇ 29 ಭಾನುವಾರ, ಬೆಂಗಳೂ ರಿನಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಎಸ್ಸೆಸ್ಸೆಫ್ ಅಖಿಲ ಭಾರತ ಘಟಕಕ್ಕೆ ರೂಪು ಕೊಡಲಾಯಿತು. ಕೇರಳ ಕಲ್ಲಿಕೋಟೆಯ ಸಯ್ಯಿದ್ ಮುಹಮ್ಮದ್ ತುರಾಬ್ ತಂಙಳ್ ಸಖಾಫಿ ಅಧ್ಯಕ್ಷರಾಗಿಯೂ ಬೆಂಗಳೂರಿನ ಇಂಜಿನಿಯರ್ ಅಬ್ದುರ್ರವೂಫ್ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಎಸ್ಸೆಸ್ಸೆಫ್ ಅವಧಿಯ ನಂತರ 2011 ಮೇ 23ರಂದು ರಾಜ್ಯ ಎಸ್.ವೈ.ಎಸ್. ಕಾರ್ಯಕಾರಿ ಸಮಿತಿ ಸದಸ್ಯನಾಗಿ ನಾನು ಆಯ್ಕೆಯಾದೆ. 1995ರಲ್ಲಿ ಎಸ್ಸೆಸ್ಸೆಫ್‌ನ ದ.ಕ. ಜಿಲ್ಲಾ ಮಹಾಸಭೆಯಲ್ಲಿ ಜಿಲ್ಲೆಯ ಸಂಘಟನಾ ಕಾರ್ಯದರ್ಶಿ ಹುದ್ದೆ ನನಗೆ ಒಲಿಯಿತು. ಎಸ್ವೈಎಸ್ ಚಟುವಟಿಕೆಗೂ ಅದೇ ಹುದ್ದೆ ಹೆಬ್ಬಾಗಿಲಾಯಿತು.

2011 ಜುಲೈ 6 ಬುಧವಾರ ಬದುಕಿನಲ್ಲಿ ಮರೆಯಲಾಗದ ದುಃಖ ದಿನ. ಆ ದಿನ ರಾತ್ರಿ 10 ಗಂಟೆಗೆ ನಮ್ಮ ಕುಟುಂಬದ ಬೆನ್ನೆಲುಬೂ ಸಮಾಜದ ಅಸಂಖ್ಯ ಜನರ ಆಶಾ ಕೇಂದ್ರವೂ ಆಗಿದ್ದ, ನನ್ನ ಮಾವ, (ತಾಯಿಯ ತಮ್ಮ ಹಾಗೂ ಪತ್ನಿಯ ತಂದೆ) ಸಯ್ಯಿದ್ ಮುಹ ಮ್ಮದ್ ಪಯೋಟ ತಂಙಳ್ ವಿಧಿವಶರಾ ದರು. ತನ್ನ ಆಧ್ಯಾತ್ಮಿಕ ಚಿಕಿತ್ಸೆ ಹಾಗೂ ಅಪಾರ ಕಾರುಣ್ಯದ ಒಡನಾಟಗಳ ಮೂಲಕ ಪ್ರದೇಶದ ಸಹಸ್ರಾರು ಜನರಿಗೆ ಅವರು ಅವಲಂಬವಾಗಿದ್ದರು. 1954ರಲ್ಲಿ ಕಕ್ಕಿಂಜೆ ಯಲ್ಲಿ ಹುಟ್ಟಿದ್ದ ಅವರು ವಿವಿಧ ಕಡೆಗಳಲ್ಲಿ ದರ್ಸ್ ವಿದ್ಯಾಭ್ಯಾಸ ಮುಗಿಸಿ ಹಲವು ಮಸೀದಿಗಳಲ್ಲಿ 'ಖತೀಬ್' ಆಗಿ ಕೊನೆಗೆ ಕಾಸರಗೋಡ್ ಜಿಲ್ಲೆಯ ವಿದ್ಯಾನಗರ ಸಮೀಪದ 'ಪಯೋಟ' ಎಂಬ ಕುಗ್ರಾಮದಲ್ಲಿ ಖತೀಬ್ ಆಗಿ ಕಾರ್ಯ ನಿರ್ವಹಿಸುವುದರ ಜತೆ ಜನರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುತ್ತಾ ಇಡೀ ಪ್ರದೇಶಕ್ಕೆ ಬೆಳಕಾಗಿದ್ದರು. ಚಿಕಿತ್ಸೆ ಮತ್ತು ಆಧ್ಯಾತ್ಮಿಕ ನಾಯಕತ್ವ ಮಾತ್ರವಲ್ಲದೆ ದುರ್ಬಲ ಜನರಿಗೆ ಧಾರಾಳವಾಗಿ ಆರ್ಥಿಕ ಸಹಾಯವನ್ನೂ ನೀಡುತ್ತಿದ್ದರು. ಪ್ರತಿ ದಿನ ಅವರ ಮನೆಯು ಸಂದರ್ಶಕರಿಂದ ತುಂಬಿ ತುಳುಕುತ್ತಿತ್ತು.

ಹೃದಯ ಸಂಬಂಧಿ ಖಾಯಿಲೆಯಿದ್ದರೂ ಸಕ್ರಿಯ ಚಟುವಟಿಕೆಗಳಿಂದ ಸದಾ ಕ್ರಿಯಾ ಶೀಲರಾಗಿದ್ದ ಅವರು ಇದ್ದಕ್ಕಿದ್ದಂತೆ ಇಹ ಲೋಕಕ್ಕೆ ವಿದಾಯ ಕೋರಿದರು. ತನ್ನ ಐವತ್ತೇಳನೇ ವಯಸ್ಸಿನಲ್ಲಿ...

ತನ್ನ ಅಭಿಲಾಷೆಯಂತೆ ಅವರ ಅಂತ್ಯ ವಿಶ್ರಾಂತಿ ಕೇಂದ್ರವು ಮುಹಿಮ್ಮಾತ್ ವಿದ್ಯಾ ಸಂಸ್ಥೆಯ ಆವರಣದಲ್ಲಿ, ಆಧ್ಯಾತ್ಮಿಕ ಧ್ರುವ ತಾರೆ ಸಯ್ಯಿದ್ ತ್ವಾಹಿರುಲ್ ಅಹ್ದಲ್ ತಂಙಳ್(ಖ.ಸಿ) ಅವರ ಮಖ್‌ಬರದ ಸಮೀಪವಿದ್ದು, ನೂರಾರು ಜನರು ಸಂದರ್ಶಿಸಿ ಸಾಂತ್ವನ ಪಡೆಯುತ್ತಿದ್ದಾರೆ. 2011 ಜುಲೈ 24 ಭಾನುವಾರ ಬದುಕು ಮತ್ತೊಂದು ತಿರುವಿಗೆ ಸಾಕ್ಷಿಯಾಯಿತು. ಬಹಳಷ್ಟು ನಿರೀಕ್ಷೆಯಿಂದ ಕಕ್ಕಿಂಜೆ ತೊರೆದು ತಲಪಾಡಿಗೆ ವಾಸ ಬದಲಿಸಿದ ನಮಗೆ ಮಾವನ ಮರಣದ ಹಿನ್ನೆಲೆಯಲ್ಲಿ, ತಲಪಾಡಿ ತೊರೆದು ಕಾಸರ ಗೋಡಿಗೆ ವಲಸೆ ಅನಿವಾರ್ಯವಾ ಯಿತು. ನಮ್ಮ ಮುಂದಿನ ಬದುಕು ಕಾಸರಗೋಡ್ - ಕಲ್ಲಕಟ್ಟೆ ಎಂಬಲ್ಲಿ ಮಾವನಿಲ್ಲದ ಮಾವನ ಮನೆಯಲ್ಲಿ ಮುಂದುವರಿಯಿತು. ಜೀವನದ ಕಠೋರ ವಾಸ್ತವಗಳು ಮುಖಾಮುಖಿಯಾದ ದಿನಗಳಾಗಿತ್ತವು.

ವಾಸ್ತವ್ಯ ತಲಪಾಡಿಯಿಂದ ಬದಲಾ ಯಿಸಿದ ಮೇಲೆ ಅಲ್ಲಿಯ ಮಸೀದಿ ಕೆಲಸವೂ ವರ್ಜಿಸಬೇಕೆನಿಸಿ 2011 ಜುಲೈ 29 ಶುಕ್ರವಾರ ನಾನು ತಲಪಾಡಿ ಬಿಲಾಲ್ ಜುಮಾ ಮಸೀದಿಯ ಖತೀಬ್ ಹುದ್ದೆಗೆ ರಾಜಿನಾಮೆ ನೀಡಿದೆ. ಹನ್ನೊಂದು ವರ್ಷಗಳ ಕಾಲ ಅಲ್ಲಿ ಮುದರ್ರಿಸ್, ಖತೀಬ್ ಮುಂತಾದ ಹುದ್ದೆ ಗಳನ್ನು ವಹಿಸಿ ಆ ಜವಾಬ್ದಾರಿಗಳು ಸಾಕೆನಿ ಸಿದಾಗ ಬದುಕಿನ ಮಗ್ಗುಲು ಬದಲಿಸಬೇಕೆಂಬ ಯೋಜನೆಯೊಂದಿಗೆ ಈ ರಾಜಿನಾಮೆ ಪ್ರಕಟಿಸಿದೆ. ಅದು ಸ್ವೀಕೃತವೂ ಆಯಿತು. ಆದರೆ ಭವಿಷ್ಯದ ಯೋಜನೆ ರೂಪುಗೊಂಡಿ ರಲಿಲ್ಲ.

2011 ಸೆಪ್ಟಂಬರ್ 3 ಶನಿವಾರ ತಮಿಳು ನಾಡಿನ ಕೊಯಂಬತ್ತೂರ್‌ನ ಎಸ್ಸೆಸ್ಸೆಫ್ ದಕ್ಷಿಣ ಭಾರತ ಘಟಕದ ಮಹಾಸಭೆ ಪ್ರಾರಂಭವಾಯಿತು. ಮರುದಿನ ನಡೆದ ಕೌನ್ಸಿಲ್‌ನಲ್ಲಿ ನಾನು ಎಸ್ಸೆಸ್ಸೆಫ್ ದಕ್ಷಿಣ ಭಾರತ ಸಮಿತಿಯ ಅಧ್ಯಕ್ಷನಾಗಿ ಆಯ್ಕೆ ಯಾದೆ. ಆವರೆಗೆ ಅಧ್ಯಕ್ಷರಾಗಿದ್ದ ಸಯ್ಯಿದ್ ತುರಾಬ್ ತಂಙಳ್ ಅವರು ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಈ ಆಯ್ಕೆ ನಡೆದಿತ್ತು. ಅದೇ ವರ್ಷ ಜನವರಿ 29ರಂದು ಮೂಳೂರಿನಲ್ಲಿ

ಕೊನೆಗೊಂಡಿದ್ದ ನನ್ನ ಎಸ್ಸೆಸ್ಸೆಫ್ ಕಾರ್ಯಾಚರಣೆಗೆ ಇಲ್ಲಿ ಮರುಜೀವ ಸಿಕ್ಕಿತ್ತು. 38ನೇ ಪ್ರಾಯದಲ್ಲಿ ಸದಸ್ಯತನದ ಅವಧಿ ಕಳೆದರೂ ಅಗತ್ಯ ಬಿದ್ದರೆ ಮೇಲ್ಘಟಕಗಳಲ್ಲಿ ಸೇವೆಯನ್ನು ಬಳಸಿ ಕೊಳ್ಳುವುದಕ್ಕೆ ಸಂಘಟನೆಯ ಸಂವಿಧಾನ ದಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದರಂತೆ ವಿವಿಧ ರಾಜ್ಯ ಘಟಕಗಳಿಂದ ವಿರಮಿಸಿದ ನಾಯಕರಿಗೆ ದಕ್ಷಿಣ ಭಾರತ ಘಟಕ ಮತ್ತು ರಾಷ್ಟ್ರೀಯ ಘಟಕಗಳಲ್ಲಿ ಮರುಜೀವ ನೀಡಲಾಗುತ್ತಿತ್ತು. ಕರ್ನಾಟಕ, ಕೇರಳ, ತಮಿಳುನಾಡು ಎಂಬ ಮೂರು ರಾಜ್ಯಗಳು ಮತ್ತು ಲಕ್ಷದ್ವೀಪ ಹಾಗೂ ಅಂಡಮಾನ್ ನಿಕೋಬಾರ್ ಎಂಬ ಕೇಂದ್ರಾಡಳಿತ ಪ್ರದೇಶ ಗಳು ಒಳಗೊಂಡ 'ದಕ್ಷಿಣ ಭಾರತ ಝೋನ್' ಸಂಘಟನೆಯ ಸಜೀವ ಬೇರುಗಳಿದ್ದ ಪ್ರದೇಶಗಳಾಗಿದ್ದವು. ಈ ಅವಧಿಯಲ್ಲಿ ರಾಜ್ಯದ ಹೊರಗಿನ ಸಂಘ ಚಟುವಟಿಕೆಗಳ ನೇರ ದೃಶ್ಯವನ್ನು ಕಂಡು ಸಾಕಷ್ಟು ಕಲಿಯಲು ಸಾಧ್ಯವಾಯಿತು. ಕೇರಳದ ಪಟ್ಟಿಕ್ಕಾಡ್ ಜಾಮಿಅದಲ್ಲಿ ಎಸ್ಸೆಸ್ಸೆಫ್ ಪ್ರಾರಂಭಗೊಂ ಡಂತೆ ಅದರ ಸಮಾನ ಲಕ್ಷ್ಯದೊಂದಿಗೆ ಉತ್ತರ ಪ್ರದೇಶದ ಅಲೀಘಡ್ ಮುಸ್ಲಿಂ ವಿ.ವಿ.ಯಲ್ಲಿ ಮುಸ್ಲಿ ಸ್ಟೂಡೆಂಟ್ಸ್ ಓರ್ಗನೈಝೇಶನ್ (ಎಂ.ಎಸ್.ಓ) ಎಂಬ ವಿದ್ಯಾರ್ಥಿ ಸಂಘಟನೆಯೊಂದು ರೂಪು ತಳೆದಿತ್ತು. ಎರಡೂ ಸಂಘಗಳ ಜನಕ ಕೇರಳದ ಸುನ್ನೀ ಚಳವಳಿಯ ಸ್ಫೋಟಕ ಸಾನಿಧ್ಯವಾದ ಅಡ್ವಕೇಟ್ ಎ.ಕೆ. ಇಸ್ಮಾಈಲ್ ವಫಾ ಅವರಾಗಿದ್ದರು. ತುರಾಬ್ ತಂಙಳ್ ಸಾರಥ್ಯದ ರಾಷ್ಟ್ರೀಯ ಎಸ್ಸೆಸ್ಸೆಫ್ ಈ ಎರಡೂ ತಂತುಗಳನ್ನು ಒಗ್ಗೂಡಿಸುವ ಬಗ್ಗೆ ಗಂಭೀರ ಚಿಂತನ- ಮಂಥನಕ್ಕೆ ವೇದಿಕೆ ಕಟ್ಟತೊಡಗಿತು.

# 30

## ತಾಜುಲ್ ಉಲಮಾರ ಮಂತ್ರದಿಂದ ನೋವು ಸ್ವಿಚ್ ಆಫ್ ಆದ ಕ್ಷಣ...

ದೇಶದ ಇಸ್ಲಾಮೀ ನವೋತ್ಥಾನದ ಕೇಂದ್ರ ಬಿಂದು ಎನಿಸಿದ ಕೇರಳದಲ್ಲಿ 'ಉಲಮಾ ಏಕ್ಟಿವಿಸಂ' ನ ಪ್ರಭಾವ ಅಷ್ಟಿಷ್ಟಲ್ಲ. ಉಲಮಾ ವಿಭಾಗವನ್ನು ಸಾರ್ವಜನಿಕ ಕ್ಷೇತ್ರದಲ್ಲಿ ತೊಡಗಿಸುವಂತೆ ಮಾಡಿ ಸಮುದಾಯದ ಸರಿಯಾದ ಮುನ್ನಡೆ ವಿದ್ವಾಂಸರಿಂದ ಮಾತ್ರ ಸಾಧ್ಯ ಎಂಬುವುದನ್ನೂ ಜಗತ್ತಿಗೆ ಮನವರಿಕೆ ಮಾಡಿಸಿಕೊಟ್ಟವರು ಖಮರುಲ್ ಉಲಮಾ ಕಾಂತಪುರಂ ಉಸ್ತಾದ್.

ಸಮುದಾಯದ ನವೋತ್ಥಾನದ ಹಾದಿಯಲ್ಲಿ ಉಲಮಾಗಳ ಅತಿ ಸಕ್ರಿಯತೆಯನ್ನು ಎರಡು ಕೇರಳ ಯಾತ್ರೆಗಳ ಮೂಲಕ ಎ.ಪಿ. ಉಸ್ತಾದ್ ಪರಿಣಾಮಕಾರಿಯಾಗಿ ಜನರ ಮುಂದಿಟ್ಟಿದ್ದಾರೆ. ಅದರಲ್ಲಿ 2012ರ ಎರಡನೇ ಕೇರಳ ಯಾತ್ರೆ ಐತಿಹಾಸಿಕವಾಗಿತ್ತು. ಸುನ್ನೀ ಜಗತ್ತಿನಾದ್ಯಂತ ಅದರ ತರಂಗಗಳು ಅನುರಣಿಸುತ್ತಿತ್ತು.

2012ರ ಜನವರಿ ಒಂದರ ನನ್ನ ಮೊಟ್ಟ ಮೊದಲ ಭಾಷಣವು ಯು.ಎ.ಇ. ರಾಷ್ಟ್ರೀಯ ಮಟ್ಟದ ಐಸಿಎಫ್ ಮತ್ತು ಆರ್.ಎಸ್.ಸಿ. ನಾಯಕರ ಸಮಾವೇಶದಲ್ಲಿ 'ಕಾಂತಪುರತ್ತಿಂಡೆ ಕೇರಳ ಯಾತ್ರೆ'ಯ ಘೋಷಣಾ ಭಾಷಣವಾಗಿತ್ತು. ಕೇರಳ ರಾಜ್ಯದ ಸುನ್ನೀ ಯುವಜನ ಸಂಘದ ಕಾರ್ಯಕರ್ತರಿಗೆ ಗಲ್ಫ್ ರಾಷ್ಟ್ರಗಳಲ್ಲಿ ಇಸ್ಲಾಮಿಕ್ ಕಲ್ಚರಲ್ ಫೌಂಡೇಶನ್ (ಐ.ಸಿ.ಎಫ್) ಮತ್ತು ಎಸ್ಸೆಸ್ಸೆಫ್ ಕಾರ್ಯಕರ್ತರಿಗಾಗಿ 'ರಿಸಾಲ ಸ್ಟಡೀ ಸರ್ಕಲ್' (ಆರ್. ಎಸ್.ಸಿ) ಅತ್ಯಂತ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತದೆ. ಅಂದಿನ ಸಮಾವೇಶ ಈ ಎರಡೂ ಸಂಘಟನೆಗಳ ಪ್ರತಿನಿಧಿ ಸಭೆಯಾಗಿತ್ತು.

ಜನವರಿ ಎರಡರಂದು ಮಧ್ಯಾಹ್ನ ದುಬೈ 'ಅಲ್‌ಖೂಸ್' ನಲ್ಲಿ ಸ್ಥಿರೋತ್ಸಾಹಿ ಸನ್ಮಿತ್ರ, ಕಳೆದ ತಿಂಗಳು ನಮ್ಮನ್ನಗಲಿದ ಅಬ್ದುಲ್ ಹಮೀದ್ ಗಂಟಾಲ್‌ಕಟ್ಟೆ ಅವರ ಮನೆಯಲ್ಲಿ ವಿಶೇಷ ಊಟದ ವ್ಯವಸ್ಥೆ ಮಾಡಿದ್ದು ಆ ದಿನ ಹಮೀದಾಕ ದೀರ್ಘ ಹೊತ್ತು ಮೂಡ ಬಿದಿರೆಯಲ್ಲೊಂದು ಸುನ್ನೀ ಕೇಂದ್ರ ಪ್ರಾರಂಭಿಸಬೇಕಾದ ಅಗತ್ಯದ ಬಗ್ಗೆ ಮಾತನಾ ಡುತ್ತಿದ್ದರು. ಅದಕ್ಕಾಗಿ ಯಾವ ತ್ಯಾಗ ಸಹಿಸಲೂ ಅವರು ಸಿದ್ಧರಿದ್ದರು. ಆದರೆ ಆ ಮಹ ದಾಸೆ ಈಡೇರುವ ಮುನ್ನವೇ ಅಲ್ಪ ಕಾಲದ ಅಸೌಖ್ಯದಿಂದ ಅವರು ನಲವತ್ತ ಮೂರನೇ ವಯಸ್ಸಿನಲ್ಲಿ ಇಹವಾಸ ಮುಗಿಸಿದರು. ಅದೇ ದಿವಸ, ಪುತ್ತೂರು ಮರ್ಕಝುಲ್ ಹುದಾದ ಅಧ್ಯಕ್ಷರೂ ರಾಜ್ಯದ ಹಿರಿಯ ಸುನ್ನೀ ಉಮರಾ ಮುಖಂಡರೂ ಆದ ಪುತ್ತೂರು ಉಸ್ಮಾನ್ ಹಾಜಿ ತೀವ್ರ ಹೃದಯಾಘಾತಕ್ಕೊಳಗಾಗಿ ಮಂಗಳೂರು ಕೆ.ಎಂ.ಸಿ. ಆಸ್ಪತ್ರೆಯ ತೀವ್ರ ನಿಗಾ ವಿಭಾಗದಲ್ಲಿದ್ದರು. ಆ ವಿಚಾರವನ್ನು ಅವತ್ತು ದುಬೈಯಲ್ಲಿದ್ದ ನನಗೆ ಉಸ್ಮಾನ್ ಹಾಜಿಯ ಬೀಗರಾದ ಮಂಗಳೂರು ಇಬ್ರಾಹೀಂ ಬಾವಾ ಹಾಜಿಯವರು ದೂರ ವಾಣಿ ಮೂಲಕ ತಿಳಿಸಿದಾಗ ಕೈ ಕಾಲು ಕಂಪಿಸಿತ್ತು.

ರಾಜ್ಯದಲ್ಲಿ ಎ.ಪಿ. ಉಸ್ತಾದರ ಪರಮಾ ಪ್ತರಲ್ಲಿ ಪ್ರಮುಖರಾದ ಉಸ್ಮಾನ್ ಹಾಜಿ ದಣಿ ವರಿಯದ ಸುನ್ನೀ ಕಾರ್ಯಕರ್ತ, ತಾಜುಲ್ ಉಲಮಾ, ಅಡ್ಯಾರ್ ಕಣ್ಣೂರು ಮುಹಮ್ಮದ್ ಹಾಜಿ, ಮಂಜನಾಡಿ ಸಿ.ಪಿ. ಉಸ್ತಾದ್ (ಖ. ಅಸ್ರಾರಹುಂ) ಮುಂತಾದ ಆಧ್ಯಾತ್ಮಿಕ ದಿಗ್ಗಜರ ತರಬೇತಿಯಲ್ಲಿ ಪಳಗಿದ ಉಸ್ಮಾನ್ ಹಾಜಿಯವರ ಅನಾರೋಗ್ಯ ಇಡೀ ಸಮುದಾ ಯಕ್ಕೆ ತಂದೊಡ್ಡುವ ನಷ್ಟ ಕಿರಿದಲ್ಲ. ಅವರ ಸಾರಥ್ಯದ ಮರ್ಕಝುಲ್ ಹುದಾ, ಮಹಿಳಾ ಶಿಕ್ಷಣ ರಂಗದ ಅಪೂರ್ವ ಕ್ರಾಂತಿಯೆಂಬು ದರಲ್ಲಿ ಎರಡು ಮಾತಿಲ್ಲ.

ಉಸ್ಮಾನ್ ಹಾಜಿಯವರ ಅನಾರೋಗ್ಯದ ಸುದ್ದಿ ಬಂದಾಗ ಅವರು ಅಧ್ಯಕ್ಷರಾಗಿದ್ದು ನಾನು ಕಾರ್ಯದರ್ಶಿಯಾಗಿರುವ ಮರ್ಕ ಝುಲ್ ಹುದಾದ ಪ್ರಚಾರಾರ್ಥವೇ ನಾನು ಯು.ಎ.ಇ ದೇಶದಲ್ಲಿದ್ದೆ. ಪರಿಚಿತರಾದ ಎಲ್ಲರಿಗೂ ವಿಶೇಷ ದುಆ ನಡೆಸಲು ಸಂದೇಶ ರವಾನಿಸಲಾಯಿತು. ಅದರ ಮರುದಿನ ನಾನು 'ಫುಜೈರಾ' ಎಂಬ ಸ್ಥಳಕ್ಕೆ ಹೋದಾಗ ಅಲ್ಲಿನ ಸುನ್ನೀ ಸೆಂಟರ್‌ನಲ್ಲಿ ಅಪರಿಚಿತ ವ್ಯಕ್ತಿ ಯೊಬ್ಬರು ಇದಿರಾದರು. ನನ್ನನ್ನು ಕಂಡ ತಕ್ಷಣ "ಉಸ್ತಾದೇ, ಮಂಗಳಾಪುರದಲ್ಲಿ ಸುನ್ನೀ ನಾಯಕ ಉಸ್ಮಾನ್ ಹಾಜಿಯವರಿಗೆ ಹುಷಾರಿಲ್ಲ, ದುಆ ಮಾಡಬೇಕು" ಎಂದರು. ನಿಜವಾಗಿ ಆ ವ್ಯಕ್ತಿಗೆ ನನ್ನನ್ನೂ, ಉಸ್ಮಾನ್

ಹಾಜಿಯನ್ನೂ ನಮ್ಮ ಸಾಂಸ್ಥಿಕ ಸಂಬಂಧ ವನ್ನೂ ತಿಳಿದಿರಲಿಲ್ಲ. ಒಬ್ಬ ಸುನ್ನೀ ಕಾರ್ಯ ಕರ್ತನಿಗೆ ತೊಂದರೆ ಬಂದಾಗ ಇಡೀ ಸುನ್ನೀ ಜಗತ್ತು ಅವರಿಗಾಗಿ ಪ್ರಾರ್ಥನೆ ಮಾಡುವ, ಅವರಿಗೆ ನೈತಿಕ ಸ್ಥೈರ್ಯ ತುಂಬುವ ಒಂದು ವಿಶಿಷ್ಟ ಅನುಭವಕ್ಕೆ ಸಾಕ್ಷಿಯಾದಾಗ ಸುನ್ನೀ ಕಾರ್ಯಕ್ಷೇತ್ರದಲ್ಲಿ ಇನ್ನಷ್ಟು ಸಕ್ರಿಯ ನಾಗಲು ಅದು ಪ್ರೇರಣೆ ನೀಡಿದ್ದು ನಿಜ. ಎ.ಪಿ. ಉಸ್ತಾದರ ಕೇರಳ ಯಾತ್ರೆಯ ಪ್ರಚಾ ರಾರ್ಥ ಕರ್ನಾಟಕ ಸುನ್ನೀ ಸಂಘಟನೆಗಳ ಒಕ್ಕೂಟದಿಂದ ಮಾನವತಾ ಸಂದೇಶ ಯಾತ್ರೆಯನ್ನು ಹಮ್ಮಿಕೊಂಡು ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಸುನ್ನೀ ಉಲಮಾ ಸಂಘಟನೆಯ ರಾಜ್ಯಾಧ್ಯಕ್ಷ ಖಾಝಿ ಬೇಕಲ್ ಉಸ್ತಾದರ ಸಾರಥ್ಯದಲ್ಲಿ ಪ್ರಯಾಣ ನಡೆಸಿದ್ದು ಸಂಘ ಚರಿತ್ರೆಯಲ್ಲೊಂದರ ಅಪರೂಪದ ಅಧ್ಯಾಯವಾಗಿತ್ತು. ಜಾಥಾ ಸ್ವಾಗತ ಕೇಂದ್ರಗಳಲ್ಲಿ ಬೇಕಲ್ ಉಸ್ತಾದರ ಅಚ್ಚ ಕನ್ನಡದ ಭಾಷಣ ಸಭಿಕರನ್ನು ಆಕರ್ಷಿಸಿತ್ತು. 2012 ಏಪ್ರಿಲ್ 2ರಂದು ಕುಂದಾಪುರದ ಶಾಸ್ತ್ರಿ ಪಾರ್ಕ್ ಬಳಿ ಪ್ರಾರಂಭಿಸಿದ ಮಾನವತಾ ಪ್ರಯಾಣ ಮರುದಿನ ರಾತ್ರಿ ಸುಳ್ಯದಲ್ಲಿ ಸಮಾರೋಪ ಹೊಂದಿತ್ತು.

2012 ಏಪ್ರಿಲ್ 11 ಬುಧವಾರ ಮಂಗ ಳೂರಿನಲ್ಲಿ ಕೇಂದ್ರ ಮೈದಾನದಲ್ಲಿ ಕೇರಳ ಯಾತ್ರೆಗೆ ಬೆಂಬಲ ನೀಡುವ ಸಲುವಾಗಿ ನಡೆದ ಬೃಹತ್ ಸಮ್ಮೇಳನದಲ್ಲಿ ಸುನ್ನೀ ಚಳವಳಿಯ ಘಟಾನುಗಟಿಗಳೆಲ್ಲರೂ ಭಾಗವಹಿಸಿದ್ದರು. ಆ ದಿನ ಅಪರಾಹ್ನ 2 ಗಂಟೆಗೆ ಮಂಗಳೂರು ಪುರಭವನದಲ್ಲಿ ವಿವಿಧ ಮತಗಳ ಮುಖಂ ಡರನ್ನು ಆಹ್ವಾನಿಸಿ ಸೌಹಾರ್ದ ಸಮ್ಮೇಳನ ಆಯೋಜಿಸಲಾಗಿತ್ತು. ಪೇಜಾವರ ಶ್ರೀಗಳು, ಮಂಗಳೂರಿನ ಸಹಾಯಕ ಬಿಷಪ್ ಮುಂತಾ ದವರು ಆ ದಿನ ಶೈಖುನಾ ಎ.ಪಿ. ಉಸ್ತಾದರ ಜತೆಗೆ ಸಭೆಯಲ್ಲಿ ಭಾಗವಹಿಸಿದ್ದರು. ಆ ದಿನ ಕಾರ್ಯಕ್ರಮದ ಪ್ರಮುಖ ಜವಾಬ್ದಾರಿ ಯನ್ನೂ ಹೊಂದಿದ್ದ ನನಗೆ ಹಠಾತ್ತನೆ ಹೊಟ್ಟೆ ನೋವು ಕಾಣಿಸಿಕೊಂಡು ನನ್ನ ಜತೆಗೆ ಸಹ ಕಾರ್ಯಕರ್ತರೂ ಕಂಗಾಲಾಗುವಂತೆ ಮಾಡಿತ್ತು.

ಕ್ಷಣಕ್ಷಣಕ್ಕೂ ಹೊಟ್ಟೆಯ ಬಲಬದಿ ಯಲ್ಲಿ ನೋವು ತೀವ್ರವಾಗುತ್ತಾ ಹೋ ಯಿತು. ಕಿರಿಯ ಮಿತ್ರ ರಫೀಖ್ ಜೆಪ್ಪುವಿನ ಸಹಾಯದೊಂದಿಗೆ ಡಾ. ಅಶ್‌ರಫ್‌ರನ್ನು ಸಂಪರ್ಕಿಸಲಾಗಿ ಪ್ರಾಥಮಿಕ ಚಿಕಿತ್ಸೆ ನೀಡಿದಾಗಲೂ ಹೆಚ್ಚಿನ ಫಲ ನೀಡಲಿಲ್ಲ. ತುರ್ತು ಸ್ಕ್ಯಾನಿಂಗ್ ನಡೆಸಲು ಎರಡು ಆಸ್ಪತ್ರೆಗಳನ್ನು ಸಂಪರ್ಕಿಸಿದರೂ ಫಲ ನೀಡಲಿಲ್ಲ. ನಾನಿಲ್ಲಿ ಆಸ್ಪತ್ರೆಯೊಳಗೆ ನೋವಿನಿಂದ ನರಳುತ್ತಿದ್ದರೆ ಅತ್ತ ಸಮಾವೇಶ ಪ್ರಾರಂಭವಾಗಬೇಕಾದ ಸಮಯ ಕಳೆದಿತ್ತು. ಕೊನೆಗೆ ವಳವೂರು ಉಸ್ತಾದ್ ಯು.ಕೆ. ಮುಹಮ್ಮದ್ ಸಅದಿಯವರ ಸಲಹೆಯಂತೆ ಎಸ್ಸೆಸ್ಸೆಫ್ ಜಿಲ್ಲಾ ಕಾರ್ಯದರ್ಶಿ ಮಂಗಳ ಪದವು ಇಸ್ಮಾಈಲ್ ಮಾಸ್ಟರ್ ಹಾಗೂ ಆರ್.ಕೆ. ಮದನಿ ಅಮ್ಮೆಂಬಳ ತಕ್ಷಣ ಉಳ್ಳಾ ಲಕ್ಕೆ ಧಾವಿಸಿ ತಾಜುಲ್ ಉಲಮಾರಲ್ಲಿ ವಿಷಯ ತಿಳಿಸಿ ನೀರು ಮಂತ್ರಿಸಿ ಪಡೆದು ಕೊಂಡರು. ಅತೀವ ನೋವಿನಿಂದ ಕಂಕನಾಡಿ ಫಾ. ಮುಲ್ಲರ್ಸ್ ಆಸ್ಪತ್ರೆಯ ಸ್ಕ್ಯಾನಿಂಗ್ ಕೊಠಡಿಯ ಮುಂಭಾಗದ ಸರತಿಯಲ್ಲಿ ದೇಹವೂ ಮನಸ್ಸೂ ಅಸಾಧ್ಯ ಒತ್ತಡಕ್ಕೆ ಒಳಗಾಗಿ ನಾನು ಕುಸಿದು ಕುಳಿತಿದ್ದರೆ ಆರ್.ಕೆ. ಮದನಿ ತಾಜುಲ್ ಉಲಮಾರು ಮಂತ್ರಿಸಿದ ಪುಣ್ಯ ಜಲವನ್ನೂ ನನ್ನ ಮುಂದಿಟ್ಟರು. ಒಂದೇ ಗುಟುಕಿನಲ್ಲಿ ಅರ್ಧ ಬಾಟಲಿ ಕುಡಿದು ನಿಮಿಷಗಳು ಕಳೆಯಲಿಲ್ಲ. ಹೊಟ್ಟೆ ನೋವು 'ಸ್ವಿಚ್ ಆಫ್ ' ಮಾಡಿದಂತೆ ಮಾಯ. ಮನಸ್ಸು ಸಂಪೂರ್ಣ ಉಲ್ಲಾಸಮಯ. ಕಿಡ್ನಿ ಕಲ್ಲಿನ ತೊಂದರೆಯ ನೋವಾಗಿತ್ತದು. ಅಲ್ಲಿಂದ ಸ್ಕ್ಯಾನಿಂಗ್ ಟೋಕನ್ ಬಿಸಾಕಿ ಸಂಜೆ 4.30ರ ವೇಳೆಗೆ ಟೌನ್ ಹಾಲ್ ತಲುಪಿ ಮುಂದಿನ ಕಾರ್ಯಕ್ರಮಗಳಲ್ಲಿ ಭಾಗವಹಿ ಸಲು ಸಾಧ್ಯವಾಯಿತು. ನನ್ನ ಅನುಪಸ್ಥಿಯ ಕೊರತೆಯನ್ನು ಮಿತ್ರ ಕೆ.ಎಂ. ಅಬೂಬಕರ್ ಸಿದ್ದೀಖ್ ಕಾರ್ಯಕ್ರಮಕ್ಕೆ ಚಾಲನೆ ಕೊಡುವ ಮೂಲಕ ಪರಿಹರಿಸಿದ್ದರು.

ಮರುದಿನ, ಏಪ್ರಿಲ್ 12ರಿಂದ ಕೇರಳದ ವಿವಿಧ ಜಿಲ್ಲೆಗಳನ್ನು ಹಾದು ಎ.ಪಿ. ಉಸ್ತಾದ್ ಮುನ್ನಡೆಸಿದ 'ಕೇರಳ ಯಾತ್ರೆ' ಮಾನವತೆಯ ಜಾಗೃತಿಗಾಗಿ ಎಂಬ ಘೋಷಣೆಯೊಂದಿಗೆ ಜನ ಮಾನಸಗಳನ್ನು ಏಕತೆಯ ದಾರದಲ್ಲಿ ಪೋಣಿಸಿ ಮನುಷ್ಯ ಸೌಹಾರ್ದತೆಯ ಪ್ರಖರ ಬೆಳಕನ್ನು ಸುರಿಸಿತ್ತು.

ಏಪ್ರಿಲ್ 20 ಶುಕ್ರವಾರ, 9 ತಿಂಗಳ ಹಿಂದೆ ನಾನು ರಾಜೀನಾಮೆ ನೀಡಿದ್ದ ತಲಪಾಡಿ ಬಿಲಾಲ್ ಜುಮಾ ಮಸೀದಿಯಲ್ಲಿ ಅಲ್ಲಿನ ಆಡಳಿತ ಸಮಿತಿಯವರ ಆಹ್ವಾನದ ಮೇರೆಗೆ ನಾನು ಮರು ಸೇರ್ಪಡೆಗೊಂಡ ದಿನ.

ಪ್ರತಿಯೊಂದು ಕಾರ್ಯವನ್ನೂ ತಾಜುಲ್ ಉಲಮಾರ ಆಶೀರ್ವಾದ ಪಡೆದ ನಂತರವೇ ಮಾಡುತ್ತಿದ್ದ ನನಗೆ ತಲಪಾಡಿ ರಾಜೀನಾಮೆ ಯ ವಿಷಯ ಉಸ್ತಾದರಿಗೆ ತಿಳಿಸಲು ಆಗಿರಲಿಲ್ಲ. ಆಶ್ಚರ್ಯವೆಂಬಂತೆ ಅಲ್ಲಿಂದ ಬಿಡುಗಡೆಗೊಂಡ ನಂತರದ ಒಂಬತ್ತು ತಿಂಗಳುಗಳಲ್ಲಿ ಹರ ಸಾಹಸ ಮಾಡಿದರೂ ತಾಜುಲ್ ಉಲಮಾರನ್ನು ಭೇಟಿಯಾಗಲು ಅವಕಾಶ ಸಿಕ್ಕಿರಲಿಲ್ಲ. ಈ ಮರು ಸೇರ್ಪಡೆಯ ಮರುದಿನ ಅವರನ್ನು ಭೇಟಿಯಾದಾಗ ತಲಪಾಡಿ ಬಿಟ್ಟು ನಿನ್ನೆ ಮರು ಸೇರ್ಪಡೆಯಾದೆ ಎಂದಾಗ ಕೋಪಿಸುತ್ತಾ 'ಅಲ್ಲೇ ನಿಲ್ಲು' ಎಂದಿ ದ್ದರು. ಪ್ರತಿ ಭೇಟಿಯ ವೇಳೆಯೂ ಅವರು ಮೊದಲು ಕೇಳುತ್ತಿದ್ದುದು 'ತಲಪಾಡಿ ಹೇಗಿದೆ' ಎಂದಾಗಿತ್ತು.

ಒಂದು ಕಾಲದಲ್ಲಿ ಸುನ್ನಿಗಳಲ್ಲದೆ ಬೇರಾವ ಪಂಗಡಗಳೂ ಇಲ್ಲದಿದ್ದ ಆ ಊರಿ ನಲ್ಲಿ ತನ್ನ ಶಿಷ್ಯತ್ವ ಪಡೆದೂ 'ಹಿದಾಯತ್' ನಿಂದ ವಂಚಿತನಾದ ವ್ಯಕ್ತಿಯೊಬ್ಬರ ನೇತೃ ತ್ವದಲ್ಲಿ ನೂತನವಾದವನ್ನು ಹರಡಿ ಊರಿನ ಮುಸಲ್ಮಾನರನ್ನು ಪರಸ್ಪರ ಎತ್ತಿ ಕಟ್ಟುವ ಸ್ಥಿತಿ ಬಂದಿರುವುದರಿಂದ ತಾಜುಲ್ ಉಲಮಾ ಬಹಳಷ್ಟು ನೊಂದಿದ್ದರು. ನಾವೆಲ್ಲ ಸೇರಿ ಅಲ್ಲಿ 'ಸುನ್ನಿಯ್ಯತ್ತ'ನ್ನು ಬಲಪಡಿಸುವ ಕೆಲಸ ಮಾಡುತ್ತಿರುವುದು ಗಮನಕ್ಕೆ ಬಂದಾಗ ಆ ಮಹಾತ್ಮರು ತುಂಬ ಖುಷಿಪಟ್ಟಿದ್ದರು. ನಮಗಾಗಿ ಪ್ರಾರ್ಥಿಸಿ ಹರಸಿದ್ದರು.

ಏಪ್ರಿಲ್ 21ರ ಎಸ್.ವೈ.ಎಸ್. ರಾಜ್ಯ ಕಾರ್ಯಕಾರಿಣಿಯಲ್ಲಿ ನನಗೆ ರಾಜ್ಯ ಸಮಿತಿಯ ಜತೆ ಕಾರ್ಯದರ್ಶಿಯ ಜವಾಬ್ದಾರಿ ವಹಿಸ ಲಾಯಿತು. ಅದೇ ದಿನ ನಡೆದ ಸುನ್ನೀ ಕೋ ಓರ್ಡಿನೇಶನ್ ಸಭೆಯಲ್ಲಿ ಅನಿವಾಸಿ ಸುನ್ನಿ ಗಳ ಸಾಂಸ್ಕತಿಕ ಸಂಘಟನೆಯಾದ ಕರ್ನಾಟಕ ಕಲ್ಚರಲ್ ಫೌಂಡೇಶನ್ (ಕೆ.ಸಿ.ಎಫ್)ನ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿಯ ಹುದ್ದೆಯೂ ದೊರೆಯಿತು.

ಎಸ್ಸೆಸ್ಸೆಫ್ ನಂತರದ ಸಂಘ ಬದುಕಿಗೆ ಎಸ್‌ವೈಎಸ್ ರಾಜ್ಯ ಸಮಿತಿ ಮತ್ತು ಕೆ.ಸಿ. ಎಫ್. ಸೆಂಟ್ರಲ್ ಕಮಿಟಿ ಉತ್ತಮ ವೇದಿಕೆ ಒದಗಿಸಿತು.

# 31

ಬದುಕಿನ ದಿಕ್ಕು ಬದಲಾದಾಗ, ಹಾಳೆ ಪೆನ್ನಿನ ಜಾಗದಲ್ಲಿ ಹಾರೆ ಪಿಕ್ಕಾಸು!!!

ಕಲಿಯುವ ಕಾಲದಿಂದಲೇ "ಸಂಸ್ಥೆ"ಗಳ ನ್ನು ಸ್ಥಾಪಿಸಿ ನಡೆಸುವ ಕೆಲಸದೊಂದಿಗೆ ನನಗೆ ಅಸಾಧ್ಯ ದ್ವೇಷವಿತ್ತು. ಅಲ್ಲಾಹು ನೀಡಿದ ನೈಸರ್ಗಿಕ ಕೌಶಲ್ಯಗಳಾದ ಭಾಷಣ, ಬರಹ ಮತ್ತು ಅಧ್ಯಾಪನದತ್ತ ಗಮನಕೊಟ್ಟು ಉತ್ತಮ ಮುದರ್‍ರಿಸ್ ಮತ್ತು ಗ್ರಂಥಕರ್ತ ನಾಗಬೇಕೆಂಬ ಅತಿಯಾದ ಅಭಿಲಾಷೆ ನನ್ನದಾಗಿತ್ತು. ಭಾಷಣಕ್ಕಿಂತಲೂ ಬರಹ ನನ್ನ ಆಸಕ್ತಿಯ ಕ್ಷೇತ್ರ. ನಿಯತಕಾಲಿಕೆಗಳಲ್ಲಿ ಬರೆಯುವ ಲೇಖನ ಗಳಿಗಿಂತ ನಿರ್ದಿಷ್ಟ ವಿಷಯಗಳಲ್ಲಿ ಅಧ್ಯಯನಾತ್ಮಕ ಗ್ರಂಥಗಳನ್ನು ಬರೆಯಬೇಕೆಂಬುದು ಜೀವಮಾನದ ಕಾರ್ಯ ಸೂಚಿಯಾ ಗಿತ್ತು. ಒಂಬತ್ತುವರೆ ವರ್ಷಗಳ ಧಾರ್ಮಿಕ ವಿದ್ಯಾರ್ಥಿ ಜೀವನದಲ್ಲಿ ದರ್ಸ್ ಮತ್ತು ಅರಬಿಕ್ ಕಾಲೇಜುಗಳ ಪಠ್ಯ ಕ್ರಮದ ಎಲ್ಲ ಗ್ರಂಥಗಳನ್ನೂ ಅತ್ಯಾಸಕ್ತಿಯಿಂದ ಓದಿ ಮುಗಿಸಲು ಉಸ್ತಾದ್‌ಗಳ ಅಪಾರ ಬೆಂಬಲ ದಿಂದ ಸಾಧ್ಯವಾಗಿತ್ತು. ಆದ್ದರಿಂದ ಪಳ್ಳಿದರ್ಸ್ ಕೂಡಾ ನನ್ನ ಆಸಕ್ತಿಯ ಕ್ಷೇತ್ರವಾಗಿತ್ತು.

ಹೀಗೆಲ್ಲಾ ಇದ್ದರೂ ಸಂಘಟನೆಗಳ ಜವಾಬ್ದಾರಿ ಹಾಗೂ ಸಂಸ್ಥೆಯ ಹೊಣೆಗಾರಿಕೆ ಗಳು ನನ್ನ ಬದುಕಿನ ದಿಕ್ಕನ್ನೇ ಬದಲಾಯಿಸಿ ಬಿಟ್ಟಿತು. ಯಾವುದೇ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಬಾರದು ಮತ್ತು ಅವುಗಳ ಪದಾಧಿಕಾರಿ ಯಾಗಬಾರದು ಎಂದು ಸ್ವಯಂ ವಿಧಿಸಿ ಕೊಂಡಿದ್ದ ನಿಯಮವಾಗಿತ್ತು. ಉಡುಪಿ-ಮೂಳೂರಿನ ದ.ಕ ಸುನ್ನೀ ಸೆಂಟರ್ ಸಂಸ್ಥೆಯ ವ್ಯವಸ್ಥಾಪಕನಾಗಿ ಕೆಲಸ ವಹಿಸಿಕೊಳ್ಳಲು ಸುನ್ನೀ ಸೆಂಟರ್‌ನ ಸ್ಥಾಪಕಾಧ್ಯಕ್ಷ ಎ.ಬಿ. ಹಸನುಲ್ ಫೈಝಿ ಯವರು ಒತ್ತಾಯಿ ಸಿದಾಗಲೂ ಸ್ವಯಂ ವಿಧಿಸಿದ ನಿಯಮ ವನ್ನು ಉಳಿಸಿಕೊ ಳ್ಳಬೇಕೆಂಬ ಕಾರ ಣಕ್ಕಾಗಿ ಅದನ್ನು ನಿರಾಕರಿಸಿದ್ದೆ.

ಆದರೆ ತೀರಾ ಅನಿರೀಕ್ಷಿತವೂ ಅನಪೇಕ್ಷಿ ತವೂ ಆಗಿ ಪುತ್ತೂರು - ಕುಂಬ್ರ ಮರ್ಕಝು ಲ್ ಹುದಾದ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ವಹಿಸಿಕೊಳ್ಳುವಂತೆ ಎ.ಪಿ. ಉಸ್ತಾದರಿಂದ ಆದೇಶ ಬಂದಾಗ ವಿಧಿಯಿ ಲ್ಲದೆ ಒಪ್ಪಿದ್ದೆ. ಕುಂಬ್ರದಲ್ಲಿ ಸಮಿತಿ ರಚನೆ ಗೊಂಡಾಗ ಮತ್ತು ಸಂಸ್ಥೆಗೆ ಶಿಲಾನ್ಯಾಸ ಮಾಡಿದಾಗಲೂ ಅಲ್ಲಿ ಪ್ರಾರಂಭಿಸಬೇಕಾದ ಶಿಕ್ಷಣ ಸಂಸ್ಥೆ ಯಾವುದು ಎಂಬುದರ ಬಗ್ಗೆ ಯಾರಿಗೂ ಯಾವುದೇ ಕಲ್ಪನೆಗಳಿರಲಿಲ್ಲ. ಎ.ಪಿ. ಉಸ್ತಾದ್ ಎಲ್ಲದಕ್ಕೂ ಸಲ್ಲುವ ರೀತಿ ಯಲ್ಲಿ 'ಮರ್ಕಝುಲ್ ಹುದಾ ಕರ್ನಾಟಕ' ಎಂದು ಹೆಸರಿಡಲು ಸೂಚಿಸಿದ್ದರು. ಅಧ್ಯಕ್ಷ ಉಸ್ಮಾನ್ ಹಾಜಿಯವರು ಹೆಣ್ಮಕ್ಕಳ ಅನಾಥ ಮಂದಿರ ಸ್ಥಾಪಿಸುವ ಪ್ರಸ್ತಾಪವೆತ್ತಿದ್ದರೂ ಅದಕ್ಕಿಂತಲೂ ಅನಿವಾರ್ಯವಾದ ಸಂಸ್ಥೆ ಯೊಂದು ನಮ್ಮಿಂದ ಆಗಬೇಕೆಂಬ ಸಲಹೆ ಎದ್ದು ಬಂತು. ಈಗಾಗಲೇ ಊರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಸಮಾನವಾದ ಒಂದನ್ನು ಆರಂಭಿಸುವುದನ್ನು ನಾನು ಬಲ ವಾಗಿ ವಿರೋಧಿಸಿದೆ. ಕೊನೆಗೆ ಕುಂಬ್ರದಲ್ಲಿ ತೆರೆಯಬೇಕಾದ ಸಂಸ್ಥೆ ಯಾವುದಾಗಿರಬೇ ಕೆಂಬ ಚರ್ಚೆ ಎ.ಪಿ. ಉಸ್ತಾದರ ಸುಪುತ್ರ ಪ್ರಖ್ಯಾತ ಶಿಕ್ಷಣ ತಜ್ಞ ಡಾ. ಅಬ್ದುಲ್ ಹಕೀಂ ಅಝ್‌ಹರೀ ಅವರಿಗೆ ಹಸ್ತಾಂತರವಾಯಿತು. ಅವರ ಸಲಹೆಯಂತೆ ಹತ್ತನೇ ತರಗತಿ ದಾಟಿದ ಹೆಣ್ಮಕ್ಕಳಿಗೆ 'ದೀನೀ - ದುನ್ಯವೀ' ಉನ್ನತ ಶಿಕ್ಷಣ ನೀಡುವ ಮಹಿಳಾ ಕಾಲೇಜನ್ನು ಸ್ಥಾಪಿಸುವಂತೆಯೂ ಕ್ರಮೇಣ ವಿವಿಧ ಕಡೆಗಳಲ್ಲಿ ಅದರ ಶಾಖೆಗಳನ್ನೂ ತೆರೆದು ಮಹಿಳೆಯರ ಧಾರ್ಮಿಕ ಸಬಲೀಕರಣ ಚಳುವಳಿಗೆ ಚಾಲನೆ ನೀಡವಂತೆಯೂ ಅವರು ಅಭಿಪ್ರಾಯಪಟ್ಟರು. 2003ರಲ್ಲಿ ಕುಂಬ್ರದಲ್ಲಿ ಮರ್ಕಝುಲ್ ಹುದಾ ಪ್ರಾರಂ ಭಿಸಿದ ಬಳಿಕ ಮೊದಲ ಶಾಖೆಯನ್ನು ದ.ಕ. ಜಿಲ್ಲೆಯ ಅತೀ ದೊಡ್ಡ ಮುಸ್ಲಿಂ ಬಾಹುಳ್ಯ ಪ್ರದೇಶವಾದ ಕೃಷ್ಣಾಪುರದಲ್ಲಿ ತೆರೆಯಲು ಉದ್ದೇಶಿಸಿದ್ದೆವು. ನಮ್ಮ ಕನಸಿನ ಸಾಕಾರ ವೆಂಬಂತೆ ಕಾಟಿಪಳ್ಳದಲ್ಲಿ ಉದ್ಯಮಿ ಖತರ್ ನಝೀರ್ ಹಾಜಿ ನೀಡಿದ ನಿವೇಶನದಲ್ಲಿ ಸುಸಜ್ಜಿತ ಕಾಲೇಜೊಂದರ ಶಿಲಾನ್ಯಾಸವು 2012 ಎಪ್ರಿಲ್ 30 ಸೋಮವಾರ ಅಪರಾಹ್ನ 4 ಗಂಟೆಗೆ ಸಯ್ಯಿದ್ ಕೆ.ಎಸ್. ಆಟಕೋಯ ತಂಙಳ್ ನಿರ್ವಹಿಸಿದರು. ಸುರಕ್ಷಿತ ಮಹಿಳೆ - ಸುಭದ್ರ ಸಮಾಜ ಎಂಬ ನಮ್ಮ ಅಭಿಯಾ ನದ ಎರಡನೇ ಹೆಜ್ಜೆಯಾಗಿತ್ತದು. ಶೈಖುನಾ ಎ.ಪಿ. ಉಸ್ತಾದರ ಮುಖಾಂತರ ಅಬುದಾ ಬಿಯ ಸಜ್ಜನ ದಾನಿಯೊಬ್ಬರು ಕಟ್ಟಡದ ವೆಚ್ಚವನ್ನು ವಹಿಸಿಕೊಂಡರು. ಸಂಸ್ಥೆಯ ಸಂಪೂರ್ಣ ನಿಯಂತ್ರಣವನ್ನು ಎ.ಪಿ. ಉಸ್ತಾ ದರಿಗೆ ವಹಿಸಿಕೊಟ್ಟೆವು. ಮಹಿಳಾ ಕಾಲೇಜು ಎಂಬ ಕಲ್ಪನೆಯ ಜತೆಗೆ ಮಹಿಳೆಯರ ಧಾರ್ಮಿಕ ಸುಧಾರಣೆಗೆ ಅಗತ್ಯವಾದ ಅನೇಕ ಯೋಜನೆಗಳನ್ನು ಹಮ್ಮಿಕೊಂಡೆವು. ಇವತ್ತಿನ ಕಾಲದಲ್ಲಿ ನೂತನವಾದಿ ಸಂಘಟನೆಗಳು ತಮ್ಮ ಅನಿಸ್ಲಾಮಿಕ ವಾದಗಳನ್ನು ಪ್ರಚಾರ ಮಾಡಲು ಮಹಿಳೆಯರನ್ನು ಬಳಸಿಕೊಳ್ಳುವ ಚಾಲ ಹೆಚ್ಚುತ್ತಿದೆ. ಮಹಿಳೆಯರಿಂದ ಮಹಿಳೆ ಯರಿಗೆ ಮದ್ರಸ, ಮಹಿಳಾ ಕ್ಲಾಸ್‌ಗಳು, ಮಹಿಳಾ ಸಮಾವೇಶಗಳು, ಮಹಿಳಾ ಹಾಸ್ಟೆ ಲ್, ಮಹಿಳಾ ಕಾಲೇಜು ಹೀಗೇ ಕುಟುಂಬದ ಪ್ರಧಾನ ಸ್ತಂಭವಾದ ಹೆಣ್ಣನ್ನು ಬಳಸಿ 'ದೀನ್' ನ ಹೆಸರಲ್ಲಿ 'ಬಿದ್‌ಅತ್' ಹರಡುವಾಗ ಸುನ್ನೀ ಸಮಾಜದ ಕೆಲವು ಶ್ರೀಮಂತರೂ ಇದಕ್ಕೆ ಬಲಿಯಾಗುತ್ತಿರುವುದು ವಿಪರ್ಯಾಸ ಹಾಗೂ ದುರಂತ.

ಇವತ್ತು ಸಮಾಜದಲ್ಲಿ ಸಮನ್ವಯ ಶಿಕ್ಷಣ ಸಂಸ್ಥೆಗಳು ಉಲಮಾಗಳ ನೇತೃತ್ವದಲ್ಲಿ ಅಲ್ಲಲ್ಲಿ ಪ್ರಾರಂಭಗೊಳ್ಳುತ್ತಿರುವುದು ಆಶಾದಾಯಕ. ಆದರೆ ಸಮಾನ ಉದ್ದೇಶ ಲಕ್ಷ್ಯಗಳ 'ಸ್ಥಾಪನೆ'ಗಳನ್ನೇ ಎಲ್ಲರೂ ಪ್ರಾರಂಭಿಸುವುದಕ್ಕಿಂತ ಸಮುದಾಯಕ್ಕೆ ಅಗತ್ಯವಾದ ಕೇಂದ್ರಗಳನ್ನು ತೆರೆಯಲು 'ಸ್ಥಾಪನೆ' ಪದಾಧಿಕಾರಿಗಳು ಮುಂದೆ ಬರಬೇಕಿದೆ. ಪ್ರತಿದಿನ ದೇಶ ವಿದೇಶಗಳ ದಾನಿಗಳ ಮುಂದೆ ಸಂಸ್ಥೆಯ ಮುಖಂಡರು ದೇಣಿಗೆಗಾಗಿ ಸರದಿ ಕಾಯುತ್ತಿದ್ದು ಹೆಚ್ಚಿನ ದ್ದೆಲ್ಲಾ ಒಂದೇ ರೀತಿಯದ್ದಾಗಿರುತ್ತದೆ. ಸಾಕಷ್ಟು ಮಹಿಳಾ ಶಿಕ್ಷಣ ಕೇಂದ್ರಗಳು, ಅಂಧ -ಕಿವುಡ -ಮೂಕರ ಪುನರ್ವಸತಿ ಕೇಂದ್ರಗಳು, ಮನೆಯಲ್ಲಿ ಯಾರ ನಿಯಂತ್ರಣಕ್ಕೂ ಸಿಗದ 'ಆರೋಗ್ಯವಂತ' ಮನೋರೋಗಿಗಳನ್ನೂ ಸಲಹುವ ಕೇಂದ್ರಗಳು, ಮನೆಯಿಂದ ಬಹಿಷ್ಕೃ ತರಾಗಿ ಬೀದಿಯೇ ಮನೆಯಾಗಿರುವ ಅಸಂ ಖ್ಯಾತ ವೃದ್ಧ ಜನರಿಗೆ ಪೋಷಕ ಸದನಗಳು - ಇವುಗಳಿಗೆ ನಮ್ಮಲ್ಲಿ ಯಾವುದೇ ವ್ಯವಸ್ಥೆಗಳಿಲ್ಲ.

ಇಂಥ ಯೋಜನೆಗಳಿಗೆ ಸಾಕಷ್ಟು ಹಣ ಸುರಿಸಲು ಅನೇಕ ಮುಸ್ಲಿಂ ದಾನಿಗಳಿದ್ದಾರೆ. ಸಮರ್ಪಕ ಯೋಜನೆ ಮತ್ತು ಸಮರ್ಥ ನಿರ್ವಹಣೆಗೆ ಸಕ್ರಿಯ ತಂಡವೊಂದು ಮುಂದೆ ಬಂದರೆ ಸಮಾನ ಯೋಜನೆಗಳನ್ನೇ ಪ್ರಾರಂ ಭಿಸಿ ಸಮುದಾಯದ ದಾನಿಗಳಿಗೆ ಅಧಿಕ ಭಾರ ಹೊರಿಸಿ ಅವರ ದ್ವೇಷ ಕಟ್ಟಿಕೊಳ್ಳುವುದನ್ನು

ತಪ್ಪಿಸಬಹುದು.

ಮರ್ಕಝುಲ್ ಹುದಾ ಮಹಿಳಾ ಕೇಂದ್ರಿತ ಶಿಕ್ಷಣ ಸಂಸ್ಥೆಯಾದುದರಿಂದ ಮತ್ತು ಆ ಕಾಲದಲ್ಲಿ ಬೇರೆ ಎಲ್ಲೂ ಇಂಥ ಸಂಸ್ಥೆ ಇಲ್ಲದೇ ಇದ್ದುದರಿಂದ 'ಸಂಸ್ಥೆ'ಯ ಕೆಲಸಗಳ ಮೇಲೆ ನನಗಿದ್ದ 'ಅನಿಷ್ಟ'ದ ಹೊರ ತಾಗಿಯೂ ಅದರ ಹುದ್ದೆಯನ್ನು ವಹಿಸಿ ಕೊಂಡೆ. ಒಂದು ಸಂಸ್ಥೆಯನ್ನು ನಡೆಸುವುದೆಂ ದರೆ ಜೀವನ ಪೂರ್ತಿ ಅದೊಂದು ಹೋರಾಟ. ಒಬ್ಬ ಪತ್ರಿಕಾ ಸಂಪಾದಕ 'ನಿಮಗೆ ದೀರ್ಘಾ ಯುಷ್ಯದ ಬಯಕೆ ಇಲ್ಲದಿದ್ದರೆ ನೀವೊಬ್ಬ ಪತ್ರಿಕಾ ಸಂಪಾದಕನಾಗಿ' ಎಂದು ಒಂದೆಡೆ ಬರೆದಿಟ್ಟಿದ್ದನ್ನು ಓದಿದ್ದೆ. ನಿರಂತರ ಒತ್ತಡ ಮತ್ತು ವರದಿಗಳ ಮೇಲಿನ ಬಾಹ್ಯ ಪ್ರತೀಕಾ ರಗಳು ಒಬ್ಬ ಸಂಪಾದಕನನ್ನು ಕಂಗೆಡಿಸುತ್ತಿರು ತ್ತದೆ. ಸಮಯಕ್ಕೆ ಸುದ್ದಿ, ಮುದ್ರಣ, ವಿತರಣೆ, ಹಣಪಾವತಿ ಇವೆಲ್ಲ ನಡೆದರೆ ಮಾತ್ರ ಪತ್ರಿಕೆಯ ಅಸ್ತಿತ್ವ ಮುಂದುವರಿಯು ತ್ತದೆ. ಇದಕ್ಕೆಲ್ಲ ಪ್ರತ್ಯೇಕ ತಂಡವಿದ್ದರೂ ಸಂಪಾ ದಕನ ಜವಾಬ್ದಾರಿ ಕಡೆಮೆಯಾಗುವುದಿಲ್ಲ.

ಆದರೆ ಇವತ್ತಿನ ಸ್ಥಿತಿಯಲ್ಲಿ ಸಂಪಾ ದಕನಿಗಿಂತಲೂ ನೂರು ಪಟ್ಟು ಒತ್ತಡದ ಕೆಲಸ ಈ ಸಂಸ್ಥೆಗಳನ್ನು ನಡೆಸುವುದು. ಹಾಳೆ ಮತ್ತು ಪೆನ್ನು ಹಿಡಿದು ಸಮಾಜಕ್ಕೆ ಮಾರ್ಗದರ್ಶನ ಕೊಡಬೇಕಾದ ಎಷ್ಟೋ ಪ್ರತಿಭಾಶಾಲಿಗಳು ಸಂಸ್ಥೆಯ ಹೆಸರಲ್ಲಿ ಹಾರೆ ಮತ್ತು ಪಿಕ್ಕಾಸು ಹಿಡಿದು ನಿಷ್ಕ್ರಿಯರಾಗಿ ತಮ್ಮ ಪ್ರತಿಭೆಗಳನ್ನು ಕಳೆದುಕೊಂಡದ್ದಿದೆ. ವೈಚಾರಿಕ ಸಾಹಿತ್ಯ ಪುಸ್ತಕಗಳ ಮೂಲಕ ಸ್ವಯಂ ಬೆಳೆಯ ಬೇಕಾದ ಹಲವರು ರಶೀದಿ ಪುಸ್ತಕಗಳ ಸಹವಾಸದಿಂದ ಹೆಸರು ಕೆಡಿಸಿಕೊಂಡು ಮೂಲೆ ಸೇರಿದ್ದಾರೆ. ಈ ಎಲ್ಲ ಕಾರಣಗಳಿಂ ದಲೇ 'ಸ್ಥಾಪನೆ' ಸಹವಾಸ ಬೇಡ ಎಂದು ಗಟ್ಟಿ ನಿರ್ಧಾರ ಮಾಡಿ ಅಂಥ ಪ್ರಸ್ತಾಪಗಳಿಂದ ದೂರ ಓಡಿ ಹೋಗುತ್ತಿದ್ದ ನಾನು ಕೊನೆಗೆ ಎ.ಪಿ. ಉಸ್ತಾದರ ಆದೇಶದಂತೆ ಸಂಸ್ಥೆಯೊಂ ದರ ಕಾರ್ಯದರ್ಶಿಯಾದೆ. ನನ್ನ ಉದ್ದೇಶಿತ ಜೀವನ ಹಾದಿಯು ಹಳಿ ತಪ್ಪಿದರೂ ಕಳೆದೊಂ ದು ದಶಕದಲ್ಲಿ ಸಾವಿರಾರು ಹೆಣ್ಮಕ್ಕಳಿಗೆ ಧಾರ್ಮಿಕ ಶಿಕ್ಷಣ ನೀಡಿ ಅಸಂಖ್ಯ ಕುಟುಂಬ ಗಳಿಗೆ ಬೆಳಕಾದ ಸಂಸ್ಥೆಯೊಂದಕ್ಕೆ ನಾಯಕತ್ವ ನೀಡಿದ ಸಾರ್ಥಕ ಪ್ರಜ್ಞೆ ನೆಮ್ಮದಿ ಕೊಡುತ್ತಿದೆ.

2012 ಜೂನ್ 7ರಂದು ಮರ್ಕಝುಲ್ ಹುದಾದ ಬಹು ನಿರೀಕ್ಷಿತ ಮಹಿಳಾ ಶರೀಅತ್ ಕಾಲೇಜಿಗೆ ಖಾಝಿ ಬೇಕಲ್ ಉಸ್ತಾದ್ ಚಾಲನೆ ನೀಡಿದರು. ಲೌಕಕ ಶಿಕ್ಷಣ ರಂಗವು ಅದರ ಪಾರಮ್ಯಕ್ಕೆ ತಲುಪಿರುವಾಗಲೂ ಮುಸ್ಲಿಂ ಹೆಣ್ಮಕ್ಕಳು ದೀನೀ ವಿದ್ಯೆಯೆಡೆಗೆ ತೋರುವ ಆಸಕ್ತಿ ಅಚ್ಚರಿ ಪಡಿಸುವಂತದ್ದು. ಶಿಕ್ಷಣ ಮುಂದುವರಿಸಲು ಯುನಿವರ್ಸಿಟಿಗಳು ಅಸಂಖ್ಯ ಕೋರ್ಸ್‌ಗಳನ್ನು ಪ್ರಾರಂಭಿಸುತ್ತಾ, ಉದ್ಯೋಗಾವಕಾಶಗಳನ್ನು ತೆರೆದಿಡುತ್ತಾ ಇರುವಾಗಲೂ ಹಲವು ಹುಡುಗಿಯರು ತಮಗೆ ಖುರ್‌ಆನ್ - ಹದೀಸ್ ಮಾತ್ರ ಕಲಿತರೆ ಸಾಕೆಂದು ಹಠ ಹಿಡಿಯುತ್ತಿರುವುದು ಸಮುದಾಯದ ಭವಿಷ್ಯದ ದೃಷ್ಟಿಯಲ್ಲಿ ಶುಭಕರ. ಹೆಣ್ಮಕ್ಕಳ ಮತ್ತು ಅವರ ರಕ್ಷಕರ ಬೇಡಿಕೆಯ ಹಿನ್ನೆಲೆಯಲ್ಲಿ ಆರಂಭಗೊಂಡ ನಮ್ಮ ಶರೀಅತ್ ಕಾಲೇಜು ವಿದ್ಯಾರ್ಥಿನಿಯರ ಹೆಚ್ಚಳದಿಂದ ಇದೀಗ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಳ್ಳುತ್ತಿದೆ.

ಅರ್ಧ ರಾತ್ರಿಯವರೆಗಿನ 'ವಅಳ್' ಪರಂಪರೆಗಳು ಕಣ್ಮರೆಯಾಗುತ್ತಿದ್ದು ಪರ್ಯಾ ಯ ವ್ಯವಸ್ಥೆಗಳು ಚಾಲ್ತಿಯಲ್ಲಿದ್ದರೂ ಮಹಿಳಾ ಯುವ ಸಮೂಹವನ್ನು ಆಕರ್ಷಿ ಸಲು ಅವು ಪರ್ಯಾಪ್ತರಾಗುತ್ತಿಲ್ಲ. ಈ ನಿಟ್ಟಿನಲ್ಲಿ ಮಹಿಳೆಯರ ಮಧ್ಯೆ ಧಾರ್ಮಿಕ ಬೋಧನೆಗೆ ಮಹಿಳೆಯರನ್ನೇ ಸಜ್ಜುಗೊಳಿಸ ಬೇಕಾದ ಅಗತ್ಯ ಇವತ್ತು ಬಹಳಷ್ಟಿದೆ. ಮರ್ಕಝುಲ್ ಹುದಾದ ಉದ್ಘಾಟನೆ ದಿನದಂದು ಇದೇ ವಿಚಾರವನ್ನು ಶೈಖುನಾ ಎ.ಪಿ. ಉಸ್ತಾದ್ ಒತ್ತಿ ಹೇಳಿದ್ದರು. ಸಾಕಷ್ಟು ಮಹಿಳಾ ದೀನೀ ಬೋಧಕಿಯರು ಬೆಳೆದು ಬರಬೇಕು ಎಂದು ಕರೆ ಕೊಟ್ಟಿದ್ದರು.

2012 ಆಗಸ್ಟ್ 8 ಬುಧವಾರ ಭಾಷಣ ಬದುಕಿನಲ್ಲಿ ಭಿನ್ನವಾದ ಅನುಭವವಾಯಿತು. ದೇರಳಕಟ್ಟೆ ಯೇನಪೋಯ ಯುನಿವರ್ಸಿ ಟಿಯ ವಾರ್ಷಿಕ ಇಫ್ತಾರ್ ಸಮಾವೇಶದಲ್ಲಿ ರಂಝಾನ್ ಮಹತ್ವದ ಬಗ್ಗೆ ಇಂಗ್ಲೀಷ್‌ನಲ್ಲಿ ಭಾಷಣ ಮಾಡಲು ಅದರ ಕುಲಾಧಿಪತಿ ಅಬ್ದುಲ್ಲಾ ಕುಂಞಿ ಹಾಜಿ ಹಾಗೂ ನಿರ್ದೇ ಶಕ ಪಿ.ಸಿ.ಎಂ. ಕುಂಞಿ ಆಹ್ವಾನ ನೀಡಿದ್ದರು. ಅಂಜಿಕೆ ಮತ್ತು ಹಿಂಜರಿಕೆಯಿಂದಲೇ ಒಪ್ಪಿ ಕೊಂಡಿದ್ದೆ. ಆ ಮೊದಲೊಮ್ಮೆ ಎಸ್ಸೆಸ್ಸೆಫ್ ಅಖಿಲ ಭಾರತ ಸಮಾವೇಶದಲ್ಲಿ ಇಂಗ್ಲೀಷ್ ಭಾಷಣಕ್ಕೆ ಅವಕಾಶ ಸಿಕ್ಕಿತ್ತು. ಆದರೆ ಅಲ್ಲಿದ್ದುದು ಸಾಮಾನ್ಯ ಕಾರ್ಯಕರ್ತರು ಮತ್ತು ಕೆಲವೇ ಮಂದಿ ಗಣ್ಯರು ಮಾತ್ರ.

ಆದರೆ ಯುನಿವರ್ಸಿಟಿಯೊಂದರ ಆಡಳಿ ತಾಧಿಕಾರಿಗಳು, ಸಿಬ್ಬಂದಿಗಳು, ಮಂಗಳೂರು ಪರಿಸರದ ಅದೆಷ್ಟೋ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಅನೇಕ ವೈದ್ಯ ವಿದ್ಯಾರ್ಥಿಗಳು ಸಮಾಜದ ಅತಿಗಣ್ಯರು ಸೇರಿದ ಸಭೆಯೊಂದರಲ್ಲಿ ಇಸ್ಲಾಮಿನ ವಿಶಿಷ್ಟ ಆರಾಧನೆಯೊಂದರ ಕುರಿತು ಆಂಗ್ಲ ಭಾಷೆಯಲ್ಲಿನ ಪ್ರತಿಪಾದನೆ ನನ್ನ ಪಾಲಿಗೆ 'ಭೀಕರ' ಸವಾಲಾಗಿದ್ದರೂ ಯಶಸ್ವಿಯಾಗಿ ನಿಭಾಯಿಸಲು ಸಾಧ್ಯವಾಯಿತು. ಕಾರ್ಯಕ್ರ ಮಕ್ಕೆ ವೇದಿಕೆಯೊದಗಿಸಿದ್ದ 'ಎಂಡುರೊಂ ಝೋನ್' ಅದಕ್ಕಾಗಿ ನನ್ನನ್ನು ಅಭಿನಂದಿಸಿತು. ಹಿರಿಯರೊಬ್ಬರು ಹೇಳಿದರು ನಿಮ್ಮನ್ನು ಎಲ್ಲರೂ ಕನ್ನಡ ವಾಗ್ಮಿ ಎಂದು ಪರಿಚಯಿ ಸುತ್ತಾರೆ. ಕನ್ನಡ ಝಮಾನ ಮುಗಿದ್ದೋ ಯ್ತು. ಹೊಸ ತಲೆಮಾರಿಗೆ ಕನ್ನಡ ಬರುವು ದಿಲ್ಲ 'ಸೋ' ನೀವಿನ್ನು ಇಂಗ್ಲೀಷ್ ವಾಗ್ಮಿ ಯಾಗಿ ಬೆಳೆಯಬೇಕು... ಆದರೆ ಹಿರಿಯರ ಆಶೀ ರ್ವಾದ ಈ ತನಕ ಫಲ ನೀಡಲಿಲ್ಲ!!

## 32

### ದುಬೈ ಪೋಲಿಸರ 'ಬಂಧನ'ಕ್ಕೊಳಗಾದ ಎರಡು ಕ್ಷಣಗಳು...

ರಾಜ್ಯದ ಸಂಘಟನಾ ಚರಿತ್ರೆಯಲ್ಲಿ ತುಂಬು ನಿರೀಕ್ಷೆಯೊಂದಿಗೆ ಜನ್ಮ ತಳೆದ ಕರ್ನಾಟಕ ಮುಸ್ಲಿಂ ಜಮಾಅತ್ ಕೌನ್ಸಿಲ್ (ಕೆ.ಎಂ.ಜೆ.ಸಿ) ಹುಟ್ಟಿದ್ದು

2012 ನವಂಬರ್ 3 ಶನಿವಾರದಂದು ಮಾಣಿ ದಾರುಲ್ ಇರ್ಶಾದ್ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ. ಮೊಹಲ್ಲಾ ಜಮಾಅತ್‌ಗಳು ಯಾವತ್ತೂ ಮುಸ್ಲಿಂ ಸಮುದಾಯದ ಶಕ್ತಿ ಕೇಂದ್ರಗಳಾಗಿದ್ದವು. ಒಂದು ಊರಿನ ವ್ಯಾಪ್ತಿಯ ಒಳಗೆ ಬರುವ ಮುಸ್ಲಿಮರೆಲ್ಲ ಒಂದು ಮಸೀದಿ ಕೇಂದ್ರವಾಗಿ ಒಂದು ವಿಶಿಷ್ಟ ಸಂಘಟಿತ ವಲಯದಲ್ಲಿ ಒಗ್ಗೂಡುವುದು, ಧಾರ್ಮಿಕ ಮತ್ತು ಸಾಂಸ್ಕೃ ತಿಕ ಕಾರ್ಯಕ್ರಮಗಳಿಗೆ ಒಂದು ನಾಯಕತ್ವ ವನ್ನು ಒಪ್ಪಿಕೊಂಡು ಮುನ್ನಡೆಯುವುದು. ವಾರದ ಜುಮಾ ದಿನದಲ್ಲಿ ಅಲ್ಲದೆ ಇನ್ನಿತರ ವಿಶೇಷ ಕಾರ್ಯಕ್ರಮಗಳೆಲ್ಲ ಊರಿನ ಸ್ತ್ರೀ ಪುರುಷರೆಲ್ಲರೂ ಒಗ್ಗೂಡಿ ಪರಸ್ಪರ ಸದು ಪದೇಶ, ಸತ್ಕಾರ್ಯಗಳನ್ನು ಹಂಚಿಕೊಳ್ಳು ವುದು ಹೀಗೆ ಸಮುದಾಯ ಒಂದರ ಮುನ್ನ ಡೆಗೆ ಯಾವುದೆಲ್ಲ ರೀತಿಯ ಕಾರ್ಯ ಯೋಜ ನೆಗಳನ್ನು ಆಯೋಜಿಸಿ ಜಾರಿಗೆ ತರಬಹು ದೋ, ಸ್ಥಾನೀಯ ಮಟ್ಟದಲ್ಲಿ ಅದಕ್ಕೆಲ್ಲ ಅತ್ಯಂತ ಸೂಕ್ತವಾದ ಬಲಿಷ್ಠ ಆಡಳಿತ ವ್ಯವಸ್ಥೆಯಾಗಿದೆ ಮೊಹಲ್ಲಾ ಜಮಾಅತ್.

ಆದರೆ ದುರದೃಷ್ಟವಶಾತ್ ಯೋಗ್ಯ ಆಡಳಿತಗಾರರು ಇಲ್ಲದ್ದರಿಂದ ನಮ್ಮ ಮೊಹಲ್ಲಾಗಳು ಧಾರ್ಮಿಕವಾಗಿ ಸೊರಗು ತ್ತಿದೆ. ಸ್ವಾರ್ಥಿಗಳೂ ಧಾರ್ಮಿಕ ತಿಳುವಳಿಕೆ ಇಲ್ಲದವರೂ ಆದ ಸಮಿತಿಯವರು ಅಭಿವೃ ದ್ಧಿಪರ ಚಿಂತನೆಯಿಲ್ಲದೆ, ಕೇವಲ ವಂತಿಗೆ ವಸೂಲಿ ಮತ್ತು ಸಿಬ್ಬಂದಿಗಳ ಸಂಬಳ ಬಟ ವಾಡೆಗೆ ಮಾತ್ರ ಮೊಹಲ್ಲಾ ಸಮಿತಿಗಳನ್ನು ಸೀಮಿತಗೊಳಿಸಿ ಅವುಗಳ ಉದ್ದೇಶ ಅಷ್ಟೇ ಎಂದು ತಿಳಿದು ಸಮುದಾಯದ ಸಬಲೀ ಕರಣದ ವಿಪುಲವಾದ ಅವಕಾಶವನ್ನು ಕೈ ಚೆಲ್ಲಿ ಬಿಟ್ಟಿದ್ದಾರೆ.

ಈ ನಿಟ್ಟಿನಲ್ಲಿ ಮೊಹಲ್ಲಾಗಳ ಒಗ್ಗಟ್ಟು ಉಲಮಾಗಳ ಮಾರ್ಗದರ್ಶನ, ಸಮರ್ಥ ನಾಯಕತ್ವ ಸಮಗ್ರ ಅಭಿವೃದ್ಧಿ ಎಂಬ ಕನಸಿನೊಂದಿಗೆ ಮೊಹಲ್ಲಾಗಳಿಗೊಂದು ಸಂಯೋಜಿಕ ಮಂಡಳಿ ಬೇಕೆಂಬ ಅಭಿಪ್ರಾಯ ಅನೇಕ ಕಾಲಗಳಿಂದ ಚಾಲ್ತಿಯಲ್ಲಿತ್ತು. ಕೆಲವು ಕಡೆಗಳಲ್ಲಿ ಇದಕ್ಕಾಗಿ 'ಸಂಯು ಕ್ತ ಜಮಾಅತ್' ಎಂಬ ವ್ಯವಸ್ಥೆಯ ನ್ನೂ ಅಸ್ತಿತ್ವಕ್ಕೆ ತರ ಲಾಗಿತ್ತು. ಇದಕ್ಕೂ ಮೊದಲು ಪ್ರತ್ಯೇಕ ಹೆಸರಿಲ್ಲದೆ ಪರಿಸರದ ಮೊಹಲ್ಲಾಗಳನ್ನು ಒಗ್ಗೂಡಿಸಿ ಅದರ ಸಂಖ್ಯೆಯನ್ನು ನೋಡಿ ನಲವತ್ತು ಜಮಾಅತ್, ಅರವತ್ತು ಜಮಾ ಅತ್ ಎಂಬ ಪ್ರಯೋಗಗಳೂ ಇದ್ದುವು. ಆದರೆ ಇದಕ್ಕೆಲ್ಲ ಭಿನ್ನವಾಗಿ ಮೊಹಲ್ಲಾಗಳ ಸಮಗ್ರ ಸುಧಾರಣೆ ಎಂಬ ಗುರಿಯೊಂದಿಗೆ ಕೆಎಂಜೆಸಿಗೆ ರೂಪು ಕೊಡಲಾಗಿತ್ತು. ಗುಂಪು ಗಾರಿಕೆ ಮತ್ತು ನವೀನವಾದಗಳಿಂದ ಕಂಗೆಟ್ಟು ಹೋಗಿರುವ ಜಮಾಅತ್‌ಗಳಿಗೆ ಉಲಮಾ ಮತ್ತು ಸಯ್ಯಿದ್‌ಗಳ ನೇತೃತ್ವದಲ್ಲಿ ಕಾಯಕಲ್ಪ ನೀಡಿ ಹೊಸ ದೆಸೆ ಮತ್ತು ದಿಕ್ಕನ್ನು ನೀಡಲು ಯೋಜನೆ ಹಾಕಲಾಗಿತ್ತು. ವಿವಿಧ ಮೊಹಲ್ಲಾಗಳಿಂದ ಬಂದಿದ್ದ ಎಂಬತ್ತೆರಡು ಮಂದಿ ಹಾಗೂ ರಾಜ್ಯದ ಸುನ್ನೀ ಪರಿವಾರದ ಎಲ್ಲ ನಾಯಕರ ಸಮಕ್ಷಮದಲ್ಲಿ ಸಯ್ಯಿದ್ ಫಝುಲ್ ಕೋಯಮ್ಮ ತಂಙಳ್ ಕೂರತ್ ಅವರ ಅಧ್ಯಕ್ಷತೆಯಲ್ಲಿ ಅವತ್ತು ರಾಜ್ಯ ಸಮಿತಿಯನ್ನು ರಚಿಸಲಾಗಿತ್ತು.

ಇದರ ಪರಿಣಾಮವೆಂಬಂತೆ ರಾಜ್ಯದ ದಕ್ಷಿಣ ಜಿಲ್ಲೆಗಳಲ್ಲಿ ಸಮರ್ಥ ಉಲಮಾಗಳ ಮುಂದಾಳುತ್ವದಲ್ಲಿ ನೂರಾರು ಮೊಹಲ್ಲಾ ಗಳನ್ನು ಒಗ್ಗೂಡಿಸಿ ಕಾರ್ಯಪ್ರವೃತ್ತಿರಾಗಲು ಸಾಧ್ಯವಾಯಿತು. ಗೌರವಾನ್ವಿತ ಉಲಮಾ ಗಳು ನಾಡಿನ ಖಾಝಿ ಹುದ್ದೆಯನ್ನು ವಹಿ ಸಿಕೊಂಡು ಮೊಹ ಲ್ಲಾ ನಿವಾಸಿಗಳಿಗೆ ಆತ್ಮ ಬಲ ಮತ್ತು ಭರವಸೆಯನ್ನು ಮೂಡಿಸಲು ಅವಕಾಶವಾಯಿತು. ತಾಜುಲ್ ಉಲಮಾರ ಸಮರ್ಥ ಉತ್ತರಾಧಿಕಾರಿ ಹಾಗೂ ಕೆಎಂಜೆಸಿ ರಾಜ್ಯಾಧ್ಯಕ್ಷರೂ ಆಗಿರುವ ಸಯ್ಯಿದ್ ಕೂರತ್ ತಂಙಳ್ ದ.ಕ. ಜಿಲ್ಲೆಯ ನೂರಾ ನಲವತ್ತ ರಷ್ಟು ಮೊಹಲ್ಲಾಗಳಿಗೆ, ರಾಜ್ಯ ಉಲಮಾ ಒಕ್ಕೂಟದ ಅಧ್ಯಕ್ಷ ಶೈಖುನಾ ಬೇಕಲ್ ಉಸ್ತಾದ್ ಉಡುಪಿ, ಚಿಕ್ಕಮಗಳೂರು, ಹಾಸನ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳ ನೂರಾ ಇಪ್ಪತ್ತರಷ್ಟು ಮೊಹಲ್ಲಾ ಗಳಿಗೆ , ರಾಜ್ಯ ಜಂಇಯ್ಯತುಲ್ ಉಲಮಾದ ಗೌರವಾಧ್ಯಕ್ಷರಾಗಿರುವ ಶೈಖುನಾ ಸುಲ್ತಾ ನುಲ್ ಉಲಮಾ ಎ.ಪಿ. ಉಸ್ತಾದ್ ಶಿವ ಮೊಗ್ಗ ಮತ್ತು ಕೊಡಗು ಜಿಲ್ಲೆಗಳ ನೂರರಷ್ಟು ಮೊಹಲ್ಲಾಗಳಿಗೆ ಖಾಝಿಗಳಾಗಿ ನೇಮಕಗೊಳ್ಳುವ ಮೂಲಕ, ಜಮಾಅತ್ ಗಳಲ್ಲಿ ಹೊಸ ಸ್ಫೂರ್ತಿ ಮತ್ತು ಸಂಚಲನ ಮೂಡಿದಂತಾಗಿದೆ. ಅಂತಹ ಮೊಹಲ್ಲಾಗಳ ಅಭಿವೃದ್ಧಿಗೆ ನೀಲ ನಕಾಶೆಯನ್ನು ಸಿದ್ಧಪಡಿಸಿ ಜಾರಿಗೊಳಿಸುವ ಉದ್ದೇಶಕ್ಕಾಗಿಯೇ ಕೆಎಂಜೆಸಿಯನ್ನು ಅಸ್ತಿತ್ವಕ್ಕೆ ತರಲಾಗಿದೆ.

2012 ಡಿಸೆಂಬರ್ ಒಂದು ಶನಿವಾರ ದಂದು ದುಬೈ- ಕರ್ನಾಟಕ ಎಸ್‌ವೈಎಸ್ ಸಂಘಟನೆಯ ಆಶ್ರಯದಲ್ಲಿ ಯುಎಇ ರಾಷ್ಟ್ರದ 41ನೇ 'ರಾಷ್ಟ್ರೀಯ ದಿನ'ದ ಅಂಗ ವಾಗಿ ದುಬೈ ಮರ್ಕಝ್ ಸಭಾಂಗಣದಲ್ಲಿ ಬೃಹತ್ ಕಾರ್ಯಕ್ರಮವನ್ನು ಇಡಲಾಗಿತ್ತು. ಮಾಜಿ ಕೇಂದ್ರ ಸಚಿವ ಸಿ.ಎಂ. ಇಬ್‌ರಾಹೀಮ್, ಸಯ್ಯಿದ್ ಖಲೀಲುಲ್ ಬುಖಾರಿ ಮುಂತಾದ ಗಣ್ಯರು ಭಾಗವಹಿಸಿದ ಕಾರ್ಯಕ್ರಮದಲ್ಲಿ ನನ್ನದೂ ಭಾಷಣ ಕಾರ್ಯಕ್ರಮ ಇತ್ತು. ತಡರಾತ್ರಿ ಒಂದು ಗಂಟೆಯ ತನಕ ನಡೆದ ವಿಜೃಂಭಣೆಯ ಕಾರ್ಯಕ್ರಮದ ಬಳಿಕ ಮಿತ್ರನೊಬ್ಬನ ಜತೆ ಊಟಕ್ಕಾಗಿ ಸಮೀಪದ ಹೋಟೆಲೊಂದಕ್ಕೆ ನಡೆಯುತ್ತಿದ್ದೆ. ತಕ್ಷಣ ರಸ್ತೆಗೆ ಅಡ್ಡ ನಿಲ್ಲಿಸಲಾಗಿದ್ದ ಬಿಳಿ ವ್ಯಾನ್ ಒಂದರಿಂದ ಇಳಿದು ಬಂದ ಇಬ್ಬರು ಸಿ.ಐ.ಡಿ. ಅಧಿಕಾರಿಗಳು ನಮ್ಮಿಬ್ಬರನ್ನು ಪೊಲೀಸ್ ವಾಹನಕ್ಕೆ ತಳ್ಳಿ ಕೊಂಡೊಯ್ದರು. ಮಾಡಿದ ತಪ್ಪೇನೆಂದೂ, ಎಲ್ಲಿಗೆ ಕೊಂಡೊಯ್ಯುತ್ತಿದ್ದಾ ರೆಂದೂ ತಿಳಿಯದೆ ಚಡಪಡಿಸಿದ ಸಂದರ್ಭ. ನಮ್ಮ 'ಬಂಧನಾ'ವಸ್ಥೆಯ ಬಗ್ಗೆ ಸಂಬಂಧ ಪಟ್ಟ ಮಿತ್ರರಿಗೆಲ್ಲ ಪೊಲೀಸರು ಕಾಣದಂತೆ ಸಂದೇಶ ರವಾನಿಸಿದೆವು. ದುಬೈಯ ಬೀದಿ ಬೀದಿಗಳಲ್ಲೆ ಅಲೆದ ನಮ್ಮ ವಾಹನವು ಕೊನೆಗೆ ನಾಯಿಫ್ ಪೊಲೀಸ್ ಸ್ಟೇಷನ್‌ಗೆ ಮುಖ ಮಾಡಿ ನಿಂತಿತು. ಗಂಭೀರ ಪೊಲೀಸ್ ಅಧಿಕಾರಿಗಳು ನಮ್ಮನ್ನು ವಾಹನದಿಂದ ಇಳಿಸಿ ಕೈದಿಗಳಂತೆ ಸಾಲು ನಿಲ್ಲಿಸಿದರು. ಭಯಾ ತಂಕಗಳು ಮಡುಗಟ್ಟಿದ ವಾತಾವರಣದಲ್ಲಿ ನಮ್ಮನ್ನು ತನಿಖೆಗೆ ಒಳಪಡಿಸಿದ ಅಧಿಕಾರಿ ಗಳು, ನಾವು ಕಾನೂನು ಬದ್ಧವಾಗಿಯೇ ಇದ್ದೇವೆ ಎಂಬುದನ್ನು ಖಾತರಿ ಪಡಿಸಿದ ಬಳಿಕ ವಶಪಡಿಸಿ ಕೊಂಡ ಐಡಿ ಕಾರ್ಡ್‌ಗಳನ್ನು ಮರಳಿಸಿ 'ಬರ್ರ' ಎಂದು ಹೊರ ಹೋಗುವ ದಾರಿ ತೋರಿಸಿದರು. ನಾನು ಮತ್ತು ಮಿತ್ರ ಊಟ ಮಾಡದಿದ್ದರೂ ಪರವಾಗಿಲ್ಲ, ಇನ್ನೊಂದು ಪೊಲೀಸ್ ವಾಹನದ ಬಾಯಿಗೆ ಸಿಗುವ ಮುನ್ನ ಸುರಕ್ಷಿತವಾಗಿ ರೂಮು ತಲುಪೋಣವೆಂದುಕೊಂಡು ಅಡ್ಡ ರಸ್ತೆ ಗಳನ್ನು ಬಳಸಿ ರೂಮು ತಲುಪಿ ನೆಮ್ಮದಿಯ ನಿಟ್ಟುಸಿರು ಬಿಟ್ಟೆವು.

ವರ್ಷಗಳ ಹಿಂದೊಮ್ಮೆ ಇದಕ್ಕಿಂತ ಭಯಾನಕ ಸನ್ನಿವೇಶದಲ್ಲಿ ನಾನು ದುಬೈ ಪೊಲೀಸರ 'ಬಂಧನ'ಕ್ಕೆ ಒಳಗಾಗಿದ್ದೆ. ಮಿತ್ರ ರಶೀದ್ ಕೃಷ್ಣಾಪುರ ಅವರ ಕಾರಿನಲ್ಲಿ 'ಖವಾನೀಜ್' ಎಂಬ ಸ್ಥಳದಲ್ಲಿ ವಾಹನ ನಿಲ್ಲಿಸಿ ಇನ್ನೊಬ್ಬ ಮಿತ್ರನ ಬರುವಿಕೆಯನ್ನು ಕಾಯುತ್ತಿದ್ದಾಗ ಹಿಂದಿನಿಂದ ಬಂದ ಪೊಲೀಸರು ನಮ್ಮ ಡ್ರೈವರನ್ನು ವಶಪಡಿಸಿ ಕೊಂಡರು. ಒಬ್ಬ ಆಜಾನುಬಾಹು ಪೊಲೀಸ್ ನಮ್ಮ ಕಾರಿಗೆ ಹತ್ತಿ ಚಲಾಯಿಸತೊಡಗಿದ. ತೋಳದ ಬಾಯಿಗೆ ಸಿಕ್ಕಿದ ಆಡಿನಂತೆ ನಮ್ಮ ಸ್ಥಿತಿ ಚಿಂತಾಜನಕವಾಗಿತ್ತು. ಕುಂಬ್ರ ಮರ್ಕ ಝುಲ್ ಹುದಾ ಮಹಿಳಾ ಕಾಲೇಜಿನ ಅಗತ್ಯಕ್ಕಾಗಿ ಕೈಗೊಳ್ಳುವ ಇಂತಹ ವಿದೇಶ ಯಾತ್ರೆಗಳಲ್ಲಿ

ಸಂಸ್ಥೆಗೆ ಸಂಬಂಧಪಟ್ಟ ದಾಖಲೆಗಳು ನಮ್ಮ ಕೈಯಲ್ಲಿರುವುದು ಸಹಜ. ಆ ದಿನ ನಮ್ಮ ಕೈಯ್ಯಲ್ಲಿ ಅದಕ್ಕೆ ಸಂಬಂಧಪಟ್ಟ ಎಲ್ಲ ವಸ್ತುಗಳೂ ಇದ್ದವು. ಇಂತಹುದ್ದೆಲ್ಲ ಅಧಿಕಾರಿಗಳ ಕಣ್ಣಿಗೆ ಬಿದ್ದರೆ ಜೈಲು ಶಿಕ್ಷೆ ಮಾತ್ರವಲ್ಲದೆ ಜೀವನ ಪರ್ಯಂತ ಆ ದೇಶಕ್ಕೆ ಪ್ರವೇಶಿಸುವುದನ್ನೇ ನಿಷೇಧ ಮಾಡಿ ಬಿಡುತ್ತಾರೆ. ಇದಕ್ಕೆಲ್ಲ ಅರ್ಹವಾದ ಸ್ಥಿತಿಯಲ್ಲೇ ನಾವವತ್ತು ಇದ್ದೆ ವು. ಕುಂಬ್ರ ಮರ್ಕಝ್‌ನ ಪ್ರತಿನಿಧಿಯಾಗಿ ಆ ದಿನ ನನ್ನ ಜತೆ ಹಿಂದಿನ ಸೀಟ್‌ನಲ್ಲಿ ಕುಳಿತಿದ್ದ ಸಿದ್ದೀಖ್ ಮೌಲವಿ ಕುಂಡಡ್ಕ ದಾಖಲೆಯ ಕಡತಗಳನ್ನು ತನ್ನ ಕಾಲಕೆಳಗೆ ತೂರಿ, ಅದನ್ನು ಮುಚ್ಚುವ ಪ್ರಯತ್ನ ಮಾಡುತ್ತಾ ನಡು ಗುತ್ತಿದ್ದರು. ಆಪತ್‌ಘಟ್ಟಗಳಲ್ಲಿ ಪಾರಾ ಗುವುದಕ್ಕಾಗಿ ಶೈಖುನಾ ಎ.ಪಿ. ಉಸ್ತಾದ್ 'ಇಜಾಝತ್' ಕೊಟ್ಟಿದ್ದ 'ದುಆಉಲ್ ಕರ್ಬ್' ನಿರಂತರ ಓದುತ್ತಾ ಮನಸಾ ಅಲ್ಲಾಹನಲ್ಲಿ ಪ್ರಾರ್ಥಿಸುತ್ತಿದ್ದೆವು. ಕಾರಿನ ಚಾಲಕ ಮತ್ತು ಮಾಲಕ ರಶೀದ್ ಕೃಷ್ಣಾಪುರ ಅವರ ಸ್ಥಿತಿ ಏನಾಗಿರಬಹುದೆಂದು ಅರಿಯಲು ಅವರ ಮೊಬೈಲಿಗೆ ಫೋನ್ ಮಾಡಿದರೆ ಅದು ನಮ್ಮ ಕಾರಿನಲ್ಲೇ ರಿಂಗಣಿಸಿ ಮತ್ತೆ ಪೊಲೀಸ್ ನಮ್ಮತ್ತ ದಿಟ್ಟಿಸುವಂತೆ ಮಾಡಿತ್ತು. ರಸ್ತೆಯುದ್ದಕ್ಕೂ ದುಬೈಯನ್ನು ಕಣ್ಣಿನಲ್ಲಿ ತುಂಬುತ್ತಾ, ಒಂದು ವೇಳೆ ಇದುವೇ ನನ್ನ ಬದುಕಿನ ಕಟ್ಟಕಡೆಯ ದುಬೈ ಯಾತ್ರೆಯಾ ದೀತಾ ಎಂಬ ಆತಂಕದಿಂದಲೇ ಸಾಗುತ್ತಿದ್ದಾಗ ನಮ್ಮ ವಾಹನವು ರಾಶಿದಿಯ್ಯಃ ಪೊಲೀಸ್ ಠಾಣೆಯ ಮುಂಭಾಗದಲ್ಲಿ ನಿಂತು ಬಿಟ್ಟಿತು. ಇಬ್ಬರು ಪೊಲೀಸರ ಮಧ್ಯದಲ್ಲಿ ರಶೀದ್ ಅವರು ಅಲ್ಲಿಗೆ ಆಗಮಿಸಿದರು. ನಮ್ಮನ್ನು ಹೊರಗಡೆ ಕುಳ್ಳಿರಿಸಿ ಅವರನ್ನು ಒಳಕೋಣೆ ಯಲ್ಲಿ ತನಿಖೆಗೆ ಒಳಪಡಿಸಿದ ಪೊಲೀಸರು ಅವರೂ ಕಾನೂನು ಬದ್ಧ ರೀತಿಯಲ್ಲಿಯೇ ಇದ್ದಾರೆ ಎಂದು ಮನವರಿಕೆಯಾಗುತ್ತಾ ನಮ್ಮ ಕಡೆಗೆ ಬಂದು 'ಅಫ್ವನ್' ಹೇಳುತ್ತಾ ಗೌರವಯುತವಾಗಿ ಬೀಳ್ಕೊಟ್ಟರು.

ಊರಿನ ಶಿಕ್ಷಣ ಸಂಸ್ಥೆಗಳ ಉಳಿವು ಮತ್ತು ಬೆಳವಣಿಗೆಗಾಗಿ ಅದೆಷ್ಟೋ ಉಲಮಾಗಳು ಇಂತಹದ್ದೆ ಪ್ರತಿಕೂಲ ಪರಿಸ್ಥಿತಿಗಳನ್ನು ಅತಿಜ ಯಿಸಿ, ವಿಶ್ರಮ ರಹಿತವಾಗಿ ದುಡಿದು ಸಮು ದಾಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಬಾಹ್ಯನೋಟಗಳಿಗೆ ಇವರ ಕಷ್ಟಗಳು ಯಾರಿಗೂ ಅರ್ಥವಾಗುತ್ತಿಲ್ಲ.

2013 ಜನವರಿ 17ರಂದು ಬಹ್‌ರೈನಿ ದೇಶಕ್ಕೆ ಮೊದಲ ಬಾರಿ ಪ್ರಯಾಣಿಸುವ ಅವಕಾಶ ಒದಗಿ ಬಂತು. ಹಿಂದೆ ಕುವೈತ್‌ಗೆ ಹೋದಂತೆ ಇಲ್ಲಿಯೂ ಮೀಲಾದ್ ಸಮಾ ವೇಶದಲ್ಲಿ 3 ದಿನಗಳ ಕಾಲ ಭಾಷಣ ಮಾಡಲು 'ಬಹ್‌ರೈನ್ - ಕೊಡಗು ಸುನ್ನೀ ಜಮಾಅತ್' ಪದಾಧಿ ಕಾರಿಗಳು ಆಹ್ವಾನ ನೀಡಿದ್ದರು. ಆ ದಿನ ಬೆಳಿಗ್ಗೆ ದುಬೈಯಿಂದ ಹೊರಟು ಸ್ಥಳೀಯ ಕಾಲ ಮಾನ ಹನ್ನೊಂದು ನಲವತ್ತಕ್ಕೆ ಬಹರೈನ್ ತಲುಪಿದಾಗ ಸಮಿತಿಯ ಅಧ್ಯಕ್ಷ ಮುಹ ಮ್ಮದ್ ಇಸ್ಮಾಈಲ್ ಸಮೇತ ಅನೇಕ ಪದಾಧಿಕಾರಿಗಳು ಬರಮಾಡಿಕೊಂಡರು.

ಜನವರಿ 18ರಿಂದ 3 ದಿನಗಳ ಕಾಲ ಬಹರೈನ್ ರಾಜಧಾನಿ ಮನಾಮಃ ದಲ್ಲಿನ ಪಾಕಿಸ್ತಾನ್ ಕ್ಲಬ್‌ನಲ್ಲಿ ಕಾರ್ಯಕ್ರಮ ನಡೆಯಿತು. ಮೊದಲ ದಿನ ಕೊಡಗು ಜಮಾಅತ್, ಎರಡನೇ ದಿನ ದಕ್ಷಿಣ ಕರ್ನಾಟ ಸುನ್ನೀ ಸೆಂಟರ್ ಹಾಗೂ ಕೊನೆಯ ದಿನ 'ಸುಳ್ಯ ವೆಲ್‌ಫೇರ್ ಎಸೋಸಿಯೇಶನ್' ಕಾರ್ಯ ಕ್ರಮದ ಪ್ರಾಯೋಜಕತ್ವ ವಹಿಸಿ ಕೊಂಡಿತ್ತು. ಒಟ್ಟು ಒಂದು ವಾರದ ಬಹ್‌ರೈನ್ ಪ್ರವಾಸ ತುಂಬ ಹೃದ್ಯವಾಗಿತ್ತು. ದೇಶದ ವಿವಿಧ ಕಡೆಗಳ ಪ್ರೇಕ್ಷಣೀಯ ಸ್ಥಳಗಳು, ಝಿಯಾ ರತ್ ಕೇಂದ್ರಗಳು, ಜಗತ್ತಿನ ಎಲ್ಲ ಕಾಲದ, ಆಕಾರದ, ವಿನ್ಯಾಸದ ಪವಿತ್ರ ಖುರ್‌ಆನ್ ಗ್ರಂಥಗಳ ಅತ್ಯಪೂರ್ವ ಸಂಗ್ರಹವಾದ 'ಹೂರ' ಎಂಬಲ್ಲಿನ 'ಬೈತುಲ್ ಖುರ್‌ಆನ್' ಸೌದಿ -ಬಹ್‌ರೈನ್ ವಿಶೇಷ ಸೇತುವೆಗಳನ್ನೆಲ್ಲ ಸಾಧ್ಯವಾದಷ್ಟು ಸಂದರ್ಶಿಸಿ ಅಲ್ಲಿಂದ ಜನವರಿ 23ರಂದು ವಿದಾಯ ಕೋರಿದಾಗ ಅಂದಿನ ಡೈರಿಯಲ್ಲಿ ಅಲ್ಲಿನ ಅನುಭವಗಳನ್ನು ಬರೆದು ಹೀಗೆ ಕೊನೆಗೊಳಿಸಿದ್ದೆ. 'ಒಂದು ದೇಶಕ್ಕೆ ಭಾಷಣಕ್ಕೆ ಹೋದಾಗ ಸಿಗುವ ಆದರಾತಿಥ್ಯ ಮತ್ತು ಸಂಸ್ಥೆಯ ಹಣ ಕಲೆಕ್ಷ ನ್‌ಗೆ ಹೋದಾಗ ಉಂಟಾಗುವ ಅನುಭವಗಳ ಮಧ್ಯೆ ರಾತ್ರಿ- ಹಗಲುಗಳಷ್ಟು ಅಂತರವಿದೆ'

2012 ಫೆಬ್ರವರಿ 15 ಶುಕ್ರವಾರ ಸುನ್ನೀ ಸಂಘ ಕುಟುಂಬದಲ್ಲಿ ಹೊಸ ಕೂಸೊಂದರ ಜನನವಾಯಿತು. ವಿದೇಶ ರಾಷ್ಟ್ರಗಳಲ್ಲಿರುವ ಕನ್ನಡಿಗ ಸುನ್ನಿಗಳಿಗೆ ಏಕೀಕೃತ ವ್ಯವಸ್ಥೆಯ ಒಂದೇ ಹೆಸರಿನ ಸಂಘಟನೆ ಎಂಬ ಕನಸಿಗೆ ಅಂದು ಸಾಕ್ಷಾತ್ಕಾರ ದೊರೆತ ದಿನ. ಯುಎಇ ಯಲ್ಲಿ ಕರ್ನಾಟಕ ಸುನ್ನೀ ಯುವಜನ ಸಂಘ, ಸೌದಿ ಅರೇಬಿಯಾದಲ್ಲಿ ಗಲ್ಫ್ ಕರ್ನಾಟಕ ಸುನ್ನೀ ಫೋರಂ, ಕುವೈತ್‌ನಲ್ಲಿ ಕುವೈತ್ ಕರ್ನಾಟಕ ಸುನ್ನೀ ಎಸೋಸಿಯೇಶನ್ ಎಂಬ ಹೆಸರುಗಳಲ್ಲಿ ಪ್ರತ್ಯೇಕವಾಗಿ ಕಾರ್ಯಾ ಚರಿಸು ತ್ತಿದ್ದ ಸಂಘಟನೆಗಳನ್ನು ಒಗ್ಗೂಡಿಸಿ 'ಕರ್ನಾಟಕ ಕಲ್ಚರಲ್ ಫೌಂಡೇಶನ್' (ಕೆ.ಸಿ.ಎಫ್) ನಿಂದ ಅಧಿಕೃತ ಸಂಘಟನೆಯ ನ್ನು ದುಬೈ ಮೇಲೊಡಿ ಕ್ವೀನ್ ಹೋಟೆಲ್ ಸಭಾಂಗಣದಲ್ಲಿ ಸೇರಿದ ಸಭೆಯಲ್ಲಿ ರಾಜ್ಯ ಜಂಇಯ್ಯತುಲ್ ಉಲಮಾ ದ ಅಧ್ಯಕ್ಷ ಖಾಝಿ ಪಿ.ಎಂ. ಇಬ್‌ರಾಹೀಂ ಮುಸ್ಲಿ ಯಾರ್ ಬೇಕಲ್ ಘೋಷಣೆ ಮಾಡಿದರು. ಈಗ ಎಲ್ಲ ಗಲ್ಫ್ ರಾಷ್ಟ್ರಗಳಲ್ಲಿಯೂ ಅನಿವಾಸಿ ಸುನ್ನೀ ಕನ್ನಡಿಗರ ಅಧಿಕೃತ ಕ್ರಿಯಾ ವೇದಿಕೆಯಾಗಿ ಕೆ.ಸಿ.ಎಫ್. ಸಕ್ರಿಯವಾಗುತ್ತಿದ್ದು ಹೊಸ ನಿರೀಕ್ಷೆಗಳನ್ನು ಮೂಡಿಸಿ ಮುನ್ನಡೆಯುತ್ತಿದೆ.

ಭಾರತದಾದ್ಯಂತ ಎಸ್ಸೆಸ್ಸೆಫ್‌ಗೆ ಏಕ ರೂಪವನ್ನು ಕೊಡುವ ಬಗ್ಗೆ ವರ್ಷಗಳಿಂದ ನಡೆದ ಚರ್ಚೆಯ ಉಪಸಂಹಾರವೆಂಬಂತೆ ರಾಷ್ಟ್ರೀಯ ಮಟ್ಟದಲ್ಲಿ ಮುಸ್ಲಿಂ ಸ್ಟೂಡೆಂ ಟ್ಸ್ ಓರ್ಗನೈಝೇಶನ್ ಆಫ್ ಇಂಡಿಯಾ (ಎಂ.ಎಸ್.ಓ) ಎಂಬ ಹೆಸರಲ್ಲಿಯೂ ದಕ್ಷಿಣ ರಾಜ್ಯಗಳಾದ ಕೇರಳ, ಕರ್ನಾಟಕ, ತಮಿಳು ನಾಡು, ಲಕ್ಷದ್ವೀಪ ಮತ್ತು ಅಂಡಮಾನ್ ನಿಕೋಬಾರ್‌ಗಳಲ್ಲಿ ಸುನ್ನೀ ಸ್ಟೂಡೆಂಟ್ಸ್ ಫೆಡರೇಶನ್ (ಎಸ್ಸೆಸ್ಸೆಫ್) ಎಂಬ ಹೆಸರಿನಲ್ಲಿ ಯೂ ಕಾರ್ಯಾಚರಣೆ ಮುಂದುವರಿಸಲು ನಿರ್ಧರಿಸಲಾಗಿತ್ತು. ಈ ನಿಟ್ಟಿನಲ್ಲಿ ಎಂ.ಎಸ್.ಓ. ರಾಷ್ಟ್ರೀಯ ಸಮಿತಿ ರಚನೆಗೆ 2013 ಏಪ್ರಿಲ್ 27 ಶನಿವಾರ ನಿಗಧಿಯಾಗಿತ್ತು. ಅದೇ ದಿನ ಕೇರಳ ಎಸ್ಸೆಸ್ಸೆಫ್‌ನ 40ನೇ ವಾರ್ಷಕ ಸಮ್ಮೇ ಳನವೂ ಇದ್ದುದರಿಂದ ಎರನಾಕುಳಂ ಜಿಲ್ಲೆಯ 'ಇರಪ್ಪಳ್ಳಿ' ಎಂಬಲ್ಲಿಯೇ ರಾಷ್ಟ್ರೀಯ ಸಮಾವೇಶವೂ ನಡೆದು ರಾಷ್ಟ್ರೀಯ ಘಟಕದ ಮೊಟ್ಟಮೊದಲ ಸಮಿತಿ ಆಯ್ಕೆಗೊಂಡಿತ್ತು. ರಾಜಸ್ಥಾನದ ಜೈಪುರದ ಪ್ರಖ್ಯಾತ ಸಯ್ಯಿದ್ ವಂಶಸ್ಥರೂ ಯುವ ವಿದ್ವಾಂಸರೂ ವಾಗ್ಮಿ ಯೂ ಆದ ಸಯ್ಯಿದ್ ಮುಹಮ್ಮದ್ ಖಾದಿರಿ ಅಧ್ಯಕ್ಷ ರಾಗಿಯೂ ಆರ್.ಪಿ. ಹುಸೈನ್ ಕೇರಳ ಪ್ರಧಾನ ಕಾರ್ಯದರ್ಶಿಯೂ ಆದ ಸಮಿತಿಯಲ್ಲಿ ನನ್ನನ್ನು ಡೆಪ್ಯುಟಿ ಪ್ರೆಸಿಡೆಂಟ್ ಹುದ್ದೆಗೆ ಆಯ್ಕೆ ಮಾಡಿದರು.

ಈ ಆಯ್ಕೆ ನಿಜವಾಗಿಯೂ ನನ್ನ ಜೀವನದಲ್ಲೊಂದು ಅಚ್ಚರಿಯಾಗಿತ್ತು. 1994ರಲ್ಲಿ ರಾಜ್ಯ ಎಸ್ಸೆಸ್ಸೆಫ್‌ನ ಪುನರುದ ಯದ ಕಾಲದ ಹಿಂದೆ, ಕರ್ನಾಟಕದಲ್ಲಿ ಎಸ್ಸೆಸ್ಸೆಫ್‌ಗೆ ಬದಲಾಗಿ ಇದೇ ಎಂ.ಎಸ್.ಓ. ಘಟಕಗಳನ್ನು ಸ್ಥಾಪಿಸುವುದು ಸೂಕ್ತವೆಂದು ನಾನು ಬಲವಾಗಿ ವಾದಿಸುತ್ತಿದ್ದೆ. ಆಗಲೇ ಉತ್ತರ ಪ್ರದೇಶದ ಅಲೀಘಡ್ ವಿಶ್ವವಿದ್ಯಾ ನಿಲಯ ಕೇಂದ್ರವಾಗಿ ಉತ್ತರದ ರಾಜ್ಯಗಳಲ್ಲಿ ಎಂ.ಎಸ್.ಓ. ಸಕ್ರಿಯವಾಗಿತ್ತು. ಆದರೆ ನನ್ನ ಅಭಿಪ್ರಾಯಕ್ಕೆ ಅವತ್ತು ಇದ್ದ

ಕೆಲವೇ ಕಾರ್ಯಕರ್ತರಲ್ಲಿ ಹಲವರು ಸಹಮತ ವ್ಯಕ್ತಪಡಿಸಲಿಲ್ಲ. ಆದುದರಿಂದ ನಾನು ಕಕ್ಕಿಂಜೆಯ ಕೆಲವು ಹುಡುಗರನ್ನು ಸೇರಿಸಿ ಎಂ.ಎಸ್.ಓ. ಕಕ್ಕಿಂಜೆ ಶಾಖೆಯನ್ನು ರಚಿಸಿ ಅದರ ಅಧ್ಯಕ್ಷನಾಗಿದ್ದೆ. ಅನಂತರ ಹುಸೈನ್ ಸಅದಿ ಕೆ.ಸಿ.ರೋಡ್ ಅವರ ಅಧ್ಯಕ್ಷತೆಯಲ್ಲಿ ನಡೆದ ದ.ಕ. ಜಿಲ್ಲಾ ಸಮಿತಿ ಸಭೆಯಲ್ಲಿ ನನ್ನನ್ನು ಜಿಲ್ಲಾ ಎಸ್ಸೆಸ್ಸೆಫ್ ಸಂಘಟನಾ ಕಾರ್ಯದರ್ಶಿಯಾಗಿ ಮಾಡಿದ್ದರಿಂದ ಎಂ.ಎಸ್.ಓ. ಅಲ್ಲೇ ಉಳಿಯಿತು. ಈಗ ನೋಡಿದರೆ ಅದೇ ಎಂ.ಎಸ್.ಓ.ನ ಕೇಂದ್ರ ಸಮಿತಿಗೆ ನಾನು ಉಪಾಧ್ಯಕ್ಷನಾಗಿದ್ದೆ.

1989ರಲ್ಲಿ ಕರ್ನಾಟಕ ರಾಜ್ಯ ಮಟ್ಟದಲ್ಲಿ ಸ್ವತಂತ್ರ ನೋಂದಣಿ ಪಡೆದು ಪುನಾ ರಚನೆಗೊಂಡ ಎಸ್ಸೆಸ್ಸೆಫ್ 2014ರಲ್ಲಿ ಬೆಳ್ಳಿ ಹಬ್ಬ ಆಚರಿಸಲಿರುವ ವಿಚಾರ ಕಾರ್ಯಕರ್ತ ರಲ್ಲಿ ಹೊಸ ಹುಮ್ಮಸ್ಸು ಮೂಡಿಸಿತ್ತು. ಬೆಳ್ಳಿ ವರ್ಷವನ್ನು ಐತಿಹಾಸಿಕಗೊಳಿಸಲು ನಾಯಕರ ವಿವಿಧ ಕಾರ್ಯ ಯೋಜನೆಗಳನ್ನು ಯೋಜಿ ಸುತ್ತಿದ್ದರು. ಕಾರ್ಯಕ್ರಮ ಸಂಪೂರ್ಣ ಯೋಜಿತ ಹಾಗೂ ವೈಜ್ಞಾನಿಕ ರೀತಿಯಲ್ಲಿ ನಡೆಸಲು ಮೊದಲು ಒಂದು ಯೋಜನಾ ಸಮಿತಿಯನ್ನು ರಚಿಸಲು ನಿರ್ಧರಿಸಿ 2013 ಮೇ 7 ಮಂಗಳವಾರ ಅಪರಾಹ್ನ ಉಳ್ಳಾಲದ ಖಾಝಿ ಹೌಸ್‌ನಲ್ಲಿ ನಾಯಕ ಮಟ್ಟದ ಸಭೆ ಆಯೋಜಿಸಲಾಗಿತ್ತು. ಅದರಲ್ಲಿ ಪ್ಲಾನಿಂಗ್ ಕಮಿಟಿ ರಚಿಸಿ ಅಧ್ಯಕ್ಷರಾಗಿ ಎಸ್.ಪಿ. ಹಂಝ ಸಖಾಫಿ ಹಾಗೂ ಪ್ರಧಾನ ಕಾರ್ಯದರ್ಶಿ ಯಾಗಿ ನನ್ನನ್ನು ಆಯ್ಕೆ ಮಾಡಲಾಯಿತು. ಮುಂದಿನದ್ದು ಸಂಘ ಕುಟುಂಬದಲ್ಲಿ ಸಂಭ್ರಮದ ದಿನಗಳಾಗಿದ್ದವು.

# 33

ಬದುಕಿದು ಜಟಕಾ ಬಂಡಿ... ವಿಧಿ ಅದರ ಸಾಹೇಬ

2012ರ ಕೊನೆಯಲ್ಲಿ ಮುಸ್ಲಿಂ ಮೊಹಲ್ಲಾಗಳ ಸಬಲೀಕರಣದ ಲಕ್ಷ್ಯದೊಂ ದಿಗೆ ಉದಯಿಸಿದ ಕರ್ನಾಟಕ ಮುಸ್ಲಿಂ ಜಮಾಅತ್ ಕೌನ್ಸಿಲ್‌ನ ಫಲಶ್ರುತಿಯೆಂಬಂತೆ ಮೊಹಲ್ಲಾಗಳ ಧಾರ್ಮಿಕ ನೇತೃತ್ವಕ್ಕಾಗಿ ಪ್ರಗಲ್ಭ ಖಾಝಿಗಳನ್ನು ನೇಮಕ ಮಾಡುವ ಕಾರ್ಯಕ್ರಮಕ್ಕೆ ಅನೇಕ ಮೊಹಲ್ಲಾಗಳ ಮುಖಂಡರು ಚಾಲನೆ ನೀಡತೊಡಗಿದರು. 2013 ಜೂನ್ 13 ಗುರುವಾರ ಚಿಕ್ಕಮ ಗಳೂರು ನಗರದ ಗಾಯತ್ರಿ ಕಲ್ಯಾಣ ಮಂಟ ಪದಲ್ಲಿ ನಡೆದ ಜಮಾಅತ್ ಪ್ರತಿನಿಧಿಗಳ ಸಮಾವೇಶದಲ್ಲಿ ಜಿಲ್ಲೆಯ ಇಪ್ಪತ್ತು ಮೊಹಲ್ಲಾಗಳ ಖಾಝಿ ಹುದ್ದೆಯನ್ನು ರಾಜ್ಯ ಉಲಮಾ ಒಕ್ಕೂಟದ ಅಧ್ಯಕ್ಷರಾದ ಮೌಲಾ ನಾ ಬೇಕಲ್ ಉಸ್ತಾದ್‌ಗೆ ವಹಿಸಲಾಯಿತು. ಸಮಾವೇಶದಲ್ಲಿ ಸಮಸ್ತ ಉಪಾಧ್ಯಕ್ಷ ಸಯ್ಯಿದ್ ಅಲೀ ಬಾಫಖೀ ತಂಙಳ್, ಸಮಸ್ತ ಕಾರ್ಯದರ್ಶಿ ಪೇರೋಡ್ ಉಸ್ತಾದ್ ಮುಂತಾದ ಪ್ರಮುಖರು ಪಾಲ್ಗೊಂಡರು.

ಘಟ್ಟ ಪ್ರದೇಶಗಳ ಮುಸ್ಲಿಮ್ ಮೊಹ ಲ್ಲಾಗಳಲ್ಲಿ ಮೂಡಿದ ಈ ಜಾಗೃತಿಯು ಒಂದು ಸಮಾಜ ಸುಧಾರಣಾ ಪ್ರಕ್ರಿಯೆಯ ಭಾಗವೆಂದರೆ ತಪ್ಪಿಲ್ಲ. ಅಲ್ಲಿನ ಮುಗ್ಧ ಮನುಷ್ಯರು ವಿದ್ವಾಂಸರ ಜತೆ ಅತ್ಯಂತ ಗೌರವಾದರಗಳನ್ನು ಹೊಂದಿದವರು. ಶುದ್ಧ ಹೃದಯಿಗಳೂ ಸ್ನೇಹ ಜೀವಿಗಳೂ ಆದ ಘಟ್ಟದ ಮೇಲಿನ ಮನುಷ್ಯರನ್ನು ನಾನಾ ವಿಧದಲ್ಲಿ ಶೋಷಣೆ ಮಾಡಿ ಅದೆಷ್ಟೋ ಉಲಮಾ ವೇಷದಾರಿಗಳು ಈ ಪ್ರದೇಶಗಳಿಗೆ ವಕ್ಕರಿಸಿ ತಮ್ಮ ಸ್ವಾರ್ಥ ಸಾಧಿಸಿಕೊಂಡಿ ದ್ದಾರೆ. ದರ್ಸ್‌ಗಳಲ್ಲಿ ನಾಮಕಾವಸ್ಥೆ ಕಲಿತ ವರು ಮತ್ತು ಕೇರಳ ಕಡೆಗಳಿಂದ ಆಗಮಿಸುವ ಅರ್ಧ ಪಂಡಿತರೆಲ್ಲ ಘಟ್ಟವನ್ನು ತಮ್ಮ ಸುಪರ್ದಿಯಲ್ಲಿಟ್ಟು ಹುಲುಸಾಗಿ ಬಳಸಿ ಕೊಂಡಿದ್ದೇ ಹೆಚ್ಚು. ಹೀಗಾಗಿ ಸರಿಯಾದ ವಿದ್ವಾಂಸರ ಮಾರ್ಗದರ್ಶನ ಪಡೆಯಲು ಮತ್ತು ಧಾರ್ಮಿಕವಾಗಿ ಹೆಚ್ಚು ಸುಧಾರಣೆಗೊಳ್ಳಲು ಆ ಭಾಗದವರಿಗೆ ಅವಕಾಶ ಸಿಕ್ಕಿದ್ದು ಕಡಿಮೆ. ಕೆಲವು ಪಟ್ಟಣಗಳಿಗೆ ಮಾತ್ರ ಉತ್ತಮ ಆಲಿಂಗಳನ್ನು ಹೊಂದುವ ಅವಕಾಶ ಸಿಕ್ಕಿದರೆ ಹಳ್ಳಿಗಳ ಗೋಳು ಹೇಳ ತೀರದ್ದಾಗಿತ್ತು.

ಇಂತಹ ಸನ್ನಿವೇಶಗಳಲ್ಲಿ ಪ್ರಗಲ್ಭ ಉಲಮಾಗಳನ್ನು ಹೀಗೇ ಹಿಂದುಳಿದ ಮೊಹಲ್ಲಾಗಳ ಖಾಝಿಗಳನ್ನಾಗಿ ಮಾಡಿ ಶತಮಾನಗಳ ಶೋಷಣೆಗಳಿಂದ ಮುಕ್ತ ಗೊಳಿಸಿ ಮೊಹಲ್ಲಾಗಳಿಗೆ ಹೊಸ ದಿಕ್ಕನ್ನು ನೀಡಿ ಸುಧಾರಿಸುವ ಪ್ರಕ್ರಿಯೆಗೆ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿತ್ತು. ಚಿಕ್ಕಮಗ ಳೂರು ಜಿಲ್ಲೆಗೆ ಶೈಖುನಾ ಬೇಕಲ್ ಉಸ್ತಾದ್ ಖಾಝಿಯಾದ ಹಿನ್ನೆಲೆಯಲ್ಲಿ ಮಲೆನಾಡ ಹಲವು ಮೊಹಲ್ಲಾಗಳಲ್ಲಿ ಸಂಚಲನ ಮೂಡಿದ್ದು ಮುಂ ದೆ ಖಾಝಿ ಆಂ ದೋಲನವೇ ನಡೆದ ದ್ದು ನಿಜ.

ಜೂನ್ ಹದಿ ನಾರರಂದು, ನಾನು ಕಲಿತು ಝ್ಯುನೀ ಪದವಿ ಪಡೆದ ಕಾಲೇಜಿನಲ್ಲಿ, ಕೇರಳದ ಮಲ ಪ್ಪುರಂ ಜಿಲ್ಲೆಯ ವಲಿಯೋರ ಎಂಬಲ್ಲಿಯ ದಾರುಲ್ ಮಆರಿಫ್ ಅರಬಿಕ್ ಕಾಲೇಜಿನ ಸನದ್‌ದಾನ ಸಮ್ಮೇಳನದ ಅಂಗವಾಗಿ ನಡೆದ ಆಧ್ಯಾತ್ಮಿಕ ಸಮ್ಮೇಳನದಲ್ಲಿ ನನಗೆ ಮುಖ್ಯ ಭಾಷಣದ ಆಹ್ವಾನ ಬಂದಿತ್ತು. ಝ್ಯುನೀ ಪದವಿಯು ಅಲ್ಲಿನ ಶರೀಅತ್ ಕಾಲೇಜಿನ ಮುಖ್ತಸರ್(ಪ್ರಿಡಿಗ್ರಿ) ಪದವಿಯಾಗಿದ್ದು ನನಗೆ ಬಯಸದೆ ಬಂದ ಭಾಗ್ಯವಾಗಿತ್ತು.

ಪ್ರಗಲ್ಭ ವಿದ್ವಾಂಸ, ಅಸಾಮಾನ್ಯ ಅರಬೀ ಕವಿ, ಸಮಸ್ತ ಕೇಂದ್ರ ಮುಶಾವರದ ಕಾರ್ಯ ದರ್ಶಿಯೂ ಆಗಿದ್ದ ಶೈಖುನಾ ತಿರೂರಂಜಾಡಿ ಬಾಪು ಮುಸ್ಲಿಯಾರ್ ಅವರ ದರ್ಸ್‌ನಲ್ಲಿ 'ತಿರೂರಂಗಾಡಿ' ಎಂಬಲ್ಲಿ ಕಲಿಯುತ್ತಿದ್ದ ವೇಳೆ ಅಲ್ಲಿನ 80 ವಿದ್ಯಾರ್ಥಿಗಳನ್ನು, ಪ್ರಧಾನ ಮುದರ್ರಿಸ್ ಬಾಪು ಉಸ್ತಾದರನ್ನು ದಾರುಲ್ ಮಆರಿಫ್‌ಗೆ ಆಹ್ವಾನಿಸಲಾಗಿತ್ತು. ಹಾಗೇ ತೆರಳಿದ ತಂಡದಲ್ಲಿದ್ದ ನನಗೂ ಮುಂದಿನ ವರ್ಷದ ಪದವಿ ಪ್ರಧಾನ ಸಮಾವೇಶದಲ್ಲಿ 'ಆಲಿಂ ಝ್ಯುನಿ' ಸನದ್ ದೊರಕಿತು. ಮುಂದೆ ಮರ್ಕಝುಸ್ಸಖಾಫತಿಸ್ಸುನ್ನಿಯ್ಯಃದಿಂದ ಪದವಿಗಳನ್ನು ಪಡೆದಾಗಲೂ 'ಝ್ಯುನೀ' ಎಂಬುದು ನನ್ನ ಹೆಸರಿನಿಂದ ಬಿಟ್ಟು ಬಿಡಲಿಲ್ಲ. ಇದು ದಾರುಲ್ ಮಆರಿಫ್ ಸಂಸ್ಥೆಯವರಿಗೆ ತುಂಬ ಖುಷಿಯಾಗಿತ್ತು. ಅವರಿಗೆ ಅದೊಂದು ಸುಲಭದ ಜಾಹೀರಾತೂ ಆಗಿತ್ತು.

ಹಾಗಾಗಿ ಅಲ್ಲಿನ ಪ್ರಮುಖ ಕಾರ್ಯಕ್ರಮಗಳಿಗೆಲ್ಲ ಇಂದಿಗೂ ನನಗೆ ಖಾಯಂ ಆಹ್ವಾನ ಇದ್ದೇ ಇದೆ. ಜ್ಞಾನ ಪ್ರಪಂಚದ ಮಿನುಗು ತಾರೆಗಳಾದ ಪೊನ್ನಾನಿ ಶೈಖ್ ಝೈನುದ್ದೀನ್ ಮಖ್ ದೂಂ(ﷺ) ಅವರ ವಂಶ ಪರಂಪರೆಯಲ್ಲಿ ಹುಟ್ಟಿದ ಮಹಾತ್ಮರಿಂದ ಸ್ಥಾಪಿತಗೊಂಡ 'ದಾರುಲ್ ಮಆರಿಫ್ ಅರಬಿಕ್ ಕಾಲೇಜಿ'ನ ಝೈನೀ ಪದವಿಯು ಮಹಾತ್ಮರಾದ ಝೈನುದ್ದೀ ನ್ ಮಖ್‌ದೂಂ ಅವರ ಸ್ಮಾರಕವೂ ಹೌದು.

ಚಿಕ್ಕಮಗಳೂರು ಜಿಲ್ಲೆಗೆ ಬೇಕಲ್ ಉಸ್ತಾದ್ ಖಾಝಿಯಾಗಿ ನೇಮಕಗೊಂಡ ನಂತರ ಸಮೀಪದ ಜಿಲ್ಲೆಗಳ ಮೊಹಲ್ಲಾ ಗಳಿಗೂ ಅವರ ನಾಯಕತ್ವವನ್ನೂ ವಿಸ್ತರಿಸಬೇಕೆಂಬ ಬಯಕೆ ಆ ಪ್ರದೇಶಗಳ ಮುಸ್ಲಿಂ ಮುಖಂಡರಿಗೆ ಮೂಡಿತ್ತು. ಅದ ರಂತೆ ಜೂನ್ 27 ಗುರುವಾರ ಹಾಸನ ಜಿಲ್ಲೆ ಯ 20 ಮೊಹಲ್ಲಾಗಳು ಬೇಕಲ್ ಉಸ್ತಾದ ರನ್ನೂ ಖಾಝಿಯಾಗಿ ಅಂಗೀಕರಿಸಿದವು.

2013 ಜೂನ್ 29 ಶನಿವಾರ ನಮ್ಮ ಕುಟುಂಬದ ಪಾಲಿಗೆ ಒಂದು ಚಾರಿತ್ರಿಕ ದಿನವಾಗಿತ್ತು. 2011ರಲ್ಲಿ ಅನಿರೀಕ್ಷಿತವಾಗಿ ನನ್ನ ಮಾವ ಸಯ್ಯಿದ್ ಮುಹಮ್ಮದ್ ಪಯೋಟ ತಂಙಳ್ ನಿಧನರಾದರು. ಸುಮಾ ರು 27 ವರ್ಷಗಳ ಕಾಲ ಮಾವನ ಕುಟುಂಬ ಕಾಸರಗೋಡು ಸಮೀಪದ 'ಪಯೋಟ' ಎಂಬ ಗ್ರಾಮದಲ್ಲಿ ವಾಸವಿತ್ತು. ತಮ್ಮ ಆಧ್ಯಾತ್ಮಿಕ ವ್ಯಕ್ತಿತ್ವದ ಮೂಲಕ ಪ್ರದೇಶದ ಸರ್ವಜನರ ಆಶಾಕೇಂದ್ರವಾಗಿದ್ದರು ಪಯೋಟ ತಂಙಳ್. ಅವರ ಮರಣದೊಂದಿಗೆ ಆ ಊರನ್ನೂ ತ್ಯಜಿಸಲು ಕುಟುಂಬ ನಿರ್ಧರಿಸಿತು. ಮಾವನ ಮರಣದ ಬಳಿಕ ಆ ಮನೆಯಲ್ಲಿ ನನ್ನ ಕುಟುಂಬವು ವಾಸ್ತವ್ಯವಿತ್ತು. ಜೂನ್ 29 ರಂದು ನಾವು ಅಲ್ಲಿಗೆ ವಿದಾಯ ಕೋರಿದೆವು. ಕಾಲು ಶತಕಗಳ ಕಾಲ ಪಯೋಟ ತಂಙಳ್‌ರ ಆಧ್ಯಾತ್ಮಿಕ ಪ್ರಭೆಯಲ್ಲಿ ಸಾವಿರಾರು ಜನರ ಬದುಕಿಗೆ ಬೆಳಕು ಹರಿಸಿದ ಮನೆಯು ಮತ್ತೊಮ್ಮೆ ಶೂನ್ಯವಾಯಿತು. ಜೂನ್ 30 ರಂದು ತಲಪಾಡಿ ಸಮೀಪದ ಕೆ.ಸಿ.ರೋಡ್ ನಲ್ಲಿ ಮಾವನ ಕುಟುಂಬಕ್ಕಾಗಿ ಹೊಸಮನೆ ಉದ್ಘಾಟನೆಗೊಂಡಿತು. ಇಂದಿನ ತನಕ ನಾನೂ ಅದರ ಭಾಗವಾಗಿದ್ದೇನೆ.

ಬದುಕು ಕಾಲ್ಚೆಂಡಿನಂತೆ ಅದಕ್ಕೆ ಇಚ್ಛಿ ಸುವ ಸ್ಥಳಗಳಿಗೆ ನಮ್ಮನ್ನು ಒದ್ದು ಒಯ್ಯು ತ್ತಿರುತ್ತದೆ. ಎಲ್ಲೋ ಜನಿಸಿದವರು ಎಲ್ಲೋ ಜೀವಿಸಿ ಯಾವುದೋ ಮಣ್ಣಿನಲ್ಲಿ ಲೀನವಾಗಿ ಬಿಡುತ್ತಾರೆ. ಇದು ಸೃಷ್ಟಿಕರ್ತನ ಮುನ್‌ವಿಧಿ. ಆದರೆ ಬದುಕಿನ ಅನಿರೀಕ್ಷಿತ ತಿರುವುಗಳು ಮನಸ್ಸನ್ನು ಘಾಸಿಗೊಳಿಸಿ ಬಿಡುತ್ತದೆ. ಅನಾಥ ಪ್ರಜ್ಞೆ ಮೂಡಿಸುತ್ತದೆ. ನಾವಂದು ಕೊಂಡಂತೆ 'ಬದುಕು' ಬಾರದಿದ್ದರೆ ಬದುಕು ಅಂದು ಕೊಂಡಂತೆ ನಾವು ಇರಲು ಕಲಿಯು ವುದೇ ನಮ್ಮದಿಗಿರುವ ದಾರಿ. ಬದುಕೊಂದು ಜಟಕಾ ಬಂಡಿ 'ವಿಧಿ ಅದರ ಸಾಹೇಬಾ' ಅಂದಿದ್ದಾರೆ ಮಹಾ ಕವಿ ಡಿ.ವಿ. ಗುಂಡಪ್ಪ.

2013 ಜುಲೈ 14ರಂದು ಬೆಂಗಳೂರಿಗೆ ಹೋಗುವ ಮಧ್ಯೆ ಬೇರೊಂದು ಅಗತ್ಯಕ್ಕಾಗಿ ಚಿಕ್ಕಮಗಳೂರು ಹೋದೆವು. ರಮಳಾನ್ ತಿಂಗಳ 5ನೇ ದಿನವಾದುದರಿಂದ ಉಪ್ಪಳ್ಳಿ ಮಸೀದಿಯಲ್ಲಿ ಲುಹರ್ ನಮಾಝಿನ ಬಳಿಕ ಸ್ವಲ್ಪ 'ನಸ್ವೀಹತ್' ಹೇಳುವಂತೆ ಸ್ಥಳೀಯ ಮುದರ್‍ರಿಸ್ ತ್ವಾಹಾ ಸಅದಿ ಅಪೇಕ್ಷಿಸಿದರು. ಭಾಷಣಕ್ಕೆ ಎದ್ದು ನಿಂತು ನೋಡಿದರೆ ಮೊದಲ ಸಾಲಿನಲ್ಲೇ ಯುವ ವಿದ್ವಾಂಸ ಅಯ್ಯೂಬ್ ಖಾನ್ ಸಅದಿ ಕೊಲ್ಲಂ ಕುಳಿತು ಕೊಂಡಿ ದ್ದರು. ಇದು ಬ್ಯಾರಿ ಭಾಷೆಯ ಭಾಷಣ ನಿಮ ಗೆ ಅರ್ಥವಾಗದು ಅಂದರೆ ನನಗೆ 'ಮಜ್ ಲಿಸ್'ನ ಸವಾಬ್' (ಜ್ಞಾನ ವೇದಿಕೆಗಳಲ್ಲಿ ಭಾಗವ ಹಿಸುವುದರ ಪುಣ್ಯ) ಸಾಕೆಂದಿದ್ದರು ಸಅದಿ.

ಭಾಷಣ ಮುಗಿದ ನಂತರ ಬಹಳಷ್ಟು ಅಭಿನಂದಿಸಿದರು. ಆ ದಿನ ನಾವು ತುಂಬ ಮಾತನಾಡಿದೆವು. ಪ್ರತಿ ವರ್ಷದಂತೆ ಸಅದಿ ಯ್ಯಃ ಕಾಲೇಜಿನ ದೇಣಿಗೆ ಸಂಗ್ರಹಿಸಲು ಅಯ್ಯೂಬ್ ಖಾನ್ ಸಅದಿಯ ತಂಡ ಅಲ್ಲಿಗೆ ಆಗಮಿಸಿತ್ತು. ರಮಳಾನ್ ಹತ್ತರ ಬಳಿಕ ಮನೆ ಗೆ ತೆರಳುವುದಾಗಿಯೂ ವರ್ಷದಲ್ಲಿ ರಮ ಳಾನ್ ತಿಂಗಳ ಹತ್ತು ದಿವಸ ಮಾತ್ರ ತಾನು ಕಲೆ ಕ್ಷನ್ ಹೋಗುವುದಾಗಿಯೂ ತಿಳಿಸಿದ್ದರು.

ರಮಳಾನ್ ನಂತರದ ಉದ್ದೇಶವೇನು ಎಂದು ಕೇಳಿದಾಗ ಕೊಲ್ಲಂ ಜಿಲ್ಲೆಯ ಖಾದಿಸಿಯ್ಯಃ ಸಂಸ್ಥೆಯವರೂ, ಮರ್ಕಝ್ ಮ್ಯಾನೇಜರ್ ಸಿ. ಉಸ್ತಾದರೂ ಆಹ್ವಾನ ನೀಡಿದ್ದಾರೆ. ದಕ್ಷಿಣ ಕೇರಳವನ್ನು ಸ್ವಲ್ಪ ಬಲಪಡಿಸಲು ಅಲ್ಲೇ ಉಳಿಯಬೇಕೆಂದಿದ್ದೇನೆ ಅಂದಿದ್ದರು. 'ಯಸ್ಸರಕಲ್ಲಾಹು ಸ್ವೈರ ಇಲಲ್ ಮರ್ಕಝ್' (ಮರ್ಕಝ್ ನೆಡೆಗೆ ನಿಮ್ಮ ಪ್ರಯಾಣ ಸುಲಭವಾಗಲಿ) ಎಂದು ಸಿ. ಮುಹ ಮ್ಮದ್ ಫೈಝಿ ಸಅದಿಯ ಎದೆಗೆ ಕೈಯಿಟ್ಟು ಪ್ರಾರ್ಥಿಸಿದ್ದನ್ನೂ ಸ್ಮರಿಸಿಕೊಂಡಿದ್ದರು. ಈ ಮಾತುಕತೆ ನಡೆದು ನಾವು ಬೆಂಗಳೂರಿಗೆ ತೆರಳಿದೆವು. ಇದಾಗಿ 5ನೇ ದಿವಸ ಅಯ್ಯೂಬ್ ಖಾನ್ ಸಅದಿ ವಿಧಿಯ ಕರೆಗೆ ಓಗೊಟ್ಟು ನಮ್ಮಿಂದ ಮರೆಯಾದರು.

ಜುಲೈ 19, ರಮಳಾನ್ 10ನೇ ದಿನ ಶುಕ್ರವಾರ ಸಂಜೆ ಅಯ್ಯೂಬ್ ಖಾನ್ ಸಅದಿ ಮಡಿಕೇರಿಯಲ್ಲಿ ಅಪಘಾತದಲ್ಲಿ ಮಡಿದ ರೆಂಬ ಸುದ್ದಿಯನ್ನು ಮಿತ್ರ ಕೆ.ಎಂ. ಮೋಂಟು ಗೋಳಿಯವರು ನಡುಕದೊಂದಿಗೆ ತಿಳಿಸಿದಾಗ ತಕ್ಷಣ ಅವರ ಮೊಬೈಲಿಗೆ ಕರೆ ಮಾಡಿದೆ. ಫೋನ್ ಎತ್ತಿದ್ದು ಒಬ್ಬ ಮಹಿಳೆ. ಸಅದಿ ಎಲ್ಲಿ ಎಂದು ಕೇಳಿದಾಗ ಕರ್ನಾಟಕದಲ್ಲಿ ಸಅದಿಯ್ಯದ ಕೆಲಸಕ್ಕೆ ಹೋಗಿದ್ದಾರೆ ಈ ಫೋನ್ ಮನೆಯ ಲ್ಲಿದೆ ಅಂದಿದ್ದರು. ಮಕ್ಕಳ ಹಾಡು, ನಗು, ಕಲರ ವಗಳು ಅಲ್ಲಿ ಸದ್ದು ಮಾಡುತ್ತಿತ್ತು. ಆಗಲೇ ಸಅದಿ ನಿಧನರಾಗಿ ಒಂದು ಗಂಟೆ ಕಳೆದಿತ್ತು. ಮನೆಗೆ ಇನ್ನೂ ಸುದ್ದಿ ಮುಟ್ಟಿರಲಿಲ್ಲ!!!

ಸುನ್ನೀ ಸಮುದಾಯದ ಅಮೂಲ್ಯ ಆಸ್ತಿಯಾಗಿದ್ದರು ಅಯ್ಯೂಬ್ ಖಾನ್ ಸಅದಿ. ನಾನು ಸಅದಿಯ್ಯಕ್ಕೆ ಯಾವ ಕೆಲಸಕ್ಕೆ ಹೋದರೂ ಮೊದಲು ಅವರ ಕೊಠಡಿಗೇ ಹೋಗುತ್ತಿದ್ದೆ. ಅವರ ಆತಿಥ್ಯ ಅದ್ಭುತವಾಗಿತ್ತು. ಪ್ರೀತಿ ಯಿಂದ ಅವರು ಉಸಿರುಗಟ್ಟಿಸುತ್ತಿದ್ದರು. ಒಬ್ಬ ಸದ್ಗುಣ ಸಂಪನ್ನ ಯುವ ವಿದ್ವಾಂಸ ಹೇಗಿರ ಬೇಕು ಎಂಬುದಕ್ಕೆ ಸಅದಿ ಶ್ರೇಷ್ಠ ಉದಾಹರಣೆ ಯಾಗಿದ್ದರು. ಅವರು ಅಂದು ಕೊಂಡಂತೆ ದಕ್ಷಿಣ ಕೇರಳದಲ್ಲಿ ಸುನ್ನಿಯ್ಯತ್ತನ್ನು ಬಲಪಡಿಸಲು ಅವರು ಅಲ್ಲೇ ಉಳಿದುಕೊಂಡಿದ್ದಾರೆ. ಅವರ ನಾಮ ಬಲದಿಂದಲೇ ಆ ಪ್ರದೇಶದಲ್ಲಿ 'ಸುನ್ನೀಸಂ' ಸೆಟೆದುನಿಲ್ಲತೊಡಗಿದೆ.

2013 ನವೆಂಬರ್ 16 ಶನಿವಾರ ಮಂಗ ಳೂರಿನ ವುಡ್‌ಲ್ಯಾಂಡ್ಸ್ ಹೊಟೇಲ್‌ನಲ್ಲಿ 'ಮರ್ಕಝುಲ್ ಹುದಾ' ಕೇಂದ್ರ ಸಮಿತಿ ಸಭೆ ನಡೆಯಿತು. ಅದರಲ್ಲಿ ಸಮಿತಿಯ ಉಪಾಧ್ಯಕ್ಷ ರಾದ ಹಾಜಿ. ಬಿ.ಎಂ. ಮುಮ್ತಾ ಝ್ ಅಲೀ, ನನಗೆ ಒಂದು ವಾಹನ ತೆಗೆದು ಕೊಡಬೇಕೆಂದು ಬಲ ವಾಗಿ ವಾದಿಸಿದರು. ಮರ್ಕಝುಲ್ ಹುದಾ ಸಂಸ್ಥೆಯ ವಿವಿಧ ಚಟುವಟಿಕೆಗಳ ನಿರ್ವಹಣೆ ಹಾಗೂ ಇತರ ಸಾಂಘಿಕ ಕೆಲಸಗಳು ಸುಗಮವಾಗಿ ನಡೆಯಲು ನನಗಿದ್ದ ವಾಹನದ ಅಗತ್ಯದ ಬಗ್ಗೆ ನಾನು ಯಾರಲ್ಲೂ ಹೇಳಿಕೊಂಡಿರಲಿಲ್ಲ.

ಇನ್ನು ಅನೇಕ ಹಿತೈಷಿಗಳು ನಾನು ಬಸ್‌ನಲ್ಲಿ ಓಡಾಡುವುದು, ರಸ್ತೆ ಪಕ್ಕದಲ್ಲಿ ನಿಂತು ವಾಹನಕ್ಕಾಗಿ ಕಾಯುವುದನ್ನೆಲ್ಲ ಕಂಡು, ನಾನೊಬ್ಬ ಸಂಘಟನಾ 'ನಾಯಕ' ನಾಗಿ ಹೀಗೆ ಕಾಣಿಸಿಕೊಳ್ಳುವುದು ಸಮಂಜಸ ವಲ್ಲ ಎಂದು 'ಸದುಪದೇಶ' ನೀಡುತ್ತಿದ್ದರು. ಆದರೆ ಈ ರೀತಿ ನಾಯಕತ್ವದ ಡಂಬಾಚಾರ ಕ್ಕಿಂತ ಸಮಯದ ಉಳಿತಾಯ ಮತ್ತು ಹೆಚ್ಚು ಕೆಲಸಗಳ ನಿರ್ವಹಣೆ ಸಾಧ್ಯವಾಗಲು ಒಂದು ವಾಹನದ ಅನಿವಾರ್ಯತೆ ಯಾವತ್ತೋ ನನ್ನ ಮುಂದಿತ್ತು. ಮೇಲಿನ ಸಭೆಯಲ್ಲಿ ಮುಮ್ತಾ ಝ್ ಹಾಜಿಯವರ ವಾದ ಜಯಿಸಿ ತಕ್ಷಣ ಕಾರು ಬುಕ್ ಮಾಡಬೇಕೆಂದು ಸಭೆಯ ನಿರ್ಣಯ ನನ್ನಿಂದಲೇ ಬರೆಸಲಾಯ್ತು. ಒಟ್ಟು ಕಾರಿನ ಬೆಲೆಯ ಇಪ್ಪತ್ತೈದು ಶೇಕಡ ಸಂಸ್ಥೆ ಭರಿಸುವುದೆಂದೂ ಉಳಿದ ಮುಕ್ಕಾಲು ಅಂಶ ತಾನೇ ಭರಿಸಬೇಕೆಂದು ಮಹತ್ವದ ನಿರ್ಣ ಯವನ್ನು ಅಂಗೀಕರಿಸಲಾಯಿತು. ಇದನ್ನೂ ಡೈರಿಯಲ್ಲಿ ಕೆಂಪಕ್ಷರದಲ್ಲಿ 'ಐತಿಹಾಸಿಕ ನಿರ್ಧಾರ' ಎಂದು ಬರೆದಿಟ್ಟಿದ್ದೇನೆ.

ಒಂದು ಕಡೆಯಲ್ಲಿ ಕಾರು ಕೊಳ್ಳುವ ಖುಷಿ, ಇನ್ನೊಂದು ಕಡೆ ಅದರ ಬೆಲೆಯ ಎಪ್ಪತ್ತೈದು ಶೇಕಡ ಹಣ ಹೊಂದಿಸಬೇಕಾದ ಸಂಕಟ.

ಮತ್ತೆ ಬದುಕಿನಲ್ಲಿ ಸಂಘರ್ಷ, ಹೃದಯ ದಲ್ಲಿ ಅರಬೀ ಸಮುದ್ರದ ಬೋರ್ಗ ರೆತ, ನಂತ ರದ ದಿನಗಳಲ್ಲಿ ರಸ್ತೆಗಳಲ್ಲಿ ಕಾರು ನೋಡು ವಾಗಲೆಲ್ಲ ಮನಸ್ಸಿನಲ್ಲಿ ಪುಟ್ಟ ಕಂಪನದ ಅಲೆ ಎದ್ದು ಮಾಯ ವಾಗುತ್ತಿತ್ತು...

# 34

## ಗ್ರಹಚಾರ ತಂದ ಗೃಹ ಪ್ರವೇಶ

ಮುಸ್ಲಿಮರ ಕೈಯಲ್ಲಿ ಶ್ರೇಷ್ಠ ಉತ್ಪನ್ನ ಇದೆ. ಅದನ್ನು 'ಮಾರ್ಕೆಟಿಂಗ್' ಮಾಡಲು ಅವರಿಗೆ ತೀರಾ ಉತ್ಸಾಹವಿಲ್ಲ. ಧರ್ಮ ಬೋಧನಾ ರಂಗದಲ್ಲಿ ಮುಸ್ಲಿಂ ಉಮ್ಮತ್‌ನ ಅನಾಸ್ಥೆ ಹಾಗೂ ಉದಾಸೀನದ ಬಗ್ಗೆ ಆಂಗ್ಲ ಚಿಂತಕರೊಬ್ಬರು ಹೇಳಿದ್ದು, ಎಲ್ಲೋ ಓದಿದ್ದೆ. ಬೋಧನೆ ಹಾಗೂ ದಅ್‌ವಾಕ್ಕೆ ಇಂದು ವ್ಯಾಪಕ ಮಾರ್ಕೆಟಿಂಗ್ ಇದೆ. ಭೌತಿಕ ಬದುಕಿನ ಜಂಜಾಟಗಳಲ್ಲಿ ದಾರಿ ಕಾಣದಾದ ಅದೆಷ್ಟೋ ಅವಿಶ್ವಾಸಿಗಳು ಅಲ್ಪಸ್ವಲ್ಪ ದೀನೀ ಕಿರಣಗಳು ಗೋಚರಿಸಿದ ತಕ್ಷಣ ಆ ಬೆಳಕಿನಲ್ಲಿ ತಾದಾತ್ಮ್ಯ ಹೊಂದಿ ಬಿಡುತ್ತಾರೆ. ಜಗತ್ತಿನಾ ದ್ಯಂತ ಪಶ್ಚಿಮದ ಲೋಬಿ ಇಸ್ಲಾಮಿನ ವಿರುದ್ಧ ಇಲ್ಲಸಲ್ಲದ ತಂತ್ರ ಕುತಂತ್ರಗಳನ್ನು ಹೆಣೆದು 'ಅಲ್ಲಾಹನ ಪ್ರಕಾಶವನ್ನು ಬಾಯಿ ಯಿಂದ ಊದಿ ನಂದಿಸುವ' (ಖುರ್‌ಆನ್ ಹೇಳಿದ ಪ್ರಕಾರ) ವ್ಯರ್ಥ ಪ್ರಯತ್ನ ಮಾಡು ತ್ತಿರುವಾಗಲೇ ಇನ್ನೊಂದು ಮಗ್ಗುಲಲ್ಲಿ ಅಸಂಖ್ಯಾತ ಜನರು ಪವಿತ್ರ ಇಸ್ಲಾಮಿನತ್ತ ತಂಡೋಪತಂಡವಾಗಿ ಬಂದು ಸಾಲುಗಟ್ಟು ತ್ತಿದ್ದಾರೆ. ಬಲವಂತದ ಮತಾಂತರ ಇಸ್ಲಾಮಿನಲ್ಲಿ ನಿಷೇಧ್ಯ. ಆದರೆ ಉತ್ಪನ್ನಗಳ ಪ್ರಚಾರ, ಜಾಹೀರಾತಿಗೆ ಸಂವಿಧಾನದ ಮೂಲಭೂತ ಹಕ್ಕುಗಳ ಪರಿಚ್ಛೇದಗಳಲ್ಲಿ ಪ್ರಮುಖಸ್ಥಾನ ನೀಡಲಾಗಿದೆ.

ಇಸ್ಲಾಮಿನ ನೈಜ ದಅ್‌ವಾ ನಡೆಯದೇ ಹೋದಾಗ ನವೀಕರಣವಾದಿಗಳು ಆ ಸ್ಥಾನಕ್ಕೆ ಲಗ್ಗೆ ಹಾಕಿ ತಮ್ಮ ಹಳಸಿದ ಸಾಮಾಗ್ರಿಗಳನ್ನು ಮಾರುಕಟ್ಟೆಗೆ ಯಥೇಚ್ಛವಾಗಿ ಬಿಡುತ್ತಿ ದ್ದಾರೆ. ಈ ನಿಟ್ಟಿನಲ್ಲಿ ಸಂಘಟನೆಗಳೂ ಸಂಸ್ಥೆಗಳೂ ಪರಿಣಾಮಕಾರಿಯಾಗಿ 'ದೀನೀ ದಅ್‌ವಾ' ಕಾರ್ಯಗಳನ್ನು ಕೈಗೆತ್ತಿಕೊಳ್ಳ ಬೇಕಾದ ಸಂದರ್ಭ ಒದಗಿ ಬಂದಿದೆ. ಪುರುಷರಿ ಗಿಂತ ಮಹಿಳೆಯರು ದಅ್‌ವಾ ಕ್ಷೇತ್ರದಲ್ಲಿ ಸಕ್ರಿಯವಾಗಬೇಕಾದ ಸನ್ನಿವೇಶ ಇಂದು ನಮ್ಮ ಮುಂದಿದೆ. ಬಿದಈ ಗುಂಪುಗಳು ಈ ನಿಟ್ಟಿನಲ್ಲಿ ಹಮ್ಮಿಕೊಳ್ಳುತ್ತಿರುವ ಯೋಜನೆ ಗಳು ಯಶಸ್ಸು ಕಾಣುತ್ತಿದೆ.

ಕುಂಬ್ರ ಮರ್ಕಝುಲ್ ಹುದಾದ ಜವಾ ಬ್ದಾರಿ ವಹಿಸಿಕೊಂಡ ಹಿನ್ನೆಲೆಯಲ್ಲಿ ಮಹಿಳಾ ಶರೀಅಃ ಕಾಲೇಜಿನ ಜತೆಗೆ ಮಹಿಳಾ 'ದಾಇ ಯತ್'ಗಳ ತರಬೇತಿಗೆ ಸೂಕ್ತ ವ್ಯವಸ್ಥೆಯೊಂ ದನ್ನು ರೂಪಿಸಬೇಕೆಂದು ಮನಸ್ಸು ಆಗಾಗ ಕೊರೆಯುತ್ತಿತ್ತು. ಮಹಾ ನಗರಗಳಲ್ಲಿ ದೈನಂದಿನ ಸುನ್ನೀ ಮಹಿಳೆಯರ ಸಂಖ್ಯೆ ಇಳಿಮುಖವಾಗು ತ್ತಿರುವುದು ಒಂದು ಕಠೋರ ವಾಸ್ತವ. ಇಲ್ಲಿ ನಮ್ಮ ಹೊಣೆ ಗಾರಿಕೆಯ ಪ್ರಜ್ಞೆ ಹೆಡೆಬಿಚ್ಚಿ ಎದ್ದು ನಿಲ್ಲ ಬೇಕಾಗಿದೆ.

ಮರ್ಕಝುಲ್ ಹುದಾ ಎಂಬುದು ನಾಲ್ಕು ಭಿತ್ತಿಗಳ ನಡುವೆ ಇರುವ ಕೇವಲ ಕ್ಲಾಸ್ ರೂಂ ಆಗಿರುವುದರಿಂದ ಕೆಲವರಿಗಷ್ಟೇ ಪ್ರಯೋಜನವಾಗಬಹುದು. ಆದರೆ ಮಹಿಳಾ ಕಾಲೇಜೊಂದು ಸಮುದಾಯದ ಮಹಿಳೆಯರ ಧಾರ್ಮಿಕವೂ ಸಾಮಾಜಿಕವೂ ಆದ ಸದುನ್ನತಿ ಗೂ ಸ್ವಲ್ಪ ಕಳಕಳಿ ಇಟ್ಟರೆ ಅದರಿಂದ ಹೆಚ್ಚು ಲಾಭವಿದೆ. ಈ ನಿಟ್ಟಿನಲ್ಲಿ ಮರ್ಕಝುಲ್ ಹುದಾದ ಚಿಂತಕರ ಚಾವಡಿಯಲ್ಲಿ ಹೊಮ್ಮಿ ಬಂದ ಸಲಹೆಯಾಗಿತ್ತು ಸಮರ್ಥ ಮಹಿಳೆ ಯರಿಗೆ ತರಬೇತಿ ಕೊಟ್ಟು ಅವರನ್ನು ದೀನೀ ದಅ್‌ವತ್ (ಧರ್ಮಬೋಧನೆ)ಗೆ ಉಪಯೋ ಗಿಸಿಕೊಳ್ಳುವುದು.

ಸಂಸ್ಥೆಯಲ್ಲಿ ಶರೀಅ: ಕಾಲೇಜು ಇದ್ದ ರೂ ಅದಕ್ಕೆ ಬರಲು ಸಾಧ್ಯವಾಗದ ಪ್ರತಿಭಾ ವಂತ ಹೆಣ್ಮಕ್ಕಳಿಗೆ ವಿಷಯದ ಸಂಗ್ರಹ ಮತ್ತು ಸ್ವಲ್ಪ ಮಟ್ಟದ ತರಬೇತಿ ಕೊಟ್ಟಲ್ಲಿ ಅದ್ಭುತ ಫಲಿತಾಂಶ ಸಿಕ್ಕ ಅನುಭವಗಳಿವೆ.

ಇಂತಹ ಯೋಗ್ಯ 'ದಾಇಯತ್'ಗಳನ್ನು ಪತ್ರದ ಜಾಹೀರಾತು ಮೂಲಕ ಆಹ್ವಾನಿಸಿ ದಾಗ ಅದೆಷ್ಟೋ ಹೆಣ್ಮಕ್ಕಳು ಮುಂದೆ ಬಂದರು. ಆ ಪೈಕಿ ಅರ್ಹರನ್ನು ಆಯ್ಕೆ ಮಾಡಿ ಕೊಡುವ ಕೆಲಸವನ್ನು ಕೃಷ್ಣಾ ಪುರ ಬದ್ರಿಯಾ ಸಂಸ್ಥೆಗಳ ಪ್ರಾಂಶು ಪಾಲರೂ, ಧಾ ರ್ಮಿಕ ಚಟುವಟಿಕೆ ಗಳಲ್ಲಿ ಆಸಕ್ತರೂ ಆಗಿರುವ ಶ್ರೀಮತಿ ಝೊಹರಾ ಅಬ್ಬಾ ಸ್‌ರವರಿಗೆ ವಹಿಸಲಾಗಿತ್ತು.

ಆಯ್ಕೆ ಪ್ರಕ್ರಿಯೆ ಮುಗಿಸಿ ಅರ್ಹರ ಪಟ್ಟಿ ಯನ್ನು ಮುಂದಿಡುವಾಗ ಝೊಹರಾ ಹೀಗೇ ಷರಾ ಬರೆದು ಕೊಟ್ಟರು. 'ಸುನ್ನತ್ ಜಮಾ ಅತ್‌ನ ಪ್ರಚಾರ ಕಾರ್ಯಕ್ಕೆ ಸಾಂದರ್ಭಿಕ ವಾಗಿ ಕೈಗೊಳ್ಳುವ ಈ ಪ್ರಯತ್ನ ಅಭಿನಂದ ನಾರ್ಹ. ಪ್ರತಿಭಾನ್ವಿತ ಮಹಿಳೆಯರ ಮೂಲಕ ಧಾರ್ಮಿಕ ಸದನ್ನುತಿಗೆ ಶ್ರಮಿಸುವ ಈ ತಂಡದಲ್ಲಿ ನನಗೂ ಸೇರುವ ಇಚ್ಛೆಯಿದೆ."

ವಿದ್ಯಾವಂತ ಮಹಿಳೆಯರನ್ನು ಬುಟ್ಟಿಗೆ ಹಾಕಿ ಅವರ ಮೂಲಕ ಸಮುದಾಯದೊಳಗೆ 'ಬಿದ್‌ಅತ್'ನ ವಿಷ ಬೀಜ ಬಿತ್ತುವ ನವೀನ ವಾದಿಗಳಿಗೆ ಅದೇ ರೂಪದಲ್ಲಿ ತಿರುಗೇಟು ನೀಡಲು ಈ ಯೋಜನೆ ಬಹಳಷ್ಟು ಅವಶ್ಯಕ ವೆಂದು ಸಮಾಲೋಚನೆಯ ವೇಳೆ ಶೈಖುನಾ ಕಾಂತಪುರಂ ಉಸ್ತಾದ್ ಸಲಹೆ ಕೊಟ್ಟರು. ಆಗ ಉಸ್ತಾದರ ಸಮೀಪದಲ್ಲೇ ಇದ್ದ ಶೈಖುನಾ ಬೇಕಲ್ ಉಸ್ತಾದ್ ಇದಕ್ಕೆ ಧ್ವನಿಗೂಡಿಸಿದರು.

ಈ ಯೋಜಿತ ತಂಡಕ್ಕೆ ಯೋಗ್ಯ ಹೆಸರನ್ನು ಸೂಚಿಸಬೇಕೆಂದು ಕೇಳಿ ಕೊಂಡಾಗ ಸಮಸ್ತ ಕೇಂದ್ರ ಮುಶಾವರ ಸದಸ್ಯರೂ ಆಗಿರುವ ಜಾಮಿಅಃ ಮರ್ಕಝ್‌ನ ಉಪಕುಲಪತಿ ಡಾ। ಹುಸೈನ್ ಸಖಾಫಿ ಚುಳ್ಳಿಕ್ಕೋಡ್ 'ನಾದೀ ಹುದಾತ್' (ಬೋಧಕ ತಂಡ)ಎಂಬ ಹೆಸರನ್ನು ಅಂತಿಮಗೊಳಿಸಿದರು.

2013 ಡಿಸೆಂಬರ್ 1 ಭಾನುವಾರದಂದು ಮಂಗಳೂರು-ಪಂಪ್‌ವೆಲ್ ಮಸ್ಜಿದುತ್ತಖ್ ವಾದಲ್ಲಿ 'ನಾದೀ ಹುದಾತ್'ಗೆ ಅಧಿಕೃತ ಚಾಲನೆ ನೀಡಲಾಯಿತು. ಮರ್ಕಝುಲ್ ಹುದಾ ಕೇಂದ್ರ ಸಮಿತಿ ಕೋಶಾಧಿಕಾರಿ ಅಬೂ ಸುಫ್‌ಯಾನ್ ಮದನಿ ವಿಷಯ ಮಂಡಿಸಿ ಉದ್ಘಾಟಿಸಿದರು.

ಇದರ ಮುಂದಿನ ಶಿಬಿರವಿದ್ದ ಡಿಸೆಂಬರ್ 22ರಂದು ಅಚಾನಕ್ಕಾಗಿ ಪಂಪ್‌ವೆಲ್‌ಗೆ ಆಗಮಿಸಿದ 'ಸಮಸ್ತ'ದ ಕಾರ್ಯದರ್ಶಿ ಪೇರೋಡ್ ಉಸ್ತಾದ್ ತರಬೇತಿ ಕೊಟ್ಟದ್ದು ಶಿಬಿರಾರ್ಥಿಗಳಿಗೆ ಅತೀವ ಉತ್ಸಾಹ ತುಂಬಿತ್ತು.

2013 ಡಿಸೆಂಬರ್ ಎಂಟು ಭಾನುವಾರ ಅನಪೇಕ್ಷಿತವಾಗಿ ಭಾಗವಹಿಸಿದ ಗೃಹ ಪ್ರವೇಶವೊಂದು ಬದುಕಿನಲ್ಲಿ ಹೊತ್ತು ತಂದ ಗ್ರಹಚಾರ ಮರೆಯಲಾಗದ್ದು. ಅಷ್ಟೇನೂ ಪರಿಚಿತರಲ್ಲದ ವ್ಯಕ್ತಿಯೊಬ್ಬರು ಹೋಗ ಬೇಕಾದ ಯಾವುದೇ ಅನಿವಾರ್ಯತೆಯಿಲ್ಲದ ಒಂದು ಮನೆ ಉದ್ಘಾಟನಾ ಕಾರ್ಯಕ್ಕೆ ಕರೆದಾಗ ಓಗೊಟ್ಟದ್ದು ಸಹಜಭಾವದಿಂದ ಮಾತ್ರ.  ಆದರೆ ಅದರ ಮತ್ತೊಂದು ಮಗ್ಗು ಲು ಮಾರಕವಾಗಿತ್ತೆಂದು ತಿಳಿಯಲು ಕೆಲವು ಗಂಟೆಗಳಷ್ಟೇ ಸಾಕಾಗಿತ್ತು. ಒಂದು ಮನೆ ಉದ್ಘಾಟನೆ ಎಂದ ಮೇಲೆ ಕಲ್ಪನೆಗೆ ಬರುವುದು, ಹೊಸ ಮನೆಯೊಳಗೆ ಪ್ರವೇಶಿಸಿ ಮನೆಯವರ ಸಮೃದ್ಧಿಗಾಗಿ ಪ್ರಾರ್ಥನೆ ಮತ್ತು ಅವರ ಸಂತೋಷಕ್ಕಾಗಿ ಭೋಜನ ಮಾತ್ರ. ಆದರೆ ಅಲ್ಲೊಂದು ಸಮ್ಮೇಳನ ವೇದಿಕೆಯಿ ರುವುದು, ಅದರಲ್ಲಿ ಬಣ್ಣಬಣ್ಣದ ನಾಯಕರು ಸಾಲುಗಟ್ಟಿ ಕುಳಿತಿರುವುದು ಅಂದಿನ ಕಲ್ಪನೆಗೆ ಹೊರತಾಗಿತ್ತು. ಅದನ್ನು ನನ್ನ ಭಾಷಣ ಬದುಕಿನ 'ದುರದೃಷ್ಟ' ವೇದಿಕೆಯೆಂದು ದಾಖಲಿಸಿಟ್ಟಿದ್ದೇನೆ.

ಮರ್ಕಝುಲ್ ಹುದಾ ಕೇಂದ್ರ ಸಮಿತಿ ಯ ನಿರ್ಣಯದಂತೆ ಕನಸಿನ ಕಾರು ಕೊಳ್ಳು ವುದಕ್ಕೆ ಅವರ ಪಾಲು ಇಪ್ಪತ್ತೈದು ಶೇಕಡ ಹಣ ಅಲ್ಪಾಲ್ಪವಾಗಿ ಬರತೊಡಗಿದಾಗ ಎದೆಯೊಳ ಗಿನ ಕಂಪನದ ಹೊರತಾಗಿಯೂ 'ಕಾರ್ ಬುಕ್ಕಿಂಗ್' ಪ್ರಕ್ರಿಯೆ ಶುರುಮಾಡ ಬೇಕಾದ ಅನಿವಾರ್ಯತೆ ಹೆಚ್ಚಾಯಿತು. 2013 ಡಿಸೆಂಬರ್ 9 ಸೋಮವಾರ ಮಂಗಳೂರು-ತೊಕ್ಕೊಟ್ಟು ಸಮೀಪದ ಕಾಪಿಕಾಡ್‌ನ ಭಾರತ್ ಶೋರೂಂನಲ್ಲಿ 'ಮಾರುತಿ ಸುಝುಕಿ'ಯವರ 'ಸ್ವಿಫ್ಟ್'ಗೆ ಮುಂಗಡ ಹಣ ನೀಡಲಾಯಿತು. ಮರ್ಕಝುಲ್ ಹುದಾದ ಅಂಗ ಸಂಸ್ಥೆ 'ಹುದಾ ಫೌಂಡೇಶನ್'ನ ಪ್ರಧಾನ ಕಾರ್ಯದರ್ಶಿ ಪಿ.ಎಚ್.ಅಬೂ ಬಕರ್ ಹಾಜಿ ಸಾಥ್ ನೀಡಿದರು. ಡೀಲರ್ ನಿಶಾ, ಕಾಗದ ಪತ್ರಗಳ ಕಾರ್ಯಕಲಾಪ ಗಳನ್ನು ನಡೆಸಿಕೊಟ್ಟರು.

2014 ಜನವರಿಯ ಮೊದಲ ದಿನ, ಸಫರ್ ತಿಂಗಳ ಕೊನೆಯ ಬುಧವಾರವಾದು ದರಿಂದ ವರ್ಷದ ಪ್ರಾರಂಭಕ್ಕೇ ಕೊನೆಯ ಬುಧವಾರದ ಅಶುಭದ ನೆರಳು ಬಿದ್ದಿತ್ತು. 2013ರ ಕೊನೆಯ ದಿನವೂ 2014ರ ಮೊದಲ ದಿನವೂ ನನ್ನ ಪಾಲಿಗೆ ವೈಯಕ್ತಿಕವಾಗಿ ತೀರಾ ಶುಭಕರವಾಗಿರಲಿಲ್ಲವೆಂದು ಡೈರಿ ಪುಟ ದಾಖಲಿಸಿದೆ.

ಜನವರಿ 2 ಗುರುವಾರ ರಾಜ್ಯ ಎಸ್ಸೆಸ್ಸೆಫ್ ಬೆಳ್ಳಿಹಬ್ಬದ ಉದ್ಘಾಟನೆಯು ಮಂಗಳೂರು ನೆಹರು ಮೈದಾನದಲ್ಲಿ ವಿಭಿನ್ನ ರೀತಿಯಲ್ಲಿ ನೆರವೇರಿತು. ಸಾಮಾಜಿಕ ಪಿಡುಗಾದ ವರದಕ್ಷಿಣೆ ವಿರುದ್ಧ ಯುವಜನತೆಯ ಆಕ್ರೋ ಶವು ಸ್ವಯಂ ಸರಳ ಸಾಮೂಹಿಕ ವಿವಾಹವಾ ಗುವ ಮೂಲಕ ಪ್ರಕಟವಾಯಿತು. ಸಾಮಾಜಿಕ ಪರಿವರ್ತನೆಗೆ ಇದೊಂದು ಮುನ್ನುಡಿಯಾ ಯಿತು ಕೂಡಾ.

ಸುಲ್ತಾನುಲ್ ಉಲಮಾ ಎ.ಪಿ.ಉಸ್ತಾ ದ್ ಸುನ್ನೀ ವಿದ್ಯಾರ್ಥಿ ಯುವ ಶಕ್ತಿಯ ಇಪ್ಪತ್ತೈದನೇ ಸಾರ್ಥಕ ಸಂವತ್ಸರಕ್ಕೆ ಅಧಿಕೃತ ಚಾಲನೆ ನೀಡಿದರು. ಆ ದಿನ ನಾನು ಭಾಷಣ ಮಾಡಲಿಲ್ಲ. ಭಾಷಣ ಬದುಕಿನಲ್ಲಿ ನಾನು ಕಳೆದುಕೊಂಡ ಶ್ರೇಷ್ಠ ವೇದಿಕೆ ಅದಾಗಿತ್ತು.

ಜನವರಿ 3 ಶುಕ್ರವಾರ ಅಪರಾಹ್ನ 3.30ಕ್ಕೆ ನನ್ನ ಕನಸಿನ ಕಾರು ಶೋರೂಂನಿಂದ ಹೊರ ಬಿತ್ತು. ಅಂದು ಪುಣ್ಯ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಜನ್ಮ ತಿಂಗಳಾದ ರಬೀಉಲ್ ಅವ್ವಲ್‌ನ ಪ್ರಾರಂಭ ದಿನವಾದು ದರಿಂದ ಕಾರಿನ ಮೊದಲ ಸಂಖ್ಯೆ 92 ('ಮುಹ ಮ್ಮದ್' ಎಂಬುದರ 'ಅಬ್‌ಜದ್' ಮೊತ್ತ) ಸಿಗಬೇಕೆಂದು ಅಪೇಕ್ಷೆ ಕೊಟ್ಟು ಬಂದೆ. ನನ್ನಂತೆ ಆ ಸಂಖ್ಯೆ ಇನ್ನೂ ಹಲವರಿಗೆ ಅಪೇಕ್ಷೆ ಯಿದ್ದುದರಿಂದ ಅವರ ಪ್ರಭಾವ ನನಗಿಂತ ಮಿಗಿಲಾಗಿ ನಂಬರ್ ಅವರ ಪಾಲಾಯಿತು.

ಕೊನೆಗೆ '94'ಸಂಖ್ಯೆ ಸಿಕ್ಕಾಗ ಅದಕ್ಕೆ '(ಬಿ ಮುಹಮ್ಮದ್ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖಾಂತರ) ಎಂಬ ವಿವರಣೆ ಕೊಟ್ಟು ಸಮಾಧಾನ ಪಟ್ಟುಕೊಂಡೆ. ಅಲ್ಲಾಹುಗೆ ಪ್ರಿಯವಾದ ಸಂಖ್ಯೆ (ಅಶ್ ರಫುಲ್ ಅರ್‌ಖಾಂ) 'ಏಳು' ಎಂಬುದನ್ನು ಕಿತಾಬ್‌ಗಳಲ್ಲಿ ಓದಿದ್ದೆ. ಎರಡು ಏಳುಗಳು ಸೇರಿದರೆ ಅದು ನನ್ನ ಹೆಸರಿನ ಸೂಚಕ ಸಂಖ್ಯೆಯೂ ಆಗುತ್ತಿತ್ತು. ಹೀಗೆ ಈ ಬಗ್ಗೆ ಆಳವಾದ ಅಧ್ಯಯನ ನಡೆಸಿ ನಾನು ನಡೆಸಿದ ಹೋರಾಟದ ಫಲವಾಗಿ ಜನವರಿ 30ರಂದು ನನ್ನ ಕಾರಿಗೆ 9477 ಸಂಖ್ಯೆ ಸಿಕ್ಕೇ ಬಿಟ್ಟಿತು.!!

ಇಪ್ಪತ್ತೈದು ಶೇಕಡ ಸಂಸ್ಥೆಯ ವತಿಯಿಂದ ಸಿಕ್ಕಿದರೆ ಉಳಿದ ಮುಕ್ಕಾಲು ಅಂಶವನ್ನು ಸರಿದೂಗಿಸಲು ಅನೇಕ ಮಿತ್ರರು ಸಾಲಕೊಟ್ಟು ನೆರವಾದರು. ಕಾರು ಯಾತ್ರೆಯ ಒಂದು ತಿಂಗಳು ಕಳೆಯುವಷ್ಟರಲ್ಲೇ ಮಿತ್ರರಲ್ಲಿ ಕೆಲವರು ಫೋನ್ ಮಾಡಿ 'ಉಸ್ತಾದ್ ರಾಹತ್ ಅಲ್ವಾ' ಅಂತ ಕೇಳಿ ಫೋನ್ ಕಟ್ ಮಾಡುತ್ತಿದ್ದರು. ಇದು ನನ್ನ ಸಾಲ ಮರು ಪಾವತಿಯ 'ನೋಟೀಸ್' ಎಂದು ತಿಳಿದಾಗಲೇ ನನ್ನ 'ರಾಹತ್' ಕಳೆದು ಹೋಗುತ್ತಿತ್ತು. ಅನೇಕ ಬಾರಿ 'ಛೆ' ಈ ಕಾರು ಬೇಕಿತ್ತಾ' ಅನ್ನಿಸಿ ಬಿಡುತ್ತಿತ್ತು. 1997ರಲ್ಲಿ ನಾನು ಬೈಕ್ ಖರೀ ದಿಸಿದಾಗ ಚಾಲನೆಯಲ್ಲಿ ಹೆಚ್ಚು ಪರಿಚಯ ಇಲ್ಲದಿದ್ದ ನನಗೆ ಇಡೀ ದಿನ ರಸ್ತೆಯ ತಿರುವು ಮುರುವುಗಳಲ್ಲಿ ಸಂಚಾರ ದಟ್ಟಣೆ, ಇಕ್ಕಟ್ಟಿನ ರಸ್ತೆಗಳು, ಮುಂದೆ ಮತ್ತು ಹಿಂದಿನಿಂದ ಭಾರೀ ವಾಹನಗಳ ಆಗಮನವನ್ನೆಲ್ಲ ನೆನೆಸಿ ನೆನೆಸಿ ದುಃಖ ವಾಗುತ್ತಿತ್ತು. ಯಾಕಾಗಿ ಈ ಬೈಕ್ ಕೊಂಡೆನೋ ಎಂದು ಅನೇಕ ಬಾರಿ ಪಶ್ಚಾತ್ತಾ ಪಪಡುತ್ತಿದ್ದೆ! ಕುಪ್ಪೆಪದವು ಮಸೀದಿಯ ಪಕ್ಕದಲ್ಲಿ ಬೈಕ್ ನಿಲ್ದಾಣ

ಇಲ್ಲದ ಕಾರಣ ಸಮೀಪದ ಮರ್‌ಹೂಂ ಅಬ್ದುಲ್ ಖಾದರ್ (ಮಿಲ್) ಅವರ ಮನೆಯ ಕಾರು ಶೆಡ್ಡಿನ ಮೂಲೆಯಲ್ಲಿ ಬೈಕ್ ನಿಲ್ಲಿಸಲು ಉಚಿತ ಪರ ವಾನಗಿ ಸಿಕ್ಕಿತ್ತು. ನಮಾಜಿಗೆ ಹೋಗುವಾ ಗಲೂ ಬರುವಾಗಲೂ ಬೈಕ್ ಕಣ್ಣಿಗೆ ಬೀಳು ತ್ತಲೇ ಅದರೊಂದಿಗೆ ದ್ವೇಷ ಹುಟ್ಟಿ ಬರು ತ್ತಿತ್ತು! ಮನುಷ್ಯ ಮನಸ್ಸುಗಳ ಈ ಅಚಿಂತ್ಯ ವ್ಯಾಪಾರಗಳನ್ನು ಹೇಗೆ ವ್ಯಾಖ್ಯಾನಿಸಬೇಕೋ ಗೊತ್ತಿಲ್ಲ. ಮನಸ್ಸು ಒಂದೇ ವಸ್ತುವಿನ ಮೇಲೆ ಈ ಬೇಕು-ಬೇಡಗಳ ಅನಗತ್ಯ ಸಂಘರ್ಷವನ್ನು ಹುಟ್ಟು ಹಾಕಿ ಶಾಂತಿ ಕೆಡಿಸುವುದು ಯಾಕಾ ಗಿಯೋ? ಕ್ರಮೇಣ ಮನಸ್ಸು ಎಲ್ಲದಕ್ಕೂ ಹೊಂದಾಣಿಕೆಯಾಗಿ ಬಿಡುತ್ತದೆ. ಭೀಕರವಾದ ಯುದ್ಧಗಳಲ್ಲಿ ಖೈದಿಯಾಗಿ ಬಂಧಿಸಲ್ಪಟ್ಟ ವರನ್ನು ತಳ್ಳುವ ಚಿತ್ರಹಿಂಸಾ ಶಿಬಿರಗಳಲ್ಲಿನ ಅಮಾನುಷ ಹಿಂಸೆಗೊಳಗಾದ ಖೈದಿಗಳು, ಕ್ರಮೇಣ ತಮ್ಮನ್ನು ಹಿಂಸಿಸುವವರನ್ನೇ ಅಗಾಧವಾಗಿ ಪ್ರೀತಿಸಿ ಬಿಡುವ, ಅವರ ಮೇಲೆ ಅಪಾರ ಅಭಿಮಾನ ಇಟ್ಟು ಕೊಳ್ಳುವ ಹಂತಕ್ಕೆ ಬರುವುದಾಗಿ ಮನಃಶಾಸ್ತ್ರ ಲೇಖನಗಳಲ್ಲಿ ಕಾಣಸಿಗುತ್ತದೆ. ಇದರಿಂದಲೇ ಇರಬೇಕು, 'ಮನಸ್ಸು' ಅಂದರೆ ಏನೆಂದು ಸರಿಯಾಗಿ ವ್ಯಾಖ್ಯಾನಿಸಲು ಜಗತ್ತಿನಲ್ಲಿ ಈವರೆಗೆ ಯಾರಿ ಗೂ ಸಾಧ್ಯವಾಗದೇ ಹೋದದ್ದು.

# 35

"ಭಾಷಣ ತುಂಬ ಬೋರಾಗಿತ್ತು" ಅಂದ ಬಾಲಕ

2014 ಫೆಬ್ರವರಿ ಒಂದರಂದು ತಾಜುಲ್ ಉಲಮಾರ ನಿಧನದೊಂದಿಗೆ ತೆರವಾದ ಸಮಸ್ತ ಕೇರಳ ಜಂಇಯತುಲ್ ಉಲಮಾ ಅಧ್ಯಕ್ಷ ಸ್ಥಾನಕ್ಕೆ ಸಮಸ್ತ ಮುಶಾವರ ಮೌಲಾನಾ ನೂರುಲ್ ಉಲಮಾ ಎಂ.ಎ. ಉಸ್ತಾದರನ್ನು ಆಯ್ಕೆ ಮಾಡಿದ್ದು 2014 ಫೆಬ್ರವರಿ 9 ರಂದು ನಡೆದ ಮಹಾಸಭೆಯಲ್ಲಿ. ಎಂ.ಎ. ಉಸ್ತಾ ದರ ಚರಿತ್ರೆಯಿಲ್ಲದೆ ಸಮಸ್ತದ ಚರಿತ್ರೆ ಸಂಪೂ ರ್ಣವಾಗದು. ನೂತನವಾದಿಗಳ ಹುಟ್ಟಡಗಿ ಸಲು 1925ರಲ್ಲಿ ಸಾತ್ವಿಕ ಉಲಮಾ ನಾಯಕ ರುಗಳ ಮುಂದಾಳುತ್ವದಲ್ಲಿ 'ಸಮಸ್ತ' ಪ್ರಾರಂ ಭವಾದಾಗ ಅದರ ಪ್ರಧಾನ ಶಿಲ್ಪಿಗಳಲ್ಲಿ ಒಬ್ಬರು ಪಾಂಙಿಲ್ ಅಹ್‌ಮದ್ ಕುಟ್ಟಿ ಮುಸ್ಲಿಯಾರ್ ಆಗಿದ್ದರು. ಆ ಕಾಲದ ವಿದ್ವಾಂ ಸರು 'ಮುಜದ್ದಿದ್' (ಧರ್ಮ ಸುಧಾರಕ)ನ ಅರ್ಹತೆಗಳನ್ನು ಕಂಡಿದ್ದ ಪಾಂಙಿಲ್, ಸಮಸ್ತ ವನ್ನೊಂದು ಬೃಹತ್ ಚಳವಳಿಯಾಗಿ ಬೆಳೆಸು ವುದರಲ್ಲಿ ತನ್ನ ಬದುಕನ್ನು ಮುಡಿಪಿಟ್ಟಿದ್ದರು. ಆ ಮಹಾತ್ಮರ ಕೈಯಿಂದ ನೇರವಾಗಿ ಸಮ ಸ್ತದ ಸದಸ್ಯತ್ವವನ್ನು ಪಡೆಯುವ ಸೌಭಾಗ್ಯ ದೊರೆತವರ ಪೈಕಿ ಇವತ್ತು ಬದುಕಿರುವ ಏಕೈಕ ವ್ಯಕ್ತಿಯಾಗಿದ್ದಾರೆ ನೂರುಲ್ ಉಲಮಾ ಎಂ.ಎ. ಅಬ್ದುಲ್ ಖಾದಿರ್ ಮುಸ್ಲಿಯಾರ್. ತಾಜುಲ್ ಉಲಮಾರ 'ವಫಾತ್' ನೊಂದಿಗೆ ನೂರುಲ್ ಉಲಮಾ ಈ ಪಟ್ಟಕ್ಕೆ ಏರುವುದ ರಲ್ಲಿ ಸುನ್ನೀ ಜಗತ್ತಿನಲ್ಲಿ ಎರಡನೇ ಮಾತಿರಲಿಲ್ಲ.

ಮರ್ಕಝುಲ್ ಹುದಾ ವಿದ್ಯಾ ಸಂಸ್ಥೆಯು ಹತ್ತು ವರ್ಷಗಳನ್ನು ದಾಟಿದಾಗ ನಾವು ಹಮ್ಮಿ ಕೊಂಡ ಬಹುಮುಖಿ ಕಾರ್ಯಕ್ರಮಗಳಲ್ಲಿ ಒಂದು ಉತ್ತರ ಕರ್ನಾಟಕದಲ್ಲಿ ಧಾರ್ಮಿಕವಾಗಿ ಹಿಂದುಳಿದ ಪ್ರದೇಶ ಗಳಲ್ಲಿ ಮಸೀದಿ ನಿರ್ಮಾಣ ಮಾಡಿಕೊ ಡುವುದಾಗಿತ್ತು. ಇದನ್ನು ಆಯೋಜಿಸಿ ಸೂಕ್ತ ಸ್ಥಳದ ಹುಡುಕಾಟದಲ್ಲಿರುವಾಗ ಕಣ್ಣಿಗೆ ಬಿದ್ದವರು 'ವಾರ್ತಾಭಾರತಿ' ದಿನ ಪತ್ರಿಕೆಯ ಮಂಗಳೂರು ನಗರ ವರದಿಗಾರರಾದ ರಹ್ಮಾನ್ ಖಾನ್ ಲೊಹಾನಿ ಅವರು. ತನ್ನ ಜನ್ಮ ನಾಡಾದ ಉತ್ತರ ಕನ್ನಡ ಜಿಲ್ಲೆಯ ಮುಂಡ ಗೋಡ ತಾಲೂಕಿನ 'ಮಳಗಿ' ಎಂಬಲ್ಲಿನ ಚಿರಪುರಾತನ ಮಸೀದಿಯನ್ನು ಕೆಡವಿ ಹೊಸ ಮಸೀದಿ ಕಟ್ಟುವ ಕನಸಿನಲ್ಲಿದ್ದ ಅವರು ಮಸೀ ದಿಯ ನಕ್ಷೆ ಹಾಗೂ ಇತರ ದಾಖಲೆಗಳನ್ನು ಹಿಡಿದು ದಾನಿಗಳ ಹುಡುಕಾಟದಲ್ಲಿದ್ದರು. ಇವರ ಅಪೇಕ್ಷೆಯಂತೆ 2014 ಫೆಬ್ರವರಿ 12 ರಂದು ನಾವು 'ಮಳಗಿ'ಗೆ ಮಸೀದಿ ಜಾಗ ಪರಿಶೀಲಿಸಲು ತೆರಳಿದೆವು. ಅಲ್ಲಿ ಮಸೀದಿ ಯೊಂದು ಅನಿವಾರ್ಯವೆಂದು ಮನವರಿಕೆ ಯಾದಾಗ ನಮ್ಮ ಯೋಜನೆಯ ಪ್ರಥಮ ಮಸೀದಿ ಯನ್ನು ಅಲ್ಲಿಗೆ ಮಂಜೂರು ಮಾಡಿಬಿಟ್ಟೆವು. ಸೌದಿ ಅರೇಬಿಯಾದ ಜಿದ್ದಾದ ಅಲೀ ಹರೈಬಿ ಅಲ್ ಮರ್‌ವಾನಿ ಎಂಬವರ ಹರಕೆಯ ಮಸೀದಿಗೆ ಮಳಗಿಯ ಮಣ್ಣಲ್ಲಿ ಶಿಲಾನ್ಯಾಸ ಮಾಡಲಾಯಿತು. 'ಇಲ್‌ಮುಲ್ ಮೀಖಾತ್' ನಲ್ಲಿ ಅಗಾಧ ಪಾಂಡಿತ್ಯವಿರುವ ಶೈಖುನಾ ಬೇಕಲ್ ಉಸ್ತಾದರ ಶಿಷ್ಯ, ಅಲ್‌ಅನ್ಸಾರ್ ಪತ್ರಿಕೆಯ ಸೇವೆಯಲ್ಲಿರುವ ಮಿತ್ರ ಕಲ್ಲಡ್ಕ ಅಬ್ದುಲ್ಲತೀಫ್ ಮದನಿ ಖಿಬ್‌ಲಃದ ದಿಕ್ಕು ನಿರ್ಣಯ ಶಾಸ್ತ್ರವನ್ನು ಕರಾರುವಕ್ಕಾಗಿ ನಿರ್ವಹಿಸಿಕೊಟ್ಟರು.

ಭಾಷಣ ಬದುಕಿನಲ್ಲಿ ನನ್ನ ಪ್ರಮುಖ ಅಖಾಡ ಸೌಹಾರ್ದ ಸಭೆಗಳೇ ಆಗಿದ್ದವು. ಆ ಕಾಲಕ್ಕೆ ಕನ್ನಡ ಭಾಷಣಗಾರರ ಸಂಖ್ಯೆ ವಿರಳವಾಗಿದ್ದರಿಂದ ಕನ್ನಡದಲ್ಲಿ ಮಾತನಾಡ ಬೇಕಾದ ಕಡೆಗೆ ಅನಿವಾರ್ಯವಾಗಿ ಹೋಗಬೇ ಕಾಗಿತ್ತು. ಮುಸ್ಲಿಮೇತರರ ಸೌಹಾರ್ದ ಸಮ್ಮೇಳನಗಳ ವೇದಿಕೆಗಳಲ್ಲಿ ಕೆಲವು 'ಇರುಸು ಮುರುಸುಗಳು' ಅನುಭವಿಸುತ್ತಿದ್ದುದು ನಿಜ.

ಸೌಹಾರ್ದ ಸಭೆಗಳಲ್ಲಿ ನಾನು ಹೆಚ್ಚಾಗಿ ಇಸ್ಲಾಮೇತರ ಮತ-ದರ್ಶನಗಳ ಸೌಹಾರ್ದ ಸಂದೇಶಗಳನ್ನು ಉಲ್ಲೇಖಿಸಲು ಪ್ರಯತ್ನಿಸು ತ್ತಿದ್ದೆ. ಸಭೆಗಳಲ್ಲಿನ ಹೆಚ್ಚಿನ ಸಂಖ್ಯೆಯ ಮುಸ್ಲಿಮೇತರ ಸಹೋದರರನ್ನು ಪ್ರಭಾವಿಸಲು ಈ ರೀತಿ ಮಾಡುತ್ತಿದೆ. ಅದಕ್ಕಾಗಿ ನನ್ನ ಪುಸ್ತಕ ಸಂಗ್ರಹದಲ್ಲಿ ರಾಮಾಯಾಣ, ಮಹಾ ಭಾರತಗಳಲ್ಲದೆ ವಿವಿಧ ಭಾಷೆಗಳ ಬೈಬಲ್ ಹಾಗೂ ಇತರ ಧರ್ಮಗಳ ಪುಸ್ತಕಗಳನ್ನು ಶೇಖರಿಸಿ ಇಡುತ್ತಿದ್ದೆ. ವಿಶೇಷವೆಂದರೆ, ನಾನು ಉಲ್ಲೇಖಿಸುತ್ತಿದ್ದೆ ವಿಷಯಗಳು ಅಲ್ಲಿ ಸಭಿಕರ ಪಾಲಿಗೆ ಹೊಸ ಅನುಭವಗಳಾಗಿದ್ದು, ಅವರನ್ನು ಅಗಾಧವಾಗಿ ತಟ್ಟುತ್ತಿತ್ತು. ಅವರ ಯಾವುದೇ ವೇದಿಕೆಗಳಲ್ಲಿ ಅವರು ಇಂತಹ ಉಪದೇಶಗಳನ್ನು ಕೇಳುವ ಅವಕಾಶಗಳೂ ಕಡಿಮೆಯಿತ್ತು. ಅದರ ಜತೆ ಇಸ್ಲಾಮಿನ ಸೌಹಾರ್ದ ಸಂದೇಶಗಳನ್ನು ಸಮೀಕರಿಸಿ ನುಡಿಯುವಾಗ ಅದು ಮನಸ್ಸುಗಳ ಪರಿ ವರ್ತನೆಗೆ ಕಾರಣವಾಗುವುದೆಂದು ನಾನು ನಂಬಿದ್ದೆ. ಅನೇಕ ವೇದಿಕೆಗಳಲ್ಲಿ ಈ ರೀತಿಯ ಪ್ರತಿಕ್ರಿಯೆಗಳನ್ನು ಅನುಭವಿಸಿದ್ದೆ.

ಆದರೆ ಪುತ್ತೂರು ಸಮೀಪದ ಕಾರ್ಯ ಕ್ರಮವೊಂದರಲ್ಲಿ ಈ ರೀತಿಯ ಭಾಷಣಕ್ಕೆ ಬಂದ ಪ್ರತಿಕ್ರಿಯೆಯೊಂದು ನನ್ನನ್ನು ಕೊಂಚ ವಿಚಲಗೊಳಿಸಿತ್ತು.

ಕಾರ್ಯಕ್ರಮಕ್ಕೆ ಬಂದಿದ್ದ ಹತ್ತು ವಯಸ್ಸಿನ ಹುಡುಗನೊಂದಿಗೆ ಇಂದಿನ ಭಾಷಣ ಹೇಗಿತ್ತೆಂದು 'ಫೀಡ್‌ಬ್ಯಾಕ್' ಕೇಳಿದ್ದೆ. ತಕ್ಷಣ ಹುಡುಗ ತುಂಬಾ ಬೋರ್ (Bore) ಆಗಿತ್ತು ಎಂದ. ಕಾರಣ ಕೇಳಿದ್ದರೆ ಅದರಲ್ಲಿ ಇಸ್ಲಾಮಿನ ಸಂದೇಶಕ್ಕಿಂತ ಇತರರ ಸಂದೇಶಗಳಿಗೇ ಹೆಚ್ಚು ಪ್ರಾಶಸ್ತ್ಯ ಕೊಡಲಾ ಗಿತ್ತು ಎಂದ. ಇಸ್ಲಾಮಿನ ಪರಿಚಯ ಸರಿ ಯಾಗಿ ನಡೆಯಲಿಲ್ಲ. ಆದ್ದರಿಂದ ತುಂಬಾ ಬೋರ್ ಆಗಿತ್ತು ಎಂದು ಮತ್ತೊಮ್ಮೆ ಉದುರಿದ. ಇದು ನನಗೆ ಕ್ಷಣ ಹೊತ್ತು ತುಸು ಆಘಾತ ನೀಡಿತ್ತು. ಈ ಅನಿರೀಕ್ಷಿತ ಪ್ರತಿಕ್ರಿಯ ನೀಡಲು ಧೈರ್ಯ ತೋರಿದ್ದು ಬೇರಾರೂ ಅಲ್ಲ. ನನ್ನ ಹಿರಿಯ ಮಗ ಶಾಮಿಲ್ ಮಿನ್ ಹಾಜ್.

ಸುಮಾರು ಒಂದೂವರೆ ದಶಕಗಳಿಂದ ಸೌಹಾರ್ದ ಸಭೆಗಳನ್ನು ಮುಖ್ಯ ಕಾರ್ಯ ಸೂಚಿಯಾಗಿ ಕಂಡಿದ್ದ ನನಗೆ ಅಂದಿನಿಂದ ಈ ರೀತಿಯ ಕಾರ್ಯಕ್ರಮಗಳಲ್ಲಿ ತುಸು ಬದಲಾವಣೆ ತರಬೇಕೆನಿಸಿತು. ಯುವ ಕನ್ನಡ ವಾಗ್ಮಿಗಳು ಸಾಕಷ್ಟು ಬೆಳೆದು ಬಂದಿರುವು ದರಿಂದ ನನ್ನ ಪಾತ್ರವನ್ನು ಹೆಚ್ಚಾಗಿ ಧಾರ್ಮಿಕ ಉಪನ್ಯಾಸಗಳಿಗೆ ಮೀಸಲಿಡಬೇಕೆಂದು ಮನಸ್ಸು ಉಪದೇಶಿಸಿತು.

ಹೀಗಿರುವಾಗಲೇ 2014 ಫೆಬ್ರವರಿ 15ರಂದು ಉಡುಪಿ ಜಿಲ್ಲೆಯ 'ಬೆಳಪು' ಎಂಬ ಲ್ಲಿನ ಗ್ರಾಮೋತ್ಸವ ಕಾರ್ಯಕ್ರಮಕ್ಕೆ ನನಗೆ ಆಹ್ವಾನ ಬಂದದ್ದು. ಬ್ಯಾಂಡು - ಡೋಲು ಮೆರವಣಿಗೆ, ಮಹಿಳೆಯರ ಸಾನಿಧ್ಯ ಮತ್ತು ದೀಪ ಬೆಳಗುವಿಕೆಗಳ ಎಲ್ಲ ಸಾಧ್ಯತೆಗಳಿದ್ದ ಸದ್ರಿ ಸಭೆಯನ್ನು ತಪ್ಪಿಸಲು ತುಂಬ ಪ್ರಯತ್ನಪಟ್ಟೆ, ಆದರೆ ಆಪ್ತರಾಗಿದ್ದ ಡಾ. ದೇವಿ ಪ್ರಸಾದ್ ಶೆಟ್ಟಿ ಅವರ ನಿರಂತರ ಒತ್ತಡದಿಂದಾಗಿ ಪ್ರಯತ್ನ ವಿಫಲವಾಯಿತು. ಜೆ.ಡಿ.ಎಸ್. ಮುಖಂಡರಾದ ಉಡುಪಿ ಗುಲಾಂ ಹಾಜಿ ಯವರ ಮೂಲಕ ಕೆಲವು ಷರತ್ತುಗಳೊಂದಿಗೆ ಕಾರ್ಯಕ್ರಮ ಒಪ್ಪಿದೆ. ಆದರೆ ಅಲ್ಲಿಯೂ ಕೆಲವು 'ಇರುಸು ಮುರುಸು' ತಪ್ಪಿಸಲಾಗಲಿಲ್ಲ.

ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಯಾವುದೇ ಸಂಘಟನಾ ಪದಾಧಿಕಾರವನ್ನೂ ಸುಲಭವಾಗಿ ನಿಭಾಯಿಸಬಹುದು. ಆದರೆ ಮೊಹಲ್ಲಾ ಒಂದರ ಆಡಳಿತ ಸಮಿತಿಯ ಜವಾ ಬ್ದಾರಿ ತುಂಬ ಕಠಿನವಾದುದೆಂದು ನನಗೆ ಮನವರಿಕೆಯಾದದ್ದು ನನ್ನ ಜಮಾಅತ್‌ನ ಮಹಾಸಭೆಯಲ್ಲಿ. ತಲಪಾಡಿ ಪರಿಸರದಲ್ಲಿ ಮನೆ ಮಾಡಿದ ಮೇಲೆ ಸ್ಥಳೀಯ ಒಂದು ಜಮಾಅತ್‌ನ ಸದಸ್ಯನಾದೆ. ಮಹಾಸಭೆ ಯಲ್ಲಿ ನನ್ನನ್ನು ಉಪಾಧ್ಯಕ್ಷನಾಗಿ ಆರಿಸಿ ದರು. ಕಿನ್ಯ ವ್ಯಾಪ್ತಿಗೆ ಒಳಪಟ್ಟ ಸದ್ರಿ 'ಪಿಲಿ ಕೂರು' ಎಂಬ ಊರು ಉದ್ಯಮಿ ಕಣಚೂರು ಮೋನು ಹಾಜಿಯವರ ಹಿರಿಯ ನಾಡು. ಆದ್ದರಿಂದ ಜಮಾಅತ್‌ಗೆ ಪ್ರಾರಂಭ ಕಾಲದಿಂದ ಅವರೇ ಅಧ್ಯಕ್ಷರು. ಅಲ್ಲಿನ ಉಪಾಧ್ಯಕ್ಷನ ಹುದ್ದೆಯೆಂದರೆ ನಿಜವಾಗಿ ಅಧ್ಯಕ್ಷನ ಹೊಣೆಗಾರಿಕೆಗಳೇ. ಅಲ್ಲಿ ನಾನು ಕಂಡುಕೊಂಡ ಸತ್ಯವೆಂದರೆ ಒಬ್ಬ ಅಲ್ಪ ಕಾಲಕ್ಕಾದರೂ ಒಂದು ಮೊಹಲ್ಲಾದ ಸಾರಥಿಯಾದರೆ ಮುಂದೆ ಯಾವ ಸಂಘಟ ನೆಯನ್ನು ನಡೆಸಲೂ ಅವರಿಗೆ ಕಷ್ಟ ಸಾಧ್ಯ ವಾಗದು ಎಂಬುದು. ಇದು ಎಲ್ಲ ಮೊಹಲ್ಲಾ ಗಳಿಗೂ ಅನ್ವಯವಾಗುವ ಸತ್ಯ.

ಫೆಬ್ರವರಿ 22ರಂದು ಮಲಪ್ಪುರಂ ಜಿಲ್ಲೆಯ ತಿರೂರ್ ಸಮೀಪದ 'ನಡುವಿಲಂ ಙಾಡಿ' (Naduvilangadi) ಎಂಬಲ್ಲಿಂದ ತಾಜುಲ್ ಉಲಮಾ ಅನುಸ್ಮರಣೆ ಕಾರ್ಯ ಕ್ರಮಕ್ಕೆ ಆಹ್ವಾನ ಬಂದಿತ್ತು. ಭಾರತದ ಮುಸ್ಲಿಮರ ಮುಂಚೂಣಿ ಸಾರಥಿಯಾಗಿದ್ದ ಮರ್‌ಹೂಂ ಸಯ್ಯಿದ್ ಅಬ್ದುರ್ರಹ್ಮಾನ್ ಬಾಫಖಿ ತಂಙಳ್ ಅವರ ಸುಪುತ್ರ ಸಯ್ಯಿದ್ ಝೈನುಲ್ ಆಬಿದೀನ್ ಬಾಫಖಿ ತಂಙಳ್ ಆಹ್ವಾನ ನೀಡಿದ್ದರು. ದೀರ್ಘಕಾಲ ಮಲೇ ಶ್ಯಾದಲ್ಲಿದ್ದ ತಂಙಳ್ ವಿಶ್ರಾಂತ ಜೀವನಕ್ಕೆ ತನ್ನ ಹುಟ್ಟೂರಾದ ಕ್ಯೊಲಾಂಡಿಯನ್ನು ಬಿಟ್ಟು ನಡುವಿಲಂಙಾಡಿಯನ್ನು ಆಯ್ಕೆ ಮಾಡಿದ್ದರು. ಅಲ್ಲಿನ ಎಸ್‌ವೈಎಸ್, ಎಸ್ಸೆಸ್ಸೆಫ್ ಸಂಘಟನೆಗಳಿಗೆ ತಂಙಳ್ ಅವರೇ ಮಾರ್ಗದರ್ಶಕರಾಗಿದ್ದರು. ತಂಙಳ್ ಆಗಮನದೊಂದಿಗೆ ಪ್ರದೇಶದಲ್ಲಿ ಸುನ್ನೀ ಚಟುವಟಿಕೆಗಳು ಗರಿಗೆದರಿದೆ.

ಆದರೆ ನಡುವಿಲಂಙಾಡಿಯನ್ನು ನಾನು ನೆನಸಲು ಕಾರಣ, ರೈಲ್ವೇ ನಿಲ್ದಾಣಕ್ಕೆ ನನ್ನನ್ನು ಬರಮಾಡಿಕೊಳ್ಳಲು ಬಂದಿದ್ದ ಇಸ್ಮಾಈಲ್ ಮುಸ್ಲಿಯಾರ್ ಅವರು, ಮಲಪ್ಪುರಂ ಜಿಲ್ಲೆಯಲ್ಲೇ ದರ್ಸ್ ಕಲಿಯಬೇಕೆಂಬ ನನ್ನ ಅದಮ್ಯ ಬಯಕೆಯಿಂದಾಗಿ ಒಂದು ಕಾಲ ದಲ್ಲಿ ನಾನು ಸೇರಲು ಬಯಸಿದ್ದು ಎಂ.ಪಿ. ಮುಸ್ತಫಲ್ ಫೈಝಿ ಅವರ ದರ್ಸ್‌ನಲ್ಲಾ ಗಿತ್ತು. ಆ ಬಗ್ಗೆ ಅವರಿಗೆ ಪತ್ರ ಬರೆದಿದ್ದಾಗ ಉತ್ತಮ ಪ್ರತಿಕ್ರಿಯೆ ನೀಡಿ ಸ್ವಾಗತಿಸಿದ್ದರು. ಅವರು ನಡೆಸುತ್ತಿದ್ದ ಅಲ್ ಮಜ್‌ಲಿಸು ಲಿದ್ದಅ್‌ವತಿಲ್ ಇಸ್ಲಾಮಿಯ್ಯ ಎಂಬ ಸಂಸ್ಥೆಗೆ ಬಂದಲ್ಲಿ ನಿನ್ನ ಭವಿಷ್ಯ ಉಜ್ವಲ ಗೊಳ್ಳುವುದು ಎಂದು ಭವಿಷ್ಯ ನುಡಿದಿದ್ದರು. ಆದರೆ ನಾನಲ್ಲಿ ಸ್ಥಳ ವೀಕ್ಷಣೆಗೆ ತೆರಳಿದಾಗ ಅವರು ತಾಜುಲ್ ಉಲಮಾರ ವಿರುದ್ಧ ಗುಂಪಿಗೆ ನೆಗೆದು ಬಿಟ್ಟಿದ್ದರು. ನಂತರ ನಾನು ತಿರೂರಂಙಾಡಿ ಬಾಪು ಉಸ್ತಾದರ ದರ್ಸಿಗೆ ನೆಗೆದೆ. ಆದರೆ ಮುಸ್ತಫಲ್ ಫೈಝಿಯ ಸಂಪಾದಕತ್ವದ ಅಲ್ ಮುಬಾರಕ್ ವಾರ ಪತ್ರಿಕೆಯ ಅವರ ಹರಿತವಾದ ಬರಹಗಳು ಮತ್ತು ಅವರ ಬಿದ್‌ಅತ್ ವಿರುದ್ಧ ತೀವ್ರ ಭಾಷಣಗಳ ಅಭಿಮಾನಿಯಾಗಿದ್ದ ನನಗೆ ಅವರ ಮೇಲಿನ ಅಭಿಮಾನ ಕಡಿಮೆಯಾ ಗಿರಲಿಲ್ಲ. ಮೇಲಿನ ಇಸ್ಮಾಈಲ್ ಮುಸ್ಲಿ ಯಾರ್, ಫೈಝಿಯ ಪತ್ನಿಯ ಸಹೋದರ ನಾಗಿದ್ದರು. ಹಳೆಯ ಅಭಿಮಾನದಿಂದ ಫೈಝಿಯ ಬಗ್ಗೆ ವಿಚಾರಿಸಿದರೆ ಉತ್ತರ ವೇದನಾಜನಕವಾಗಿತ್ತು. ಸುನ್ನತ್ ಜಮಾಅತ್‌ನ ಒಂದು ಕಾಲದ ಸಿಂಹಗರ್ಜನೆ ಯಾಗಿದ್ದ ಅವರು ಇಂದು ಎ.ಪಿ. ಉಸ್ತಾದ್ ಮತ್ತು ಸಂಘಟನೆಗಳ ಮೇಲೆ ಅಸಹನೀಯ ದ್ವೇಷವನ್ನು ಹೊಂದಿದ್ದಾರೆ. ಅವರ ಪತ್ನಿ ಮಕ್ಕಳೆಲ್ಲರೂ ಈ ದ್ವೇಷ ಅಭಿಯಾನದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಅವರು ಈಗ ಇರುವ ಸಂಘಟನೆಗಳು ಅವರಿಗೆ ಸೂಕ್ತ ವೇದಿಕೆ ಕೊಡುತ್ತಿಲ್ಲ. ಕವಿಪುಂಗವರ ಮಾತು ನೆನಪಾಯಿತು. 'ಮರ್ತ್ಯ ಲೋಕವೆಂ ಬುದು ಕರ್ತಾರರ ಕಮ್ಮಟವಯ್ಯಾ... ಇಲ್ಲಿ ಸಲ್ಲುವವರು ಎಲ್ಲೂ ಸಲ್ಲುವರಯ್ಯಾ... ಇಲ್ಲಿ ಸಲ್ಲದವರು ಎಲ್ಲೂ ಸಲ್ಲರಯ್ಯಾ...

ಕುಶಾಗ್ರ ಬುದ್ಧಿ ವೈಭವ ಮತ್ತು ಅವಾಜ್ಯ ಕೌಶಲ್ಯಗಳ ಜ್ವಲಂತ ಪ್ರತೀಕವಾಗಿದ್ದ ಫೈಝಿಯ ಪತನ ಸುನ್ನತ್ ಜಮಾಅತ್‌ಗೆ ಅಪಾರ ನಷ್ಟವಾಗಿತ್ತು.

ಇಸ್ಮಾಈಲ್ ಮುಸ್ಲಿಯಾರ್ ಜತೆ ಮಾತ ನಾಡುತ್ತಲ್ಲೇ ಫೈಝಿ ಸ್ಥಾಪಿಸಿದ್ದ ಬೌದ್ಧಿಕ ಸಮ್ರಾಜ್ಯದ ವೈಭವದ ನಿನ್ನೆಗಳು ಮನಸ್ಸಲ್ಲಿ ತೇಲಿ ಮರೆಯಾದವು. ಅವರ ಶಿಷ್ಯತ್ವದಿಂದ ನನ್ನನ್ನು ತಡೆದ, ಸನ್ನಿವೇಶಗಳನ್ನು ನೆನೆದು ಸಂತೋಷವಾಯಿತು.

ಹಿಂದೆ ತಾಜುಲ್ ಉಲಮಾರು ಮಂತ್ರಿ ಸಿದ ನೀರಿನಿಂದ ತಕ್ಷಣ ಮಾಯವಾದ ಮೂತ್ರ ಕಲ್ಲಿನ ಸಮಸ್ಯೆ ಮತ್ತೆ ಉಲ್ಬಣವಾಗ ತೊಡಗಿತು. ಸರ್ವಸಮಸ್ಯೆಗಳ

ಪರಿಹಾರಕ್ಕೆ ನಾವು ತೆರಳುವ ತಾಜುಲ್ ಉಲಮಾ ಅದಾಗಲೇ ಭೌತಿಕವಾಗಿ ನಮ್ಮನ್ನು ಅಗಲಿ ಒಂದು ತಿಂಗಳಾಗಿತ್ತು.

ಕನ್ಯಾನ ಇಬ್‌ರಾಹೀಮ್ ಫೈಝಿಯವರು ಮೂತ್ರಕಲ್ಲಿಗೆ ನೀಡುತ್ತಿರುವ 'ವಿಶೇಷ ನೀರು' ಅನೇಕರ ಪಾಲಿಗೆ ಅದ್ಭುತ ಪರಿಹಾರ ಒದಗಿಸಿದೆ. ಅಪಾರ ನೋವಿನಿಂದ ನರಳುತ್ತಿ ದ್ದ ನನಗೆ ಅವರು ಕೊಟ್ಟ ನೀರಿನಿಂದ ಮರುದಿನವೇ ಕಲ್ಲು ಹೊರಟು ಹೋಯಿತು. ಹಿಂದಿನ ದಿನ ಸ್ಕ್ಯಾನ್ ನಡೆಸಿದ ವೈದ್ಯರು 8 ಮಿಲಿಮೀಟರ್‌ನ ಕಲ್ಲು ಕಿಡ್ನಿಯಿಂದ ಜಾರಿ ನಿಂತಿದೆ ಎಂದಿದ್ದರು. ಆಧುನಿಕ ವೈದ್ಯ ಶಾಸ್ತ್ರವು ಅತ್ಯಾಧುನಿಕ ಸಂಶೋಧನೆಗಳ ಮೂಲಕ ಪ್ರಪಂಚವನ್ನು ಅಧೀನಗೊಳಿಸುತ್ತಿ ರುವಾಗಲೂ ಆಧ್ಯಾತ್ಮಿಕ ಮಹಾತ್ಮರ ಚೈತನ್ಯದಿಂದ ನಡೆಸುವ ಇಂತಹ ಬದಲಿ ವೈದ್ಯಗಳು ಶಮನವನ್ನೂ ಶಾಂತಿಯನ್ನೂ ನೀಡುತ್ತವೆಯೆಂದಾದರೆ ಸರ್ವ ಪ್ರಪಂಚಗಳ ಸರ್ವಾಧಿಪತಿಯಾದ ಅಲ್ಲಾಹನ ಪರಮಾ ಪ್ತರ ಮೂಲಕ ಕೆಲಸ ಕಾರ್ಯಗಳನ್ನು ಈಡೇ ರಿಸಿಕೊಳ್ಳಲು ಸ್ಥಳ -ಕಾಲಗಳ ಯಾವುದೇ ಹಂಗು ಅನ್ವಯವಾಗುವುದಿಲ್ಲವೆಂಬುದು ಮತ್ತೆ ಮತ್ತೆ ರುಜುವಾತಾಗುತ್ತದೆ.

# 36

## ಕೆಲವು ಅಗಲಿಕೆಗಳು ನೀಡುವ ಶೂನ್ಯಗಳು...

2014 ಫೆಬ್ರವರಿ ಒಂದು ಶನಿವಾರ ದಂದು ನಾಡಿನ ಆಧ್ಯಾತ್ಮಿಕ ಚಕ್ರವರ್ತಿ ತಾಜುಲ್ ಉಲಮಾ ನಿಧನರಾದಾಗ ಆವರಿಸಿದ ತಮಸ್ಸು, ಯಾವತ್ತೂ ಪರಿಹರಿಸಲು ಸಾಧ್ಯವಾಗುವಂತದ್ದಾಗಿ ರಲಿಲ್ಲ. ಉಳ್ಳಾಲ್ ತಂಙಳ್‌ರ ವಿಯೋಗವು ಅವರ ಸಂಪರ್ಕ ವಲಯದ ಪ್ರತಿಯೊಬ್ಬ ರನ್ನೂ ಒಂದೊಂದು ರೀತಿಯಲ್ಲಿ ಸ್ಪರ್ಶಿ ಸಿತ್ತು. ಉಳ್ಳಾಲದಿಂದ ಕೆಲವೇ ಕಿಲೋ ಮೀಟರ್ ದೂರದಲ್ಲಿ ತಲಪಾಡಿಯಲ್ಲಿ ವಾಸಿಸುತ್ತಿದ್ದ ನಾನು ಪ್ರತಿ ಶುಕ್ರವಾರ ಬೆಳಗ್ಗೆ ಅವರನ್ನು ಸಂದರ್ಶಿಸುವ ಪರಿಪಾಠ ಇಟ್ಟುಕೊಂಡಿದ್ದೆ. ಸುಮಾರು ಎಂಟೂವರೆ ಗಂಟೆಯ ವೇಳೆ ಅಲ್ಲಿ ತಲುಪಿದರೆ ಅವರು ತನ್ನ ದ್ಸಿಕ್ರ್ - ಔರಾದ್‌ಗಳನ್ನೆಲ್ಲ ಮುಗಿಸಿ ಪತ್ರಿಕಾ ಓದುವಿನಲ್ಲಿ ತೊಡಗಿರುತ್ತಿದ್ದರು.

ಮಲಯಾಳಂನ ಸಿರಾಜ್ ದಿನ ಪತ್ರಿಕೆ ಸಮೇತ ವಿವಿಧ ಮಲಯಾಳಂ ನಿಯತ ಕಾಲಿಕಗಳಲ್ಲಿ ಕಣ್ಣಾಡಿಸುತ್ತಾ ಇರುವಾಗ ನಾನು ತಲುಪಿದರೆ ನನ್ನಿಂದ ಜೋರಾಗಿ ಪತ್ರಿಕೆ ಓದಿಸುತ್ತಿದ್ದರು. ಒಂದು ದಿನ ಸುಮಾರು ಎರಡು ಗಂಟೆಗಳ ಕಾಲ ತಾನು ಉಳ್ಳಾಲಕ್ಕೆ ಆಗಮಿಸಲು ನಿಮಿತ್ತವಾದ ಸಂದರ್ಭಗಳನ್ನು ವಿವರಿಸಿದ್ದರು. ತುಂಬ ಆಪ್ತವಾದ ಒಡನಾಟ, ಸ್ನೇಹ ತುಂಬಿದ ನಿಮಿಷಗಳು. ಬದುಕಿನ ಪ್ರತಿಯೊಂದು ಮಹತ್ತರ ಹೆಜ್ಜೆಗಳನ್ನು ಅವರ ಅನುಮತಿ ಪಡೆದೇ ಇಡುತ್ತಿದ್ದೆ. ಈ ನಿಟ್ಟಿನಲ್ಲಿ ನನಗೂ ಅದರ ವಿರಹ ನೀಡಿದ ವೈಯಕ್ತಿಕ ಶೂನ್ಯವು ಅತಿ ದಾರುಣವಾಗಿತ್ತು.

ಇನ್ನೊಂದು ಕಡೆ ಸಾಮಾಜಿಕವಾಗಿ ಸಂಘ ಸಂಸ್ಥೆಗಳು, ಮೊಹಲ್ಲಾಗಳು, ತಮ್ಮ ಗೌರವಾ ಧ್ಯಕ್ಷರನ್ನು, ಪೋಷಕರನ್ನು ತಮ್ಮ ಮೊಹ ಲ್ಲಾದ ಖಾಝಿಯನ್ನು ಕಳೆದುಕೊಂಡು ಅನಾಥತ್ವವನ್ನು ಆವರಿಸಿತ್ತು. ಮನೆಯೊ ಡೆಯ ಹೊರಟು ಹೋದ ಮೇಲಿನ ಅಸಹ್ಯ ಮೌನವು ಮುಸ್ಲಿಂ ಮೊಹಲ್ಲಾಗಳ ಮೇಲೆ ಕರಿನೆರಳು ಚಾಚಿತ್ತು. ಹೊಸ ನಾಯಕನ ಆಗಮನವನ್ನು ಕಾತರದಿಂದ ಕಾಯುವಂ ತಿತ್ತು. ಈ ನಿಟ್ಟಿನಲ್ಲಿ ಮಾರ್ಚ್ 6ರಂದು ಉಳ್ಳಾಲ ಪ್ರದೇಶದ 28 ಮೊಹಲ್ಲಾಗಳ ಖಾಝಿಯಾಗಿ ತಾಜುಲ್ ಉಲಮಾರ ಕಿರಿಯ ಪುತ್ರ ಕೂರತ್ ತಂಙಳ್ ಆಯ್ಕೆಯಾದರು. ತಾಜುಲ್ ಉಲಮಾರ ಆರೂವರೆ ದಶಕಗಳ ಕರ್ಮ ಭೂಮಿಗೆ ಈ ಮೂಲಕ ಬಲಿಷ್ಠ ಉತ್ತ ರಾಧಿಕಾರಿಯೊಬ್ಬರು ದೊರೆತಂತಾಗಿತ್ತು.

ಅಸುನ್ನೀ ಮತ್ತು ಅರ್ಧ ಸುನ್ನಿಗಳ ವಿರುದ್ಧ ಕಠಿನ ನಿಲುವುಗಳನ್ನು ಹೊಂದಿರುವ ಕೂರತ್ ತಂಙಳ್‌ರ ಅತಿ ದೊಡ್ಡ ವಿಶೇಷತೆಯೆಂದರೆ ಧಾರ್ಮಿಕ ವಿಚಾರಗಳಲ್ಲಿನ ಕರ್ಮಠ ಧೋರಣೆ. ಮೊಹಲ್ಲಾಗಳ ಮುನ್ನಡೆಗೆ ಅತ್ಯಗತ್ಯವಾದ ಈ ಧೋರಣೆಯ ಮೂಲಕ ಕೂರತ್ ತಂಙಳ್ ತಾಜುಲ್ ಉಲಮಾರ ನಿಜವಾದ ಉತ್ತರಾಧಿ ಕಾರಿಯೆನಿಸಿಕೊಂಡಿದ್ದಾರೆ.

ಮಾರ್ಚ್ 8ರಂದು ಕೊಡಗು ಜಿಲ್ಲೆಯ ಕೊಂಡಂಗೇರಿಯಲ್ಲಿ ನಡೆದ ಸಮಾರಂಭದಲ್ಲಿ ಜಿಲ್ಲೆಯ 53 ಮೊಹಲ್ಲಾಗಳ ಖಾಝಿಯಾಗಿ, ಸುಲ್ತಾನುಲ್ ಉಲಮಾ ಎ.ಪಿ. ಉಸ್ತಾದ್ ಆಯ್ಕೆಯಾದರು. ತಾಜುಲ್ ಉಲಮಾ ಖಾಝಿಯಾಗಿದ್ದ ಕೊಡಗು ಜಿಲ್ಲೆಯಲ್ಲಿ ಅವರ 'ಬೈಅತ್'ನ ದಿನದಂದೇ ಉಳ್ಳಾಲ್ ತಂಙಳ್, ಎ.ಪಿ. ಉಸ್ತಾದರನ್ನು ತನ್ನ ಉತ್ತರಾಧಿಕಾರಿಯಾಗಿ ಘೋಷಿಸಿದ್ದರು. ನಾನು ಈ ಲೇಖನ ಬರೆಯುವ ದಿನ ಎ.ಪಿ. ಉಸ್ತಾದರು ಕೊಡಗಿನ ಪ್ರಮುಖ ಧಾರ್ಮಿಕ ಕೇಂದ್ರವಾದ ಎಮ್ಮೆಮಾಡು ಮೊಹಲ್ಲಾದ ಖಾಝಿಯಾಗಿಯೂ ನೇಮಕಗೊಂಡಿ ರುತ್ತಾರೆ.

ಮಾರ್ಚ್ 28 ಶುಕ್ರವಾರ ಬೆಳಗ್ಗೆ ಅಬು ದಾಬಿ ಕೆ.ಸಿ.ಎಫ್. ಕಚೇರಿಯಲ್ಲಿ ಕಾರ್ಯ ಕರ್ತರ ಶಿಬಿರ ನಡೆಯುತ್ತಿದ್ದಾಗ ಅಪ್ಪಳಿಸಿದ ಮರಣ ವಾರ್ತೆಯೊಂದು ಎಲ್ಲರನ್ನೂ ಸ್ತಬ್ಧಗೊಳಿಸಿತ್ತು. ಸುನ್ನೀ ಕಾರ್ಯಕ್ಷೇತ್ರ ದಲ್ಲಿ ಸಕ್ರಿಯ ಸಾನಿಧ್ಯವಾಗಿದ್ದ ಸನ್ಮಿತ್ರ ಅಬ್ದುಲ್ ಹಮೀದ್, ಗಂಟಾಲ್‌ಕಟ್ಟೆಯ ಮರಣದ ಸುದ್ದಿಯಾಗಿತ್ತದು. ಸದಾ ಪಾದರಸದಂತೆ ಚುರುಕಿನಿಂದ ಓಡಾಡುತ್ತಿದ್ದ ಅಬ್ದುಲ್ ಹಮೀದ್ ದುಬೈಯ ಕನ್ನಡಿಗ ಸಂಘ ಚಳವಳಿಯ ದಣಿವರಿಯದ ಹೋರಾಟ ಗಾರರಾಗಿದ್ದರು. ಸ್ಫುರದ್ರೂಪಿಯಾದ ಹಮೀದಾಕನ ಪಾತ್ರವು ದುಬೈಯ ಎಲ್ಲ ಸುನ್ನೀ ಚಟುವಟಿಕೆಗಳಿಗೆ ಶಕ್ತಿ ತುಂಬಿತ್ತು. ಊರಿನಿಂದ ಬರುವ ಉಲಮಾಗಳಿಗೆ ಆತಿಥ್ಯ ನೀಡುವುದರಲ್ಲಿ ಗಂಟಾಲ್‌ಕಟ್ಟೆಯದ್ದು ಎತ್ತಿದ ಕೈ. ಅವರು ಉದಾರ ದಾನಿಯೂ ಆಗಿದ್ದರು. ಮೂಡಬಿದ್ರೆಯಲ್ಲೊಂದು ಸುನ್ನೀ ಕೇಂದ್ರ ಸ್ಥಾಪಿಸ ಬೇಕೆಂಬುದು ಹಮೀದಾಕನ ಅದಮ್ಯ ಹಂಬಲವಾಗಿತ್ತು. ಅದಕ್ಕಾಗಿ ಅವರ ದುಬೈ-ಅಲ್ ಖೂಝ್‌ನ ಮನೆಯಲ್ಲಿ ಅದೆಷ್ಟೋ ಸಭೆ - ಸಮಾಲೋಚನೆಗಳು ನಡೆದಿತ್ತು.

ಕಟ್ಟ ಕಡೆಯದಾಗಿ ಹಮೀದ್ ಗಂಟಾ ಲಕಟ್ಟೆ ದುಬೈಯಲ್ಲಿ ವಹಿಸಿದ್ದ ಜವಾಬ್ದಾರಿ ಪುತ್ತೂರು - ಕುಂಬ್ರ ಮರ್ಕಝುಲ್ ಹುದಾ ಸಂಸ್ಥೆಯ

ದಶಮಾನೋತ್ಸವದ ಸ್ಮರಣ ಸಂಚಿಕೆ 'ಹೂದಾನಿ' ಯನ್ನು ಹೊರತರುವ ಸಮಿತಿಯ ಅಧ್ಯಕ್ಷ ಪಟ್ಟವಾಗಿತ್ತು. ಅದರ ಕೆಲಸ ಕಾರ್ಯಗಳ ಮಧ್ಯೆಯೇ ಅವರು ಅನಾರೋಗ್ಯದಿಂದ ಊರಿಗೆ ಮರಳಿದರು. ತನ್ನ ನಾಲಗೆಯಲ್ಲಿನ ಹುಣ್ಣಿಗೆ ತಾಜುಲ್ ಉಲ ಮಾ ಉಳ್ಳಾಲ್ ಉಸ್ತಾದರ ಮಂತ್ರ ಮತ್ತು ಆಧ್ಯಾತ್ಮಿಕ ಚಿಕಿತ್ಸೆಯನ್ನೇ ಅವಲಂಬಿಸಿದ್ದ ಹಮೀದ್, ಓರ್ವ ಅಪ್ಪಟ ಈಮಾನ್‌ಧಾರಿ ಯಾಗಿದ್ದರು. ಬದುಕಿನ ಪ್ರತಿಕ್ಷಣವನ್ನು ಪವಿತ್ರ ಧರ್ಮದ ಪ್ರಗತಿಗಾಗಿ ಸವೆಸಿದ ಅವರು ತನ್ನ ನಲವತ್ತ ಮೂರನೇ ವಯಸ್ಸಿನಲ್ಲಿ ಯುವತ್ವದ ಸಂಪೂರ್ಣ ಸದ್ಭಳಕೆಯ ಸಂತೋಷದೊಂದಿಗೆ ಅಲ್ಲಾಹನ ಕರೆಗೆ ಓಗೊಟ್ಟು ಬಿಟ್ಟರು.

ಎಪ್ರಿಲ್ 9ರಂದು ಮಿತ್ರ ಸಿದ್ದೀಖ್ ಮೋಂಟುಗೋಳಿಯವರ ಮನೆಯಲ್ಲಿ ರಾಜ್ಯದ ಸುನ್ನೀ ವಲಯದ ಪ್ರಮುಖ ಬರಹಗಾರರೆಲ್ಲರನ್ನು ಸೇರಿಸಿ ಒಂದು ಕಮ್ಮಟ ಆಯೋಜಿಸಲಾಗಿತ್ತು. ಯುವ ಬರಹಗಾರ ರನೇಕರ ತಂಡವಾದ ವಾಟ್ಸ್ಯಾಪ್ ಗುಂಪೊಂದು ನಂತರ 'ಪೆನ್ ಫ್ರೆಂಡ್' ಆಗಿ ರೂಪಾಂತರಗೊಂಡು ಸುನ್ನೀ ಕನ್ನಡ ಸಾಹಿತ್ಯ ಲೋಕಕ್ಕೆ ಹೊಸ ಭರವಸೆಯನ್ನು ಮೂಡಿ ಸಿದ್ದು ನಿಜ. ಮುಖ್ಯವಾಗಿ ಕನ್ನಡದ ಇಸ್ಲಾ ಮೀ ಪಾರಿಭಾಷಿಕಗಳ ಚರ್ಚೆ ಹಾಗೂ ಸುನ್ನೀ ಸಾಹಿತ್ಯ ಕ್ಷೇತ್ರವನ್ನು ಸಂಪನ್ನಗೊಳಿಸುವ ವಿವಿಧ ಯೋಜನೆಗಳು ಚರ್ಚೆಗೆ ಬಂದರೂ ಲೇಖನಿ ಗೆಳೆಯರಿಗೆ ಅನಂತರ ಒಟ್ಟು ಸೇರಲು ಬಿಡುವಾಗಲಿಲ್ಲ. ಮಲಯಾಳೀ ಪ್ರಭಾವ ವಿರುವ ಮುಸ್ಲಿಂ ಬರಹಗಾರರ ಬರಹಗಳಲ್ಲಿ ನುಸುಳಿ ಬಿಡುವ ಮಲಯಾಳೀ ಪದಗಳು ಕನ್ನಡದ ಅಂದಗೆಡಿಸುತ್ತಿರುವುದರಲ್ಲಿ ಎರಡು ಮಾತಿಲ್ಲ. ಅಲ್ಲದೆ ಇಸ್ಲಾಮೀ ಸಂಜ್ಞೆಗಳನ್ನು ಪ್ರತಿಪಾದಿಸಲು ಕರಾರುವಕ್ಕಾದ ಶಬ್ದಗಳನ್ನು ಹೇಗೆ ಬಳಸಬಹುದೆನ್ನುವ ಪರಿಣಾಮಕಾರಿ ಚರ್ಚೆಯೊಂದು ಸಾಹಿತ್ಯ ವಲಯದಲ್ಲಿ ಅಗತ್ಯವಿದೆ. ಈ ದೆಸೆಯಲ್ಲಿ ಪೆನ್ ಮಿತ್ರರ ಎಚ್ಚರ ಮತ್ತು ಕ್ರಿಯಾಶೀಲತೆಗೆ ಅವಕಾಶ ವೊಂದು ವಿಪುಲವಾಗಿದೆ. ಎಸ್ಸೆಸ್ಸೆಫ್ ಬೆಳ್ಳಿ ಹಬ್ಬದ ಅಂಗವಾಗಿ ನಡೆಯಲಿರುವ 'ಮುಸ್ಲಿಂ ಸಾಹಿತ್ಯ ಪರಿಷತ್' ಈ ಕ್ಷೇತ್ರದಲ್ಲಿ ಪವಾಡ ವೊಂದನ್ನು ಸೃಷ್ಟಿಸಲಿ ಎಂದು ಆಶಿಸೋಣ.

ಮೇ 25ರಂದು ಶಿವಮೊಗ್ಗ ಜಿಲ್ಲೆಯ 'ನಗರ' ಎಂಬಲ್ಲಿ ನಡೆದ ಸಮಾರಂಭದಲ್ಲಿ ಜಿಲ್ಲೆಯ 20 ಮೊಹಲ್ಲಾಗಳ ಖಾಝಿಯಾಗಿ ಎ.ಪಿ. ಉಸ್ತಾದ್ ಆಯ್ಕೆಯಾದರು. ಜಿಲ್ಲೆಯ ಕೆಲವು ಮೊಹಲ್ಲಾಗಳಿಗೆ ತಾಜುಲ್ ಉಲಮಾ ಅವರೇ ಖಾಝಿಯಾಗಿದ್ದರು. ಇದರೊಂದಿಗೆ ರಾಜ್ಯದ ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಯ ಮೊಹಲ್ಲಾಗಳ ಸಮರ್ಥ ಮಾರ್ಗದರ್ಶಕರಾಗಿ ಎ.ಪಿ. ಉಸ್ತಾದ್ ನೇಮಕಗೊಂಡರು. ಅದೇ ದಿನ ಸಾಯಂಕಾಲ ಭಾರತದ ನೂತನ ಪ್ರಧಾನ ಮಂತ್ರಿಯಾಗಿ ನರೇಂದ್ರ ಮೋದಿ ಆಯ್ಕೆಯಾದರು. ಅವರ ಪ್ರಮಾಣ ವಚನ ಸಮಾರಂಭದ ನೇರ ಪ್ರಸಾರವನ್ನು ತೀರ್ಥಹಳ್ಳಿಯ ಮನೆಯೊಂ ದರಲ್ಲಿ ಕುಳಿತು ನಾವು ಕೆಲವು ಮಿತ್ರರು ದೂರದರ್ಶನದಲ್ಲಿ ನೋಡಿದೆವು. 2014 ಜೂನ್ 26ರಂದು ನಾನು ನಾಲ್ಕನೇ ಬಾರಿ ಒಮಾನ್ ತಲುಪಿದ್ದೆ. ಜೂನ್ ಇಪ್ಪತ್ತೇಳು ಶುಕ್ರವಾರ ಜುಮಾ ನಂತರ ಅನಿವಾಸಿ ಕನ್ನಡಿಗರ ಸುನ್ನೀ ಕ್ರಿಯಾ ವೇದಿಕೆಯಾದ ಕರ್ನಾಟಕ ಕಲ್ಚರಲ್ ಫೌಂಡೇಶನ್ (ಕೆ.ಸಿ. ಎಫ್)ನ ಒಮಾನ್ ರಾಷ್ಟ್ರೀಯ ಸಮಿತಿ ಯನ್ನು 'ರುವಿ'ಯಲ್ಲಿರುವ ಅಲ್ ಕೌಸರ್ ಮದ್ರಸಾ ಸಭಾಂಗಣದಲ್ಲಿ ಪ್ರಾರಂಭ ಮಾಡಲಾಗಿತ್ತು. ಯುಎಇಯ ದುಬೈಯಲ್ಲಿ ಕರ್ನಾಟಕ ಸುನ್ನೀ ಯುವಜನ ಸಂಘವೆಂಬ ಹೆಸರಲ್ಲಿ ಪುಟ್ಟ ಮಟ್ಟದಲ್ಲಿ ಪ್ರಾರಂಭವಾದ ಅನಿವಾಸಿ ಕನ್ನಡಿಗರ ಸಂಘ ಪ್ರಜ್ಞೆ ಕ್ರಮೇಣ ಬೃಹದಾಕಾರವಾಗಿ ರಚನೆಗೊಂಡಾಗ ಅದನ್ನು ತುಂಬು ಮನಸ್ಸಿನೊಂದಿಗೆ ಸ್ವಾಗತಿಸಿದವರ ಸಾಲಿನಲ್ಲಿ ಒಮಾನಿನ ಕನ್ನಡಿಗರೂ ಮುಂಚೂ ಣಿಯಲ್ಲಿದ್ದರು. ಸಾಮಾನ್ಯವಾಗಿ ಕನ್ನಿಡಗರು ಸಂಖ್ಯೆಯಲ್ಲಿ ಕಡಿಮೆಯಿರುವ ಮತ್ತು ಇರುವವರು ಸಾಮಾನ್ಯ ಕೆಲಸಗಳಲ್ಲಿ ಇರುವ ಒಮಾನಿನಲ್ಲಿ ಅನಿವಾಸಿ ಕನ್ನಡಿಗರನ್ನು ಒಟ್ಟು ಸೇರಿಸಿ ಒಂದು ಸಂಘ ಚಳವಳಿಗೆ ರೂಪು ಕೊಡುವುದು ಸುಲಭದ ಮಾತಾಗಿರಲಿಲ್ಲ. ಆದರೆ ಒಮಾನ್ ದೇಶಕ್ಕೆ ಇಸ್ಲಾಮಿನ ಪ್ರಭೆ ಹರಡಿದ ಪುಣ್ಯ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಿಂದ ಧರ್ಮದ ಬೆಳಕನ್ನು ಆವಾಹಿಸಿಕೊಂಡ ಪ್ರಸಿದ್ಧ ಸ್ವಹಾಬಿ ಮಾಝಿನ್ ಬಿನ್ ಗಳೂಬ (ﷺ) ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಯೇ ಒಮಾನಿನಿಂದ ಮಕ್ಕಾಕ್ಕೆ ತೆರಳಿ ಮುಸ್ಲಿಂ ಆಗಿ ಮರಳಿದ್ದರು. ಒಮಾನಿನ 'ಸುಮಾ ಯಿಲ್' ಎಂಬಲ್ಲಿರುವ ಇವರ ಮಖ್‌ಬರ ಪ್ರಸಿದ್ಧ ತೀರ್ಥಾಟನಾ ಕೇಂದ್ರವಾಗಿದೆ.

ಈ ಮಹಾನುಭಾವರ ಆಧ್ಯಾತ್ಮಿಕ ಆಸರೆ ಯನ್ನು ಪಡೆದು ಪ್ರಾರಂಭಿಸಲಾದ ಒಮಾನ್ ಕೆ.ಸಿ.ಎಫ್. ಕೆಲವೇ ದಿನಗಳಲ್ಲಿ ಅನೇಕ ಜನಪ್ರಿಯ, ಜನಪರ ಕಾರ್ಯಚಟುವಟಿಕೆ ಗಳನ್ನು ಹಮ್ಮಿಕೊಂಡು ಇತರ ಗಲ್ಫ್ ರಾಷ್ಟ್ರ ಗಳ ಗಮನ ಸೆಳೆದು ಮುಂದುವರಿಯುತ್ತಿದೆ.

2014 ಆಗಸ್ಟ್ ಮೂರರಂದು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ಎಂಬಲ್ಲಿನ ಮದ್ರಸ ಹಾಗೂ ಅಲ್ಲಿನ ಪ್ರಾಯೋಜಿತ ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯನ್ನು ಮರ್ಕ ಝುಲ್ ಹುದಾ ಸಂಸ್ಥೆಗಾಗಿ ನಾವು ವಹಿಸಿ ಕೊಂಡೆವು. ಹೂವಿನ ಹಡಗಲಿಯೊಂದಿಗೆ ನಮ್ಮ ಸಂಪರ್ಕ ಒಂದು ದಶಕದಷ್ಟು ಹಳೆಯದು. ಸ್ಥಳೀಯವಾಗಿ ನಡೆದ ಒಂದು 'ಬಯಾನ್' ಕಾರ್ಯಕ್ರಮಕ್ಕೆ ಹೋಗಿದ್ದ ಅಬೂಸುಫ್‌ಯಾನ್ ಮದನಿ ಉಸ್ತಾದರು ಅಲ್ಲಿ ಸೇರಿದ್ದ ಸಹಸ್ರಾರು ಜನರನ್ನು ನೋಡಿ ಅಲ್ಲೊಂದು ಶಿಕ್ಷಣ ಸಂಸ್ಥೆ ಕಟ್ಟಿದರೆ ಶೀಘ್ರ ಫಲ ಕಾಣಬಹುದೆಂಬ ನಿರೀಕ್ಷೆಯೊಂದಿಗೆ ಯೋಜನೆಯೊಂದನ್ನು ರೂಪಿಸಿದರು. ಅವರು ಅಧ್ಯಕ್ಷರಾಗಿ, ನಾನು ಕಾರ್ಯದರ್ಶಿಯಾಗಿ ಅಲ್ಲಿ 'ಸರ್‌ಹಿಂದ್ ಅಕಾಡಮಿ ಸ್ಕೂಲ್' ಎನ್ನುವ ಆಂಗ್ಲ ಮಾಧ್ಯಮ ಶಾಲೆಯನ್ನು ಪ್ರಾರಂಭಿಸಿದೆವು. ಅದಕ್ಕಾಗಿ ಅಲ್ಲೊಂದು ನಿವೇಶನವನ್ನೂ ಖರೀದಿಸಲಾಗಿತ್ತು. ಕಾರಣಾಂತರಗಳಿಂದ ಸದ್ರಿ ಯೋಜನೆಗೆ ಸ್ವಲ್ಪ ಮಟ್ಟದಲ್ಲಿ ಹಿನ್ನಡೆಯಾಗಿ ಸ್ಥಗಿತಗೊಂಡಿತ್ತು. ಒಂದು ದಶಕದ ನಂತರ ಅಬೂ ಸುಫ್‌ಯಾನ್ ಮದನಿಯ ಮಗ ಸುಫ್‌ಯಾನ್ ಸಖಾಫಿ ಹಡಗಲಿಯನ್ನು ಕಾರ್ಯಕ್ಷೇತ್ರವಾಗಿ ಆರಿಸಿ ಕೊಂಡಾಗ ನಮ್ಮ ಹಳೆಯ ಯೋಜನೆ ಮತ್ತೆ ಜೀವ ಪಡೆಯ ತೊಡಗಿತ್ತು. ಸ್ಥಳೀಯರ ಅಪೇಕ್ಷೆಯಂತೆ ನಾವು ಅಲ್ಲಿನ ಮಸೀದಿ ಮತ್ತು ನಿವೇಶನವನ್ನೂ ವಹಿಸಿಕೊಂಡೆವು. ಉದ್ದೇಶಿತ 'ದಾರುಲ್ ಉಲೂಂ ಇಮಾಂ ಅಹ್‌ಮದ್ ಸರ್ ಹಿಂದಿ' ಸಂಸ್ಥೆಗೆ ಕರ್ನಾಟಕ ಯಾತ್ರೆಯ ಅಂಗ ವಾಗಿ ಸುಲ್ತಾನುಲ್ ಉಲಮಾ ಎ.ಪಿ.ಉ ಸ್ತಾದ್ ಶಿಲಾನ್ಯಾಸ ನೆರವೇರಿಸಿ ದ್ದಾರೆ. ದುಬೈಯ ಉದ್ಯಮಿಯೊಬ್ಬರು ಪ್ರಥಮ ಕಟ್ಟಡವನ್ನು ವಹಿಸಿಕೊಂಡಿದ್ದಾರೆ. ರಾಜ್ಯ ಎಸ್ಸೆಸ್ಸೆಫ್ ಬೋಧಕ ತಂಡ 'ಇಹ್‌ಸಾನ್'ನ ಸಹಯೋಗದೊಂದಿಗೆ ಇಲ್ಲಿ ಕೆಲವು ಯೋಜನೆಗಳು ಜಾರಿಗಾಗಿ ಸಿದ್ಧವಾಗುತ್ತಿದೆ.

ಆಗಸ್ಟ್ 21 ಗುರುವಾರ ಬೆಳಗು ಹೊತ್ತು ತಂದ ದುಃಖ ವಾರ್ತೆಯೊಂದು ಆಘಾತಕಾರಿ ಯಾಗಿತ್ತು. ನನ್ನ ಬದುಕಿನ ತಿರುವುಗಳಲ್ಲಿ ಪ್ರಮುಖ

ಪಾತ್ರವಹಿಸಿದ ನನ್ನ ಪ್ರಮುಖ ಗುರುವರ್ಯ ಶೈಖುನಾ ತಿರೂರಂಗಾಡಿ ಬಾಪು ಮುಸ್ಲಿಯಾರ್ ಅಂದು ಬೆಳಗ್ಗೆ ನಾಲ್ಕು ಗಂಟೆಗೆ ಇಹಲೋಕ ವಾಸ ತ್ಯಜಿಸಿದರು.

ತಿರೂರಂಗಾಡಿ ನೂರುಲ್ ಹುದಾ ಅರ ಬಿಕ್ ಕಾಲೇಜು ಮತ್ತು ಸಮೀಪದ ವಲಿಯೋರ ದಾರುಲ್ ಮಅರಿಫ್ ಅರಬಿಕ್ ಕಾಲೇಜುಗಳಲ್ಲಿ ಪ್ರಮುಖ ಮುದರ್ರಿಸ್ ಆಗಿದ್ದ ಬಾಪು ಉಸ್ತಾದರ ಬಳಿ ನಾನು ಕಲಿತದ್ದು ಮೂರು ವರ್ಷ. ಆದರೆ ಬದುಕಿನ ಎಲ್ಲ ಮಹತ್ತರವಾದ ಬದಲಾವಣೆಗಳಿಗೆ ಸಾಕ್ಷಿಯಾದದ್ದು ಉಸ್ತಾದರ ದರ್ಸ್‌ನಲ್ಲೇ. ಇಂತಹ ಮಹಾ ಗುರುವರ್ಯರೊಂದಿಗೆ ಶಿಷ್ಯಂದಿರಿಗಿದ್ದ ಸಂಬಂಧ ವರ್ಣನಾತೀತ. ಗುರು ಶಿಷ್ಯ ಸಂಬಂಧಕ್ಕೆ ಜಗತ್ತಿನಲ್ಲೇ ಕೊಡ ಬಹುದಾದ ಶ್ರೇಷ್ಟ ನಿದರ್ಶನವಾಗಿತ್ತು ಬಾಪು ಉಸ್ತಾದ್ ಮತ್ತು ಶಿಷ್ಯಂದಿರ ಬಾಂಧವ್ಯ.

ಉಸ್ತಾದರ ನಿಧನ ವಾರ್ತೆ ಬಂದಾಗ ನಾನು ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಸಂಘಟನಾ ಕೆಲಸಕ್ಕಾಗಿ ತೆರಳಿ ಉಳಿದಿದ್ದೆ. ಹೇಗೆ ನೋಡಿದರೂ ಜನಾಝ ತೆಗೆಯುವ ಮುಂಚೆ ಅಲ್ಲಿಗೆ ತಲುಪುವ ಸ್ಥಿತಿಯಲ್ಲಿರ ಲಿಲ್ಲ. ಈ ಮೂಲಕ ಉಸ್ತಾದರ ಅಂತಿಮ ದರ್ಶನದಿಂದ ನಾನು ವಂಚಿತನಾದೆ. ಆ ದಿನ ಸಂಜೆ ಉಸ್ತಾದರ ಮನೆಯ ಸಮೀಪದಲ್ಲೇ ಅವರ ದಫನ ಕಾರ್ಯ ನಡೆಯಿತು.

ಸುನ್ನೀ ಕರ್ನಾಟಕದ ನವ ಜಾಗರಣದ ಚರಿತ್ರೆಯಲ್ಲಿ ಹೊಸ ಮೈಲುಗಲ್ಲಾದ ಎ.ಪಿ. ಉಸ್ತಾದರ ಕರ್ನಾಟಕ ಯಾತ್ರೆಗೆ ನಾಡು ಮೆಲ್ಲಗೆ ಸಿದ್ಧವಾಗುತ್ತಿತ್ತು. ಸಂಘಟಕ ಸಮಿತಿಯಿಂದ ರಾತ್ರಿ ಹಗಲು ಸಭೆ ಸಮಾರಂಭಗಳು ನಡೆಯುತ್ತಿದ್ದವು.

ಉದ್ದೇಶಿತ ಮಾರ್ಗ ಮತ್ತು ಕೇಂದ್ರಗಳ ಬಗ್ಗೆ ಅಂತಿಮಗೊಳಿಸುವುದಕ್ಕೆ ಉಪಯಾತ್ರೆ ಯೊಂದು ಅಗತ್ಯವೆಂದು ಸಮಿತಿ ಸಭೆಯಲ್ಲಿ ಅಭಿಪ್ರಾಯ ಮೂಡಿ ಬಂದಾಗ ನಾವು ಕರ್ನಾ ಟಕ ಯಾತ್ರೆಯ 'ಅಧ್ಯಯನ ಪ್ರವಾಸಕ್ಕೆ' ಯೋಜನೆ ಹಾಕಿದೆವು.

ಆಗಸ್ಟ್ 23 ಶನಿವಾರ ಅಪರಾಹ್ನ ಮಂಗ ಳೂರಿನ ಆಧ್ಯಾತ್ಮಿಕ ಸುಲ್ತಾನ್ ಸಯ್ಯಿದ್ ಜಲಾಲ್ ಮೌಲಾ ಅವರ ದರ್ಗಾ ಝಿಯಾರತ್ ನೊಂದಿಗೆ ನಮ್ಮ ಅಧ್ಯಯನ ಪ್ರವಾಸದ 'ಟೆಂಪೋ ಟ್ರಾವಲ್ಲರ್' ಗುಲ್ಬರ್ಗಕ್ಕೆ ಮುಖ ಮಾಡಿತು. ಮನು ಕುಲವನ್ನು ಗೌರವಿಸುವ ಹೊಸ ನಾಡೊಂ ದನ್ನು ಕಟ್ಟುವ ದೃಢ ಸಂಕಲ್ಪದೊಂದಿಗೆ...

# 37

## ಅಹ್‌ಲುಸ್ಸುನ್ನಃ ಗುಂಬಝ್ ನಗರಿಗೆ ಮುಖ ಮಾಡಿತು

ಬಹು ನಿರೀಕ್ಷಿತ ಎ.ಪಿ. ಉಸ್ತಾದರ ಕರ್ನಾಟಕ ಯಾತ್ರೆಯ ಅಧ್ಯಯನ ಪ್ರಯುಕ್ತ ಕೈಗೊಂಡ ಯಾತ್ರೆಯು 2014 ಆಗಸ್ಟ್ 23ರಿಂದ 26ವರೆಗೆ ವಿವಿಧ ಉತ್ತರ ಜಿಲ್ಲೆ ಗಳನ್ನು ಹಾದು ಭಟ್ಕಳದಲ್ಲಿ ಸಮಾರೋಪ ಗೊಂಡಿತು. ಕರ್ನಾಟಕ ಯಾತ್ರೆಯ ಉಜ್ವಲ ಯಶಸ್ಸಿಗೆ ಅಗತ್ಯವಾದ ಪ್ರಾಥಮಿಕ ಕಾರ್ಯಗಳಿಗೆಲ್ಲ ಈ ಯಾತ್ರೆಯಲ್ಲಿ ಬುನಾದಿ ಹಾಕಲಾಯಿತು.

ಆಗಸ್ಟ್ 29 ಶುಕ್ರವಾರರಂದು ಮಂಗ ಳೂರಿನ ಡೈಮಂಡ್ ಸಿಟಿ ಸಭಾಂಗಣದಲ್ಲಿ ನಡೆದ ಮಹಿಳೆಯರ ಸಮಾವೇಶ, ಮಂಗ ಳೂರಿನ ಅಹ್‌ಲುಸ್ಸುನ್ನಾದ ಚಟುವಟಿಕೆಗಳ ಪೈಕಿ ಗಮನಾರ್ಹವೆನಿಸಿತ್ತು. ಇಸ್ಲಾಮಿಕ್ ಕಲ್ಚರಲ್ ಸೆಂಟರ್ - ಪಂಪ್‌ವೆಲ್ ವತಿ ಯಿಂದ ತಖ್‌ವಾ ಮಸೀದಿಯ ಮೇಲ್ಮಹಡಿ ಯಲ್ಲಿ ಸುಸಜ್ಜಿತವಾದ ಮದ್ರಸಾ ಕಳೆದ ಕೆಲವು ವರ್ಷಗಳಿಂದ ನಡೆದು ಬರುತ್ತಿದ್ದು ನಗರದ ಮದ್ರಸಾಗಳ ಪೈಕಿ ಮಾದರೀ ಯೋಗ್ಯವಾದ ಪಠ್ಯಕ್ರಮ ಮತ್ತು ವ್ಯವಸ್ಥೆ ಗಳನ್ನೂ ಹೊಂದಿದೆ. ಅಲ್ಲಿ ಕಿರಿಯ ಬಾಲಕ -ಬಾಲಕಿಯರ ತರಗತಿಗಳಿದ್ದು ಹೆಣ್ಮಕ್ಕಳಿಗಾಗಿ ಮಹಿಳೆಯರಿಂದಲೇ ನಡೆಸಲ್ಪಡುವ ಮದ್ರಸಾ ವ್ಯವಸ್ಥೆ ಬೇಕೆಂದು ಸಮಿತಿಯಲ್ಲಿ ಆಗಾಗ ಚರ್ಚೆಯಾಗುತ್ತಿತ್ತು. ಅದರ ಸಿದ್ಧತೆಯ ಅಂಗವಾಗಿ ಮೇಲಿನ ಮಹಿಳಾ ಸಮಾವೇಶ ಆಯೋಜಿಸಲಾಗಿತ್ತು. ಹಸನ್ ಹಾಜಿ ಗ್ರೂಪ್ ಒಡೆತನದ ಮಂಗಳೂರು - ಜೆಪ್ಪು ಸಮೀಪದ 'ಡೈಮಂಡ್ ಸಿಟಿ' ವಸತಿ ನಿಲಯದ ಸಭಾಂ ಗಣದಲ್ಲಿಮಂಗಳೂರಿನ ಪ್ರತಿಷ್ಠಿತ ಮುಸ್ಲಿಂ ಕುಟುಂಬಗಳ ಪ್ರತಿನಿಧಿಗಳೆಲ್ಲ ಹಾಜರಿದ್ದರು. ಮಂಗಳೂರಿನ ಉನ್ನತ ಕುಟುಂಬಗಳೆಲ್ಲವೂ ನೂತನವಾದಿಗಳಾಗಿ ಬಿಟ್ಟಿದ್ದಾರೆ ಎನ್ನುವ ವರಿಗೆ ನೇರ ಉತ್ತರದಂತಿತ್ತು ಸದ್ರಿ ಸಮಾ ವೇಶ. ಅಲ್ಲಿ ಹೆಣ್ಮಕ್ಕಳ ಮದ್ರಸಕ್ಕೆ ಚಾಲನೆ ಕೊಡುವ ಬಗ್ಗೆ ಚರ್ಚೆ ನಡೆದು ಮುಂದಿನ ಕೆಲವೇ ದಿನಗಳಲ್ಲಿ ಮಂಗಳೂರು ಫಳ್ನೀರ್ ನಲ್ಲಿ ತಖ್‌ವಾ ಗಲ್ಫ್ ಇಸ್ಲಾಮಿಕ್ ಮದ್ರಸಕ್ಕೆ ಚಾಲನೆ ಕೊಡಲಾಯಿತು.

ಅನಿವಾಸಿ ಸುನ್ನಿಗಳ ಕರ್ಮವೇದಿಕೆಯಾದ ಕರ್ನಾಟಕ ಕಲ್ಚರಲ್ ಫೌಂಡೇಶನ್ (ಕೆ.ಸಿ.ಎಫ್) ಕಾರ್ಯಕರ್ತರ ತರಬೇತಿ ಮತ್ತು ಸಂಘ ಸಬಲೀಕರಣಕ್ಕಾಗಿ ಹಮ್ಮಿಕೊಂಡ ನೂರು ದಿನಗಳ 'ಅಲ್‌ಇಖ್‌ರಾಮ್- ಮುನ್ನಡೆಯ ನೂರು ದಿನಗಳು' ಎಂಬ ಕಾರ್ಯಕ್ರಮದ ಗಲ್ಫ್ ಮಟ್ಟದ ಉದ್ಘಾಟ ನೆಯು 2014 ಸೆಪ್ಟಂಬರ್ 5 ಶುಕ್ರವಾರ ದುಬೈಯಲ್ಲಿ ನಡೆಯಿತು. ಅದಕ್ಕಾಗಿ ಹಿಂದಿನ ದಿವಸ ನಾನು ಯುಎಇ ತಲುಪಿದೆ. ಕನ್ನಡಿಗ ಸುನ್ನಿಗಳ ಸಂಘ ಶಕ್ತಿಯ ಜಾಗೃತ ಮನೋಭಾವದ ನಿದರ್ಶನದಂತಿದ್ದ ಸದ್ರಿ ಸಮಾವೇಶದಲ್ಲಿ ಆಯ್ದ ಕಾರ್ಯಕರ್ತರಿಗೆ ಮಾತ್ರ ಪ್ರವೇಶ ನೀಡಲಾಗಿತ್ತು. ಆದರೂ ದುಬೈಯ ಮರ್ಕಝ್ ಆಡಿಟೋರಿಯಂ ಕಿಕ್ಕಿರಿದು ತುಂಬಿತ್ತು. ಮುಂದಿನ ದಿನಗಳಲ್ಲಿ ಯುಎಇಯ ವಿವಿಧ ಸೆಕ್ಟರ್ ಮಟ್ಟದಲ್ಲಿ ಕಾರ್ಯಕರ್ತರ ಸಭೆಗಳನ್ನು ಏರ್ಪಡಿಸಿ ತರಬೇತು ನೀಡಲಾಯಿತು. ಕಾರ್ಯಕರ್ತರು ತಮ್ಮ ಕೆಲಸ ಮುಗಿಸಿ ತಡರಾತ್ರಿಗಳಲ್ಲಿ ಕ್ಲಾಸ್‌ಗೆ ಸಿದ್ಧರಾಗಿ ಬರುತ್ತಿದ್ದರು. ಸುನ್ನೀ ಜಾಗೃತಿ ಬಗ್ಗೆ ಅನಿವಾಸಿ ಕನ್ನಡಿಗರಿಗೆ ಇರುವ ಒಲವು ಅಭಿನಂದನಾರ್ಹ.

2014 ಸೆಪ್ಟಂಬರ್ 19, ಎಸ್ಸೆಸ್ಸೆಫ್‌ಗೆ ಭರ್ತಿ ಇಪ್ಪತ್ತೈದು ವರ್ಷಗಳು ತುಂಬಿದ ದಿನ. ಆ ಪ್ರಯುಕ್ತ ಚಾರಿತ್ರಿಕ ದಿನವನ್ನು ಗಲ್ಫ್ ಮಟ್ಟದಲ್ಲಿ ವಿಜೃಂಭಣೆಯಿಂದ ಕೊಂಡಾಡುವ ಅವಕಾಶವು ಒಮಾನ್ ಕೆ.ಸಿ.ಎಫ್.ನ ಪಾಲಾ ಯಿತು. ಒಮಾನಿನ ಪ್ರಸಿದ್ಧ ಮಾರುಕಟ್ಟೆ ನಗರವಾದ 'ಸೀಬ್'ನ ಸುನ್ನೀ ಮದ್ರಸಾ ಸಭಾಂಗಣದಲ್ಲಿ ಏರ್ಪಡಿಸಿದ 'ಎಸ್ಸೆಸ್ಸೆಫ್ ಸಿಲ್ವರ್ ಡೇ' ಸಂಭ್ರಮಕ್ಕೆ ದುಬೈಯಿಂದ ಕಾರು ಮಾರ್ಗವಾಗಿ ನಾವು ತೆರಳಿದೆವು. ದುಬೈ ಮತ್ತು ಅಬುದಾಬಿಯ ಕೆ.ಸಿ.ಎಫ್. ನಾಯ ಕರು ಜತೆಗಿದ್ದರು. ಆ ದಿನ ಶುಕ್ರವಾರವೂ ಆಗಿದ್ದರಿಂದ ಕಾರ್ಯಕರ್ತರಿಗೆ ತುಂಬ ಉಪಕಾರವಾಯಿತು. ಯುಎಇ, ಒಮಾನ್ ಕೆ.ಸಿ.ಎಫ್. ಕಾರ್ಯಕರ್ತರ ಮತ್ತು ನಾಯ ಕರ ಸಂಗಮದಿಂದ ಧನ್ಯವಾದ ಸಮಾವೇಶ ದಲ್ಲಿ ಕೆ.ಸಿ.ಎಫ್‌ನ ಲಾಂಛನವನ್ನು ಪ್ರದೇಶದ ಪ್ರಮುಖರಾದ ಶೈಖ್ ಹಿಲಾಲ್ ಬಿನ್ ಸ್ವಾಲಿಹ್ ಎಂಬ ಅರಬಿ ವಿದ್ವಾಂಸರು ಬಿಡು ಗಡೆ ಮಾಡಿದರು. ಸಂಘಟನೆಯ ಇಪ್ಪತ್ತೈದನೇ ವಾರ್ಷಿಕ ದಿನವು ಸಂಭ್ರಮ ಜನಕವೂ ಹೊಸ ಕಾರ್ಯಕರ್ತರಿಗೆ ಪ್ರೇರಣಾತ್ಮಕವೂ ಆಗಿತ್ತು.

2014 ಸೆಪ್ಟಂಬರ್ 26 ಶುಕ್ರವಾರ ಯುಎಇ - ಕೆಸಿಎಫ್ ರಾಷ್ಟ್ರೀಯ ಸಮಿತಿಯ ವತಿಯಿಂದ ದುಬೈಯಲ್ಲಿ ನಡೆದ ಮಾನವತಾ ಸಮಾವೇಶವು ಗಲ್ಫ್ ಪ್ರದೇಶದಲ್ಲಿ ನಡೆದ ಅನಿವಾಸಿ ಕಾರ್ಯಕ್ರಮಗಳ ಪೈಕಿ ಅತ್ಯಂತ ಗಮನಾರ್ಹವಾಗಿತ್ತು.

ಕರ್ನಾಟಕ ಯಾತ್ರೆಯ ಅಂಗವಾಗಿ ಹಮ್ಮಿ ಕೊಂಡ ಸದ್ರಿ ಸಮಾರಂಭದಲ್ಲಿ ಕರ್ನಾಟಕದ ಪ್ರಮುಖ ಉಲಮಾಗಳಾದ ಕೂರತ್ ತಂಙಳ್, ಬೇಕಲ್ ಉಸ್ತಾದ್, ಅಬ್ಬಾಸ್ ಉಸ್ತಾದ್, ಮಾಣಿ ಉಸ್ತಾದ್ ಹಾಗೂ ಸಚಿವರಾದ ಯು.ಟಿ. ಖಾದರ್, ಮಾಜಿ ಕೇಂದ್ರ ಸಚಿವ ಸಿ.ಎಂ. ಇಬ್‌ರಾಹೀಮ್ ಮುಂತಾದವರು ಭಾಗವಹಿಸಿದ್ದರು. ಸಂಘಟನೆಯ ಪ್ರತಿನಿಧಿಗಳಾಗಿ ನಾನು ಮತ್ತು ಶಾಫಿ ಸಅದಿ ಇದ್ದೆವು.

ಯುಎಇಯ ಸುನ್ನೀ ಕಾರ್ಯಕರ್ತರ ಅವಿಶ್ರಾಂತ ಪರಿಶ್ರಮದ ಫಲವಾಗಿ ಉಜ್ವಲ ಯಶಸ್ಸು ಕಂಡ  ಸಮ್ಮೇಳನದಲ್ಲಿ ಸುಮಾರು ಎರಡು ಸಾವಿರ ಜನರು ಪಾಲ್ಗೊಂ ಡರು. ನವ ಇತಿಹಾಸವನ್ನು ಬರೆದರು. ಉತ್ಸಾಹಿ ಕಾರ್ಯಕರ್ತರಾದ ಮಹ್‌ಬೂಬ್ ಸಖಾಫಿ ಕಿನ್ಯ ಮತ್ತು ಇಖ್‌ಬಾಲ್ ಕಾಜೂರು ಸ್ವಾಗತ ಸಮಿತಿಯ ಸಾರಥ್ಯವನ್ನು ವಹಿಸಿದರೆ, ಕಾರ್ಯಕ್ರಮದ ಆಡಳಿತ ಮಂಡಳಿ ಅಧ್ಯಕ್ಷ ರಾಗಿ ಪ್ರಮುಖ ಅಂತಾರಾಷ್ಟ್ರೀಯ ಉದ್ಯಮಿ ಹಾಜಿ ಎಸ್.ಎಂ. ಶರೀಫ್ ಹಾಗೂ ಸಂಚಾಲ ಕರಾಗಿ ಇನ್ನೊಬ್ಬ ಉದ್ಯಮಿ ಸಲೀಂ ಅಲ್ತಾಫ್ ಫರಂಗಿಪೇಟೆ ಕ್ರಿಯಾಶೀಲರಾಗಿದ್ದರು.

ಅಂತಾರಾಷ್ಟ್ರೀಯ ಖ್ಯಾತಿಯ 'ಖುಷಿ' ಗ್ರೂಪ್‌ನ ಮಾಲಕರಾದ ಎಸ್.ಎಂ. ಶರೀಫ್ ಅವರು ಶೈಖುನಾ ಎ.ಪಿ. ಉಸ್ತಾದ್ ಸಮೇತ ಸುನ್ನತ್ ಜಮಾಅತ್‌ನ ಉಲಮಾ ಮತ್ತು ಸಾದಾತ್‌ಗಳ ಅಭಿಮಾನಿಯಾಗಿದ್ದು ಸುನ್ನೀ ಸಂಘ ಸಂಸ್ಥೆಗಳ ತುಂಬು ಹೃದಯದ ಸಹಕಾರಿಯಾಗಿದ್ದಾರೆ. ಆ ದಿನದ ಕಾರ್ಯ ಕ್ರಮದ ಮತ್ತು ಕರ್ನಾಟಕ ಯಾತ್ರೆಯ ಟಿ.ವಿ. ಜಾಹೀರಾತಿನ ಪ್ರಮುಖ ಪ್ರಾಯೋಜಕರು ಇವರೇ ಆಗಿದ್ದರು.

ಸೆಪ್ಟಂಬರ್ 29 ಸೋಮವಾರ ಶೈಖುನಾ ಮರ್‌ಹೂಂ ತಿರೂರಂಙಾಡಿ ಬಾಪು ಉಸ್ತಾ ದರ 40ನೇ ದಿನದ ಪ್ರಾರ್ಥನಾ ಸಂಗಮ ವಾಗಿದ್ದು, ಮಲಪ್ಪುರಂ ಜಿಲ್ಲೆಯ ಪ್ರಮುಖ ಉಲಮಾ ಸಾದಾತ್‌ಗಳು ಸಂಗಮಿಸಿದ್ದರು. ಉಸ್ತಾದರ ಅನುಸ್ಮರಣ ಭಾಷಣದ ಜವಾ ಬ್ದಾರಿ ನನಗೆ ವಹಿಸಿದ್ದರು. 'ಕೇರಳದ ಬೂಸ್ವೀರಿ' ಎಂದು ಪ್ರಖ್ಯಾತರಾದ ಬಾಪು ಉಸ್ತಾದ್ 'ಮಾದಿ ಹುರ್ರಸೂಲ್' ಎಂಬ ಅಪರನಾಮದಲ್ಲಿ ಖ್ಯಾತರಾಗಿದ್ದು ಅವರ ಪ್ರವಾದಿ ಪ್ರಕೀರ್ತ ನೆಯ ಅರಬಿ ಕಾವ್ಯಗಳು ಅರಬ್ ಸಾಹಿತ್ಯ ದಿಗ್ಗಜರನ್ನೇ ಆಶ್ಚರ್ಯಗೊಳಿಸಿದೆ. ಉಸ್ತಾದ್ ರಚಿಸಿದ ಎಲ್ಲ ಅರಬಿ ಪದ್ಯಗಳನ್ನು ವಿಶೇಷ ಗಾಯನ ತಂಡವು ಆಕರ್ಷಕವಾಗಿ ಅದನ್ನು ಹಾಡುತ್ತಿದ್ದರೆ ಇಡೀ ಸಭೆಯು ಅದರಲ್ಲಿ ಪಾಲ್ಗೊಂಡು ಧನ್ಯವಾದ ವಾತಾವರಣವನ್ನು ನಿರ್ಮಾಣ ಮಾಡಿತ್ತು.

ಅಕ್ಟೋಬರ್ ತಿಂಗಳಿಡೀ ನಮ್ಮ ಪಾಲಿಗೆ ಕರ್ನಾಟಕ ಯಾತ್ರೆಯ ಸಿದ್ಧತೆಯಾಗಿತ್ತು. ವಿವಿಧ ಕಡೆಗಳಲ್ಲಿ ವಿವಿಧ ಸಭೆ - ಸಮಾರಂ ಭಗಳು ನಡೆಯುತ್ತಿದ್ದವು. ಅಕ್ಟೋಬರ್ 12ರಂದು ಮರ್ಕಝ್‌ಗೆ ತೆರಳಿ ಎ.ಪಿ. ಉಸ್ತಾದ್ ಜತೆ ಯಾತ್ರೆಯ ಅಂತಿಮ ಸುತ್ತಿನ ಮಾತುಕತೆ ನಡೆಸಿದೆವು. ಆ ದಿನ ಕೇರಳ ಎಸ್ಸೆಸ್ಸೆಫ್‌ನ ರಾಜ್ಯ ಪ್ರತಿನಿಧಿ ಸಮ್ಮೇಳನವು ಪರಿಸರದಲ್ಲಿ ನಡೆಯುತ್ತಿದ್ದುದರಿಂದ ಕೇರಳದ ಹದಿನಾಲ್ಕು ಜಿಲ್ಲೆಗಳ ನಾಯಕರನ್ನು ನೇರವಾಗಿ ಆಹ್ವಾನಿ ಸಲು ನಾವು ಅಲ್ಲಿಗೆ ತೆರಳಿದೆವು. ಮರಳಿ ಬರುವ ಹಾದಿಯಲ್ಲಿ ಸಮಸ್ತ ಕೋಶಾಧಿಕಾರಿ ಶೈಖುನಾ ಕಂಝುಲ್ ಉಲಮಾ ಚಿತ್ತಾರಿ ಉಸ್ತಾದರನ್ನು ತಳಿಪ್ಪರಂಬಿನ ಅವರ ಮನೆಗೂ, ಸಮಸ್ತ ಅಧ್ಯಕ್ಷ ಶೈಖುನಾ ನೂರುಲ್ ಉಲ ಮಾ ಎಂ.ಎ. ಉಸ್ತಾದರನ್ನು ಅವರ ತೃಕರಿಪು ರದ 'ಕೈಕೋಟ್ ಕಡವು' ಮನೆಗೂ ತೆರಳಿ ಆಹ್ವಾನಿಸಿದೆವು. ಅನಾರೋಗ್ಯದಿಂದಿದ್ದ ಇಬ್ಬರು ಮಹಾಗುರುಗಳೂ ಆಗಮಿಸುವ ಕಷ್ಟ ಸಾಧ್ಯತೆ ಗಳ ಬಗ್ಗೆ ತಿಳಿಸಿ ದುಆ ಮಾಡಿ ಹರಸಿದರು.

ಕರ್ನಾಟಕ ಯಾತ್ರೆಯ ಪ್ರಮುಖ ಸಿದ್ಧತೆ ಯೆಂಬ ನೆಲೆಯಲ್ಲಿ ಅಕ್ಟೋಬರ್ ಹತ್ತೊಂಬ ತ್ತರಂದು ನಾವು ಎಟ್ಟಿಕ್ಕುಳಂಗೆ ಸಯ್ಯಿದುನಾ ತಾಜುಲ್ ಉಲಮಾರ ಮಖಾಂ ಝಿಯಾ ರತ್‌ಗೆ ತೆರಳಿದೆವು. ಎಸ್.ವೈ.ಎಸ್. ರಾಜ್ಯಾ ಧ್ಯಕ್ಷ ಕೆ.ಪಿ. ಹುಸೈನ್ ಸಅದಿ, ಯಾತ್ರಾ ತಂಡದ ನೇತೃತ್ವ ವಹಿಸಿದ್ದರು. ಮಹಾತ್ಮರ ಝಿಯಾರತ್ ಬಳಿಕ ಎಸ್ಸೆಸ್ಸೆಫ್‌ನ ತ್ರಿವರ್ಣ ಪತಾಕೆಯನ್ನು ದರ್ಗಾದಲ್ಲಿಟ್ಟು ಅನುಗ್ರಹ ಪಡೆದೆವು. ಯಾತ್ರೆಗೆ ಅನುಗ್ರಹೀತ ಚಾಲನೆ ಮತ್ತು ಆಶೀರ್ವಾದವೆಂಬ ನೆಲೆಯಲ್ಲಿ ಸಮಸ್ತ ಅಧ್ಯಕ್ಷ ಮೌಲಾನಾ ಎಂ.ಎ. ಉಸ್ತಾ ದರ ಮನೆಗೆ ತೆರಳಿ ಧ್ವಜ ಹಸ್ತಾಂತರದ ಪ್ರಮುಖ ಪ್ರಕ್ರಿಯೆಯನ್ನು ನಿರ್ವಹಿಸಿದೆವು.

ಕರ್ನಾಟಕ ಯಾತ್ರೆಯ ದಿನಗಳು ಹತ್ತಿರ ಬಂದಂತೆ ನಾಯಕರ ಎದೆ ಬಡಿತ ಹೆಚ್ಚಾಗ ತೊಡಗಿತು. ಅಕ್ಟೋಬರ್ 23ರಂದು ಮಂಗ ಳೂರಿನ ದೀಪಾ ಕಂಫರ್ಟ್ಸ್‌ನಲ್ಲಿ ಬೃಹತ್ ಪತ್ರಿಕಾ ಸಮ್ಮೇಳನವನ್ನು ಏರ್ಪಡಿಸಲಾ ಗಿತ್ತು. ಅದಾದ ಬಳಿಕ ನಮ್ಮ ತಂಡವು ಪ್ರಾರ್ಥನಾ ಮನಸ್ಸಿನೊಂದಿಗೆ ಗುಲ್ಬರ್ಗಕ್ಕೆ ಪ್ರಯಾಣ ಬೆಳೆಸಿದೆವು. ಎಸ್ಸೆಸ್ಸೆಫ್ ಬೆಳ್ಳಿಹಬ್ಬ ಸಮಿತಿಯ ಅಧ್ಯಕ್ಷ ಎಸ್.ಪಿ. ಹಂಝ ಸಖಾಫಿ, ಕೋಶಾ ಧಿಕಾರಿ ಮಲ್ಲೂರು ಅಶ್ರಫ್ ಸಅದಿ, ಕರ್ನಾಟಕ ಯಾತ್ರೆಯ ಸಂಚಾಲಕ ಶಾಫಿ ಸಅದಿ ಮತ್ತು ನಾನು ತಂಡದಲ್ಲಿದ್ದೆವು. ಯಾತ್ರೆಯಲ್ಲಿ ಭಾಗವ ಹಿಸುವ ಅತ್ಯುತ್ಸಾಹದಿಂದ ದುಬೈಯ ತನ್ನ ಕೆಲಸದಿಂದ ರಜೆ ತೆಗೆದು ಆಗಮಿಸಿದ್ದ ಅಶ್ರಫ್ ಕಿನಾರಾ ನಮ್ಮ ಕಾರಿಗೆ ಚಾಲಕರಾಗಿಯೂ 'ಯಾತ್ರೆ'ಯ ಸೇವಕರಾಗಿಯೂ ಜತೆಗಿದ್ದರು.

ಆ ದಿನ ರಾತ್ರಿ ಹುಬ್ಬಳ್ಳಿ ತಲುಪಿದ ನಾವು ಸ್ಥಳೀಯ ಸ್ವಾಗತ ಸಮಿತಿಯೊಂದಿಗೆ ಅಲ್ಲಿನ ಸಮಾವೇಶದ ಸಿದ್ಧತೆ ಬಗ್ಗೆ ಚರ್ಚಿಸಿದೆವು. ಹುಬ್ಬಳ್ಳಿ ಸುನ್ನಿಗಳ

'ಡೈನಾಮಿಕ್ ಲೀಡರ್ ಶಿಪ್' ಮೌಲಾನಾ ಮುಫ್ತಿ ಸಲ್ಮಾನ್ ಅಝ್‌ಹರೀ ಅವರ ನೇತೃತ್ವದಲ್ಲಿ ಹುಬ್ಬಳ್ಳಿ ಸಮ್ಮೇಳನವನ್ನು ಐತಿಹಾಸಿಕಗೊಳಿಸಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು.

ಮರುದಿನ ಬೆಳಿಗ್ಗೆ ಬಿಜಾಪುರದ ಸಮ್ಮೇ ಳನದ ಕುರಿತು ಅಲ್ಲಿ ನಾಯಕರಾದ ಸಯ್ಯಿದ್ ತನ್ವೀರ್ ಹಾಶ್ಮಿ ಹಾಗೂ ಅಬ್ದುಲ್ ಅಝೀ ಝ್ ಮದನಿ ಅವರ ಜತೆ ದೀರ್ಘ ಸಮಾ ಲೋಚನೆ ನಡೆಸಲಾಯಿತು.

ಕೊನೆಗೆ ಅಕ್ಟೋಬರ್ 24 ಶುಕ್ರವಾರ ಅಪರಾಹ್ನ 3 ಗಂಟೆಗೆ ನಮ್ಮ ತಂಡವು ಎ.ಪಿ. ಉಸ್ತಾದರ ಕರ್ನಾಟಕ ಯಾತ್ರೆಯ ಕೇಂದ್ರ ಭೂಮಿ ಗುಲ್ಬರ್ಗಕ್ಕೆ ತಲುಪಿತು.

# 38

## ಕಟ್ಟುವೆವು ನಾವು ಹೊಸ ನಾಡೊಂದನು ರಸದ ಬೀಡೊಂದನು...!

2014 ಅಕ್ಟೋಬರ್ 25, ಶನಿವಾರ ಸುನ್ನೀ ಕರ್ನಾಟಕ ಗುಲ್ಬರ್ಗಾದತ್ತ ಹರಿಯು ತ್ತಿತ್ತು. ಎ.ಪಿ.ಉಸ್ತಾದರ ಕರ್ನಾಟಕ ಯಾತ್ರೆಗೆ ಖಾಜಾ ಬಂದೇ ನವಾಝ್ ನಗರಿ ಸಿದ್ಧವಾಗು ತ್ತಿದ್ದರೆ, ಅನುಬಂಧ ವ್ಯವಸ್ಥೆಗಳ ಸಿದ್ಧತೆಗಾಗಿ ನಾವು ದರ್ಗಾದ ಗೆಸ್ಟ್‌ಹೌಸ್‌ನಲ್ಲಿ ಅಂತಿಮ ಹಂತದ ಸಭೆ ನಡೆಸಿ ಮುನ್ನಾದಿನ ರಾತ್ರಿ ನಿದ್ದೆಗೆ ಜಾರುವಾಗ ತುಂಬ ತಡವಾಗಿತ್ತು. ಬೇಗನೇ ಎದ್ದು ಮುಂದಿನ ಸಿದ್ಧತೆಗಳನ್ನು ಪೂರ್ತಿಗೊಳಿ ಸುವುದಿತ್ತು. ಬೆಳಗ್ಗೆ ಮೊಬೈಲ್‌ನ ಅಲಾರಾಂ ಸದ್ದಿಗೆ ಎದ್ದು ಕುಳಿತು, ಅಲಾರಾಂ ನಿಲ್ಲಿಸಲು ಮೊಬೈಲ್ ಕೈಗೆತ್ತಿಕೊಂಡರೆ ಅದರಲ್ಲಿ ತುಂಬಾ 'ಮಿಸ್ಡ್‌ಕಾಲ್'ಗಳು. ಬೆಳಗ್ಗಿನ ಜಾವಾ ಮೂರುವರೆ ಗಂಟೆಯಿಂದ ಶುರುವಾಗಿ ನಿರಂತರ ಬಂದ 'ಕಳೆದು ಹೋದ ಕರೆ'ಗಳಲ್ಲಿ ರಾಜ್ಯ ಆರೋಗ್ಯ ಸಚಿವ ಯು.ಟಿ.ಖಾದರ್ ಅವರ ಮೊಬೈಲ್ ನಂಬ್ರವೂ ಇತ್ತು. ಆದರೆ ತಡ ರಾತ್ರಿಯ ನಿದ್ದೆಯ ದಣಿವಿನಿಂದ ಯಾರದೇ ಕರೆಗಳು  ಗಮನಕ್ಕೆ ಬಂದಿರಲಿಲ್ಲ. ಪ್ರತಿ ಯೊಂದು ನಂಬರಿಗೂ ತಿರುಗಿ ಕರೆ ಮಾಡುತ್ತಾ ಬಂದರೆ ತಕ್ಷಣ ಫೋನಿಗೆ ಸಿಕ್ಕಿದವರು ಅಬೂ ಸುಫ್ಯಾನ್ ಮದನಿ, ಬೆಂಗಳೂರಿನಿಂದ ರೈಲು ಮಾರ್ಗವಾಗಿ ಎ.ಪಿ.ಉಸ್ತಾದರ ಜತೆ ಅವರು ಗುಲ್ಬರ್ಗಾಕ್ಕೆ ಆಗಮಿಸುತ್ತಿದ್ದರು.

ಅವರಿಂದ ದೊರೆತ ಮಾಹಿತಿ ಗರ ಬಡಿಸು ವಂತಿತ್ತು. ಯಾತ್ರೆಯಲ್ಲಿ ಸೇರಲು ಮಂಗಳೂ ರಿನಿಂದ ಆಗಮಿಸುತ್ತಿದ್ದ, ಮರ್ಕಝ್ ಶರೀ ಅತ್ ಕಾಲೇಜಿನ ವಿದ್ಯಾರ್ಥಿಗಳ ಜೀಪು ಶಿವ ಮೊಗ್ಗದ ಹತ್ತಿರ ಹೊನ್ನಾಳಿಯಲ್ಲಿ ಪಲ್ಟಿಯಾಗಿ ಅದರಲ್ಲಿದ್ದ ಎಲ್ಲ ಎಂಟು ಮಂದಿ ಶಿವಮೊಗ್ಗ ಆಸ್ಪತ್ರೆಗೆ ದಾಖಲಾದ ಸುದ್ದಿಯಾಗಿತ್ತದು.

ಘಟನೆ ನಡೆದಾಗ ನನಗೆ ವೈಯಕ್ತಿಕವಾಗಿ ಇಷ್ಟೊಂದು ಕರೆಗಳು ಬರಲು ಕಾರಣ ಸದ್ರಿ ಜೀಪಿನಲ್ಲಿ ನನ್ನ ತಮ್ಮ ಮರ್ಕಝ್ ಶರೀಅತ್ ಕಾಲೇಜಿನ ಅಂತಿಮ ಪದವಿ ವಿದ್ಯಾರ್ಥಿ ಜುನೈದ್ ಹಿಮಮಿ ಹಾಗೂ ನನ್ನ ಅಕ್ಕನ ಮಗ ಅದೇ ತರಗತಿಯ ಸಯ್ಯಿದ್ ತ್ವಾಹಾ ತಂಙಳ್ ಕಲ್ಲಕಟ್ಟೆ ಇದ್ದು ಗಾಯಾಳುಗಳಾಗಿ ಆಸ್ಪತ್ರೆ ಸೇರಿದ್ದು. ಮರ್ಕಝ್ ಶರೀಅತ್ ಕಾಲೇಜಿನ ಒಟ್ಟು ಏಳು ವಿದ್ಯಾರ್ಥಿಯರು ಮತ್ತು ಜೀಪಿನ ಚಾಲಕ ಸೇರಿ ಅದರಲ್ಲಿ ಎಂಟು ಮಂದಿ ಪ್ರಯಾ ಣಿಸುತ್ತಿದ್ದರು. ಬಂಟ್ವಾಳದ ಸುರಿಬೈಲ್ ಅಶ್ ಅರಿಯ್ಯಃ ಸಂಸ್ಥೆಗೆ ಸೇರಿದ್ದ ವಾಹನವಾಗಿತ್ತದು.

ಶಿವಮೊಗ್ಗ ದಾಟಿ ಗುಲ್ಬರ್ಗ ಬರುವ ದಾರಿಯಲ್ಲಿ ಹೊನ್ನಾಳಿ ಎಂಬಲ್ಲಿಗೆ ಸಮೀಪ, ಎದುರು ಭಾಗದಿಂದ ಬರುತ್ತಿದ್ದ ವಾಹನದ ಹೆಡ್‌ಲೈಟ್‌ನ ಪ್ರಖರತೆಗೆ ಸಿಲುಕಿ ಇವರ ವಾಹನ ಬದಿಗೆ ಸರಿದಾಗ ಮೋರಿಯೊಂದರ ಕಟ್ಟೆಯ ಮೇಲೆ ಹತ್ತಿ ಜೀಪು ಅನೇಕ ಬಾರಿ ಪಲ್ಟಿ ಹೊಡೆದು ಗದ್ದೆಗೆ ಉರುಳಿ ಮಗುಚಿತ್ತು. ಪ್ರಯಾಣಿಕರು ರಸ್ತೆಗೆ ಎಸೆಯಲ್ಪಟ್ಟರೆ, ಜೀಪಿನಲ್ಲಿದ್ದ ಮರ್ಕಝುಸ್ಸಖಾಫತಿಸ್ಸುನ್ನಿ ಯ್ಯಃದ ಇಪ್ಪತ್ತೈದು ಸಾವಿರ ಕ್ಯಾಲೆಂಡರ್ ಹಾಗೂ ಸಮ್ಮೇಳನ ಪ್ರಚಾರದ ಪರಿಕರಗಳು ಚೆಲ್ಲಾಪಿಲ್ಲಿಯಾಗಿ ಗದ್ದೆಯಲ್ಲಿ ಬಿದ್ದವು.

ಯು.ಟಿ.ಖಾದರ್ ಮತ್ತೆ ಫೋನ್ ಮಾಡಿ ಗಾಯಾಳುಗಳ ಪರಿಚರಣೆಯ ಬಗ್ಗೆ ತಾನು ಖುದ್ದು ನಿಗಾ ವಹಿಸುತ್ತಿರುವುದಾಗಿ ಹೇಳಿ ಸಂತೈಸಿದರು. ರಾತ್ರಿ ಹಗಲೆನ್ನದೆ ಜನರ ಕಷ್ಟ-ನಷ್ಟಗಳಿಗೆ ಅದ್ಭುತವಾಗಿ ಸ್ಪಂದಿಸುತ್ತಿರುವ ಸಚಿವ ಯು.ಟಿ.ಖಾದರ್‌ರ ಕಳಕಳಿ ನೋಡಿ ಹೆಮ್ಮೆಯೆನಿಸಿತು. ಅಕ್ಟೋಬರ್ 25ರ ಮುಂಜಾ ವು ಹೊತ್ತು ತಂದ ಈ ಭೀಕರ ಸುದ್ದಿಯು ನನ್ನ ಅಂತರಂಗದಲ್ಲಿ ಎಬ್ಬಿಸಿದ ಬಿರುಗಾಳಿ ಎಲ್ಲ ಸಂತೋಷಗಳನ್ನು ಹೊಸಕಿ ಹಾಕಿತ್ತು.

ಯಾತ್ರೆಯಲ್ಲಿ ನನ್ನ ಜವಾಬ್ದಾರಿ ಎ.ಪಿ. ಉಸ್ತಾದರ ಜತೆ ಪ್ರಯಾಣಿಸಿ ಅವರಿಗೆ ಪ್ರತಿ ಜಿಲ್ಲೆಯ, ಪ್ರತಿ ಕೇಂದ್ರದ ಮಾಹಿತಿ ನೀಡುವುದು, ಆಯಾ ದಿನದ ಪತ್ರಿಕೆಗಳ ವೃತ್ತಾಂತಗಳನ್ನು ವಿವರಿಸಿ ಅದಕ್ಕೆ ಅಗತ್ಯವಾಗುವ ಪ್ರತಿಕ್ರಿಯೆ ಗಳನ್ನು ಸಿದ್ಧಪಡಿಸುವುದು, ಉಸ್ತಾದರ ಪ್ರಸ್ತಾವನೆಗಳನ್ನು ದಾಖಲಿಸಿ, ಸಂಬಂಧಪಟ್ಟ ಸಚಿವರು, ಅಧಿಕಾರಿಗಳಿಗೆ ತಲುಪಿಸುವುದು ಮುಂತಾದವು ಆಗಿದ್ದವು. ಇದೆಲ್ಲದರ ಸಿದ್ಧತೆ ಯಲ್ಲಿ ತೊಡಗಿರುವಾಗಲೇ ಅಪಘಾತದ ಸುದ್ದಿ ಬಂದು ಎಲ್ಲ ಯೋಜನೆಗಳನ್ನು ತಲೆ ಕೆಳಗೆ ಮಾಡಿತ್ತು!

ಮರ್ಕಝ್ ವಿದ್ಯಾರ್ಥಿಗಳೆಂಬ ನೆಲೆಯಲ್ಲಿ ಎಲ್ಲರಿಗೂ ಸುದ್ದಿ ಗಾಬರಿ ಹುಟ್ಟಿಸಿದ್ದರೂ ವೈಯಕ್ತಿಕವಾಗಿ ತಮ್ಮ ಮತ್ತು ಅಕ್ಕನ ಮಗನ ಜವಾಬ್ದಾರಿ ನಾನೇ ನೋಡಬೇಕಿತ್ತು. ಶಿವ ಮೊಗ್ಗ ನಾರಾಯಣ ಆಸ್ಪತ್ರೆಯಲ್ಲಿ ದಾಖ ಲಾಗಿದ್ದ ಗಾಯಾಳುಗಳನ್ನು ಅಲ್ಲಿ ಅವರ ನೆರವು ಕಾರ್ಯದಲ್ಲಿ ತೊಡಗಿದ್ದ ಜಿಲ್ಲಾ ಎಸ್ಸೆಸ್ಸೆಫ್ ನಾಯಕರನ್ನು ಸಂಪರ್ಕಿಸಿದ ಮೇಲೆ ಸದ್ಯ ನಾನು ಶಿವಮೊಗ್ಗ ತೆರಳ ಬೇಕಿಲ್ಲವೆಂದು ವೇದ್ಯವಾಯಿತು. ಹಲವರ ತಲೆಗೆ ಪೆಟ್ಟಾಗಿ ದ್ದರೆ ಕೆಲವರ ಎದೆ ಮತ್ತು ಕಾಲಿಗೆ ಪೆಟ್ಟಾಗಿತ್ತು. ಆದರೆ ತೀವ್ರ ಮಾರಕವೆನ್ನುವ ಗಾಯ ಯಾರಿಗೂ ಇದ್ದಿರಲಿಲ್ಲ.

ಮನಸ್ಸನ್ನು ಹತೋಟಿಗೆ ತಂದು ಮತ್ತೆ ಕಾರ್ಯಕ್ರಮದ ಸಿದ್ಧತೆಯಲ್ಲಿ ತೊಡಗಲಾ ಯಿತು. ಜನನಾಯಕ ಕಾಂತಪುರಂ ಉಸ್ತಾದ್ ಗುಲ್ಬರ್ಗಾ ರೈಲು ನಿಲ್ದಾಣದಲ್ಲಿ ಇಳಿದು ಕಾರ್ಯಕರ್ತರ ಆವೇಶೋಜ್ವಲ ಸ್ವಾಗತ ಮೆರವಣಿಗೆಯೊಂದಿಗೆ ಆಗಮಿಸಿದರು.

ಅದೇ ದಿನ ಬೆಳಗ್ಗೆ ಹತ್ತು ಗಂಟೆಗೆ ಗುಲ್ಬರ್ಗಾ ಹೊರವಲಯದಲ್ಲಿ 'ಜಾಮಿಅಃ ಮಸ್ಜಿದ್ ರಝಾಯೇ ಮುಸ್ತಫಾ' ಶಿಲಾನ್ಯಾಸದೊಂದಿಗೆ ಉಸ್ತಾದರ ಅಧಿಕೃತ ಕಾರ್ಯಕ್ರಮ ಶುರು ವಾಯಿತು. ಅಲ್ಲಿ ಐದು ಎಕ್ರೆ ನಿವೇಶನದಲ್ಲಿ ಬಹುಮುಖ ಶಿಕ್ಷಣ ಸಂಸ್ಥೆಗಳ ಗುರಿಯಿದ್ದು ಕರ್ನಾಟಕ ಯಾತ್ರೆಯ ಮುಖ್ಯ ಯೋಜನೆ ಯಾದ ಇಪ್ಪತ್ತೈದು ಜ್ಞಾನ ಗ್ರಾಮ (ನಾಲೆಜ್ ವಿಲೇಜ್)ದ ಪ್ರಥಮ ಕೇಂದ್ರ ಇದಾಗಲಿದೆ. ಇನ್‌ಶಾಅಲ್ಲಾಹ್...

ಉದ್ಘಾಟನಾ ವೇದಿಕೆ ಆಕಸ್ಮಿಕ ಮಳೆಯಿಂ ದಾಗಿ ಬದಲಾಯಿಸಿದ್ದು ಕಾರ್ಯಕ್ರಮದ ಭರ್ಜರಿ ಯಶಸ್ಸಿಗೆ ಸಹಾಯಕವಾಯಿತು. 'ಖಾಜಾ ಬಂದೇ ನವಾಝ್' ಹೆಸರಿನ ಬೃಹತ್ ಸುಸಜ್ಜಿತ ಸಭಾಂಗಣದಲ್ಲಿ ಪ್ರೌಢ ಗಂಭೀರ ವಾಗಿ ನಡೆದ ಸುಲ್ತಾನುಲ್ ಉಲಮಾ ಎ.ಪಿ. ಉಸ್ತಾದರ ಕರ್ನಾಟಕ ಯಾತ್ರೆಯ ಶುಭಾರಂ ಭವು ರಾಜ್ಯದ ಇಸ್ಲಾಮೀ ಇತಿಹಾಸದಲ್ಲೊಂ ದು ಮಹತ್ವದ ಮೈಲುಗಲ್ಲಾಯಿತು.

ಮರುದಿನ 'ಯಾತ್ರೆ' ಬೆಳಗ್ಗೆ ಎಂಟು ಗಂಟೆಗೆ ಬಿಜಾಪುರದತ್ತ ಮುಖ ಮಾಡಿತು. 'ಯಾತ್ರೆ'ಯ ಪ್ರಮುಖ ಆಕರ್ಷಣೆಯಾದ ಬಸ್ಸು ಕಾರವಾನ್'ನಲ್ಲಿ ಉಸ್ತಾದರ ಪ್ರಯಾಣ ಮುಂದುವರಿಯಿತು. ಆ ದಿನ ಬಿಜಾಪುರ, ಬಾಗಲಕೋಟೆಯ ಮೂಲಕ ಹುಬ್ಬಳ್ಳಿ ತಲುಪಿದಾಗ ರಾಜ್ಯ ಕಂಡ ಅತೀ ದೊಡ್ಡ ಸುನ್ನೀ ಸಮಾವೇಶಕ್ಕೆ ಆಧಾತ್ಮ ಪುರುಷ ಶೈಖ್ ಫತ್‌ಹ್ ಅಲಿ ವಲಿಯುಲ್ಲಾಹಿರವರ ಭೂಮಿ ಸಾಕ್ಷಿಯಾಯಿತು. ಮುಂದಿನ ದಿನಗಳಲ್ಲಿ ಜನಮಾನಸದಲ್ಲಿ ಸಂಚಲನ ಮೂಡಿಸಿ ಮಂಗಳೂರಿನಲ್ಲಿ ಸಮಾಪ್ತಿಗೊಂಡ ಯಾತ್ರೆ ಇತಿಹಾಸ ನಿರ್ಮಿಸಿದ್ದು ನಿಜ.

ಮಂಗಳೂರು ಸಮಾರೋಪ ಸಮಾವೇಶ ಮುಗಿಸಿ ಉಸ್ತಾದ್ ಮರಳಿ ಹೋಗುವಾಗ ಕೋಝಿ ಕ್ಕೋಡ್ ರೈಲು ನಿಲ್ದಾಣದಲ್ಲಿ ಸುನ್ನೀ ಕಾರ್ಯಕರ್ತರು ಬೃಹತ್ ಸಂಖ್ಯೆಯಲ್ಲಿ ಜಮಾಯಿಸಿ ಬರಮಾಡಿಕೊಂಡರು. ಮರ್ಕ ಝ್ ಒಳಗೊಳ್ಳುವ 'ಕುನ್ನಮಂಗಲಂ'ಕ್ಷೇತ್ರದ ಶಾಸಕ ಪಿ.ಟಿ.ಎ.ರಹೀಂ ಹೂಗುಚ್ಛ ನೀಡಿ ಉಸ್ತಾದರನ್ನು ಜನ್ಮ ನಾಡಿಗೆ ಸ್ವಾಗತಿಸಿದರು. ಐತಿಹಾಸಿಕ ಯಾತ್ರೆ ಮುಗಿಸಿ ಬಂದ ಸುನ್ನೀ ಸುಲ್ತಾನರಿಗೆ ಕೋಝಿಕ್ಕೋಡ್ ಟಾಗೋರ್ ಹಾಲ್‌ನಲ್ಲಿ ಅದ್ದೂರಿಯ ಅಭಿನಂದನಾ ಸಭೆ ಆಯೋಜಿಸಲಾಗಿತ್ತು. ಕೇರಳದ ವಿವಿಧ ರಾಜ ಕೀಯ ಪಕ್ಷಗಳ ಮುಖಂಡರೂ ಸಾಮಾಜಿಕ ಮುಂದಾಳುಗಳೂ ಪಾಲ್ಗೊಂಡ ಸದ್ರಿ ಸಮಾ ವೇಶದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ನಾನೂ ಭಾಗವಹಿಸಿ ಭಾಷಣ ಮಾಡಿದೆ.

ಎ.ಪಿ.ಉಸ್ತಾದರ ಕರ್ನಾಟಕ ಯಾತ್ರೆಯ ಅದ್ಭುತ ಯಶಸ್ಸು ಎಲ್ಲೆಡೆ ಚರ್ಚಾ ವಿಷಯವಾಗಿತ್ತು. ಕೇರಳದಲ್ಲಿ ಎರಡು ಬಾರಿ ಅದ್ದೂರಿಯ ಕೇರಳ ಯಾತ್ರೆ ನಡೆಸಿದ ಅಲ್ಲಿನ ನಾಯಕರು ನಮ್ಮನ್ನು ಬೆರಗುಗಣ್ಣಿನಿಂದ ನೋಡುತ್ತಿದ್ದರು. ಕಂಡವರೆಲ್ಲರೂ ಅಭಿನಂದಿಸುತ್ತಿದ್ದರು.

ಯಾತ್ರೆಯ ಬಳಿಕ ಮರ್ಕಝ್ ಸಮ್ಮೇ ಳನದ ಪ್ರಯುಕ್ತ ಎ.ಪಿ.ಉಸ್ತಾದ್ ನಡೆಸಿದ ಗಲ್ಫ್ ಯಾತ್ರೆಯು ಅಲ್ಲಿನ ಪ್ರತಿ ರಾಷ್ಟ್ರಗಳ ಲ್ಲಿಯೂ ಉಸ್ತಾದರಿಗೆ ವಿಜೃಂಭಣೆಯ ಅಭಿನಂದನಾ ಸಭೆ ನಡೆಸಲು ಸುನ್ನೀ ಕಾರ್ಯ ಕರ್ತರಿಗೆ ಸಹಕಾರಿಯಾಯಿತು.

ಯಾತ್ರೆ ಕಳೆದ ತಕ್ಷಣ ಸೌದಿ ಅರೇಬಿಯಾ ಅಧಿಕೃತರಿಂದ ಉಸ್ತಾದರಿಗೆ ಕಅ್‌ಬಾ ಶರೀಫ್ ತೊಳೆಯುವ ಕಾರ್ಯದಲ್ಲಿ ಭಾಗವ ಹಿಸುವ ಆಹ್ವಾನ ಬಂದಿತ್ತು. ಅದಕ್ಕಾಗಿ ತೆರ ಳಿದ ವೇಳೆ ಸೌದಿ ರಾಜಧಾನಿ ರಿಯಾದ್‌ನಲ್ಲಿ ಸುನ್ನೀ ಸಂಘಟನೆಗಳು ಅದ್ದೂರಿಯ ಅಭಿನಂದನಾ ಸಭೆ ಏರ್ಪಡಿಸಿದ್ದರು. ಬಿದಈ ಶಕ್ತಿಗಳ ಕುತಂತ್ರದಿಂದಾಗಿ ಸೌದಿಯ ಎಲ್ಲೆಡೆ ಸಂಚಾರಕ್ಕೆ ನಿರ್ಬಂಧವಿದ್ದ ಉಸ್ತಾದರಿಗೆ ಇದೀಗ ರಿಯಾದ್‌ನಲ್ಲಿ ರಾಜಮನೆತನದ ಸದ ಸ್ಯರ ಸಮ್ಮುಖದಲ್ಲೇ ಸ್ವಾಗತ ಕೋರಲಾ ಗಿತ್ತು. ಇದೇ ರಿಯಾದ್‌ನಲ್ಲಿ 1991ರಲ್ಲಿ ಉಸ್ತಾದರನ್ನು ಬಂಧಿಸಿ ಸೆರೆಮನೆಯಲ್ಲಿಡ ಲಾಗಿತ್ತು ಮತ್ತು ಇದಕ್ಕೆ ಕೇರಳ ವಹ್ಹಾಬಿ ಪುರೋಹಿತರು ಕುತಂತ್ರ ಹೆಣೆದಿದ್ದರು ಎಂಬು ದರ ಜತೆಗೆ ಮೊನ್ನೆ ಮರ್ಕಝ್ ಮಹಾ ಸಮ್ಮೇಳನಕ್ಕೆ ಆಗಮಿಸಿದ ರಿಯಾದ್‌ನ ಅಧಿಕೃತ ವ್ಯಕ್ತಿಯೊಬ್ಬರು ಅಂದಿನ ಸೆರೆವಾಸಕ್ಕೆ ಕಾರಣವಾದ ಸನ್ನಿವೇಶವನ್ನು ನೆನೆದು ಪಶ್ಚಾ ತ್ತಾಪಿಸಿದ್ದು, ತಮ್ಮನ್ನು ಅರ್ಥ ಮಾಡಿಕೊ ಳ್ಳಲು ವಿಳಂಬವಾಯ್ತು ಎಂದು ಲಕ್ಷಾಂತರ ಜನರ ಮುಂದೆ ನಿವೇದಿಸಿಕೊಂಡರು. ಎಲ್ಲವನ್ನೂ ಸೇರಿಸಿ ಓದಿದರೆ ಎ.ಪಿ. ಉಸ್ತಾದರಿಗೆ ಪವಿತ್ರ ಮಣ್ಣಿನಲ್ಲಿ ಮುಕ್ತ ವಾದ ಸ್ವಾಗತವನ್ನು ಅಲ್ಲಾಹನೇ ನೀಡಿರುವುದು ಅನುಭವಕ್ಕೆ ಬರುತ್ತದೆ.

ನವಂಬರ್ 12 ಬುಧವಾರ ಅಬುಧಾಬಿ ಯಲ್ಲೂ 14ಶುಕ್ರವಾರ ಮಸ್ಕತ್‌ನಲ್ಲೂ ಉಸ್ತಾದರಿಗೆ ನೀಡಿದ ಭವ್ಯ ಸ್ವಾಗತ ಸಮಾರಂಭದಲ್ಲಿ ಭಾಗವಹಿಸಲು ನನಗೂ ಆಹ್ವಾನ ಕೊಟ್ಟಿದ್ದರು. ಅಲ್ಲಿ ಉಸ್ತಾದರಿಗೆ ಅಭಿನಂದನೆ ಸಲ್ಲಿಸಿ ಪ್ರಮುಖ ಭಾಷಣ ಮಾಡುವ ಜವಾಬ್ದಾರಿ ನನ್ನ ಮೇಲಿತ್ತು. ಕರ್ನಾ ಟಕ ಯಾತ್ರೆಯ ಪ್ರತಿ ಹಂತಗಳನ್ನು ಸಭಿಕರ ಮುಂದೆ ತೆರೆದಿಟ್ಟಾಗ ಅವರಿಂದ ಪ್ರಕಟವಾದ ಆವೇಶ ಎಣಿಕೆಗೆ ನಿಲುಕದ್ದು, ನೀವು ಕೇರಳ ಯಾತ್ರೆಯನ್ನು ಮೀರಿಸಿದ್ದೀರಿ ಎನ್ನುತ್ತಿದ್ದರು ಅಲ್ಲಿ ಸೇರಿದ್ದ ಮಲಯಾಳೀ ಮುಖಂಡರು.

ಸದ್ರಿ ವೇದಿಕೆಯಲ್ಲಿ ಕರ್ನಾಟಕ ಯಾತ್ರೆಯ ಸಂಯೋಜಕ ಎಂದು ನನಗೂ ಶಾಲು ಹೊದಿಸಿದರು. ಆದರೆ ಯಾತ್ರೆಯ ಯಶಸ್ಸು ಯಾವುದೇ ಒಂದಿಬ್ಬರ ಪ್ರಯತ್ನದ ಫಲವಾಗಿರಲಿಲ್ಲ. ರಾಜ್ಯದ ಉದ್ದಗಲಕ್ಕೂ ಇರುವ ಅಸಂಖ್ಯ ಸಯ್ಯಿದರು, ಉಲಮಾಗಳ ಪ್ರಾರ್ಥನಾ ಪೂರ್ವಕ ಆಶೀರ್ವಾದ, ಸುನ್ನೀ ರಾಜಕೀಯ ಮುಖಂಡರ ಸಹಕಾರ, ಶ್ರೀಮಂ ತರ ಮುಕ್ತ ಮನಸ್ಸು, ನಾಯಕರ ಅವಿರತ ದುಡಿಮೆ, ಸಹಸ್ರಾರು ಕಾರ್ಯಕರ್ತರ ಅವಿ ಶ್ರಾಂತ ಪರಿಶ್ರಮ ಅನಿವಾಸಿ ಕನ್ನಡಿಗರ ಸುನ್ನೀ ವೇದಿಕೆಯಾದ ಕರ್ನಾಟಕ ಕಲ್ಚರಲ್ ಫೌಂಡೇ ಶನ್‌ನ ವಿವಿಧ ಗಲ್ಫ್ ಘಟಕಗಳ ನಿಷ್ಕಳಂಕ ಸಹಭಾಗಿತ್ವ ಎಲ್ಲವೂ ಇದರ ಹಿಂದಿದೆ. ತೆರೆ ಯಲ್ಲಿದ್ದುಕೊಂಡೇ ಯಾತ್ರೆಯ ಪ್ರತಿಯೊಂ ದು ಬೆಳವಣಿಗೆಯನ್ನು ನಿಯಂತ್ರಿಸಿದ ಬೆಳ್ಳಿಹಬ್ಬ ಸಮಿತಿ ಅಧ್ಯಕ್ಷ ಎಸ್.ಪಿ.ಹಂಝ ಸಖಾಫಿ ಯವರ ನಾಯಕತ್ವ, ಯಾತ್ರೆಯ ಸಂಚಾಲಕ ಸನ್ಮಿತ್ರ ಶಾಫಿ ಸಅದಿಯವರು ವಕ್ಫ್ ಮಂಡಳಿ ಸದಸ್ಯತ್ವದ ಮೂಲಕ ಗಳಿಸಿದ ವೈಯುಕ್ತಿಕ ಪ್ರಭಾವದ ಸದ್ಬಳಕೆ ಈ ಯಶಸ್ಸಿಗೆ ಶಕ್ತಿ ತುಂಬಿದ್ದು ಉಲ್ಲೇಖಾರ್ಹ.

ನವೆಂಬರ್ 21 ರಂದು ಕೆ.ಸಿ.ಎಫ್ ಸಲಾಲಾ ಝೋನ್ ರಚನೆಗಾಗಿ ನಾವು ಮಸ್ಕತ್ ನಿಂದ ತೆರಳಿದೆವು. ಒಮಾನ್ ಕೆ.ಸಿ.ಎಫ್. ಉತ್ಸಾಹೀ ಪ್ರಧಾನ ಕಾರ್ಯದರ್ಶಿ ಹಾಜಿ ಹಂಝ ಸುಲೈಮಾನ್ ಕನ್ನಂಗಾರ್ ನೇತೃತ್ವದಲ್ಲಿ ಅವರದೇ ಕಾರಿನಲ್ಲಿ ಅವರೇ ಚಾಲಕನಾಗಿ ಸುದೀರ್ಘ ಹತ್ತು ಗಂಟೆಗಳ ಯಾತ್ರೆಯ

ಬಳಿಕ ಸಲಾಲಾ ತಲುಪಿದೆವು. ಅಂದು ರಾತ್ರಿ ಸಲಾ ಲಾದ ಲಯಾಲೀ ಅಪಾರ್ಟ್‌ಮೆಂಟಿನ ಕೋಣೆ ಯೊಂದರಲ್ಲಿ ನೂತನ ಸಲಾಲಾ ಝೋನ್ ಕೆ.ಸಿ.ಎಫ್.ಗೆ ರೂಪು ಕೊಡಲಾಯಿತು.

ಹಳೆಯ ಯಮನ್ ದೇಶದ ಭಾಗವಾಗಿ ದ್ದ ಸಲಾಲಾ 'ಳಫಾರ್' ಪ್ರಾಂತ್ಯಕ್ಕೆ ಸೇರಿದ ಭೂಭಾಗ. ಸುಲ್ತಾನ್ ಖಾಬೂಸ್‌ರ ಹಿರಿಯರಿಗೆ ಈ ಭೂಪ್ರದೇಶ ಕೊಡುಗೆಯಾಗಿ ಸಿಕ್ಕಿದ ಕಾರಣ ಒಮಾನ್ ದೇಶಕ್ಕೆ ಸೇರ್ಪಡೆ ಗೊಂಡಿದ್ದಂತೆ.

ಅರೇಬಿಯನ್ ಗಲ್ಫ್‌ನ ಅನುಗ್ರಹೀತ ಮಣ್ಣಾದ ಸಲಾಲ ಪ್ರಕೃತಿ ಸೊಬಗಿನಿಂದ ಆಕರ್ಷಕವಾದ ನೆಲ. ಇಲ್ಲಿನ ತೆಂಗು ಮತ್ತು ಬಾಳೆಯ ತೋಟಗಳು ಇದೊಂದು ಕೇರಳದ ಭೂಪ್ರದೇಶದಂತೆ ತೋರ್ಪಡಿಸುತ್ತದೆ. ಪವಿತ್ರ ಇಸ್ಲಾಮ್ ಧರ್ಮ ಭಾರತಕ್ಕೆ ಹಾದು ಬರಲು ಕಾರಣಕರ್ತರಾದ ಕೇರಳದ ಕೊಡುಂಗಲ್ಲೂರಿನ ಚೇರಮಾನ್ ಪೆರುಮಾಳ್ ಚಕ್ರವರ್ತಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಭೇಟಿಯಾಗಲು ಮಕ್ಕಾಕ್ಕೆ ತೆರಳಿ ಹಿಂದಿರುವಾಗ ರೋಗ ಬಾಧಿತರಾಗಿ ಈ ಸಲಾಲಾದತ್ತ ಹಡಗನ್ನು ಒಯ್ದು ಅಲ್ಲಿ ಇಳಿದಿದ್ದರು. ಅಲ್ಲಿ ರೋಗ ಉಲ್ಬಣ ಗೊಂಡಾಗ ಇನ್ನು ತನ್ನ ಜನ್ಮ ನಾಡಾದ ಕೇರಳಕ್ಕೆ ತೆರಳುವುದು ಕಷ್ಟ ಸಾಧ್ಯವೆಂದು ಅರಿತಾಗ ತಾನು ತಂಗಿದ ಸಲಾಲಾ ಪ್ರದೇಶವನ್ನೇ ಕೇರಳದಂತೆ ಮಾಡಲು ಅಲ್ಲಾಹನಲ್ಲಿ ಬೇಡಿಕೊಂಡಿದ್ದರಂತೆ. ಅವರ ಪ್ರಾರ್ಥನೆಯ ಫಲವೆಂಬಂತೆ ಅಲ್ಲಾಹು ಆ ಪ್ರದೇಶವನ್ನು ಸಂಪೂರ್ಣ ಕೇರಳದ ಪ್ರಕೃತಿಯಂತೆ ಪರಿವರ್ತಿಸಿದ್ದ ಎಂಬುದು ಚರಿತ್ರೆಯ ಕೆಲವು ಉಲ್ಲೇಖಗಳಲ್ಲಿ ಕಾಣಸಿ ಗುತ್ತದೆ. ತಾಜುದ್ದೀನ್ ಎಂದು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ನಾಮಕರಣಗೊಂಡ ಪೆರುಮಾಳ್ ರಾಜರ ದರ್ಗಾ ಸಲಾಲದಲ್ಲಿ ಪ್ರಸಿದ್ಧವಾಗಿದೆ.

ಮರುದಿನ ನಾವು ಕೆ.ಸಿ.ಎಫ್ ಸಲಾಲಾ ಝೋನ್‌ನ ನೂತನ ಅಧ್ಯಕ್ಷ ಕಮಾಲ್ ಸುಳ್ಯ ಅವರ ಜತೆ ಪ್ರಸಿದ್ಧ ದರ್ಗಾಗಳನ್ನೆಲ್ಲ ಸಂದರ್ಶಿಸಿದೆವು.

ಅಯ್ಯೂಬ್ ನಬಿ, ಇಮ್ರಾನ್ ನಬಿ, ಅಬ್ದು ರ್ರಹ್ಮಾನ್ ಸಾಮಿದಿ, ತಾಜುದ್ದೀನ್ ಚಕ್ರವರ್ತಿ, ಉವೈಸುಲ್ ಖರ್‌ನಿ, ಆಬಿದ್ ಬಿನ್‌ಹೂದ್, ಮಿರ್‌ಬಾತ್ವ್‌ನಲ್ಲಿರುವ ಬಾಅಲವೀ ಸಾದಾ ತ್‌ಗಳ ಮಖ್‌ಬರ ಎಲ್ಲವನ್ನು ಸಂದರ್ಶಿಸಿ ನವೆಂಬರ್ 22 ಶನಿವಾರ ಸಂಜೆ 4 ಗಂಟೆಗೆ ಮಸ್ಕತ್‌ಗೆ ಮರಳಿದೆವು.

ಉಸ್ತಾದರ ಅಭಿನಂದನಾ ಭಾಷಣ ನಿರ್ವ ಹಿಸುವುದರ ಜತೆಗೆ ಒಮಾನಿನ ಎಲ್ಲ ಕೆ.ಸಿ. ಎಫ್. ಘಟಕಗಳನ್ನು ಸಂದರ್ಶಿಸಿ ಕಾರ್ಯ ಕರ್ತರನ್ನು ಭೇಟಿಯಾಗಲು ನನ್ನ ಈ ಆರನೇ ಒಮಾನ್ ಪ್ರವಾಸ ಸಹಕಾರಿಯಾಯಿತು. ಗಲ್ಫ್‌ನ ಶಾಂತ ಸುಂದರ ದೇಶವಾದ ಒಮಾನ್, ಸುನ್ನೀ ಚಳವಳಿಯಲ್ಲೂ ಸಜೀವ ಸಹಭಾಗಿತ್ವ ನೀಡ ಲು ಶಾಂತವಾಗಿ ಸಜ್ಜುಗೊಳ್ಳುತ್ತಿತ್ತು.

# 39

## ಕೆಲವು ಸ್ಫಟಿಕ ಸ್ಮರಣೆಗಳು

2014 ಡಿಸೆಂಬರ್ 6ರಂದು ಪುತ್ತೂರು - ಕುಂಬ್ರದಲ್ಲಿ ನಡೆದ ಮರ್ಕಝುಲ್ ಹುದಾ ಸಮಿತಿ ಸಭೆಯಲ್ಲಿ 2015ನೇ ವರ್ಷವನ್ನು ಸಂಸ್ಥೆಯ 'ಸ್ಫಟಿಕ ವರ್ಷ'ವಾಗಿ ಆಚರಿಸಲು ನಿರ್ಧರಿಸಿದೆವು. 15 ನೇ ವರ್ಷಕ್ಕೆ ಸ್ಫಟಿಕ ಮಹೋತ್ಸವ ಅಥವಾ 'ಕ್ರಿಸ್ಟಲ್ ಜುಬಿಲೀ' ಪ್ರಯೋಗವನ್ನು ಮೊದಲು ಜಾರಿಗೆ ತಂದದ್ದು ಎಸ್ಸೆಸ್ಸೆಫ್ ಎಂದು ನನ್ನ ನೆನಪು. 1989ರಲ್ಲಿ ರಾಜ್ಯದಲ್ಲಿ ಸ್ವತಂತ್ರ ನೋಂದಣೆಗೊಂಡ ಎಸ್ಸೆಸ್ಸೆಫ್ 2004ರಲ್ಲಿ ಕ್ರಿಸ್ಟಲ್ ಹಬ್ಬದ ಸಂಭ್ರಮ. 1999ರ ಐತಿಹಾಸಿಕ ದಶಮಾನೋತ್ಸವ ಕಳೆದ ನಂತರ ರಾಜ್ಯಾದ್ಯಂತ ಸಂಘಟನೆ ಬಲಿಷ್ಠವಾಗ ತೊಡಗಿತ್ತು. ದಕ್ಷಿಣದ ಕೆಲವು ಜಿಲ್ಲೆಗಳನ್ನು ಗುರಿಯಾಗಿಸಿ ನಾವು ಸಂಘ ಸಬಲೀಕರಣ ಪ್ರಕ್ರಿಯೆಯಲ್ಲಿ ತೊಡಗಿದ್ದೆವು. ಈ ಮಧ್ಯೆ ಸಂಘಟನೆಯ ಹದಿನೈದನೇ ವಾರ್ಷಿಕ ಹಾದು ಬಂದದ್ದು ಈ ಪ್ರಕ್ರಿಯೆಗೆ ಚುರುಕು ಮುಟ್ಟಿಸಿತ್ತು. ಸುನ್ನೀ ಚಳವಳಿಗೆ ಸ್ಫಟಿಕ ಸ್ಪರ್ಶ ಕೊಡುವುದಕ್ಕಾಗಿ 2004ರಲ್ಲಿ ಕ್ರಿಸ್ಟಲ್ ಜುಬಿಲೀ ಘೋಷಿಸಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಕೆ.ಸಿ.ರೋಡ್ ಮಸೀದಿ ಕೊಠಡಿಯಲ್ಲಿ ಈ ಬಗ್ಗೆ ಸೇರಿದ ಸಭೆಯಲ್ಲಿ ಹುಸೈನ್ ಸಅದಿ ಉಸ್ತಾದರು ಅಧ್ಯಕ್ಷರಾಗಿ ಆರಿಸಿದ ಸ್ಫಟಿಕೋತ್ಸವ ಆಚರಣೆ ಸಮಿತಿಗೆ ನಾನು ಪ್ರಧಾನ ಸಂಚಾಲಕನಾಗಿದ್ದೆ.

ಅನಂತರದ ದಿನಗಳಲ್ಲಿ 15 ವರ್ಷ ತುಂಬುವ ಸಂಘ ಸಂಸ್ಥೆಗಳು ಸ್ಫಟಿಕ ಮಹೋತ್ಸವ ಎನ್ನುವ ಪ್ರಯೋಗವನ್ನು ಜಾರಿಗೆ ತಂದಿತ್ತು. ಜುಬಿಲೀ ಎಂಬ ಇಂಗ್ಲೀಷ್ ಪದಕ್ಕೆ ವಾರ್ಷಿಕೋತ್ಸವ ಎಂಬ ಅರ್ಥವಿದ್ದು ಪ್ರಥಮ ವರ್ಷಕ್ಕೆ ಪೇಪರ್ ಜುಬಿಲೀ (ಕಾಗದೋತ್ಸವ) ದ್ವಿತೀಯ ವರ್ಷಕ್ಕೆ ಕಾಟನ್ ಜುಬಿಲಿ (ಹತ್ತಿ ಉತ್ಸವ) ಮೂರನೇ ವಾರ್ಷಿಕಕ್ಕೆ ಲೆದರ್ ಜುಬಿಲೀ (ಚರ್ಮೋತ್ಸವ) ಹೀಗೇ ಮುಂದುವರಿದು ಐದನೇ ವಾರ್ಷಿಕಕ್ಕೆ ವುಡ್ ಜುಬಿಲೀ (ಮರೋತ್ಸವ) ಹತ್ತನೇ ವರ್ಷಕ್ಕೆ ಟಿನ್ ಜುಬಿಲೀ (ತವರೋತ್ಸವ) ಹದಿನೈದನೇ ವರ್ಷಕ್ಕೆ ಕ್ರಿಸ್ಟಲ್ ಜುಬಿಲೀ (ಸ್ಫಟಿಕೋತ್ಸವ) ಎನ್ನಲಾಗುತ್ತಿದೆ.

ಮನುಷ್ಯನಿಗೆ ಪ್ರಾಯ ಪೂರ್ತಿಯಾಗಲು ಸಾಮಾನ್ಯ ಲೆಕ್ಕ ಹಾಕುವ ಹದಿನೈದು ವರ್ಷ ಸಂಘ -ಸಂಸ್ಥೆಗಳ ಬೆಳವಣಿಗೆಯಲ್ಲೂ ಮಹತ್ತರವೆನಿಸುತ್ತದೆ.

2001 ಜನವರಿ 26ರಂದು ನಾಡಿನ ಶಿಕ್ಷಣ ಚಳುವಳಿಯ ಹರಿಕಾರ ಸುಲ್ತಾನುಲ್ ಉಲಮಾ ಎ.ಪಿ.ಉಸ್ತಾದರ ಪವಿತ್ರ ಹಸ್ತದಿಂದ ಶಿಲಾನ್ಯಾಸ ಮಾಡಲ್ಪಟ್ಟ ನಮ್ಮ ಸಂಸ್ಥೆ ಮರ್ಕಝುಲ್ ಹುದಾ ಹದಿನೈದನೇ ವಾರ್ಷಿಕಕ್ಕೆ ಕಾಲಿಟ್ಟ ಹಿನ್ನೆಲೆಯಲ್ಲಿ ನಾವೂ ಸ್ಫಟಿಕ ಹಬ್ಬಕ್ಕೆ ಸಿದ್ಧತೆಗಳನ್ನು ಮಾಡಿಕೊಂಡೆವು.

ಡಿಸೆಂಬರ್ ಏಳರಂದು ಮಲಪ್ಪುರಂ ಜಿಲ್ಲೆಯ 'ನಿರಮರುದೂರು' ಎಂಬಲ್ಲಿ ಮರ್ಕಝ್ ಕಾರಂದೂರ್ ಸಮ್ಮೇಳನದ ಪ್ರಚಾರಾರ್ಥ ನನಗೊಂದು

ಕಾರ್ಯಕ್ರಮವಿತ್ತು. ನಿರಮರುದೂರು ಬೀರಾನ್ ಕುಟ್ಟಿ ಮುಸ್ಲಿಯಾರ್ ಎಂಬ ಪ್ರಗಲ್ಭ ವಿದ್ವಾಂಸರು ನನ್ನ ತಂದೆಯ ಪ್ರಮುಖ ಉಸ್ತಾದ್ ಆಗಿದ್ದು, ತಂದೆ ಆಗಾಗ ಅವರನ್ನು ಸ್ಮರಿಸುತ್ತಿದ್ದರು. ತಂದೆಯ ಜತೆ ಅವರ ಖಬ್‌ರ್ ಝಿಯಾರತ್‌ಗೆ ಹಿಂದೆ ತೆರಳಿದ ನೆನಪಿದೆ.

ಸಮಸ್ತದ ಅಧೀನದಲ್ಲಿ ಹಿಂದಿನ ಕಾಲದಲ್ಲಿ ಪ್ರಸಿದ್ಧ ವಿದ್ಯಾಸಂಸ್ಥೆಯಾಗಿ ಬೆಳೆದು ಬಂದಿದ್ದ 'ಇಸ್‌ಲಾಹುಲ್ ಉಲೂಂ ಅರಬಿಕ್ ಕಾಲೇಜ್' ಮಲಪ್ಪುರಂ ಜಿಲ್ಲೆಯ ತಾನೂರ್ ಎಂಬಲ್ಲಿತ್ತು. ಅಲ್ಲಿ ಶಂಸುಲ್ ಉಲಮಾ ಇ.ಕೆ.ಉಸ್ತಾದ್, ಕೆ.ಕೆ.ಅಬೂಬಕರ್ ಹಝ್ರತ್ ಮುಂತಾದವರು ಮುದರ್ರಿಸ್ ಆಗಿದ್ದರು. ಆ ವೇಳೆ ಅಲ್ಲಿನ ಪ್ರಮುಖ ಮುದರ್ರಿಸ್ ಆಗಿದ್ದವರು ಬೀರಾನ್ ಕುಟ್ಟಿ ಮುಸ್ಲಿಯಾರ್. ಕರ್ಮಶಾಸ್ತ್ರದಲ್ಲಿ ಅಗಾಧ ಜ್ಞಾನ ಹೊಂದಿದ್ದ ಇವರು ಸಮಸ್ತ ಮುಫ್ತಿ ಎಂಬ ಹೆಸರಲ್ಲಿ ಪ್ರಸಿದ್ಧರಾಗಿದ್ದರು. ತಂದೆಯವರು ಇವರ ಬಗ್ಗೆ ಆಗಾಗ ಉಲ್ಲೇಖಿಸುತ್ತಿದ್ದರಿಂದ ಇವರ ಮೇಲೆ ನನಗೂ ಅಭಿಮಾನ ಮೂಡಿತ್ತು. ಅದೇ ಬೀರಾನ್ ಕುಟ್ಟಿ ಮುಸ್ಲಿಯಾರರು ಅಂತ್ಯ ವಿಶ್ರಾಂತಿ ಹೊಂದುತ್ತಿರುವ ಮಸೀದಿ ಸಮೀಪದ ಎಸ್ಸೆಸ್ಸೆಫ್ ಸಮ್ಮೇಳನದಲ್ಲಿ ಭಾಷಣ ಮಾಡಿದಾಗ ಮನಸ್ಸು ಹಳೆಯ ನೆನಪುಗಳನ್ನು ಹುಡುಕಿ ಸಂಚರಿಸುತ್ತಿತ್ತು. ಹಿಂದೆ ತಂದೆಯ ಜತೆ ಝಿಯಾರತ್‌ಗೆ ಬಂದಿದ್ದಾಗ ಭೇಟಿಯಾಗಿದ್ದ ಅವರ ಮಗ, ವಿದ್ವಾಂಸ ಈಗ ಗೊಂದಲವಾದಿ ಸಮಸ್ತದವರ ಜತೆ ಗುರುತಿಸ ಹೊರಟಿದ್ದು ಸ್ಥಳೀಯರಿಗೆ ಬೇಸರ ತರಿಸಿತ್ತು. ಹಿಂದೆ ಅವರು ಸಕ್ರಿಯ ಸುನ್ನೀ ಕಾರ್ಯಕರ್ತರೂ, ಸ್ಥಳೀಯ ನಾಯಕರೂ ಆಗಿದ್ದರು. ಶಂಸುಲ್ ಉಲಮಾ ಇ.ಕೆ., ಕೆ.ಕೆ. ಹಝ್ರತ್, ಕೂಟ್ಟನಾಡ್, ಕೆ.ವಿ.ಉಸ್ತಾದ್ ಹಾಗೂ ಒ.ಕೆ. ಝೈನುದ್ದೀನ್ ಮುಸ್ಲಿಯಾರ್, ತಾಜುಲ್ ಉಲಮಾ ರಂತಹ ಘಟಾನುಘಟಿಗಳ ಶಿಷ್ಯತ್ವದಲ್ಲಿ ದರ್ಸ್ ಕಲಿತ ನನ್ನ ತಂದೆ, ತಾನೂರಿನಲ್ಲಿ ಓದುತ್ತಿದ್ದ ವೇಳೆ ಪಟ್ಟಿಕ್ಕಾಡ್ ಜಾಮಿಅ ನೂರಿಯಾ ಪ್ರಾರಂಭವಾಯಿತಂತೆ, ತನ್ನ ಸಹಪಾಠಿಗಳೆಲ್ಲ ಅಲ್ಲಿಗೆ ಪದವಿ ಪಡೆಯಲು ಹೊರಟಾಗ, 'ಫೈಝಿ' ಆಗುವ ಹಂಬಲದಿಂದ ಬೀರಾನ್ ಕುಟ್ಟಿ ಮುಸ್ಲಿಯಾರ್ ಬಳಿ ಅಲ್ಲಿಗೆ ತೆರಳಲು ಅನುಮತಿ ಕೇಳಿದಾಗ, ಪಾರಂಪರ್ಯ ದರ್ಸ್ ವ್ಯವಸ್ಥೆಯಿಂದ 'ಕಾಲೇಜು' ಎನ್ನುವ ಹೊಸ ವ್ಯವಸ್ಥೆಗೆ ಧಾರ್ಮಿಕ ವಿದ್ಯಾ ಕೇಂದ್ರಗಳು ಸಂಚರಿಸುವ ಹೊಸ ವಿಧಾನವನ್ನು ಅರಗಿಸಿಕೊಳ್ಳಲಾಗದ ಹಿರಿಯ, ನಿಷ್ಕಳಂಕ ವಿದ್ವಾಂಸರು ತಂದೆಯನ್ನು ನಿರುತ್ಸಾಹಪಡಿಸಿದರಂತೆ, ಉಸ್ತಾದರ ಪೂರ್ಣ ಅನುಮತಿಯಿಲ್ಲದ ಮೇಲೆ ಪದವಿ ಗಳಿಕೆಯ ಆಸೆಯನ್ನು ತಾನು ಕೈ ಬಿಟ್ಟಿದ್ದಾಗಿ ತಂದೆ ಹೇಳುತ್ತಿದ್ದರು. ಒಂದು ಕಡೆಯಲ್ಲಿ ಧಾರ್ಮಿಕವಾಗಿ ಉನ್ನತ ಡಿಗ್ರಿ ಗಳಿಕೆಯ ಸನ್ನಿವೇಶ ತಪ್ಪಿ ಹೋದ ದುಃಖವಿದ್ದರೂ ಮತ್ತೊಂದೆಡೆ ಉಸ್ತಾದರನ್ನು ಸಂಪೂರ್ಣ ಅನುಸರಣೆ ಮಾಡಿ ಅವರ ಬಳಿಯಲ್ಲೇ ಮತ್ತಷ್ಟು ಕಾಲ ಕಲಿತು ಮುಂದುವರಿದು ಅವರ ಸಂಪೂರ್ಣ ಆಶೀರ್ವಾದ ಪಡೆದ ತೃಪ್ತಿಯು ತಂದೆಯ ಮಾತುಗಳಲ್ಲಿತ್ತು. ನಿರಮರದೂರಿನ ಭಾಷಣ ಮುಗಿದು ಮರುದಿನ ಅವರ ಖಬ್‌ರ್ ಝಿಯಾರತ್‌ಗೆ ತೆರಳಿದಾಗ ಹಳೆಯ ನೆನಪುಗಳೆಲ್ಲ ಒಂದರ ಹಿಂದೆ ಒಂದರಂತೆ ಹಾದು ಬಂದು ಮನಸ್ಸು ಭಾರವಾಯಿತು.

ಇದೇ ತಾನೂರ್ ದರ್ಸ್‌ದಲ್ಲಿ ತಂದೆಯ ಆತ್ಮಮಿತ್ರನಾಗಿದ್ದ ಕುಂಞಿ ಮೋನು ಮುಸ್ಲಿಯಾರನ್ನು ಈ ಯಾತ್ರೆಯಲ್ಲಿ ಸಂದರ್ಶಿಸಿದೆ. ಕೇರಳದಲ್ಲಿ ನಕ್ಷಬಂದೀ ಆಧ್ಯಾತ್ಮಿಕ ಸರಣಿಯನ್ನು ಪರಿಚಯಿಸಿದ ಅಬ್ದುರ್ರಹ್ಮಾನ್ ಶೈಖ್‌ರ ಮಖ್‌ಬರ ತಾನೂರ್ ಶೈಖ್ ಪಳ್ಳಿ ವಠಾರದಲ್ಲಿದ್ದು, ಕುಂಞಿಮೋನ್ ಮುಸ್ಲಿಯಾರ್, ಶೈಖ್‌ನ ಪರಂಪರೆಯಲ್ಲಿ ಜನಿಸಿ ಅವರ ಆಧ್ಯಾತ್ಮ ಸ್ಮರಣೆಯನ್ನು ಪ್ರಚಾರ ಮಾಡುವುದರಲ್ಲಿ ತಲ್ಲೀನರಾದ ವ್ಯಕ್ತಿಯಾಗಿದ್ದರು. ನಕ್ಷಬಂದೀ ತ್ವರೀಖತ್‌ನ ಕೆಲವೇ ಖಲೀಫರುಗಳಲ್ಲಿ ಇವರು ಒಬ್ಬರಾಗಿದ್ದು ನನಗೆ ಅದಕ್ಕೆ ಸಂಬಂಧಿಸಿದ ದ್ವಿಕ್ರ್‌ಗಳನ್ನು ನೀಡಿ ಅನುಗ್ರಹಿಸಿದರು.

ವರ್ಷಗಳ ಹಿಂದೆ ಆಧ್ಯಾತ್ಮ ಪುರುಷ ವಲಿಯುಲ್ಲಾಹಿ ಕುಂಡೂರ್ ಅಬ್ದುಲ್ ಖಾದರ್ ಮುಸ್ಲಿಯಾರ್‌ರನ್ನು ಸಂದರ್ಶಿಸಿದಾಗ ಅಲ್ಲಿ ಕೆಲವರು ಬಂದು ತಮ್ಮ ಸಂಸ್ಥೆಗೆ ಒಂದು ಹೆಸರು ಕೊಡಬೇಕೆಂದು ಅಪೇಕ್ಷೆ ನೀಡುತ್ತಿದ್ದರು. ಅವರಿಗೆ ಕುಂಡೂರ್ ಉಸ್ತಾದ್ ಅವತ್ತು ನೀಡಿದ ಹೆಸರು 'ಇಸ್‌ಮತುದ್ದೀನ್' ಎಂಬುದಾಗಿತ್ತು. ವರ್ಷಗಳ ನಂತರ ನಿರಮರುದೂರು ಭಾಷಣ ಮುಗಿಸಿ ನಾನು ತಂಗಲು ಹೋದದ್ದು ಅವತ್ತು ಕುಂಡೂರ್ ಉಸ್ತಾದ್ ಹೆಸರಿದ್ದ ಇಸ್‌ಮತುದ್ದೀನ್ (ಧರ್ಮದ ಸಂರಕ್ಷಣೆ) ಎಂಬ ಸಂಸ್ಥೆಯಲ್ಲಿ ಎಂದು ತಿಳಿದಾಗ ಅಪಾರ ಸಂತೋಷವಾಗಿತ್ತು. ಈ ಸಂಸ್ಥೆಯ ನಾಮಕರಣ ಪ್ರಕ್ರಿಯೆಯಲ್ಲಿ ಕುಂಡೂರ್ ಉಸ್ತಾದರ ಸಮ್ಮುಖದಲ್ಲಿ ನಾನೂ ಇದ್ದೆ ಎಂದು ಹೇಳಿದಾಗ ಅವರಿಗೂ ಖುಷಿ. ಆ ವೇಳೆ ನನ್ನ ಜತೆಗಿದ್ದ ಮಿತ್ರ ಕೆಕೆಎಂ ಕಾಮಿಲ್ ಸಖಾಫಿ ಮುಂದೆ ತನಗೆ ಹೆಣ್ಣು ಮಗು ಜನಿಸಿದಾಗ ಕುಂಡೂರ್ ಉಸ್ತಾದರ ಸ್ಮರಣಾರ್ಥ ಅದೇ 'ಇಸ್‌ಮತ್' ಎಂದು ಹೆಸರಿಟ್ಟಿದ್ದರು. ಇಸ್‌ಮತುದ್ದೀನ್ ಹೆಸರಿನ ಈ ಸಂಸ್ಥೆಯು ಮಲಪ್ಪುರಂ ಜಿಲ್ಲೆಯ ತಾನೂರ್ ಸಮೀಪ ಕಾಳಾಡ್ ಎಂಬಲ್ಲಿದೆ. ಈ ಸಂಸ್ಥೆಗೆ ತಾಗಿ ಕೊಂಡಿರುವ ಬೃಹತ್ ಮಸೀದಿಯಲ್ಲಿ ಈಗಿನ ಕೇರಳ ರಾಜ್ಯ ಎಸ್ಸೆಸ್ಸೆಫ್ ಅಧ್ಯಕ್ಷ ಎನ್.ವಿ.ಅಬ್ದುರ್ರಝಾಖ್ ಸಖಾಫಿ ಮುದರ್ರಿಸ್ ಆಗಿ ಸೇವೆ ಮಾಡುತ್ತಿದ್ದಾರೆ.

ಡಿಸೆಂಬರ್ 9 ಮಂಗಳವಾರ ನನಗೆ ಚೆಮ್ಮಾಡ್ ಪೇಟೆಯಲ್ಲಿ ಕಾರ್ಯಕ್ರಮವಿತ್ತು. 1999ರಿಂದಲೇ ನನಗೆ ಚೆಮ್ಮಾಡ್ -ತಿರುರಂಗಾಡಿ ಪ್ರದೇಶದ ಜತೆ ಆತ್ಮ ಬಂಧವಿದೆ. 1991ರಲ್ಲಿ ನನ್ನ ದರ್ಸ್ ಜೀವನಕ್ಕೆ ತಿರುವು ನೀಡಿದ ನೂರುಲ್ ಹುದಾ ಅರಬಿಕ್ ಕಾಲೇಜ್ ಹಾಗೂ ಅಲ್ಲಿನ ನನ್ನ ಪ್ರಮುಖ ಗುರು ಶೈಖುನಾ ಬಾಪು ಮುಸ್ಲಿಯಾರ್ ಚೆಮ್ಮಾಡ್ ಸಮೀಪದ ತಿರೂರಂಗಾಡಿಯಲ್ಲಿರುವುದರಿಂದ ಕಳೆದ ಕಾಲು ಶತಕಗಳಿಂದ ನನಗೆ ಆ ಪ್ರದೇಶ ಅಚ್ಚು ಮೆಚ್ಚಿನದ್ದು.

ಚೆಮ್ಮಾಡ್ ಕಾರ್ಯಕ್ರಮ ಅಲ್ಲಿನ ತಾಜ್ ಆಡಿಟೋರಿಯಂ ಎಂಬ ವೈಭವದ ಸಭಾಂಗಣ ದಲ್ಲಿತ್ತು. ಸಭಾಂಗಣದ ಮುಂದಿನ ಸಾಲುಗಳಲ್ಲಿ ಕುಳಿತಿದ್ದ ಸಮವಸ್ತ್ರದ ನೂರಾರು ಮುತಅಲ್ಲಿಮರನ್ನು ಕಂಡಾಗ ಅಚ್ಚರಿಯೆನಿಸಿತ್ತು. ವಿಚಾರಿಸಿ ನೋಡಿದರೆ ಅವರೆಲ್ಲ ಚೆಮ್ಮಾಡ್ ಪೇಟೆಯ ಸುನ್ನೀ ಜುಮಾ ಮಸ್ಜಿದ್‌ನಲ್ಲಿ ಮಾತ್ರ ಕಲಿಯುವ ವಿದ್ಯಾರ್ಥಿಗಳಾಗಿ ದ್ದರು. ಯುವ-ಉತ್ಸಾಹಿ ವಿದ್ವಾಂಸ ಕೈಪಮಂಗಲಂ ಜಲ್‌ಫರ್ ಸಖಾಫಿಯು ಮುದರ್ರಿಸ್ ಆಗಿರುವ ಅಲ್ಲಿ ಕೇವಲ ದರ್ಸ್ ಮಾತ್ರ ಕಲಿಯುವ (ಶಾಲೆಗೆ ಹೋಗದ) ಇನ್ನೂರ ಐವತ್ತು ಮುತಅಲ್ಲಿಮರಿದ್ದಾರೆ ಎಂದು ತಿಳಿದಾಗ ಪರಮಾಶ್ಚರ್ಯವೆನಿಸಿದ್ದು ನಿಜ. ದರ್ಸ್ ಅವನತಿಯ ಅಂಚಿನಲ್ಲಿರುವಾಗಲೂ ಒಂದೇ ಕಡೆ 250 ರಷ್ಟು ವಿದ್ಯಾರ್ಥಿಗಳು ದರ್ಸ್ ಕಲಿಯುತ್ತಿದ್ದಾರೆ ಎಂದರೆ ಅದೊಂದು ವಿಶೇಷವೇ ಸರಿ. ಜಲ್‌ಫರ್ ಸಖಾಫಿಯಲ್ಲಿ ಈ ಬಗ್ಗೆ ಮಾತನಾಡುತ್ತಿದ್ದಾರೆ ತನ್ನ ದರ್ಸ್‌ನಲ್ಲಿ ಶ್ರೀಮಂತರ ಮಕ್ಕಳು, ಕಾಲೇಜ್, ಡಿಗ್ರಿ, ಪಿ.ಜಿ. ಇರುವವರು, ವೃತ್ತಿಪರ ಶಿಕ್ಷಣ ಪಡೆದವರು ಮುಂತಾದ ವಿವಿಧ ವಿಧದ ವಿದ್ಯಾರ್ಥಿಗಳಿದ್ದು ಕೇವಲ ದರ್ಸ್ ಕಲಿಕೆಗಾಗಿ ಮಾತ್ರ ಅಲ್ಲಿರುವುದಾಗಿ ತಿಳಿಸಿದರು. ದರ್ಸ್

ಜ್ಞಾನದ ಮಹತ್ವದ ಬಗ್ಗೆ ತಾನು ಹೋದಲ್ಲೆಲ್ಲಾ ನಿರಂತರ ಜಾಗೃತಿ ಮೂಡಿಸುತ್ತಿದ್ದು ಸಮಾಜದ ಗಣ್ಯರೇ ತಮ್ಮ ಮಕ್ಕಳನ್ನು ದರ್ಸ್ ಕಲಿಯಲು ಪ್ರೇರೇಪಿಸಲು ತನ್ನ ಜಾಗೃತಿ ಅಭಿಯಾನ ಸಹಕಾರಿಯಾಗಿದೆ ಎಂದರು. ಈ ರೀತಿ ಎಲ್ಲ ವಿದ್ವಾಂಸರೂ, ಸಂಘಟನೆಗಳೂ ನಿರಂತರ ಶ್ರಮಿಸಿದರೆ ಅವನತಿಯಲ್ಲಿದೆ ಎಂದು ನಾವು ಭಾವಿಸುವ 'ಪಳ್ಳಿದರ್ಸ್' ಗಳನ್ನು ಮತ್ತೆ ಹಳಿಗೆ ತರಲು ಸುಲಭ ಸಾಧ್ಯ ಎಂದು ಭಾವಿಸೋಣ!?

# 40

'ಭಾಷಣ ಬದುಕು ಕಾಲಂ ಅನ್ನು ಇಲ್ಲಿಗೆ ಕೊನೆಗೊಳಿಸುತ್ತಿದ್ದೇನೆ ಇತಿ ಧನ್ಯವಾದಗಳು...

1991ರಲ್ಲಿ ಪ್ರಾರಂಭಿಸಿದ ಸಾರ್ವಜನಿಕ ಭಾಷಣ 2015ಕ್ಕೆ ಬಂದು ತಲುಪಿದಾಗ ಅದಕ್ಕೆ ಬೆಳ್ಳಿ ಹಬ್ಬದ ಸಂಭ್ರಮ. ಈ ಸುದೀರ್ಘ ಇಪ್ಪ ತ್ತೈದು ವರ್ಷಗಳಲ್ಲಿ ದೇಶವಿದೇಶಗಳಲ್ಲಿ ಸಾವಿ ರಾರು ಭಾಷಣಗಳನ್ನು ಮಾಡಿದ್ದೇನೆ. ಜೀವನ ದಲ್ಲಿ ಅತ್ಯಂತ ಕೆಟ್ಟ ಭಾಷಣವೆಂದು ನಾನೇ ಬರೆದಿಟ್ಟ ಉಪ್ಪಳ ಸಮೀಪದ 'ವತ್ತುಪಾಡ್' ಎಂಬಲ್ಲಿನ ಎರಡು ದಿನಗಳ 'ಉಪನ್ಯಾಸ' ಗಳಿಂದ ತೊಡಗಿ ವಿಶ್ವವಿಖ್ಯಾತ ಮರ್ಕಝು ಸ್ಸಖಾಫತಿಸ್ಸುನ್ನಿಯ್ಯಃದ ಇಪ್ಪತ್ತೈದನೇ ವಾರ್ಷಿಕ ಮಹಾ ಸಮ್ಮೇಳನದ ದ್ಸಿಕ್ರ್ ಹಲ್ಖಾ ಸಮಾರಂಭದಲ್ಲಿ ಲಕ್ಷಾಂತರ ಜನರ ಮುಂದೆ ನಡೆಸಿದ ಭಾಷಣದ ತನಕ ವಿವಿಧ ರೀತಿಯ ಭಾಷಣಗಳು ಇದರಲ್ಲಿ ಸೇರಿದೆ. ಆದರೆ ಯಾ ವತ್ತೂ ನಾನೊಬ್ಬ ಅಪ್ರತಿಮ ವಾಗ್ಮಿಯೆಂದು ಉಳಿದವರಿಗೆ ಅನಿಸದ ಹಾಗೇ ನನಗೂ ಅನಿಸಲಿಲ್ಲ. ಆದರೆ ಭಾಷಣ ಕ್ಷೇತ್ರದಲ್ಲಿ ಅಪರಿಮಿತ ಅವಕಾಶಗಳಿದ್ದರೂ ಅವು ಯಾವುದನ್ನೂ ಸರಿಯಾದ ನೆಲೆಯಲ್ಲಿ ಉಪಯೋಗ ಪಡಿಸಿಕೊಳ್ಳಲು ಸಾಧ್ಯವಾ ಗಲಿಲ್ಲವಲ್ಲಾ ಎಂಬ ಕೊರಗು ಯಾವತ್ತೂ ಕಾಡುತ್ತಿತ್ತು.

ಧರ್ಮಬೋಧನೆಯಲ್ಲೂ ಸಂದೇಶ ಪ್ರಚಾರದಲ್ಲೂ 'ಭಾಷಣ'ಕ್ಕಿರುವ ಪ್ರಭಾವ ಯಾರಿಗೂ ವಿವರಿಸಬೇಕೆಂದಿಲ್ಲ. ಜಗತ್ತಿನ ಪ್ರಮುಖ ಘಟನಾವಳಿಗಳ ಹಿಂದೆ ಪ್ರಮುಖ ಭಾಷಣಗಳು ವಹಿಸಿದ ಪಾತ್ರಗಳನ್ನು ಮರೆ ಯಲು ಅಸಾಧ್ಯ. ಎರಡನೇ ಜಾಗತಿಕ ಮಹಾ ಯುದ್ಧದಲ್ಲಿ ಜನರನ್ನು ಹುರಿದುಂಬಿಸಿ, ಯೋಧರಿಗೆ ಧೈರ್ಯ ತುಂಬಿ, ಬ್ರಿಟನನ್ನು ವಿಜಯದತ್ತ ಕೊಂಡೊಯ್ಯುವ ಏಕ ಉದ್ದೇ ಶದೊಂದಿಗೆ ವಾಗ್ಮಿಯಾಗಿದ್ದ ವಿನ್ಸೆಂಟ್ ಚರ್ಚಿಲ್ ಅವರನ್ನು ಬ್ರಿಟನ್ ತನ್ನ ಪ್ರಧಾನ ಮಂತ್ರಿ ಪದವಿಗೆ ಏರಿಸಿಕೊಂಡಿತ್ತು. ಅದರಲ್ಲಿ ಅವರು ಗುರಿ ಸಾಧಿಸಿಕೊಂಡಿದ್ದರು ಕೂಡಾ!

ಮೊಗಲ್ ಅರಸನಾಗಿದ್ದ ಅಕ್ಬರ್ ಚಕ್ರ ವರ್ತಿ 'ದೀನ್ ಇಲಾಹಿ' ಎಂಬ ಹೊಸ 'ಮತ' ವೊಂದನ್ನು ಹುಟ್ಟು ಹಾಕಿದಾಗ ಅದನ್ನು ಜನರ ಮಧ್ಯೆ ಪ್ರಚಾರ ಪಡಿಸಿ ಸಾಮಾನ್ಯರನ್ನು ಸೆಳೆಯಲು ಆತನಿಗೆ ಸಾಧ್ಯವಾಗದ್ದು ವಾಗ್ಮಿ ಗಳ ಕೊರತೆಯ ಕಾರಣದಿಂದಾಗಿತ್ತು ಎಂದು ಇತಿಹಾಸ ತಜ್ಞರು ವಿಶ್ಲೇಷಿಸಿದ್ದಾರೆ.

ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲ ಮರ ಭಾಷಣಗಳು ಪ್ರಪಂಚದ ಸ್ಥಿತಿಗತಿ ಯನ್ನೇ ಬದಲಾಯಿಸಿದ್ದಕ್ಕೆ ಇತಿಹಾಸವೇ ಸಾಕ್ಷಿಯಿದೆ.

ಶೈಖ್ ಜೀಲಾನಿ(ﷻ), ಶೈಖ್ ಅಹ್ಮದ್ ಸರ್‌ಹಿಂದೀ(ﷻ) ಮುಂತಾದವರ ಭಾಷಣ ಗಳು ಮುಂದೆ ಗ್ರಂಥ ರೂಪ ತಾಳಿ ನೂರಾರು ವರ್ಷಗಳ ನಂತರವೂ ಜನರನ್ನು ಜಾಗೃತಿ ಗೊಳಿಸುತ್ತಿದೆ.

ನಮ್ಮ ಪ್ರದೇಶದಲ್ಲಿ ಸುನ್ನೀ ಚಳವಳಿ ಯನ್ನು ಪರಿಣಾಮಕಾರಿಯಾಗಿ ಸಂಘಟಿಸು ವಲ್ಲಿ ಶೈಖುನಾ ಎ.ಪಿ. ಉಸ್ತಾದ್, ಪೇರೋ ಡ್ ಉಸ್ತಾದ್ ಮುಂತಾದವರ ಭಾಷಣಗಳು ವಹಿಸಿದ ಪ್ರಭಾವಕ್ಕೆ ನಾವೆಲ್ಲ ಜೀವಂತ ಸಾಕ್ಷಿ ಗಳಾಗಿದ್ದೇವೆ. ಇ.ಕೆ. ಹಸನ್ ಮುಸ್ಲಿಯಾರ್, ಇ.ಕೆ. ಅಬೂಬಕರ್ ಮುಸ್ಲಿಯಾರ್, ವಾಣಿಯಂಬಲಂ ಅಬ್ದುರ್ರಹ್ಮಾನ್ ಮುಸ್ಲಿ ಯಾರ್, ಪಾಂಙಿಲ್ ಅಹ್ಮದ್ ಕುಟ್ಟಿ ಮುಸ್ಲಿ ಯಾರ್ ಮುಂತಾದವರು 'ಸಮಸ್ತ' ಸಂಘಟ ನೆಯನ್ನು ಬಲಪಡಿಸುವುದಕ್ಕೆ ತಮ್ಮ ವಾಗ್ವಿಲಾಸವನ್ನು ಆಯುಧವಾಗಿ ಬಳಸಿ ಹೋರಾಟ ನಡೆಸಿದ್ದರು.

ನನ್ನ ಭಾಷಣ ಬದುಕಿಗೆ ಇಪ್ಪತ್ತೈದು ವರ್ಷ ತುಂಬಿತು ಎನ್ನುವಾಗ ಈ ಇತಿಹಾಸವೆಲ್ಲ ನೆನಪಾಗಿ, ಇನ್ನಷ್ಟು ಪ್ರಯೋಜನಕಾರಿಯಾಗಿ ನನ್ನ ಕೌಶಲ್ಯವನ್ನು ಬೆಳೆಸಬಹುದಿತ್ತು ಅನ್ನಿ ಸುತ್ತಿರುವುದು ನಿಜ.

1991ರಲ್ಲಿ ನಾನು ತಿರೂರಂಙಾಡಿ ನೂರುಲ್ ಹುದಾ ಅರಬಿಕ್ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಮೊಟ್ಟ ಮೊದಲನೆಯ ದಾಗಿ ನಡೆಸಿದ 'ಪಬ್ಲೀಕ್ ಸ್ಪೀಚ್' ನೆನೆಸು ವಾಗ ಇಂದಿಗೂ ರೋಮಾಂಚನ. ಕಣ್ಣೂರು ಜಿಲ್ಲೆಯ (ಕೇರಳ) 'ಕೊಟ್ಟಿಪ್ಪೊಯಿಲ್' ಎಂಬಲ್ಲಿ ಮೀಲಾದ್ ಸಂದೇಶ ಭಾಷಣಕ್ಕಾಗಿ ನನ್ನ ಉಸ್ತಾದ್ ತಿರೂರಂಙಾಡಿ ಬಾಪು ಮುಸ್ಲಿಯಾರ್, ತನ್ನ ಅಳಿಯ ಮಹ್ ಮೂದ್ ಮಖ್‌ದೂಮಿ (ಬೆಂಗಳೂರು) ಅವರ ಅಪೇಕ್ಷೆಯಂತೆ ನನ್ನನ್ನು ಕಳಿಸಿಕೊಟ್ಟಿ ದ್ದರು. ಆ ದಿನ ನನಗೆ ಸಿಕ್ಕಿದ ಅವಕಾಶ ಮತ್ತು ಅಲ್ಲಿ ಸಿಕ್ಕಿದ್ದ ನೂರು ರೂಪಾಯಿ ಸಂಭಾವನೆ ಬದುಕನ್ನೇ ಬದಲಾಯಿಸಿದ ಬಗ್ಗೆ ಹಿಂದೆ ಬರೆದಿದ್ದೆ. ಅದೊಂದು ಸೆಪ್ಟಂಬರ್ 21 ಆಗಿದ್ದು ಆದಿನ ನನ್ನ ಹತ್ತೊಂಬತ್ತನೇ ಹುಟ್ಟು ಹಬ್ಬ ಕೂಡಾ ಆಗಿತ್ತು.

ನಾನು ಮೊದಲಬಾರಿ ಡೈರಿ ಖರೀದಿಸಿದ್ದು 3.12.1987, ಸಯ್ಯಿದ್ ಕೂರತ್ ತಂಙಳ್ ರವರ ಮದುವೆಗಾಗಿ ಎಟ್ಟಿಕ್ಕುಳಂ ಹೋಗಿ ಬರುವ ದಾರಿಯಲ್ಲಿ ಕುಂಬಳೆ ರಹ್ಮಾನಿಯ್ಯಃ ಬುಕ್ ಸ್ಟಾಲ್‌ನಿಂದ. ನೀಲಿ ಹೊದಿಕೆಯ ಪುಟ್ಟ ಶಾರಾದಾ ಡೈರಿಯಲ್ಲಿ 1988ರಲ್ಲಿ ದಿನಚರಿ ಬರೆಯುವ ಕ್ರಮ ಪ್ರಾರಂಭಿಸಿದೆ. ಆ ವರ್ಷ ಕುಂದಾಪುರ ಕೋಡಿ ದರ್ಸ್‌ನಲ್ಲಿ ನನ್ನ ಸಹಪಾಠಿಯಾಗಿದ್ದ ಹಸೈನಾರ್ ತ್ರಿಶೂರ್ ನನ್ನ ಡೈರಿ ಬರೆಯುವ ಚಾಳಿಗೆ ತುಂಬ ಪ್ರೋ ತ್ಸಾಹ ನೀಡಿದ. ಅಂದಿನಿಂದ ಇಂದಿನ ತನಕ ಪ್ರತಿದಿನದ ಆಗುಹೋಗುಗಳನ್ನು ಡೈರಿಯಲ್ಲಿ ನಮೂದಿಸುವ ಕೆಲಸ ಮಾಡುತ್ತಾ ಬಂದಿ ದ್ದೇನೆ. ಹಾಗೆ ಗುಡ್ಡೆ ಹಾಕಿದ ಹಳೆಯ ಡೈರಿ ಗಳನ್ನು ಕಾಣುವಾಗಲೆಲ್ಲ ಇದರ ನಮೂದು ಗಳನ್ನು ಲೇಖನ ಮಾಲೆಯಾಗಿ ಬರೆಯಬೇ ಕೆಂದು ಮನಸ್ಸು ಹಂಬಲಿಸುತ್ತಿತ್ತು. ಆದರೆ ಎಲ್ಲಿ? ಯಾವ ಪತ್ರಿಕೆಯವರು ನನ್ನ ವೈಯ ಕ್ತಿಕ ಪುರಾಣಗಳಿಗೆ ಪುಟ ಒದಗಿಸಿಯಾರು ಎಂದು ಯೋಚಿಸಿ ಮನಸ್ಸನ್ನು ನಿಯಂತ್ರಿ ಸುತ್ತಿದ್ದೆ.

ಒಮ್ಮೆ ಬಂಟ್ವಾಳ ತಾಲೂಕಿನ 'ಪುರುಷಂ ಗೋಡಿ' ಎಂಬಲ್ಲಿ ಒಂದು ಕಾರ್ಯಕ್ರಮಕ್ಕೆ ಹೋದಾಗ ಅಲ್ಲಿ ಖತೀಬ್ ಆಗಿದ್ದ ನನ್ನ ದರ್ಸ್ ಮತ್ತು ಕಾಲೇಜುಗಳಲ್ಲಿನ ಸಹಪಾಠಿ ಯೊಬ್ಬರು ಸ್ವಾಗತ ಭಾಷಣದಲ್ಲಿ ನನ್ನನ್ನು 'ನಮ್ಮೆಲ್ಲರ ಪುತ್ರ' ಎಂದು ಹೇಳಿ ಸ್ವಾಗತಿ ಸಿದ್ದರು. ಕೆಲವು ಕಡೆ ಕೆಲವರನ್ನು ಹೆಮ್ಮೆಯ ಪುತ್ರ, ವೀರ ಪುತ್ರ ಮುಂತಾಗಿ ಅಲಂಕಾರ ವಚನಗಳನ್ನು ಬಳಸಿ ಸ್ವಾಗತಿಸುವುದನ್ನು ಕೇಳಿ ಅದನ್ನು ನಕಲು ಮಾಡಲು ಹೋಗಿ ಆ ಮಿತ್ರ ಮೇಲಿನಂತೆ ಯಡವಟ್ಟು ಮಾಡಿಕೊಂ ಡಿದ್ದರು. ಈ ವಿಚಾರವನ್ನು ಅದರ ಮರುದಿನ ಮಿತ್ರ ಸಿದ್ದೀಖ್ ಮೋಂಟುಗೋಳಿಯವರಲ್ಲಿ ಹಂಚಿಕೊಂಡಾಗ ಭಾಷಣ ಬದುಕಿನ ಇಂತಹ ಸ್ವಾರಸ್ಯಕರ ಸನ್ನಿವೇಶಗಳನ್ನು ತಮ್ಮ ಸಂಪಾ ದಕತ್ವದಲ್ಲಿರುವ 'ಮೈಲಾಂಜಿ' ಪತ್ರಿಕೆಯಲ್ಲಿ ಬರೆಯುವಂತೆ ಒತ್ತಾಯಿಸತೊಡಗಿದರು.

ಇಂತಹ ವೈಯಕ್ತಿಕ ಸಂಗತಿಗಳನ್ನು ಮೈಲಾಂಜಿಯಂತಹ ಪ್ರಸಿದ್ಧ ಪತ್ರಿಕೆ ಯೊಂದಲ್ಲಿ ಬರೆಯುವ ಬಗ್ಗೆ ಯೋಚಿಸು ವಾಗ ಮನಸ್ಸು ಸಂಕೋಚ ಪಟ್ಟು ಹಿಂಜರಿ ಯುತ್ತಿತ್ತು. ಘಟನಾವಳಿಗಳನ್ನು ಉಲ್ಲೇಖಿ ಸುವ ವೇಳೆ ನಾನು... ನನ್ನ... ನನಗೆ... ಮುಂತಾದ ಪ್ರಯೋಗಗಳನ್ನು ಮಾಡುವಾಗ ಇದೆಲ್ಲಿ ಆತ್ಮ ಪ್ರಶಂಸೆಯ, ಸ್ವಯಂ ಕೊಂಡಾ ಟದ ಸಂಸ್ಕೃತಿಯಾದೀತೇ ಎಂದು ನೆನೆಸಿ ಲಜ್ಜೆಯಾಗುತ್ತಿತ್ತು. ಆದರೂ ಬರೆಯ ಬೇಕಲ್ಲಾ ಎಂದೆನಿಸಿ ಗಟ್ಟಿ ಮನಸ್ಸಿನಲ್ಲಿ ಬರೆಯುತ್ತಿದ್ದೆ. ಬರೆಯುತ್ತಾ ಹೋದಂತೆ ಹಲವರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗ ತೊಡಗಿತು. ನನ್ನ ಸಮಾರಂಭಗಳ ಸ್ವಾಗತ ಭಾಷಣಕಾರರು ಅಂಕಣವನ್ನು ಉಲ್ಲೇಖಿಸು ತ್ತಿದ್ದರು. ಅನೇಕ ಗಣ್ಯರು ಕೂಡಾ ಕಾಣಸಿ ಕ್ಕಾಗ ನಿಮ್ಮ 'ಆತ್ಮ ಕಥೆ' ತಾವು ಮೈಲಾಂ ಜಿಯಲ್ಲಿ ಓದಿ ಖುಷಿ ಪಡುವುದಾಗಿ ಹೇಳಿ ನನ್ನನ್ನು ಖುಷಿ ಪಡಿಸುತ್ತಿದ್ದರು. ಹಲವಾರು ಸಹೋದರಿಯರು ಕೂಡಾ ಪತ್ರಿಕೆಯ ಓದುಗರ ವಿಭಾಗಕ್ಕೆ ತಮ್ಮ ಪ್ರಶಂಸೆಯ ಪತ್ರಗಳನ್ನು ಕಳಿಸಿಕೊಡುತ್ತಿದ್ದರು. ಮುತ ಅಲ್ಲಿಮರು ಸಿಕ್ಕಾಗ ತಾವೀಗ ಡೈರಿ ಬರಹ ಪ್ರಾರಂಭಸಿದ್ದು, ಅದಕ್ಕೆ ಮೈಲಾಂಜಿಯ ಅಂಕಣವೇ ಪ್ರೇರಕವೆಂದಾಗ ಸಾರ್ಥಕ ಭಾವ ಮೂಡುತ್ತಿತ್ತು. ಆತ್ಮಕಥೆ ಬರೆಯಲು ಮಹಾತ್ಮರಾಗಬೇಕೆಂದಿಲ್ಲ. ಅದು ತೀರಾ ವಯಸ್ಸಾದ ಮೇಲೆಯೇ ಬರೆಯಬೇಕೆಂದಿಲ್ಲ. ಸಾಮಾನ್ಯಾತಿ ಸಾಮಾನ್ಯರೂ, ತಮ್ಮ ಕಿರಿ ವಯಸ್ಸಿನಲ್ಲೂ ತಮ್ಮ ಬದುಕನ್ನು ಬರೆಯ ಬಹುದೆಂದು ಮೇಲೆ ತಿಳಿಸಿದ ಪ್ರತಿಕ್ರಿಯೆ ಗಳಿಂದಾಗಿ ನಾನು ಕಂಡು ಕೊಂಡಿದ್ದೇನೆ.

ಹೀಗೇ ಅಂಕಣ ಬರೆಯುತ್ತಾ ನನಗೆ ಬರಹ ರಂಗದಲ್ಲೂ ಆಸಕ್ತಿ ಮೂಡತೊಡಗಿತು. ಭಾಷಣ ನೀಡುವುದು ತಕ್ಷಣದ ಪ್ರಭಾವ ವಾದರೆ ಬರಹಕ್ಕಿರುವ ಸ್ಥಾಯೀಭಾವವು ಬರಹಗಾರನ ಸಂದೇಶವನ್ನು ಹೆಚ್ಚು ಕಾಲ, ಹೆಚ್ಚು ಜನರಿಗೆ ತಲುಪಿಸುತ್ತದೆ. ಪದ ಪ್ರಯೋಗದಲ್ಲಿ, ಶಬ್ದಗಳ ಜೋಡನೆಯಲ್ಲಿ ಸಂದೇಹ ಬಂದರೆ ನಿಘಂಟುಗಳನ್ನೂ ಭಾಷಾ ಗ್ರಂಥಗಳನ್ನೂ ಅವಲಂಬಿಸಿ ಭಾಷಾ ಜ್ಞಾನ ವನ್ನೂ ಹೆಚ್ಚಿಸಿ ಕೊಳ್ಳಲು 'ಬರಹ' ಕಾರಣ ವಾಗುತ್ತದೆ. ಆದರೆ ಭಾಷಣಗಾರ ಭಾಷೆಗೆ ಅಷ್ಟು ಮಹತ್ವಕೊಡದೆ ತನ್ನ ಸಂದೇಶವನ್ನು ಕೇಳುಗರಿಗೆ ಮನದಟ್ಟಾಗಿಸಲು ಸ್ಥಳೀಯ, ಸಾಮಾನ್ಯ ಭಾಷೆಯನ್ನೇ ಅವಲಂಬಿಸುತ್ತಾನೆ. ಅಲ್ಲಿ ಭಾಷೆ ಬೆಳೆಯಲು ಅವಕಾಶವಿ ರುವುದಿಲ್ಲ.

*** *** *** ***

ಭಾಷಣ ಬದುಕು 2015ರಲ್ಲಿ ಇಪ್ಪತ್ತೈ ದನೇ ವರ್ಷಕ್ಕೆ ಪ್ರವೇಶಿಸಿದಾಗ ಜನವರಿ ಒಂದರಂದು ಕುವೈತ್‌ನಲ್ಲಿ ನಡೆದ ಬೃಹತ್ 'ಮೀಲಾದ್ ಸಮಾವೇಶ'ದಲ್ಲಿ ಅಲ್ಲಿನ ಕೆ.ಸಿ.ಎಫ್. ನಾಯಕರು ನನಗೆ 'ಭಾಷಣ ರತ್ನ' ಎಂಬ ಬಿರುದನ್ನು ಪ್ರದಾನ ಮಾಡಿದರು. 2015 ಸೆಪ್ಟಂಬರ್ 21 ರಂದು ನನ್ನ ಭಾಷಣದ ಇಪ್ಪತ್ತೈದನೇ ವಾರ್ಷಿಕ ಎಂದಾಗ ಕೆಲವು ಸನ್ಮಿತ್ರರು ಆ ದಿನವನ್ನು ಸ್ಮರಣೀ ಯವಾಗಿ ಆಚರಿಸಬೇಕೆಂದು ಸಲಹೆ ನೀಡಿ ದರು. ಅಂಥದ್ದೇನೂ ನಡೆಯದಿದ್ದರೂ, ಆ ದಿನ ನಲವತ್ತೊಂದು ಕಂತುಗಳ ಈ ಲೇಖನ ಮಾಲೆಯನ್ನು ಪುಸ್ತಕ ರೂಪದಲ್ಲಿ ಹೊರ ತರಬೇಕೆಂದಿದ್ದೇನೆ. ಅದನ್ನು ಓದಲು ಎಷ್ಟು ಮಂದಿಗೆ ಆಸಕ್ತಿಯಿರಬಹುದೋ ಗೊತ್ತಿಲ್ಲ. ನನ್ನ ಹಳೆಯ ಪೆಟ್ಟಿಗೆಯೊಂದರಲ್ಲಿ ಬದುಕಿನ ಪ್ರತಿದಿನದ ದಾಖಲೆಗಳೊಂದಿಗೆ ನನ್ನತ್ತ ಇಣುಕುತ್ತಿರುವ, ಕಳೆದ ಇಪ್ಪತ್ತೇಳು ವರ್ಷಗಳ ಹಳೆಯ ಡೈರಿಗಳಿಗೆ ಮುಕ್ತಿ ದೊರ ಕಿಸಿ ಕೊಡಬೇಕಾದರೆ ಇದು 'ಪುಸ್ತಕ'ವಾಗಿ ಬರಬೇಕೆಂದು ಮನಸ್ಸು ನಿರ್ಧರಿಸಿ ಬಿಟ್ಟಿದ್ದೆ. 2014 ಡಿಸೆಂಬರ್ 31ಕ್ಕೆ ಡೈರಿ ಪ್ರಯಾಣ ಬಂದು ತಲುಪುವಾಗ ಈ ಅಂಕಣ ನಿಲ್ಲಿಸಬೇಕೆಂದು ಮೊದಲೇ ಯೋಚಿಸಿದ್ದೆ. ಅದರಂತೆ 'ಭಾಷಣ ಬದುಕು' ಕಾಲಂ ಅನ್ನು ಇಲ್ಲಿ ಕೊನೆಗೊಳಿಸುತ್ತಿದ್ದೇನೆ. 2016ರ ನಂತರದ ಬದುಕನ್ನು ಎಲ್ಲಿಯಾದರೂ ಯಾವತ್ತಾದರೂ ಬರೆದೇನು.

ಸುದೀರ್ಘ ಮೂರುವರೆ ವರ್ಷಗಳ ಕಾಲ ಮೈಲಾಂಜಿ ಪತ್ರಿಕೆಯ ಅಮೂಲ್ಯ ಪುಟ ಗಳನ್ನು ನನಗೆ ಒದಗಿಸಿ ಕೊಟ್ಟ ಅದರ ಮಾಲಕ, ಸಂಪಾದಕ, ವ್ಯವಸ್ಥಾಪಕರೆಲ್ಲ ರಿಗೂ ಮನದಾಳದಿಂದ ಧನ್ಯವಾದ ಹೇಳು ತ್ತಿದ್ದೇನೆ. ಅಮೂಲ್ಯ ಸಮಯವನ್ನು ವ್ಯಯಿಸಿ ಓದಿದವರಿಗೂ, ಪ್ರಶಂಸೆಯ ಮಾತುಗಳನ್ನಾಡಿ ಹುರಿದುಂಬಿಸಿದವರಿಗೂ ಕೃತಜ್ಞನಾಗಿದ್ದೇನೆ.

ಭಾಷಣ ರಂಗಕ್ಕೆ ನನ್ನನ್ನು ಕೈ ಹಿಡಿದು ಒಯ್ದ ನನ್ನ ಪ್ರೀತಿಯ ತಂದೆ ಮರ್‌ಹೂಂ ಎಂ.ಎಸ್. ಮೂಸಾ ಮುಸ್ಲಿಯಾರ್ ಕಕ್ಕಿಂಜೆ, ಧಾರ್ಮಿಕ ಕ್ಷೇತ್ರದಲ್ಲಿ ಸ್ಥಿರವಾಗಿ ನಿಲ್ಲಲು ನನಗೆ ನೆರವನ್ನೂ, ನೆರಳನ್ನೂ ನೀಡಿದ ಮಾವ ಮರ್‌ಹೂಂ ಪಯೋಟ ತಂಙಳ್, ಡೈರಿ ಬರಹ ಮತ್ತು ಭಾಷಣದ ವಿಷಯ ಸಂಗ್ರಹದ ತಂತ್ರಗಾರಿಕೆ ತಿಳಿಸಿಕೊಟ್ಟ ಸನ್ಮಿತ್ರ ಹಸೈನಾರ್ ತ್ರಿಶೂರ್ (ದಮ್ಮಾಂ), ಮೊದಲ ಬಹಿರಂಗ ಭಾಷಣಕ್ಕೆ ಹರಸಿ ಕಳಿಸಿದ ಗುರು ಶೈಖುನಾ ತಿರೂರುಂಙಾಡಿ ಬಾಪು ಮುಸ್ಲಿಯಾರ್, ತರ ಬೇತಿ ಕೊಟ್ಟು ನೆರವಾದ ಪಿ.ಕೆ.ಎಂ. ಸಖಾಫಿ ಇರಿಂಙಲ್ಲೂರ್, ವ್ಯಾಪ್ತಿಗಿಂತ ಮೀರಿದ ಅವಕಾಶಗಳನ್ನು ನೀಡುತ್ತಾ ನನ್ನನ್ನು ಬೆಳೆಸಿದ ಮಹಾಗುರು, ವಿದ್ವಾಂಸ ಚಕ್ರವರ್ತಿ ಕಾಂತ ಪುರಂ ಉಸ್ತಾದ್ - ಇವರೆಲ್ಲರಿಗೂ, ಪ್ರೋತ್ಸಾಹಿಸಿದ ನಿಮಗೂ 'ಇತಿ ಧನ್ಯವಾದಗಳು'



ವಿದ್ವಾಂಸರೂ ವಾಗ್ಮಿಯೂ ಬರಹಗಾರರೂ ಆಗಿರುವ ಅಬ್ದುಲ್ ರಶೀದ್ ಝೈನಿ ಅವರು ತಮ್ಮ ಜೀವನದ ಅನುಭವಗಳನ್ನು ಪೋಣಿಸಿ ಮೊಯ್ಲಾಂಜಿ ಮಾಸ ಪತ್ರಿಕೆಯಲ್ಲಿ ನಿರಂತರ 40 ತಿಂಗಳ ಕಾಲ ಬರೆದ ಲೇಖನಗಳ ಸಮಾಹಾರವಿದು. ಕನ್ನಡ ಭಾಷಣ ಕ್ಷೇತ್ರಕ್ಕೆ ವಿಶಿಷ್ಟ ಶೈಲಿ ಹಾಗೂ ವಿಭಿನ್ನ ಆಯಾಮ ನೀಡಿದ ಇವರು ತಮ್ಮ ಭಾಷಣವನ್ನೇ ಮುಖ್ಯ ವಸ್ತುವಾಗಿಟ್ಟು ಇಲ್ಲಿ ಬರೆದಿದ್ದಾರೆ

9480 173 808